Smt B.V Navalgund

ವೇಮನ ಗೀತೆ

(ಉತ್ತರಾರ್ಧ)

ಭಾಗ : ೨

ಪ್ರಧಾನ ಸಂಪಾದಕರು :
ಕೆ. ಎಚ್. ಪಾಟೀಲ ಎಂ.ಎಲ್.ಸಿ.
ಸಂಪಾದಕ, 'ವಿಶಾಲ ಕರ್ನಾಟಕ' ಹುಬ್ಬಳ್ಳಿ.

ವಿಶಾಲ ಕರ್ನಾಟಕ ಪ್ರಕಟನಾಲಯ, ಹುಬ್ಬಳ್ಳಿ.
೧೯೬೮

ಪ್ರಕಾಶಕರು:
ಕೆ. ಎಚ್. ಪಾಟೀಲ ಎಂ.ಎಲ್.ಏ.
ಸಂಪಾದಕ:
ವಿಶಾಲ ಕರ್ನಾಟಕ, ಹುಬ್ಬಳ್ಳಿ.

ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

ಬೆಲೆ ರೂ. ೪-೦೦

ಮುದ್ರಣಕಾರರು:
ವಿಶಾಲ ಕರ್ನಾಟಕ ಮುದ್ರಣಾಲಯ, ಹುಬ್ಬಳ್ಳಿ.

ವೇಮನ ಸಾಹಿತ್ಯ ಮಾಲೆ— ೧

ವೇಮನ ಗೀತೆ-೨

(ಉತ್ತರಾರ್ಧ)

ಅರ್ಪಣೆ

ಸದ್ಗುರು ಕರಸಿದ್ದೇಶ್ವರರ ಪುನರವತಾರಿವಾಗಿರುವ

ಅವತಾರಿ ಶಾಕುಂತಲಮ್ಮ

ಇವರ ಅಡಿದಾವರೆಗಳಲ್ಲಿ ಭಕ್ತಿಯಿಂದ ಅರ್ಪಿತವಾಗಿದೆ.

–ಎಸ್. ಆರ್. ಪಾಟೀಲ
ಬಿ.ಈ. (ಸಿವ್ಹಿಲ್.)

ಅರ್ಪಣೆ

ಸದ್ಗುರು ಕರಸಿದ್ದೇಶ್ವರರ ಪುನರವತಾರವಾಗಿರುವ

ಅವತಾರಿ ಶಾಕುಂತಲಮ್ಮ

ಇವರ ಅಡಿದಾವರೆಗಳಲ್ಲಿ ಭಕ್ತಿಯಿಂದ ಅರ್ಪಿತವಾಗಿದೆ.

–ಎಸ್. ಆರ್. ಪಾಟೀಲ
ಬಿ.ಈ. (ಸಿವ್ಹಿಲ್.)

ವೇಮನ ಗೀತೆ

ಗ್ರಂಥಕರ್ತ :
ಎಸ್. ಆರ್. ಪಾಟೀಲ
ಬಿ.ಈ. (ಸಿವ್ಹಿಲ್)

ಮುನ್ನುಡಿ

ಕ್ಷಣಭಂಗುರವಾದ ಐಹಿಕ ಸುಖಸಂಪತ್ತುಗಳನ್ನು ತ್ಯಜಿಸಿ, ಜ್ಞಾನಯೋಗಿಯಾಗಿ, ಲೋಕಕ್ಕೆ ಸತ್ಯ ಬೋಧನೆ ಮಾಡಿದ ಮಹಾಯೋಗಿ ವೇಮನರ ಉಪದೇಶಾಮೃತವನ್ನು ಕನ್ನಡ ಭಾಷೆಗೆ ಅನುವಾದಿಸಿ, ಕನ್ನಡಿಗರಿಗೂ ಲಭಿಸುವಂತೆ ಮಾಡಿರುವ, ಶ್ರೀ ಎಸ್. ಆರ್. ಪಾಟೀಲರ ಪ್ರಯತ್ನವು ಪ್ರಶಂಸನೀಯವಾದುದು. ಅನ್ಯ ಭಾಷಾ ಸಾಹಿತ್ಯವನ್ನಭ್ಯಾಸಮಾಡಿ ಪಾಂಡಿತ್ಯ ಪಡೆದಿರುವ ವಿದ್ವಾಂಸರಲ್ಲಿ, ಕನ್ನಡದ ಮೇಲೆ ಅಭಿಮಾನವಿದ್ದರೆ, ತಾವು ಪಡೆದ ಭಾಷಾಸಂಪತ್ತು ಮತ್ತು ಸಾಹಿತ್ಯ ಸಂಪತ್ತನ್ನು ಕನ್ನಡ ಜನತೆಗೂ ನೀಡಿ, ಕನ್ನಡ ಸಾರಸ್ವತ ಸಂಪತ್ತನ್ನು ಹೆಚ್ಚಿಸಬಲ್ಲರೆಂಬುದಕ್ಕೆ ಇಂಥ ಭಾಷಾಂತರ ಕಾರ್ಯವೇ ನಿದರ್ಶನ. ಇತರ ಭಾಷೆಗಳ ಕಾವ್ಯರತ್ನಗಳಲ್ಲಿರುವ ಜ್ಞಾನ ಸಂಪತ್ತನ್ನು ನಮ್ಮ ಭಾಷೆಗೆ ತಂದುಕೊಂಡು, ನಮ್ಮ ಜನತೆಯ ಜ್ಞಾನ ಭಂಡಾರವನ್ನು ಬೆಳೆಸುವುದು ವಿದ್ಯಾವಂತರ ಪವಿತ್ರ ಕರ್ತವ್ಯವೆಂಬುದು ನನ್ನ ಭಾವನೆ. ಅನೇಕ ವೇಳೆ, ಇಂತಹ ಕಾರ್ಯಕ್ಕೆ ತಕ್ಕಷ್ಟು ಪ್ರತಿಫಲ ಲಭಿಸದಿರಬಹುದು. ಆದರೂ ಮಾಡುತ್ತಿರಬೇಕು. ಫಲಾಪೇಕ್ಷೆಯಿಲ್ಲದೆ ಮಾಡುವ ಸತ್ಕಾರ್ಯವು ಮನಸ್ಸಿಗೆ ಶಾಶ್ವತವಾದ ಆನಂದವನ್ನು ನೀಡುವುದೆಂಬುದು ದೇವವಾಣಿಯಲ್ಲವೇ? ಈ ಸಂಬಂಧದಲ್ಲಿ ಖ್ಯಾತ ಸಾಹಿತಿಗಳೂ ಜ್ಞಾನನಿಧಿಗಳೂ ಆದ ಡಿ.ವಿ.ಜಿ. ಅವರೊಂದು ಸುಭಾಷಿತ ನೆನಪಿಗೆಬರುತ್ತದೆ

ಸುತೆಯ ಪೋಷಿಸಿ ಬೆಳಸಿ, ಧನಕನಕದೊಡವಳನ್।
ಇತರ ಗೃಹಕೆತ್ತು ನೀಂ ಕೇಳ್ದ ಮುಯ್ಯೀನು?॥
ಪ್ರತಿಫಲವು ಬೇರೇಕೆ ? ಸುಕೃತಕದು ತಾನೆ ಫಲ।
ಹಿತಮನದ ಪಾಕವದು-ಮಂಕುತಿಮ್ಮ॥

ಜ್ಞಾನವನ್ನು ಹಂಚುವುದರಲ್ಲೂ ಒಂದು ಆನಂದವಿದೆ. ಮಾನವರಲ್ಲಿ ಪರಸ್ಪರ ಅರಿವು, ಅನ್ಯೋನ್ಯ ಪ್ರೇಮ, ಪರಸ್ಪರ ಸಹಾನುಭೂತಿ ಬೆಳೆಯಬೇಕಾದರೆ, ಸಾಹಿತ್ಯ ವಿನಿಮಯ ಅಗತ್ಯ. ಈ ದೃಷ್ಟಿಯಿಂದ ನೋಡಿದರೆ, ಭಾಷಾಂತರಕಾರನ ಸಮಾಜಸೇವೆ ಬಹು ದೊಡ್ಡದು. ಇತರ ದೇಶಭಾಷೆಗಳ ಶ್ರೇಷ್ಠ ಕೃತಿಗಳ ಪ್ರಯೋಜನವನ್ನು ತನ್ನ ದೇಶದ ಜನತೆಗೆ ಒದಗಿಸುವ ದೇಶಭಕ್ತ ಈತ. ತೆಲುಗು ಭಾಷೆಯಲ್ಲಿರುವ ವೇಮನರ ಪದಗಳನ್ನು ಓದಿದ ಜನಕ್ಕೆ ಯಾವ ಅನುಭವವಾಗಬಹುದೋ, ಅದೇ ಅನುಭವ ಕನ್ನಡಕ್ಕೆ ಅನುವಾದಗೊಂಡಿರುವ, ಈ ಗ್ರಂಥವನ್ನೋದುವ ಕನ್ನಡಿಗರಿಗೆ ಬರುವಂತಿದೆ. ಆದ ಕಾರಣ, ಶ್ರೀ ಪಾಟೀಲರು ಶಕ್ತರಾದ ಭಾಷಾಂತರಕಾರರ ಪಂಕ್ತಿಗೆ ಸೇರಿದವರೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಈ ಕೃತಿ ತೆಲುಗು ಭಾಷೆಯನ್ನು ಕಲಿಯಲು ಅವಕಾಶವಿಲ್ಲದಿರುವವರಿಗೆ, ಯೋಗಿ ಶ್ರೇಷ್ಠರೂ, ಹಿರಿಯ ಭಕ್ತರೂ, ಪರಮ ಜ್ಞಾನಿಗಳೂ ಆದ, ವೇಮನರ ಉಪದೇಶಾಮೃತವನ್ನು ಸೇವಿಸಿ ಕೃತಾರ್ಥರಾಗಲು ನೆರವಾಗುತ್ತದೆ.

ವೇಮನರ ಜೀವನ ಚರಿತ್ರೆ, ಸಾಧನೆ, ಸಿದ್ಧಿ ಇವೆಲ್ಲವನ್ನೂ ಗ್ರಂಥ ಕರ್ತರು ಸವಿಸ್ತಾರವಾಗಿಯೂ, ಸ್ವಾರಸ್ಯಪೂರ್ಣವಾಗಿಯೂ ಬರೆದಿದ್ದಾರೆ. ತಮಿಳು ಸಾಹಿತ್ಯದಲ್ಲಿ ತಿರುವಳ್ಳುವನಿಗೂ, ಕನ್ನಡ ವಾಙ್ಮಯದಲ್ಲಿ ಸರ್ವಜ್ಞನಿಗೂ, ಮಹಾರಾಷ್ಟ್ರ ವಾಙ್ಮಯದಲ್ಲಿ ರಾಮದಾಸನಿಗೂ, ಹಿಂದಿ ಸಾಹಿತ್ಯದಲ್ಲಿ ಕಬೀರದಾಸನಿಗೂ, ಇರುವ ಸ್ಥಾನವೇ ತೆಲುಗು ಭಾಷೆಯಲ್ಲಿ ವೇಮನನಿಗೂ ಇದೆಯೆಂದು ಅನೇಕ ವಿದ್ವಾಂಸರ ಮತ. ಕನ್ನಡ ಭಾಷೆಯಲ್ಲಿ ಸರ್ವಜ್ಞನ ಪದಗಳು, ಬಸವಣ್ಣನವರ ಮತ್ತು ಇತರ ಶಿವಶರಣರ ವಚನಗಳು, ಪುರಂದರ, ಕನಕ ಮತ್ತಿತರ ಹರಿದಾಸರ ಕೃತಿಗಳು, ಇವುಗಳಲ್ಲಡಗಿರುವ ಸತ್ಯಾರ್ಥಗರ್ಭಿತವಾದ ತತ್ತ್ವಗಳು, ಜನರನ್ನು ಹೇಗೆ ಆಕರ್ಷಿಸಿ ಅವರಿಗೆ ಜ್ಞಾನ ದೀವಿಗೆಗಳಾಗಿವೆಯೋ, ಹಾಗೆಯೇ ತೆಲುಗು ಭಾಷೆಯಲ್ಲಿ ಜ್ಞಾನಿ ವೇಮನರ ತತ್ತ್ವಗಳು ಜ್ಞಾನ ಜ್ಯೋತಿಗಳಾಗಿ ಬೆಳಗುತ್ತಿವೆ.

ವೇಮನರು ಜೀವನದ ನಾನಾಕ್ಷೇತ್ರಗಳನ್ನು ನೋಡಿ, ತಾವು ಕಂಡುದು ದನ್ನೆಲ್ಲ ವಿಮರ್ಶಿಸಿ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವೇಮನರ ನುಡಿಗಳು ಸಕಲ ವೇದದ ಸಾರವೋ ಎಂಬಂತಿವೆ. ಅವರು ನೀಡುವ ಉಪಮಾನಗಳು ಎಲ್ಲರಿಗೂ ಸುಲಭವಾಗಿ ಅನುಭವಕ್ಕೆ ಬರುವಂಥವು. ಹೇಳುವ ರೀತಿಯಲ್ಲಿ ಸುತ್ತು ಬಳಸಿಲ್ಲ; ಮುಚ್ಚುಮರೆಯಿಲ್ಲ. ಪರಿಶುದ್ಧ ಹೃದಯದಿಂದ ಚಿಮ್ಮಿ ಬಂದ ನೇರವಾದ ಮಾತುಗಳು. ಒಂದೊಂದೂ ಪ್ರತ್ಯೇಕ ಸೂತ್ರದಂತಿದೆ. ವೇಮನರ ಪದ್ಯವ್ಯಾಪ್ತಿ ವಿಸ್ತಾರವಾಗಿದೆ. ದೈವಸ್ವರೂಪ ಚಿಂತನೆ, ಭಕ್ತಿ, ಧರ್ಮನೀತಿ ನಿರೂಪಣೆಯಲ್ಲದೆ, ಜಾತಿ, ಕುಲ, ಇತ್ಯಾದಿ ಸಾಮಾಜಿಕ ತೊಡಕುಗಳನ್ನೂ, ದುರಾಚಾರ, ಕಾಪಟ್ಯ, ನೀಚತನ, ಅಹಂಕಾರ, ಅಂಧವಿಶ್ವಾಸ, ಡಂಭ ಇತ್ಯಾದಿ ದುರ್ಗುಣಗಳನ್ನೂ ಕಟುವಾಗಿಟೀಕಿಸಿ ಹೀಯಾಳಿಸಿದ್ದರೂ, ಮತ್ಸರರಹಿತವಾಗಿ ಮಾಡಿದ್ದಾರೆ. ಇಂತಹಮಹಾವ್ಯಕ್ತಿಗಳ ಉದಾತ್ತಭಾವನೆಗಳು, ಇವರಿತ್ತ ಸಂದೇಶಗಳು, ನಮ್ಮಜನರಲ್ಲಿ ಪ್ರಸಾರವಾಗುವುದು ನಮ್ಮರಾಷ್ಟ್ರದ ದೃಷ್ಟಿಯಿಂದ ಶ್ರೇಯಸ್ಸಿನದೃಷ್ಟಿಯಿಂದ, ಅಗತ್ಯ

ಶ್ರೀ ಎಸ್. ಆರ್. ಪಾಟೀಲರು ಇಂಜಿನಿಯರಿಂಗ್ ಪದವೀಧರರಾಗಿ ಆ ವೃತ್ತಿಯಲ್ಲಿದ್ದರೂ, ಉತ್ತಮ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿ, ಸಮಾಜ ಸೇವೆ ಮಾಡುತ್ತಿರುವುದು ಪ್ರಶಂಸನೀಯವಾದುದು. ಈ ಕಾರ್ಯಕ್ಕೆ ಇವರಲ್ಲಿರುವ ಸಮಾಜ ಸೇವಾಕಾಂಕ್ಷೆ, ಧರ್ಮಾಭಿಮಾನ ಮತ್ತು ಸಾಹಿತ್ಯಪ್ರೇಮವೆ ಇವೇ ಪ್ರೇರಕ ಶಕ್ತಿಯಾಗಿವೆಯೆಂದು ಭಾವಿಸುತ್ತೇನೆ. ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಕೊಂಡು, ಓದಿ, ಆನಂದಪಟ್ಟು, ಚಿತ್ತಶುದ್ಧಿ ಹಾಗು ವಿಕಾಸ ಪಡೆದರೆ, ಅದರಿಂದ ಗ್ರಂಥಕರ್ತರ ಶ್ರಮಸಾರ್ಥಕವಾಗುತ್ತದೆ.

ತಮ್ಮ ಈಗ್ರಂಥಕ್ಕೆಮುನ್ನುಡಿ ಬರೆಯಬೇಕೆಂದು ಕೇಳಿ,ನುಹಾಯೋಗಿ ವೇಮನರ ತತ್ತ್ವಗಳನ್ನುಸ್ಮರಿಸಲು ನನಗೆ ಅವಕಾಶ ಮಾಡಿಕೊ[illegible] ಶ್ರೀಯುತ ಪಾಟೀಲರನ್ನು ವಂದಿಸಿ, ಅವರು ಈ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ [illegible] ಇನ್ನೂ ದೀರ್ಘವಾಗಿ ನಡೆಯುವಂತೆ ಜಗದೀಶ್ವರನು ಕೃಪೆಮಾಡಲೆಂದು ಹಾರೈಸುವೆ.

ಬೆಂಗಳೂರು
೧೩-೮-೧೯೬೭

ಬಿ. ವೈಕುಂಠಪಾಳಿಗ

ಪ್ರಧಾನ ಸಂಪಾದಕರ ನುಡಿ

'ವೇಮನಗೀತೆ' ಪುಸ್ತಕ ಮಾಲೆಯನ್ನು ಐದುನೂರು ಪದ್ಯಗಳನ್ನೊಳಗೊಂಡ ಹತ್ತು ಭಾಗಗಳಲ್ಲಿ ಪ್ರಕಟಿಸುವ ಕಾರ್ಯವನ್ನು ನಾವು ಕೈಗೆತ್ತಿಕೊಂಡಿದ್ದು, ಯೋಗ ಸಾಧನ ಅಭ್ಯಾಸ ನಿರತರಾದ ಪ್ರಿಯಬಂಧು ಶ್ರೀ ಎಸ್. ಆರ್. ಪಾಟೀಲ ಬಿ. ಈ (ಸಿವ್ಹಿಲ್) ಇವರು ಮೂಲ ತೆಲುಗಿನಿಂದ ಪದ್ಯಾನುವಾದ ಮಾಡುವುದರೊಂದಿಗೆ ಶ್ರುತಿ, ಸ್ಮೃತಿ,ಶರಣರ ವಚನ, ದಾಸರ ಪದಗಳಿಂದ, ಪ್ರಮಾಣ ವಾಕ್ಯಗಳನ್ನು ಉದ್ಧರಿಸಿ, ವೇಮನ ಪದ್ಯಗಳ ಆಳ ಅರ್ಥವೀಯುವ ಸ್ವತಂತ್ರ ಟೀಕೆಯನ್ನೂ ಒದಗಿಸಲು ಮುಂದಾಗಿದ್ದಾರೆ. ಸಾಧಕರಿಗೆ, ಅಷ್ಟೇ ಏಕೆ, ಸಮಸ್ತ ಜನರಿಗೆ ವೇದ್ಯವಾಗುವಂತೆ, ಗುಹ್ಯ ವಿದ್ಯೆಯತ್ತ, ಆಕರ್ಷಣ ಹುಟ್ಟಿಸುವ, ವೇಮನ ಯೋಗಿವರ್ಯರ ಪದಲಾಲಿತ್ಯ ಜೋಡಣೆಯನ್ನು, ಗ್ರಂಥಕರ್ತರು ಕನ್ನಡ ಭಾಷೆಯಲ್ಲಿಯೂ ಸಹ ಪ್ರಶಂಸನೀಯವೆನಿಸುವಂತೆ ತುಂಬಿದ್ದಾರೆ.

ಪ್ರತಿವರುಷ ಎರಡು ಭಾಗಗಳನ್ನು ಪ್ರಕಟಿಸುವ ಯೋಜನೆಯಿರಿಸಿಕೊಂಡಿದ್ದು, ಬರಲಿರುವ ನಾಲ್ಕು ವರ್ಷಗಳಲ್ಲಿ, ಮುಂದಿನ ಅಂದರೆ ೩ ರಿಂದ ೧೦ ರವರೆಗಿನ ಭಾಗಗಳನ್ನು ಪ್ರಕಟಿಸುವ ವಿಶ್ವಾಸ ತಾಳಿದ್ದೇವೆ.

ಸಮಸ್ತ ಕನ್ನಡದ ಓದುಗರು 'ವೇಮನ ಪದ್ಯಗಳಲ್ಲಿ ಹುದುಗಿದ ಸೂಕ್ಷ್ಮ ಅರ್ಥ ತಿಳಿದು,ಪ್ರಯೋಜನ ಹೊಂದುವಂತಾದರೆ, ನಮ್ಮ ಪ್ರಕಟನಾ ರೂಪದ ಸೇವೆಯು ಸಾರ್ಥಕವಾದಂತೆ.

ಹುಬ್ಬಳ್ಳಿ
೧೫-೧೧-೧೯೬೮

ತಮ್ಮ
ಕೆ. ಎಚ್. ಪಾಟೀಲ
ಎಂ.ಎಲ್.ಎ.
ಪ್ರಧಾನ ಸಂಪಾದಕ

ತೆಲಗು ಗ್ರಂಥಗಳಿಂದ ಹೆಕ್ಕಿ ತೆಗೆದು, ಒದಗಿಸಿದ. ಶ್ರೀ ಎಂ. ಗೋಪಾಲರಡ್ಡಿ ಬಿ. ಏಜಿ. ಇವರ ನೆರವು ತುಂಬಾ ಉಪಯುಕ್ತವಾಗಿದೆ. 'ಪ್ರೂಫ್' ತಿದ್ದುವ ಕಾರ್ಯದಲ್ಲಿ ಶ್ರೀ ಎಲ್. ಎಸ್. ಜೋಶಿ ಅವರ ಪರಿಶ್ರಮವು ಸಾಕಷ್ಟು ಫಲಪ್ರದವಾಗಿದೆ.

ಬೃಹದ್ ಗ್ರಂಥ ಪ್ರಕಟನೆಯ ನನ್ನ ಪ್ರಥಮ ಪ್ರಯತ್ನವನ್ನು ಪ್ರೋತ್ಸಾಹಿಸಿ, ಹರಸಿ ಮುನ್ನುಡಿ ಬರೆದುಕೊಟ್ಟ, ನಮ್ಮ ರಾಜ್ಯದ ವಿಧಾನ ಸಭಾಪತಿಗಳೂ ಸ್ವಾತಂತ್ರ್ಯ ವೀರರೂ ಆದ ಮಾನ್ಯ ಬಿ. ವೈಕುಂಠ ಬಾಳಿಗಾರವರಿಗೆ ನಾನು ತುಂಬಾ ಉಪಕೃತನಾಗಿದ್ದೇನೆ.

ಪೂಜ್ಯ ವೇಮನರ ಗೀತೆಯು ಸಹಸ್ರ ಪದ್ಯಗಳ ಐದು ಸಂಪುಟಗಳಲ್ಲಿ ಹೊರಡಲಿದ್ದು, ಪ್ರಥಮ ಸಂಪುಟದ ಎರಡು ಭಾಗಗಳನ್ನು ಬಹು ಬೇಗ ತಯ್ಯಾರಿಸುವಲ್ಲಿ ಸಹಾಯ ಸಹಕಾರ ನೀಡಿದ ಮಿತ್ರರಿಗೆಲ್ಲ ನನ್ನ ಅನಂತ ಕೃತಜ್ಞತೆಗಳು.

ಹುಬ್ಬಳ್ಳಿ—ಧಾರವಾಡ
೧೬-೧-೧೯೬೮

ಎಸ್. ಆರ್. ಪಾಟೀಲ

ಪರಿವಿಡಿ

೧) ಪ್ರಧಾನ ಸಂಪಾದಕರ ನುಡಿ I

೨) ಅಧ್ಯಾತ್ಮ ವಿಭಾಗ ೨೯೫

೩) ವೇಮನ ಚರಿತ್ರೆ ೬೮೯

(ಪ್ರಥಮ ಭಾಗದಿಂದ ಮುಂದುವರಿದದ್ದು)

ಅರಿಕೆ

ಗದುಗಿನ 'ಮಹಾಭಾರತದ ಕರ್ತೃ ವೀರನಾರಯಣ. ಆ ಶಿಲಾ ಮೂರ್ತಿಯ ಎದುರು ಒದ್ದೆಯಾಗಿ ನೀತ ಕುಮಾರವ್ಯಾಸ ಕೇವಲ ಲಿಪಿಕಾರ. 'ರಾಮಾಯಣ ದರ್ಶನಂ' ಎಂಬ ಮಹಾಕಾವ್ಯದ ಸ್ಫೂರ್ತಿದಾಯಿನಿ ಸಾಕ್ಷಾತ್ ಸರಸ್ವತಿ; ರಾಷ್ಟ್ರಕವಿ 'ಕುವೆಂಪು' ಕೇವಲ ಲಿಪಿಕಾರರು. 'ಸಾವಿತ್ರಿ' ಮಹಾಕಾವ್ಯ (ಆಂಗ್ಲ ಭಾಷೆಯಲ್ಲಿದೆ) ಯೋಗಶಕ್ತಿಯ ಕೃತಿ; ಯೋಗಿ ಅರವಿಂದರು ಹಿಡಿದ ಲೇಖನಿ ಅವರಿಗೇ ಅರಿವಿಲ್ಲದೆ ಓಡಿತ್ತು! ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗಗಳ ಮೂರು ಸುಂದರ ದೃಷ್ಟಾಂತಗಳಿವೆ. ಯೋಗ ಸಮಾಧಿಗೇರಿದವನು ಅಲ್ಲಿಂದ ಮರಳಿದಾಗ, ಮೌಢ್ಯ ಕಳೆದುಕೊಂಡು ಜ್ಞಾನಿಯಾಗಿ ಬರುವನು. ಸಹಜ ಸ್ಥಿತಿಯಲ್ಲಿ ಹೊಳೆಯದ ಅನೇಕ ವಿಷಯಗಳು ಅವರಿಗೆ ಇಂಥ ಅತೀಂದ್ರಿಯಾವಸ್ಥೆಯಲ್ಲಿ ಹೊಳೆಯಬಹುದು. ಮಹಾಯೋಗಿಯಾದವರು ಯೋಗ—ಸಮಾಧಿಯಲ್ಲಿರುವಾಗ ಬರೆದುಬಿಟ್ಟರೆ, ಅವರಿಗೆ ಬರೆಯುವುದರ ಪರಿವೆಯೇ ಇಲ್ಲವೆನ್ನಿಸಬಹುದು. ನಮ್ಮ ಹಿಂದಿನ ಋಷಿಗಳು ಲಿಪಿಕಾರರಲ್ಲ; (ಆಗ ಲಿಪಿಯೇ ಇರಲಿಲ್ಲ.] ದ್ರಷ್ಟಾರರು. ಈ ದೃಷ್ಟಿಯಲ್ಲಿ ಮಹಾಕವಿಗಳು ಕಾವ್ಯರ್ಷಿಗಳೇ ಸರಿ. ಇವರು ಮಹಾಕಾವ್ಯವನ್ನು ರಚಿಸುವರು. ಇವರಿಂದ ರಚಿತವಾದದ್ದೆಲ್ಲ ಮಹಾಕಾವ್ಯವೆನ್ನಿಸುತ್ತದೆ.

ಮಡಿಯುಟ್ಟು, ಶಿಲೆಯ ಪೂಜೆ ಮಾಡುವುದರಲ್ಲಿ ಭಕ್ತಿಕಾಣದ, ಕದ ಮುಚ್ಚಿ ಕುಳಿತು ಸರಸ್ವತಿಯನ್ನು ಒಲಿಸಿಕೊಳ್ಳದ, ಯೋಗೆ ಸಮಾಧಿ ಹೊಂದಲು ಜನ್ಮಾಂತರ ಕಳೆಯಬೇಕಾಗಿರುವ ನನಗೆ ಮಹಾಕಾವ್ಯದ ಲಿಪಿಕಾರನಾಗುವ ಭಾಗ್ಯವಿಲ್ಲ. ಅದಕ್ಕಾಗಿ ಕಳವಳವೂ ಇಲ್ಲ. ಆದರೂ ಸಾಹಿತ್ಯ ಸೇವೆ ಸಾಧ್ಯವೆಂದು ಬಗೆದವನು ನಾನು. ಭಾಷಾಂತರದಕಾರ್ಯವು 'ಜನರ ಗದ್ದಲದಲ್ಲಿರುವ ನಮ್ಮಂಥ ಸಾಹಿತ್ಯದ ನಮ್ರ ಸೇವಕರಿಗೂ ಸಾಧ್ಯ. ಸಾಮರಸೆಟ್ ಮಾಮ್ ಹೇಳುವಂತೆ 'ದಿನಾಲು ಹೊಸತು ಓದಬೇಕು. ಏನಾದರೂ

ಬರೆಯಬೇಕು. ಬರೆಯುತ್ತ ಹೋದಂತೆ, ಪಳಗಿದ ಶೈಲಿ ಕೈಗೂಡುವುದು. ಇಂತು ತೀರ ವಾಸ್ತವ ದೃಷ್ಟಿ ಬೆಳೆಸಿಕೊಂಡಿರುವ ನನ್ನಂಥವರು ಆರ್ಷಮತ ತಿಳಿಯುವುದೆಂತು? ಎಂದು ಕೇಳಬಹುದು. ಋಷಿಗಳು ಕಂಡದ್ದು ಕೇವಲ ಸತ್ಯ. ಸತ್ಯ ಬಣ್ಣಿಸಿದಾಗ ಸಕಲರ ತಿಳಿವಿನ ಎಲ್ಲೆಯಲ್ಲಿ ಬರುತ್ತಿದೆ. ಆನಂತರ, ಶಬ್ದ-ಭಾಷೆಯ ಅಲಂಕಾರವನ್ನು ಯಾರು ಬೇಕಾದರೂ ತೊಡಿಸಬಹುದು. ಆ ಸತ್ಯವನ್ನು ಯಾವ ಭಾಷೆಯಲ್ಲಿಯಾದರೂ ಹೇಳಬಹುದು. ಈ ನಂಬುಗೆಯಿಂದ ನಾನು ಪೂಜ್ಯ ಮಹಾಯೋಗಿ ವೇಮನರ ಗೀತೆಯನ್ನು ಕನ್ನಡಿಸುವ ಧೈರ್ಯ ಮಾಡಿದೆ. ಆ ಪದ್ಯಗಳಿಗೆ ವಿವರಣೆ ನೀಡುವುದಕ್ಕೆ ತೊಡಗಿದುದಂತೂ ನನ್ನ ಮಟ್ಟಿಗೆ ಸಾಹಸ. ಅತೀಂದ್ರಿಯ ಅನುಭವ ಪಡೆಯುವಲ್ಲಿ ನನ್ನ ಶಕ್ತಿ ಎಷ್ಟು ಕಡಿಮೆಯೋ, ಅತೀಂದ್ರೀಯ ಸ್ಥಿತಿಗೇರಿದವರ ಅನುಭವ ತಿಳಿಯುವಲ್ಲಿ ನನ್ನ ಆಸಕ್ತಿ ಅಷ್ಟೇ ಹೆಚ್ಚು. ಅಂಥ ಮಹಾಪುರುಷರ ತತ್ತ್ವಗಳಲ್ಲಿ ನನ್ನ ಭಕ್ತಿಯೂ ಅಪಾರ. ಪೂಜ್ಯ ವೇಮನರ ತತ್ತ್ವಾಧ್ಯಯನದಿಂದ ನನ್ನ ಈ ವಿಚಾರ ದೃಢಪಟ್ಟಿದೆ.

ಧರ್ಮವಿರುವುದೊಂದೇ. ಹಿಂದೆ, ಇಂದು, ಮುಂದು, ಅದು ಒಂದೇ ಆಗಿರುವುದು. ಅದರಿಂದ ಅದು ಸನಾತನ. ಸನಾತನ ಧರ್ಮ ತಿಳಿಸಿದವರಲ್ಲಿ ಕನಕದಾಸರಂಥ ಭಕ್ತರಿರಬಹುದು. ಗಾಂಧೀಜಿಯವರಂಥ ಕರ್ಮಿಗಳಿರಬಹುದು. ಮತ್ತು ವೇಮನರಂಥ ಜ್ಞಾನಿಗಳಿರಬಹುದು. ಭಕ್ತನು, ಶಿವ-ಕೇಶವ ಒಂದೇ ಎಂದು ನಂಬುತ್ತಾನೆ. ಕರ್ಮಿ ರಾಮ-ರಹಿಮರೊಂದೇ ಎಂಬುದನ್ನು ಪ್ರಪಂಚದಲ್ಲಿ ಗುರುತಿಸುತ್ತಾನೆ. ಜ್ಞಾನಿ ವಿಷ್ಣು, ಹರ ಎನ್ನುವ ಭಾವ ಪ್ರಕಾರಗಳನ್ನು ಒಂದಾಗಿ ಅನುಭವಿಸುತ್ತಾನೆ. ಈ ಯಾವುದೇ ಮಾರ್ಗ ಒಂದರಿಂದ ಇನ್ನೊಂದು ಬೇರೆಯಲ್ಲ. ಒಂದರಲ್ಲೊಂದು ಬೆರೆತುಕೊಂಡಂತೆ. ಯಾವುದೋ ಒಂದು ಹೆಚ್ಚು ಪ್ರಭಾವಿಯಾಗಿ, ಒಬ್ಬರಲ್ಲಿ ತೋರಬಹುದಷ್ಟೇ.

ಧರ್ಮದರ್ಶನ ಸಾಹಿತ್ಯಕ್ಕೆ ತಕ್ಕ ಪ್ರೋತ್ಸಾಹವಿಲ್ಲವೆಂದಾಗಲಿ, ಇಲ್ಲವೆ ವಾಚಕ ವರ್ಗದ ಮೆಚ್ಚುಗೆ ಇಲ್ಲವೆಂದಾಗಲಿ, ಯಾರೂ ತಿಳಿಯಕೂಡದು. ವಿಶಾಲ ಕರ್ನಾಟಕದ ಸಂಪಾದಕರೂ ಮತ್ತು ನನ್ನ ಸೋದರರೂ ಆದ ಶ್ರೀ ಕೆ. ಎಚ್. ಪಾಟೀಲರು, ಇಂಥ ವಿವಿಧ ಪ್ರಯತ್ನಗಳಿಗೆ ಮುಂದಾಗಿರುವುದು, ಮತೀಯ ಭಾವನೆಯಾಚೆ ನೋಡಬಲ್ಲ ಲೇಖಕರಿಗೆ ಈಜು ಗುಂಬಳಕಾಯಿ ಒದಗಿಸುಬಹುದೆಂದು ನಂಬಿದ್ದೇನೆ.

ಮೂಲ ಪದ್ಯಗಳನ್ನು ಅರ್ಥವಿಸುವಲ್ಲಿ ನನ್ನೊಂದಿಗೆ ಪೂರ್ಣವಾಗಿ ಸಹಕರಿಸಿದ ಶ್ರೀ ಸಿ. ಎಮ್. ಹನುಮಂತಯ್ಯ ಎಂ. ಏ. ಮತ್ತು ವೇಮನರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಬರೆಯುವಲ್ಲಿ ಅವಶ್ಯ ವಿವರಗಳನ್ನು ಮೂಲ

ಆಧ್ಯಾತ್ಮಿಕ ವಿಭಾಗ

೫೦೧

ವೇಮನನಗಯೋಗಿ ವೆಲಸಿ ಲೋಕಮುಲೋನ, ಬೂಜಿಲಿಡುಡು ಪುಣ್ಯಪುರುಷುಲಾರ !
ಪೂಜಲಿಡಿನಯಂತ ಭುಕ್ತಿ ಮುಕ್ತುಲನಿಚ್ಚು, ವಿಶ್ವದಾಭಿರಾಮು ವಿನುರ ವೇಮು.

ವೇಮನೆಂಬ ಯೋಗಿ ವಾಸಿಸಿದ ಲೋಕದಿ,
ಪೂಜೆ ಸಲಿಸಿರವಗೆ ಪುಣ್ಯಪುರುಷರಿರಾ !
ಪೂಜೆ ಸಲಿಸಿದಷ್ಟು ಸುಖಶ್ರೇಯ ಲಭ್ಯ.
ವಿಶ್ವದಾಭಿರಾಮು ಕೇಳು ನೇಮ

ವೇಮನ ಎಂಬ ಹೆಸರಿನ ಯೋಗಿಯು ಈ ಲೋಕದಲ್ಲಿ ಜೀವಿಸಿದ್ದನು. ಸದ್ವರ್ತನೆಯ ಪುಣ್ಯಪುರುಷರೇ ! ಅವನ ತತ್ವಗಳ ಚಿಂತನೆ, ಆಚರಣೆಗಳ ಮೂಲಕ ಅವನನ್ನು ಪೂಜಿಸಿರಿ. ಎಷ್ಟು ಹೆಚ್ಚುಹೆಚ್ಚಾಗಿ ಧ್ಯಾನಿಸುವಿರೋ, ಅಷ್ಟು ಹೆಚ್ಚು ಸುಖ ಶ್ರೇಯ ದೊರೆಯುವುವು. ಪ್ರಪಂಚ ತತ್ವ. ಪುರುಷನಿಗೆ ಪ್ರಿಯನಾದ ವೇಮನನನೇ ಆಲಿಸು.

('ಅನ್ನ' ಇದು ತೆಲುಗು ಶಬ್ದ. 'ಅಣ್ಣ' ಎಂಬರ್ಥ. ವೇಮು+ ಅನ್ನ = ವೇಮನ್ನ. ಬಳಕೆಯ ಭಾಷೆಯಲ್ಲಿ 'ವೇಮನ' ಎಂದೇ ರೂಢಿಯಾಗಿದೆ.

ಯೋಗಿ ಎಂಬ ಪದವನ್ನು ರೂಢಿಯಲ್ಲಿ ಆಸನಾದಿಗಳಿಂದ ದೇಹ ಸಂಪತ್ತು ಬೆಳೆಸಿಕೊಳ್ಳುವ ಹಠಯೋಗಿಗಳಿಗೆ ಇಲ್ಲವೆ ಪ್ರಾಣಾಯಾಮಾದಿ ಮನೋನಿಗ್ರಹದ ಸಾಧಕರಿಗೆ ಅನ್ವಯಿಸುತ್ತದೆ. ಯೋಗ ಶಬ್ದ 'ಯುಜ್' ಅಂದರೆ ಜೋಡಿಸುವುದು, ಏಕತ್ರವಸ್ಥಿತಿ ಎಂದಿದೆ. ಇಂಥ ಸೇರುವಿಕೆ, ಜೋಡಿಸುವಿಕೆಯ ಸಾಧನ ಕ್ರಮಗಳನ್ನು ತಿಳಿದು ಅದನ್ನು ಸಾಧಿಸುವುದು ಯೋಗವೆನ್ನಿಸುತ್ತದೆ. ಸಹಜ ಯೋಗ, ಆಸನಾದಿಗಿಂತ ಶ್ರೇಷ್ಠವೆಂದು ಪೂಜ್ಯ ವೇಮನರ ಮತ. ರಾಜಯೋಗದ ಮೇಲ್ಮೆಯನ್ನು ಎತ್ತಿ ಹಿಡಿದಿದ್ದರೂ, ಅದನ್ನು ದಾಟಿದ ಸಹಜ ಯೋಗದಲ್ಲಿ ನಿಂತ ಮಹಾಪುರುಷ ವೇಮನಯೋಗಿ.

ಪೂಜೆಯೆಂದರೆ ಮಣಿ ಎಣಿಕೆ, ಪತ್ರಿ ಏರಿಸುವಿಕೆ, ಫಲನೈವೇದ್ಯವಲ್ಲ; ಇದು ಪೂಜೆಯ ಅಪಾರ್ಥ. ಭಕ್ತಿಯಿಂದ ತತ್ತ್ವಗಳನ್ನು ತಿಳಿದು ಆಚರಿಸುವುದೂ, ತತ್ತ್ವದಲ್ಲಿ ಅಡಗಿದ 'ಸತ್ಯ'ವನ್ನು ಕುರಿತು ಚಿಂತನೆ, ಧ್ಯಾನ ಗೆಯ್ಯುವುದೂ ಪೂಜೆಯೆನ್ನಿಸುವುದು.

ಸತ್ಕಾರ್ಯನಿರತರೂ, ಸದ್ವರ್ತನೆಯುಳ್ಳವರೂ ಪುಣ್ಯಪುರುಷರು. ಇವರೇ ಸುವಿಚಾರಿಗಳು.

ದಿನ ನಿತ್ಯ ವ್ಯವಹಾರಗಳಲ್ಲಿ ಪಡೆಯುವ ಸಂತೋಷ, ಸುಖ; ಭಕ್ತಿ; ಮನೋಲೋಕ ದಲ್ಲಿ, ಆತ್ಮಿಕ ಲೋಕದಲ್ಲಿ ಅನುಭವಿಸುವ ಸಂತೋಷವೇ ಶ್ರೇಯ.

'ವಿಶ್ವತಾ' ಅಂದರೆಪ್ರಪಂಚ ತತ್ತ್ವ ಅರ್ಥಾತ್ ಎಲ್ಲರೂ ಯಾವುದರಲ್ಲುಂಟೋ ಅವನು. ಅಭಿರಾಮ ಎಂದರೆ ಪ್ರಿಯನು.)

೫೦೨

ಪಲುಕುಮನ್ನ ನೇಲಪಲುಕಕಯನ್ನಾವು? ಪಲುಕು ನನ್ನುಗೂರ್ಚಿ ಪ್ರಬಲವಾಕ್ಯ
ಪಲುಕುಮುಯ್ಯ ನೀದುಪಲುಕು ನೇನೆರಿಗೆದ, ವಿಶ್ವದಾಭಿರಾಮ ವಿನುರ ವೇಮ.

ನುಡಿಯೆಂಬೆನೊ ದೇವ, ನುಡಿಯಲೊಲ್ಲೆಯೇಕೆ ?
ನುಡಿಯೆನ್ನನೆ ಕುರಿತು ಪ್ರಬಲ ವಾಕ್ಯ.
ನುಡಿಯಯ್ಯಾ ! ನಿನ್ನ ಧ್ವನಿ ನಾನು ಅರಿವೆ.
ವಿಶ್ವದಾಭಿರಾಮ ಕೇಳು ವೇಮ.

[ಆತ್ಮ ಪರಮಾತ್ಮನ ಪ್ರತಿ ರೂಪ. ಅದುವೇ ಬ್ರಹ್ಮ. ಬ್ರಹ್ಮ ಎಲ್ಲಿ? ಎಂದು ಕೇಳುವ ವರು ಮೂರ್ಖರು. ಬ್ರಹ್ಮ ಪೂರ್ಣರೊಪದಲ್ಲಿ ಎಲ್ಲರಲ್ಲೂ ಉಂಟು. ಆತ್ಮ ಅವಿನಾಶಿ; ಆತ್ಮ ಸರ್ವಾಂತರ್ಯಾಮಿ. ಆತ್ಮದ ನುಡಿ, ಅನುಭವವೇ. ಶಬ್ದದಲ್ಲಿ ಬಣ್ಣಿಸುವ ರೀತಿಯದಲ್ಲ. ಅದನ್ನು ತಿಳಿಯುವುದು, ಅನುಭವದಿಂದ ಮಾತ್ರ ಸಾಧ್ಯ. ಅದು ಅನುಭವವೇದ್ಯ. ಆತ್ಮ ವಾಣಿ ಸತ್ಯಪರವಾದುದು; ಸರ್ವ ಕಲ್ಯಾಣಕರವಾದುದು. ಭೋಗ ವಸ್ತುಗಳನ್ನು ಆಶಿಸುವ ಇಂದ್ರಿಯಗಳನ್ನು ನಿಗ್ರಹಿಸಿ, ವೈರ-ದ್ವೇಷ ಭಾವ ತಾಳುವ ಮನಸ್ಸನ್ನು ನಿಗ್ರಹಿಸಿ, ಕೇಡು ನಾಶ ಬಗೆಯುವ ಬುದ್ಧಿಯನ್ನು ನಿಗ್ರಹಿಸಿದರೆ, ಅದರಾಚೆಯ ಸ್ಥಿತಿ ಆತ್ಮಾನುಭವ. ಅಲ್ಲಿ ಆತ್ಮವಾಣಿ ಮೊಳಗುವುದು. ಆ ಸ್ಥಿತಿಗೇರಬಲ್ಲವರು, ಆತ್ಮಾನುಭವ ಪಡೆಯುವರು; ಆ ಸ್ಥಿತಿ ಯಲ್ಲಿರುವವರು ಆತ್ಮ-ಸಂದೇಶಕ್ಕಾಗಿ ತವಕಬಡುವರು.]

ಹೃದಯ ಸ್ಥಾಯಿಯಾದ ಆತ್ಮವೇ ! ನುಡಿಯಲು ಕೇಳಿಕೊಂಡರೂ ನೀನು ನುಡಿಯ ದಿರುವುದೇಕೆ ? ಪ್ರಬಲವಾದ (ಬಾಹ್ಯ ಯಜ್ಞಾದಿ ಕರ್ಮಪರವಾದುದನ್ನು ಬಿಟ್ಟು ಕೇವಲ ಬ್ರಹ್ಮ ಪರವಾದ) ವಾಕ್ಯಗಳನ್ನು, ನನ್ನನ್ನೇ ಕುರಿತು ಹೇಳು. ನಿನ್ನ ಧ್ವನಿ ಕಿವಿಯು ಕೇಳು ವಂತಹದಲ್ಲವೆಂದು ಗೊತ್ತು. ಆದರೂ ಸೂಕ್ಷ್ಮವಾದ ಮನಸ್ಸು ಆತ್ಮದರ್ಶನದಿಂದುಂಟಾದ ಅತಿ ಸೂಕ್ಷ್ಮವಾದ ವೇದನಾ ತರಂಗಗಳನ್ನು ಗುರುತಿಸಬಲ್ಲದು. ಕಾರಣ, ನಾನು ನಿನ್ನ ಧ್ವನಿ ಗುರುತಿಸಬಲ್ಲೆನು.

೫೦೩

ನಿನ್ನುಜೂಚೆನೇನಿ ದನ್ನುದಾಮರಚುನು, ತನ್ನುಜೂಚನೇನಿ ನಿನ್ನುಮರಚು
ನೇನಿಥಮುನ ಮನುಜು ಡೆರುಗು ನಿನ್ನನುದನ್ನು, ವಿಶ್ವದಾಭಿರಾಮ ವಿನುರ ವೇಮ

ನಿನ್ನ ನೋಡುತಿರಲು ತನ್ನ ತಾನೆ ಮರೆವ ;
ತನ್ನ ನೋಡುತಿರಲು ನಿನ್ನ ಮರೆವ ;
ತನ್ನ. ನಿನ್ನ ನರನು ತಿಳಿವ ಪರಿ ಯಾವುದೊ ?
ವಿಶ್ವದಾಭಿರಾಮ ಕೇಳು ನೇಮ.

ಹೃದಯದಲ್ಲಡಗಿರುವ ಬ್ರಹ್ಮನನ್ನು ಮನಶ್ಶಕ್ಷುವಿನಿಂದ ಕಾಣಬೇಕಾದರೆ, ಮನುಷ್ಯ ಸಮಾಧಿ ಸ್ಥಿತಿ [ಅಂದರೆ ಇಂದ್ರಿಯಾತೀತ ಸ್ಥಿತಿ] ಮುಟ್ಟಬೇಕು. ಇಂಥ ಇಂದ್ರಿಯಾತೀತ ಸ್ಥಿತಿಯಲ್ಲಿ ಸರ್ವವೂ ಬ್ರಹ್ಮಮಯವಾಗಿರುತ್ತದೆ. 'ಅಹಂಕಾರ' ಇರುವದಿಲ್ಲ. 'ನಾನು' ಎಂಬ ಪ್ರಜ್ಞೆಯೇ ಉಳಿಯುವುದಿಲ್ಲ. 'ನಾನು' ಇಲ್ಲದಾಗ ತಿಳಿಯುವವರಾರು?

ಈ ಇಂದ್ರಿಯಾತೀತ ಸ್ಥಿತಿಗೇರುವ ಪೂರ್ವದಲ್ಲಿ ಮನಸ್ಸು, ಮಮಕಾರದಿಂದ ಕೂಡಿ ರುತ್ತದೆ. ಅಹಂಕಾರ ಸ್ಥಿತಿಯಲ್ಲಿರುವಾಗ ಬ್ರಹ್ಮ ತಿಳಿಯುವುದಿಲ್ಲ.

ಕಾರಣ, ಬ್ರಹ್ಮನನ್ನು ಹೊಂದಿ ಅನುಭವಿಸುತ್ತ, ತನ್ನನ್ನು ತಾನು ಕಾಣುವ ಪರಿಯಾ ವುದು ? ಜೀವನ್ಮುಕ್ತ ಸ್ಥಿತಿಯೇ ಇದು.

(ಜೀವನ್ಮುಕ್ತನು ತನ್ನ ಜೀವನ ಮತ್ತು ಕ್ರಿಯೆಗಳಿಂದ ಬ್ರಹ್ಮ ಸತ್ಯವನ್ನೂ ನಾಮ ರೂಪಿ ಜಗತ್ ಸಾಪೇಕ್ಷಕತೆಯನ್ನೂ ತೋರುತ್ತಾನೆ. ಜನನ ಮರಣ ಸಾಗರ ದಾಟಿದ ಅವನು ಇತರರನ್ನೂ ಅಮೃತತ್ವದ ದಂಡೆಗೆ ತಲುಪಿಸಲು ಸಹಾಯ ಮಾಡುತ್ತಾನೆ. ಇಂಥವ ರಿಂದ ಮಾತ್ರ ಧರ್ಮ ಜೀವಂತವಾಗಿರಬಹುದಲ್ಲದೆ, ಪುರಾಣಪಂಡಿತರಿಂದಲ್ಲ)

೫೦೪

ಜೀವಿಪೋಕಮುಂದೆ ಜೀವವಸ್ತುವುಲಿಚ್ಚಿ, ಜೀವಿನಿಲುಪವಲಯು ಜೀವನಮುಗ,
ಜೀವಿತೊಲಗುವೆನುಕ ಜೀವವಸ್ತುವುಲೇಲ ? ವಿಶ್ವದಾಭಿರಾಮ ವಿನುರ ವೇಮ

ಜೀವಿ ಹೋಹ ಮುನ್ನ ಜೀವವಸ್ತುವಿತ್ತು,
ಜೀವಿ ನಿಲಿಸಬೇಕು, ಜೀವನದೊಳು.
ಜೀವಿ ತೊಲಗಲಾಗ ಜೀವ ವಸ್ತುವೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಪ್ರಾಣವು ದೇಹದಿಂದ ತೊಲಗಿಹೋದಾಗ, ಜೀವ ದೇಹದಿಂದ ಮುಕ್ತವಾಗುವುದು. ನಮ್ಮ ಯಜ್ಞ-ಪೂಜೆಗಳು, ಜೀವನು ಜನನ-ಮರಣ ಚಕ್ರದಲ್ಲಿ ಸಿಲುಕದಂತೆ ಮಾಡಬ ಲ್ಲವು ಎಂದು ಸಾಮಾನ್ಯ ಕಲ್ಪನೆ.

ಆದರೆ ಜಡವಾದ ದೇಹದಿಂದ ಚೇತನವಾದ ಆತ್ಮ ಬೇರ್ಪಟ್ಟ ಮೇಲೆ ಅದಕ್ಕೆ ಧ್ಯಾನಾದಿ ಪ್ರಾಣವಸ್ತು ನೀಡುವ ತೊಂದರೆಯೇಕೆ ?

ಮುಕ್ತಿ ಮನಸ್ಸಿನಲ್ಲಿದೆ. ಹೃದಯದ ಬಂಧ ಹರಿದಾಗ, ಐಹಿಕ ವಸ್ತುಗಳಿಂದ ವಿರಕ್ತನಾಗಿ ಸಾಧಕ, ವಿಷಯಾಸಕ್ತಿಗಳಿಂದ ಬಿಡುಗಡೆ ಹೊಂದುವನು.

(ಕಠೋಪನಿಷತ್ತು ಹೀಗೆ ಸಾರುತ್ತದೆ:

ಯದಾ ಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹ ಗ್ರಂಥಯಃ |
ಅಥ ಮರ್ತ್ಯೋs ಮೃತೋ ಭವತ್ಯೇತಾವದ್ಧ್ಯನುಶಾಸನಮ್ ||

"ಹೃದಯದ ಗ್ರಂಥಿಗಳು ವಿಚ್ಛಿದೊಡನೆ, ಮರ್ತ್ಯನಾದ ನರನು ಅಮೃತನಾಗುವನು. ಇಷ್ಟು ಮಾತ್ರ ಈ ಬೋಧೆಯಲ್ಲಿದೆ.")

ಇಂಥ ಮುಕ್ತ ಸ್ಥಿತಿಗೇರಲು ಶರೀರದ ಓಜಸ್ಸನ್ನೆಲ್ಲ [ಜೀವ ಶಕ್ತಿ] ಮೂಲಾಧಾರದಿಂದ ಬ್ರಹ್ಮರಂಧ್ರಕ್ಕೆ ಏರಿಸಬೇಕು. ಆಗ ಮನಸ್ಸು ಅತಿ ಸೂಕ್ಷ್ಮವಾಗಿ ಏನೆಲ್ಲ ತಿಳಿಯಬಹುದು.

೫೦೫

ಕಲ್ಲನಿಜಮುರೆಂಡು ಗರಕಂಠು ಡೆರುಗುನು, ನೀರುಪಲ್ಲವೆರುಗು ನಿಜಮುಗಾನು
ತನಯುನಿ ಜನನಂಬು ತಲ್ಲಿ ತಾನೆರುಗುನು, ವಿಶ್ವದಾಭಿರಾಮ ವಿನುರ ವೇಮ.

ಸುಳ್ಳು-ಸತ್ಯವೆರಡು ನೀಲಕಂಠನರಿವ,
ಜಲ ಬಲ್ಲದು ನಿಜದಿ ಹಳ್ಳದಿರವ.
ಜನನಿ ತಾನರಿವಳು ನಿಜತನಯ ಜನನವ.
ವಿಶ್ವದಾಭಿರಾಮ ಕೇಳು ವೇಮ.

ಮಿಥ್ಯವಾವುದು ? ಸತ್ಯವಾವುದು ? ಬದಲಾಗುವುದು, ರೂಪಾಂತರವುಳ್ಳದ್ದು, ಮಿಥ್ಯ. ಇದ್ದಂತೆ ಎಂದೆಂದಿಗೂ ಇರುವುದು ಸತ್ಯ. ಮಿಥ್ಯೆ ಭ್ರಮೆ ಹುಟ್ಟಿಸುವುದು. ಸತ್ಯ ಶಾಂತಿಗೊಳಿಸುವುದು. ಯಾವನು ಸ್ತ್ರೀಯ ಭೋಗಾಸಕ್ತಿಗಾಶಿಸದೆ, ಜಗತ್ತಿನಲ್ಲಿ ಕೋಲಾಹಲ ಹಲವೆಬ್ಬಿಸಿದ ಹಾಲಾಹಲ ಕುಡಿದನೋ, ಆ ನೀಲಕಂಠ ಸತ್ಯವರಿಯಬಲ್ಲನು. ವಿಷಯಾಸಕ್ತರಿಗೆ ಸರ್ವಕಾಲ ಕಲ್ಯಾಣಮಯಿಯಾದ ಸತ್ಯ ಗುರುತಿಸುವ ಶಕ್ತಿಯಿಲ್ಲ.

ಮಳೆಯ ನೀರಿಗೆ ಯಾರೂ ಹಳ್ಳ-ಕೊಳ್ಳ, ಕೆರೆ-ಸಾಗರಗಳಿರುವ ತಾಣ ತೋರಿಸಬೇಕಿಲ್ಲ. ಅದು ತನ್ನಲ್ಲಿರುವ ದ್ರವ ಗುಣದಿಂದ ಪ್ರವಹಿಸಿ, ಕೊಳ್ಳದಗುಂಟ ಹರಿದು ಹಳ್ಳ ಸೇರಿ ಸಾಗರ ಕೂಡುವುದು.

ತಾಯಿಯಾದವಳಿಗೆ ಮಾತ್ರ ತನ್ನ ಮಗನು ಯಾರ ಪಿಂಡವೆಂಬ ಸತ್ಯ ಗೊತ್ತುಂಟು. ಮನುಷ್ಯ ವಿವೇಕದಿಂದ ನಡೆದು ಒಳಿತು ಕೆಡುಕು ವಿಶ್ಲೇಷಿಸಿ ಒಳಿತು, ಮೈಗೂಡಿಸಿಕೊಳ್ಳಬೇಕು. ಕಷ್ಟ ನುಂಗುವ ನೀಲಕಂಠನಾಗಬೇಕು. ಅವನಲ್ಲಿ ದೇವರನ್ನು ಕೂಡುವ

ಗುಣ ಗುಣವಿದ್ದೇ ಇದೆ; ಜಲ ಹಳ್ಳ ಕೂಡುವಂತೆ, ಆತ್ಮಸಾಕ್ಷಾತ್ಕಾರದ ಆಸಕ್ತಿ ಹುಟ್ಟಿ ಸಾಧನೆ ಮಾಡಿದರೆ, ಗುಪ್ತವಾದ ಸತ್ಯ ಗೊತ್ತಾಗುವುದು. ಋತ ಎಂದರೆ ಪರಮಾತ್ಮ. ಋತವಲ್ಲದ್ದು ಅನೃತ. ಋತ ಅನೃತಗಳು ನೀಲಕಂಠನಿಗೆ ಗೊತ್ತು.

೫೦೬

ಮಾಟಲೆಲ್ಲಗಲ್ಲ ಮನಸುದೊಂಗರಿಕ ವುಂ, ಕೀಟಪ್ರಾಣ ವುಂಕನೇಟ ಬ್ರತುಕು ?
ಮಾಟಸತ್ಯಮೈನ ಮರಿ ಶತಾಯುಷ್ಯಂಬು, ವಿಶ್ವದಾಭಿರಾಮ ವಿನುರ ವೇಮ.

ಮಾತು ಎಲ್ಲ ಸುಳ್ಳು ಮನಸು ಮತ್ತೆ ಡೊಂಕು,
ಇಂತಿಪ್ಪ ಪ್ರಾಣಿಗೇಕೆ ಬದುಕು ?
ಮಾತು ಸತ್ಯವಿರಲು ಮತ್ತೆ ಶತಾಯುಷಿಯು.
ವಿಶ್ವದಾಭಿರಾಮ ಕೇಳು ವೇಮ.

ಸುಳ್ಳು ಸತ್ಯ ವಿರೋಧಿ. ಸತ್ಯವೆಂದರೆ ಪರಮಾತ್ಮ; ಋತ. ಇದಕ್ಕೆ ವಿರೋಧಿಯಾದುದೇ ಅನೃತ; ಅಸತ್ಯ; ಸುಳ್ಳು. ಪರಮಾತ್ಮನನ್ನು ತಿಳಿಯಲು ಶುದ್ಧ ಮನಸ್ಸು ಬೇಕು. ಸರಳತೆ ಶುದ್ಧ ಮನಸ್ಸಿನ ಗುಣ. ಡೊಂಕುತನ ಮನಸ್ಸಿನ ಅಶುದ್ಧಿ ತೋರಿಸುತ್ತದೆ. ಡೊಂಕು ಮನಸ್ಸು, ಸುಳ್ಳು ಮಾತು. ಇದ್ದರೆ, ಅಂಥ ಜೀವನವು ಸನ್ಮಾರ್ಗಕ್ಕೆ ವಿರೋಧಿಯಾದುದು. ಒಳ್ಳೆಯ ಬಾಳು ಇಲ್ಲವಾದರೆ, ದೀರ್ಘ ಬಾಳು ಏತಕ್ಕೆ ? ಮಾತು ಸತ್ಯಪರವಿದ್ದರೆ, ಪರಮಾತ್ಮಪರವಾಗಿದ್ದರೆ, ಅವನಿಗೆ ಸಂಪೂರ್ಣ ಆಯುಷ್ಯವಿದ್ದಂತೆ. ಅವನೇ ಶತಾಯುಷಿಯು.

(ಮುಂಡಕೋಪನಿಷತ್ತಿನಲ್ಲಿ ಸತ್ಯ ಮತ್ತು ಅನೃತದ ಬಗ್ಗೆ ಹೀಗೆ ಹೇಳಲಾಗಿದೆ:

'ಸತ್ಯಮೇವ ಜಯತೇ ನಾನೃತಂ. ಸತ್ಯೇನ ಪಂಥಾ ವಿತತೋ ದೇವಯಾನಃ |
ಯೇನಾಕ್ರಮಂತಿ ಋಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಂ. ||

ಸತ್ಯವೇ ಗೆಲ್ಲುವುದು. ಅಸತ್ಯವಲ್ಲ. ದೇವಮಾರ್ಗದಲ್ಲಿ ಸತ್ಯದ ಫರಸಿ ಉಂಟು. ಪರಮ ಘನನನ್ನು ತಲುಪಲು ಋಷಿಗಳು, ಆಶೆಗಳನ್ನು ಹಿಂಗಿಸಿಕೊಂಡು, ಈ ಮಾರ್ಗದಲ್ಲಿ ಸಾಗುವರು.)

೫೦೭

ಚಮುರುಗಲುಗುದಿವ್ಯೆ ಸರವಿತೋಮುಂಡುನು, ಚರ್ಮುರುಲೇನಿದಿವ್ಯೆ ಸಮಸಿಪೋವು.
ತನುವು ದೀರೆನೇನಿ ದಲಪುದೋಡನೆ ತೀರು, ವಿಶ್ವದಾಭಿರಾಮ ವಿನುರ ವೇಮ

ಎಣ್ಣೆ ಸುರಿಯೆ ದೀಪ ನುಣ್ಣಗೆ ಬೆಳಗುವುದು,
ಎಣ್ಣೆ ತೀರೆ ದೀಪ ಇಂಗುತಿಹುದು.
ತನುವು ತೀರಿದಾಗ, ಹರಿಕೆ ಹಿಂಗುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಎಣ್ಣೆಯನ್ನು ಹಾಕುತ್ತ ಹೋದರೆ, ದೀಪವು ಹೆಚ್ಚು ಹೆಚ್ಚು ಪ್ರಕಾಶಮಾನವಾಗಿ ಉರಿಯುತ್ತ ಹೋಗುವುದು. ಎಣ್ಣೆ ತೀರಿ ಹೋದರೆ, ದೀಪವೂ ಆರಿ ಹೋಗುವುದು.

ಎಣ್ಣೆಯಂತೆ ಮನುಷ್ಯನ ಕೋರಿಕೆಗಳು. ನಮ್ಮ ಕೋರಿಕೆ, ಆಸೆ ಹೆಚ್ಚಾದಂತೆ ಆತ್ಮ ಮತ್ತೆ ಮತ್ತೆ ದೇಹ ಹೊತ್ತು ಬರಬೇಕಾಗುವುದು. ಆಶೆಯನ್ನೇ ತೊರೆದರೆ, ಜನನ-ಮರಣ ಚಕ್ರದಲ್ಲಿ ತಿರುಗುವ ಗೊಡವೆಯೇ ಇಲ್ಲ. ಆಗ ದೇಹದ ಮಾತೂ ಇಲ್ಲ. ಅದೇ ರೀತಿ, ದೇಹ ವಿಲ್ಲದಾಗ ಕೋರಿಕೆಗಳೂ ಇಲ್ಲ.

(ಮುಂಡಕೋಪನಿಷತ್ತಿನಲ್ಲಿ ಕಾಣಿಸಿದ ಅಭಿಪ್ರಾಯ ಇಂತಿದೆ:

ಭಿದ್ಯತೇ ಹೃದಯ ಗ್ರಂಥಿಶ್ಛಿದ್ಯಂತೇ ಸರ್ವಸಂಶಯಃ |
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್‌ದೃಷ್ಟೇ ಪರಾವರೇ ||

ಹೃದಯ ಗ್ರಂಥಿ ಭೇದಿಸಿ ಆತ್ಮ ತಿಳಿದರೆ, ಸಕಲ ಸಂಶಯಗಳು ನಾಶವಾಗುತ್ತವೆ. ಆಗ ಕರ್ಮಾಸಕ್ತಿಗಳೆಲ್ಲ ಹಿಂಗುವವು.

೫೦೯

ಪಾಪಮನಗವೇರೆ ಪರದೇಶಮುನಲೇದು, ತನದುಕರ್ಮಮುಲನು ದಗಿಲಿಯುಂಡು,
ಕರ್ಮತಂತ್ರಿಕಾಕ ಕನುಕನಿಯುಂಟೊಪ್ಪು, ವಿಶ್ವದಾಭಿರಾಮ ವಿನುರ ವೇಮ

ಪಾಪವೇನು ಅನ್ಯ ಲೋಕದ ಫಲವಲ್ಲ ;
ತನ್ನ ಪಾಪ ಕರ್ಮಕಂಟೆ ಗೈವ,
ಕರ್ಮ ಶುದ್ಧಿಗಿಂತ, ಪಾಪ ತೊರೆಯೆ ಲೇಸು.
ವಿಶ್ವದಾಭಿರಾಮ ಕೇಳು ವೇಮ.

ಪಾಪವು ನಾವು ಮಾಡುವ ಕರ್ಮ ಫಲವೇ ಆಗಿದೆ. ಅದೇನು ಬೇರಾವುದೋ ಲೋಕದಲ್ಲಿ ಮಾಡಿದ ಕರ್ಮಾದಿಗಳ ಫಲವಲ್ಲ. ಯಜ್ಞ-ಯಾಗಾದಿಗಳ ಹೆಸರಿನಲ್ಲಿ ಪಶು ಬಲಿ ನೀಡಿ, ಪ್ರಾಣಿ ಹಿಂಸೆ ಮಾಡಿ, ಸುರಾಪಾನ ಮಾಡಿ, ಅಂಗನೆಯರ ಸಂಗ ಮಾಡುವ ಕಾರ್ಯವೆಲ್ಲ. ಪಾಪ ಕಾರ್ಯ. ಚಂಡಿ, ಚಾಮುಂಡಿ, ದೇವಿ-ದುರ್ಗೆಯರ ಹೆಸರಿನಲ್ಲಿ ನಡೆಯುವ ಪಶು ಬಲಿ, ಕನ್ಯಾಭೋಗಾದಿಗಳು ಪಾಪ. ನಮ್ಮ ವ್ಯಾವಹಾರಿಕ ಜೀವನದಲ್ಲಿ ಸುಳ್ಳು ಮೋಸ-ವಂಚನೆ ಗೆಯ್ಯುವುದೆಲ್ಲ ಪಾಪವೇ. ಯಜ್ಞಯಾಗಾದಿಗಳಲ್ಲಿ ಪಶು ಹತ್ಯೆ ಗೆಯ್ದು, ಬ್ರಾಹ್ಮಣ ಋತ್ವಿಕ್ಕುಗಳು ಆ ಪಾಪದಿಂದ ಪಾವನಗೊಳ್ಳಲು ಕರ್ಮ ಶುದ್ಧಿಗಾಗಿ ವ್ರತ-ನೇಮಗಳನ್ನು ನಡೆಸುತ್ತಿದ್ದರು. ಈಗಲೂ ನಮ್ಮಲ್ಲಿ ಕರ್ಮಶುದ್ಧಿಗಾಗಿ ವ್ರತ-ಪೂಜೆ ಮಾಡುವ ಸಂಪ್ರದಾಯವಿದೆ.

ಇಂಥ ಕರ್ಮ ಶುದ್ಧಿಯ ಹಂಚಿಕೆಗಿಂತ, ಆದಷ್ಟು ಪಾಪ ಕಾರ್ಯ ಮಾಡದಂತೆ ಎಚ್ಚರಾಗಿರುವುದು ಮತ್ತು ಪಾಪ ಪ್ರವೃತ್ತಿಯನ್ನು ನಿಗ್ರಹಿಸುವುದು ಮೇಲು.

೫೦೯

ವೆಳ್ಳಿವಚ್ಚುನಾಡು ಮುಳ್ಳಿಪೋಯೆಡುನಾಡು, ವೆಂಟರಾದು ಧನಮು ಕೊಂಟು ಬೋಡು
ತಾನು ನೇಡ ಬೋನೊ ! ಧನಮೇಡ ಬೋವುನೋ! ವಿಶ್ವದಾಭಿರಾಮ ವಿನುರ ವೇಮ.

ತೆರಳಿ ಮರಳುವಾಗ, ಮುರಳಿ ತೆರಳುವಾಗ,
ಹೊರಳಿ ಬಂದು ಹಣವ ಹೊತ್ತು ಒಯ್ಯ.
ತಾನೆಲ್ಲಿ ಹೋಹನೊ ? ಧನವೆಲ್ಲಿ ಹೋಹುದೊ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನಿಗೆ ಧನದ ಆಶೆ ಹೆಚ್ಚಾಗಿರುವುದು ವಿಚಿತ್ರವಾಗಿದೆ. ಅವನು ಸತ್ತು ಹುಟ್ಟುತ್ತಾನೆ. ಮತ್ತೆ ಹುಟ್ಟಿ ಸಾಯುತ್ತಾನೆ. ತಿರುತಿರುಗಿ ಅವನು ಹಿಂತಿರುಗುವಾಗ, ಹಣವನ್ನೇನೂ ತನ್ನೊಂದಿಗೆ ಕೊಂಡೊಯ್ಯುವುದಿಲ್ಲ. ತಾನು ಎಲ್ಲಿಗೆ ಹೋಗುವನೋ ? ತನ್ನ ಧನವು ಎಲ್ಲಿ ಉಳಿಯುವುದೋ ? ಅವನೊಂದೂ ತಿಳಿಯನು.

(ಕಠೋಪನಿಷತ್ತಿನಲ್ಲಿ ಕಾಣಿಸಿದ ಅಭಿಪ್ರಾಯ ಇಂತಿದೆ:

ನ ವಿತ್ತೇನ ತರ್ಪಣೀಯೋ ಮನುಷ್ಯೋ;
ಲಪ್ಸ್ಯಾಮಹೇ ವಿತ್ತಮದ್ರಾಕ್ಷ್ಮ ಚೇತ್ತ್ವಾ |
ಜೀವಿಷ್ಯಾಮೋ ಯಾವದೀಶಿಷ್ಯಸಿ ತ್ವಂ,
ವರಸ್ತು ಮೇ ವರಣೀಯಃ ಸ ಏವ ||

ಮನುಷ್ಯನು ಕೇವಲ ಹಣದಿಂದ ತೃಪ್ತನಾಗಲಾರನು. ನಾವು ನಿನ್ನನ್ನು (ಯಮ ದೇವನನ್ನು) ನೋಡಿದ ಮೇಲೆ ಹಣವನ್ನು ಇಟ್ಟುಕೊಳ್ಳಬಲ್ಲೆವೇನು ? ಮರಣದೊಂದಿಗೆ ಹಣವೆಲ್ಲ ಇಲ್ಲವಾಗುವುದು. ನೀನು ವಿಧಿಸಿದಷ್ಟು ದಿನ ನಾವು ಜೀವಿಸಿರುತ್ತೇವೆ. ಅಂಥ ವರ ಮಾತ್ರ, ಇಚ್ಛಾ ಯೋಗ್ಯವಾದುದು. ನಾನು ಅದಕ್ಕಾಗಿ ಕಾತರಗೊಂಡಿದ್ದೇನೆ.)

೫೧೦

ಬೊಂದಿ ಯೆವರಿಸೊಮ್ಮು ಪೋಷಿಂಪ ಬಲುವಾರು, ಪ್ರಾಣ ಮೆವರಿಸೊಮ್ಮು ಭಕ್ತಿಸೇಯ
ಧನಮದೆವರಿಸೊಮ್ಮು ಧರ್ಮಮೇ ತನಸೊಮ್ಮು , ವಿಶ್ವದಾಭಿರಾಮ ವಿನುರ ವೇಮ.

ದೇಹವಾರ ವಸ್ತು, ಪೋಷಿಸೆ ಹಲ ಬಾರಿ ?
ಪ್ರಾಣವಾರ ವಸ್ತು, ಭಕ್ತಿಗೆಯ್ಯೆ ?
ಧನವದಾರ ವಸ್ತು ? ಧರ್ಮ ತನ್ನ ವಸ್ತು.
ವಿಶ್ವದಾಭಿರಾಮ ಕೇಳು ವೇಮ.

ಆತ್ಮ ಅಮರವಾದುದು; ಅವಿನಾಶಿಯಾದುದು. ಅದಕ್ಕೆ ದೇಹದ ಸಂಬಂಧ ಬಂದಾಗ ಅದು ದೇಹಿ ಎನಿಸುತ್ತದೆ. ದೇಹ ನಶ್ವರವಾದುದು; ಮುಪ್ಪು ಸಾವು ಉಳ್ಳದ್ದು; ವಿನಾಶಿ.

ಆತ್ಮಕ್ಕೆ ದೇಹದ ಸಂಬಂಧ ಬಂದೊಡನೆ ಜನ್ಮವೆನ್ನುತ್ತೇವೆ. ಆ ಸಂಬಂಧ ತೀರಿದೊಡನೆ ಮರಣವೆನ್ನುತ್ತೇವೆ. ಜನ್ಮ ಮರಣದ ಮಧ್ಯಂತರ ಅವಧಿ ವಿಧಿನಿಯಮದಂತೆ ನಡೆಯುವುದು. ಆತ್ಮ ಬೇರೆ; ದೇಹ ಬೇರೆ ಎಂದು ತಿಳಿದವನು ಆತ್ಮ ಭಾವದಿಂದ ನಡೆದುಕೊಳ್ಳುತ್ತಾನೆ. ಆಗ ದೇಹ ತನ್ನ ವಸ್ತುವಲ್ಲ. ಅದರೊಡನೆ ಏನೋ ಒಂದು ರೀತಿಯ ಸಂಬಂಧ ಉಂಟಾಗಿದೆ ಎನ್ನುವನು. ಅದನ್ನು ಪೋಷಿಸುವುದು, ಬೆಳೆಸುವುದಷ್ಟೇ ಗುರಿಯಲ್ಲವೆನ್ನುವನು.

ಇನ್ನು ಪ್ರಾಣವೆಂದರೆ, ಉಸಿರಾಟಕ್ಕೆ ಶ್ವಾಸಕೋಶಾದಿಗಳನ್ನು ಅಣಿಗೊಳಿಸುವ ಚಾಲಕ ಶಕ್ತಿ. ಈ ಶಕ್ತಿ ಕ್ರಿಯಾರೂಪಕ್ಕಿಳಿಯುವುದು, ದೇಹದಿಂದ ಬೇರೆಯಾದ ಆತ್ಮ ಪ್ರೇರಣೆಯಿಂದ. ದೇಹ ನಶಿಸಿದಾಗ ಪ್ರಾಣಶಕ್ತಿಯೂ ಇರುವುದಿಲ್ಲ. ಆಗ ಆತ್ಮವೊಂದೇ ಉಳಿಯುವುದು.

ಅದೇ ರೀತಿ, ದೇಹ ಸಂಬಂಧವಿರುವ ವರೆಗೆ ಮಾತ್ರ ಹಣದ ಸಂಬಂಧ. ಆದರೆ ಧರ್ಮ ಅಂದರೆ (ಧೃ = ಧಾರಣ ಮಾಡು ಎಂಬ ಧಾತುಜನ್ಯ ಶಬ್ದ) ಕರ್ತವ್ಯ ಮಾತ್ರ ತನ್ನದು. ಕರ್ತವ್ಯ ನಿರ್ವಹಣೆಗಾಗಿಯೇ ಶರೀರಾದಿಗಳ ಸಂಬಂಧ. ಆದರೆ ಶರೀರ ಸಂಬಂಧವಾಗಿ ಕರ್ತವ್ಯವಲ್ಲ.

೫೦೧

ಉಸುರುಲೇನಿತಿತ್ತಿ ಯಿಸುಮಂತ ಯೂದಿನ, ಬಂಚಲೋಹಮುಲುನು ಭಸ್ಮಮೌನು,
ಪೆದ್ದಲುಸುರುಮುನ್ನ ಬೆನುಮಂಟ ಲಿಗಯುವಾ ? ವಿಶ್ವದಾಭಿರಾಮ ವಿನುರ ವೇಮ.

ಉಸಿರು ಇರದ ತಿದಿಯ ಊದಲಲ್ಪದಷ್ಟು
ಪಂಚಲೋಹವೆಲ್ಲ ಭಸ್ಮವಹವು.
ಹಿರಿಯರುಸಿರಿಪ್ಪರು ಹಿರಿಯುರಿ ಹೊತ್ತಿಸರೆ ?
ವಿಶ್ವದಾಭಿರಾಮ ಕೇಳು ವೇಮ.

ತಿದಿಯೆಂದರೆ ತೊಗಲಿನ ಚೀಲದಂಥ ಉಪಕರಣ. ಇದನ್ನು ಹತ್ತಿಕ್ಕಲು ಒಳಗಿನ ಗಾಳಿ ಬೆಂಕಿಯ ಮೇಲೆ ಹಾಯುತ್ತದೆ. ಒತ್ತಡ ತೆಗೆದಾಗ, ಮತ್ತೆ ಗಾಳಿ ತುಂಬಿಕೊಳ್ಳುತ್ತದೆ. ಈ ಕ್ರಿಯೆ ನಮ್ಮ ದೇಹದ ಉಸಿರಾಟದಂತಿದೆ. ಇಂಥ ತಿದಿಯಿಂದ ಊದುವುದರಿಂದ ಪಂಚಲೋಹಗಳೆಲ್ಲ ಸುಟ್ಟು ಭಸ್ಮವಾಗುತ್ತವೆ. ಅಂಥ ಮಹಾಶಕ್ತಿ, ಈ ಗಾಳಿಯ ಬರು-ಹೋಗುಗಳಲ್ಲಿ ಉಂಟು.

ಅಂದ ಮೇಲೆ ಪ್ರಾಣಶಕ್ತಿಯಿಂದ ಚಾಲನೆಗೊಂಡ ಉಸಿರಾಟ, ಇನ್ನೂ ಹೆಚ್ಚು ಶಕ್ತಿಪ್ರದವಾಗಿರಬಹುದು. ಮೇಲಾಗಿ, ಹಿರಿಯರೂ ಪೂಜ್ಯರೂ ಆದ ಉಪನಿಷತ್ಕಾರರ ಉಸಿರು (ನುಡಿ) ದೊಡ್ಡ ಉರಿಯನ್ನು ಹೊತ್ತಿಸಲಾರದೇ ? ಇಂಥ ಮಹಾ ಅಗ್ನಿಯಲ್ಲಿ ಅವಿದ್ಯೆ-ಅಪರವಿದ್ಯೆ ಸುಟ್ಟು, ಪರವಿದ್ಯೆ, ಬ್ರಹ್ಮವಿದ್ಯೆ ಅಪರಂಜಿಯಾಗಿ ಉಳಿಯಬಹುದು. ಬಾಹ್ಯ ಯಜ್ಞ-ಪೂಜಾ ಕರ್ಮಾದಿಗಳನ್ನು ತೊರೆದು "ವೇದಾಂತ"ವನ್ನಷ್ಟೇ ಎತ್ತಿ ಹಿಡಿಯಬೇಕು.

೫೦೨

ಚೆಡ್ಡವಾನಿಮಿಗುಲ ಜೆರಚುನು ದೈವಂಬು, ಅಡ್ಡುಪಡಡು ವಾನಿಕಾಪದೈನ,
ಜೆಡಿನಚೇಮಜೂಚಿ ಯೊಡಯಡು ಮೆಚ್ಚುನಾ ? ವಿಶ್ವದಾಭಿರಾಮ ವಿನುರ ವೇಮ.

ಕೆಡುಕನನ್ನು ಹೆಚ್ಚು ಕೆಡಿಸುತಿಹುದು ದೈವ.
ಅಡ್ಡ ಬರದು ಅವಗೆ ಕಷ್ಟ ಬರೆಲು,
ಬೀಳು ಭೂಮಿ ಕಂಡು, ಭೂಪ ಮೆಚ್ಚುತಿಹನೆ ?
ವಿಶ್ವದಾಭಿರಾಮ ಕೇಳು ವೇಮ.

ಕೆಡುಕಿನಿಂದ ಕೆಡುಕು; ಒಳಿತಿನಿಂದ ಒಳಿತು ಇದು ಲೋಕಾನುಭವ. ನೀನು ಅನ್ಯರಿಂದ ಏನನ್ನು ಬಯಸುವಿಯೋ ಅದನ್ನೆ ಅನ್ಯರಿಗೆ ನೀಡು. ಅನ್ಯರು ನಿನ್ನನ್ನು ಪ್ರೀತಿಸಬೇಕೆಂದು ನಿನ್ನ ಬಯಕೆಯಾಗಿದ್ದರೆ, ನೀನು ಅನ್ಯರನ್ನು ಪ್ರೀತಿಸು. ಅನ್ಯರಿಗೆ ನೀನು ಕೆಡುಕು ಬಗೆದರೆ, ಅನ್ಯರಿಂದ ನಿನಗೆ ಕೆಡುಕಾಗುವುದು; ಎನ್ನುವುದೇ ದೈವಿಕ ಸಂದೇಶ.

ಕೆಡುಕಿನ ಫಲವೇ ಕಷ್ಟ. ಕೆಡುಕು ಪ್ರತಿಕ್ರಿಯೆ ಹೊಂದಿದಾಗ ಇಮ್ಮಡಿಯಾಗಬಹುದು; ನೂರ್ಮಡಿಯಾಗಬಹುದು. ಸಂಕಟಗಳು ಒಂಟಿಯಾಗಿ ಬರುವುದಿಲ್ಲ. ಇಂಥ ಕಷ್ಟ ಬಾರದಂತೆ ದೈವವೇನೂ ಅಡ್ಡ ಬರುವುದಿಲ್ಲ. ಮುಳ್ಳನ್ನು ಮುಳ್ಳಿನಿಂದ ತೆಗೆಯುವದು. ಸಹಜ ಪರಿಹಾರ ಕ್ರಮ. ಕೆಡುಕು ಗೆಯ್ದವನು ತನ್ನ ಕೆಡುಕಿಗೆ ಸ್ವತಿಯಾಗಿ ಬಂದ ಕಷ್ಟ ಸೋಸಿ, ಸುಧಾರಿಸುವಂತೆ ಮಾಡುವುದೇ ದೈವಿಕ ಕ್ರಮ.

ಒಳ್ಳೆಯ ಕಾರ್ಯ ಮಾಡುವಲ್ಲಿ ದೈವದ ಬೆಂಬಲವುಂಟು. ಕೆಡುಕು ಕಾರ್ಯದ ಬಗ್ಗೆ ದೈವದ ತಾತ್ಸಾರವುಂಟು. ಭೂಮಿಯ ಒಡೆಯನು ಬೆಳೆಯುವ ಭೂಮಿಯನ್ನು ಮೆಚ್ಚುತ್ತಾನೆ. ಬೀಳು ಭೂಮಿಯನ್ನಲ್ಲ. ಕೆಡುಕ ಮನುಷ್ಯ ಬೀಳು ಭೂಮಿಯಂತೆ.

೫೦೩

ಎಕ್ಕುಡೈನಯಾಶ ಲಿನುಮಡಿಯುಂಡಗಾ, ದಿಕ್ಕವಟ್ಟ ನರುಡು ತಿರುಗುಚುಂಡು,
ಕುಕ್ಕನುವಲೇನಾಶ ಕೂರ್ಚುಂಡನೀಯದು, ವಿಶ್ವದಾಭಿರಾಮ ವಿನುರ ವೇಮ.

ಏರುತಿಪ್ಪ ಆಶೆ ಎರಡು ಪಟ್ಟು ಆಗೆ,
ದಿಕ್ಕುಗೆಟ್ಟು ನರನು ತಿರುಗುತಿಹನು.
ಸೊಣಗನಂಥ ಆಶೆ ಸೇರಿಕೊಳಲು ಬಿಡದು.
ವಿಶ್ವದಾಭಿರಾಮ ಕೇಳು ವೇಮ.

ಆಶೆಯೆಂದರೆ ಇಚ್ಛಿತ ವಸ್ತುಗಳನ್ನು ಪಡೆಯಬೇಕೆಂಬ ಮನಸ್ಸಿನ ಪ್ರವೃತ್ತಿ. ಆಶೆ ಹೆಚ್ಚು ಹೆಚ್ಚಾಗುತ್ತ ಹೋಗುತ್ತದೆ. ಅಂತರಂಗದಲ್ಲಿಯೂ ಆಶೆಯಾಗಬಹುದು. ಬಾಹ್ಯದಲ್ಲಿಯೂ ಆಗಬಹುದು. ವಸ್ತುವನ್ನು ಅಪಹರಿಸಿ ತನ್ನ ಸ್ವಾಧೀನ ಪಡೆಸಿಕೊಳ್ಳುವುದು

ಬಾಹ್ಯದ ಆಸೆ. ಹೆರವರ ವಸ್ತು ತನ್ನದಾಗಬೇಕೆಂಬ ಬಯಕೆ ಉಂಟಾಗುವುದು ಅಂತರಂಗದ ಆಶೆ. ಹೀಗೆ ಆಶೆ ಇಮ್ಮಡಿಸುವುದು.

ಈ ಆಶೆ ದಶ ದಿಕ್ಕುಗಳಲ್ಲಿ ಹರಿಯಬಹುದು- ಅಂದರೆ ಮೇಲೆ, ಕೆಳಗೆ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಾದಿ ಪ್ರದೇಶ ಮತ್ತು ಈಶಾನ್, ವಾಯು, ಅಗ್ನಿ ನೈಋತ್ ಇತ್ಯಾದಿ ಅನುಪ್ರದೇಶಗಳಿಂದ ಇಷ್ಟ ವಸ್ತು ಪಡೆಯಲು ಪರಚಾಡಬಹುದು. ಈ ಎಲ್ಲ ದಿಕ್ಕುಗಳಲ್ಲಿ ಮನಸ್ಸು ಹರಿಯುವುದು.

ಇಂಥ ಸಹಸ್ರವಿಧದ ಮನೋಪ್ರವೃತ್ತಿಗಳನ್ನು ನಿಗ್ರಹಿಸಿ, ಹೃದಯದಲ್ಲಿರುವ ಒಂದೇ ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸಿದರೆ, ಮನಸ್ಸಿನಲ್ಲಿ ಅನೇಕ ತರಂಗಗಳು ಹಿಂಗಿ, ಒಂದೇ ತರೆಂಗ ಉಳಿಯುವುದು. ಅದುವೇ ಆನಂದದ ಸ್ಥಿತಿ. ಇದರೊಡನೆ ಸೇರಿ ಕೊಳ್ಳುವುದೇ ಯೋಗ. (ಯುಜ್ = ಸೇರು ಎಂಬ ಧಾತುಜನ್ಯ) ಆಶೆಯು ನಾಯಿಯಂತಾಗಿ 'ಸೇರಿಕೊಳ್ಳಲು' ಬಿಡುವುದಿಲ್ಲ. ಕಾರಣ, ಆಶೆ ತೊರೆದ ಬಳಿಕ ಮಾತ್ರ ಯೋಗ ಸಾಧ್ಯ.

೫೧೪

ತತ್ತ್ವಮೆರುಗುವಾಡು ದೈವಂಬುನೆರುಗುನು, ಸರ್ವಕಾಮಮುಲನು ಜಂಪಜೇಯು,
ಗದಲಿಮ್ರಿಂಗುವಾಡು ಗರಳಂಬು ಮ್ರಿಂಗುನಾ ? ವಿಶ್ವದಾಭಿರಾಮ ವಿನುರ ವೇಮ.

ತತ್ತ್ವವರಿತಿರುವವ ದೈವವರಿಯುತಿಹನು.
ಸರ್ವಕಾಮಗಳನು ಸಾವ ಹೊಡೆವ.
ಬಾಳೆ ನುಂಗುವವನು ವಿಷವ ನುಂಗಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಆತ್ಮ ತತ್ತ್ವವೆಂದರೆ ದೇಹ ಬೇರೆ, ಆತ್ಮ ಬೇರೆ, ದೇಹ ನಶ್ವರ, ಆತ್ಮ ಅವ್ಯಯ, ಎನ್ನುವುದರ ತಿಳಿವು. ಆತ್ಮ ತತ್ತ್ವ ತಿಳಿದರೆ, ದೈವವನ್ನು ಅರಿಯುವನು. ಇದು ಹೊಳೆದರೆ, ಅದೂ ಹೊಳೆದಂತೆ.

ಈ ತಿಳಿವಳಿಕೆಯಿಲ್ಲದ ಮನುಷ್ಯ ಬಾಹ್ಯ ಸುಖಾಕರ್ಷಣೆಗೆ ಮಾರು ಹೋಗಿ, ಜನನ ಮರಣಗಳ ಜಾಲದಲ್ಲಿ ಬೀಳುತ್ತಾನೆ. ಈ ತಿಳಿವಳಿಕೆ ಉಂಟಾದವನು ಕ್ಷಣಿಕ ಸುಖಭೋಗಗಳಿಗೆ ಆಶಿಸದೆ, ಮನಸ್ಸನ್ನು ಸ್ಥಿರಗೊಳಿಸಿ ಅಮೃತತ್ವವನ್ನು ಪಡೆಯುತ್ತಾನೆ.

(ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳಲಾಗಿದೆ:
'ನಿರಂಜನಃ ಪರಮಂ ಸಾಮ್ಯಂ ಉಪೈತಿ' ಅಂದರೆ ಜಗತ್ಕಾರಣವನ್ನು ತಿಳಿದುಕೊಂಡು ಅದ್ವಯ ಲಕ್ಷಣಸಾಮ್ಯವನ್ನು ಪಡೆಯುವನು.)

ದೈವವರಿಯುವುದು ಒಳ್ಳೆಯದು. ಶ್ರೇಯಸ್ಕರವು. ಇಹದ ಚಿಂತೆ ಹಚ್ಚಿಕೊಂಡು ತೊಳಲಾಡುವುದು ವಿಷ ನುಂಗಿದಂತೆ. ದೈವವರಿತು, ಮುಕ್ತಿ ಹೋಂದುವುದು ಬಾಳೆ ಹಣ್ಣು ನುಂಗಿದಂತೆ. ಬಾಳೆಯನ್ನು ತೊರೆದು ಯಾರೂ ವಿಷ ನುಂಗುವುದಿಲ್ಲ.

೫೧೫

ನೀಳ್ಲ ಮೀದ ಬುಗ್ಗ ನಿಲಿಚಿನಯಪ್ಪುಡು, ತಳ್ಳುನೇಗವಚ್ಚಿ ತಾಕುಚುಂಡು,
ವಿಡೆಡುಕುಂಡ ಕಂತ ವಿಭ್ರಾಂತಿಪಡುದುರು, ವಿಶ್ವದಾಭಿರಾಮ ವಿನುರ ವೇಮ.

ನೀರ ಮೇಲೆ ಬುಗ್ಗೆ ನಿಂತುಕೊಂಡ ಕಾಲ
ತೂರಿ ವೇಗದಿಂದ ತಾಕುತಿಹುದು.
ಒಡಿವ ಮಡಕೆಗೆಷ್ಟು ವಿಭ್ರಾಂತಿ ಪಡುವರು !
ವಿಶ್ವದಾಭಿರಾಮ ಕೇಳು ವೇಮ.

ನೀರಿನ ಮೇಲೆ 'ಗುಳ್ಳೆ' ನಿಂತಿರುತ್ತದೆ. ಪ್ರವಾಹದ ಅಲೆಯೊಂದು ವೇಗದಿಂದ ಬಂದು ಅದಕ್ಕೆ ತಾಗುತ್ತದೆ. ನೀರು ಗುಳ್ಳೆ ಒಡೆದು ಹೋಗುವುದು.

ನಮ್ಮ ದೇಹವೂ ನೀರು ಗುಳ್ಳೆಯಂತೆ. ನಿರ್ದಿಷ್ಟ ಅವಧಿ ತೀರಿದೊಡನೆ, ಬಿದ್ದು ಹೋಗುತ್ತದೆ. ತಾನು ಬಂದ ಮಣ್ಣು,ನೀರು,ಗಾಳಿ,ತೇಜ,ಆಕಾಶಗಳಲ್ಲಿ ಸೇರಿ ಹೋಗುತ್ತದೆ.

ದೇಹ ಒಂದು ಗಡಿಗೆಯಂತೆ. ಪಂಚಮಹಾಭೂತಗಳಿಂದ 'ಕುಂಬಾರ' ನು ನಿರ್ಮಿಸಿದ ಘಟವಿದು. ಬಳಕೆಯಲ್ಲಿದ್ದು ಯಾವುದೋ ಒಂದು ಕ್ಷಣ ಬಿದ್ದು, ಒಡೆದು ಹೋಗುವುದು. ಒಡೆದ ಮಡಕೆಯನ್ನು ಬೀಸಿ ಒಗೆಯುತ್ತೇವೆ. ಮಣ್ಣಿನಿಂದ ಆದ ಘಟ ಮಣ್ಣಿನಲ್ಲಿ ಸೇರುತ್ತದೆ.

ನೀರು ಗುಳ್ಳೆಯಂತೆ, ಮಣ್ಣಿನ ಮಡಕೆಯಂತೆ, ಯಾವುದೋ ಒಂದುಕ್ಷಣದಲ್ಲಿ ಒಡೆದು ಹೋಗಬಹುದಾದ ಈ ದೇಹಕ್ಕಾಗಿ, ವಿಶೇಷ ಭ್ರಾಂತಿ ಪಡುವುದೇಕೆ ? ಇದರ ಪೋಷಣೆಗೆ, ಸಿಂಗಾರಕ್ಕೆ ಎಳಸಿ, ಹಲವಾರು ಕೆಡುಕುಗಳಿಗಿಳಿಯುವುದೇಕೆ ? ಸಾವು ಬರುವುದಲ್ಲಾ ! ಎಂದು ಭಯ ಪಟ್ಟು, ಭ್ರಾಂತಿಗೊಳ್ಳುವುದೇಕೆ ?

೫೧೬

ಹೇವ ಕಾರವಿದ್ಯ ನೆರಿಗಿನವಾರೆಲ್ಲ, ವೇತಲಬಡಿನಿಯಟ್ಲು ವಿದ್ಯಚೇತ,
ದತ್ತ್ವ ಮೆರುಗುವೆನ್ಕ ತನಕು ಜೇತೇಲರಾ ? ವಿಶ್ವದಾಭಿರಾಮ ವಿನುರ ವೇಮ.

ಹೊನ್ನುಗೈವ ವಿದ್ಯೆ ಹೊಳೆದ ಮನುಜರೆಲ್ಲ
ವ್ಯಥೆ ಪಡುವರಂಥ ವಿದ್ಯೆಯಿಂದ.
ತತ್ತ್ವ ತಿಳಿದ ಬಳಿಕ ತನಗೆ ಚಿಂತೆಯಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಬಂಗಾರು ಮಾಡುವ ವಿದ್ಯೆಯಿದೆ. ಮೂಲ ಲೋಹಗಳಿಂದ ಬಂಗಾರು ತಯ್ಯಾರಿಸುತ್ತಾರೆ. ಈ ವಿದ್ಯೆಯೂ ಒಂದು ರೀತಿಯ ಯೋಗಸಾಧನದಿಂದ ಪ್ರಾಪ್ತವಾಗುತ್ತದೆ.

'ಪರುಸವೇದಿ' ಎಂದರೆ ಈ ಯೋಗ ವಿದ್ಯೆಯ ತಿಳಿವು.

ಬಂಗಾರು ಮಾಡುವ ವಿದ್ಯೆ ತಿಳಿದ ಮನುಷ್ಯರು ಅಂಥ ವಿದ್ಯೆಯಿಂದ ಐಹಿಕ ಸುಖ ಭೋಗವನ್ನು ಕ್ಷಣ ಕಾಲ ಪಡೆಯಬಹುದು. ಆತ್ಮದ ಕ್ರಮದಲ್ಲಿ ಹತ್ತಿಪ್ಪತ್ತು ವರುಷವೆಂದರೆ, ಕೇವಲ ಒಂದು ಕ್ಷಣವಿದ್ದಂತೆ. ಎಷ್ಟೋ ದೇಹ ಸಂಬಂಧ ಹೊಂದಬೇಕಾಗಬಹುದಾದ ಆತ್ಮವು ಜನನ-ಮರಣ ಚಕ್ರದಿಂದ ಬಿಡುಗಡೆ ಹೊಂದಲು ಹೊನ್ನುವಿದ್ಯೆ ಅಡ್ಡ ಬರುವುದು. ಹೊನ್ನು ವಿದ್ಯೆ, ಆಶೆ ಹುಟ್ಟಿಸುವುದು. ಭೋಗ ಪ್ರವೃತ್ತಿ ಬೆಳೆಸುವುದು. ಇದರಿಂದ ಮನಸ್ಸಿನ ಚಿಂತೆ ಇನ್ನೂ ಹೆಚ್ಚುತ್ತ ಹೋಗುತ್ತದೆ.

ಆತ್ಮ ತತ್ತ್ವವೆಂದರೆ ಜನನ ಮರಣವಿಲ್ಲದುದು, ಇಂದ್ರಿಯಾತೀತವಾದುದು, ನಿತ್ಯವಾದುದು ಮುಕ್ತವಾದುದು. ಇದರ ತಿಳಿವಳಿಕೆಯಾದರೆ, ದೇಹದ ಚಿಂತೆಯಾಗಲಿ ಇತರ ಚಿಂತೆಯಾಗಲಿ ತನಗೆ ತಗಲುವುದಿಲ್ಲ.

೫೦೭

ಜೀವಭಾವಮೆರುಗ ಜಿಡದೆನ್ನಟಕಿ ಮತಿ, ದೈವವುನು ನೆರುಂಗ ದನರು ಬುದ್ಧಿ
ತೇಜನುದಯವೊಂದ ದಿಮಿರಂಬು ನಿಲುವುದು ವಿಶ್ವದಾಭಿರಾಮ ವಿನುರ ವೇಮ.

ಜೀವ ಭಾವವರಿಯೆ ಮತಿಯು ಕೆಡದೆಂದೂ
ದೈವವನು ತಿಳಿಯಲು ತನಗೆ ಬುದ್ಧಿ.
ತೇಜ ಉದಿಸಿದಾಗ ತಿಮಿರ ನಿಲ್ಲದಲ್ಲ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಕರ್ತವ್ಯ ಕರ್ಮ ನಿರ್ವಹಣೆಯ ದೃಷ್ಟಿಯಿಂದ ಜೀವ ಸ್ವತಂತ್ರವಿದೆ. ಶರೀರ, ಪ್ರಾಣ, ಇಂದ್ರಿಯಾದಿಗಳೆಲ್ಲ ಜೀವದ ಆಧೀನವಾಗಿರುವುದರಿಂದ ಜೀವ ಸ್ವತಂತ್ರವೆನಿಸುತ್ತದೆ. ಜೀವವು ಸ್ವತಂತ್ರವಾಗಿರದಿದ್ದರೆ, ಅದಕ್ಕೆ ಪಾಪ ಮತ್ತು ಪುಣ್ಯ ಕಾರ್ಯಗಳ ಫಲ ಪ್ರಾಪ್ತವಾಗುತ್ತಿರಲಿಲ್ಲ. ಜೀವ ಕರ್ಮಗೆಯ್ಯುವಲ್ಲಿ ಸ್ವತಂತ್ರವಾಗಿಯೇ ಉಂಟು. ಆದರೆ ದೈವದ ವ್ಯವಸ್ಥೆಯಲ್ಲಿ, ತಾನು ಗೆಯ್ದ ಕರ್ಮ ಫಲದ ವಿಷಯದಲ್ಲಿ, ಅದು ಪರತಂತ್ರವಾಗಿದೆ. ಈ ಹೊಣೆಯಿದ್ದರೆ, ಮತಿ ಕೆಡಲಾರದು.

ದೈವ ಭಾವವನ್ನು ತಾಳಿದರೆ ಆಗ ಗೆಯ್ದ ಕರ್ಮದಿಂದ ಅವನಿಗೇನೂ ಸಂಬಂಧವಿಲ್ಲ. ಸೇನಾಧಿಪತಿಯ ಆಜ್ಞೆಯನ್ವಯ ಸೈನಿಕನು ಒಬ್ಬನನ್ನು ಕೊಲ್ಲಲು, ಆ ಕೊಲೆಯ ಹೊಣೆ ಸೈನಿಕನದಲ್ಲ; ಸೇನಾಧಿಕಾರಿಯದು. ಅದೇ ರೀತಿ, ದೈವೀ ಪ್ರೇರಣೆಯಿಂದ, ನಿರಪೇಕ್ಷವಾಗಿ ಕರ್ಮ ಗೆಯ್ದರೆ, ಅವನಲ್ಲಿ ಸದ್ಬುದ್ಧಿ ಹುಟ್ಟುತ್ತದೆ. ಬುದ್ಧಿ ಹುಟ್ಟಿದಾಗ ದೈವಭಾವವನ್ನೇ ಹೊಂದಿ ಜೀವಭಾವ ತೊರೆಯುತ್ತಾನೆ. ಹೇಗೆಂದರೆ, ಬೆಳಗಾದರೆ, ಕತ್ತಲು ಸರಿಯುವುದಿಲ್ಲವೇ ? ಹಾಗೆ.

೫೦೮

ಪರುಸವಿಸುಮುಸೋಕಿ ಬಂಗಾರಮ್ಮೆನಟ್ಲು, ಕಪ್ಪುರಂಬು ಜ್ಯೋತಿ ಗಲಿಸಿನಟ್ಲು,
ಪುಷ್ಪಮಂದುದಾವಿ ಪೊಸಗಿ ನಟ್ಲಗು ಮುಕ್ತಿ, ವಿಶ್ವದಾಭಿರಾಮ ವಿನುರ ವೇಮ.

ಸೋಂಕಿ ಪರುಷ, ಸ್ವರ್ಣವಾದ ಕಬ್ಬಿಣಂತೆ,
ಕಪ್ಪುರದಿ ಜ್ಯೋತಿ ಕಲೆಯುವಂತೆ
ಹೂವಿನೊಳು ವಾಸನೆ ಹೊಂದಿಕೊಂಡಿಹಂತೆ
ವಿಶ್ವದಾಭಿರಾಮ ಕೇಳು ವೇಮ.

ಜೀವಭಾವವು ಬ್ರಹ್ಮಭಾವ ಅಂದರೆ ದೈವಭಾವದೊಡನೆ ಒಂದಾಗುವುದು. ಈ ಒಂದಾಗುವಿಕೆಯನ್ನು ಕಬ್ಬಿಣವು ಪರುಷಮಣಿ ತಟ್ಟಿದೊಡನೆ ಸುವರ್ಣವಾಗುವಂತೆ; ಕಪ್ಪುರದಲ್ಲಿ ಜ್ಯೋತಿ ಬೆರೆತುಕೊಳ್ಳುವಂತೆ, ಮತ್ತು ಹೂವಿನಲ್ಲಿ ವಾಸನೆ ಸೇರಿರುವಂತೆ, ಎಂದು ಮುಂತಾಗಿ ವರ್ಣಿಸಬಹುದು.

ಬ್ರಹ್ಮವಾದ ಜೀವನ್ಮುಕ್ತನು, ತನ್ನ ಪೂರ್ವಭಾವಕ್ಕೆ ಮರಳಿದರೂ, ಅವನು ಪೂರ್ಣ ಬದಲಾಗಿರುತ್ತಾನೆ. ಕಬ್ಬಿಣವು ಘನವು. ಸ್ವರ್ಣವೂ ಘನವು. ಆದರೂ ಅವುಗಳ ಗುಣಗಳಲ್ಲಿ ಅಂತರವುಂಟು. ಅದೇ ರೀತಿ, ಪ್ರಪಂಚದೊಡನೆ ಜೀವನ್ಮುಕ್ತನ ಸಂಬಂಧ.

ಜೀವನ್ಮುಕ್ತನು ಸಾಮಾನ್ಯರ ಮನಸ್ಸಿಗಿಂತ ಸೂಕ್ಷ್ಮ ಮನಸ್ಸು ಹೊಂದಿರಬಹುದು. ರೂಪ, ರಸ, ಗಂಧ, ಸ್ಪರ್ಶ ಶಬ್ದಗಳುಳ್ಳ ಘನವಾದ ಕರ್ಪೂರ, ಕೇವಲ ಸ್ಪರ್ಶ, ಶಬ್ದಗಳುಳ್ಳ ಜ್ಯೋತಿಯಂತೆ ಸೂಕ್ಷ್ಮವಾಗಿ ಮಾರ್ಪಡಬಹುದು.

ಇಲ್ಲವೆ, ಯಾವುದೋ ವಿಶೇಷ ಗುಣ ವ್ಯಕ್ತ ಮಾಡುತ್ತಿರಬಹುದು; ಹೂವು ಗಂಧವನ್ನು ಹೊರಸೂಸುವಂತೆ.

೫೦೯

ಜಪಮು ಬಾಹ್ಯಪೂಜ ಜಾಲಜೇಸಿಪಿದಪ, ಗಪಟಮು ವಿಡಲೇಕ ಕಷ್ಟನರುಲು,
ಮುಕ್ತಿನೊಂದಲೇಕ ಮುನಿಗಿರಿ ತಮುಮುನ, ವಿಶ್ವದಾಭಿರಾಮ ವಿನುರ ವೇಮ.

ಬಾಹ್ಯಪೂಜೆ ಜಪವ ಬಹಳ ಗೈದು ಬಳಿಕ,
ಕಪಟ ಬಿಡದೆ ನರರು ಕಷ್ಟ ಪಡುತ,
ಮುಕ್ತಿ ಹೊಂದದಿದ್ದು, ಮುಳುಗಿದರು ತಮುದೊಳು.
ವಿಶ್ವದಾಭಿರಾಮ ಕೇಳು ವೇಮ.

ಬಹಿರಂಗದ ಆಚಾರ ರೂಪವಾದ ಗಂಧ-ಫಲ-ಪುಷ್ಪಾರ್ಪಣೆಯ ಪೂಜೆಯನ್ನಾಗಲಿ ಇಲ್ಲವೆ ಬಾಯಿ ಮಾತ್ರ ಪಠಿಸುವ ವಾಚನಿಕ ಜಪವನ್ನಾಗಲಿ ಬಹಳ ಜನ ಮಾಡುತ್ತಾರೆ. ಆದರೆ ಅಂತರಂಗದಲ್ಲಿ, ಅಂದರೆ ಮನದಲ್ಲಿ ಮೋಸ ವಂಚನೆಗಳನ್ನು ತೊರೆಯುವದಿಲ್ಲ.

ಆದರೆ, ಮನಸ್ಸಿನ ಪರಿಶುದ್ಧಿ ಮುಖ್ಯ. ಶುದ್ಧವಾದ ಮನಸ್ಸು ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತ, ಹೋದಂತೆಲ್ಲ ಸತ್ಯವನ್ನು ಗ್ರಹಿಸುತ್ತದೆ. ಸತ್ಯ ತಿಳಿದ ನಂತರ ಆತ್ಮ ಅಂಗ ಭಾವದಿಂದ ಮುಕ್ತವಾಗುತ್ತದೆ. ಮನಸ್ಸು ಶುದ್ಧವಾಗದೆ, ಒಣ ಪೂಜೆ-ವ್ರತ ಮಾಡುವುದು ಕೇವಲ ತಾಮಸಿಕ ಪ್ರವೃತ್ತಿಯಷ್ಟೇ. ಅದರಿಂದ ಮುಕ್ತಿ ಲಭಿಸದು.

(ಮುಂಡಕೋಪನಿಷತ್ತಿನಲ್ಲಿ ಇಂಥ ಬಾಹ್ಯ ಪೂಜಾ ಕರ್ಮಗಳನ್ನು ಖಂಡಿಸಲಾಗಿದೆ: " ಯಜ್ಞರೂಪದ ಕರ್ಮಾದಿಗಳು ಕೇವಲ ತೂತು ಬಿದ್ದ ನಾವೆಯಂತೆ. ಇವುಗಳನ್ನೇ ಶ್ರೇಷ್ಠವೆಂದು ತಿಳಿಯುವವನು ಮೂರ್ಖ. ಅವನಿಗೆ ಪುನರಪಿ ಮುಪ್ಪು ಸಾವು ಕಟ್ಟಿಟ್ಟದ್ದು")

೫೨೦

ಊರ್ಧ್ವಲೋಕಮುಂದು ನುಚಿತಕ್ರಮುಂಬುನ, ರೂಪಮೇಮಿಲೇಕ ರೂಢಿತೋನ,
ಪರಮಯೋಗಿ ಚೂಚು ಬರಮಾತ್ಮುಡಿತಡನಿ, ವಿಶ್ವದಾಭಿರಾಮ ವಿನುರ ವೇಮ.

ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ
ರೂಪ–ವೇನು ಇರದ, ರೀತಿಯಲ್ಲಿ,
ಪರಮಯೋಗಿ ನೋಳ್ಪ ಪರಮಾತ್ಮನಿರವನು.
ವಿಶ್ವದಾಭಿರಾಮ ಕೇಳು ವೇಮ.

ಊರ್ಧ್ವಲೋಕ :—ಹೃದಯಾಕಾಶದಲ್ಲಿ ಪರಮಾತ್ಮನು ವಾಸಿಸುವ. ಇದರಲ್ಲಿ ಎಂಟು ದಳದ ಕಮಲವನ್ನು ಭಾವಿಸಿರಿ. ಕಮಲದ ದಂಟು ಜ್ಞಾನ. ಅಷ್ಟ ದಳಗಳೇ ಅಣಿಮಾ, ಮಹಿಮಾ, ಗರಿಮಾದಿ, ಅಷ್ಟಸಿದ್ಧಿಗಳು. ಕೇಸರಗಳೇ ತ್ಯಾಗ. ಯೋಗಿ, ಬಾಹ್ಯ ಸಿದ್ಧಿಯನ್ನು ನಿರಾಕರಿಸಿ, ಕೇಸರಗಳಿಂದ ಮೇಲಿನ ಸ್ಥಾನ ಧ್ಯಾನಿಸಿದರೆ, ಪರಮಾತ್ಮ ಹೊಳೆಯುವನು. ಈ "ಮೇಲಿನ ಸ್ಥಾನ"ವೇ ಊರ್ಧ್ವಲೋಕವೆಂದು ಕರೆಯಲ್ಪಡುವುದು. ಅಷ್ಟಸಿದ್ಧಿಗಳ ಸಿದ್ಧಿಯ ಸ್ಥಿತಿ ಪ್ರದೇಶವೆನ್ನಿಸುವುದು.

ಉಚಿತಕ್ರಮ :—ನಾವು ಆಲೋಚಿಸುತ್ತಿರುವಾಗ ಎಷ್ಟೋ ಕ್ಷಣಗಳು ಕಳೆಯುತ್ತವೆ. ಪ್ರತಿಯೊಂದು ಕ್ಷಣದಲ್ಲಿಯೂ ಭಾವ ಬದಲಾವಣೆಯಿದೆ. ಇವನ್ನೆಲ್ಲ ನಾವು ಅಂತ್ಯದಲ್ಲಿ ಗುರುತಿಸುತ್ತೇವೆ. ಪ್ರತಿಯೊಂದನ್ನು ಹೀಗೆ ಗುರುತಿಸುವ ವಿವಿಧ ಹಂತಗಳೇ ಕ್ರಮವು.

(ಪತಂಜಲಿ ಯೋಗ ಶಾಸ್ತ್ರದನ್ವಯ :-

'ಕ್ಷಣ ಪ್ರತಿಯೋಗೀ ಪರಿಣಾಮಾಪರಾಂತನಿರ್ಗ್ರಾಹ್ಯಃ ಕ್ರಮಃ||

ಕ್ಷಣ ಸಂಬಂಧದಿಂದ,ಇರುವ ಬದಲಾವಣೆ ಮತ್ತು ಇನ್ನೊಂದು ಬದಲಾವಣೆ, ಅಂತ್ಯದಲ್ಲಿ ಕಾಣಿಸಿಕೊಳ್ಳುವುವು. ಇವುಗಳೇ ಕ್ರಮ. ಆದರೆ ಸರ್ವ ವ್ಯಾಪಿತ್ವ ಪಡೆದ ಮನಸ್ಸಿಗೆ "ಕ್ರಮ"ವಿಲ್ಲ. ಆ ಮನಸ್ಸಿಗೆ ಎಲ್ಲವೂ ವರ್ತಮಾನಕಾಲ. ಭೂತ ಭವಿಷ್ಯತ್ತು ಇಲ್ಲ. ಕಾಲವೆಲ್ಲ ಅದರ ಸ್ವಾಧೀನ. ಜ್ಞಾನವೆಲ್ಲ ಕ್ಷಣ ಒಂದರಲ್ಲಿದೆ. ಎಲ್ಲವೂ ಒಂದು ಮಿಂಚಿನಂತೆ ಹೊಳೆಯುವುದು.

ರೂಪವಿರದ ರೀತಿ :—ಪರಮಾತ್ಮನಿಗೆ ರೂಪ ಆಕಾರಗಳಿಲ್ಲ. ನಿರಾಕಾರನವನು
'ನ ಸಂದೃಶೇ ತಿಷ್ಠತಿ ರೂಪಮಸ್ಯ|| ನ ಚಕ್ಷುಷಾ ಪಶ್ಯತಿ ಕಶ್ಚನೈನಮ್'
[ಅವನ ರೂಪ ನೋಡುವಂತಿಲ್ಲ. ಅದನ್ನು ಕಣ್ಣು ಕಾಣಲಾರದು.] ಎಂದು ಶ್ವೇತಾಶ್ವತರೋಪನಿಷತ್ತು ಸಾರುತ್ತಿದೆ.

೫೨೧

ದಾನಮೊಸಗುಕನ್ನ ದೇನಂಬು ಮರಿಹೆಚ್ಚು ದೇನಗೊನಮುಕನ್ನ ದೆಲಿವಿ ಹೆಚ್ಚು
ತೆಲಿವಿಕನ್ನ ನಾಸದೆಗ ವೇಸಿನದಿ ಹೆಚ್ಚು, ವಿಶ್ವದಾಭಿರಾಮ ವಿನುರ ವೇಮ.

ದಾನ ಕೊಡುವಕಿಂತ ಧ್ಯಾನ ಮತ್ತೆ ಮೇಲು.
ಧ್ಯಾನ ಗೈವಕಿಂತ ತಿಳಿವು ಮೇಲು.
ತಿಳಿವಿಗಿಂತ ಆಶೆ ತೊಡೆಯುತಿಹುದೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ದಾನ :—ಏನೂ ಇಲ್ಲದ ಬಡವರಿಗೆ ಅವಶ್ಯ ಬಯಸಿದ ಪದಾರ್ಥ ಕೊಡುವುದೇ ದಾನವೆನ್ನಿಸುವುದು. ಬೇರೆ ರೀತಿಯಿಂದ ಕೊಟ್ಟರೆ ದಾನವಲ್ಲ. ಏಕೆಂದರೆ ಅಲ್ಲಿ ಪ್ರತಿಫಲದ ಅಪೇಕ್ಷೆ ಇರುತ್ತದೆ. ದಾನ.ಮನೋನಿಗ್ರಹದ ಮೊದಲು ಮೆಟ್ಟಿಲಾದ ಯಮ ಸಾಧನೆಯಲ್ಲಿ ಉಂಟು. ಬೇಕಾದುದಕ್ಕಿಂತ ಹೆಚ್ಚು ಸಂಗ್ರಹಿಸದಿರುವುದೇ ಅಪರಿಗ್ರಹ. ಇದರ ತಿಳಿವೇ ದಾನ ಕರ್ಮಕ್ಕೆ ಮೂಲ.

ಧ್ಯಾನ :—ಪರಮ ಗುರಿಯ ಬಗೆಗೆ ಮನಸ್ಸನ್ನು ಏಕಾಗ್ರಗೊಳಿಸುವುದು ಧ್ಯಾನ. ಮನಸ್ಸು ಧ್ಯಾನ ಸ್ಥಿತಿ ಮುಟ್ಟಲು ಪ್ರಣಿಧಾನ ಮತ್ತು ಧಾರಣ ಸ್ಥಿತಿ ದಾಟಬೇಕು. ಪ್ರಣಿಧಾನ ಸ್ಥಿತಿಯಲ್ಲಿ ಮಂತ್ರ ಪಠಣವು ವಾಚನಿಕ ಇಲ್ಲವೆ ಮಾನಸಿಕವಾಗಿರದೆ, ತಾಳಮೇಳ ಹೊಂದಿದುದು ಆಗಿದೆ. ಶಬ್ದ ತರಂಗ,ಮಾನಸಿಕ ತರಂಗಗಳಿಗೆ ಹೊಂದಿ ಹೋಗುವವು. ಧಾರಣ ಸ್ಥಿತಿಯಲ್ಲಿ,ಬಾಹ್ಯದಿಂದ ವಿಷಯವನ್ನು ಮನಸ್ಸು ಗ್ರಹಿಸಿ, ಕೇವಲ ಅದರತ್ತ ಕೇಂದ್ರೀಕೃತವಾಗುತ್ತದೆ. ಧ್ಯಾನಸ್ಥಿತಿಯಲ್ಲಿ ಒಂದೇ ಗುರಿಯ ಬಗೆಗಿರುವ ಹಲವಾರು ಮಾನಸಿಕ ತರಂಗಗಳು ಕೂಡಿ ಒಂದಾಗುವವು.

ತಿಳಿವು; ಜ್ಞಾನ :—"ಪ್ರಜ್ಞಾನಂ ಬ್ರಹ್ಮ" ಎಂದು ಗ್ರಂಥ ಸಾರುತ್ತಿವೆ. ಇದು ಲಕ್ಷಣಾರ್ಥದ ಭಾಷೆ. ಮುಕ್ತಿ ಇಲ್ಲವೆ ಬಿಡುಗಡೆಯ ಕ್ರಮದ ಜ್ಞಾನವಾದರಾಯಿತು, ಎನ್ನುತ್ತಾರೆ;ಇದು ತಪ್ಪು. ನಿಜವಾದ ಜ್ಞಾನ ಇಲ್ಲವೆ ಅರಿವು ಗ್ರಂಥ ಗುರುಗಳಾದಿಗಳಿಂದ ತಿಳಿದುದನ್ನು ಹೃದಯ ಶುದ್ಧಗೊಳಿಸಿ ಮನಸ್ಸು ನಿಗ್ರಹಿಸಿ, ಕಂಡುಕೊಳ್ಳುವುದೇ ಆಗಿದೆ.

ಆಶೆ ತೊಡೆಯುವಿಕೆ :—ನಮ್ಮ ಆಶೆ, ಕೋರಿಕೆಗಳೇ ನಮ್ಮ ಹುಟ್ಟಿಗೆ ಕಾರಣ. ಆಶೆಯನ್ನು ತೊಡೆದು ಹಾಕಿದರೆ, ಜನ್ಮರಾಹಿತ್ಯ ಪಡೆಯಬಹುದು. ಪೂರ್ಣ ಆಶೆ ತೊಡೆದು ಹಾಕುವುದೇ ಬಿಡುಗಡೆ; ಮುಕ್ತಿ

೫೨೨

ಗಾಲಿಲೇನಿದೀಪಕಳಿಕ ಚಂದಂಬುನ, ನಲಲು ಸುಳ್ಳುಲೇನಿ ಜಲಧಿರೀತಿ.
ನಿಶ್ಚಲಾತ್ಮಯುಂಡು ನಿರ್ವಿಕಾರಂಬುನ, ವಿಶ್ವದಾಭಿರಾಮು ವಿನುರ ವೇಮು.

ಗಾಳಿಯಿರದ, ದೀಪ ಕಳೆ ಸ್ಥಿರತೆಯಂತೆ,
ಅಲೆ ತಿರುಗಣಿಯಿರದ ಜಲಧಿಯಂತೆ
ನಿಶ್ಚಲಾತ್ಮನಾಗು, ನಿರ್ವಿಕಾರದಿಂದ
ವಿಶ್ವದಾಭಿರಾಮ ಕೇಳು ವೇಮ.

(" ಗಾಳಿ ಬೀಸದಿರುವಾಗ ದೀಪವು ಹೇಗೆ ಚಲಿಸುವದಿಲ್ಲವೋ-ಎಂಬುದು ಆತ್ಮ ಯೋಗವನ್ನು ಮಾಡುತ್ತಿರುವ ಯೋಗಿಯ ಚಿತ್ತಕ್ಕೆ ಉಪಮೆಯಾಗಿ ಹೇಳಲ್ಪಟ್ಟದೆ. "
ಭಗವದ್ಗೀತೆ. ೬--೧೯)

ಆತ್ಮಯೋಗ ಮಾಡುತ್ತಿರುವ ಯೋಗಿಯ ಮನಸ್ಸು ಗಾಳಿಯೇ ಇಲ್ಲದಿರುವಾಗ ಸ್ಥಿರವಾಗಿ ನಿಲ್ಲುವ ದೀಪದಂತೆ, ಮನಸ್ಸಿನ ಪ್ರವೃತ್ತಿಗಳ ಸೆಳೆತವಿಲ್ಲದಂತಾಗಿ ಮನಸ್ಸು ಸ್ಥಿರವಾಗಬೇಕು. ಸಾಗರದ ಮೇಲು ಭಾಗದಲ್ಲಿ, ಗಾಳಿಯೇ ಮೊದಲಾದ ಬಾಹ್ಯ ಪ್ರಚೋದಕಗಳಿಂದ ಏಳುವ ತರಂಗಗಳು ಮತ್ತು ಅದರ ತಳದ ಭೂಪೃಷ್ಠದ ಸ್ವರೂಪದಿಂದ ತೆರೆಗಳ ಚಲಿಸುವಿಕೆ,ವಿಚಿತ್ರ ರೂಪ ತಾಳಿ ಉಂಟಾದ ' ತಿರುಗಣಿ ಮಡುಗಳಿಲ್ಲದ,ಅದರ ಗಂಭೀರತೆ, ನಿಶ್ಚಲತೆ ಸಾಧಿಸಿದ ಯೋಗಿಯ ಆಶಾಪ್ರವೃತ್ತಿಯಿಂದ ವಿಕಾರ ಹೊಂದದೆ, ನಿರ್ವಿಕಾರಿಯಾಗಿರಬೇಕು. ಇಂಥ ನಿಶ್ಚಲತೆ ಸಾಧಿಸಿದ ಯೋಗಿಯ ಮನಸ್ಸು ಸೂಕ್ಷ್ಮವಾಗಿ ಗುರಿಯನ್ನು ತಿಳಿಯಲು ಸಾಧ್ಯವಾಗುವುದು.

೫೨೩

ಕಲುಷ ಮೆಲ್ಲದೆಲಿಯ ದಲವಂಪುಲಕುಮೂಲ, ಮರಯ ದತ್ತ್ವಮೆಲ್ಲ ನಾತ್ಮಂಬುಟ್ಟು,
ತೆಲಿಸಿನಂದುಕು ಮರಿಧೀರುಂಡು ಕಾವಲೆ, ವಿಶ್ವದಾಭಿರಾಮು ವಿನುರ ವೇಮು.

ಕಲುಷದೆಲ್ಲ ತಿಳಿವೆ ತಲೆ ತಗ್ಗಲು ಮೂಲ.
ಅರಿತೊಡೆಲ್ಲ ತತ್ತ್ವಕಾತ್ಮ ಹುಟ್ಟು.
ತಿಳಿದುಕೊಂಡು ಮತ್ತೆ ಧೀರನಾಗಿ ಸಾಗು.
ವಿಶ್ವದಾಭಿರಾಮು ಕೇಳು ವೇಮು.

ನಾವು ಇಟ್ಟ ಹೆಜ್ಜೆ ತಪ್ಪು ಎನ್ನಿಸಬೇಕಾದರೆ, ಸರಿಯಾದ ಹೆಜ್ಜೆಯ ಅರಿವು ನಮ್ಮಗಾಗಬೇಕು. ಆಗ ನಮ್ಮ ನಡೆಯ ಬಗ್ಗೆ ನಮಗೆ ನಾಚುಗೆಯೆನಿಸಿ ತಲೆ ತಗ್ಗಿಸುತ್ತೇವೆ. ಅದೇ ರೀತಿ ಆತ್ಮ ಭಾವದ ಅರಿವು ಉಂಟಾದರೆ ನಮಗೆ ಜೀವಭಾವದ ಬಗೆಗೆ ಹೇಸುಗೆ ಎನ್ನಿಸಿ, ನಾವು ತಲೆಬಾಗುತ್ತೇವೆ.

ತತ್ ಎಂದರೆ ಅದು. 'ತ್ವ' ಪ್ರತ್ಯಯ ಸೇರಿ ಆದ ನಾಮಪದ. ತತ್ ಎಂದರೆ ಬ್ರಹ್ಮ. ತತ್ತ್ವವೆಂದರೆ, 'ಬ್ರಹ್ಮತನ'; 'ಬ್ರಹ್ಮತ್ವ'. ತತ್ತ್ವ ಅರಿತೊಡನೆ 'ಆತ್ಮ'ದ ಸ್ವರೂಪ ಗೋಚರಿಸುವದು. ಆತ್ಮದಿಂದ ಎಲ್ಲವೂ ಹುಟ್ಟಿದೆಯೆಂದು ತಿಳಿಯುವದು.

ನಾವು ಪ್ರಾಪಂಚಿಕರು. ನಾವು ಎಷ್ಟೋ ಪಾಪ ಮಾಡಿದ್ದೇವೆ. ತುಂಬಾ ದೋಷ ಪೂರ್ಣರೂ ಹೌದು. ನಾವು ನಿರ್ವಿಕಲ್ಪ, ನಿರಂಜನ ಬ್ರಹ್ಮನಲ್ಲಿ ಒಂದಾಗುವುದು ಹೇಗೆ? ಎಂಬ ಭಯ ಮೊದ ಮೊದಲು ಇರಬಹುದು. ಆದರೆ ಸಾಧನೆಯಿಂದ ಮನಸ್ಸು ಶುದ್ಧವಾದಂತೆಲ್ಲ ತತ್ತ್ವತಿಳಿದೊಡನೆ, ಭಯನಾಶವಾಗಿ ಭಕ್ತಿಯಷ್ಟೇ ಉಳಿಯುವದು. ಸಾಧನೆ ಮುಂದುವರಿದರೆ, ಬ್ರಹ್ಮದೊಂದಿಗೆ ಒಂದಾಗಿ ಜೀವನ್ಮುಕ್ತರಾಗಬಹುದು.

೫೨೪

ಅಡವಿದಿರುಗಲೇದದಾಕಾಶಮುನಲೇದು, ಅವನಿದೀರ್ಥಯಾತ್ರಲುದು ಲೇದು.
ಒಡಲು ಶುದ್ಧಿ ಜೇಸಿ ಯೊಡಯನಿಜೂಡರಾ, ವಿಶ್ವದಾಭಿರಾಮು ವಿನುರ ವೇಮು.

ಅಡವಿ ತಿರುಗಲಿಲ್ಲ; ' ತತ್ ' ಆಗಸದಿಲ್ಲ.
ಅವನಿ ತೀರ್ಥಯಾತ್ರೆಯಲ್ಲಿ ಇಲ್ಲ.
ಒಡಲು ಶುದ್ಧಗೊಳಿಸಿ ಒಡೆಯನನ್ನು ನೋಡು.
ವಿಶ್ವದಾಭಿರಾಮು ಕೇಳು ವೇಮು.

ತತ್ ಎಂದರೆ ಬ್ರಹ್ಮ. ಪರಮಾತ್ಮ. ಪರಮಾತ್ಮನು ಇರುವುದೆಲ್ಲಿ ? ಚತುರಾಶ್ರಮವಾದಿಗಳು ಬ್ರಹ್ಮಚರ್ಯ, ಗೃಹಸ್ಥಾಶ್ರಮಗಳಲ್ಲಿ ಅರ್ಧ ಆಯುಷ್ಯ ಕಳೆದು ಉಳಿದ ಕಾಲುಭಾಗವನ್ನು ಸಪತ್ನೀಕರಾಗಿ ವನಾರಣ್ಯಗಳಲ್ಲಿ ಕಳೆದು ಪರಮಾತ್ಮನನ್ನು ಕಾಣಬಯಸುತ್ತಾರೆ. ಆ ಮೇಲೆ ಸತಿಯಿಂದ ಅಗಲಿದ ಸನ್ಯಾಸ.

ಇನ್ನು ಹಲವರು,ಪರಮಾತ್ಮ ಆಕಾಶದಲ್ಲಿರುತ್ತಾನೆ, ಎನ್ನುವರು. ಸ್ವರ್ಗ ಆಕಾಶದಲ್ಲಿ ಉಂಟು. ಅಲ್ಲಿಯೇ ದೇವತೆಗಳ ವಾಸ. ದ್ಯೂ ಎಂದರೆ ದೇವರು ದ್ಯಾವಾ ಎಂದರೆ ಸ್ವರ್ಗ; ಆಕಾಶ.

ಇನ್ನು ಹಲವರು ಪರಮಾತ್ಮ ಕಲಿಕಾಲದಲ್ಲಿ ಕಲ್ಲಾಗಿ, ಶಿಲಾಮೂರ್ತಿಯಾಗಿ ತಿರುಪತಿಯ ವೇಂಕಟಪತಿಯಾಗಿ, ಶ್ರೀ ಶೈಲದ ಮಲ್ಲಿಕಾರ್ಜುನನಾಗಿ,ಕಾಶಿಯ ವಿಶ್ವೇಶ್ವರನಾಗಿ ನಿಂತಿದ್ದಾನೆ, ಎಂದು ನಂಬಿದ್ದಾರೆ. ಅವನ ವಾಸದಿಂದ ಅಲ್ಲಿ ಜಲಕುಂಡಗಳು ದೇವಮಹಿಮೆ ಹೊಂದಿ, ಮುಳುಗಿದವರಿಗೆ ಮೋಕ್ಷ ನೀಡುವವೆಂದೂ ಮೂಢ ನಂಬುಗೆ.

ತತ್ ಅಡವಿಯಲ್ಲಿ ಇಲ್ಲ. ಆಕಾಶದಲ್ಲಿ ಇಲ್ಲ. ತೀರ್ಥಯಾತ್ರೆಯಲ್ಲಿ ಇಲ್ಲ. ಅವನಿರುವುದು, ಒಡಲಿನಲ್ಲಿ; ಹೃದಯದಲ್ಲಿ. ಹೃದಯ ಶುದ್ಧಗೊಳಿಸಿ ನೋಡಿದರೆ, ಕಂಡುಕೊಳ್ಳಬಹುದು.

(ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳಿದೆ : ' ಅಂತಃಶರೀರೇ ಜ್ಯೋತಿರ್ಮಯಃ ಹಿ ಶುಭ್ರೋಯಂ ಪಶ್ಯಂತಿ ಯತಯಃ ಕ್ಷೀಣ ದೋಷಾಃ |

ಹೃದಯದಲ್ಲಿನ ದೋಷಾದಿ ಕ್ಷೀಣಿಸಿದ ನಂತರ ಬ್ರಹ್ಮ ಗೋಚರಿಸುವುದು. ಮತ್ತು ಶರೀರದೊಳಗೆ ಶುಭ್ರವಾಗಿ, ಜ್ಯೋತಿರ್ಮಯವಾಗಿ ಹೊಳೆಯುವುದು.

೫೨೫

ಕಪ್ಪುರಂಪು ಮನಸುಗಾಂಕ್ಷಿಂಚು ಯೊಗಿಕಿ, ಜ್ಞಾನದೀಪಶಿಖಯು ದಾನಟಂಚು,
ಗಾನವಚ್ಚುನಾತ್ಮ ಕ್ರಮವಾಣಮೈ ನಿಚ್ಚ, ವಿಶ್ವದಾಭಿರಾಮ ವಿನುರ ವೇಮು.

ಕಪ್ಪುರದಂತೆ ಮನ, ಕನವರಿಪ ಯೋಗಿಗೆ ;
ಜ್ಞಾನದೀಪ ಶಿಖೆಯು ತಾನು ಅಂತೆ.
ಕಾಣಬಹುದು ಆತ್ಮ ಕ್ರಮದಿಂದ ನಿತ್ಯ.
ವಿಶ್ವದಾಭಿರಾಮ ಕೇಳು ವೇಮು.

ಆತ್ಮವನ್ನು ತಿಳಿಯಲು ಕನವರಿಸುವ ಯೋಗಿಯ ಮನಸ್ಸು ಕಪ್ಪುರದಂತೆ. ಅದರಲ್ಲಿ ಅವಿದ್ಯೆ ಇರುವುದಾದರೂ ಭಕ್ತಿ ಉಂಟು. ಆತ್ಮ ಸ್ವರೂಪದ ಜ್ಞಾನವು ದೀಪಶಿಖೆಯಂತೆ. ದೀಪಶಿಖೆ ತಾಗಿದೊಡನೆ ಕಪ್ಪುರವು ತಾನೇ ದೀಪವಾಗಿ ಉರಿಯುತ್ತದೆ. ಜ್ಯೋತಿಯ ಗುಣ, ಕಪ್ಪುರದಲ್ಲಿ ಉಂಟು. ಅದಕ್ಕೆ ಅದರ ಜ್ಯೋತಿ ಸ್ವರೂಪದ ಅರಿವಾಗಬೇಕಷ್ಟೇ.

ಇದೇ ರೀತಿ,ಮನಸ್ಸು ಕ್ಷಣ ಕ್ಷಣಕ್ಕೆ ಬದಲಾವಣೆ ಗೋಚರಿಸುವ ಕ್ರಮದಂತೆ ಆತ್ಮವು ಅಂತ್ಯದಲ್ಲಿ ಗೋಚರವಾಗುವುದು. ಆದರೆ ಇದನ್ನು ಅರಿಯುವ ಮನಸ್ಸಿನ ಬದಲಾವಣೆ ಯಮ ನಿಯಮಾದಿಗಳನ್ನು ಪಾಲಿಸುವ ಜೀವನದ ಮೇಲೆ ಅಗಣಿತ ಕ್ಷಣಗಳಿಗೊಮ್ಮೆ ಆಗುತ್ತ ಬಂದಿರುತ್ತದೆ. ಅದು ವರೆಗೆ ನಮಗೆ ಈ ಬದಲಾವಣೆ ಗೋಚರಿಸುವುದಿಲ್ಲ. ಅಂತ್ಯದಲ್ಲಿ ಇಡೀ ಬದಲಾವಣೆ ಗೋಚರಿಸುವುದು.

೫೨೬

ಇಂದ್ರಿಯ ಮುಲಚೇತ ನೆಗ್ಗೊಂದು ಚುಂಡೆಡು, ವೆರ್ರಿ ಮನುಜುಡೇಲ ವೆದಕು ಶಿವುನಿ ?
ಇಂದ್ರಿಯಮುಲ ರೋಸಿ ಯೀಶುನಿ ಜೂಡುಡೀ, ವಿಶ್ವದಾಭಿರಾಮ ವಿನುರ ವೇಮ.

ಇಂದ್ರಿಯಂಗಳಿಂದ ನುಗ್ಗು ನುಗ್ಗಲಾಗಿ,
ಹುಡುಕಲೇಕೆ ಶಿವನ ? ಹುಚ್ಚು ಮನುಜ.
ಇಂದ್ರಿಯಗಳ ತೊರೆದು, ಈಶನನ್ನು ಕಾಣು.
ವಿಶ್ವದಾಭಿರಾಮ ಕೇಳು ವೇಮು.

ಪರಮಾತ್ಮನನ್ನು ಶೋಧಿಸಲು ಅರಣ್ಯ-ತೀರ್ಥಕ್ಷೇತ್ರ ತಿರುಗಿದರೆ, ಕಾಲುನೋವು. ಉರಿಬಿಸಿಲು, ನಡುಗುವ ಛಳಿಯಲ್ಲಿ ನಿಲ್ಲುವುದರಿಂದ ಮೈದಣಿವು. ಇವುಗಳಿಂದ ಫಲವಿಲ್ಲ. ಏಕೆಂದರೆ,ಪರಮಾತ್ಮ ಇಂದ್ರಿಯಗಳಿಗೆ ಗೋಚರಿಸುವಂಥ ಗುಣದವನಲ್ಲ. ಯೋಗ ಸಾಧನೆ

ಯಿಂದ ಸುಷುಮ್ನ ನಾಳದ ಕೆಳಬಾಯಿ ತೆರೆದು, ಇಡ ಪಿಂಗಳಗಳ ಮೂಲಕ ತಿಳಿವಿನ ಕ್ರಿಯೆ ನಡೆದು, ಅತೀಂದ್ರಿಯಾವಸ್ಥೆಯಲ್ಲಿರುವಾಗ ಹೃದಯಸ್ಥಾಯಿ ಪರಮಾತ್ಮನು ಗೋಚರಿಸಬಹುದು. ಇಂದ್ರಿಯಗಳಿಂದ ಅರಿಯಬಯಸುವದು ಹುಚ್ಚುತನ.

ಮುಂಡಕೋಪನಿಷತ್ತಿನ ಅಭಿಪ್ರಾಯ ನೋಡಿರಿ: "ಏಷೋಣುರಾತ್ಮಾ ಚೇತಸಾ ವೇದಿತವ್ಯೋ ಯಸ್ಮಿನ್ಪ್ರಾಣಃ ಪಂಚಧಾ ಸಂವಿವೇಶ| ಪ್ರಾಣೈಶ್ಚಿತ್ತಂ ಸರ್ವಮೋತ್ ಪ್ರಜಾನಾಂ ಯಸ್ಮಿನ್ವಿಶುದ್ಧೇ ವಿಭವತ್ಯೇಷ ಆತಾ॥"

ಪ್ರಾಣ, ಅಪಾನ, ಸಮಾನ, ವ್ಯಾನ ಮತ್ತು ಉದಾನಗಳೆಂಬ ಪಂಚಪ್ರಾಣಗಳು ಸೇರಿಕೊಂಡ, ಸೂಕ್ಷ್ಮನಾದ ಆತ್ಮವನ್ನು ವಿಚಾರದಿಂದ ತಿಳಿಯುವದು ಸಾಧ್ಯ. ಇಂದ್ರಿಯಾದಿಗಳಿಂದ ಕರತಲಾಮಲಕವಾದ ತಿಳಿವಳಿಕೆಯು ಶುದ್ಧವಾದಾಗ ಆತ್ಮವು ತಂತಾನೇ ಗೋಚರಿಸುವದು.)

೫೨೭

ಕಪುಪುನಿಂಡ ಸುಧನು ಗ್ರ ಮಮುತೋದ್ರಾವಿನ ಬಾಲವೀಪ ನೇಲ ಪಾರು ಮನಸು?
ತತ್ತ್ವ ಮೆರುಗುವೆನುಂಕ ತದಿತರ ಮೇಟಿಕಿ? ವಿಶ್ವದಾಭಿರಾಮ ವಿನುರ ವೇಮ.

ಹೊಟ್ಟಿ ತುಂಬ ಸುಧೆಯು ಹಂತ ಹಂತ ಕುಡಿಯಿ,
ಹಾಲ ಮೇಲೆ ಹೇಗೆ ಹರಿವುದು ಮನ?
ತತ್ತ್ವ ತಿಳಿದ ಬಳಿಕ 'ತತ್' ಇತರನೇತಕೆ?
ವಿಶ್ವದಾಭಿರಾಮ ಕೇಳು ವೇಮ.

ಹಾಲು ಆರೋಗ್ಯಕರ; ಸುಖಾಪಹ; ಸಹಜವಾಗಿ ಲಭ್ಯವಾದುದು. ಜೀವಭಾವವೂ ಸುಖಕರ, ಶೃಂಗಾರಮಯ. ಉಲ್ಲಾಸಕರ ಅನುಭವಗಳನ್ನು ಹೊಂದಲಿಕಸುವುದು. ಬಾಹ್ಯ ಪ್ರಪಂಚವು ಹಾಲಿನಂತೆ. ಆದರೆ ಬ್ರಹ್ಮಜ್ಞಾನವು ಜೇನುತುಪ್ಪದಂತೆ. ಹಾಲಿಗಿಂತ ಮೇಲು. ಅಂದ ಮೇಲೆ ಬ್ರಹ್ಮಜ್ಞಾನವಾದ ನಂತರ ಪ್ರಪಂಚದತ್ತ ಮನಸ್ಸು ನಿಳಿಹರಿಯುತ್ತಿದೆ? ಹರಿಯಲಾರದು

ತತ್ತ್ವ ಎಂದರೆ ಬ್ರಹತ್ತ ತಿಳಿದ ಮೇಲೆ ಸಾಧಕನಿಗೆ ಬ್ರಹ್ಮ ಬಟ್ಟು ಇತರ ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿಯೇಕೆ?

೫೨೮

ಉತ್ತ ಮೊತ್ತ ಮುಡಗು ನುಚಿತಜ್ಞು ಡಿಲುಮೀದ,ಮಡಿವು ಜೂಪುವಾಡು ಮಧ್ಯ ಮುಂಡು,
ವೇಷಧಾರಿ ಯುದರ ಪೋಷಕುಡಧಮುಂಡು, ವಿಶ್ವದಾಭಿರಾಮ ವಿನುರ ವೇಮು,

ಉತ್ತಮೋತ್ತಮಾದ ಉಚಿತಜ್ಞನು ಮೇಲು;
ಮಹಿಮೆ ತೋರುವವನು ಮಧ್ಯಮನಿಹ.
ವೇಷಧಾರಿಯುದರ ಪೋಷಿಸುವವನಧಮ
ವಿಶ್ವದಾಭಿರಾಮ ಕೇಳು ವೇಮ.

ಯೋಗಿಗಳಲ್ಲಿ ಮೂರು ವಿಧಗಳನ್ನು ಕಲ್ಪಿಸಬಹುದು

ಅತಿ ಉತ್ತಮವಾದ ಬ್ರಹ್ಮತ್ವ ತಿಳಿಸುವವನು ಶ್ರೇಷ್ಠನು. ಇವನು ಯಾವದ್ದು ಯೋಗ್ಯವೋ ಅದನ್ನೇ ತಿಳಿದಿರುತ್ತಾನೆ. ನಿರ್ವಿಕಲ್ಪ ಸಮಾಧಿ ಹೊಂದಿ ಸರ್ವ ಭೂತಗಳಲ್ಲಿ ತನ್ನನ್ನೇ ಕಂಡುಕೊಳ್ಳುತ್ತಾನೆ.

ನಿರ್ವಿಕಲ್ಪ ಸಮಾಧಿ, ಸಾಧಕನಿಗೆ ಆತ್ಮ ಸಾಕ್ಷಾತ್ಕಾರ ಪಡೆಯುವ ಕ್ರಮದಲ್ಲಿ ಕೊನೆಯ ಹಂತ. ತತ್ಪೂರ್ವ ಸಮಾಧಿಯ ಸ್ಥಿತಿಯಲ್ಲಿ, ಅಣಿಮಾ (ಅಣುವಿನಂತೆ ಸೂಕ್ಷ್ಮವಾಗುವಿಕೆ) ಮಹಿಮಾ (ಬೇಕಾದಷ್ಟು ದೊಡ್ಡದಾಗುವಿಕೆ) ಗರಿಮಾ (ಇಚ್ಛಾ ಮಾತ್ರದಿಂದ ಭಾರವಾಗುವಿಕೆ) ಲಘಿಮಾ (ಹಗುರಾಗುವಿಕೆ) ಪ್ರಾಪ್ತಿ (ದೂರ ವಸ್ತು ಮುಟ್ಟುವದು) ಪ್ರಕಾಮ್ಯ (ವಸ್ತು ಸೃಷ್ಟಿ) ಈಶಿತ್ವ (ಸರ್ವರ ಮೇಲೆ ಪ್ರಭುತ್ವ) ಮತ್ತು ವಶಿತ್ವ (ಸರ್ವರ ನಿಯಂತ್ರಣ) ಎಂಬ ಅಷ್ಟಸಿದ್ಧಿಗಳು ಪ್ರಾಪ್ತಿಯಾಗುತ್ತವೆ. ಈ ಅಷ್ಟಸಿದ್ಧಿಗಳು, ನಿರ್ವಿಕಲ್ಪ ಸಮಾಧಿಯ ಮಾರ್ಗದಲ್ಲಿ ಅತಂಕಗಳು. ಆದರೆ ಸಾಮಾನ್ಯರಿಗೆ ಇವೇ ಮಹಾ ಮಹಿಮೆಗಳು. ಕಾರಣ ಮಹಿಮೆ ತೋರುವ ಯೋಗಿ ಮಧ್ಯಮನು.

ಆದರೆ ಯಾವ ಸಾಧನೆಯೂ ಇಲ್ಲದೆ, ಸನ್ಯಾಸಿಯ ಸೋಗು ಹಾಕಿ ಹೊಟ್ಟೆ ಹೊರೆಯುವವರು ಮಾತ್ರ ನೀಚರು. ಇಂಥವರ ಮಾತಿಗೆ ಕಿವಿ ನೀಡಿ ಜನ ಮೋಸ ಹೋಗುತ್ತಾರೆ.

೫೨೯

ಮನಸುನಂದು ಮುಕ್ತಿ ಮಲಯುಂ ಚಿನುಂಡಂಗ, ಮನಸುನೆರುಗ ಲೇಕ ಮನುಜಲೆಲ್ಲ.
ಮನೆಸುನಣಚಲೇಕ ಮಾಯ ಪೈಪೋದುರು. ವಿಶ್ವದಾಭಿರಾಮ ವಿನುರ ವೇಮ.

ಮನಸಿನಲ್ಲಿ ಮುಕ್ತಿ ಅಡಗಿಕೊಂಡಿರುತಿರೆ,
ಮನಸು ಅರಿಯಲಿಲ್ಲ ಮನುಜರೆಲ್ಲ;
ಮನಸು ಮಣಿಸಲಿಲ್ಲ; ಮಾಯವಾದರಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಯ ಸಾಧನೆ ಮುಂದುವರಿದಂತೆಲ್ಲ ಮನಸ್ಸು ಕ್ರಮದಿಂದ ಸ್ಥೂಲದಿಂದ ಸೂಕ್ಷ್ಮವಾಗಿ, ಸೂಕ್ಷ್ಮದಿಂದ ಅತಿ ಸೂಕ್ಷ್ಮವಾಗಿ ರೂಪಾಂತರ ಹೊಂದುತ್ತದೆ. ಆಗ ಆತ್ಮ ಸೂಕ್ಷ್ಮವಾದ ಮನಸ್ಸಿನಲ್ಲಿ ಪ್ರತಿಬಿಂಬದಂತೆ ಕಾಣುವದು. ಆತ್ಮ ಸ್ವರೂಪ ತಿಳಿಯುವದು. ಆತ್ಮ ಬೇರೆ ದೇಹ ಬೇರೆ ಎಂಬುದು ಹೊಳೆಯುವುದು. ಯೋಗಿ ಮುಕ್ತನಾಗಿ ಜೀವನ್ಮುಕ್ತನಾಗುವನು- ಹೀಗಿದ್ದರೂ ಜನರು ಮನಸ್ಸಿನ ಗುಣ ಸ್ವರೂಪಗಳನ್ನು ಅರಿತು ಅದನ್ನು ವಿಕಾಸಗೊಳಿಸದೆ, ಅದನ್ನು ನಿಗ್ರಹಿಸಿ, ಸೂಕ್ಷ್ಮ ಸ್ಥಿತಿಗೊಯ್ಯದೆ ಅಳಿದು ಹೋದರು.

ಮುಂಡಕೋಪನಿಷತ್ತಿನಲ್ಲಿರುವ ಕೆಳಗಿನ ಅಭಿಪ್ರಾಯ ನೋಡಿರಿ:

"ನ ಚಕ್ಷುಷಾ ಗೃಹ್ಯತೆ ನಾಪಿ ವಾಚಾ ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ।
ಜ್ಞಾನ ಪ್ರಸಾದೇನ ವಿಶುದ್ಧ ತತ್ತ್ವಸ್ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ।"

ಕಣ್ಣಿನಿಂದಾಗಲಿ, ಶಬ್ದದಿಂದಾಗಲಿ. ಇತರ ಇಂದ್ರಿಯಗಳಿಂದಾಗಲಿ, ತಪಸ್ಸು ಮಾಡುವದರಿಂದಾಗಲಿ, ಯಜ್ಞಾದಿ ಕರ್ಮಗಳಿಂದಾಗಲಿ, ಅವನನ್ನು ಪಡೆಯಲಾರೆವು.

ಶುದ್ಧವಾದ ಸಾಧಕನ ಮನಸ್ಸಿಗೆ ಜ್ಞಾನ ಪ್ರಸಾದದಿಂದ ಕಳೆಯಿಲ್ಲದ "ಬ್ರಹ್ಮ" ಕಾಣುವುದು.

೫೩೦

ಮನಸುಮುಕ್ತಿ ಯನಜು ಮಡಿನೆರುಂಗಗಲೇರು, ಮನಸುಜೀತ ಧಗಿಲಿ ಮಾಯಮೈ ರಿ
ಮನಸು ಶುದ್ಧಮೈನ ಮಮಜ್ಞ ಡಗುಯೋಗಿ. ವಿಶ್ವದಾಭಿರಾಮ ವಿನುರವೇಮ.

ಮನಸು ಮುಕ್ತಿಯೆಂದು ಮನವನರಿಯರಯ್ಯ.
ಮನಸಿನಂತೆ ನಡೆದು ಮಾಯವಾಗಿ,
ಮನಸು ಶುದ್ಧವಾಗೆ ಮರ್ಮವರಿವ ಯೋಗಿ
ವಿಶ್ವದಾಭಿರಾಮ ಕೇಳು ವೇಮ.

(ನಮ್ಮ ಪಾಪ ಪುಣ್ಯಗಳಿಗೆ ಅನುಸಾರವಾಗಿ ನಮ್ಮ ಅನುಭವಗಳು, ಎಂಬುದು ಕರ್ಮಸಿದ್ಧಾಂತ. ಆದರೆ ಆತ್ಮ, ಪಾಪ ಪುಣ್ಯಗಳ ಪ್ರಭಾವಕ್ಕೆ ಒಳಗಾಗುವುದಿಲ್ಲ. ಆದು ಕಾಲುವೆ ನೀರಿನಂತೆ. ಪಾಪ ಕರ್ಮ ಕಾಲುವೆಗೆ ಅಡ್ಡ ಕಟ್ಟಿದ ಒಡ್ಡಿನಂತೆ. ಪುಣ್ಯಕರ್ಮ ಆ ಒಡ್ಡನ್ನು ನಿವಾರಿಸಿದಂತೆ. ಅಡ್ಡಕಟ್ಟಿದ ಒಡ್ಡು ಇಲ್ಲವೆ ಆದರ ನಿರೊಲನೆಯು ನೀರಿನ ಮೂಲ ಸ್ವರೂಪ ಬದಲಾಯಿಸುವುದಿಲ್ಲ, ನೀರು ಮುಂದೆ ಹರಿಯುವ ಕಾಲವನ್ನು ಮುಂದೆ ತಳ್ಳುತ್ತದೆ. ಆದೇ ರೀತಿ, ಪುರುಷ ವ್ಯಕ್ತವಾಗಲು ಪಾಪ ಕರ್ಮದಿಂದ ವಿಳಂಬವಾಗುವುದು. ಆದರೆ ಪುಣ್ಯಕರ್ಮದಿಂದ ತ್ವರಿತವಾಗುವುದು.

ತಮ್ಮ ಕರ್ಮವನ್ನು ಬೇಗ ಮುಗಿಸುವುದಕ್ಕಾಗಿ ಯೋಗಿಗಳು ಕಾಯ, ವ್ಯೂಹ ರಚಿಸುತ್ತಾರೆ. ಈ ದೇಹಗಳಿಗೆ ಬೇಕಾದ ಮನಸ್ಸನ್ನು ತಮ್ಮ ಅಹಂಕಾರದಿಂದ ಸೃಷ್ಟಿಸುವರು. ಇವುಗಳಿಗೆ ನಿರ್ಮಾಣ ಚಿತ್ತವೆಂದು ಹೆಸರು. ಸಮಾಧಿಯಿಂದ ಪಡೆದ ಚಿತ್ತವೊಂದೇ ಆಶಾರಹಿತವಾದುದು. ಔಷಧಿ, ಮಂತ್ರ, ತಪಸ್ಸುಗಳಿಂದ ಸಿದ್ಧಿಪಡೆದವರಲ್ಲೆ ಇನ್ನೂ ಆಶೆ ಉಂಟು.

ಮನಸ್ಸು ಶುದ್ಧವಾಗಿ ಸೂಕ್ಷ್ಮವಾಗುತ್ತದೆ- ಸೂಕ್ಷ್ಮವಾಗಿ ಬ್ರಹ್ಮಕ್ಕೆ ಸಮೀಪವಾಗುವದು. ಆಗ ಪುರುಷ ಇಲ್ಲವೆ ಬ್ರಹ್ಮ ಮನಸ್ಸಿನ ಮೇಲೆ ಪ್ರತಿಬಿಂಬಿಸಿದಂತೆ ತೋರುವದು. ಮನಸ್ಸು ಇದನ್ನು ತತ್ಕಾಲಕ್ಕೆ ತಿಳಿಯುವಂತಾಗಿ, ಇದೇ ಪುರುಷ ಇಲ್ಲವೆ ಬ್ರಹ್ಮನಂತೆ ಕಾಣುವದು.)

ಮನಸ್ಸಿನಲ್ಲಿಯೇ ಮುಕ್ತಭಾವ ತಾಳಬಹುದು, ಎಂಬುದನ್ನು ತಿಳಿಯದೇ, ಮನಸ್ಸನ್ನು ಶುದ್ಧಗೊಳಿಸಿ ನಿಗ್ರಹಿಸದೆ, ಜನರೆಲ್ಲ ಸತ್ತುಹೋದರು. ಮನಸ್ಸು ಶುದ್ಧವಾಗಿ ಸೂಕ್ಷ್ಮವಾಗಲು "ಬ್ರಹ್ಮತ್ವ"ದ ಮರ್ಮವನ್ನು ಯೋಗಿ ತಿಳಿಯುತ್ತಾನೆ.

ಪದ್ಯ ೫೭೧

ಮದಿನೆರಗಿನವಾಸ ಮಹಿಗಾನವೆಂದುನು, ಮದಿನೆರಂಗು ನರ್ಪಡು ಮಹಿನಿ ನರುದು.
ವೆದಿಕ ತನುವ್ಯಲೋನ ವೇಡ್ಕೆ ತೋನಿನುಜೂಚು. ವಿತ್ವೆದಾಭಿರಾಮು ವಿನುರ ವೇಮ.

ಮನ: ನರಿಯುದವನು ಮಹಿಯೊಳೆಂದು ಕಾಣ.
ಮನವರಿತಿಹ ನರನು ವಿರಳ ಜಗದಿ.
ಹುಡುಕಿ, ತನುವೊಳಾನಂದದಿ ನಿನ್ನ ನೋಟ.
ವಿಶ್ವದಾಭಿರಾಮ ಕೇಳು ವೇಮ.

(ಮನಸ್ಸಿನಲ್ಲಿ ಒಂದು ಆಸೆ ಹುಟ್ಟಿಸಿದರೆ, ಅದು ಪರಿಣಾಮ ನೂಡದೆ ಮಾಯವಾಗುವುದಿಲ್ಲ. ನಮ್ಮ ಚಿತ್ತವೃತ್ತಿಯಾದರೋ ಸಂಸ್ಕಾರವಾಗಿರುವ ಹಿಂದಿನ ಎಲ್ಲಾ ಬಯಕೆಗಳಿಗೂ ಆಶ್ರಯವಾಗಿ ದೊಡ್ಡ ಉದ್ಯಾಣದಂತಿದೆ. ಚಿತ್ತವೃತ್ತಿಯು ಯಾವಾಗಲೂ ಪುರುಷನಿಗೆ ಜ್ಞಾತವಾದುದು. ಏಕೆಂದರೆ ಮನಸ್ಸಿನ ಪ್ರಭುವಾದ "ಪುರುಷ" ಇಲ್ಲವೆ ಆತ್ಮ ನಿರ್ವಿಕಾರಿ. ಆದರೆ ಮನಸ್ಸಿಗೆ ಬಾಹ್ಯವಸ್ತು, ಜ್ಞಾತವಾಗದಿರಬಹುದು.

ಹೇಗೆಂದರೆ ವೇಗವಾಗಿ ಹೋಗುವ ರೈಲುಬಂಡಿಯಂತೆ ಮನಸ್ಸು; ನಿಧಾನವಾಗಿ ಹೋಗುವ ಚಕ್ಕಡಿ ಗಾಡಿಯಂತೆ ವಸ್ತು. ರೈಲು ಬಂಡಿಯಿಂದ ಚಕ್ಕಡಿಯನ್ನು ಗುರುತಿಸಬಹುದು; ಗುರುತಿಸುವುದಾಗದೆ ಸಹ ಇರಬಹುದು. ಆದರೆ ಸ್ಥಿರವಾದ ಒಂದು ವಸ್ತುವಿನಿಂದ ಇವೆರಡನ್ನೂ ಗುರುತಿಸಬಹುದು. ವಸ್ತುವಿನಿಂದ ಹೊರಟ ತರಂಗ, ಅದೇ ವಸ್ತುವಿನ ಬಗೆಗಿನ ಚಿತ್ತವೃತ್ತಿಗಳು ಐಕ್ಯನಾದ ಮೇಲೆ ಬದಲಾವಣೆ ನಿಲ್ಲುವುದು. ಇದು ಪರಿಗಿನ ಭಾವನೆಗಳೆಲ್ಲ ಮನಸ್ಸಿನ ಮೇಲೆ ಪ್ರತಿಬಿಂಬಿಸುವುದು. ಚಲಚಿತ್ರ ಪರದೆಯ ಮೇಲೆ ಚಿತ್ರ ಮೂಡಿದಂತೆ. ನಮ್ಮ ಭಾವನೆಗಳೇ ಜ್ಞಾನ. ಜ್ಞಾನಸಾರವಾದ ಪುರುಷ ಇಲ್ಲವೆ ಬ್ರಹ್ಮನ ಆಕಾರವನ್ನು ಮನಸ್ಸು ತಾಳಿದಾಗ, ಪ್ರಜ್ಞೆಯಿಂದ ಕೊಡುವುದು. ಮನಸ್ಸಿನಲ್ಲಿ ಒಂದೆಡೆಯಿಂದ ದೃಗ್ (ಪುರುಷ) ಪ್ರತಿಬಿಂಬಿಸುವುದು. ಇನ್ನೊಂದೆಡೆಯಿಂದ ಬಾಹ್ಯ ಪ್ರಪಂಚದ ದೃಶ್ಯ ಪ್ರತಿಬಿಂಬಿಸುವುದು. ಇದರಿಂದ ಮನಸ್ಸಿಗೆ ಸರ್ವಜ್ಞತೆ ಬರುವದು.)

ಮನಸ್ಸಿನ ಸ್ವರೂಪ ಸ್ವಭಾವವನ್ನು ಅರಿಯದವನು ಪರಮಾತ್ಮನನ್ನು ಪ್ರಪಂಚದಲ್ಲಿ ಶೋಧಿಸಿದರೆ ಅವನೆಂದೂ ಕಾಣಲಾರನು. ಆದರೆ ಮನಸ್ಸು ತಿಳಿದುಕೊಂಡಿರುವ ಜನರು ಭೂಮಿಯಲ್ಲಿ ಬಹಳ ಕಡಿಮೆ. ಶೋಧಿಸಿ ನೋಡಿದರೆ; ಹೃದಯಾನಂದದಲ್ಲಿ ಆತ್ಮ ಕಾಣಬಹುದಷ್ಟೇ.

ಪದ್ಯ ೫೭೨

ಬ್ರಹ್ಮ ಮುನು ನೆರುಗದು ಭಾವ ಮಿಂದುಂಡೆನಾ, ತನುವುಗುಡಿಗಜೇಸಿ ತನ್ನು ನಿಲ್ಲಿಸಿ
ತೋಕಿಬುದ್ಧಿ ಪಿಡಿಚಿ ಲೋಜೂಪು ಜೂಡರಾ, ವಿಶ್ವದಾಭಿರಾಮ ವಿನುರವೇಮ.

ಬ್ರಹ್ಮ ತಿಳಿಯದಯ್ಯ ಭಾವಕಂಟ ಇರಲು;
ತನುವ ಗುಡಿಯ ಮಾಡಿ, 'ತನ್ನ' ನಿಲಿಸಿ,
ಲೋಕಬುದ್ಧಿ ಬಿಟ್ಟು ಒಳನೋಟದಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮವು ಮನಸ್ಸಿನಿಂದ ಗ್ರಹಿಸಲು ಸಾಧ್ಯವಿರುವ ಗ್ರಹಿಕೆಯಲ್ಲ. ಸೂಕ್ಷ್ಮತರವಾದುದು, ಸೂಕ್ಷ್ಮವಾದುದನ್ನು ಗ್ರಹಿಸಬಹುದು, ಸೂಕ್ಷ್ಮವಾದುದು ಜಡವಾದುದನ್ನು ಗ್ರಹಿಸಬಹುದು ಆದರೆ ಬ್ರಹ್ಮ ಸೂಕ್ಷ್ಮತಮವಾದುದು. ಅದಕ್ಕಿಂತ ಸೂಕ್ಷ್ಮತರವಾದುದ್ದು ಬೇರೊಂದಿಲ್ಲ, ಅದು ಎಲ್ಲಕ್ಕೂ ದೃಕ್. ಜಿತ್ ಮತ್ತು ಬಾಹ್ಯ ಪ್ರಪಂಚವೆಲ್ಲ ಅದಕ್ಕೆದೃಶ್ಯ. ಮನಸ್ಸು, ದೇಹ ಬಾಹ್ಯ ದೃಷ್ಟಿಯೆಲ್ಲ ಒಂದೇ ದ್ರವ್ಯರಾಶಿಯಿಂದ ಕೂಡಿದೆ. ಕಾರಣ ಮನಸ್ಸು ಬ್ರಹ್ಮ ಗ್ರಹಿಸುವದೆಂಬ ಭಾವನೆಯಿಂದ ಇದ್ದರೆ, ಬ್ರಹ್ಮ ತಿಳಿಯಬಹುದು.

ದೇಹವೇ ದೇಗುಲ, ಆತ್ಮವೇ ದೇವರು. ಅಲ್ಲಿ ಮನಸ್ಸು ಕೇಂದ್ರೀಕರಿಸಿ, ಬಾಹ್ಯ ಪ್ರಪಂಚದ ದೃಷ್ಟಿ ತೊರೆದು ನಿರ್ಗುಣ, ನಿರಾಕಾರ, ನಿರಂಜನ, ಆನಂದಮಯ ಆತ್ಮನನ್ನು ಒಳನೋಟದಿಂದ ನೋಡಿದರೆ ಬ್ರಹ್ಮ ತಿಳಿಯಬಹುದು.

(ಕೇನೋಪನಿಷತ್ತಿನ ಅಭಿಪ್ರಾಯ ನೋಡಿರಿ: "ಯಾವುದರಿಂದ ಮನಸ್ಸು ಮನನ ಮಾಡುವದೋ ಅದೇ ಬ್ರಹ್ಮ, ಆದರೆ ಬ್ರಹ್ಮ ಮನಸ್ಸಿನ ಗ್ರಹಿಕೆಯಲ್ಲ. ಮನಸ್ಸು ಅದನ್ನು ಗ್ರಹಿಸಲಾರದು. ಯಾವುದರಿಂದ ಕಣ್ಣು ನೋಡುವುದೋ ಕಿವಿ ಕೇಳುವುದೋ ಮತ್ತು ಪ್ರಾಣವು ಕಾರ್ಯ ಮಾಡುವುದೋ ಅದೇ ಬ್ರಹ್ಮ. ಆದರೆ ಅದು ಕಣ್ಣಿಗೆ ಕಾಣದು; ಕಿವಿಗೆ ಕೇಳದು. ಪ್ರಾಣನಿಂದ ಕ್ರಿಯೆ ನಡೆಸದು. ಇದುವೇ ಬ್ರಹ್ಮ. ಯಾವುದು ಅಂದರೆ, ಶರೀರಾದಿ ಬ್ರಹ್ಮನ ಉಪಾಸನೆ (ಸಮೀಪ ಹೋಗುವ ಸಾಧನೆ ನ್ನೂಡುವುದೋ) ನ್ನೂಡುವುದೋ, ಅದು ಬ್ರಹ್ಮವಲ್ಲ.

ಪದ್ಯ ೫೭೩

ನಿನ್ನು ಜೂಚುಚುಂಡ ನಿಂಡುನು ದತ್ತ್ವಂಬು, ತನ್ನು ಜೂಚುಚುಂಡ ದೆಗುಲು ಮಾಯ.
ನಿನ್ನು ಗೆರಿಗಿ ನಪುಡೆ ತನ್ನು ಡಾನೆರುಗುನು, ವಿಶ್ವದಾಭಿರಾಮ ವಿನುರ ವೇಮ.

ನಿನ್ನ ನೋಡುತಿರಲು ದೆರೆಗಂಡಿತು ತತ್ತ್ವ.
ತನ್ನ ನೋಡುತಿರೆ, ತಗಲಿತು ಮಾಯೆ.
ನಿನ್ನನರಿತ ಬಳಿಕ ತನ್ನ ತಾನರಿವನು,
ವಿಶ್ವದಾಭಿರಾಮ ಕೇಳು ವೇಮ.

(ತತ್ ಅಂದರೆ 'ಅದು;' ಬ್ರಹ್ಮ. ತ್ವ. ಪ್ರತ್ಯಯ ಹತ್ತಿ ಆದ ನಾಮಪದ, ತತ್ತ್ವ; ಬ್ರಹ್ಮತ್ವ. ಬ್ರಹ್ಮ ನಿರ್ವಿಕಾರ. ನಿರಾಕಾರ. ತಾನು ಕಾಣದೆ ಕೆಳಗಣ ಪದರಾಗಿದ್ದರೂ ತನ್ನಿಂದಾದ ಮಾಯೆಗೆ ಸತ್ಯ ಸ್ವರೂಪ ನೀಡಬಲ್ಲದು, ಹಗ್ಗವು ನಮಗೆ ಕಾಣುವುದಿಲ್ಲ. ಆದರೂ ಅದೇ ಹಾವೆಂಬ ಮಾಯೆಯೇ ಸತ್ಯವೆಂದು ನಾವು ನಂಬುವಂತಾಗುವುದು. ಅದೇ ರೀತಿ, ಮಾನವನ ಮನಸ್ಸು, ದೇಹ ಮತ್ತು ಬಾಹ್ಯ ಪ್ರಪಂಚಾದಿಗಳೆಲ್ಲ ಸತ್ಯವೆಂಬ ಕಲ್ಪನೆ ನಮಗೆ ಉಂಟು. ಇದೆಲ್ಲ ಬ್ರಹ್ಮವೇ ಎನ್ನುವುದು, ವಾಸ್ತವ ಸತ್ಯ. ಹಗ್ಗಕ್ಕೆ ಹಗ್ಗವೆಂದು ತಿಳಿದಂತೆ. ಮಾಯೆಯೆಂದರೆ, ಇದು ಬ್ರಹ್ಮವಲ್ಲ; ಬ್ರಹ್ಮಕ್ಕಿಂತ ಬೇರೆ; ಈ ಬೇರೆ ಅದುದೆ

ಸತ್ಯ ಎನ್ನುವುದು, ಹಗ್ಗ ಹಗ್ಗವಲ್ಲ; ಅದು ಹಗ್ಗಕ್ಕಿಂತ ಬೇರೆ; ಅದು ಹಾವು; ಹಾವೇ ಸತ್ಯ ಎಂದು ಭಾವಿಸಿದಂತೆ.ಹಗ್ಗ ಮುಟ್ಟಿ ತಿಳಿದರೆ, ಹಾವು ಎಂದು ತಿಳಿದದ್ದುಯಾವುದು, ಹಗ್ಗ ಹೇಗೆ ಇದೆ ಎಂಬಿರಡೂ ಏಕಿತವಾಗುತ್ತವೆ.

ಆತ್ಮದ ಸ್ವರೂಪವನ್ನು ತಿಳಿದುಕೊಂಡು,ಅನುಭವಿಸಿದರೆ ಬ್ರಹ್ಮತ್ವ ತಿಳಿಯುವುದು. ಸಕಲವೂ ಬ್ರಹ್ಮಮಯವೆಂಬುದು ತಿಳಿಯುವುದು, ಇನ್ನು ಮನಸ್ಸು ದೇಹ, ಬಾಹ್ಯ ಪ್ರಪಂಚ ತಾನಾಗಿ ನೋಡಿ ನಂಬಿದರೆ, ಆಗ ಅದೇ ಸತ್ಯವೆಂಬ ಭ್ರಮೆಯಾಗುವುದು. ಇದುವೇ ಮಾಯೆ.

ಬ್ರಹ್ಮತ್ವದ ಜ್ಞಾನದ ಅನುಭವವಾದರೆ, ಬಾಹ್ಯ ಪ್ರಪಂಚ ಬ್ರಹ್ಮಸ್ವರೂಪವೆಂಬುದೂ ತಿಳಿಯುವುದು.

೫೩೪

ವೆದುಕ ವೆದುಕ ದೊರಕು ವೇದಾಂತವೇದ್ಯುಂಡು, ವೆದುಕುವಾನಿ ನಾನು ವೆದುಕುಚುಂಡು.
ವೆದುಕನೇರ್ಚಿನಟ್ಟಿ ವೆರವರುಲ್ ಗಲರೊಕೋ ? ವಿಶ್ವದಾಭಿರಾಮ ವಿನುರ ವೇಮ.

ಶೋಧದಿಂದ ದೊರವ ವೇದಾಂತವೇದ್ಯನು.
ಶೋಧಿಸುವನ ತಾನೆ ಶೋಧಿಸುತಿಹ.
ಶೋಧಿಸಲರಿತಂಥ ಸುಮತಿ ಸೇರುತಿಹನು.
ವಿಶ್ವದಾಭಿರಾಮ ಕೇಳು ವೇಮ.

(ವೇದಾಂತವೆಂದರೆ ಬ್ರಹ್ಮ ಪ್ರತಿಪಾದಿಸುವ ದಾರ್ಶನಿಕ ಸಾಹಿತ್ಯ.ಉಪನಿಷತ್ತುಗಳು ವೇದದ ಕರ್ಮಗಳನ್ನು ಬದಿಗಿರಿಸಿ, ಬ್ರಹ್ಮ ಪ್ರತಿಪಾದಿಸಿದ ಋಷಿಗಳ ಅನುಭವ ಸಾರ ಸಂಗ್ರಹ. ವೇದಗಳ ಕೊನೆಗೆ ಉಪನಿಷತ್ತು ರಚಿತವಾದವು. ಮತ್ತು ಸಂಪಾದಕರು ವೇದ ಗ್ರಂಥಗಳ ಮಂತ್ರ ಇಲ್ಲವೆ ಹೆಚ್ಚಾಗಿ ಆರಣ್ಯಕಗಳ ಆರಂಭದಲ್ಲಿ ಈ ಉಪನಿಷತ್ತುಗಳನ್ನು ಸೇರಿಸುವುದರಿಂದ ವೇದಾಂತವೆನಿಸಿದೆ. ಋಷಿಗಳು ತಮ್ಮ ತಮ್ಮ ಅನುಭವವನ್ನೇ ನಿರೂಪಿಸಿರುವುದರಿಂದ ಇವು ಒಂದರ ಮೇಲೊಂದು ಅವಲಂಬಿತವಾಗದೆ ಇದ್ದರೂ, ಒಟ್ಟಾಗಿ ಬ್ರಹ್ಮ ಪ್ರತಿಪಾದನೆಯನ್ನು ಬಲವಾಗಿ ಮಾಡುತ್ತವೆ, ಆದರಿಂದಾಗಿ ಇವುಗಳಿಗೆ ಟಪ್ಪಣಿಗಳೆಂದೂ ಕರೆಯುವುದುಂಟು).

ವೇದಾಂತ ತತ್ತ್ವಗಳನ್ನು ಒಂದೊಂದಾಗಿ ಹುಡುಕಿ ಅನುಭವಿಸಿದರೆ, ವೇದಾಂತ ವೇದ್ಯನಾದ ಬ್ರಹ್ಮ ಗೋಚರಿಸುವನು.

ಸಾಧಕನ ಮನಸ್ಸು ಶುದ್ಧವಾಗಿ, ಆತ್ಮಜ್ಞಾನವಾದೊಡನೆ ಆತ್ಮದ ಅನುಭವವಾಗುವುದು. ಸಾಧಕನಿಗೆ ಗೋಚರಿಸಲು ಆತ್ಮ ಸದಾ ಮುಂದಾಗುತ್ತಿರುವುದು. ಶೋಧಿಸುವ ರೀತಿ ತಿಳಿದವನು ಬ್ರಹ್ಮ ಸೇರುವದು.

(ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳಲಾಗಿದೆ: "ವೇದಾಂತ ಮತ್ತು ವಿಜ್ಞಾನಗಳು ನಿಶ್ಚಿತ ಅರ್ಥವುಳ್ಳವುಗಳು. ಸನ್ಯಾಸ, ಯೋಗಾದಿಗಳಿಂದ ಶುದ್ಧರಾಗಿ, ಸತ್ತ್ವಯುತರಾಗಿ ಇರುವವರೆಲ್ಲ ಕೊನೆಗೆ ಬ್ರಹ್ಮಲೋಕದಲ್ಲಿ ಅಮೃತತ್ವವನ್ನು ಹೊಂದುವರು. ನದಿಗಳು ತಮ್ಮ ನಾಮರೂಪ ಕಳೆದುಕೊಂಡು ಸಮುದ್ರ ಕೂಡುವಂತೆ, ನಾಮರೂಪಗಳಿಂದ ಮುಕ್ತರಾದವರು, ದಿವ್ಯನಾದ ಉತ್ತಮೋತ್ತಮ ಪುರುಷನನ್ನು ಸೇರುವರು.")

೫೩೫

ಊರ್ಧ್ವ ಜನುಲು ಪರಯೋಗೀಶ್ವರುನಿ ಜೂಚಿ ತಗಡುವಾರು ಕಾನಿ ತೆಲಿಯಲೇರು.
ಅಮೃತಮಾದಿರುಚುಲ ಪಸ್ತ ಮೇಮೆರುಗುನು. ವಿಶ್ವದಾಭಿರಾಮ ವಿನುರವೇಮ.

ಊರ್ಧ್ವ ಜನರು ಪರಮ ಯೋಗೀಶ್ವರ ಕಂಡು,
ಜರೆಯುತಿಹರು ಹೊರತು, ಅರಿಯುತಿಲ್ಲ.
ಅಮೃತಕಿರುವ ರುಚಿಯ, ಅರಿವುದೆಂತು ಹಸ್ತ ?
ವಿಶ್ವದಾಭಿರಾಮ ಕೇಳು ವೇಮ.

ಯೋಗೀಶ್ವರರು ಜೀವನ್ಮುಕ್ತರು. ಇವರು ಬ್ರಹ್ಮತ್ವ ಅರಿದು ಬ್ರಹ್ಮವೇ ಆದವರು. ಅವರಿಗೆ ಅಜ್ಞಾನದ ಸೊಡರು ತಾಕದು. ಪ್ರಪಂಚವೆಲ್ಲ ಅಜ್ಞಾನದ ಕತ್ತಲೆಯಿಂದ ತುಂಬಿದ್ದರೂ ಅವನು ಪ್ರಕಾಶಮಯವಾಗಿರುವ. ಅವನಿಗೆ ಪ್ರಪಂಚದ ಸುಖದ ನೆರಳಿನಲ್ಲಿ ಆಸಕ್ತಿಯಿಲ್ಲ. ಅವನ ಈ ಮುಕ್ತ ಸ್ಥಿತಿ ಲೋಕದ ಮನಸ್ಸಿಗೆ ತಿಳಿಯುವುದಿಲ್ಲ.

ಲೋಕದ ಜನರಿಗೆ ಸತ್ಯವಾದದ್ದು, ನಿತ್ಯವಾದದ್ದು, ಪರಮಯೋಗಿಗಳಿಗೆ ಅಸತ್ಯವಾಗಿ ಕ್ಷಣಿಕವಾಗಿ ಕಾಣುವದು. ಅವನಲ್ಲಿ ಏನೂಇಲ್ಲದಿದ್ದರೂ ಅವನಿಗೆ ಆನಂದವುಂಟು. ಏಕೆಂದರೆ ಅವನು ಏನನ್ನೂ ಬಯಸುವುದಿಲ್ಲ. ಅವನು ವಿರಾಗಿ. ಅವನ ಮನಸ್ಸಿನ ವಿಕಾಸದಿಂದ ಅವನ್ನೆಲ್ಲುಂಟಾದ ಅಂತಿಮ ಬದಲಾವಣೆಯನ್ನು ಗುರುತಿಸಲಾರದ ಜಡ ಮತಿಗಳು, ಅವನನ್ನು ಹುಚ್ಚನೆಂದು ಜರಿಯುತ್ತಾರೆ. ಆದರೆ ಅವನ ವಿಚಾರದ ಎತ್ತರಕ್ಕೆ ಹೋಗಿ ಅವನನ್ನು ಗುರುತಿಸುವುದಿಲ್ಲ.

ಅಮೃತದ ರುಚಿ ಏನೆಂಬುದು ಯೋಗಿಯ ಮನಸ್ಸಿಗೆ ಗೊತ್ತು. ಬಾಹ್ಯ ಪ್ರಪಂಚದಲ್ಲಿ ರತನಾದವನು, ಕರ್ಮೇಂದ್ರಿಯಗಳಿಂದ ತಿಳಿದು ಆನಂದಿಸಬಲ್ಲನು. ಅವನಿಗೆ ಅಮೃತದ ಆನಂದ ತಿಳಿಯುವುದೆಂತು?

೫೩೬

ಮಾಟವಾಡಗಲ್ಗು ಮುಕ್ಕ ಮೆರಿಂಗಿನ, ಬಿನ್ನ ಪೆದ್ದ ತನಮು ಲೆನ್ನ ನೇಲ?
ಪಿನ್ನ ಜೇತಿ ದಿವ್ವೆ ಪೆದ್ದಗಾ ವೆಲುಗದಾ? ವಿಶ್ವದಾಭಿರಾಮ ವಿನುರ ವೇಮ.

ಮಾತನಾಡಬಹುದು ಮರ್ಮ ತಿಳಿದ ಬಳಿಕ
ಸಣ್ಣ-ದೊಡ್ಡತನದ ಗಣನೆಯೇಕೆ?
ಬಾಲನ ಕೈದೀಪ ಬೆಳಗದೆ ಬೃಹದಾಗಿ?
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಪಡೆದು ಬ್ರಹ್ಮವನ್ನು ಅನುಭವಿಸಿದವನೇ ಗುರುವು. ಇಂಥ ಗುರು ಇನ್ನೊಬ್ಬನಿಗೆ ಬ್ರಹ್ಮ ಸಾಕ್ಷಾತ್ಕಾರದ ಮಾರ್ಗ ತೋರಬಹುದು ಯಾವನು ಪಾಪದೂರನೋ, ಲೋಕದೃಷ್ಟಿ ಇಲ್ಲದವನೋ, ಆತ್ಮಸಂಯಮಿಯೋ, ದಯಾಸಾಗರನೋ, ಬ್ರಹ್ಮಜಿಜ್ಞಾಸುವಿನ ಸಂಶಯಗಳನ್ನೆಲ್ಲ ಭಿನ್ನಗೊಳಿಸುವನೋ, ಅವನೇ ಗುರು.

ಗುರು, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಆಶ್ರಮ ದಾಟಿದ ಸನ್ಯಾಸಿಯೇ ಇರಬೇಕಿಲ್ಲ. ಗುರು ಯಾವುದೊಂದು ವಿಶಿಷ್ಟ ವರ್ಣದಲ್ಲಿ ಜಾತಿಯಲ್ಲಿ ಜನಿಸಬೇಕಿಲ್ಲ. ಯಾವುದೊಂದು ಪ್ರತ್ಯೇಕ ಮತಾವಲಂಬಿಯಾಗಿರಬೇಕಿಲ್ಲ. ಬ್ರಹ್ಮಸಾಕ್ಷಾತ್ಕಾರವೇ ಗುರುವಿನ ಮೂಲ ಅರ್ಹತೆ. ಅವರಿವರನ್ನು ಗುರು ಎಂದು ಸ್ವೀಕರಿಸುವದು ಆತ್ಮ ವಂಚನೆ. ಕುರುಡರು ಕುರುಡರೊಡನೆ ಕೂಡಿ ಹಳ್ಳವನ್ನು ಬಿದ್ದಂತೆ. ಬ್ರಹ್ಮಸಾಕ್ಷಾತ್ಕಾರ ಪಡೆದವನು ಸಣ್ಣ ವಯಸ್ಸಿನವನಿರಲಿ.ಯಾವದೇ ಜಾತಿಯವನಿರಲಿ, ದೇಶದವನಿರಲಿ ಅದನ್ನು ಕುರಿತು ವಿಚಾರಿಸುವ ಅಗತ್ಯವೇ ಇಲ್ಲ.

ಸಣ್ಣ ಹುಡುಗನ ಕೈಯಲ್ಲಿ ದೀಪ ಕೊಟ್ಟರೆ ಅದು ಬೆಳಗಿ ಬೆಳಕು ನೀಡುವದಿಲ್ಲವೇ? ಬ್ರಹ್ಮತ್ವ ಬೋಧೆಯೂ ಜ್ಞಾನಜ್ಯೋತಿ. ಯಾರು ಜ್ಞಾನ ಪ್ರಸಾರ ಮಾಡಿದರೇನು? ಜ್ಞಾನ ಪಸರಿಸುವದು.

"ತಲೆ ನೆರೆತರೆ ಹಿರಿಯನಲ್ಲ. ವಯಸ್ಸಿನಿಂದ ಮುಪ್ಪಾದವನಷ್ಟೇ. ಅವನು ನಿರುಪಯೋಗಿ ಮುದುಕನಷ್ಟೇ".

ಯಾರಲ್ಲಿ ಸತ್ಯ. ಸದ್ಗುಣ, ಅಹಿಂಸೆ, ಸಂಯಮ, ಆತ್ಮನಿಯಂತ್ರಣ ಇವೆಯೋ ಮತ್ತು ಯಾರು ದೋಷ ಮುಕ್ತರೋ, ಜಾಣರೋ ಅವರೇ ನಿಜವಾದ ಹಿರಿಯರೆನ್ನಿಸುತ್ತಾರೆ" ಎಂದು ಗೌತಮ ಬುದ್ಧ ಹೇಳುತ್ತಾರೆ.

ಋಷಿ

ಆರುಚುಲವೇರು ಸಾರಂಬದೊಕ್ಕಟ, ಸತ್ಯ ನಿಷ್ಠವೇರು ಸತ್ಯ ಮೊಕಟಿ,
ಪರಯಋಷುಲು ವೇರು ಭಾವ್ಯ ಡೊಕ್ಕಂಡಗು, ವಿಶ್ವದಾಭಿರಾಮ ವಿನುರ ವೇಮ.

ರುಚಿಗಳಾರು ಬೇರೆ ರಸದ ಸಾರಪೊಂದೆ.
ಸತ್ಯನಿಷ್ಠೆ ಬೇರೆ ಸತ್ಯವೊಂದೆ.
ಪರಮ ಋಷಿಯು ಬೇರೆ ಭಾವ್ಯವಿಪ್ಪನೊಬ್ಬ,
ವಿಶ್ವದಾಭಿರಾಮ ಕೇಳು ವೇಮ.

ಒಂದೇ ವಸ್ತು ವಿವಿಧ ಜನರ ಅಭಿರುಚಿಗೆ ಅನುಗುಣವಾಗಿ, ಭಿನ್ನ ಭಿನ್ನವಾಗಿ ತೋರುವದು. ಸತ್ಯವಿರುವದೊಂದೇ. ಆದರೆ ಸತ್ಯ ಕುರಿತು ತಾಳಿರುವ ನಿಷ್ಠೆ ಬೇರೆ ಬೇರೆಯಾಗಿರಬಹುದು.

ಆರು ದರ್ಶನಗಳ ಪರಸ್ಪರ ವಿರೋಧಿಗಳೆಂಬ ಭಾವನೆವುಂಟು. ಆದರೆ ನಿಜವಾಗಿ ಹಾಗಿಲ್ಲ. ಈ ದರ್ಶನಗಳ ಸಾರವೆಲ್ಲ ಒಂದೇ. ಸೃಷ್ಟಿಯ ಪ್ರತಿಪಾದನೆಯೇ ಅದು. ಆತ್ಮದ

ಅಸ್ತಿತ್ವವನ್ನೂ ಮತ್ತು ದೇಹ-ಮನಸ್ಸುಗಳಿಂದ ಆತ್ಮ ಬೇರೆಯೆಂಬುದನ್ನೂ ಇವೆಲ್ಲ ಒಪ್ಪುತ್ತವೆ.

ಸೃಷ್ಟಿಯ ಕರ್ಮಕಾರಣವು ಯಾವುದೋ ಅದರ ವ್ಯಾಖ್ಯೆಯನ್ನು ಜೈಮಿನಿ ಪ್ರಣೀತ ಮೀಮಾಂಸೆಯಲ್ಲಿ ಕಾಣಬಹುದು. ಸಮಯದ ವ್ಯಾಖ್ಯೆಯನ್ನು ಕಣಾದ ಪ್ರಣೀತ ವೈಶೇಷಿಕದಲ್ಲಿ, ಉಪಾದಾನದ ವ್ಯಾಖ್ಯೆ ಗೌತಮ ಪ್ರಣೀತ ನ್ಯಾಯದಲ್ಲಿ, ಪುರುಷಾರ್ಥದ ವ್ಯಾಖ್ಯೆ ಪತಂಜಲಿಯ ಯೋಗದಲ್ಲಿ ಮತ್ತು ಅನುಕ್ರಮದಿಂದ ಪರಿಗಣನೆ ಮಾಡುವಿಕೆಯ ವ್ಯಾಖ್ಯೆಯನ್ನು ಕಪಿಲ ಪ್ರಣೀತ ಸಾಂಖ್ಯದಲ್ಲಿ ಮತ್ತು ಕೇವಲ ನಿಮಿತ್ತ ಕಾರಣವಾಗಿರುವ ಪರಮಾತ್ಮನ ವ್ಯಾಖ್ಯೆಯನ್ನು ವ್ಯಾಸ ಪ್ರಣೀತ ವೇದಾಂತದಲ್ಲಿ ಕಾಣಬಹುದು.

ಸಾಂಖ್ಯ ದರ್ಶನದಲ್ಲಿ ದೇವರ ಅಸ್ತಿತ್ವಕ್ಕೆ ಸ್ಥಾನವಿಲ್ಲದಿದ್ದರೂ ಸೃಷ್ಟಿ ಪ್ರತಿಪಾದನೆಯು ಎಲ್ಲದರ ಏಕಮೇವ ಗುರಿಯಾಗಿದೆ.

ಜೈಮಿನಿ, ಕಣಾದ, ಗೌತಮ, ಪತಂಜಲಿ, ಕಪಿಲ ಮತ್ತು ವ್ಯಾಸಾದಿ ಋಷಿಗಳು ಬೇರೆ ಬೇರೆಯಾದರೂ ಅವರ ಗುರಿ ಒಂದೇ ಆಗಿದೆ.

ಋಷಿ

ಸಜ್ಜನಮುಲ ಚೆಲಿಮಿ ಚಾಲಿಂಪಗಾರಾದು, ಪ್ರಕೃತಿನೆರುಗಕುನ್ನ ಭಕ್ತಿಲೇದು.
ಪಲುವ ಲೆಟ್ಟರೀತಿ ಭಕ್ತಿನಿಲ್ಪುದುರಯಾ ? ವಿಶ್ವದಾಭಿರಾಮ ವಿನುರ ವೇಮ.

ಸಜ್ಜನರ ಸ್ನೇಹ ಸಂಗ ತೊರೆಯಬೇಡ.
ಪ್ರಕೃತಿಯರಿಯದಿರಲು ಭಕ್ತಿಯಿಲ್ಲ.
ಪಾಪಿ ಯಾವ ರೀತಿ ಭಕ್ತಿನಿಲಿಸಬಲ್ಲ ?
ವಿಶ್ವದಾಭಿರಾಮ ಕೇಳು ವೇಮ

ಪರಿಸರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಸುತ್ತಮುತ್ತಿನ ಪ್ರಪಂಚವನ್ನು ನೋಡಿದಾಗ, ಭಾವನಾ ತರಂಗ ನಮ್ಮ ಮನಸ್ಸಿನಲ್ಲೇಳುವವು. ನಮ್ಮ ಚಿತ್ತವೃತ್ತಿಗಳು ಅವುಗಳತ್ತ ಆಕರ್ಷಿತವಾಗುವವು. ನಮ್ಮ ಮನಸ್ಸಿನಲ್ಲಿ ಅವೇ ಭಾವನೆಗಳು ಉಳಿದು ಅನುಕೂಲ ಸಮಯ ಬಂದಾಗ ವ್ಯಕ್ತವಾಗುವವು. ಒಳ್ಳೆಯ ಜನರ ಸಂಗದಲ್ಲಿದ್ದರೆ, ಸತ್ಯ, ಸದಾಚಾರ ಭಾವನೆ ನಮ್ಮ ಮನಸ್ಸಿನಲ್ಲಿ ಸೇರಿ ಮುಂದೆ ಅದುವೇ ನಮ್ಮ ಜೀವನದಲ್ಲಿ ವ್ಯಕ್ತವಾಗವುದು. ಕಾರಣ, ಸಜ್ಜನರ ಸಂಗ ತೊರೆಯಬಾರದು.

[ಪ್ರಪಂಚದಲ್ಲಿ ಒಂದು ವಸ್ತು ಇನ್ನೊಂದರತ್ತ ಸೆಳೆಯಲ್ಪಡುತ್ತದೆ. ಈ ಸೆಳೆತ ತೀರ ಸಹಜ. ಇದೇ ಆಕರ್ಷಣ. ಈ ಸೆಳೆತ ' ಪೂರ್ಣ ಸತ್ಯ ' ದತ್ತ ಇದ್ದರೆ, ಅದಕ್ಕೆ ಪ್ರೇಮವೆನ್ನುತ್ತಾರೆ. ಅಪೂರ್ಣ ವಸ್ತುವಿನ ಬಗೆಗಿರುವ ಆಕರ್ಷಣೆಯೇ ಕಾಮ. ಕಾಮವಿರುವಾಗ ಅಂದರೆ ಅಪೂರ್ಣ ವಸ್ತುವಿನ ಬಗ್ಗೆ ಆಕರ್ಷಣೆಯಿರುವಾಗ ಇರುವ ಮನಸ್ಸಿನ ಪ್ರವೃತ್ತಿಯೇ ' ಆಸಕ್ತಿ '. ಪೂರ್ಣ ಸತ್ಯವನ್ನು ಕುರಿತು ಆಕರ್ಷಣೆ ಇರುವಾಗಿನ ಮನ

ಸ್ಸಿನ ಪ್ರವೃತ್ತಿಯೇ 'ಭಕ್ತಿ'. ಕಾಮವಿರುವಾಗ ಇರುವ ಸಂಬಂಧ ವ್ಯವಸಾಯ, ವ್ಯಾಪಾರವೆನ್ನಿಸುವುದು. ಪ್ರೇಮವಿರುವಾಗ ಇರುವ ಸಂಬಂಧವು ಸೇವೆಯೆನ್ನಿಸುವದು]

ಮನಸ್ಸು, ದೇಹ, ಬಾಹ್ಯ ಪ್ರಪಂಚವೆಲ್ಲ ಪ್ರಕೃತಿ. ಪ್ರಕೃತಿಯ ಆಕರ್ಷಣೆ ಆಸಕ್ತಿ. ಪೂರ್ಣ ಸತ್ಯವೆಂದರೆ ಬ್ರಹ್ಮವೊಂದೆ. ಬ್ರಹ್ಮದತ್ತ ಆಕರ್ಷಣೆಯೇ ಭಕ್ತಿ. ಪಾಪ ಮಾಡುವವನೂ ಪ್ರಕೃತಿ ವಸ್ತುವಿನತ್ತ ಆಕರ್ಷಿತನಾಗುವನು. ವಿಷಯಾಸಕ್ತನಾಗುವನು. ದುರಾಶೆ ತಾಳುವನು. ಇವನು ಭಕ್ತಿಯನ್ನು ತೋರುವದು ಕಷ್ಟಸಾಧ್ಯ. ಪಾಪ ಕಾರ್ಯ ಬಿಡುತ್ತ ಹೋದರೆ, ಮಾತ್ರ ಭಕ್ತಿ ಸಾಧ್ಯ.

೫೩೯

ಇಟ್ಟಕನುಲಬ್ರಹ್ಮ ನುಟ್ಟುಚೂಡಗವಚ್ಚು ? ಚೂಚುಕನುಲುನೇರು ಚೂಪುವೇರು.
ಚೂಪುಲೋನನುಂಚಿ ಚೂಡಂಗವಲವದಾ ? ವಿಶ್ವದಾಭಿರಾಮ ವಿನುರ ವೇಮ.

ಇಂಥ ಕಣ್ಣಿನಿಂದ ಎಂತು ಬೊಮ್ಮನರಿವು ?
ನೋಳ್ಪ ಕಣ್ಣು ಬೇರೆ, ನೋಟ ಬೇರೆ.
ನೋಟ ಒಳಗೆ ತಿರುಗಿ, ನೋಡುವದಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ನಯನೇಂದ್ರಿಯದಿಂದ ಬ್ರಹ್ಮನನ್ನು ನೋಡಬೇಕೆಂದರೆ ಅದೆಂತು ಸಾಧ್ಯ ? ನೋಡುವ ಕಣ್ಣು ಬೇರೆ; ಅದು ಮನಸ್ಸಿನ ಕಣ್ಣು ನೋಡುವ ನೋಟವೂ ಬೇರೆ; ಹೃದಯದಲ್ಲಿರುವ ಆಕಾಶದಲ್ಲಿ ನೋಡಬೇಕು.

ಹೊರಗೆ ನೋಡುವ ಗೊಡವೆ ಇಲ್ಲ. ಮನಸ್ಸನ್ನು ಅಂತರ್ಮುಖವಾಗಿಸಿ, ಹೃದಯದಲ್ಲಿ ಇರುವ ಬ್ರಹ್ಮನನ್ನು ನೋಡಬಹುದು.

(ಶ್ವೇತಾಶ್ವತರೋಪನಿಷತ್ತಿನ ವೇದಾಂತ ಪ್ರತಿಪಾದಕವಾದ ಈ ಮಂತ್ರ ನೋಡಿರಿ :
ನ ಸದೃಶೋ ತಿಷ್ಠತಿ ರೂಪಮಸ್ಯ, ನ ಚಕ್ಷುಷಾ ಪಶ್ಯತಿ ಕಶ್ಚನೈನಮ್।
ಹೃದಾ ಹೃದಿಸ್ಥಂ ಮನಸಾಯ, ಏನಮೇವಂ ವಿದುರ ಮೃತಾಸ್ತೇ ಭವಂತಿ॥
ಈಶನ ರೂಪವು ಸದೃಶವಾದುದಲ್ಲ. ಅವನನ್ನು ಕಣ್ಣಿನಿಂದ ಯಾರೂ ಕಾಣಲಾರರು. ಹೃದಯದಲ್ಲಿರುವ ಇವನನ್ನು ಹೃದಯದಿಂದ, ಮನಸ್ಸಿನಿಂದ ಮಾತ್ರ ತಿಳಿಯಬಹುದು. ಅಂಥವರು, ಅಮರರಾಗುತ್ತಾರೆ.)

೫೪೦

ದೂಲಮುಲನು ಬೋಲು ದುರವಸ್ಥಲನುನೆಲ್ಲ, ರೋಸಿಯಾಶಲನ್ನಿ ಕೋಸಿವೇಸಿ,
ವಾಸನಲದೆಲಿಸಿನ ವಾಡೆಪೋ ಬ್ರಹ್ಮಂಬು, ವಿಶ್ವದಾಭಿರಾಮ ವಿನುರ ವೇಮ.

ದೊಡ್ಡ ತೊಲೆಗಳಂಥ ದುರವಸ್ಥೆಯನೆಲ್ಲ,
ಆಶೆಪಾಶಗಳನು, ಬೀಸಿ ಚೆಲ್ಲಿ,
ಪಾಸನೆಗಳನರಿತು ಇಪ್ಪವನೆ ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಪ್ರಪಂಚದ ವಸ್ತುಗಳತ್ತ ಆಸಕ್ತಿ ಉಂಟಾದರೆ ಆ ಆಸಕ್ತಿಯಿಂದ ಬಯಕೆಗಳು ಏಳುತ್ತವೆ. ಬಯಕೆಯ ಬಳ್ಳಿ ಬೆಳೆದು ಭಾರವಾಗುತ್ತದೆ. ಬಯಕೆಗಳನ್ನು ತೀರಿಸಿಕೊಳ್ಳಲಾರದೆ, ಇದ್ದಾಗ ಕಳವಳವುಂಟಾಗುತ್ತದೆ. ದುರವಸ್ಥೆಗೀಡಾಗುತ್ತೇವೆ.

ಮನುಷ್ಯನ ಆಶೆ—ಕೋರಿಕೆಗಳೇ ಎಲ್ಲ ಕಷ್ಟಕ್ಕೂ ಮೂಲ. ವಸ್ತುವಿನ ಬಗೆಗೆ ಆಶೆ ತಾಳಿದರೆ ಅದು ಇಲ್ಲವೆಂದು ದುಃಖನೆನ್ನಿಸುವದು. ಆಶಾಪಾಶದಲ್ಲಿ ಜೀವ ಬದ್ಧವಾಗುವ ದು ಆಶೆಯನ್ನು ನಿವಾಳಿಸಿ ವಿಷಯ ವಾಸನೆಗಳನ್ನು ತಿಳಿದು ನಿಗ್ರಹಿಸಿರುವವನೇ ಬ್ರಹ್ಮ ತಿಳಿದವನು. ಬಹ್ಮ ತಿಳಿದವನು, ಬ್ರಹ್ಮವೇ ಆಗುತ್ತಾನೆ.

[ಮುಂಡಕೋಪನಿಷತ್ತಿನ ಅಭಿಪ್ರಾಯ ನೋಡಿರಿ : "ಮನುಷ್ಯನು ತನ್ನೊಳಗಿರುವ ಪರಮನನ್ನು ಕಾಣುವ ವರೆಗೆ ಸಂಕಟದಲ್ಲಿ ತೊಳಲಾಡುವನು. ಪುರುಷ ಮತ್ತು ಪರಮರ್ಶ ಎರಡು ಪಕ್ಷಿಗಳಂತೆ. ಅವು ಒಂದಕ್ಕೊಂದು ಅಂಟಿವೆ; ಮತ್ತು ಅದೇ ಗಿಡದ ಮೇಲಿವೆ. ಒಂದು ಪಕ್ಷಿ ಗಿಡದ ಫಲ ಸವಿಯುವದು. ಇನ್ನೊಂದು ನೋಡುತ್ತಿದ್ದು, ಆನಂದ ಪಡುವದು. ಒಂದು ಕರ್ಮಾಸಕ್ತವಾಗಿದೆ. ಇನ್ನೊಂದು ಸ್ವತಂತ್ರವಾಗಿದೆ. ರುಕ್ಮ ವರ್ಣದ ಕರ್ತಾರನೂ ಈಶನೂ, ಬ್ರಹ್ಮ ಯೋನಿಯೂ ಆದ ಪುರುಷನನ್ನು ನೋಡಿದೊಡನೆ, ವಿದ್ವಾನನು ಪುಣ್ಯ ಪಾಪಗಳಿಲ್ಲದ ನಿರಂಜನನಾದ ಪರಮನ ದರ್ಶನ ಪಡೆಯುವನು.]

೫೪೧

ಮಾಟಲಾಡವೇರೆ ಮನಸು ಕೊಲದಿವೇರೆ ಒಡಲಿ ಗುಣಮುವೇರೆ ಯೊಜವೇರೆ,
ಎಟ್ಲು ಕಲುಗುಮುಕ್ತಿ ? ಯೇಲಾಗು ತನಲಾಗು, ವಿಶ್ವದಾಭಿರಾಮ ವಿನುರ ವೇಮ.

ಮಾತಿನಲ್ಲಿ ಬೇರೆ ಮನಸಿನಲ್ಲಿ ಬೇರೆ.
ಒಡಲು–ಗುಣವು ಬೇರೆ ಚಿಂತೆ ಬೇರೆ
ಹೇಗೆ ಬಡುದು ಮುಕ್ತಿ ? ಹೇಗೊ ತನ್ನ ರೀತಿ!
ವಿಶ್ವದಾಭಿರಾಮ ಕೇಳು ವೇಮ.

ಕಾಯಾ, ವಾಚಾ, ಮನಸಾ ಶುದ್ಧವಾಗಿರಬೇಕು. ಅಂದರೆ ಮಾತಿನಲ್ಲಾಗಲಿ, ಮಾಡುವಾಗ ಆಗಲಿ ಇಲ್ಲವೆ ಮನಸ್ಸಿನಲ್ಲಾಗಲಿ ಅಶುದ್ಧಿ ಉಳಿದರೆ, ಚಿತ್ತವೃತ್ತಿಗಳು ಬೇರೆ ವಸ್ತುಗಳತ್ತ ಹರಿಯುತ್ತವೆ. ಶುದ್ಧಿಯೆಂದರೆ ಸಹಜ ಗುಣವನ್ನು ಬಿಟ್ಟು ಉಳಿದ್ದುದನ್ನು ಇಲ್ಲವಾಗಿಸುವುದು. ಮನಸ್ಸು, ನಾಲಗೆ, ಕರ್ಮೇಂದ್ರಿಯಗಳು ಕೇವಲ ಆತ್ಮ ಕುರಿತು ಧ್ಯಾನಿಸುವುದು ಅವುಗಳ ಸಹಜ ಗುಣ. ಆದರೆ ಪ್ರಪಂಚದ ಭೋಗವಸ್ತುಗಳತ್ತ ಆಕರ್ಷಣೆ ತಾಳಿ, ಆಸಕ್ತರಾಗಿ, ಬಯಕೆ ಹುಟ್ಟಿ ಮನಸ್ಸಿನಲ್ಲಿ, ಮಾತಿನಲ್ಲಿ, ಆಡುವಲ್ಲಿ ಮಾಡುವಲ್ಲಿ, ಅನೇಕಾನೇಕ ಪ್ರವೃತ್ತಿಗಳು ಹುಟ್ಟುತ್ತವೆ. ಆತ್ಮ ಪ್ರವೃತ್ತಿಯ ಮೇಲೆ ತೆರೆಯೆಳೆಯುತ್ತವೆ. ಇದೇ ಅಶುದ್ಧಿ. ಬಿಳಿ ಬಟ್ಟೆ ಹೊಲಸು ಹತ್ತಿ ಕೆಂಪಾಗಿ ಕಾಣುತ್ತದೆ. ಕೆಂಪು ಅಶುದ್ಧಿ. ಅದರ ಮೂಲ ವರ್ಣವಾದ 'ಬಿಳುಪು' ಶುದ್ಧಿ.

ಮನಸ್ಸು, ಮಾತು, ಮಾಡುವ ಕೆಲಸ ಒಂದೇ ಗುರಿಯತ್ತ ನಡೆದರೆ, ಅದುವೇ ಅತರಂಗ ಶುದ್ಧಿ. ಈಗ ನಮ್ಮ ಪ್ರವೃತ್ತಿಗಳೆಲ್ಲ ಒಂದೇ ಜಾತಿಯವು. ಒಂದೇ ವಸ್ತು ಕುರಿತು

ಇರುತ್ತವೆ. ಆ ಗಮ್ಯವೇ ಸದ್ವಸ್ತು; ಆತ್ಮ. ನಮ್ಮ ಚಿತ್ತವೃತ್ತಿಗಳೆಲ್ಲ ಒಂದೇ ಜಾತಿಯವಾಗಿ, ಒಂದಾದೊಡನೆ ಆತ್ಮದ ಪ್ರತಿಬಿಂಬ ಚಿತ್ತದ ಮೇಲೆ ಬೀಳುವುದು. ವಿದ್ಯುಚ್ಛಕ್ತಿ ತಂತಿಯಲ್ಲಿ ಸೇರಿದಂತೆ ಎನ್ನಲೂಬಹುದು.)

ಮಾತಿನಲ್ಲಿ ಒಂದು ವಸ್ತುವಿಗಾಗಿ ಆಸಕ್ತಿ; ಮನಸ್ಸಿನಲ್ಲಿ ಇನ್ನೊಂದು ವಸ್ತುವಿಗಾಗಿ ಆಸಕ್ತಿ; ಮಾಡುವ ಕಾರ್ಯಗಳು ಮತ್ತೊಂದನ್ನು ಪಡೆಯಲು; ಚಿಂತನೆ ಮಾಡುವುದು, ಇನ್ನಾವುದನ್ನು ಕುರಿತು, ಎಂದಾದರೆ, ಅದೇನೋ ಅವನದೇ ಒಂದು ರೀತಿಯಾಗುತ್ತದೆ. ಆತ್ಮ ತಿಳಿಯುವ ರೀತಿಯಲ್ಲ.

೫೪೨

ವೆಲದಿ ಚಕ್ಕದನವು ವೆರಸ್ಯೆನಯಿಡುನು, ವಿಭುನಿಕರುಣಲೇಕ ವಿತಗನುಂಡು,
ನೀದುಕರುಣಲೇಕ ನೇರ್ಪುಲು ಕೊರಗಾವು, ವಿಶ್ವದಾಭಿರಾಮ ವಿನುರ ವೇಮ.

ಹೆಣ್ಣಿನ ಹಿರಿ ಸೊಬಗು ಹರೆಯದುಬ್ಬರೆಲ್ಲ.
ವಿಭುವಿನ ಕೃಪೆಯಿರದೆ ವ್ಯರ್ಥವಾಯ್ತು.
ನಿನ್ನ ಕರುಣೆಯಿರದೆ, ವಿನ್ನ ಜಾಣ್ಮೆ ವ್ಯರ್ಥ.
ವಿಶ್ವದಾಭಿರಾಮ ಕೇಳು ನೇಮ.

ಹೆಣ್ಣಿಗೆ ಸುಂದರ ರೂಪನವಿರಬಹುದು. ಏರು ಜವ್ವನನವಿರಬಹುದು. ಕಾಮಾತುರತೆ ಇರಬಹುದು. ಆದರೆ ಏನಿದ್ದರೇನು? ಗಂಡನು ಅವುಗಳಿಗೆ ತೃಪ್ತಿ ನೀಡುವ ಕೃಪೆ ತೋರದಿದ್ದರೆ ಆ ಸೊಬಗು, ಆ ಹರಯದುಬ್ಬರ ಎಲ್ಲ ನಿಷ್ಪ್ರಯೋಜಕ.

ಮನುಷ್ಯನು ಶಾಸ್ತ್ರ ಪುರಾಣ ಓದಿರಬಹುದು. ಅವನು ತನ್ನ ಮನಸ್ಸು ಏಕಾಗ್ರ ಗೊಳಿಸಿ, ಭಕ್ತಿಯಿಂದ ಪರಮಾತ್ಮನನ್ನು ಧ್ಯಾನಿಸದಿದ್ದರೆ, ಪರಮಾತ್ಮನ ಕರುಣೆ ಅವನ ಮೇಲೆ ಆಗದು. ಪರಮಾತ್ಮನ ಕರುಣೆಯೆಂದರೆ ಆತ್ಮಾನುಭವ. ಇದಿಲ್ಲದೆ ಹೋದರೆ, ಅವನ ದೀರ್ಘವಾದ ಓದಿನಿಂದ ಯಾವ ಫಲ? ಎಲ್ಲವೂ ವ್ಯರ್ಥವಷ್ಟೇ!

(ಕಠೋಪನಿಷತ್ತಿನ ಅಭಿಪ್ರಾಯ ನೋಡಿರಿ: "ನಾಯಮಾತ್ಮಾ ಪ್ರವಚನೇನ ಲಭ್ಯೋ; ನ ಮೇಧಯಾ ನ ಬಹುನಾ ಶ್ರುತೇನ | ಯ ಮೇ ವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ. ಸ್ವಾಮ್"||

ಈ 'ಆತ್ಮ' ಪ್ರವಚನದಿಂದ ಇಲ್ಲವೆ ಪಾಂಡಿತ್ಯದಿಂದ ಇಲ್ಲವೆ ಬಹಳಷ್ಟು ವೇದ ಶಾಸ್ತ್ರ ಕೇಳುವುದರಿಂದ ತಿಳಿಯಲಾರದು. ಆತ್ಮನನ್ನು ಹುಡುಕುವ ಆತ್ಮದಿಂದ ಮಾತ್ರ ಆತ್ಮವು ದೊರೆಯುವುದು. ಸಾಧಕನ ಆತ್ಮವೇ ತನ್ನ ಪಾರಮಾರ್ಥಿಕ ಸ್ವರೂಪವನ್ನು ಪ್ರಕಾಶಿಸುವುದು.

೫೪೩

ಎಂತ ಕಷ್ಟಮುಂಡು ನಂತಪಾಪಪುಚಿಂತ, ಚಿಂತ ಚೇತವಿಗುಲ ಜಿವುಕು ಮನಸು,
ಚಿಂತ ಲೇಕ ಯುನ್ನ ಜೆಡನಿ ಸಂಪದ ಜೂಚು, ವಿಶ್ವದಾಭಿರಾಮ ವಿನುರ ವೇಮ.

ಎಷ್ಟು ಕಷ್ಟವುಂಟೊ ಅಷ್ಟು ಪಾಪ ಚಿಂತೆ.
ಚಿಂತೆಯಿಂದ ಬಹಳ ಕೀಳು ಮನಸು
ಚಿಂತೆಯಿಲ್ಲದಿಹುದೆ ಕೆಡದ ಸೊತ್ತು ನೋಡು.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಹೊಟ್ಟೆಗೆ ಸಾಕಾಗುವಷ್ಟು ಅನ್ನ ದೊರೆಯದಿರುವಾಗ ಮನುಷ್ಯನಿಗೆ ತೀರ ಕಷ್ಟವೆನ್ನಿಸುತ್ತದೆ. ಇಂದು ಅನ್ನವಿಲ್ಲ; ನಾಳೆ ಏನು? ನಾಡಿದ್ದು ಹೇಗೆ? ಎಂಬ ಚಿಂತೆ ಆವರಿಸುತ್ತದೆ. ಮಕ್ಕಳ ಗತಿಯೇನು? ಮಡದಿಯ ಗತಿಯೇನು? ಎಂದೂ ಚಿಂತಿಸುತ್ತಾನೆ. ಕಳವು ಮಾಡುವುದೇ ? ಇಲ್ಲವೆ ಯಾರಿಗಾದರೂ ಮೋಸ ಮಾಡುವುದೇ? ಎಂದು ಪಾಪದ ಚಿಂತೆ ಶುರುವಾಗುತ್ತದೆ. ಇಂಥ ಚಿಂತೆಯಿಂದ ಮನಸ್ಸು ಕೀಳು ಮಟ್ಟಕ್ಕೆ ಬರುತ್ತದೆ. ಎಂಥ ಹೇಸಿ ಪಾಪಕಾರ್ಯ ಮಾಡಲಿಕ್ಕೆ ಸಹ ಹೇಸುವದಿಲ್ಲ.

ಆದರೆ, ಚಿಂತೆ ಮಾಡದೆ ಇದ್ದರೆ, ಆಗ ನಮ್ಮ ಮನಸ್ಸಿನಲ್ಲಿ ಇಲ್ಲವಲ್ಲ! ಎಂಬ ಮುಖವೇ ಏಳುವುದಿಲ್ಲ. ನಮ್ಮಲ್ಲಿ ಏನಿಲ್ಲದಿದ್ದರೂ ಎಲ್ಲವೂ ಇದ್ದಂತೆ, ಆಗುವದು, ಇಂಥ ಮಾನಸಿಕ ತೃಪ್ತಿಯನ್ನು ಯಾರೂ ಕಸಿದುಕೊಳ್ಳಲಾರರು. ಇದು ಕೆಡದ ಸೊತ್ತು.

(ಚಿಂತೆ ಮಾಡುವ ಬಡವನು "ತನಗೆ ಏನೂ ಇಲ್ಲವಲ್ಲಾ" ಎಂದು ಗೋಳಾಡುವನು. ಆದರೆ ಚಿಂತೆ ಮಾಡದ ವಿರಾಗಿಯು ತಾನು ಏನನ್ನು ತೊರೆಯಬೇಕಾದಿತೋ ಅದರ ಗೊಡವೆಯೇ ಇಟ್ಟಿತು ಬಿಡು ಎಂದು ಹಾಯಾಗಿರುವನು. ಚಿಂತೆ ಇಲ್ಲದಿರುವಿಕೆಯ ಪರ ಮೋಚ್ಚ ಮಟ್ಟದ ನಿದರ್ಶನವೆಂದು ಜನಕ ರಾಜನ ಕತೆ ಹೇಳುತ್ತಾರೆ. ಮಿಥಿಲಾ ಪಟ್ಟಣ ಉರಿಯುತ್ತಿದ್ದಾಗ ಜನಕರಾಜ "ನನ್ನದೇನೂ ಉರಿದು ಹೋಗುತ್ತಿಲ್ಲ" ಎಂದನಂತೆ.

೫೪೪

ಎಂಡವೇಳಚೀಕ ಟೀಕಮ್ಮೆಯುನ್ನಟ್ಲು, ನಿಂಡ ಕುಂಡ ನೀರು ನಿಲಿಚಿನಟ್ಲು,
ದಂಡಿನಿ ಬರವಾತ್ಮ ತತ್ತ್ವಂಬು ದೆಲಿಯುಡೀ, ವಿಶ್ವದಾಭಿರಾಮ ವಿನುರ ವೇಮ.

ಬಿಸಿಲು ಕಾಲ ನಿಶೆಯು ಬೆಸೆದು ಅಡಗಿದಂತೆ.
ತುಗೆಂಬೂಡದಿ ನೀರು ನಿಂತಿಹಂತೆ
ತಿಳಿದುಕೊ ಪರಮಾತ್ಮ ತತ್ವವ ಬಹಳಷ್ಟು.
ವಿಶ್ವದಾಭಿರಾಮ ಕೇಳು ವೇಮ.

ಕತ್ತಲೆ ಯಾವಾಗಲೂ ಇದ್ದೇ ಇರುತ್ತದೆ. ಬಿಸಿಲು ಬಿದ್ದಕಾಲ ಸಹ ಕತ್ತಲೆ ಉಂಟು. ಆದರೆ ಬಿಸಿಲಿನ ಪ್ರಕಾಶದಲ್ಲಿಯೇ ಕತ್ತಲು ಬೆರೆತುಕೊಂಡು ಅಡಗಿದಂತಿರುತ್ತದೆ. ಅದೇ

ರೀತಿ ಬ್ರಹ್ಮ ಯಾವಾಗಲೂ ಉಂಟು. ಆದರೆ ಅವಿದ್ಯೆಯ ಬಿಸಿಲು ಇರುವಾಗ ಸಹ ಬ್ರಹ್ಮ ಉಂಟು. ಆದರೆ ಅದರೊಡನೆ ಬೆರೆತು ಅಡಗಿದಂತಿರುತ್ತದೆ. ಅವಿದ್ಯೆ ಹೋದೊಡನೆ ಬ್ರಹ್ಮವು ಯಥಾ ರೀತಿ ಎಲ್ಲೆಡೆ ಕಾಣುವುದು. ಎಲ್ಲವೂ ಬ್ರಹ್ಮವಾಗಿ ಕಾಣುವುದು.

ಪರಮಾತ್ಮ ತತ್ತ್ವವೇ ಜ್ಞಾನ. ಎಷ್ಟು ಹೆಚ್ಚು ತತ್ತ್ವ ತಿಳಿಯುವರೋ ಅಷ್ಟು ಒಳ್ಳೆದು. ನಮ್ಮ ಚಿತ್ತ ವೃತ್ತಿಗಳಿಂದ ಕ್ಷಣ ಕ್ಷಣಕ್ಕೆ ಆಗುವ ಬದಲಾವಣೆಗಳು ಕೊಸೆ ಗೊಮ್ಮೆ ಕಾಣುವಂತೆ, ಪೂರ್ಣ ಸತ್ಯದ ಅನುಭವವ ತತ್ತ್ವಗಳನ್ನು ತಿಳಿಯುತ್ತ ಹೋಗಿ ಪೂರ್ಣ ತತ್ತ್ವ ತಿಳಿದೊಡನೆ ಬದಲಾವಣೆ ಒಮ್ಮೆಲೆ ಕಾಣುವುದು. ಆತ್ಮ ಪುರುಷ ಚಿತ್ತ ಪರದೆಯ ಮೇಲೆ ಪ್ರತಿಬಿಂಬಿತವಾಗುವುದು. ಆತ್ಮ ಪ್ರಕೃತಿಯಿಂದ ಬೇರೆ ಎಂಬ ತಿಳುವಳಿಕೆ ಬರುವುದು. ತುಂಬಿದ ಕೊಡದಲ್ಲಿ ನೀರು ನಿಂತಂತೆ ನಿಶ್ಚಲವಾದ ಮನದಲ್ಲಿ ಮಾತ್ರ ಇದು ಸಾಧ್ಯ. ಮನಸ್ಸು ನಿಶ್ಚಲವಾಗಬೇಕಾದರೆ ತತ್ತ್ವಗಳನ್ನು ಪೂರ್ಣ ಅರಿಯಬೇಕು. ಕೊಡದ ತುಂಬ ನೀರು ಹಾಕಬೇಕು-

ಪಳಪ

ಇಂಟ ಲೋನಿ ಧನವು 'ಇದಿನಾದಿ'ಯನುಚುನು, ಮಂಟ ಲೋನ ದಾಚು ಮುಂಕು ಜೀವಿ,
ಕೊಂಟು ಬೋಡು ವೆಂಟಗುಲ್ಲಕಾನೈನನು, ವಿಶ್ವದಾಭಿರಾಮ ವಿನುರ ವೇಮು.

ಮನೆಯ ಒಳಗೆ ಧನವ 'ಇದುವೆ ನನ್ನ'ದೆಂದು
ಮಣ್ಣಿನಲಿ ಮುಚ್ಚುವ ಮಂಕು ಜೀವಿ.
ಕೊಂಡು ಹೋಗ ಹಿಂದೆ ಕುರುಡು ಕಾಸನೊಂದು.
ವಿಶ್ವದಾಭಿರಾಮ ಕೇಳು ವೇಮು.

ಹೊನ್ನು, ಹೆಣ್ಣು ಮತ್ತು ಮಣ್ಣು ಇವು ಮೂರು ನಮ್ಮನ್ನು ಮೋಸಗೊಳಿಸುತ್ತಿವೆ ಎಂಬುದು ಸಾಮಾನ್ಯ ಅನುಭವ. ಹಣವಿದ್ದರೆ ಇನ್ನುಳಿದ ಸುಖ ಉಂಟು ಎಂಬುದು ಸಾಮಾನ್ಯ ಗ್ರಹಿಕೆ. ಧನವೇ ಲಕ್ಷ್ಮಿಯ ಪ್ರತೀಕ- ಹಣಗಳಿಕೆಯೇ ಲಕ್ಷ್ಮಿಯನ್ನು ಒಲಿಸುವ ಕ್ರಮ ಎಂದೂ ತಿಳುವಳಿಕೆ. ಹಣವನ್ನು ಸಂಗ್ರಹಿಸಿಟ್ಟು, ಇಲ್ಲವೆ ಹುಗಿದಿಟ್ಟು ಹೋದರೆ ಮುಕ್ತಿ,ಎಂಬ ಮೂಢನಂಬುಗೆ ಬೇರೆ.ಗುಡಿಯಲ್ಲಿ ಮೂರ್ತಿ ಪ್ರತಿಷ್ಠಾಪನೆಯ ಕಾಲಕ್ಕೆ ಸಹ ವೈಶ್ಯರು ಅರಸರು ಮೂರ್ತಿಯ ಅಡಿಗೆ ಧನಕನಕ ಇಡಲು ಪ್ರಜರಿಗೆ ಕರೆ ಕೊಡುತ್ತಿದ್ದರು. ಈ ಹಣವನ್ನು ತಮಗೆ ಬೇಕಾದಾಗ ರಾಜರು ಬಳಸುತ್ತಿದ್ದರು. ಆದರೆ ಎಷ್ಟು ಧನ ಕೂಡಿಟ್ಟರೇನು, ತಾನು ಸಾಯುವಾಗ ಒಂದು ಬಿಡಿ ಕಾಸನ್ನೂ ಒಯ್ಯಲಾರನು.

(ಕಠೋಪನಿಷತ್ತಿನಲ್ಲಿ ಆತ್ಮ ಜ್ಞಾನಕ್ಕೆ ಹಂಬಲಿಸುವ ನಚಿಕೇತನ ಮಾತು ಕೇಳಿರಿ:
"ಮನುಷ್ಯನು ಧನದಿಂದ ತೃಪ್ತನಾಗುವದೆಂತು? ನಾವು ನಿನ್ನನ್ನು (ಯಮನನ್ನು) ನೋಡಿದಾಗ, ಧನವನ್ನು ಇಟ್ಟುಕೊಳ್ಳಬಲ್ಲೆವೇನು? ನೀನು ವಿಧಿಸಿದಷ್ಟು ಕಾಲ ನಾವು ಇರುವೆವು. ಆ ವರವು ಆತ್ಮ ಜ್ಞಾನ ಮಾತ್ರ ಪಡೆಯಲು ಯೋಗ್ಯವಾಗಿದೆ; ಅದನ್ನು ಅನು ಗ್ರಹಿಸು."

ಪಳಬ

ದೇಶ ವೇಷ ಮುಲನು ದೇಟನೇಯಕ ದೇವು, ಡಾತ್ಮಲೋನನುಂಡು ನನಗಿ ವೆನಗಿ,
ವೇಸ ಮರಸಿ ಚೂಡ ಗ್ರಾಸಂಬು ಕೊರಕಯಾ, ವಿಶ್ವದಾಭಿರಾಮ ವಿನುರ ವೇಮು.

ದೇಶ ವೇಷಗಳನು ದೇವ ನೋಡನಯ್ಯ;
ಆತ್ಮದೊಳಗಿಪ್ಪನು ಪ್ರೀತಿಯಿಂದ;
ಕಂಡರಿಯಲು ವೇಷ ಕೂಳಿಗಾಗಿಯಷ್ಟೆ,
ವಿಶ್ವದಾಭಿರಾಮ ಕೇಳು ವೇಮು

ದೇವನು ವಿಶ್ವಕರ್ಮ."ಏಷ ದೇವೋ ವಿಶ್ವಕರ್ಮಾ ಮಹಾತ್ಮಾ, ಸದಾ ಜನಾನಾಂ ಹೃದಯೇ ಸಂನಿವಿಷ್ಟಃ |" 'ಈ ವಿಶ್ವವನ್ನು ಸೃಷ್ಟಿಸಿದ ಮಹಾತ್ಮಾ ಸ್ವರೂಪಿ ದೇವರು ಜನರ ಹೃದಯದಲ್ಲಿ ಸದಾವಕಾಲ ವಾಸಿಸುವವನು' ಎಂದು ಶ್ವೇತಶ್ವೇತರೋಪನಿಷತ್ತು ಸಾರುತ್ತಿದೆ. ಬಾಹ್ಯ ಅಂತರ್ಗತವಾದುದೆಲ್ಲವನ್ನು ಆಕಾಶ (ಈಥರ್)ದಂತೆ ವ್ಯಾಪಿಸಿದ್ದಾನೆ. ಚ್ಯುತಿಯಿಲ್ಲದ ಅಚ್ಯುತನು ಸದಾ ಸರ್ವರಲ್ಲಿಯೂ ಸಮಾನನಾಗಿರುವವನು; ನಿರ್ಮಲನು. ಇಂಥ ದೇವರಿಗೆ ಕ್ಯಾವಿಯ ಬಟ್ಟೆಯಾಗಲೀ, ದಂಡಕಮಂಡಲು ಆಗಲೀ, ವಿಭೂತಿ, ಶ್ರೀಗಂಧಗಳ ಚಿಹ್ನಗಳಾಗಲಿ ಪ್ರಿಯವಾಗಿಲ್ಲ. ಅವನು ಭಾರತ ವರ್ಷವನ್ನೋ ಪಂಚನದೀ ಪ್ರದೇಶವನ್ನೋ, ಕಾಶಿಯನ್ನೋ, ರಾಮೇಶ್ವರವನ್ನೋ, ಹಿಮಾಲಯದ ಕೈಲಾಸವನ್ನೋ ದಕ್ಷಿಣದ ಶೇಷಾದ್ರಿಯನ್ನೋ ಪವಿತ್ರವೆಂದು ತಿಳಿಯಲಾರನು.

ದೇವನಿರುವುದು ಆತ್ಮ ಸ್ವರೂಪದಲ್ಲಿ. ಅವನ ಹಾದಿ, ನಿರ್ಮಲ ಪ್ರೇಮದ ಭಕ್ತಿಯಲ್ಲಿ.
ಈ ಎಲ್ಲ ನಿಜವನ್ನು ತಿಳಿದು ವಿಮರ್ಶಿಸಿ, ನೋಡಿದರೆ ಸನ್ಯಾಸಿಗಳ ವೇಷ-ಭೂಷಣ ಗಳೆಲ್ಲ ಕೇವಲ ಕೂಳಿಗಾಗಿ ಎಂಬುದು ಖಚಿತವಾಗುತ್ತದೆ.

ಪಳಭ

ಪರ್ವತ ವನವಾಸಿ ಪರಿಣಾಮವರ್ತನ. ಕೂಪವಾಸಿ ಕೆಟ್ಲು ಗುರುತು ಪಡುನು?
ಬ್ರಹ್ಮ ನಿಷ್ಠುವೆಂಟ ಬ್ಯಾಕೃತುಡರುಗುನಾ? ವಿಶ್ವದಾಭಿರಾಮ ವಿನುರ ವೇಮು.

ಪರ್ವತ ವನವಾಸಿ ಪರಿಣಾಮವರ್ತನ.
ಕೂಪವಾಸಿಯೆಂತು ಕುರುಹು ಹಿಡಿವ?
ಬ್ರಹ್ಮನಿಷ್ಠ ಪರಿ, ಪ್ಯಾಕೃತನರಿಯುವನೆ?
ವಿಶ್ವದಾಭಿರಾಮ ಕೇಳು ವೇಮು.

ಮನಸ್ಸು ಶುದ್ಧಗೊಳಿಸಿ,ಏಕಾಗ್ರತೆಯಿಂದ ಭಕ್ತಿಹೊಂದಿ ಸದ್ವಸ್ತುವಿನ ಧ್ಯಾನಮಾಡಿದರೆ ಆತ್ಮ ಸಾಕ್ಷಾತ್ಕಾರವಾಗುವದೆಂಬುದು ವೇದಾಂತ ಸಾರ.

ಮನಸ್ಸಿನ ಏಕಾಗ್ರತೆ ಸಾಧಿಸುವುದು ಪ್ರಪಂಚದ ಆಕರ್ಷಣೆಗಳಿಲ್ಲದ ನಿರ್ಜನ ಅರಣ್ಯದಲ್ಲಿ ಸಾಧ್ಯ. ಗಿರಿ ಗುಹೆ ಸೇರಿದ ಮೇಲೆ ಸಾಧ್ಯ ಎಂದು ಭಾವಿಸಿ ಆತ್ಮ ಸಾಕ್ಷಾತ್ಕಾರ

ಹೊಂದಿದವರು ಅರಣ್ಯದಲ್ಲಿದ್ದರು, ಗುಹೆ ಸೇರಿದ್ದರು ಎಂದು ಭಾವಿಸುತ್ತಾರೆ. ಈ ಭಾವನೆಯ ಪರಿಣಾಮವಾಗಿ ದೇವರೇ ಅರಣ್ಯದಲ್ಲಿ, ಗುಹೆಯಲ್ಲಿ ಇರುವನೆಂಬ ಗ್ರಹಿಕೆ ನಮ್ಮಲ್ಲಿ ಮೂಡುತ್ತಿದೆ. ಇದುವೇ ಪರಿಣಾಮವರ್ತನ. ಎಲ್ಲಿಯೋ ಗುಹೆಯಲ್ಲಿಯೋ, ಗೂಡಿನಲ್ಲಿಯೋ ಕುಳಿತವನು, ಹೃದಯದಲ್ಲಿರುವ ಆತ್ಮನ ಗುರುತು ಹಿಡಿಯುವುದೆಂತು?

ಆತ್ಮ ಅಂದರೆ ಬಹ್ಮ ನಿಷ್ಠೆಯುಳ್ಳವನು ತಾನಿರುವ ತಾಣದಲ್ಲಿಯೇ ಪ್ರಂಪಚದ ಮಿಥ್ಯವನ್ನು ಖಚಿತಪಡಿಸಿಕೊಂಡು ಬ್ರಹ್ಮ ಸತ್ಯವನ್ನು ಗುರುತಿಸುತ್ತಾನೆ. ಸಾಮಾನ್ಯರು ಇಂಥ ನಿಷ್ಠೆಯ ಮಾಹಿತಿ ತಿಳಿಯರು. ಕಾಡು ಗೂಡು ಸೇರುತ್ತಾರೆ.

ಪಳಲ

ಅಲ್ಪಸುಖ ಮುಲೆಲ್ಲ ನಾಶಿಂಚಿ ಮನುಜುಂಡು, ಬಹುಳ ದುಃಖ ಮುಲನು ಬಾಧಪಡುನು,
ಪರಸುಖಂಬುನೊಂದಿ ಬ್ರತುಕಂಗ ನೇರಡು, ವಿಶ್ವದಾಭಿರಾಮ ವಿನುರ ವೇಮ.

ಅಲ್ಪಸುಖವನೆಲ್ಲ ಆಶಿಸುತ್ತ ಮನುಜ
ಬಹಳ ದುಃಖದಿಂದ ಬಾಧೆ ಪಡುವ.
ಪರಸುಖವನು ಹೊಂದಿ ಬದುಕಲರಿಯನಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯ ಬಾಹ್ಯ ವಸ್ತುಗಳ ಭೋಗದಾಸೆಗೆ ಬಿದ್ದು ಅದನ್ನು ಈಡೇರಿಸಿಕೊಳ್ಳುವಲ್ಲಿ ಬಹಳ ಕಷ್ಟ ಪಡುತ್ತಾನೆ. ತನ್ನಲ್ಲಿ ಇಲ್ಲದ ವಸ್ತುವಿಗಾಗಿ ಸುತ್ತು ಮುತ್ತು ಹುಡುಕಿ ಅದು ಸಿಗದಿರಲು, ಕೋಪತಾಳುವುದು, ಕೋಪದಿಂದ ಮನಸ್ಸಿಗೆ ಕ್ಲೇಶವುಂಟಾಗಿ ದುಃಖವೆನಿಸುವುದು. ಬ್ರಹ್ಮಭಾವ ತಾಳಿದ ಮನುಷ್ಯನು ಎಲ್ಲ ಪ್ರಾಪಂಚಿಕ ವಸ್ತುಗಳನ್ನು ತೊರೆಯಬೇಕೆನ್ನುವವನು. ಅವನಿಗೆ ತನ್ನಲ್ಲಿ ಇಲ್ಲದ ವಸ್ತು ಕುರಿತು ಚಿಂತೆ ಇಲ್ಲ. ಪ್ರತಿಯಾಗಿ ಸುಖವುಂಟು. ತಾನು ಬಿಡಬೇಕಾದ ವಸ್ತು ಮೊದಲೇ ತೊಲಗಿದೆ. ಬಿಡುವ ಗೊಡವೆ ಹೋಯಿತು ಎಂಬ ಸುಖ ಅವನಿಗೆ. ಇದು ಪರ ಸುಖ. ಪರ ಎಂದರೆ ಬ್ರಹ್ಮ ಸಂಬಂಧವಾದುದು. ಅಪರ ಎಂದರೆ ಪ್ರಪಂಚಕ್ಕೆ ಸಂಬಂಧವಾದುದು.

(ಈಶಾವಾಶ್ಯೋಪನಿಷತ್ತಿನ ಅಭಿಪ್ರಾಯ ನೋಡಿರಿ:

"ಅಂಧಂ ತಮಃ ಪ್ರವಿಶ್ಯಂತಿ ಯೇ೬ ವಿದ್ಯಾಮುಪಾಸತೇ |
ತತೋ ಭೂಯ ಇವ ತೇ ತಮೋ ಯಉ ವಿದ್ಯಾಯಾಂ, ರತಾಃ||
ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಾಯಾ೬ಮೃತಮಶ್ನುತೇ ||

ಯಾರು ಅವಿದ್ಯೆಯನ್ನೇ ತಮ್ಮದನ್ನಾಗಿಕೊಳ್ಳುವರೋ ಅವರು ಅಂಧ ತಮಸ್ಸನ್ನು ಸೇರುತ್ತಾರೆ. ಆದರೆ ಯಾರು ವಿದ್ಯೆಯಲ್ಲಿಯೇ ಆನಂದಿಸುವರೋ ಅವರು ತಮಸ್ಸಿನಲ್ಲಿಯೂ ಬೆಳಕು ಕಾಣುತ್ತಾರೆ.

ವಿದ್ಯೆ ಮತ್ತು ಅವಿದ್ಯೆಗಳ ಜ್ಞಾನ ಒಂದೇ ಕಾಲಕ್ಕೆ ಬೇಕು. ಹೀಗಾದರೆ ಅವಿದ್ಯೆ, ತಿಳಿಯುವುದರ ಪ್ರಯುಕ್ತ ಮೃತ್ಯು ಬಂಧನ ಹರಿದು ಹೋಗುವುದು. ಮತ್ತು ವಿದ್ಯೆ ತಿಳಿಯುವದರ ಪ್ರಯುಕ್ತ ಅಮೃತತ್ವ ಲಭಿಸುವದು

ಪಳಟ

ಕಡೆಗಿ ವಟ್ಟಿಯಾನ ಕಡ ತೇರನೀಯದು, ಇಡುಮುಲಂದು ಬೆಟ್ಟಿ ಯೀಡ್ವ ಗಾನಿ,
ಪುಡವಿಜನುಲ ಭಕ್ತಿ ಪೊಡಮುಂಗನೀಯದು, ವಿಶ್ವದಾಭಿರಾಮ ವಿನುರ ವೇಮ.

ಬರಿದೆ ಪಡುವ ಆಶೆ, ಗುರಿಯ ತಲುಪಿಸದದು;
ಕಷ್ಟದೊಳಗೆ ಕೆಡವಿ ಕಾಡುತಿಹುದು.
ಜಗದಿ ಜನದಿ ಭಕ್ತಿ ಜನಿಸಗೊಡದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲದ ವಸ್ತು ಭೋಗ ಪಡೆಯುವ ಆಸಕ್ತಿಯೇ ಆಶೆ. ಆಶೆಯಿಂದ ಬಯಕೆಗಳೇಳುವವು. ಕೈಗೂಡಿದ ಬಯಕೆಗಳು ನೀಡುವ ತೃಪ್ತಿಯೂ ಅಲ್ಪಕಾಲದ್ದು. ಕೈಗೂಡದ ಬಯಕೆಗಳು ಹಿಂದೂಡಲ್ಪಟ್ಟು ಚಿತ್ತ ವೃತ್ತಿಗಳ ರೂಪದಲ್ಲಿ ಸಂಗ್ರಹಿತವಾಗುತ್ತವೆ ಇದರಿಂದ ಪ್ರಾರಬ್ಧಕರ್ಮ ಇನ್ನೂ ಬೆಳೆಯುತ್ತದೆ. ಜನ್ಮ ಚಕ್ರದಲ್ಲಿ ತಿರುಗುವುದೇ ಗತಿಯಾಗುತ್ತದೆ. ಆಸೆ ಕತ್ತರಿಸದೇ ಜೀವನ್ಮುಕ್ತಿ ಇಲ್ಲ.

ಮನಸ್ಸು, ದೇಹ ಬಾಹ್ಯ ವಸ್ತುಗಳಲ್ಲಿ ಪರಸ್ಪರ ಇರುವ ಆಕರ್ಷಣೆಯೇ ಕಾಮ. ಕಾಮವಿರುವಾಗಿನ ಮಾನಸಿಕ ಸ್ಥಿತಿಯೇ ಆಸಕ್ತಿ. ಪುರುಷ ಇಲ್ಲವೆ ಬ್ರಹ್ಮದತ್ತ ಮನಸ್ಸಿನ ಆಕರ್ಷಣೆಯು ಪ್ರೇಮ. ಪ್ರೇಮವಿರುವಾಗ ಮಾನಸಿಕ ಸ್ಥಿತಿ ಭಕ್ತಿ ಅಂದ ಮೇಲೆ ಆಶೆ ಇಲ್ಲವೆ ಆಸಕ್ತಿ ಇರುವಾಗ ಭಕ್ತಿ ಹುಟ್ಟದಿರುವುದು ಕಷ್ಟ ಸಾಧ್ಯ. ಜಗದ ಜನದಲ್ಲಿ ಭಕ್ತಿ ಹುಟ್ಟದಿರುವುದಕ್ಕೆ ಆಸೆಯೇ ಕಾರಣವಾಗಿದೆ.

ಪಳಂ

ಧರ್ಮ ಮುರಸಿ ಪೂನಿ ಧರ್ಮ ರಾಜಾದುಲು, ನಿರ್ಮಲಂಪು ಬ್ರ್ತಿ ನಿಲುಕೊನಿರಿ
ಧರ್ಮವೇ ನೃಪುಲಕು ದಾರಕಯೊಗಂಬು, ವಿಶ್ವದಾಭಿರಾಮ ವಿನುರ ವೇಮ.

ಧರ್ಮವರಸ:ತಿಪ್ಪ ಧರ್ಮ ರಾಜದಾದಿ.
ನಿರ್ಮಲವಹ ಕೀರ್ತಿ ನಿಲ್ಲಿಸಿಹರು.
ಧರ್ಮವೇ ರಾಜರಿಗೆ ತಾರಕ ಯೋಗವದು
ವಿಶ್ವದಾಭಿರಾಮ ಕೇಳು ವೇಮ.

ಧರ್ಮರಾಜ, ರಾಮಚಂದ್ರ, ಜನಕ ಇತ್ಯಾದಿ ಮಹಿಮರು ಧರ್ಮವೆಂದರೇನು ಎಂದು ಹುಡುಕಿ, ಸತ್ಯ ಅಹಿಂಸೆಗಳೇ ಶ್ರೇಷ್ಠ ಧರ್ಮವೆಂದು ನಂಬಿ ಬಾಳಿ ಹೋಗಿದ್ದಾರೆ. "ನಾಸ್ತಿ ಸತ್ಯಾತ್ಪರೋ ಧರ್ಮ" ಸತ್ಯಕ್ಕಿಂತ ಹೆಚ್ಚಿನ ಧರ್ಮವಿಲ್ಲ. ಎಂದು ಮಹಾಭಾರತ

ಪುನರಪಿ ಸಾರುತ್ತಿದೆ. ಯುದ್ಧ ಭೂಮಿಯಲ್ಲಿ ದ್ರೋಣಾಚಾರ್ಯನನ್ನು ಸೋಲಿಸಲು "ಅಶ್ವತ್ಥಾಮೋಹತಃ ನರೋ ವಾ ಕುಂಜರೋ ವಾ" ಅಶ್ವತ್ಥಾಮ ಸತ್ತನು; ಮನುಷ್ಯನೋ ಇಲ್ಲವೆ ಆನೆಯೋ? ಎಂದು ಧರ್ಮರಾಜ ನುಡಿದ. ಅಲ್ಪ ಅಸತ್ಯದಿಂದ ಭೂಮಿಯ ಮೇಲೆ ಅಂತರದಲ್ಲಿ ಹೋಗುವ ಅವನ ರಥ ಕೆಳಗೆ ಬಂತು. ಮತ್ತು ಅವನಿಗೆ ಇದಕ್ಕಾಗಿ ಕ್ಷಣವಾದರೂ ನರಕ ದರ್ಶನ ಮಾಡಬೇಕಾಯಿತು. ಸತ್ಯದ ಮಹಿಮೆಯ ಸುಂದರ ವರ್ಣನೆಯಿದು. ಬಂಧುವರ್ಗದ ಧುರ್ಯೋಧನಾದಿಗಳೊಡನೆ ಕೆತ್ತದಾಟವಾಡುವಾಗ ರಾಜ್ಯ ಸೋತ; ಹೆಂಡತಿಯನ್ನೂ ಸೋತ. ಆದರೂ ಕೊಟ್ಟ ಮಾತಿಗೆ ತಪ್ಪಲಿಲ್ಲ. ಪ್ರಾರಬ್ಧದಿಂದ ಕೀಳು ವೃತ್ತಿಗಿಳಿಯಬೇಕಾದ ಸಂದರ್ಭ ಬಂದಾಗ ಸಹ ಧರ್ಮರಾಜ ಸತ್ಯಪರನಾಗಿ ನಡೆದು ಕೀರ್ತಿ ಉಳಿಸಿದನು.

ಧರ್ಮರಾಜನಿಗೆ ಧರ್ಮದೃಷ್ಟಿ ಇತ್ತು. ಸಕಲ ಪ್ರಾಣಿಗಳಲ್ಲಿ ಸಮತೆ ಕಂಡ ಮಹಾನುಭಾವನೀತ. ನಂಬಿದ ನಾಯಿಯನ್ನೂ ಜೊತೆಗೆ ಸ್ವರ್ಗಕ್ಕೆ ಕರೆದೊಯ್ಯಲು ಮುಂದಾದ ಮಹಾತ್ಮ. ನಮ್ಮ ಒಡಹುಟ್ಟಿದ ಮಾನವ ಬಂಧುಗಳನ್ನೇ ಮುಟ್ಟಿಸಿಕೊಳ್ಳದ ಮಡಿವಂತಿಕೆಯ ಭೇದ ಬುದ್ಧಿಯವನಲ್ಲ!

ತಾರಕ ಯೋಗವು ಮನಸ್ಸನ್ನು ಶುದ್ಧಿಗೊಳಿಸುವ ರಾಜಯೋಗದ ಅಂಗ, ಪರಿಶುದ್ಧವಾದ ಮನಸ್ಸು ಹೊಂದಿರುವುದೇ ರಾಜನಿಗೆ ಮೋಕ್ಷದ ಮಾರ್ಗವಾಗಿರುವುದು.

೫೫೧

ದಾನಮುನಲು ಜೇಯ ಧರ ಜೇತುಲಾಡಕ, ಬಹುಧನಂಬು ಗೂರ್ಚಿ ಪಾತಿವೆಟ್ಟಿ,
ತುದಕು ದಂಡುಗನಿಡಿ ಮೊದಲು ಚಿಡು ನರುಡು, ವಿಶ್ವದಾಭಿರಾಮ ವಿನುರ ವೇಮ.

ದಾನಿವೀಯಲಾರ ಧರೆಯೊಳಿರುವ ತನಕ
ಬಹಳ ಧನಗೂಡಿಸಿ, ಬಚ್ಚಿ ಇಡಲು,
ಕೊನೆಗೆ ದಂಡ ಕೊಟ್ಟು ಕೆಡುವ ನರನು ನೋಡು
ವಿಶ್ವದಾಭಿರಾಮ ಕೇಳು ವೇಮ.

ಏನೂ ಇಲ್ಲದವರಿಗೆ ಅವರು ಬಯಸಿದ ಪದಾರ್ಥಗಳನ್ನು ಕೊಡುವುದೇ ದಾನ. ಇನ್ನು ಬೇರೆಯವರಿಗೆ ಏನಾದರೂ ಕೊಟ್ಟಲ್ಲಿ ಪ್ರತಿ ಫಲದ ಆಸೆ ಇರುತ್ತದೆ; ಅದು ದಾನವಲ್ಲ.

ಭೂಮಿಯ ಮೇಲೆ ಜೀವಿಸಿರುವ ಪರ್ಯಂತ ಕೃಪಣನು ದಾನವೀಯುವದಿಲ್ಲ. ಬಹಳಷ್ಟು ಹಣ ಸಂಗ್ರಹಿಸಿ ಬಚ್ಚಿಡುತ್ತಾದೆ. ಆದು ತನಗೆ ಅನಂತರ ತನ್ನ ಸಂತತಿಗೆ ಪ್ರಯೋಜನಕರವೆಂದು ಬಗೆಯುತ್ತಾನೆ.

ಹೊಟ್ಟೆಗಿಲ್ಲದವರ ಕೆಟ್ಟ ಹಸಿವನ್ನು ಪರಿಹರಿಸಲು ಕೂಡಿಟ್ಟ ಹಣ ಉಪಯೋಗವಾಗದಿದ್ದರೆ, ಅವನು ಪಾಪ ಮಾಡಿದಂತೆ. ಏಕೆಂದರೆ ತನ್ನ ಉಪಯೋಗಕ್ಕೆ ಬೇಕಾದುದಕ್ಕಿಂತ ಹೆಚ್ಚಿನದನ್ನು ಸಂಗ್ರಹಿಸುವುದು,ಇತರರಿಗೆ ಸಲ್ಲಬೇಕಾದುದನ್ನು ಅಪಹರಿಸಿದಂತೆ,

ಇಂಥ ಕೃಪಣತನದಿಂದ ಮನಸ್ಸು ಕಠಿಣವಾಗುತ್ತದೆ. ಬಡವರ ಗೋಳಾಟ ಕೃಪಣನ ಮನ ಕರಗುವುದಿಲ್ಲ; ಕಠಿಣವಾಗುತ್ತದೆ. ತನ್ನ ಗುಣ ಉಳಿನರಾಯಿತು. ಎನ್ನುವ ಕೀಳು ಭಾವನೆ ಉಂಟಾಗುತ್ತದೆ.

ಇಂಥ ಚಿತ್ತವೃತ್ತಿಯಿಂದ ಮನಸ್ಸು ಜಡವಾಗಿ ಮುತ್ತೆ ಮೂರ್ಖ ಸ್ಥಿತಿಗೆ ಬರಬೇಕಾದರೆ ಬಹುಕಾಲ ಸರಿಯುತ್ತದೆ. ಇನ್ನು ಮುಕ್ತಿಯ ಮಾತೇ ಇಲ್ಲ. ಬಂಗಾರದಾಸೆಯವನು ಹೀಗೆ ದಂಡತೆತ್ತು ಸಾಯುವನು.

೫೫೨

ವಿನುವಿವೇಕಮನೆಡು ವಿಂತಗೊಡ್ಡ ಲಿಜೇತ, ನಲಯು ವಿದ್ಯ ಯನೆಡು ನಡವಿ ನರಿಕಿ,
ತೆಲಿವಿಯನೆಡು ಗೊಪ್ಪ ದೀಪಂಬು ಜೇಪಟ್ಟು, ವಿಶ್ವದಾಭಿರಾಮ ವಿನುರವೇಮ,

ವಿವೇಕವೆನ್ನುತಿಹ ವಿಚಿತ್ರ ಕೊಡಲಿಯಿಂ,
ಅವಿದ್ಯೆಯೆನ್ನುತಿಹ ಆಡವಿ ಕಡಿದು,
ದೊಡ್ಡ ಜ್ಞಾನವೆಂಬ ದೀಪ ಕೈಯೊಳು ಹಿಡಿ.
ವಿಶ್ವದಾಭಿರಾಮ ಕೇಳುವೇಮ.

ಒಳಿತು ಕೆಡುಕುಗಳನ್ನು ವಿಂಗಡಿಸಿ ತಿಳಿಯುವುದೇ ವಿವೇಕ. ನಮ್ಮ ಜೀವನದಲ್ಲಿ ಯಾವುದು ಒಳಿತು? ಯಾವುದು ಕೆಡಕು? ಇದನ್ನು ನಿರ್ಧರಿಸುವ ಶಕ್ತಿ ನಮ್ಮಲ್ಲಿರಬೇಕು. ತತ್ವಗಳನ್ನು ತಿಳಿಯುತ್ತ ಆಚರಿಸುತ್ತ ಹೋದರೆ ವಿವೇಕ ಕುದುರುತ್ತದೆ.

ವಿದ್ಯೆಯೆಂದರೆ ಜ್ಞಾನನಿಷ್ಠೆ. ಅವಿದ್ಯೆಯೆಂದರೆ ಕರ್ಮನಿಷ್ಠೆ. ಕರ್ಮವೆಂದರೆ ಯಜ್ಞಾದಿ ದೇವತಾಕವಾದ ಆಚಾರ ವ್ರತಗಳು. ಬಾಹ್ಯ ಆಚಾರ ವ್ರತ ಕ್ರಮಗಳು ಆತ್ಮ ಸಾಕ್ಷಾತ್ಕಾರ ಮಾರ್ಗದಲ್ಲಿರುವ ಆತಂಕ, ಅವಿದ್ಯೆ. ಅವಿದ್ಯೆಯಿಂದ ಭಿನ್ನ ಭಿನ್ನ ಚಿತ್ತ ಪ್ರವೃತ್ತಿಗಳು ಉಂಟಾಗಿ ಅವೆಲ್ಲ ಕಲಸು ಮೇಲೋಗರವಾಗಿ ಅಡವಿಯಲ್ಲಿ ಗಿಡ ಗಂಟಿಗಳು ಹುಚ್ಚೆದ್ದು ಬೆಳೆದಂತೆ ಆಗುತ್ತದೆ. ಆತ್ಮಸಾಕ್ಷಾತ್ಕಾರವಾಗಲು, ಈ ಚಿತ್ತ ವೃತ್ತಿಗಳು ಇಲ್ಲವಾಗಬೇಕು. ಜ್ಞಾನನಿಷ್ಠೆ ಬೇಕು.

ಇದನ್ನೇ ಅಲಂಕಾರಿಕವಾಗಿ ಹೇಳುವುದಾದರೆ, ವಿವೇಕ ಎನ್ನುವಂಥ ವಿಚಿತ್ರ ರೀತಿಯ ಕೊಡಲಿಯಿಂದ ಅವಿದ್ಯೆಯೆಂಬ ಆಡವಿಯನ್ನು ಕಡಿದು ಹಾದಿ ಹಸನು ಮಾಡಬೇಕು. ಅಲ್ಲಿ ಜ್ಞಾನವೆಂಬ ದೀಪವನ್ನು ಹಿಡಿದು ನೋಡಿದರೆ ಆತ್ಮ ಕಾಣುವದು.

೫೫೩

ಪಾಲನೀರುತ್ರ ಮುಮು ಪರಗ ಹಂಸಯೆರುಂಗು, ನೀರುಪಾಲುತ್ರ ಮುಮು ನೆಮರಿಕೇಲ?
ಅಜ್ಞುಡೈನಮನುಜು ಡಲಶಿವುನೆಱುಗುನಾ? ವಿಶ್ವದಾಭಿರಾಮ ವಿನುರ ವೇಮ,

ಹಾಲ-ನೀರ ರೀತಿ ಹಂಸ ಕಂಡರಿವುದು,
ನೀರ ಹಾಲ ಗೊಡವೆ ನವಿಲಿಗೇಕೆ?
ಅಜ್ಞನಿಪ್ಪ ಮನುಜ ಅರಿವನೆಂತು ಶಿವನ
ವಿಶ್ವದಾಭಿರಾಮ ಕೇಳು ವೇಮ.

ಹಂಸವು ಸುಂದರ ಪಕ್ಷಿ ನವಿಲು ಸಹ ಸುಂದರ ಪಕ್ಷಿ. ಹಂಸ ನವಿಲುಗಳಲ್ಲಿ ರೂಪ ಭೇದವಿರುವಂತೆ ಗುಣಭೇದವೂ ಉಂಟು. ನೀರು ಬೆರೆಸಿದ ಹಾಲಿನಿಂದ ಕೇವಲ ಹಾಲಿನ ಅಂಶವನ್ನಷ್ಟೇ ಸೇವಿಸುವ ಗುಣ ಹಂಸಕ್ಕುಂಟು; ಆದರೆ ನವಿಲಿಗಿಲ್ಲ.

ಅದೇ ರೀತಿ ಶಿವನನ್ನು ಅರಿಯಬೇಕಾದರೆ ಸದಸದ್ವಿವೇಕ ಬೇಕು; ಜ್ಞಾನ ಬೇಕು. ಜ್ಞಾನವಿಲ್ಲದೆ ಶಿವನನ್ನು ಅರಿಯುವುದೆಂತು?

"ನ್ಯಾಯಮಾತ್ಮಾ ಬಲಹೀನೇನ ಲಭ್ಯಃ" ಈ ಆತ್ಮವು ಜ್ಞಾನ ಬಲವಿಲ್ಲದವನಿಗೆ ಲಭ್ಯವಾಗದು ಎಂದು ಮುಂಡಕೋಪನಿಷತ್ತಿನಲ್ಲಿ ಹೇಳಲಾಗಿದೆ.

(ಬ್ರಹ್ಮ ನಿರ್ಗುಣವಾದುದು. ನಿರ್ಗುಣ ಬ್ರಹ್ಮವು ಸಗುಣವಾಗುವ ಸ್ಥಿತಿಗೆ ಪ್ರಕೃತಿಯ ಪ್ರಭಾವದಿಂದ ಇರಬಹುದು ಸತ್ತ್ವದು. ರಜಸ್ ಮತ್ತು ತಮಸ್‌ಗಳೆಂಬ ತ್ರಿಗುಣಗಳು ಸಮಸ್ಥಿತಿಯಲ್ಲಿದ್ದರೆ, "ಪುರುಷ" ವ್ಯಕ್ತವಾಗಬಹುದಾಗಿದ್ದರೂ ಅವ್ಯಕ್ತವಾಗಿರುತ್ತದೆ. ಈ ಸ್ಥಿತಿಯೇ ಶಿವಸ್ಥಿತಿ. ಶಿವ ಎಂದರೆ ಸಗುಣ ಬ್ರಹ್ಮನೆಂದು ತಿಳಿಯಬಹುದು.)

೫೫೪

ಕನ್ನುಲಂದು ಮದಮುಕಪ್ಪಿ ಕಾನರುಕಾನಿ, ನಿರುಡು ಮುಂದ ಟೀಡು ನಿನ್ನ ಮೊನ್ನ,
ದಗ್ದುಲೈನವಾರು ತಮುಕಂಟೆ ದಕ್ಕುವಾ? ವಿಶ್ವದಾಭಿರಾಮ ವಿನುರ ವೇಮ,

ಕಣ್ಣೊಳು ಮದ ತುಂಬಿ ಕಾಣರು ತಾವೆಂದು,
ಇಂದು, ಹಿಂದೆ, ಅಂದು, ನಿನ್ನೆ ಮೊನ್ನೆ,
ದಗ್ಧರಾಗಿಪ್ಪರು ತಮಗಿಂತ ಕಡಿಮೆಯೆ?
ವಿಶ್ವದಾಭಿರಾಮ ಕೇಳು ವೇಮ.

ಅನೇಕರು ಅಮರತ್ವವೆಂದರೆ, ಇದೇ ದೇಹದಲ್ಲಿ ಅಂತಿಮವಾಗಿ ಇರುವುದು ಎಂದು ಭ್ರಮಿಸುವುದುಂಟು. ಶವಗಳನ್ನು ಪೆಟ್ಟಿಗೆಗಳಲ್ಲಿಟ್ಟು, ಪ್ರಾಣ ಪಕ್ಷಿ ಎಂದಾದರೊಮ್ಮೆ ಅಲ್ಲಿ ಸೇರಬಹುದೆಂದು ಕಾಯ್ದು ಕುಳಿತುಕೊಳ್ಳುವ ಸಂಪ್ರದಾಯವೂ ಅನೇಕ ದೇಶಗಳಲ್ಲಿ ಮೊದಲು ಪ್ರಚಲಿತವಿತ್ತು. ನಮ್ಮಲ್ಲಿ ಹಠಯೋಗಿಗಳು ಬಹುದಿವಸ ಬಾಳುವುದನ್ನು ಸಾಧಿಸಲು ತಮ್ಮ ಶಕ್ತಿ ವ್ಯಯಿಸಿದರೆ, ಸಾಮಾನ್ಯರು "ನನಗೆ ದೀರ್ಘ ಆಯುರಾರೋಗ್ಯ ಕೊಡಪ್ಪಾ ! ಭಗವಂತಾ!!" ಎಂದು ಹರಕೆ ಹೊರುತ್ತಾರೆ.

ಈ ಜನರು ತಮ್ಮ ಕಣ್ಣು ತೆರೆದು ನೋಡುವರೋ, ಇಲ್ಲವೋ ತಿಳಿಯದು. ಇವರ ಕಣ್ಣಿನಲ್ಲಿ ಮದ ತುಂಬಿದೆಯೇನೋ? ಬಹು ಹಿಂದಿನಿಂದ, ಅ ಮೇಲೆ, ಇತ್ತೀಚೆಗೆ. ನಿನ್ನೆ ಮೊನ್ನೆ ಸತ್ತು ಸುಟ್ಟು ಹೋಗಿರುವ ಜನರಲ್ಲಿ ಮಹಿಮರಿರಲಿಲ್ಲವೇ? ತಮಗಿಂತ ಹಿರಿಯರೂ ಜ್ಞಾನಿಗಳೂ ಇರಲಿಲ್ಲವೇ? ಅವರು ವಿಧಿಯ ನಿಯಮದಂತೆ ದೇಹ ವಿಸರ್ಜನೆ ನೂಡಲಿಲ್ಲವೇ? ಇಷ್ಟೆಲ್ಲ ಉದಾಹರಣೆಗಳು ಕಣ್ಣೆದುರು ಇದ್ದರೂ ಸತ್ಯ ತಿಳಿದು, ದೇಹದ ಗೊಡವೆ ತೊರೆಯುವುದಿಲ್ಲವೇಕೋ ತಿಳಿಯದು!

೫೫೫

ಪರುದಾಟಿ ಮೆಟ್ಟಕೇಗಿನ ಪುರುಷುಂಡು, ಪುಟ್ಟಿ ಸರಕುಗೊನಕ ಪೋಯಿನಟ್ಲು,
ಯೋಗ ಪುರುಷುಡೇಲ ನೋಡಲು ಬಾಟಿಂಚುರಾ? ವಿಶ್ವದಾಭಿರಾಮ ವಿನುರ ವೇಮ.

ದಾಟಿ ಬಂದು ನದಿಯ ದಡ ತಲುಪಿದ ಪುರುಷ;
ನಾವೆಯನಿಚ್ಛಿಸದೆ ನಡೆಯುವಂತೆ,
ಯೋಗ ಪುರುಷಗೇಕೆ ಒಡಲು — ಚಿಂತೆಯಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಯೋಗ ಪುರುಷನು ಬ್ರಹ್ಮನನ್ನು ಅರಿತು ಬ್ರಹ್ಮನೇ ಆದವನು. ಯುಜ್ ಅಂದರೆ ಸೇರು. ಯೋಗ ಅಂದರೆ ಸೇರುವಿಕೆ. ಬ್ರಹ್ಮನನ್ನು ಸೇರಿ ಒಂದಾದವನೇ ಯೋಗ ಪುರುಷ ಸದ್ಯೋ ಮೋಕ್ಷ ಪಡೆದವದನೀತ; ಜೀವನ್ಮುಕ್ತ.

ನದಿಯ ಒಂದು ದಡದಿಂದ ಇನ್ನೊಂದು ದಡಕ್ಕೆ ಹೋಗಬೇಕಾದ ಪುರುಷ; ಮುಳ್ಳೆ ವೇಗವಾಗಿ ಹರಿಯುವ ನದಿಯುಂಟು. ಅದನ್ನು ದಾಟಲು, ನಾವೆ (ಹರಗೋಲು) ಬೇಕೇ ಬೇಕು. 'ನಾವೆ'ಯನ್ನು ಜಾಣತನದಿಂದ ನಡೆಸಬೇಕು. ಇಲ್ಲವಾದರೆ, ಪ್ರವಾಹದ ರಭಸಕ್ಕೆ ಕೊಚ್ಚಿ ಹೋಗಬಹುದು. ಕೊನೆಗೆ ಹುಟ್ಟು ಹಾಕಿ, ಎಚ್ಚರದಿಂದ ಸಾಗಿ ಆಚೆಯ ದಡ ತಲುಪುತ್ತಾನೆ. ಅನಂತರ ನಾವೆಯ ಅವಶ್ಯಕತೆಯೇ ಇಲ್ಲ.

ಆತ್ಮ ಪುರುಷನು ಜೀವಭಾವದಿಂದ ಈಚೆಯ ದಂಡೆಯ ಮೇಲೆ ನಿಂತಿರುತ್ತಾನೆ. ಮುಳ್ಳೆ ಪ್ರಾರಬ್ಧ ಕರ್ಮ ಫಲದ ಪ್ರವಾಹವಿದೆ. ಕರ್ಮ ಫಲ ಭೆಡೀಗಿಸಿ ಕ್ಷಯಿಸಬೇಕು. ಇದಕ್ಕಾಗಿ ಶರೀರಬೇಕು, (ನದಿ ದಾಟಲು ನಾವೆ ಇರುವಂತೆ.) ಯೋಗ ಪುರುಷನು ಸಾಧನದಿಂದ ವಂಗ್ತಿ ಹೊಂದುವನು. ಬ್ರಹ್ಮನನ್ನು ಅರಿಯುವನು. ಇದುವೇ ಆಚೆಯ ದಡ. ಈಗ ಕರ್ಮ ಅಕರ್ಮಗಳ ಗೊಡವೆ ಇಲ್ಲ. ಕರ್ಮ ಫಲ ಅವನನ್ನು ಬಾಧಿಸದು. ಏಕೆಂದರೆ ಅವನ ಕರ್ಮಗಳೆಲ್ಲ ಬ್ರಹ್ಮ ಪರವಾಗಿರುತ್ತವೆ: ನಿಷ್ಕಾಮ್ಯವಾಗಿರುತ್ತವೆ. ಶರೀರ ಇಲ್ಲವೆ ಒಡಲಿನ ಚಿಂತೆ ಅವನಿಗಿಲ್ಲ.

೫೫೬

ಮಟ್ಟಿ ಕುಂಡಗಂಟಿ ಮಾಯ್ಪಶರೀರಂಬು, ಚಚ್ಚುನೆನ್ನ ದೈನ ಜಾವದಾತ್ಮ
ಘಟಮುಲೆನ್ನಿಯೈನ ಗಗನಂಬದೇಕಮೋ, ವಿಶ್ವದಾಭಿರಾಮ ವಿನುರ ವೇಮ.

ಮಣ್ಣು — ಮಡಿಕೆಯಂತೆ ಮಾಯುದೀ ಶರೀರ.
ಸಾವುದೆಂದಾದರು; ಸಾಯದಾತ್ಮ.
ಘಟಗಳೆನಿತಾದರು, ಗಗನ ಒಂದಲ್ಲವೆ?
ವಿಶ್ವದಾಭಿರಾಮ ಕೇಳು ವೇಮ.

ಈ ಮನಸ್ಸು ಶರೀರಾಂಗಳು ಭೂ, ಅಪ್, ವಾಯು, ತೇಜ, ಆಕಾಶಗಳ ಸೂಕ್ಷ್ಮ-ಸ್ಥೂಲ ರೂಪಗಳಿಂದಾಗಿವೆ. ಸ್ಥೂಲ ಶರೀರದಲ್ಲಿ ಸೂಕ್ಷ್ಮ ಶರೀರ ಸೇರಿ ಆತ್ಮನಿಗೆ ಉಪಾಧಿ

ಎನಿಸುತ್ತದೆ. "ಆತ್ಮ" ನಿತ್ಯ ಜನ್ಮಾತೀತ. ಶರೀರದ ಉಪಾಧಿಯಿಂದ "ಜೀವ" ಎನಿಸುವುದು. ಶರೀರವು ಸತ್ಯ ವಸ್ತುವಿನಂತೆ ತೋರಿದರೂ ಸತ್ಯವಲ್ಲ. ಹಾವಿನಂತೆ ಕಾಣುವ ಹಗ್ಗ ಹಾವಲ್ಲ. ಶರೀರ ಸತ್ಯವಾಗಿ ತೋರುವುದು ಕೇವಲ ಮಾಯೆ. ಆತ್ಮ ಜ್ಞಾನವಾದದೊಡನೆ ಶರೀರ ಸತ್ಯವೆನಿಸಿದ್ದು, ಕೇವಲ ಮಾಯೆಯಿಂದ ಎಂಬುದು ತಿಳಿಯುತ್ತದೆ.

ಆತ್ಮಕ್ಕೆ ಶರೀರ ಉಪಾಧಿ ಎಂದು ಹೇಳಿದೆ. ಆತ್ಮ ಸರ್ವವ್ಯಾಪಿ, ಆತ್ಮವೇ ಬ್ರಹ್ಮ. ಅದರ ಸರ್ವ ವ್ಯಾಪಿತ್ವ ಆಕಾಶ (ಈಥರ)ದಂತೆ. ಆಕಾಶ ಎಲ್ಲೆಡೆ ಉಂಟು. ಆದರೆ ಒಂದು ಮಣ್ಣಿನ ಮಡಿಕೆಯನ್ನು ಇಟ್ಟು ಅದರೊಳಗೆ ನೋಡಿದರೆ. ಅಲ್ಲೂ ಆಕಾಶ (ಈಥರ) ಉಂಟು. ಮಣ್ಣು ಮಡಿಕೆಯೊಳಗಿನ ಆಕಾಶ ಅನಂತ ಆಕಾಶದಿಂದ ಬೇರ್ಪಟ್ಟಂತೆ ಕಾಣುವುದು, ಮಡಕೆಯ ಉಪಾಧಿಯಿಂದ. ಮಡಕೆ ಒಡೆದರೆ, ಒಳಗಿನ ಆಕಾಶ ಹೊರ ಆಕಾಶದಲ್ಲಿ ಒಂದಾಗುವುದು. ನೀರು ನೀರು ಕೂಡಿದಂತೆ. ಅದೇ ರೀತಿ ಶರೀರ ಬಿದ್ದೊಡನೆ ಆತ್ಮ ಪರ ಬ್ರಹ್ಮದಲ್ಲಿ ಒಂದಾಗುವುದು. ಪರಬ್ರಹ್ಮವೇ ಇದ್ದು, ಅದರಲ್ಲಿ ಸೇರಿ ಹೋಗುವುದು.

ಆಕಾಶ ಒಂದು ಘಟಗಳು ಬೇರೆ ಬೇರೆ ಇರಬಹುದು. ಶರೀರಗಳು ಅಸಂಖ್ಯಾತವಿರಬಹುದು. ಆದರೆ ಆತ್ಮ ಸ್ವರೂಪ ಒಂದೇ. ಅದೇ ಪರಬ್ರಹ್ಮ-

ಪದ್ಯ ೨

ಮಾಯನುಚಿರಸಾಲ ಮನಸನುಗೊಲುಸನು, ಭೇದಮನೆಡು ಬೋಡ ಬೆರಸಿಯುಂಡು,
ಇಟ್ಟ ಬದ್ಧ ಜೀವಿ ಕೆನ್ನಡುಮೊಕ್ಷುಂಬೆ? ವಿಶ್ವದಾಭಿರಾಮ ವಿನುರ ವೇಮ,

ಮಾಯೆಯೆಂಬ ಜೈಲು ಮನಸ್ಸಿನ ಸರಪಳಿ,
ಭೇದವೆಂಬ ಬಂದಿ ಬೆರೆತು ಇಹುದು,
ಇಂಥ ಬುದ್ಧಿ ಜೀವಿ ಗೆಂತು ಮೋಕ್ಷಲಭ್ಯ?
ವಿಶ್ವದಾಭಿರಾಮ ಕೇಳು ವೇಮ.

ಈ ಭೌತಿಕ ಶರೀರ, ಬಾಹ್ಯ ಪ್ರಪಂಚವೇ ಸತ್ಯ ಎಂಬ ತಿಳುವಳಿಕೆ ಮಾಯೆ, ಇದೆಲ್ಲ ಬ್ರಹ್ಮವೇ. ಬ್ರಹ್ಮ ಮಾತ್ರ ಸತ್ಯ ಹಗ್ಗವೇ ಬ್ರಹ್ಮ. ಹಾವಿನಂತೆ ತೋರುವುದೇ ಮಾಯೆ. ಹಾವಿನಂತೆ ಕಾಣುವುದೇ ಹಗ್ಗವೆಂಬ ತಿಳಿವು ಮೂಡುವ ವರೆಗೆ ಹಾವಿನ ಕುರಿತಿರುವ ಭಯ ಹೋಗದು. ಮಾಯೆಯಲ್ಲಿ ಉಳಿದರೆ ಅದರಾಚೆಯ ಸದ್ವಸ್ತು ಕಾಣದು. ಸೆರೆಮನೆಯಲ್ಲಿರುವವರಿಗೆ ಅದರಾಚೆಗಿನ ಜಗತ್ತು ಹೇಗೆ ಕಾಣುವದಿಲ್ಲವೋ ಹಾಗೆ. ಸರಪಳಿ ತೊಡಸಿದ ಕೈಕಾಲು ಸ್ವತಂತ್ರವಾಗಿ ಚಲಿಸಲಾರವು. ಹದ್ದು ಮೀರಿ ಹೋಗದಂತೆ ನಿಯಂತ್ರಿಸುತ್ತವೆ, ಮಾಯೆಯನ್ನು ನಂಬಿದ ಮನಸ್ಸು ಸಹ ಸರಪಳಿಯಂತೆ ಅನಂತವಾದುದನ್ನು ಅರಿಯಲು ಅತಂಕವಾಗುವುದು

ಶರೀರದ ಸಂಬಂಧದಿಂದ ಆತ್ಮ ಜೀವನೆನಿಸುವುದು. ಜೀವ ಆತ್ಮದಿಂದ ಬೇರೆ ಎಂದು ತಿಳಿವುದು ಮಾಯೆಯಿಂದಾಗಿ. ಈ ಭೇದವು ಮಾಯೆಯಲ್ಲಿ ಬಂದಿಯಂತಾಗಿದೆ.

ಜೀವವು ಈ ರೀತಿ ಬದ್ಧವಾದರೆ, ಮೋಕ್ಷ ದೊರೆಯುವುದೆಂತು? ಜ್ಞಾನದಿಂದ ಜೀವನೇ ಆತ್ಮವೆಂಬ ಅರಿವು ಉಂಟಾಗಬೇಕು, ಆತ್ಮವೇ ಸತ್ಯವೆಂದು ಹೊಳೆಯುವುದು, ಆತ್ಮವೇ ಬ್ರಹ್ಮ. ಸರ್ವವೂ ಬ್ರಹ್ಮವೇ ಎನ್ನಿಸುವುದು. ಆಗ ಮೋಕ್ಷವಾಗುವುದು.

ಪದ್ಯ ೩

ಎರುಕಕನ್ನ ನು ಸುಖ ಮೇಲೋಕಮುನಲೇದು, ಎರುಕ ನೆರುಗ ನೆವನಿ ಕೆರುಕೆ ಲೇದು,
ಎರುಕ ಸಾಟಿ ಯೆರುಕೆ ಯೆರುಕಯೇ ತತ್ತ್ವಂಬು, ವಿಶ್ವದಾಭಿರಾಮ ವಿನುರ ವೇಮ.

ಅರಿತ ಮನುಜನ ಸುಖ ಆವ ಲೋಕದಿಲ್ಲ.
ಅರಿವು ಅರಿಯಲವಗೆ ಅರಿವೆ ಇಲ್ಲ.
ಅರಿವಿಗೆ ಸಮನರಿವೆ; ಅರಿವೆ ತತ್ತ್ವವಹುದು:
ವಿಶ್ವದಾಭಿರಾಮ ಕೇಳು ವೇಮ.

"ವಿಜ್ಞಾನಮಾನಂದಂ ಬ್ರಹ್ಮ" ಎಂದರೆ ವಿಜ್ಞಾನವೂ ಆನಂದವೂ ಬ್ರಹ್ಮವು ಎಂದು ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ. ಯಾವನಿಗೆ ಆತ್ಮ ಜ್ಞಾನವಾಗಿಲ್ಲವೋ ಅವನ ಆನಂದ ಮಾನುಷ ಆನಂದ, ಲೋಕದಲ್ಲಿ ಪಡೆಯಬಹುದಾದ ಸಾಮಾನ್ಯ ಮಟ್ಟದ್ದು. ಆದರೆ ಯಾರಿಗೆ ಆತ್ಮದ ಅರಿವು ಆಗಿದೆಯೋ ಅವರ ಆನಂದ ಅನಂತವಾದುದು. ಅವರ ಆನಂದಕ್ಕೆ ಉಪಾಧಿಯ ಮಿತಿ ಇಲ್ಲ, ಇಂಥ ಆನಂದ ಯಾವ ಲೋಕದಲ್ಲಿಯೂ ಇಲ್ಲ.

ಆತ್ಮದ ಅರಿವು ಮಾಡಿಕೊಳ್ಳಲು ಅವನಿಗೆ ವಿವೇಕ, ವೈರಾಗ್ಯ, ಶಮದಮಾದಿ ಸಂಪತ್ತಿ ಮುಮುಕ್ಷತ್ವ ಇತ್ಯಾದಿ ಹೊಂದುವ ಅರಿವು ಬೇಕು. ಆದರೆ ಪ್ರಾಕೃತರಿಗೆ ಈ ಅರಿವೇ ಇರುವುದಿಲ್ಲ.

ಇಂಥ ಜ್ಞಾನಕ್ಕೆ ಸಮವಾದುದು ಇಲ್ಲ ಏನೂ ಇಲ್ಲ, "ನಹಿ ಜ್ಞಾನೇನ ಸದೃಶಂ ಇಹ ವಿದ್ಯತೇ" ಅರಿವು ತತ್ತ್ವವಾಗಿದೆ ತತ್ ಎಂದರೆ ತತ್ತ್ವವೇ ಬ್ರಹ್ಮತ್ವವು."ಸತ್ಯಂ ಜ್ಞಾನಂ ಅನಂತಂ ಬ್ರಹ್ಮ" ಎಂದು ತೈತ್ತರೀಯ ಉಪನಿಷತ್ತಿನಲ್ಲಿ ಹೇಳಲಾಗಿದೆ.

ಪದ್ಯ ೪

ಊರಕುಂಟದೆಲಿಯ ನುತ್ತಿ ಮಯೊಗಂಬು, ಮಾನಸಂಬುಕಲಿಮಿ ಮಧ್ಯ ಮುಂಬು,
ಆಸನಾದಿವಿಧುಲೆ ಯಧಮಯೊಗಂಬುರಾ, ವಿಶ್ವದಾಭಿರಾಮ ವಿನುರ ವೇಮ.

ಸುಮ್ಮನಿದ್ದು ತಿಳಿಯೆ, ಉತ್ತಮಯೋಗವದು,
ಮನಸು ಒಲಿಸಿಕೊಳಲು ಮಧ್ಯಮವದು.
ಆಸನಾದಿ ವಿಧಿಯು, ಅಧಮಯೋಗ ಕಣಾ
ವಿಶ್ವದಾಭಿರಾಮ ಕೇಳು ವೇಮ.

ಯುಜ್ ಎಂದರೆ ಸೇರು; ಕೂಡು ಸೇರುವಿಕೆ, ಕೂಡುವಿಕೆಯೇ ಯೋಗ. ಎಲ್ಲವೂ ಬ್ರಹ್ಮವೇ ಎಂದೂ ಬ್ರಹ್ಮ-ಮಯವೆಂದೂ ತಿಳಿಯುವುದು ಈ ಕೂಡುವಿಕೆ. ಸರ್ವ ಬ್ರಹ್ಮದಲ್ಲಿ ಸೇರಿದಂತೆ; ಒಂದಾದಂತೆ. ಈ ಒಂದಾಗುವಿಕೆಯ ಅನುಭವವು ಮನಸ್ಸಿನ ಯಾವ ಸ್ಥಿತಿಯಲ್ಲಿ ಆಗುವುದೋ ಅದುವೇ ಸಮಾಧಿ; ಯೋಗದ ಕೊನೆಯ ಹಂತ.

ಯೋಗ ಸಮಾಧಿಗಳಲ್ಲಿ ಹಲವು ವಿಧವುಂಟು. ಸಮಾಧಿ ಸ್ಥಿತಿ ತಲುಪಲು ಚಿತ್ತದ ಏಕಾಗ್ರತೆ ಸಾಧಿಸಬೇಕು. ಈ ಸಾಧಕರು ಯಮ ನಿಯಮಾದಿ ಯೋಗದ ಅಷ್ಟಾಂಗಗಳನ್ನು ಸಾಧಿಸುತ್ತಾರೆ: ದೇಹಕ್ಕೆ ಶ್ರಮವೆನಿಸುವ ಹಲವಾರು ಬಗೆಯ ಆಸನಾದಿಗಳನ್ನು ಬೋಧಿಸುವ ಹಠಯೋಗ ಹೆಚ್ಚಾಗಿ ದೈಹಿಕ ದಾರ್ಢ್ಯ ವರ್ಧಿಸಲು ಪೋಷಕವಾಗಿದೆಯಷ್ಟೇ. ಮನಸ್ಸಿನ ವಿಕಾಸ, ಚಿತ್ತೈಕಾಗ್ರತೆಗೆ ಇಲ್ಲಿ ಪ್ರಾಮುಖ್ಯತೆ ಇಲ್ಲ. ಕಾರಣ ಇಂಥ ಆಸನಾದಿ, ಅಧಮ ಯೋಗ.

ವಿವಧ ಚಿತ್ತವೃತ್ತಿಗಳನ್ನು ನಿಗ್ರಹಿಸಿ, ಹಮ್ಯ ಸ್ಥಾನದತ್ತ ಮನಸ್ಸು ಕೇಂದ್ರೀಕರಿಸಿ, ಒಂದೇ ಸದ್ವಸ್ತುವಿನ ಧಾರಣ ಮಾಡಿ, ಅವೆಲ್ಲ ತರಂಗಗಳೂ ಐಕ್ಯವಾಗುವಂತೆ ಧ್ಯಾನ ಮಾಡಿದರೆ, ಸದ್ವಸ್ತು ಮನಸ್ಸಿಗೆ ಹೊಳೆಯುವುದು. ಮನಸ್ಸು ಒಲಿಸಿಕೊಳ್ಳುವ ಈ ಮಾರ್ಗ ಮಧ್ಯಮ ಮಾರ್ಗವಾಗಿದೆ.

ಸಮಾಧಿಯ ಸ್ಥಿತಿಯಲ್ಲಿ ಅಗೀಗ ಉಳಿಯುವ ಸಿದ್ಧಪುರುಷರಿಗೆ ಆ ಸ್ಥಿತಿಯೇ ರೂಢಿಯಾಗಿ ಬಿಡುತ್ತದೆ. ಅವರು ಆ ಸ್ಥಿತಿಗೆ ಹೋಗಲು ಕಷ್ಟ ಕಾರ್ಪಣ್ಯ ಕೊಡುವ ಆಸನ ಕ್ರಮ ಬೇಕಿಲ್ಲ. ಮನಸ್ಸನ್ನು ಒಲಿಸಿಕೊಳ್ಳುವ ಧಾರಣ, ಧ್ಯಾನ ಕ್ರಮ ಅನುಸರಿಸಬೇಕಿಲ್ಲ. ಸಹಜವಾಗಿ ಸಮಾಧಿ ಸ್ಥಿತಿಗೇರುವರು. ಇದು ಸಹಜ ಸಮಾಧಿ. ಇದುವೇ ಉತ್ತಮ ಯೋಗ.

೫೬೦

ಮನಸುಬೂನಿಗೆಲ್ಲಿ ಮನಸುಲೋ ಸುಖಿಯಿಂಚಿ, ಕಡಕುಮೊಕ್ಷಪ ಗದಮುಗನುನುವಾಡು,
ಚಿಟ್ಟು ಬೆಟ್ಟ ಫಲಮು ಜೇಕೂರಕುಂಡನಾ? ವಿಶ್ವದಾಭಿರಾಮ ವಿನುರ ವೇಮ.

ಮನಸು ಹಿಡಿದು ಗೆದ್ದು, ಮನದೊಳು ಸುಖ ಹೊಂದಿ,
ಕೊನೆಗೆ ಮೋಕ್ಷ ಪದವಿ ಕಾಣುತಿಹನು.
ಗಿಡ ನೆಡುವ ಫಲದ ಗೊಳೆಯ ಪಡೆದುಕೊಳನೆ?
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ಬಾಹ್ಯ ವಸ್ತುಗಳಿಂದ ಆಕರ್ಷಿತವಾಗದಂತೆ ಎಚ್ಚರ ವಹಿಸಬೇಕು. ಇಂಥ ಆಕರ್ಷಣೆಯಿಂದ ಆಸಕ್ತಿ ಉಂಟಾಗುತ್ತದೆ. ಆಸಕ್ತಿಯಿಂದ ಚಿಂತೆ; ಚಿಂತೆಯಿಂದ ಪಾಪ ಮಾಡುವ ಪ್ರವೃತ್ತಿ; ಉಂಟಾಗುತ್ತದೆ. ಬ್ರಹ್ಮ ವಸ್ತು ರೂಪಾಂತರ ಹೊಂದಿ ಸೂಕ್ಷ್ಮದಿಂದ ಸ್ಥೂಲವಾಗುತ್ತ ಹೋಗುತ್ತದೆ. ಕೊನೆಗೆ ಅಣುವಾಗುವುದು. ಇದು ಸಂಚಾರ. ಇಲ್ಲಿಂದ ಮುರಳಿ ಏಕಾಣು ಜೀವಿ, ಚಿತ್ತವುಳ್ಳ ಜೀವಿ, ಚಿತ್ತಬುದ್ಧಿಯುಳ್ಳ ಜೀವಿಯ ಸ್ಥಿತಿಗೆ ಹೋಗಿ, ಅಲ್ಲಿಂದ ಮಮಕಾರ, ಅಹಂಕಾರ ಸ್ಥಿತಿಯ ವರೆಗೆ ಮನಸ್ಸು ಸೂಕ್ಷ್ಮಗೊಳಿಸಿ, ಶುದ್ಧಗೊಳಿಸಿ. ಮುಂದೆ ಸಮಾಧಿಯ ಸ್ಥಿತಿಗೇರುವನು. ಅಲ್ಲಿ ಸವಿಕಲ್ಪ, ಸಾಲೋಕ್ಯ ಸಾಮೀಪ್ಯ, ಸಾಯುಜ್ಯ ಮತ್ತು ಕೊನೆಗೆ ನಿರ್ವಿಕಲ್ಪ ಸಮಾಧಿ ಸ್ಥಿತಿ ಮುಟ್ಟುವನು. ಇದೆಲ್ಲ ಮನೋನಿಗ್ರಹದಿಂದ ಮನೋವಿಕಾಸದಿಂದ ಸಾಧ್ಯ. ಸಾಧನದಿಂದ ಮನಸ್ಸು ಅವಿದ್ಯಾ

ಮಯ ಶಕ್ತಿಯಿಂದ ವಿದ್ಯಾಮಯ ಶಕ್ತಿಯ ಪ್ರಭಾವವಲಯದಲ್ಲಿ ಬಂದರೆ, ಮನಸ್ಸಿನ ಮುಕ್ತಿ ಎನ್ನುವರು. ಆದರೆ ಕುಲಕುಂಡಾಲಿನಿ ಶಕ್ತಿಯನ್ನು ಮೂಲಾಧಾರದಿಂದ ಹೊರಡಿಸಿ, ಅವಿದ್ಯಾಮಯ ಶಕ್ತಿಯನ್ನು ಎದುರಿಸಿ ಅನಂತ ಪ್ರಜ್ಞೆ ಪಡೆಯುವುದೇ ಮೋಕ್ಷ.

ಸಾಧನೆ ಮಾಡುವವನಿಗೆ ಸಿದ್ಧಿ ಲಭ್ಯವಾಗುವುದು. ಗಿಡ ನೆಡುವವನು ಫಲ ಪಡೆದುಕೊಂಡಂತೆ. ಬಿತ್ತಿದವನು ಬೆಳೆಯನ್ನು ಒಕ್ಕುವಂತೆ.

೫೬೧

ಮಾಟಲಾಡವಚ್ಚು ಮನಸು ನಿಲ್ಪಗರಾದು, ತೆಲುಪವಚ್ಚು ದನ್ನು ದೆಲಿಯರಾದು,
ಸುರಿಯು ಬಟ್ಟವಚ್ಚು ಶೂರುಡುಗಾರಾದು. ವಿಶ್ವದಾಭಿರಾಮ ವಿನುರ ವೇಮ.

ಮಾತನಾಡಬಹುದು, ಮನವ ನಿಲಿಸಲಿಲ್ಲ.
ತಿಳಿಸಬಹುದು, ತನ್ನ ತಿಳಿಯಲಾರ.
ಚೂರಿ ಹಿಡಿಯಬಹುದು ಶೂರನಾಗಲಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ತಾನು ಓದಿಕೊಂಡ ಶಾಸ್ತ್ರದ ಬಗೆಗೆ ಬಹಳಷ್ಟು ಮಾತನಾಡಬಹುದು. ಪ್ರವಚನ ನೀಡಬಹುದು. ಆತ್ಮದ ಸ್ವರೂಪ ಹಾಗೆ ಹೀಗೆ ಎಂದು ಕೇಳಿ-ತಿಳಿದು ಇನ್ನೊಬ್ಬರಿದುರು ಹೇಳಬಹುದು. ಆದರೆ ಆತ್ಮ ಸ್ವರೂಪ ಓದಿ, ಕೇಳಿ ಇನ್ನೊಬ್ಬರಿಗೆ ಹೇಳುವುದರಿಂದ ತನಗೇನೂ ಲಾಭವಿಲ್ಲ. ಆನಂದವಿಲ್ಲ; ಮುಕ್ತಿಯಿಲ್ಲ. ತನ್ನನ್ನು ತಾನು ಗುರುತಿಸಿಕೊಂಡರೆ ತನ್ನ ಮನಸ್ಸಿನಲ್ಲಿ ಮುಕ್ತಿಯ ಅರಿವು ಮೂಡಬಹುದು. ನಿತ್ಯಾನಂದ ದೊರೆಯಬಹುದು.

ಕೇವಲ ವೇದಶಾಸ್ತ್ರದ ಜ್ಞಾನವು ಭಟನ ಕೈಯಲ್ಲಿಯ ಚೂರಿಯಂತೆ. ಭಟನ ಹತ್ತಿರ ಚೂರಿ ಇರುವಷ್ಟರಿಂದ ಅವನ ಬಂಟತನ ವ್ಯಕ್ತವಾಗದು. ಅವನಿಗೂ ತನ್ನ ಧೈರ್ಯದ ತಿಳಿವು ಮೂಡದು. ಚೂರಿಯ ಉಪಯೋಗ ಮಾಡಿದವನು ಮಾತ್ರ ಶೂರನಾಗಬಹುದು.

(ಮುಂಡಕೋಪನಿಷತ್ತಿನ ಅಭಿಪ್ರಾಯ ನೋಡಿರಿ : " ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ | ಯಮೇ ವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ಸ್ವಾಮ್ ॥ "

ಈ ಆತ್ಮ, ಪ್ರವಚನದಿಂದ, ಇಲ್ಲವೆ ಪಾಂಡಿತ್ಯದಿಂದ ಇಲ್ಲವೆ ಬಹಳಷ್ಟು ವೇದ ಶಾಸ್ತ್ರ ಹೇಳುವುದರಿಂದ ತಿಳಿಯಲಾರದು. ಆತ್ಮದಿಂದ ಮಾತ್ರ ಆತ್ಮವು ದೊರೆಯುವುದು. ಸಾಧಕನ ಆತ್ಮವೇ ತನ್ನ ಪಾರಮಾರ್ಥಿಕ ಸ್ವರೂಪವನ್ನು ಪ್ರಕಾಶಿಸುವುದು.

೫೬೨

ಗುರುವು ಚಿಲ್ಲಪಿಂಜ ಕುಂಭವೀದೇಹಂಬು, ಆತ್ಮ ಕಲುಷಪಂಕ ಮಡುಗುಬಟ್ಟ,
ತೆಲಿಸಿವಿರಿಸೆನೇನಿ ದಿವ್ಯಾಮೃತಮು ತೇರು, ವಿಶ್ವದಾಭಿರಾಮ ವಿನುರ ವೇಮ.

ಗುರುವು ಕತಕ ಬೀಜ ಕುಂಭದಂತೆ ದೇಹ
ಆತ್ಮಕಲುಷ, ರಾಡಿ, ಆಳಕಿಳಿಯೆ,
ತಿಳಿದುವಿಂಗಡಿಸಲು ದಿವ್ಯಾಮೃತದುದಯ.
ವಿಶ್ವದಾಭಿರಾಮ ಕೇಳು ವೇಮ.

' ಕತಕ ಕಾಯಿ 'ಯನ್ನು ನೀರು ಶುದ್ಧಗೊಳಿಸಲು ಉಪಯೋಗಿಸುತ್ತಾರೆ. ಆತ್ಮವೇ ನೀರು. ಅವಿದ್ಯೆಯೇ ರಾಡಿ. ದೇಹವು ಮಡಿಕೆ. ಗುರುವು ಕತಕ ಬೀಜ.

ಕತಕ ಬೀಜವನ್ನು ನೀರಿನಲ್ಲಿ ಕರೆತಲಾಮಲಕ ಮಾಡುವುದರಿಂದ ಅದರಲ್ಲಿರುವ ಕಲ್ಮಶವು ಹೋಗಿ ನೀರು ಶುದ್ಧವಾಗುತ್ತದೆ. ಮಡಿಕೆಯೂ ಮಣ್ಣು. ಕಲ್ಮಶವೂ ಮಣ್ಣು ಶುದ್ಧವಾದ ನೀರು ಮಣ್ಣಿನಿಂದ ಬೇರಾಗುವುದು. ಆಗ ಮಡಿಕೆಯ ಯಾವ ಅಂಶವೂ ನೀರಿನಲ್ಲಿ ಉಳಿಯುವದಿಲ್ಲ. ನೀರು ಮಡಿಕೆ ಪೂರ್ಣ ಭಿನ್ನವಾದವು, ಎಂಬ ತಿಳಿವಳಿಕೆ ಬರುತ್ತದೆ.

ಗುರುವಿನ ಉಗದೇಶದಿಂದ ಜ್ಞಾನ ದೊರೆಯುವುದು. ಜ್ಞಾನದಿಂದ ಪ್ರಪಂಚವೇ ಸತ್ಯ ಎಂಬ ಅವಿದ್ಯೆ ತೊಲಗುವುದು. ಆತ್ಮವನ್ನು ಅದರ ರೂಪದಲ್ಲಿ ಕಾಣದಂತೆ ಮಾಡಿದ ಅವಿದ್ಯೆ, ಕಲ್ಮಶ ಹೋದಮೇಲೆ, ಆತ್ಮ ಬೇರೆ, ದೇಹ ಬೇರೆ; ಎಂಬುದು ಅರಿವಾಗುತ್ತದೆ. ಆತ್ಮ ಸತ್ಯವೆನಿಸುತ್ತದೆ, ಅದರ ಅಮೃತತ್ವ ಗೋಚರಿಸುವುದು.

ಆತ್ಮ ಅವಿನಾಶಿ ಅಮರ. ಆತ್ಮವು ದೇಹ ಸಂಬಂಧ ಪಡೆಯುವುದು ಕೆಲಕಾಲ. ದೇಹ ನಶ್ವರ. ಆತ್ಮದೃಷ್ಟಿಯಲ್ಲಿ ಅಮೃತತ್ವವಿದೆ. ಆತ್ಮವು ಮರಣಾತೀತವೆಂಬ ತಿಳಿವಳಿಕೆಯೇ ದಿವ್ಯಾಮೃತದುದಯ.

೫೬೩

ಜೀವಿ ಲೋನನುಂಡು ಸ್ಥಿರಮುನುಗಾನಕ, ತಿರುಗುನಸ್ಥಿರಂಬು ವರುಸನಮ್ಮ,
ಸ್ಥಿರಮುನ ಸ್ಥಿರಮುನು ದೆಲಿಯ ಜೀವಿಕಿ ಮುಕ್ತಿ, ವಿಶ್ವದಾಭಿರಾಮ ಕೇಳು ವೇಮ.

ಜೀವಿಯೊಳಗಿರುವ ಸ್ಥಿರವನ್ನು ಕಾಣದೆ,
ತಿರುಗುತಿಹನಸ್ಥಿರ ತೆರನ ನಂಬಿ
ಸ್ಥಿರವನಸ್ಥಿರವನು ತಿಳಿಯೆ, ಜೀವಿ ಮುಕ್ತ
ವಿಶ್ವದಾಭಿರಾಮ ಕೇಳು ವೇಮ.

(ಶರೀರೇಂದ್ರಿಯಗಳ ಪಂಜರಕ್ಕೆ ಅಧ್ಯಕ್ಷನಾದ ಕರ್ಮಫಲಸಂಬಂಧಿಯಾದ ಜೀವವೇ ವಿರತವಾದಾಗ ಆತ್ಮದ ಜೀವನು ಹುಟ್ಟುವುದಿಲ್ಲ. ಅವನು ನಿತ್ಯ. ಜೀವನು ಶರೀರ ಮನಸ್ಸುಗಳ ಉಪಾಧಿಯಿಂದ ಲಯ ಹೊಂದುವಂತೆ ತೋರುತ್ತಾನೆ, ಆಕಾಶವು ಗಡಿಗೆಯ ಉಪಾಧಿಯಿಂದ, ಒಳಗಿನ ಆಕಾಶ ಮತ್ತು ಹೊರಗಿನ ಆಕಾಶ ಎನ್ನಿಸುವಂತೆ, ಶರೀರ ಮನಸ್ಸುಗಳ ಉಪಾಧಿಗಳಿಂದಾಗಿ ಜೀವ ಬ್ರಹ್ಮ ಭಿನ್ನವೆಂದು ಎನ್ನಿಸುವುದು.

'ಈ ಆತ್ಮನು ಪ್ರಜ್ಞಾನ ಘನನು; ಆತ್ಮನ ಭಿನ್ನತೆಯು ಈ ಪಂಚಭೂತಗಳಿಂದಾಗಿ ಭೂತ ವರ್ಗದಲಯದೊಂದಿಗೆ ತಾನೂ ಲಯವಾಗುತ್ತದೆ, ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದೆ. ಅವಿಕಾರಿಯಾದ ಬ್ರಹ್ಮವೇ ಜೀವಭಾವ ಹೊಂದಿದೆ.)

ಜೀವಿಯೊಳಗಿರುವ ಆತ್ಮ ಸ್ಥಿರವಾದದ್ದು. ಆತ್ಮಕ್ಕೆ ಉಪಾಧಿಯಾಗಿರುವ ದೇಹ ಅಸ್ಥಿರವಾದದ್ದು. ಉಪಾಧಿಯಿಂದಾಗಿ ಆತ್ಮವು ಜೀವಕ್ಕಿಂತ ಭಿನ್ನವೆನ್ನಿಸುವುದು. ಉಪಾಧಿ ಕಳೆಯಲು, ಜೀವವೇ ಆತ್ಮವೆನ್ನಿಸುವುದು. ಜ್ಞಾನದ ಸಂಕೋಚದಿಂದ ಈ ಜೀವಭಾವವುಂಟು. ಜ್ಞಾನದ ವಿಕಾಸದಿಂದ ಈ ಭಾವ ತೊಲಗಿ ಜೀವನೇ ಆತ್ಮವೆಂದು ತಿಳಿಯುವುದು. ಅದು ವರೆಗೆ ಜೀವಭಾವವನ್ನೇ ನಂಬಿ ನರನು ತಿರುತ್ತಿಗುರುತ್ತಾನೆ. ಸ್ಥಿರವಾದ ಆತ್ಮವರಿತೊಡನೆ ಅವನು ಮುಕ್ತನಾಗುವನು.

೫೬೪

ಗತಮುಜೂತಮುಂಟಿ ಕಲಗನ್ನಯರ್ಥಂಬು, ನಡುಚುಕಾಲಮೇಮಿ ನಮ್ಮರಾದು,
ಕ್ಷಣಮುಲೋನಿ ಬ್ರತುಕು ಸಂಸಾರ ವಿಭ್ರಾಂತಿ, ವಿಶ್ವದಾಭಿರಾಮ ವಿನುರ ವೇಮ.

ಕಳೆದ ದಿನ ನೆನೆವುದು ಕನಸಿನರ್ಥವಷ್ಟೆ.
ನಡೆವ ಕಾಲವೆಷ್ಟು ನಂಬ ಬೇಡ.
ಕ್ಷಣದೊಳಗಿನ ಬದುಕು, ಸಂಸಾರ ಭ್ರಾಂತಿ.
ವಿಶ್ವದಾಭಿರಾಮ ಕೇಳು ವೇಮ.

ಸ್ವಪ್ನಾವಸ್ಥೆಯಲ್ಲಿ ಬಾಹ್ಯ-ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಮಲಗಿದಂತಿರುತ್ತವೆ ಆದರೆ ಪ್ರಾಣಾಗ್ನಿಗಳು ಎಚ್ಚರವಾಗಿರುವವು. " ಈ ಜೀವಾತ್ಮನು ತನ್ನ ಸ್ವಪ್ನದಲ್ಲಿ ವೈಭವದ ಮಹಿಮೆಯನ್ನು ಅನುಭವಿಸುತ್ತಾನೆ. ಏಕೆಂದರೆ, ಯಾವುದನ್ನು ನೋಡಿದ್ದಾನೆಯೋ ಅದನ್ನೇ ನೋಡುತ್ತಾನೆ. ಯಾವುದನ್ನು ಕೇಳಿದ್ದಾನೆಯೋ ಅದನ್ನೇ ಕೇಳುತ್ತಾನೆ. ಯಾವುದನ್ನು ಬೇರೆ ಬೇರೆ ದೇಶಗಳಲ್ಲಿ, ದಿಕ್ಕುಗಳಲ್ಲಿ ಅನುಭವಿಸಿದ್ದಾನೆಯೋ ಅದನ್ನೇ ಪುನಃ ಪುನಃ ಅನುಭವಿಸುತ್ತಾನೆ. " (ಪ್ರಶ್ನೋಪನಿಷತ್ ೪-೬-೫.) ಹಿಂದಿನ ದಿನವನ್ನು ನೆನೆಯುವುದೆಂದರೆ ಕನಸಿನಂತೆ ಅಲ್ಲವೇ ?

ನಮ್ಮ ಪ್ರಾರಬ್ಧ ಕರ್ಮಫಲಗಳನ್ನು ಭೋಗಿಸಿ ಕ್ಷಯಿಸಲು ಇರುವಷ್ಟು ಕಾಲ ಉಪಯೋಗಿಸಿಕೊಳ್ಳಬೇಕು. ಹೆಚ್ಚಿನ ಕರ್ಮ ಸಂಚಯವಾಗದಂತೆ, ಅದೇ ವೇಳೆಗೆ ಎಚ್ಚರವಹಿಸಿ, ನಿಷ್ಕಾಮ ಕರ್ಮ ಸೇವೆಗೆ ತೊಡಗಬೇಕು. ಆತ್ಮಜ್ಞಾನ ಮಾಡಿಕೊಳ್ಳಬೇಕು.

ಬ್ರಹ್ಮಪ್ರಾಪ್ತಿಯಾಗುವ ವರೆಗೆ ಮಾತ್ರ ಸಂಸಾರ ಎಂದು ಉಪನಿಷತ್ತು ಹೇಳುತ್ತಿವೆ. ಸಂಸಾರವು ಕೇವಲ ವಿಭ್ರಾಂತಿಯಂತೆ. ಇದನ್ನರಿತರೆ ಬ್ರಹ್ಮಪ್ರಾಪ್ತಿಯಾಗುವ ವರೆಗಿನ ಕಾಲಕ್ಕೆ ತುಲನೆ ಮಾಡಿದರೆ, ಬದುಕೆಲ್ಲ ಕ್ಷಣ ಸಮಾನವಾಗಬಹುದು.

೫೬೫

ತಾನನಂಗನೆವರು ? ತನವಾರನನೆವರು ? ತೆಲಿಸಿ ತೆಲಿಯಲೀರು ತಿಕ್ಕನರುಲು.
ಅರಯ ಬಸಿರಿ ಕಾಯಪುರುಗು ಪದ್ಧತಿಗಾಗ, ವಿಶ್ವದಾಭಿರಾಮ ವಿನುರ ವೇಮ.

ತಾನೆನುವುದು ಯಾರು ? ತನ್ನವರಿಹರಾರು ?
ತಿಳಿದು ತಿಳಿಯದಿಹರು ತುಚ್ಛ ಜನರು.
ತಿಳಿಯಲಾಗ ರೇಶ್ಮೆ ಹುಳದ ನೀತಿ ಕಣಾ
ವಿಶ್ವದಾಭಿರಾಮ ಕೇಳು ವೇಮ.

'ನಾನು, ಯಾರು? ಈ ದೇಹದಲ್ಲಿ 'ನಾನು' ಇರುವುದರಿಂದ ಈ ದೇಹ ನಾನಲ್ಲ. ಹಾಗಾದರೆ, ಮನಸ್ಸು ನಾನೇ? ಮನಸ್ಸು ಪಂಚ ಭೂತಗಳಿಂದ ಆಗಿದ್ದು ಇಲ್ಲವಾಗುವುದು? 'ನಾನು' ಎನ್ನುವುದು, ಬ್ರಹ್ಮಜ್ಞಾನವಾಗುವ ವರೆಗೆ ಮಾತ್ರ ಉಳಿದಿರುತ್ತದೆ. ಬಹ್ಮಜ್ಞಾನವಾದಾಗ 'ಅಹಂ, ಭಾವ ನಾಶವಾಗಿರುತ್ತದೆ.

ಇನ್ನು ತನ್ನವರು ಯಾರು? ಬಂಧು ಬಳಗ ತನ್ನವರೇ? ಹೆಂಡಿರು ಮಕ್ಕಳು ತನ್ನವರೇ;? ಧನ ಕನಕ ತನ್ನವೇ? ಇವು ಯಾವವೂ ನಮ್ಮೊಡನೆ ಬರುವುದಿಲ್ಲ. ಬಿದ್ದು ಹೋಗುವ ದೇಹದೊಂದಿಗೆ ಅವುಗಳ ಸಂಬಂಧವಷ್ಟೇ. ಕಷ್ಟ ಕಾಲದಲ್ಲಿ ಈ ಸಂಬಂಧವೂ ಉಳಿಯದೆ ಹೋಗಬಹುದು.

ಇದೆಲ್ಲ ಜನರಿಗೆ ಗೊತ್ತು. ಆದರೂ ಅರಿಯದಂತೆ ಅವುಗಳಲ್ಲಿಯೇ ಆಸಕ್ತಿ ತಾಳಿ ವರ್ತಿಸುತ್ತಾರೆ. ಇದು ಜನರ ಕೇಳು ಅಭಿರುಚಿ ತೋರುತ್ತದೆ.

ರೇಶ್ಮೆಯ ಹುಳು ನೋಡಿರಬಹುದು. ಅದು ತೊಪ್ಪಲು ತಿನ್ನುತ್ತದೆ. ಅದರಿಂದ ಒಂದು ತರದ ರಸ ಉಂಟಾಗುವುದು. ಆ ರಸದಿಂದ ತನ್ನ ಮೈಯ್ಯ ಸುತ್ತ ರೇಶ್ಮೆಎಳೆ ಸುತ್ತುತ್ತದೆ. ರೇಶ್ಮೆ ಮೊಟ್ಟೆಯಾಗಿ ಹುಳು ಒಳಗೆ ಸಿಕ್ಕು ತೊಳಲುತ್ತದೆ. ತಾನು ಯಾರೆಂದು ತಿಳಿಯದೆ, ಬಂಧು-ಮಿತ್ರರು, ಹಿತ ಸಂಬಂಧಿಗಳು ಮೋಹದಲ್ಲಿ ಸಿಕ್ಕು ಚಿಂತೆಯಿಂದ ತೊಳಲಾಡುವವನೂ ರೇಶ್ಮೆ ಹುಳದಂತೆ ಜೀವಿಸುವನು.

೫೬೬

ಚಚ್ಚೆ, ಚಚ್ಚೆನನುಚು ಜಾವು ಕುವಗಚೇಡು. ದೀನ ನರುಲವೆರ್ರಿ ದೆಲುಪರಾದು,
ಪ್ರಾಣಿಕರಯ ಮೃತು ಬಂಧಂಬು ಲುಂಡುನಾ; ವಿಶ್ವದಾಭಿರಾಮ ವಿನುರ ವೇಮ.

ಸತ್ತೆ ಸತ್ತೆಯೆಂದು ಸಾವಿಗಂಜೆ ಕೇಡು,
ದೀನ ಜನರ ಹುಚ್ಚು ತಿಳಿಸೆ ಕಠಿಣ.
ಮೃತ್ಯು ಬಂಧವುಂಟು ಮತ್ತೆ ಪ್ರಾಣಿಗೆಲ್ಲ
ವಿಶ್ವದಾಭಿರಾಮ ಕೇಳು ವೇಮ.

('ಜಾತಸ್ಯ ಹಿ ಧ್ರುವೋ ಮರಣಂ' ಹುಟ್ಟಿದವನಿಗೆ ಮರೆಣ ನಿಶ್ಚಿತ. ಎಂದು ಭಗವದ್ಗೀತೆ ಸಾರುತ್ತಿದೆ. ನಮ್ಮ ಕರ್ಮಗಳನ್ನು ಸಂಚಿತ, ಪ್ರಾರಬ್ಧ ಮತ್ತು ಆಗಮಿ ಎಂದು ಮೂರು ಭಾಗವಾಗಿ ಮಾಡುತ್ತಾರೆ. ಪೂರ್ವ ದೇಹ ಸಂಬಂಧದಿಂದ ಕೂಡಿಬಿದ್ದ ಕರ್ಮಗಳು ಸಂಚಿತ ಕರ್ಮಗಳು. ಅನುಭವಿಸಬೇಕಾದ ಕರ್ಮಗಳು ಪ್ರಾರಬ್ಧ ಕರ್ಮಗಳು. ಕರ್ಮಗಳಲ್ಲಿ ಅಂಶತಃ ಸಂಚಿತ ಕರ್ಮಗಳೂ ಉಂಟು. ಮುಂದೆ ಅಂಟಬಹುದಾದ ಕರ್ಮಗಳು ಆಗಮಿ ಕರ್ಮಗಳು. ಕರ್ಮ ಫಲಗಳೇ ಪುಣ್ಯಪಾಪಗಳು.

ಪ್ರಾರಬ್ಧ ಕರ್ಮಗಳ ಭೋಗವು ಒಂದೇ ಶರೀರದಲ್ಲಿ ಕ್ಷಯವಾಗುವುದಾದರೆ ಆ ಶರೀರದ ಅವಸಾನದಲ್ಲಿಯೇ ಮೋಕ್ಷವಾಗುತ್ತದೆ, ಇಲ್ಲವಾದರೆ, ಪ್ರಾರಬ್ಧ ಕರ್ಮಗಳು ಕ್ಷಯಿಸುವ ವರೆಗೆ ಬೇರೆ ಬೇರೆ ಶರೀರ ಹೊಂದಬೇಕಾಗುವುದು. ಆತ್ಮ ಜ್ಞಾನವಾದರೆ, ಮಿಥ್ಯಾ ಜ್ಞಾನವಿರುವದಿಲ್ಲ. ಕರ್ಮಬೀಜ ಸುಟ್ಟಂತೆ. ಕಾರಣ ಜ್ಞಾನಿಗೆ ಅನಂತರ ಪ್ರಾರಬ್ಧ ಕರ್ಮದ ಹೆಚ್ಚುವರಿಯಿಲ್ಲ.)

ಜನನ-ಮರಣಗಳ ಕಾರಣವನ್ನೂ ಕ್ರಮವನ್ನೂ ತಿಳಿಯದುದರಿಂದ ಜನರು ಸಾಯುವೆನಲ್ಲಾ ! ಎಂದು ಭೀತರಾಗುತ್ತಾರೆ. ಪಾಪ! ಈ ಅಜ್ಞ ಜನರಿಗೆ ಜನನ ಮರಣಗಳ ಗೂಢವನ್ನು ತಿಳಿಸುವುದು ತುಂಬಾ ಕಠಿಣ. ಆ ಗಡುಚಾದ ವಿಷಯವನ್ನು ಗ್ರಹಿಸುವ ಶಕ್ತಿಯೂ ಅನೇಕರಿಗೆ ಇಲ್ಲದಿರಬಹುದು. ಹುಟ್ಟಿದ ಪ್ರಾಣಿಗಳಿಗೆಲ್ಲ ಮರಣದ ಕಟ್ಟು ಇದ್ದೇ ಇದೆ, ಎಂದು ಮಾತ್ರ ಅವರು ತಿಳಿದರೆ ಸಾಕು.

೫೬೭

ಜನನಮರಣಮುಲಕು ಸರಿಸ್ವತಂತ್ರುಡುಕಾಡು, ಮೊದಟಗರ್ತ ಕಾಡು ತುದನುಗಾಡು,
ನಡುವ ಗರ್ತ ನನುಟ ನಗುಬಾಟುಕಾದೊಕೋ ವಿಶ್ವದಾಭಿರಾಮ ವಿನುರ ವೇಮ.

ಜನನಮರಣಗಳಿಗೆ ಸರಿಸ್ವತಂತ್ರಲ್ಲ
ಮೊದಲು ಕರ್ತನಲ್ಲ ತುದಿಗು ಅಲ್ಲ.
ನಡುವೆ ಕರ್ತನೆನಲು ನಗುಪಾಟಲು ನೋಡು
ವಿಶ್ವದಾಭಿರಾಮ ಕೇಳು ವೇಮ.

(ಅನ್ನವು ಪಾಚಕ ದ್ರವದಲ್ಲಿ ಸೇರಿ, ರಸವಾಗುತ್ತದೆ. ರಸದಿಂದ ರಕ್ತ, ರಕ್ತದಿಂದ ಮಾಂಸ, ಮಾಂಸದಿಂದ ಮೇಧಸ್ಸು, ಮೇಧಸ್ಸಿನಿಂದ ಅಸ್ಥಿ ಅಸ್ಥಿಯಿಂದ ಶುಕ್ರ [ರಸ] ತಯಾರಾಗುತ್ತವೆ. ಶುಕ್ರರಸ ತುಂಬಾ ಮಹತ್ವದ್ದು. ಇದರಿಂದ ಪ್ರಾಣರಸ, ಬಿಂದು ರಸವು ಸ್ತ್ರೀ ಶರೀರದಲ್ಲಿರುವ ಲಸಿಕೆಯೊಂದಿಗೆ ಸೇರಿದಾಗ, ಭೌತಿಕ ಶರೀರ ನಿರ್ಮಾಣ ಪ್ರಾರಂಭವಾಗುತ್ತದೆ. ಈ ಭೌತಿಕ ಶರೀರದಲ್ಲಿ ಅದಕ್ಕೆ ಸರಿಹೊಂದುವ ಮನಸ್ಸು ಅನಂತ ಆಕಾಶದಿಂದ ಬಂದು ಸೇರುವುದು ಚಿತ್ತದ ಉಪಾಧಿಯಿಂದ ' ಬ್ರಹ್ಮ ' ' ಜೀವ 'ವೆನಿಸುವದು. ಇದುವೇ ಜನನ.

ಶರೀರದ ಯಾವುದೊಂದು ಭಾಗಕ್ಕೆ ಬಾಧೆಯಾದೊಡನೆ ಶರೀರದಲ್ಲಿರುವ ಪ್ರಾಣ, ಅಪಾನ, ಸಮಾನ ವಾಯುಗಳಲ್ಲಿ ಹೊಂದಾಣಿಕೆ ತಪ್ಪುವದು. ನಾಭಿಸ್ಥಾನದಲ್ಲಿ ಈ ವಾಯುಗಳ ತಾಕಲಾಟ ನಡೆದು ನಾಭಿಶ್ವಾಸವೆನಿಸುವದು. ಆಗ ಸಮಾನ ವಾಯು ಶಕ್ತಿಗುಂದುವದು. ಮುಂದೆ ಪ್ರಾಣ-ಅಪಾನ-ಸಮಾನ ವಾಯುಗಳು ಉದಾನದ ಮೇಲೆ ಒತ್ತಡ ತಗುವವು. ಉದಾನ ಸ್ವಂತ ಅಸ್ತಿತ್ವ ಕಳೆದುಕೊಳ್ಳುವದು. ಆ ಮೇಲೆ ವ್ಯಾನವೂ ಇವುಗಳೊಂದಿಗೆ ಸೇರಿ, ಹೊರ ಹೋಗುವವು. ಇದುವೇ ಮರಣ.

ಹೀಗೆ ಜನನ ಮರಣ ಕ್ರಿಯೆಯ ಮೇಲಾಗಲಿ ಅವು ಘಟಿಸುವ ಕಾಲದ ಮೇಲಾಗಲಿ, ನಿಯಂತ್ರಣವಿಲ್ಲ. ಅದು ವಿಧಿ ನಿಯಮದಂತೆ ನಡೆಯುವದು. ಜನನ-ಮರಣಗಳನ್ನು ತಪ್ಪಿಸುವ, ಇಲ್ಲವೆ ಅಪ್ಪುವ, ಸ್ವಾತಂತ್ರ್ಯ ಯಾರಿಗೂ ಇಲ್ಲ. ಜನನ ಪೂರ್ವದಲ್ಲಾಗಲಿ, ಮರಣಾನಂತರದಲ್ಲಾಗಲಿ ಸಹ, ಅವುಗಳನ್ನು ನಿರ್ಧರಿಸುವ ಸ್ವಾತಂತ್ರ್ಯವಿಲ್ಲ. ಅಂದ ಮೇಲೆ ಈ ಶರೀರದ ಸಂಬಂಧವಿರುವಾಗ ಬಂದ, ಜೀವಭಾವದಿಂದ ಮರಣವನ್ನು ತಪ್ಪಿಸಲೆಳಸುವದು ಮೂಢತನ. ಮರಣ ತಪ್ಪಿಸಿಕೊಳ್ಳುವ ಆಶೆ ಕೇವಲ ಹಾಸ್ಯಕರವಾಗಿದೆ.

೫೬೮

ಬ್ರಹ್ಮಮೇಡನನುಚು ಬಲುಮಾರ ನಂದುರು, ವೆರ್ರಿಮೂರ್ಖಜನುಲು ವಿಧಮೆರುಗಕ,
ಬ್ರಹ್ಮಮನ್ನಿಟಂದು ಬರಿಪೂರ್ಣಮೈಯ ಂಡು, ವಿಶ್ವದಾಭಿರಾಮ ವಿನುರ ವೇಮು.

ಬ್ರಹ್ಮನೆಲ್ಲಿಯೆಂದು ಬಲುಬಾರಿಯೆನುವರು;
ವಿಚಿತ್ರ ಮತಿ ಜನರು ವಿಧವರಿಯದೆ,
ಬ್ರಹ್ಮವೆಲ್ಲರಲ್ಲಿ ಪರಿಪೂರ್ಣವುಂಟಲ !
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮನೆಲ್ಲಿ ? ಎಂದು ಜನರು ಪುನರಪಿ ಶಂಕಿಸುತ್ತಾರೆ. ಬ್ರಹ್ಮ ಸ್ವರೂಪವನ್ನು ತಿಳಿಯುವ ರೀತಿ ಅರಿಯದ ಮೂರ್ಖರು ಕೆಲವರು; ತಿಳಿಸಿದರೂ ತಪ್ಪಾಗಿ ಭಾವಿಸುವ ಹುಚ್ಚರು ಕೆಲವರು; ಅಷ್ಟೇ.

('ಈಶಾವಾಸ್ಯಂ ಇದಂ ಸರ್ವಂ' ಅಂದರೆ ಈ ಸಮಸ್ತ ಜಗತ್ತು ಪರಬ್ರಹ್ಮನಿಂದ ವ್ಯಾಪ್ತವಾಗಿದೆ. ಎಂದು ಈಶಾವಾಕ್ಯೋಪನಿಷತ್ತು ಸಾರುತ್ತಿದೆ. ಬ್ರಹ್ಮವಿಲ್ಲದ ಜಗತ್ತೇ ಇಲ್ಲ. ಇದನ್ನು ಕುರಿತು ಚಿಂತಿಸಿದಷ್ಟೂ ಸತ್ಯ ಗೋಚರಿಸುವುದು. ಇದನ್ನು ಅರಿಯದವರು ಮೂಢರು. ಅಲ್ಲಗಳೆಯುವವರು ಹುಚ್ಚರಷ್ಟೇ)

ಬ್ರಹ್ಮ ಎಲ್ಲರಲ್ಲಿ ಉಂಟು. ಇಷ್ಟೇ ಅಲ್ಲ, ಪರಿಪೂರ್ಣವಾಗಿ ಉಂಟು.
(ಅದೇ ಉಪನಿಷತ್ತಿನಲ್ಲಿ ಇನ್ನೂ ಹೀಗೆ ಹೇಳಲಾಗಿದೆ.
ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ !
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಇದೂ ಪೂರ್ಣ; ಮತ್ತು ಅದೂ ಪೂರ್ಣ. ಪೂರ್ಣವಾದುದು ಪೂರ್ಣವಾದುದರಿಂದ ಬಂದಿದೆ, ಆದರೂ ಪೂರ್ಣವಾದ ಅದು ಮೊದಲಿನಂತೆ ಪೂರ್ಣವಾಗಿಯೇ ಉಳಿಯುವದು.

ಪರಿಪೂರ್ಣವಾದ ಪರಮಾತ್ಮ ಮೂಲದಿಂದ ಪೂರ್ಣವಾದ ಆತ್ಮವಾಗಿದ್ದು, ಪರಮಾತ್ಮ ಎಲ್ಲೆಡೆ ಉಂಟು.)

೫೬೯

ಪಸುಲವನ್ನೆ ವೇರು ಪಾಲೆಲ್ಲನೊಕ್ಕಟೀ, ಪುಷ್ಪಜಾತಿವೇರು ಪೂಜಯೊಕಟ
ದರ್ಶನಂಬುವೇರು ದೈವಂಬದೊಕ್ಕಟೀ, ವಿಶ್ವದಾಭಿರಾಮ ವಿನುರ ವೇಮು.

ಹಸುಗಳಂದ ಬೇರೆ ಹಾಲು ಎಲ್ಲ ಒಂದೆ;
ಪುಷ್ಪಜಾತಿ ಬೇರೆ ಪೂಜೆಯೊಂದೆ;
ದರ್ಶನಗಳು ಬೇರೆ ದೈವವೆಂಬುದೊಂದೆ.
ವಿಶ್ವದಾಭಿರಾಮ ಕೇಳು ವೇಮ.

ಆಕಳುಗಳ ಬಣ್ಣ ಬೇರೆ ಬೇರೆ ಇರಬಹುದು. ಕಪ್ಪು, ಬಿಳಿ, ಕೆಂಪು ಇರಬಹುದು. ಆದರೆ ಎಲ್ಲ ಬಣ್ಣದ ಆಕಳು ಕರೆಯುವ ಹಾಲು ಮಾತ್ರ ಒಂದೇ ಬಣ್ಣದ್ದು; ಬಿಳಿ ಬಣ್ಣದ್ದು.

ಹಲವು ಜಾತಿಯ ಹೂವು ತರಬಹುದು; ಮಲ್ಲಿಗೆ,ಸಂಪಿಗೆ,ಜಾಜಿ ಇತ್ಯಾದಿ. ಆದರೆ ಹೂವಿನ ಜಾತಿ ಬೇರೆಯಾದರೂ ಮಾಡುವ ಪೂಜೆ ಒಂದೇ ರೀತಿ.

ಅದೇ ರೀತಿ ದೈವವು ಒಂದೇ. ಆದರೆ ದೈವ ಸ್ವರೂಪಾದಿ ತಿಳಿಸುವ 'ದರ್ಶನ'ಗಳು ಬೇರೆ ಬೇರೆ ಇರಬಹುದು. (ಕಣಾದ,ಅಕ್ಷಪಾದ,ಮತ್ತು ಜೈಮಿನಿ ಪ್ರಣೀತವಾದ ವೈಶೇಷಿಕ,ನ್ಯಾಯ,ಪೂರ್ವಮೀಮಾಂಸೆ ಎಂಬ ವೈದಿಕ ದರ್ಶನಗಳೂ ಕಪಿಲ,ಪತಂಜಲಿ ಮತ್ತು ವ್ಯಾಸ ಪ್ರಣೀತ ಸಾಂಖ್ಯ,ಯೋಗ ಮತ್ತು ವೇದಾಂತಗಳೆಂಬ ಆಧ್ಯಾತ್ಮಿಕ ದರ್ಶನಗಳೂ ಉಂಟು. ಇವು ಷಡ್ದರ್ಶನಗಳು. ಚಾರ್ವಾಕರ ಲೋಕಾಯತ ದರ್ಶನ,ಬೌದ್ಧರ ಬೌದ್ಧ ದರ್ಶನ, ಜೈನರ ಅರ್ಹತ ದರ್ಶನಾದಿಗಳೂ ಉಂಟು. ದರ್ಶನ ತರ್ಕಪ್ರಧಾನವಾದ ತಾತ್ತ್ವಿಕ ಸಂಪ್ರದಾಯ. ಭಾವನಾಪ್ರಧಾನವಾದುದು ಮತ.)

' ಏಕಂ ಸದ್ವಿಪ್ರಾ ಬಹುಧಾ ವದಂತಿ ' (ಓರ್ವ ದೇವನನ್ನೇ ಪ್ರಾಜ್ಞರು ಬಹುಪರಿಯಾಗಿ ಹೇಳುತ್ತಾರೆ.) ಎಂದು ಋಗ್ವೇದವೂ ಸಾರುತ್ತದೆ.

೫೭೦

ಪನಿತೊಡವುಲುವೇರು ಬಂಗಾರವೊಕ್ಕಟೀ ಪರಗ ಘಟಮುವೇರು ಪ್ರಾಣವೊಕಟಿ,
ಅರಯದಿಂಡ್ಲು ವೇರ ದಾಕಲಿಯೊಕ್ಕಟೀ ವಿಶ್ವದಾಭಿರಾಮ ವಿನುರ ವೇಮು.

ಬಯಸಿದೊಡವೆ ಬೇರೆ, ಬಂಗಾರವು ಒಂದೆ;
ಪರಿಕಿಸೆ ಘಟ ಬೇರೆ, ಹರಣವೊಂದೆ.
ಹಲವು ತಿಂಡಿ ಬೇರೆ, ಹಸಿವು ಅರಿಯಲೊಂದೆ,
ವಿಶ್ವದಾಭಿರಾಮ ಕೇಳು ವೇಮ.

ಭಂಗಾರ ದ ಘಟ್ಟಿಯೊಂದು. ಅದರಿಂದ ಕೊರಳು ಹಾರ, ಕರ್ಣಾಭರಣ, ಮೂಗಿನ ನತ್ತು, ಹಸ್ತಾಭರಣ ಇತ್ಯಾದಿ ತಯ್ಯಾರಿಸಬಹುದು. ಅವರವರೆ ವಿವಿಧ ಬಯಕೆಗಳನ್ನುನು ಸರಿಸಿ. ಅದೇರೀತಿ, ಪ್ರಾಣವು ಒಂದೇ ಸ್ವರೂಪದ್ವಾಗಿದ್ದು ಜೀವಿಗಳ ದೇಹಾದಿಗಳು ಮಾತ್ರ ಭಿನ್ನ ಭಿನ್ನ ರೂಪ ಹೊಂದಿವೆ.

ಹೇಗೆಂದರೆ, ಹೊಟ್ಟೆಯ ಹಸಿವು ಎಲ್ಲರಲ್ಲಿಯೂ ಒಂದೇ ಸಮನಾಗಿರುವುದು. ಆದರೂ ಆ ಹಸಿವನ್ನು ಹಿಂಗಿಕೊಳ್ಳಲು ಬೇರೆ ಬೇರೆಯವರು ಬೇರೆ ಬೇರೆ ತರದ ತಿನಿಸು ತಿಂಡಿಗಳನ್ನು ಮಾಡಿಕೊಂಡು ತಿನ್ನುತ್ತಾರೆ.

(ಪರಮಾತ್ಮನು ಒಬ್ಬನೇ. ಬೇರೆ ಬೇರೆ ಜನರು ಅವನನ್ನು ಭಿನ್ನ ಭಿನ್ನವಾಗಿ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಾರೆ. "ಏಕಂ ಸಂತಂ ಬಹುಧಾ ಕಲ್ಪಯಂತಿ". ಎಂದು ಋಗ್ವೇದದಲ್ಲಿಯೂ ಹೇಳಿದೆ.

ಛಾಂದೋಗ್ಯೋಪನಿಷತ್ತಿನ ಅಭಿಪ್ರಾಯ ನೋಡಿರಿ "ಬಂಗಾರದ ತುಂಡೊಂದನ್ನು ನೋಡಿದಾಗ ಬಂಗಾರದ ಎಲ್ಲವನ್ನೂ ತಿಳಿಯಬಹುದು. ಅವುಗಳಲ್ಲಿರುವ ಅಂತರವಾದರೂ ಏನು ? ಶಬ್ದದಿಂದ ಉಂಟಾದ ಭಿನ್ನ ಬಿನ್ನ ಹೆಸು ಮಾತ್ರ. ಆದರೆ ಮೂಲ ಸತ್ಯವೆಂದರೆ ಅವೆಲ್ಲ ಬಂಗಾರವೇ.)

೫೭೧

ಕಾನಲೇಡು ನುದುರು ಕರ್ಣಮುಲ್ ವೀಪುನು, ನೆರುಲು ಗಾನಲೇಡು ನೆತ್ತಿಮೀದ,
ತನ್ನುಗಾನಲೇಡು ತತ್ತ್ವಮೇವೆರುಗುನು ? ವಿಶ್ವದಾಭಿರಾಮ ವಿನುರ ವೇಮ.

ಕಾಣಲಾರ ಹಣೆಯ; ಕರ್ಣ ಬೆನ್ನುಭಾಗ,
ನೋಡಲಾರ ಕೇಶ, ನೆತ್ತಿ ಮೇಲೆ.
ತನ್ನಕಾಣಲಾರ, ತತ್ತ್ವವೇನರಿವನು ?
ವಿಶ್ವದಾಭಿರಾಮ ಕೇಳು ವೇಮ.

ದೇವರನ್ನು ಕಣ್ಣಿನಿಂದ ಕಾಣಬಹುದೇ ದೇವರ ದರ್ಶನವು ಮೋಕ್ಷವೇ ? ಎಂಬುದು ಸಾಮಾನ್ಯರ ಪ್ರಶ್ನೆ. ಕಣ್ಣಿನಿಂದ ದೇವರನ್ನು ಕಾಣುವುದೆಂತು ? ತನ್ನ ಕಣ್ಣಿನಿಂದ ತನ್ನ ದೇಹದ ಬೆನ್ನು ಭಾಗ ಕಾಣಲಾರನು. ನೆತ್ತಿಯ ಮೇಲಿನ ಕೂದಲು ಕಾಣಲಾರನು. ಮುಖದ ಹಣೆಯ ಭಾಗವನ್ನಾಗಲೀ ಕಿವಿಗಳನ್ನಾಗಲೀ ಕಾಣಲಾರನು. ದೇಹದ ವಿವಿಧ ಅಂಗಗಳನ್ನು ಸಹ ನೋಡಲು ಶಕ್ತವಾಗದ ಕಣ್ಣುಗಳು ದೇವರನ್ನು ನೋಡುವುನೆಂತು.

ದೇವನು ನಿರಾಕಾರನು. ಆನಂದಮಯನು. ಬ್ರಹ್ಮನೇ ದೇವರು. ಬ್ರಹ್ಮವನ್ನು ಅನ್ವಭವಿಸಬೇಕು. ದೇಹದ ಕಾಣುವ ಭಾಗಗಳು ಕನ್ನಡಿಯ ಬಿಂಬದ ಮೂಲಕ ಕಾಣುವಂತೆ, ಬ್ರಹ್ಮವನ್ನು ಶುದ್ಧವಾದ ಮನಸ್ಸಿನ ಮೇಲಾದ ಬ್ರಹ್ಮತ್ವ ಜ್ಞಾನದ ಪರಿಣಾಮದಿಂದ ಅನುಭವಿಸಬಹುದಷ್ಟೇ.

ತತ್ ಅಂದರೆ ಬ್ರಹ್ಮ. ತತ್ತ್ವವೆಂದರೆ ಬ್ರಹ್ಮತ್ವ. ಬಾಹ್ಯ ಚಕ್ಷುವಿನಿಂದ ತನ್ನ ತರೀರದ ವಿವಿಧಾಂಗಗಳನ್ನೇ ನೋಡಲಾರದವನು ಬ್ರಹ್ಮತ್ವವನ್ನು ತಿಳಿಯುವನೆಂತು ?

(ಮುಂಡಕೋಪನಿಷತ್ತಿನಲ್ಲಿ ಜ್ಞಾನಪ್ರಸಾದವಾಗಿ ಧ್ಯಾನದಿಂದ ಆತ್ಮ ಕಾಣಬಹುದೆಂದು ತಿಳಿಸುತ್ತ, " ನ ಚಕ್ಷುಷಾ ಗುಹ್ಯತೇ ನಾಪಿ ವಾಚಾ.... " ಕಣ್ಣಿನಿಂದ ಇಲ್ಲವೆ ಪ್ರವಚನದಿಂದ ತಿಳಿಯಲಾರದು ಎಂದು ಹೇಳಲಾಗಿದೆ.)

೫೭೨

ತಿರಿಗಿ ತಿರಿಗಿ ನರುಡು ಮರುಲುಕೊನುಟಿಕಾಕ, ಅಂದುವಲನ ನೇಮಿ ಯಾಸಲೇದು,
ಅಂತರಾತ್ಮನಿಲುಪು ನತಡಿಪೋಬ್ರಹ್ಮಂಬು, ವಿಶ್ವದಾಭಿರಾಮ ವಿನುರ ವೇಮ.

ತಿರುಗಿ ತಿರುಗಿ ನರನು ಮರಳಿ ಬರುವನಲ್ಲ !
ಆಗ ಕೂಡ ಎಷ್ಟು ಆಶೆಯಿಲ್ಲ !
ಅಂತರಾತ್ಮ ನಿಲುವು; ಅವನೆ ಅರಿ ಬ್ರಹ್ಮ
ವಿಶ್ವದಾಭಿರಾಮ ಕೇಳು ವೇಮ.

ಜೀವನು ಒಂದಾದ ಮೇಲೊಂದು ಶರೀರ ಧಾರಣ ಮಾಡಿ ಬರುತ್ತಾನೆ. ಶರೀರವು ಹುಟ್ಟುತ್ತದೆ, ತಿರುಗಿ ಹೋಗುತ್ತದೆ. ಮೋಕ್ಷ ಫಲಕ್ಕಾಗಿ ಪರಚಾಡುವುದೂ ನಡೆದಿದೆ. ಆದರೆ ಇಷ್ಟೆಲ್ಲ ಆದರೂ ಮೋಕ್ಷವು ದೊರಕುವ ಯಾವ ಆಶೆಯು ಕಾಣಬರುವುದಿಲ್ಲ.

ಅಂತರಾತ್ಮವೇ ನಮ್ಮ ಕಾರ್ಮ ಕೃಷಿಯ ಬೆಳೆಯು; ನಿಲುವು ಅದುವೇ ಬ್ರಹ್ಮ ಎಂದು ತಿಳಿ. ಕೊಯ್ಯದಿರುವ, ಬೆಳೆಯದಿರುವ ಪೈರು 'ನಿಲುವು. ತಿಳಿಯದಿರುವ ಅಂತರಾತ್ಮವೇ 'ನಿಲುವಿನಂತೆ'.

(ಕರ್ಮಕ್ಕನುಸಾರವಾಗಿಯೂ ಜ್ಞಾನಕ್ಕನುಸಾರವಾಗಿಯೂ ಕೆಲವರು ದೇಹಿಗಳು ಶರೀರ ಗ್ರಹಣಕ್ಕಾಗಿ ಯೋನಿಯನ್ನೂ. ಇನ್ನು ಕೆಲವರು ಸ್ಥಾವರ ಜನ್ಮವನ್ನೂ ಹೊಂದುತ್ತಾರೆ."
—ಕಠೋಪನಿಷತ್ ೨-೫-೭

"ಅವನಿಗೆ ಎಲ್ಲಿಯ ವರೆಗೆ ಶರೀರ ಸಂಬಂಧ ಹೋಗುವುದಿಲ್ಲವೋ ಆಲ್ಲಿಯ ವರೆಗೆ ತಡ; ಅನಂತರ ಪರಬ್ರಹ್ಮ ಹೊಂದುತ್ತಾನೆ"
—ಛಾಂದೋಗ್ಯೋಪನಿಷತ್, ೬—೧೪—೨.)

೫೭೩

ಚಿತ್ತಮನೆಡು ವೇರು ಶಿಥಿಲಮೈನಪ್ಪುಡೇ, ಪ್ರಕೃತಿಯ ನೆಡುಚಿಟ್ಟು ಪಡುನು ಬಿದಪ,
ಗೋರ್ಕುಲನೆಡು ಪೆದ್ದಕೊಮ್ಮಲೆಂಡುನುಗದಾ, ವಿಶ್ವದಾಭಿರಾಮ ವಿನುರ ವೇಮ.

ಚಿತ್ತವೆಂಬ ಬೇರು ಶಿಥಿಲವಾಗಲಾಗ,
ಪ್ರಕೃತಿಯೆಂಬ ಮರವು ಪತಿತ ನೋಡು.
ಕೋರಿಕೆಂಬ ದೊಡ್ಡ ಕೊಂಬೆಗಳೊಣಗುವುವು.
ವಿಶ್ವದಾಭಿರಾಮ ಕೇಳು ವೇಮ.

ಪ್ರಕೃತಿ ವೃಕ್ಷದ ಬಣ್ಣನೆಯನ್ನು ಅಲಂಕಾರಿಕವಾಗಿ ಹೀಗೆ ಮಾಡಬಹುದು. ಮನಸ್ಸು ಆ ವೃಕ್ಷದ ಬೇರು. ಕೋರಿಕೆಗಳು ಅದರ ರೆಂಬೆ-ಕೊಂಬೆಗಳು. ಬೇರಿನಿಂದ ಬರುವ ಅನ್ನ-ರಸದಿಂದ ರೆಂಬೆಗಳು ಉಂಟಾಗುವಂತೆ, ಚಿತ್ತವೃತ್ತಿಗಳೇ ಕೋರಿಕೆಗಳಾಗುವುವು.

ಚಿತ್ತದ ಬೇರು ಸಂಸಾರ ಭೂಮಿಯಲ್ಲಿ ಸೇರಿವೆ. ಜ್ಞಾನದ ಬಿರುಗಾಳಿಗೆ ಸಂಸಾರ ವಲ್ಲಿ ನೆಟ್ಟ ಚಿತ್ತದ ಬೇರುಗಳು ಸಡಿಲುಗೊಂಡರೆ, ಆಗ ಚಿತ್ತವೃತ್ತಿಗಳು ನಶಿಸುತ್ತವೆ. ಚಿತ್ತವೃತ್ತಿಗಳಿಲ್ಲದಿದ್ದರೆ ಬಯಕೆಗಳೇ ಉಳಿಯುವುದಿಲ್ಲ. ಬಯಕೆ ತೀರಿದ ಮೇಲೆ ಈ ಶರೀರ ಒಣ ವೃಕ್ಷದಂತೆ.

೫೭೪

ತಿಟ್ಟಕೊಟ್ಟರೇನಿ ದಿರಿಗಿ ಮಾಟಾಡಕ, ಊರಕುನ್ನಜೂಡ ನುರ್ವಿಮೀದ,
ವಾಡಗು ಬಂಮಾತ್ಮ ವರ್ಣಿಂಪ ಶಕ್ಯಮಾ ? ವಿಶ್ವದಾಭಿರಾಮ ವಿನುರ ವೇಮ.

ಬಯ್ದು ಹೊಡೆದರೆಂದು, ಬಳಿಕ ಮಾತು ತೊರೆದು,
ಬಾಯಿ ಮುಚ್ಚಿ ಇರಲು, ಭೂಮಿ ಮೇಲೆ,
ಪರಮಾತ್ಮನಾಗುವ; ಬಣ್ಣಿಸಲು ಶಕ್ಯವೆ ?
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಿಯು ಸತ್ಯವನ್ನು ತಿಳಿಯುತ್ತಾನೆ. ಅನುಭವಿಸುತ್ತಾನೆ. ಅನಂತರ ಸತ್ಯಶೋಧನೆಯ ಮಾರ್ಗವನ್ನು ತಿಳಿಸುತ್ತಾನೆ. ಸಾಮಾನ್ಯರಿಗೆ ಧರ್ಮಬೋಧೆ ಮಾಡುತ್ತಾನೆ. ಅವರಿಗೆ ಅಂಥ ಧರ್ಮದ ವಚನಗಳು ಹಿಡಿಸುವುದಿಲ್ಲ. ತಾವು ಗ್ರಹಿಸಿದ ಬಾಹ್ಯಾಚಾರವೇ ಧರ್ಮವೆಂದು ಮೂಢರು, ಮತ್ತು ಐಹಿಕ ಭೋಗಾದಿಗಳೇ ಸರ್ವವೆಂದು ದುಷ್ಟರೂ ಭಾವಿಸಿ, ಧರ್ಮಭೋಧಿಸುವ ಯೋಗ ಪುರುಷನನ್ನು ತಿರಸ್ಕರಿಸುತ್ತಾರೆ. ಅವನು ಮಾಡುವ ಕಲ್ಯಾಣ ಕಾರ್ಯದಿಂದ ತಮ್ಮ ಸ್ವಾರ್ಥಕ್ಕೆ ಅಡ್ಡವಾಗುವಂತಿದ್ದರೆ, ಅವನನ್ನು ಹೊಡೆಯಲು, ಬಡಿಯಲು, ಹಿಂದು ಮುಂದೆ ನೋಡುವುದಿಲ್ಲ. ಆಗ ಅವನು ಮೌನಿಯಾಗುತ್ತಾನೆ. ಸದಾ ಮನನದಲ್ಲಿ ಕಾಲ ಕಳೆಯುತ್ತಾನೆ. "ಬಾಲ್ಯ, ಪಾಂಡಿತ್ಯ ಅರಿತು ಮುನಿಯಾಗುತ್ತಾನೆ. ಮೌನವನ್ನೂ ಅ-ಮೌನವನ್ನೂ ಅರಿತು ಬ್ರಹ್ಮ ತಿಳಿದ 'ಬ್ರಾಹ್ಮಣ'ನಾಗುತ್ತಾನೆ ಎಂದು" ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದೆ.

೫೭೫

ಕಲ್ಮಷಂಬುಪೋಕ ಕನ್ಪಿಂಚದೆಂದುನು, ರೂಪಮೆವ್ವರಿಕಿನಿ ರೂಢಿತೋಡ,
ತಾಮಸಂ ಬುಡಿಗಿನ ದಗಗಲ್ಲು ಜ್ಞಾನಂಬು, ವಿಶ್ವದಾಭಿರಾಮ ವಿನುರ ವೇಮ.

ಕಲ್ಮಶವು ಹೋಗದೆ, ಕಾಣದು ಎಂದೂ,
ರೂಪವಾರಿಗೇನು ರೂಢಿಯಿಂದ;
ತಾಮಸವುಡುಗಿದರೆ, ತಾನೆ ಬಹುದು ಜ್ಞಾನ.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ಶುದ್ಧವಾಗಬೇಕು. ವಿಷಯವಾಸನಾಸಕ್ತತೆಯಿಂದ ಚಿತ್ತವೃತ್ತಿಗಳು ಏಳುತ್ತವೆ. ಈ ಚಿತ್ತವೃತ್ತಿಗಳ ತಾಕಲಾಟದಿಂದ ಏಕಾಗ್ರತೆಯು ಉಂಟಾಗುವುದಿಲ್ಲ. ವಿಷಯವಾಸನೆಯಿಂದ ಉಂಟಾದ ಚಿತ್ತವೃತ್ತಿಗಳು, ಮನಸ್ಸಿನ ಕನ್ನಡಿಯ ಮೇಲಿನ ಧೂಳಿಯಂತೆ, ಕಲ್ಮಶದಂತೆ ಅಂಟುತ್ತವೆ. ಆಗ ಆತ್ಮದ ಪ್ರತಿಬಿಂಬ ರೂಪವು ಮನಶ್ಚಕ್ಷುವಿಗೆ ಕಾಣದು.

ಕಾಮ, ಕ್ರೋಧ, ಮೋಹ, ಲೋಭ ಮದ, ಮತ್ಸರಾದಿಗಳು ತಾಮಸ ಗುಣದ ಪ್ರತೀಕ. ಇವುಗಳಿಂದ ವಿವಿಧ ಚಿತ್ತವೃತ್ತಿಗಳುಂಟಾಗುವುವು. ತಾಮಸವು ಕಳೆದರೆ, ಚಿತ್ತವೃತ್ತಿಗಳು ಉಂಟಾಗುವುದಿಲ್ಲ. ಆಗ ತತ್ತ್ವ ತಿಳಿಯುವುದು, ಸಾಧ್ಯವಾಗುವುದು. ಹೆಜ್ಜುಹೆಜ್ಜಾಗಿ ತತ್ತ್ವ ತಿಳಿದುಕೊಂಡಂತೆ, ಧಾರಣ ಧ್ಯಾನ ಸಮಾಧಿ ಸ್ಥಿತಿಗೆ ಮನಸ್ಸು ಹದವಾಗುವುದು. ಜ್ಞಾನ ಹೊಳೆಯುವುದು.

("ಶುದ್ಧ ಜ್ಞಾನದಿಂದ ಪರಿಶುದ್ಧನಾದ ಮೇಲೆ ಅವ್ಯಕ್ತನಾದ ಬ್ರಹ್ಮನನ್ನು ಧ್ಯಾನೋಪಾಸನೆಯಿಂದ ಕಾಣಬಹುದು.'

— ಮುಂಡಕೋಪನಿಷತ್. ೩–೧ – ೮

"ನಿನಗಾಗಿ ಆಶ್ರಯ ನಿರ್ಮಿಸು; ಪ್ರಯತ್ನಿಸು; ಜ್ಞಾನಿಯಾಗು. ದೋಷಗಳಿಂದ ದೂರಾಗು. ಕಲಂಕವನ್ನು ತೊಳೆದುಕೊ. ಅಂದರೆ ನೀನು ಮರಳಿ ಜನನ ಮರಣಗಳಲ್ಲಿ ಸಿಲುಕಬೇಕಾಗಿಲ್ಲ.

— ಗೌತಮ ಬುದ್ಧ.)

೫೭೬

ನೀಟಲೋನವ್ರಾತ ನಿಲುವಕಯುನ್ನಟ್ಲು, ಪಾಟ ಜಗತಿಲೇದು ಪರಮುಲೇದು,
ಮಾಟ ಮಾಟಕೆಲ್ಲ ಮನಸುಕೋರುಚುನುಂಡು, ವಿಶ್ವದಾಭಿರಾಮ ವಿನುರ ವೇಮ.

ನೀರೊಳಗಿನ ಬರೆಹ ನಿಲದೆ ಹೋಗುವಂತೆ
ಸಾಟಿ ಇಹದೊಳಿಲ್ಲ ಪರದೊಳಿಲ್ಲ.
ಮಾತು ಮಾತಿಗೆಲ್ಲ ಮನಸು ಕೋರುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಮಾತು ಮಾತಿಗೆಲ್ಲ ಮನಸ್ಸಿನಲ್ಲಿ ಹಲವಾರು ಕೋರಿಕೆಗಳು ಹುಟ್ಟುತ್ತಿವೆ. ಮನಸ್ಸಿನ ಬಯಕೆಗಳು ಚಿತ್ತವೃತ್ತಿಗಳಾಗಿ ದಶ ದಿಕ್ಕುಗಳಲ್ಲಿ ಹರಿದು, ಬಾಹ್ಯಾಂತರಗಳಲ್ಲಿ ಹರಿದು ದ್ವಿಗುಣಿತ ಬಹುಗುಣಿತಗಳಾಗುತ್ತವೆ. ಈ ಚಿತ್ತವೃತ್ತಿಗಳು ನೀರಿನಂಥ ಮೆಯ್ಯನ್ನು ಮನಸ್ಸಿಗೆ ನೀಡುತ್ತವೆ. ನೀರಿನಲ್ಲಿ ಬರೆದ ಬರೆಹವು ನಿಲ್ಲದೆ ಸುತ್ತುಕಡೆಯ ನೀರಿನ ಕಣಗಳ್ಂ ಬಂದು ಸೇರಿ ಕಾಣದಾಗುವಂತೆ, ಚಿತ್ತವೃತ್ತಿಗಳ ಗುಂಪದಲ್ಲಿ ಗವ್ಯ ಸದ್ವಸ್ತು ಕಾಣದಂತಾ

ಗುತ್ತದೆ. ಚಿತ್ತವೃತ್ತಿಗಳು ಹಿಂಗದೆ, ಆತ್ಮನ ಚಿತ್ರ ಮನಸ್ಸಿನಲ್ಲಿ ಮೂಡಲಾರದು. ಇದಕ್ಕೆ ಸಮನಾದುದು, ಇಹ-ಪರಗಳಲ್ಲಿ ಎಲ್ಲಿಯೂ ಇಲ್ಲ.

೫೭೨

ದೊಂಗತೆಲಿವಿಚೇತ ದೊರುಕುನಾ ಮೋಕ್ಷಂಬು ? ಚೇತಗಾನಿಪನುಲ ಜೇಯರಾದು.
ಗುರುಡನಂಗವಲದು ಗುಣಹೀನುಡನವಲೆ; ವಿಶ್ವದಾಭಿರಾಮ ವಿನುರ ವೇಮ.

ಮಿಥ್ಯ-ವಿದ್ಯೆಯಿಂದ ಮೋಕ್ಷ ದೊರಕಬಹುದೆ ?
ಕೂಡದ ಕರ್ಮಗಳ ಮಾಡಬೇಡ.
ಗುರುವು ಆಲ್ಲನವನು, ಗುಣಹೀನನು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಆತ್ಮಸ್ವರೂಪದ ಜ್ಞಾನ ಪಡೆದುಕೊಳ್ಳುವದೇ ನಿಜವಾಗಿ ವಿದ್ಯೆಯು. ಆತ್ಮ ಜ್ಞಾನ ಪಡೆದುಕೊಳ್ಳುವುದಕ್ಕೆ ವ್ಯತಿರಿಕ್ತವಾದ ಇಲ್ಲವೆ ಅದರಿಂದ ಭಿನ್ನವಾದುದೆಲ್ಲ ಅವಿದ್ಯೆ. ಯಜ್ಞ ಕರ್ಮ, ವ್ರತೋಪವಾಸಾದಿ ಬಾಹ್ಯ ಆಚರಣೆಯೆಲ್ಲ ಅವಿದ್ಯೆ; ಮಿಥ್ಯ ವಿದ್ಯೆ. ಆತ್ಮವಿದ್ಯೆಯೊಂದೇ ಸತ್ಯ ವಿದ್ಯೆ. ಮಿಥ್ಯವಿದ್ಯೆಯಿಂದ ಮೋಕ್ಷ ದೊರೆಯಲಾರದು. ಮೋಕ್ಷಾಭಿಲಾಷಿಯಾದವನು, ಸಲ್ಲದ ಯಜ್ಞಕರ್ಮಾದಿಗಳನ್ನು ಮಾಡಕೂಡದು. ಏಕೆಂದರೆ, ಅದೆಲ್ಲ ನಿಷ್ಪ್ರಯೋಜಕವಷ್ಟೇ ಅಲ್ಲ, ಪ್ರಾಣಿ ಹಿಂಸೆ ಇತ್ಯಾದಿ ಅಕರ್ಮಗಳನ್ನು ಒಳಗೊಳ್ಳುತ್ತದೆ.

ಯಾವನು ಇಂಥ ಮಿಥ್ಯವಿದ್ಯೆಯಿಂದ ಮೋಕ್ಷ ದೊರೆಯುವುದೆಂದು ಬೋಧಿಸುವನೋ ಅವನು ಗುರು ಎನ್ನಿಸನು. ವಿಮರ್ಶಿಸಿ ನೋಡಿದರೆ, ಅವನು ಗುಣಹೀನನೆನಿಸುವನು.

(ಈಶೋಪನಿಷತ್ತಿನ ಅಭಿಪ್ರಾಯ ನೋಡಿರಿ. "ಯಾರು ಅವಿದ್ಯೆಯನ್ನು ಉಪಾಸಿಸುವರೋ ಅವರು ಕರಾಳ ತಮಸ್ಸಿಗಿಳಿಯುವರು. ಯಾರು ಕೇವಲ ವಿದ್ಯೆಯಲ್ಲಿಯೇ ನಿರತರಾಗುವರೋ ಅವರು ಇನ್ನೂ ಕರಾಳ ತಮಸ್ಸಿಗಿಳಿಯುವರು." ಜ್ಞಾನ ಕರ್ಮಗಳ ಸಮನ್ವಯ ಬೇಕು ಎಂಬ ಅರ್ಥವಿದೆ. ಮುಂದೆ ನೋಡಿರಿ:

"ವಿದ್ಯೆ ಮತ್ತು ಅವಿದ್ಯೆಗಳನ್ನು ಸಮವಾಗಿ ತಿಳಿದರೆ, ಸತ್ಕರ್ಮದಿಂದ ಮೃತ್ಯುದಾಟಿ, ಜ್ಞಾನದಿಂದ ಅಮೃತತ್ವ ಪಡೆಯಬಹುದು.")

೫೭೫

ಆಶಲದೆಗಗೋಸಿ ಯನಲಂಬು ಜಲ್ಲಾರ್ಚಿ, ಗೋಚಿ ಬಿಗಿಯ ಬೆಟ್ಟ ಕೋಪ ಮಡಚಿ,
ಗುಟ್ಟುವೀರುವಾಡು ಗುರುವುಕು ಗುರುವುರಾ, ವಿಶ್ವದಾಭಿರಾಮ ವಿನುರ ವೇಮ.

ಆಶೆಯ ಕಡಿದೊಗೆದು, ರಾಗದಗ್ನಿ ತಣಿಸಿ,
ಕಚ್ಚೆ ಬಿಗಿದು ಕಟ್ಟಿ, ಕೋಪ ಮೆಟ್ಟಿ,
ಗುಟ್ಟುವೀರಿದಾತ ಗುರುವಿನ ಗುರುವಹನು.
ವಿಶ್ವದಾಭಿರಾಮ ಕೇಳು ವೇಮ.

(ಬ್ರಹ್ಮ ವಿದ್ಯೆಯ ಉಪಾಸಕನ ಅರ್ಹತೆಗಳೆಂದರೆ ವಿವೇಕ, ವೈರಾಗ್ಯ, ಷಟ್ಸಂಪತ್ತಿ ಮತ್ತು ಮುಮುಕ್ಷುತ್ವ. ಒಳಿತು ಕೆಡುಕುಗಳನ್ನು ವಿಂಗಡಿಸುವ ಗುಣವೇ ವಿವೇಕ. ವಿವೇಕದಿಂದ, ಅಸತ್ಯದಿಂದ ಸತ್ಯ ಬೇರೆ ಎಂದು ತಿಳಿದು, ಬ್ರಹ್ಮವೊಂದೇ ಸತ್ಯ ಎಂದು ಖಚಿತಪಡಿಸಿಕೊಳ್ಳಬೇಕು. ಆಗ, ಮನಸ್ಸಿನ ಕೋರಿಕೆಗಳು ಒಂದೊಂದಾಗಿ ಇಲ್ಲವಾಗುತ್ತವೆ. ಬಯಕೆ ಬಳ್ಳಿ ಕಮರಿ ಹೋಗುತ್ತದೆ.

ಐಹಿಕ ಇಂದ್ರಿಯ ಸುಖವೇ ಇರಲಿ; ಪರಸುಖವೇ ಇರಲಿ, ಅದರಿಂದ ನಿವೃತ್ತನಾಗುವುದೇ ವಿರಾಗ. ರಾಗಾದಿಗಳನ್ನು ತಣಿಸಿ ಪ್ರಶಾಂತತೆಯನ್ನು ಹೊಂದಿರುವುದು.

ಷಟ್ಸಂಪತ್ತಿಗಳಲ್ಲಿ, ಐಂದ್ರಿಕ ಭೋಗ ವಸ್ತುಗಳ ದೋಷ ತಿಳಿದು ಅವುಗಳಿಂದ ವಿಮುಖಗೊಳಿಸಿದ ಮನವನ್ನು ಬ್ರಹ್ಮದತ್ತ ತಿರುಗಿಸುವುದು 'ಸಾಮು'; ರುಚಿ, ಶ್ರವಣ, ಘ್ರಾಣ, ಈಕ್ಷಣ, ಸ್ಪರ್ಶಗಳೆಂಬ ಜ್ಞಾನೇಂದ್ರಿಯಗಳನ್ನೂ ಮತ್ತು ವಾಕ್, ಗ್ರಹಣ, ಚಲನೆ, ಸೃಷ್ಟಿ, ಲಯಗಳೆಂಬ ಕರ್ಮೇಂದ್ರಿಯಗಳನ್ನೂ ವಿಷಯ ವಸ್ತುಗಳಿಂದ ಸಂಯಮಗೊಳಿಸಿ ನಿಯಂತ್ರಿಸಿಕೊಳ್ಳುವುದು, 'ದಮ'; ಹೀಗೆ ನಿಯಂತ್ರಿತವಾದ ಐಂದ್ರಿಕ ಅವಯವಗಳು ಮರಳಿ ತಮ್ಮ ಭೋಗವಸ್ತುಗಳತ್ತ ಹರಿಯದಂತೆ ಇರಿಸಿಕೊಳ್ಳುವುದು,ಉಪರತಿ;' ಭೋಗವಸ್ತುಗಳ್ನ ಸಂಪರ್ಕ ಬಂದಾಗಲೂತಾಳಿಕೊಳ್ಳುವ ಸಹನೆಯೇ 'ತಿತಿಕ್ಷೆ;' ಈ ಸಾಧನೆಯಿಂದ ಮನಸ್ಸನ್ನ ಬ್ರಹ್ಮದ ಮೇಲೆ ಏಕಾಗ್ರತೆಗೊಳಿಸುವುದು,ಸಮಾಧಾನ;ಯೋಗ್ಯ ಗುರುಮುಖದಿಂದ ಕೇಳಿದ ವೇದಾಂತ ತತ್ತ್ವಗಳನ್ನು ಸತ್ಯವೆಂದು ಒಪ್ಪುವುದು. ಶ್ರದ್ಧೆ.) ವಿವೇಕ ವಿಚಾರದಿಂದ ಆಶೆಯನ್ನು ಕಡಿದೊಗೆದು, ಸಾಮದಮಾದಿಗಳಿಂದ ರಾಗದಗ್ನಿ ತಣ್ಣಗಾಗಿಸಿ,ಕ್ರೋಧಾಗ್ನಿ ಅಡಗಿ ಶಾಂತನಾಗಿ, ಉಪರತಿ ತಿತಿಕ್ಷೆಗಳಿಂದ, ಶೀಲಕಾಪಾಡಿಕೊಂಡು. ಗುಪ್ತ ವಿದ್ಯೆಯನ್ನು ಅರಿತು ಮುಂದುವರೆದ ಮುಮುಕ್ಷುವೇ ಪರಮಗುರುವಾಗಿ ನಿಲ್ಲುವನು.

೫೭೯

ಆಶಲನೆಡುತ್ರಾಳ್ಳ ನಮರಗೋಯಗಜೇಸಿ, ಪಾರನ್ಯೆವಗಾನಿ ಪರಮುಲೇದು,
ಕೊಕ್ಕು ತಿಂಡಿಯ ಶ ಜಿಕ್ಕಿ ಚಚ್ಚಿನಯಟ್ಲು, ವಿಶ್ವದಾಭಿರಾಮ ವಿನುರ ವೇಮ.

ಆಶೆಯೆಂಬ ಪಾಶ ಅರಿತು ಕೊಯ್ದು ಹಾಕಿ,
ದೂರವೆಸೆಯುದಿರಲು ಪರವು ಇಲ್ಲ.
ತಿಂಡಿಗಾಶೆಪಡಲು ತೊಂದರೆ ಹೆಗ್ಗಣಕೆ
ವಿಶ್ವದಾಭಿರಾಮ ಕೇಳು ವೇಮ.

ಪ್ರಪಂಚದ ಭೋಗವಸ್ತುಗಳತ್ತ ಚಿತ್ತ ಆಕರ್ಷಿತವಾಗುವುದು. ಭೋಗದಾಸೆ ಹುಟ್ಟುವುದು. ವಿವಿಧ ಚಿತ್ತವೃತ್ತಿಗಳು ಉಂಟಾಗುವುವು. ಮನಸ್ಸಿನಲ್ಲಿ ಈ ಚಿತ್ತವೃತ್ತಿಗಳಿಂದೆದ್ದ ತರಂಗಗಳು ಕಲಸು ಮೇಲೋಗರವಾಗಿ, ಏಕಾಗ್ರತೆಯ ಸಾಧನೆಗೆ ಆತಂಕವಾಗುತ್ತವೆ. ಮನಸ್ಸು ಪ್ರಾಪಂಚಿಕ ವಿಷಯಗಳಿಂದಾಚೆ ಹೋಗದಂತೆ ಈ ಚಿತ್ತವೃತ್ತಿಗಳು ಆತಂಕ

ಓಡ್ಡಿ, ಪಾಶ [ಹಗ್ಗ]ದಿಂದ ಬಿಗಿದಂತೆ, ಸ್ವಾತಂತ್ರ್ಯನಾಶವಾಗುತ್ತದೆ. ಈ ಪಾಶವನ್ನು ಕೊಯ್ದುಹಾಕಬೇಕು. ಅಂದರೆ ಚಿತ್ತವೃತ್ತಿಗಳು ಹಿಂಗು ವಂತೆ ಆಶೆ ಇಲ್ಲದಂತಾಗಬೇಕು.

ಆಶೆಯ ಪಾಶೆಯನ್ನು ದೂರ ಎಸೆಯಬೇಕು ಎಂದು ಲಾಕ್ಷಣಿಕವಾಗಿ ಹೇಳಲಾಗಿದೆ. ಆಶೆಯೆಂಬುದು ಹಗ್ಗದಂತೆ. ಹಗ್ಗವು ನಮ್ಮ ಕೈಕಾಲು ಕಟ್ಟಲು ಸಾಧನವಾಗುವಂತೆ, ಆಶೆಯು ನಮ್ಮ ಮನಸ್ಸನ್ನು ಭೋಗ ವಿಷಯಗಳಿಗೆ ಅಂಟಿಸಿ ಬಿಗಿಯಲು ಕಾರಣ. ಅಲ್ಲಿಂದ ದೂರವಾಗದಂತೆ ಹಿಡಿದಿರುವುದೂ ಅದುವೇ. ಕಾರಣ ಆದಷ್ಟು ಭೋಗವಸ್ತುಗಳ ಸಂಪರ್ಕವೇ ಬಾರದಂತೆ ದೂರವಾಗಿರುವದು ಮೇಲು. ಇದುವೇ ಆಶಾಪಾಶ ದೂರ ಎಸೆಯವು ದೆಂಬುದರ ಅರ್ಥ.

ಬಯಕೆಯೇನೋ ಸುಖ ಪ್ರಾಪ್ತಿಗಾಗಿ. ಬಯಕೆ ಪೂರೈಸಿದಾಗ ಸುಖ ದೊರೆಯಬಹುದು. ಆದರೆ ಸುಖಭೋಗವು ಹಿತಕಾರಿಯೇ ಅಲ್ಲ. ಸುಖ ಭೋಗ ಆಳಿಸುವವನು ಗುರಿಯಿಂದ ದೂರ ಸರಿಯುತ್ತಾನೆ. ಕೊನೆಗೆ ತೊಂದರೆಗೊಳಗಾಗುತ್ತಾನೆ. ಹೆಗ್ಗಣ ಬಲೆಯಲ್ಲಿ ಇಟ್ಟ ತಿಂಡಿಗೆ ಆಶೆ ಪಡುವುದು. ಸಲೀಸಾಗಿ ಬಲೆಯೊಳಗೆ ಬೀಳುವುದು ತಿಂಡಿ ತಿಂದು ಸುಖಿಸುವುದು. ಆದರೆ ಬಲೆಯಲ್ಲಿ ಬಿದ್ದು, ಮುಂದಿನ ನಾಶಕ್ಕೆ ದಾರಿ ಮಾಡಿಕೊಂಡಿತಷ್ಟೆ. ಸುಖಭೋಗವೆಲ್ಲ ಹಿತಕಾರಿಯಲ್ಲ.

೫೮೦

ಸೂಕ್ಷ್ಮರೂಪಮೆರಿಗಿ ಸುಖಮೊಂದಗಾಲೇಕ, ಬಹುಳಮುಗನು ಜದುವು ಬಡುಜುನರುಡು,
ಚಾವುಚೇಟೆರುಗನಿ ಚದುವೇಲ ಜದುವಡೋ ವಿಶ್ವದಾಭಿರಾಮ ವಿನುರ ವೇಮ.

ಸೂಕ್ಷ್ಮರೂಪ ತಿಳಿದು, ಸುಖಹೊಂದಲಾರದೆ,
ಬಹಳ ಓದುತಿಹನು, ಬಡವ ಮನುಜ;
ಸಾವು ಕೇಡರಿಯದ ಶಾಸ್ತ್ರ ಓದನೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಆತ್ಮ ಸ್ವರೂಪವನ್ನು ತಿಳಿಯುವ ಜ್ಞಾನಾರ್ಜನೆಯೇ ವಿದ್ಯೆ. ಆತ್ಮಾನುಭವವೇ ಪರ ವಿದ್ಯೆ. ಸ್ಥೂಲ ವಸ್ತುವು ಸೂಕ್ಷ್ಮವಾದ ವಸ್ತುವಿನಿಂದ ತಿಳಿಯಲ್ಪಡುವದು. ಪೃಥ್ವಿಗಿಂತ ನೀರು ಸೂಕ್ಷ್ಮ; ನೀರಿಗಿಂತ ತೇಜಸ್ಸು ಸೂಕ್ಷ್ಮ; ತೇಜಸ್ಸಿಗಿಂತ ವಾಯು ಸೂಕ್ಷ್ಮ; ವಾಯುವಿಗಿಂತ ಆಕಾಶ ಸೂಕ್ಷ್ಮ; ಆಕಾಶಕ್ಕಿಂತ ಮನಸ್ಸು ಸೂಕ್ಷ್ಮ,ಮನಸ್ಸಿನ ಆಚೆ ಆತ್ಮ ಉಂಟು ಪ್ರತಿಬಿಂಬ ರೂಪವಾಗಿ ಮನಸ್ಸಿಗೆ ಅತಿ ಸೂಕ್ಷ್ಮವಾದ ಆತ್ಮ ಗೋಚರಿಸುವದು. ಆತ್ಮವು ನಿತ್ಯ ಆನಂದಮಯವಾದದು. ಆತ್ಮಾನುಭವವೇ ಆನಂದಾನುಭವವು.

ಪಾಪ! ಆತ್ಮಜ್ಞಾನ ಮಾಡಿಕೊಳ್ಳಲು ಮನಸ್ಸು ಶುದ್ಧ ಮಾಡಿಕೊಳ್ಳಲು, ವಿವೇಕ ವೈರಾಗ್ಯಾದಿ ಹೊಂದದೆ ಓದುಗುಳಿಯಾದರೇನು ಬಂತು ? ಸಾವು ಇಲ್ಲದ ಅಂದರೆ ಅಮೃತತ್ವದ ಮತ್ತು ಕೇಡು ಇಲ್ಲದ ಅವ್ಯಯವಾದ ಸದ್ವಸ್ತು ತಿಳಿಯುವುದೇ ನಿಜವಾದ ಜ್ಞಾನ. ಅದೇ ಶಾಸ್ತ್ರ. ಅದಿಲ್ಲದ ಶಾಸ್ತ್ರ ವಿದ್ಯೆಯಿಂದ ಫಲವಿಲ್ಲ.

(" ಎರಡು ವಿದ್ಯೆಗಳುಂಟು. ಜಾಣರಾದ ಬ್ರಹ್ಮವಿದರು ಇವುಗಳಲ್ಲಿ ಒಂದು ಮೇಲು ಇನ್ನೊಂದು ಕೇಳು ಎನ್ನುತ್ತಾರೆ. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಶಿಕ್ಷಾಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷಾದಿಗಳು ಓದು ಕೇಳು ವಿದ್ಯೆ. ಅಕ್ಷರವಾದ ಆತ್ಮದೆಡೆಗೆ ಸಾಗುವ ವಿದ್ಯೆ ಯಾವುದೋ ಅದೇ ಮೇಲು ವಿದ್ಯೆಯು" ಎಂದು ಮುಂಡಕೋಪನಿಷತ್ತಿನಲ್ಲಿ ಹೇಳಲಾಗಿದೆ.)

೫೮೧

ತನುವದೆವರಿಸೊಮ್ಮು ತನದನಿಪೋಷಿಂಪ, ಧನಮುದೆವರಿಸೊಮ್ಮು ದಾಚುಕೊನಗ,
ಪ್ರಾಣಮೆವರಿ ಸೊಮ್ಮು ಪಾಯಕುಂಡಗನಿಲ್ಪ, ವಿಶ್ವದಾಭಿರಾಮ ವಿನುರ ವೇಮ.

ತನುವದಾರ ಸೊತ್ತು ? ತನ್ನದೆಂದು ಸಲಹೆ;
ಧನವದಾರ ಸೊತ್ತು ? ಧರೆಯೊಳಿಡಲು;
ಪ್ರಾಣವಾರ ಸೊತ್ತು ? ಹೋಗದಂತಿರಿಸಲು.
ವಿಶ್ವದಾಭಿರಾಮ ಕೇಳು ವೇಮ.

ಹಠಯೋಗಾದಿ ದೈಹಿಕ ಶಕ್ತಿ ಬೆಳೆಸುವ ಸಾಧನ ಮಾಡುವವರಾಗಲಿ, ಶಾರೀರಿಕ ಸಂಬಂಧದ ಕರ್ಮಾಚರಣೆಯಲ್ಲಿ ನಿರತರಾಗಿರುವವರಾಗಲಿ ದೇಹವನ್ನೇ ನಂಬಿ ಸಾಗುವರು. ಇದರಿಂದ ಸ್ವಾರ್ಥಪರವಾಗುವುರು. ದಯೆ, ಸಹನೆ ಅಳಿಯುವವು. ಈ ಪರಿಯಿಂದ ಶರೀರವನ್ನು ಪೋಷಿಸಿ ರಕ್ಷಿಸಬೇಕಾದರೆ ಇದರ ಮೇಲೆ ಒಡೆತನ ಯಾರಿಗುಂಟು? ಎಲ್ಲೆಡೆ ತುಂಬಿರುವ ಆಕಾಶವು ಬೇರೆ ಬೇರೆ ಘಟಕಗಳಲ್ಲಿಯೂ ಇರುವಂತೆ, ಸರ್ವವ್ಯಾಪಿ ಬ್ರಹ್ಮವೂ ಶರೀರದಲ್ಲಿ ಇದೆ. ಪ್ರಾಣವು ಆತ್ಮದ ನೆರಳು. ಪ್ರಾಣವು ಹೊರಟು ಹೋದರೆ, ಭೂ-ಜಲ-ಅಪ್-ತೇಜ—ವಾಯು – ಆಕಾಶಗಳಿಂದ ನಿರ್ಮಾಣವಾದ ಈ ಶರೀರ ಮರಳಿ ಅವೇ ಮಹಾ ಭೂತಗಳಿಗಾಗಿ ಹೋಗುತ್ತವೆ. ಆತ್ಮವು ನಿತ್ಯವಾಗಿ ಉಂಟು. ಪ್ರಾರಬ್ಧ ತೀರಿಸಲು ಯಾವ ಶರೀರ ಬೇಕೋ ಆ ಶರೀರವನ್ನು ಆತ್ಮ ಪಡೆಯುತ್ತದೆ. ಆ ಶರೀರದ ಅವಶ್ಯಕತೆ ತೀರಿದೊಡನೆ ಹಳೆಯ ವಸ್ತ್ರ ಕಳಚಿದಂತೆ ಅದನ್ನು ಕಳಚಿ ಹೊಸ ವಸ್ತ್ರ ಧರಿಸಿದಂತೆ ಇನ್ನೊಂದು ಶರೀರ ಧರಿಸುತ್ತದೆ.

ಧನ–ಕನಕಗಳನ್ನು ಕಲೆ ಹಾಕಿ ಭೂಮಿಯಲ್ಲಿ ಹುಗಿದಿಡುವದುಂಟು. ಧನ ಕನಕಗಳನ್ನು ಯಾರಿಗಾಗಿ ಕೂಡಿಡುವದು? ಶರೀರವೇ ಆತ್ಮದ ಸೊತ್ತು ಎನಿಸಿದಾಗ ಶರೀರಕ್ಕಾಗಿ ಸಂಗ್ರಹಿಸಿಡುವ ಧನ ಕನಕಾದಿಗಳು ಆತ್ಮದ ಸೊತ್ತು ತಾನೇ ? ಎಲ್ಲರಲ್ಲಿರುವ ಆತ್ಮನೊಂದಾಗಿರುವಾಗ ಇನ್ನೊಂದು ಶರೀರಕ್ಕೆ ನೀಡದೆ ಬಚ್ಚಿಡುವದೇಕೆ? ಪ್ರಾಣವು ಆತ್ಮದ ನೆರಳು. ಶರೀರ ಸಂಬಂಧ ಬೇಡವಾದಾಗ ಶರೀರ ಕಳಚುತ್ತದೆ. ಆತ್ಮದ ನೆರಳಾದ ಪ್ರಾಣ ಕಳಚಿದ ಶರೀರದಿಂದ ಬೇರೆಯಾಗುತ್ತದೆ.

ಪಲವಿ

ಜೀವಿ ಜಂಪುಟೆಲ್ಲ ಶಿವಭಕ್ತಿದಪ್ಪುಟ, ಜೀವಿನರಸಿಚೂಡ ಶಿವುಡುಗಾಡೆ ?
ಜೀವುಡೆ ಶಿವುಡನುಚು ಸಿದ್ಧಂಬು ತೆಲಿಯುಮು, ವಿಶ್ವದಾಭಿರಾಮ ವಿನುರ ವೇಮು.

ಜೀವಿ ಕೊಲ್ಲಲೆಲ್ಲ ಶಿವನು ಭಕ್ತಿದೂರ.
ಜೀವಿಯರಸಿ ನೋಡೆ ಶಿವನಲ್ಲವೆ ?
' ಜೀವಿಯೆ ಶಿವ' ನೆಂಬ ನುಡಿಯೆ ಸಿದ್ಧಾಂತವು.
ವಿಶ್ವದಾಭಿರಾಮ ಕೇಳು ವೇಮು.

ಸರ್ವ ಪಶು-ಪಕ್ಷಿಗಳೂ ದೇವರ ಸೃಷ್ಟಿ. ತನ್ನ ಪೃಷ್ಟಿಗಾಗಿ ತಾನೇ ಸೃಜಿಸಿದ ಪ್ರಾಣಿಗಳ ರಕ್ತ ಬಲಿಯನ್ನು ದೇವರು ಅಪೇಕ್ಷಿಸುತ್ತಾನೆಂಬ ಭಾವನೆ ತುಂಬಾ ಖಂಡನಾರ್ಹ. ಅಷ್ಟೇ ಅಲ್ಲದೆ, ಹಿಂಸಾಕಾರ್ಯದಿಂದ ದೇವರು ಪ್ರೀತನಾಗುತ್ತಾನೆಂದು ನಂಬಿ ಪಡೆಯುವುದು ಮಹಾಪಾಪ. ಜೀವಿ ಆತ್ಮನ ವಾಹನದಂತೆ. ಜೀವಿಯ ನಾಶವೆಂದರೆ, ಮನಸ್ಸು ಕಠಿಣ ಮಾಡಿಕೊಂಡಂತೆ. ಮನಸ್ಸು ಪಾಪ ವೃತ್ತಿಯಿಂದ ದೂರವಾದರೆ ಮಾತ್ರ ಶಿವನ ಸಾಮೀಪ್ಯ ಸಾಧ್ಯವಾಗುವುದು. ಹಿಂಸೆಯಂಥ ಹೀನ ಕೃತ್ಯಗಳಲ್ಲಿ ನಿರತರಾದರೆ ಮನಸ್ಸು ಪರಿಶುದ್ಧವಾಗಲಾರದು. ನಿರಾಸಕ್ತಿ ಹುಟ್ಟದು. ಇಲ್ಲವೆ ಭಕ್ತಿಯೂ ಹುಟ್ಟದು.

ತತ್ತ್ವವನ್ನು ಹುಡುಕಿ ನೋಡಿದರೆ ಜೀವಿಯೇ ಶಿವನಲ್ಲವೇ? 'ಜೀವಶ್ಶಿವಃ' 'ಜೀವೋ ಬ್ರಹ್ಮೈವ ನಾಪರಃ' ಎನ್ನುವ ಸಿದ್ಧಾಂತ ವಾಕ್ಯಗಳಿವೆ. ಕಾರಣ ಜೀವನೇ ಶಿವನೆಂಬ ಮಾತು ಸಿದ್ಧಾಂತವು.

ಪಲವಿ

ಕೊಂಕಣಂಬುಬೋನ ಕುಕ್ಕಸಿಂಗಮುಕಾದು, ಕಾಶಿಬೋವ ಬಂದಿಗಜಮು ಗಾದು,
ವೇರುಗುಣಮುವಾಡು ವಿಬುಧುಂಡು ಕಾಡಯಾ, ವಿಶ್ವದಾಭಿರಾಮ ವಿನುರ ವೇಮು.

ಸುತ್ತಲು ಕೊಂಕಣವ, ಸೊಣಗ ಸಿಂಹವಲ್ಲ.
ಕಾಶಿ ಕಂಡ ಹಂದಿ ಕರಿಯು ಅಲ್ಲ.
ಭಿನ್ನ ಬುದ್ಧಿಯವನು, ಬುಧನು ಅಲ್ಲವಲ್ಲ?
ವಿಶ್ವದಾಭಿರಾಮ ಕೇಳು ವೇಮು.

ತನ್ನ ತಾಯಿ ರೇಣುಕೆಯ ಶಿರಚ್ಛೆದ ಗೆಯ್ದು, ಪರಶುರಾಮನು ನಿಲ್ಲಲು ನೆಲ ಸಿಗದೆ ಸಮುದ್ರರಾಜನಿಂದ ಬೇಡಿ ಪಡೆದ ಆಶ್ರಯ ಭೂಮಿಯೇ ಕೊಂಕಣ. ಕೊಂಕಣ ಪ್ರದೇಶವು ಪೌರಾಣಿಕ ಪ್ರಸಿದ್ಧಿಹೊಂದಿದ್ದು ಪವಿತ್ರ ಭೂಮಿಯೆಂದು ಪುರಾಣ ಶರಣರ ನಂಬುಗೆ. ಪವಿತ್ರ ಕ್ಷೇತ್ರದಲ್ಲಿ ಪವಾಡಗಳಾಗುತ್ತವೆಯೆಂದೂ ನಂಬುಗೆ. ನಾಯಿಯೊಂದು ಕೊಂಕಣ ಸುತ್ತಿ ಬಂದರೆ, ಸಿಂಹವೆನ್ನಿಸುವುದೇ ? ಹಂದಿಯೊಂದು ಕಾಶಿ ಕ್ಷೇತ್ರಕ್ಕೆ ಹೋಗಿ ಬಂದರೆ, ಆನೆಯಾಗದು. ಯಾರಿಗೆ ಈ ರೀತಿ ಆತ್ಮವೇ ಸರ್ವ ನಿಯಂತ್ರಕ, ಸರ್ವಶಕ್ತ ಎಂಬುದನು ಬಿಟ್ಟು, ಇನ್ನಾವುದೋ ಶ್ರೇಷ್ಠವೆಂಬ ಭೇದ ಬುದ್ಧಿ ಇದೆಯೋ ಅವನು ತಿಳಿದವನೆನಿಸುವುದಿಲ್ಲ.

(ಅಯೋಧ್ಯಾ ಮಧುರಾ ಮಾಯಾ ಕಾಶೀ ಕಾಂಚೀಹ್ಯವಂತಿಕಾ
ಪುರೀ ದ್ವಾರಾವತೀ ಚೈವ ಸಪ್ತೈತೇ ಮೋಕ್ಷದಾಯಕಾಃ॥
ಅಯೋಧ್ಯೆ, ಮಧುರೆ, ಮಾಯಾ, ಕಾಶಿ, ಕಂಚಿ, ಅವಂತಿಕಾಪುರಿ, ದ್ವಾರವತಿ ಎಂಬ ಏಳು ಕ್ಷೇತ್ರಗಳ ದರ್ಶನವು ಮೋಕ್ಷದಾಯಿನಿಯಾಗಿದೆ, ಎಂದು ಜನರ ಮೂಢ ನಂಬುಗೆಯಾಗಿದೆ.

ಅದೇ ರೀತಿ,
"ಗೋಕರ್ಣ, ಸೇತೂ, ಹಿಮವಾನ್, ಪ್ರಯಾಗ ಕಾಶ್ಮೀರ ಸೋಮೇಶ್ವರ
ರುದ್ರಪಾದಾಃ।
"ಶ್ರೀರಂಗ, ಕೇದಾರ ಮನಂತ ಕನ್ಯಾ, ಸ್ವಾಮಿನ್ ಕುರುಕ್ಷೇತ್ರ, ಸದಾನಮಸ್ತೆ"॥
ಇತ್ಯಾದಿ ಕ್ಷೇತ್ರಗಳ ಮಂದಿರಗಳಲ್ಲಿ ದರ್ಶನ ಪಡೆದು ಆಲ್ಲಿಯ ಮೂರ್ತಿಗೆ ನಮಸ್ಕಾರ ಮಾಡುತ್ತಿರಬೇಕೆಂದೂ ಅದೇ ವರ್ಗದ ಜನರ ಗ್ರಹಿಕೆ.)

ಪಲವಿ

ಈತಕಂಟೆಲೋತು ನೆಂಜೆಂಗಬನಿಲೇದು, ಜಾವುಕಂಟೆ ಗೀಡು ಜಗತಿಲೇದು,
ಗೋಚಿ ಪಾತಕಂಟೆ ಗೊಂಪೆಂಬು ಮುರಿಲೇದು, ವಿಶ್ವದಾಭಿರಾಮ ವಿನುರ ವೇಮು.

ಈಜುವವನು ತಳ ಎಣಿಸತಿಹುದು ಹೊಲ್ಲ.
ನಾವಿಗಿಂತ ಕೀಳು ಜಗದೊಳಿಲ್ಲ.
ಕಚ್ಚೆ ಕಳೆವಕಿಂತ ಕೀಳು ಮತ್ತೆ ಇಲ್ಲ
ವಿಶ್ವದಾಭಿರಾಮ ಕೇಳು ವೇಮು.

ನೀರಿನೆಲ್ಲಿ ಈಜಲು ಕಲಿತಮೇಲೆ ನೀರಿನ "ಆಳ" ಎಷ್ಟು ಇದ್ದರೇನು? ಹತ್ತು ಅಡಿ ಆಳದ ಮಡುವಿನಲ್ಲಿ ಈಜುವುದೂ ಒಂದೇ. ನೂರಡಿ ಆಳದ ಮಡುವಿನಲ್ಲಿ ಈಜುವುದೂ ಒಂದೇ. ಅದೇ ರೀತಿ, ಸಾಧನೆಯ ಹಾದಿ ತಿಳಿದ ಮೇಲೆ ಆತ್ಮಸಾಕ್ಷಾತ್ಕಾರ ಹೊಂದಲು ಎಷ್ಟು ಕಾಲ ಕಳೆದರೇನು? ಎಷ್ಟು ನಷ್ಟ ಸೋಸಲೇನು? ಸಾಧಕನಿಗೆ ಇದಾವುದರ ಪರಿವೆಯೇ ಇರದು. ಅವನು ಗಮ್ಯ ವಸ್ತು ಪಡೆಯುವ ಕಾರ್ಯದಲ್ಲಿಯೇ ಮುಂದುವರಿಯುವನು.

ಸತ್ತ ಮೇಲೆ ಮುಕ್ತಿಯೆಂದು ನಂಬಿ ಹಲವಾರು ಜನರು "ನಾನು ದೇವರಿಗಾಗಿ ಸಾಯಲು ತಯಾರಿದ್ದೇನೆ" ಎನ್ನುವರು. ಇನ್ನು ಹಲವರು ತಮ್ಮ ಬದಲು ದೇವರಿಗೆ ಇನ್ನಾವ ಪ್ರಾಣಿಯನ್ನೋ ಬಲಿಗೊಡುವರು. ನರಮೇಧದ ಸಂಕೇತವಾಗಿ ಜಡೆ-ಕಣ್ಣುಗಳುಳ್ಳ ಟೆಂಗಿನಕಾಯಿ ಒಡೆದು, ಅದರ ಎಳನೀರನ್ನು ರಕ್ತದಂತೆ ದೇವರಿಗೆ ಅರ್ಪಿಸುವ ಸಂಪ್ರದಾಯ ಇಂದಿಗೂ ರೂಢಿಯಲ್ಲಿದೆ.

ಧರ್ಮಕ್ಕಾಗಿ, ದೇವರಿಗಾಗಿ, ಸತ್ಯಕ್ಕಾಗಿ ಬಾಳುವವರು ಬೇಕು. ಸಾಯುವ ಅಂಜುಗುಳಿಗಳಲ್ಲ. ದೇವರಿಗಾಗಿ ಸಾಯಲು ಮುಂದಾದವರು ಆತ್ಮಹತ್ಯೆಗೆ ಮುಂದಾದವರಂತೆ.

ಸಾಯಬೇಕೆನ್ನುವುದು, ಅತ್ಯಂತ ಹೀನ ಕಾರ್ಯ, ಬದುಕುವ ಧೈರ್ಯವಿರಬೇಕು, ಸಾವು ಬಂದಾಗ ಸಂತೋಷದಿಂದ ಅಪ್ಪಿದರಾಯ್ತು.

ದೇವರಿಗೆಂದು ಸ್ವತಃ "ಮುಡಿಪು" ಕೊಡುವುದಕ್ಕಿಂತಲೂ, ಕೀಳೆಂದರೆ ಇಂದ್ರಿಯ ಸುಖಭೋಗ. ದೇವರ ಹೆಸರಿನಲ್ಲಿ ಯೋನಿ ಮಂಡಲಾದಿಗಳನ್ನು ಪೂಜಿಸಿ, ಮುಂದಿರದ ಪುರೋಹಿತರು, ಕನ್ಯಾಭೋಗದಲ್ಲಿ ನಿರತರಾಗುವ ಕಾರ್ಯವಂತೂ ಪಾದಕವೇ ಆಗಿದೆ. ಇದನ್ನಂತೂ ಮೊದಲು ತೊರೆಯಬೇಕು. ದೇವಿ ದುರ್ಗೆಯರ ಹೆಸರಿನಲ್ಲಿ ಇದೆಲ್ಲ ನಡೆಯುತ್ತಿದೆ.

೫೮೬

ಜಾಣಲೈನಯಟ್ಟಿ ಚಪಲಾಯತಾಕ್ಷುಲ, ವಲಪುಲರಸಿ ಜೂಜಿ ಬ್ರಮಯನೇಲ
ಬಯಲಿರೂಪುಲೆಲ್ಲ ಬರಿಕಿಂಪಗಾನೇಲ? ವಿಶ್ವದಾಭಿರಾಮ ವಿನುರ ವೇಮ.

ಜಾಣರ ದವರೂ ಚಪಲ ಕಣ್ಣಿಗೆ ಒಲಿದು,
ಕಾಮುವರಸಿ ಕಂಡು ಭ್ರಮಿಸಲೇಕೆ?
ಬಾಹ್ಯರೂಪವೆಲ್ಲ ಪರಕಿಸುವುದು ಏಕೆ?
ವಿಶ್ವದಾಭಿರಾಮ ಕೇಳು ವೇಮ.

ಒಳಿತು-ಕೆಡಕು, ಸತ್ಯ-ಅಸತ್ಯ ಇತ್ಯಾದಿಗಳನ್ನು ಕಂಡುಕೊಂಡ ಜಾಣರು, ವೇದ ಶಾಸ್ತ್ರ ಓದಿದ ಪಂಡಿತರು, ಹೆಣ್ಣಿನ ಚಪಲ ಕಣ್ಣಿನ ನೋಟಕ್ಕೆ ಒಲಿದ ಘಟನೆಗಳುಂಟು-ಅವರೆಲ್ಲ ಕಾಮು-ದಾಸೆ ತೋರಿ ಬುದ್ಧಿ ಮುಂಕುಗೊಂಡವರಿದ್ದಾರೆ. ಭ್ರಮೆಗೊಂಡು ತಿರಗಿದ್ದಾರೆ.

ಸ್ತ್ರೀ ಶರೀರವು ಕೇವಲ ದರ್ಶನೇಂದ್ರಿಯಕ್ಕೆ ಮಾತ್ರ ಚೋದನೆ ನೀಡಬಹುದು. ಆದರೆ ಇಂದ್ರಿಯಗಳೆಲ್ಲವನ್ನು ಗೆದೆಯುವ ಪ್ರಯತ್ನಶೀಲರು ನೋಟದಿಂದ ಆಕರ್ಷಿತರಾಗಿ ಮನಸೋತು, ಇಂದ್ರಿಯಗಳ ದಾಸರಾಗುವುದೇಕೆ? ಇಂದ್ರಿಯಗಳ ದಾಸರಾದ ಮೇಲೆ ಸದಸದ್ವಿವೇಕ ಉಳಿಯಲಾರದು.

ನಿಜವಾಗಿ ನೋಡಿದರೆ ಸಾಧಕನು, ಹೊರಗಿನ ಬುರುಗು ಬಣ್ಣಗಳತ್ತ ದೃಷ್ಟಿ ಹರಿಸಬೇಕಿಲ್ಲ. ಬಾಹ್ಯ ರೂಪದಿಂದ ಏನಾಗಬೇಕಾಗಿದೆ? ಬಾಹ್ಯರೂಪವನ್ನು ದಿಟ್ಟಿಸಿ ನೋಡಿ, ಅನೇಕರು ಇಂದ್ರಿಯಾಕರ್ಷಣೆಗೆ ಮಾರು ಹೋಗಿದ್ದಾರೆ.

೫೮೭

ತರಚು ಜದುವ ಜದುವ ದರ್ಕವಾದಮೆಕಾನಿ, ದಿವ್ಯ ಜ್ಞಾನ ಮಬ್ಬಟ ದೇಟಪಡದು.
ಪಸಿರಿಕಾಯ ಪುರುಗು ಪಗಿದಿನಿ ಜೆಡಿಪೋವು, ವಿಶ್ವದಾಭಿರಾಮ ವಿನುರ ವೇಮ

ತರದ ಓದನೋದೆ, ತರ್ಕವಾದನಷ್ಟೆ.
ದಿವ್ಯ ಜ್ಞಾನವಲ್ಲಿ ದೃಷ್ಟಿಗಿಲ್ಲ.
ರೇಶಿನೆಯ ಹುಳುವಿನ ರೀತಿ ಕೆಟ್ಟು ನೋಹ.
ವಿಶ್ವದಾಭಿರಾಮ ಕೇಳು ವೇಮ,

ಒಬ್ಬನು ಬದುಕಿರುವ ವರೆಗೂ ಓದಬಹುದು. ಒಬ್ಬನು ಒಂದು ಮತೀಯ ಗ್ರಂಥವನ್ನು ಓದಿದರೆ, ಇನ್ನೊಬ್ಬನು ಇನ್ನೊಂದು ಮತೀಯ ಗ್ರಂಥವನ್ನು ಓದಬಹುದು. ಇದರಿಂದ ಯಾವುದಾದರೊಂದು ವಿಚಿತ್ರ ಧಾರ್ಮಿಕ ಭಾವನೆಯನ್ನು ಕಪಿ ಮುಷ್ಟಿಯಿಂದ ಹಿಡಿಯಬಹುದು. ಅಥವಾ ಅದಕ್ಕಿಂತ ವಿಚಿತ್ರವಾದ ಮೂಢ ನಂಬುಗೆಯನ್ನು ಒಪ್ಪಿಕೊಳ್ಳಬಹುದು. ಇದೆಲ್ಲವೂ ಬುದ್ಧಿಯ ಗರಡಿಯಲ್ಲಿ ನಡೆದ ವ್ಯರ್ಥ ಹೋರಾಟವಷ್ಟೇ. ತರ್ಕವಾದದಿಂದ ದಿವ್ಯಜ್ಞಾನ ತಿಳಿಯುವದಿಲ್ಲ,

ಕೇಳಿ ತಿಳಿದ ಇಲ್ಲವೆ ಓದಿ ತಿಳಿದ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ತತ್ತ್ವ ದರ್ಶನದ ಅನುಭವ ಪಡೆಯದೆ, ಜ್ಞಾನ ಲಭಿಸದು. ಜ್ಞಾನ ಪಡೆಯದೆ, ಓದಿ ತಿಳಿದ ವಿಷಯವೊಂದನ್ನು ಬೇರೊಂದು ವಿಷಯದ ಖಂಡನೆಗೆ ಬಳಸುತ್ತ ಮನಸ್ಸಿನ ಸುತ್ತ, ವಿಚಾರ ಗೊಂದಲ ಎಬ್ಬಿಸುವುದು, ರೇಶ್ಮೆ ಹುಳವು ತನ್ನ ಸುತ್ತು ತಾನೇ ರೇಶ್ಮೆ ಎಳೆಯ ಮೊಟ್ಟೆ ಸೃಜಿಸಿ, ಒಳಗೆ ಸಿಲುಕಿ ಬೀಳುವಂತಾಗುತ್ತದೆ.

(ಕಠ ಮತ್ತು ಮುಂಡಕೋಪನಿಷತ್ತುಗಳೂ ಇದನ್ನೇ ಸಾರುತ್ತವೆ:

'ನ್ಯಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ, ನ ಬಹುನಾ ಶ್ರುತೇನ'

ಬಹಳ ಓದುವದರಿಂದಾಗಲಿ, ಪಾಂಡಿತ್ಯಪೂರ್ಣ ಚರ್ಚೆಯಿಂದಾಗಲಿ, ಇಲ್ಲವೆ ಹರಿತ ಬುದ್ಧಿಯಿಂದ ಈ ಆತ್ಮವು ಲಭ್ಯವಾಗುವದಿಲ್ಲ,)

೫೮೮

ಎದ್ದು ಕನ್ನ ದುನ್ನ ಯೇಲಾಗು ತಕ್ಕುವ? ಎರುಪುಲೇಕಪೋಯಿ ತರಿಗೆ ನಿಲುವ,
ನೆರ್ಪೇಕುಗನಿವಾನಿ ನೆರಯೋಗಿಯುಂದುರಾ? ವಿಶ್ವದಾಭಿರಾಮ ವಿನುರ ವೇಮ,

ಎತ್ತಿಗಿಂತ ಕೋಣ, ಎಮ್ಮೆಯೆಂತು ಹೀನ?
ಕೆಂಪು ಇರದೆ ಹೋಯ್ತು, ಕ್ರಯವುಟ್ಟು.
ನೇರವರಿಯದವನ ನೆರೆಯೋಗಿಯೆನುವರೆ?
ವಿಶ್ವದಾಭಿರಾಮ ಕೇಳು ವೇಮ.

ಆಕಳು-ಎಮ್ಮೆಗಳೆರಡೂ ಹಾಲು ಕರೆಯುವ ಪ್ರಾಣಿಗಳು. ಮೇವು ತಿನ್ನುವ ಪ್ರಾಣಿಗಳು. ಎತ್ತು ಕೋಣಗಳು ಹೂಡುವ ದನ. ಎತ್ತು ಯಾವ ಯಾವ ಕಾರ್ಯಗಳಿಗೆ ಉಪಯೋಗವಾಗುವದೋ, ಆ ಎಲ್ಲ ಕಾರ್ಯಗಳಿಗೂ ಕೋಣವನ್ನು ಬಳಸಬಹುದು. ಆದರೂ ಕೋಣಕ್ಕಿಂತ ಎತ್ತಿಗೆ ಹೆಚ್ಚಿನ ಬೆಲೆ ಇದೆ? ಇದಕ್ಕೆ ಕಾರಣವೇನು? ಕೋಣ ಕಪ್ಪು; ಎತ್ತು ಕೆಂಪು ಇಲ್ಲವೆ ಬಿಳಿ ಬಣ್ಣದ್ದು ಎಂದು ತಾನೇ? ಹೊರಗಿನ ಬಣ್ಣ ಇಷ್ಟೊಂದು ಅಂತರಕ್ಕೆ ಕಾರಣವಾದರೆ, ಇನ್ನು ಒಳಗಿನ ಗುಣದಿಂದ ಎಷ್ಟು ಅಂತರ ಉಂಟಾಗಬಹುದೆಂದು ಊಹಿಸಿರಿ.

ಯೋಗಿಯಾದವನು ಬ್ರಹ್ಮಜ್ಞಾನ ಮಾಡಿಕೊಂಡು ಬ್ರಹ್ಮದೊಡನೆ ಬೆಂದಾದವನು. ಯಾರಿಗೆ "ನೆರವು" ಅಂದರೆ ಬ್ರಹ್ಮವನ್ನು ತಿಳಿಯುವದು ಆಗಿಲ್ಲವೋ, ಅವರನ್ನು "ನೆರೆ

ಯೋಗಿ" ಎನ್ನುವುದು ಹೇಗೆ? ಬ್ರಹ್ಮ ಸಾಕ್ಷಾತ್ಕಾರವಾದವನು ಮತ್ತು ಯೋಗಿ ತೋರಿಸಿಕೊಳ್ಳುವವರಲ್ಲಿ ಮಹದಂತರ ಉಂಟು.

೫೬೮

ಸುತರು ಸತಿಯುಮಾಯಸುಖದುಃಖಮುಲಮಾಯ,ಸಂಸ್ಕೃತಿಯನು ಮಾಯಜಾವುಮಾಯ
ಮಾಯ ಬ್ರತುಕುಕಿಂತ ಮಾಯಗಲ್ವಿಂಚಿತಿ, ವಿಶ್ವದಾಭಿರಾಮ ವಿನುರ ವೇಮ.

ಸುತರು ಸತಿಯು ಮಾಯೆ; ಸುಖದುಃಖವು ಮಾಯೆ;
ಸಂಸಾರವು ಮಾಯೆ, ಸಾವು ಮಾಯೆ;
ಮಾಯೆ-ಬದುಕು, ಇಷ್ಟು ಮಾಯೆ ಹುಟ್ಟಿಸಿತಲ!
ವಿಶ್ವದಾಭಿರಾಮ ಕೇಳು ವೇಮ.

ಮಾಯೆ ಇರುವ ವಸ್ತುವಲ್ಲ. ಇಲ್ಲದ್ದೂ ಅಲ್ಲ. ಇರುವ ವಸ್ತುವೇ ಇಲ್ಲದ್ದರಂತೆ ಪರಿಣಾಮ ಬಿರುವುದೇ ಮಾಯೆ. ಸತ್ಯಕ್ಕೆ ಜ್ಞಾನಕ್ಕೆ ವಿರೋಧವಾದುದು ಮಾಯೆ.

ಹೆಂಡಿರು ಮಕ್ಕಳು ಹತ್ತು ಹೊಂದಿದವರಂತೆ ತೋರುತ್ತಾರೆ. ಆದರೆ ಕಷ್ಟ ಬಂದಾಗ ಇಲ್ಲವೆ ಸಾವು ಸಮೀಪಿಸಿದಾಗ ಇವರಾರೂ ನಮ್ಮ ಕೂಡ ಪಾಲುಗೊಳ್ಳರು. ಕೆಲವರು ದೇಹದಿಂದ ದೂರವಿದರೆ ಇನ್ನೂ ಕೆಲವರು ಮನಸ್ಸಿನಿಂದ ದೂರಾಗುವರು. ಸತಿ ಸುತರು ನಮ್ಮ ದೇಹದ ಅಂಶವೆಂದೂ, ನಮಗೆ ಮರಣಾಂತರ ಸದ್ಗತಿ ದೊರಕಿಸುವರೆಂಬುದೂ ಮಿಥ್ಯ ಎಂಬುದು ತಿಳಿಯುವದು. ಆತ್ಮ ಜ್ಞಾನವಾದರೆ ತಾನೇ ತಾನು. ತನಗಾರೂ ಇಲ್ಲ ಎಂಬ ಅರಿವು ವ್ಯಕ್ತಗೊಳ್ಳುವುದು

ಬಯಕೆ ಈಡೇರದಿದ್ದರೆ, ದುಃಖವೆನಿಸುತ್ತದೆ, ಬಯಕೆಗಳು ಹುಟ್ಟದಂತೆ ನಮ್ಮ ಮನಸ್ಸಿನ ಸ್ಥಿತಿಯಾದರೆ? ಸುಖವಿಲ್ಲ; ದುಃಖವೂ ಇಲ್ಲ. ಇಲ್ಲದ ಸುಖದುಃಖ ಇದ್ದಂತೆ ತೋರುತ್ತದೆ. ಇದು ಮಾಯೆ.

ಪ್ರಕೃತಿಯಲ್ಲಿ ಲಯವಾದ ಜೀವಕ್ಕೆ ಸಂಸಾರ ಕಾರಣವಾಗುವದು. ಜೀವನಿಗೆ ದೇಹ ಸಂಬಂಧಾದಿ ಉಂಟಾಗುವದೆಲ್ಲ ಸಂಸಾರದಿಂದ. ಬ್ರಹ್ಮ ಪ್ರಾಪ್ತಿಯಾದೊಡನೆ ಸಂಸಾರವಿಲ್ಲ ಉಪನಿಷತ್ತು ಹೇಳುತ್ತಿವೆ, ಆದರಿಂದ ಮಾಯೆ.

ಸಾವು ಎಂದರೆ ಅಂತ್ಯ; ಕೊನೆ. ಜೀವಕ್ಕೆ ದೇಹ ಸಂಬಂಧಗಳು ತಪ್ಪಿದಾಗ ಸಾವು ಎನಿಸುವದು. ಬ್ರಹ್ಮವರಿತಾಗ ದೇಹ ಸಂಬಂಧವಿಲ್ಲ, ಸಾವು ಇಲ್ಲ. ಆದ್ದರಿಂದ ಸಾವು ಮಾಯೆ. ಬದುಕು ಬ್ರಹ್ಮವರಿತಾಗ ಇಲ್ಲವೇ ಇಲ್ಲ ಆದರಿಂದ ಅದು ಮಾಯೆ ಬ್ರಹ್ಮವೇ ಸತ್ಯವಸ್ತು; ಅದು ಹಗ್ಗ. ಉಳಿದುದೆಲ್ಲ ಹಾವಿನಂತೆ ಕಾಣೋಟ. ಅದೆಲ್ಲ ಬ್ರಹ್ಮ ಮಾಯೆ.

೫೬೯

ಸಿಗ್ಗು ವಾರಲಮನಿ ಸೃಷ್ಟಿಲೋಪರಿವಾರು, ವೆರ್ರಿ ವೇಮನಗನಿ ವೆರಗುಪಡಿರಿ,
ತೆನುಂಗಲುಂಗು ಸಿಗ್ಗು ದೈವಮೆರುಂಗುರಾ, ವಿಶ್ವದಾಭಿರಾಮ ವಿನುರ ವೇಮ,

ನಾಚುಗೆಯುಳ್ಳವರು ನಾಡಿನೊಳಿರುವರು,
ಹುಚ್ಚು ವೇಮನೆಂದ ಹೆದರುತಿಹರು.
ತನಗಿಲ್ಲ ನಾಚುಗೆ ದೈವಕ್ಕೆ ತಿಳಿವುದು.
ವಿಶ್ವದಾಭಿರಾಮ ಕೇಳು ವೇಮ.

ನಾಚುಗೆಯೆಂದರೆ ಸಂಕೋಚ ಪಡುವಿಕೆ. ಹೆಣ್ಣು ತನ್ನ ಎದೆಯ ಸ್ಪುಟಗೊಂಡ ಭಾಗ, ಗುಹ್ಯ ಪ್ರದೇಶಾದಿಗಳ ಬಗ್ಗೆ ಮೋಹ ತಾಳುತ್ತಾಳೆ. ತನ್ನ ಶರೀರ ಈ ಭಾಗಗಳನ್ನು ಹೆರವರು ಕಂಡು ಹೇಗೆ ಭಾವಿಸುವರೋ ಎಂಬ ಸಂಕೋಚ ಅವಳಿಗಾಗುತ್ತದೆ. ಇವು ಅಪ್ಪಿ ತಪ್ಪಿ ಯಾರಿಗಾದರೂ ಕಂಡ ಕ್ಷಣವೇ ಅವಳು ನಾಚಿಕೊಳ್ಳುವಳು. ಇದೇ ಅವಯವಾದಿಗಳನ್ನು ಚಿಕ್ಕ ವಯಸ್ಸಿನಲ್ಲಿ ತೋರ್ಪಡಿಸಿದಾಗ ನಾಚುಗೆಯೆನಿಸುವುದಿಲ್ಲ. ಎಕೆಂದರೆ ಆಗ ಆ ಅವಯವಗಳ ಬಗ್ಗೆ ಮೋಹವಿರುವುದಿಲ್ಲ ಸಂಕೋಚ ಹುಟ್ಟುವುದಿಲ್ಲ.

ಅದೇ ರೀತಿ, ಇಂದ್ರಿಯಗಳನ್ನು ಗೆದ್ದವನಿಗೆ ಇಂದ್ರಿಯಗಳ ಬಗೆಗೆ ಮೋಹ ಹುಟ್ಟುವದಿಲ್ಲ. ಇಂದ್ರಿಯಾದಿಗಳಿಗೆ ವಸ್ತ್ರದ ಹೊದಿಕೆ ಇರಲಿ; ಇಲ್ಲವೆ ದಿಗಂಬರತ್ವವಿರಲಿ; ಅವನಿಗೆ ಅದರ ಪರಿವೆಯಿಲ್ಲ. "ಬಾಲಭಾವ" ಅವನದಾಗಿರುತ್ತದೆ.

ಯೋಗಿಯ ಇಂದ್ರಿಯಾತೀತವಾದ "ಬಾಲವತ್" ಭಾವ, ಸಾಮಾನ್ಯರಿಗೆ ಅರ್ಥವಾಗದೆ, ಅವನನ್ನು ಹುಚ್ಚನೆಂದೂ, ನಾಚುಗೆ ಇಲ್ಲದವನೆಂದೂ ಕರೆಯುತ್ತಾರೆ.

ನಾಚುಗೆಗೆ ಯೋಗಿಯು ನೀಡುವ ಅರ್ಥವೇ ಬೇರೆ. ಬ್ರಹ್ಮಮಾಯೆಯಿಂದ ದೇಹ ಸಂಬಂಧ ಬಂದಿದೆ. ದೇಹದ ಬಗ್ಗೆ ಮೋಹ ತಾಳಿ ಬ್ರಹ್ಮ ಮರೆತರೆ ಮೂಢತನವೆನಿಸುವದು. ಇಂಥ ಮೂಢತನ ಹೊಂದಲು ನಾಚುಗೆ ಪಟ್ಟು, ಯೋಗಿ ತನ್ನ ದೇಹದ ಬಗೆಗೆ ಮೋಹ ತಾಳುವದನ್ನು ತೊರೆಯುತ್ತಾನೆ. ಹೀಗೆ ಯೋಗಿಯ ನಾಚುಗೆ ದೈವಕ್ಕೆ ಮಾತ್ರ ತಿಳಿಯುವದು; ದೈವಗೂಡಿದವರಿಗೆ ತಿಳಿಯುವದು.

೫೯೦

ತನ್ನು ದಾನೆರುಗಡು ತಾನೆವ್ವರಿಕಿ ನೇರ್ವು, ಪ್ರಾಲು ಮಾಲಿತಿರುಗು ಪಶುವುಕೊಡುಕು,
ಕಾಸು ಕೊರಕುಕಾದೆ? ಕರ್ಮ ಮುಲ್‌ಗುಟ್ಟನು, ವಿಶ್ವದಾಭಿರಾಮ ವಿನುರ ವೇಮ.

ತನ್ನತಾ ತಿಳಿಯನು, ತಾನಾರಿಗು ತಿಳಿಸ,
ವ್ಯರ್ಥಸುತ್ತಿ ತಿರುಗೆ, ಪಶುವಿನ ಮುಗ,
ಕಾಸಿಗಾಗಿಯಷ್ಟೆ? ಕರ್ಮಕಟ್ಟುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಪಶುವಿನಲ್ಲಿ ಚಿತ್ ಅಷ್ಟೇ ಉಂಟು. ಚಿದ್ಬುದ್ಧಿಯಿಲ್ಲ. ಆದರಿಂದ ತಾನು ಮಾಡುವದು ಸರಿಯೋ ತಪ್ಪೋ ಎಂದು ವಿವೇಚಿಸಿ ತಿಳಿದುಕೊಳ್ಳುವ ಶಕ್ತಿ ಪಶುವಿನಲ್ಲಿಲ್ಲ. ಸತ್ಯ.

ವಿಚಿತ್ರ, ಅರಿಯುವ ಅಂದರೆ ಸದಸದ್ವಿವೇಕ ಮನುಷ್ಯನಲ್ಲಿ ಮಾತ್ರ ಉಂಟು. ಇದರಿಂದ "ತಾನು ಎಂದರೆ ನಶ್ವರವಾದ ದೇಹವೇ?ಇಲ್ಲವೆ ಶಾಶ್ವತವಾದ ಆತ್ಮವೇ? ಕಣ್ಣಿಗೆ ಕಾಣುವ ಈ ಪ್ರಪಂಚವು ಸತ್ಯವೇ? ಒಡಹುಟ್ಟಿದವರು ಸಾಯುತ್ತಾರೆ. ಹಡೆದವರು ಸಾಯುತ್ತಾರೆ ಮರಗಳು ಏಳುತ್ತವೆ. ಬೀಳುತ್ತವೆ. ನೀರಿನಿಂದ ಪರ್ವತಗಳು ಏಳುತ್ತವೆ. ಮತ್ತೆ ಸವೆ-ಸವೆದು ನೀರಿನೊಡನೆ ಜಲಧಿ ಸೇರುತ್ತವೆ. ನೀರು ಉಗಿಯಾಗಿ. ಮೋಡವಾಗಿ ಮತ್ತೆ ನೀರಾಗುತ್ತದೆ. ಮನುಷ್ಯನ ಶರೀರ ಪಂಚ ಭೂತಗಳಲ್ಲಿ ಸೇರುತ್ತದೆ. ಪಂಚಭೂತಗಳಿಂದ ಮನುಷ್ಯ ಶರೀರ ಉಂಟಾಗುತ್ತದೆ. ಇದರಲ್ಲಿ 'ಸತ್', ಎಂದರೆ ನಾಮ ರೂಪಗಳ ಬದಲಾವಣೆಗೆ ಒಳಗಾಗದೆ. ಯಾವುದು ಉಳಿಯುವದೋ ಅದುವೆ ಸತ್ಯ. ಅದೇ ಆತ್ಮ, 'ನಾನು, ಎನ್ನುವದು ಅದು ಮಾತ್ರ ಅದರ ಅರಿವು ಆದರೆ ಎಲ್ಲರಲ್ಲಿರುವ ಆತ್ಮ ಒಂದೇ ಎಂಬ ಭಾವನೆ ಮೂಡುತ್ತದೆ ಆತ್ಮವೇ ಬ್ರಹ್ಮ. ದೇಹದೊಳಗಿದ್ದು ದೇಹ--ವ್ಯಾಪಾರ ನಿಯಂತ್ರಿಸುವ ಸರ್ವಂತರ್ಯಾಮಿನ್. ಇವನನ್ನು ಹುಡುಕಲು ತೀರ್ಥ ಕ್ಷೇತ್ರ ಸುತ್ತಬೇಕಾಗಿಲ್ಲ, ಒಡಲು ಶೋಧಿಸಿ ನೋಡಿಕೊಳ್ಳಬೇಕು. ಯಜ್ಞದಿಂದ ದೇವರು, ಯಜ್ಞದಲ್ಲಿ ದೇವರು, ಯಜ್ಞವೇ ದೇವರು ಎಂದು ಹೊರಗಿನ ವಿಧಿ-ಕರ್ಮಗಳಲ್ಲಿ ಮನಸ್ಸು ತೊಡಗಿಸಿ, ಕಲ್ಪಿತ ದೇವತೆಯ ಪ್ರಾರ್ಥನಾ ಮುಂತ್ರಗಳಿಗೆ ಊಹೆಯ ವಿವರಣೆ ನೀಡಿ, "ಪುರೋಹಿತರಿಗೆ ಕೊಡುವ ದಕ್ಷಿಣೆಯಿಂದ ಯಜ್ಞ-ಕರ್ಮದಲ್ಲಿ ಇರುವ ನ್ಯೂನತೆ ಸಹ ಹೋಗುವುವೆಂದು" ಕಾಸು ಪಡೆಯಲು ಕರ್ಮದ ಗಂಟು ಹಾಕುವದು,

ಕಗ೧

ಏಂತೊ ಚದುವು ಜದಿವಿಯೆನ್ನಿ ವಿನ್ನ ನುಗಾನಿ,ಹೀನುಡನಗುಣಂಬು ಡವಗುಣಂಬುಮಾನಲೇಡು
ಬೊಗ್ಗು ಬಾಲ ಗಡಂಗ ಜೋವುನಾ ಮಲಿನಂಬು? ವಿಶ್ವ ದಾಭಿರಾಮ ವಿನುರ ವೇಮ.

ಎಷ್ಟೊ ಓದನೋದಿ ಎಷ್ಟು ಕೇಳಲೇನು?
ಹೀನನಿಹನ ಗುಣವು; ಹೋಗದಲ್ಲ!
ಹಾಲೆರೆಯಲಿದ್ದಲು, ಹೋಹುದೆ ಮಲಿನವು?
ವಿಶ್ವದಾಭಿರಾಮ ಕೇಳು ವೇಮ.

ಜನರು ಶಾಸ್ತ್ರ ಓದುತ್ತಾರೆ. ಈ ಶ್ರವಣ ಪಾರಾಯಣಗಳು ಜೀವಾವಧಿಯಲ್ಲಿ ನಡೆದಿದ್ದರೂ ಜನರು ತಮ್ಮ ಕೀಳು ಗುಣಗಳನ್ನು ತೊರೆಯುವದಿಲ್ಲ. ಅನ್ಯರ ಬಗ್ಗೆ ಅಸೂಯೆ ಪಡುತ್ತಾರೆ. ಬಲಹೀನರನ್ನು ಪೀಡಿಸುತ್ತಾರೆ. ಬುದ್ಧಿ ಬಲದವರು, ಮೋಸ ಕುಯುಕ್ತಿಗಳಿಯುತ್ತಾರೆ. ಕಾಯ ಬಲದವರು ಹಿಂಸೆ-ಪೀಡೆಗಿಳಿಯುತ್ತಾರೆ.

ಓದು ಒಳ್ಳೆಯದೇ. ಉತ್ತಮ ತತ್ತ್ವ. ಓದಿನಿಂದ ಗೊತ್ತಾಗುತ್ತವೆ. ಆದರೆ ತತ್ತ್ವ ಪಠಿಸಿದ ಮಾತ್ರಕ್ಕೆ ಮನಸ್ಸು ವಿಕಾಸವಾಗುವದಿಲ್ಲ. ಇದ್ದಲು ಕಪ್ಪಾದುದಷ್ಟೇ. ಆ ಕಪ್ಪಾದ ಇದ್ದಲಿನ ಮೇಲೆ ಬೆಳ್ಳಗಿರುವ ಹಾಲನ್ನು ಎಷ್ಟು ಸುರಿದರೂ, ಇದ್ದಲು ಬೆಳ್ಳಗಾಗದು. ಅದೇ ರೀತಿ ತಿಳಿದುಕೊಳ್ಳುವ ಹಂಬಲ, ತತ್ತ್ವಗಳನ್ನು ಸಾಧನೆಯ ಮೂಲಕ ಅನುಭವಿಸುವ ಭಕ್ತಿ, ಇಲ್ಲದೆ ಗ್ರಂಥ ಪಠಣವಾಗಲಿ,ಕಥೆ-ಪುರಾಣ ಶ್ರವಣವಾಗಲಿ,ಯಾವ ಪ್ರಯೋ

ಜನಕ್ಕೂ ಬಾರದು. ಸಾಧನೆಯಿಂದ ನಮ್ಮ ಕರ್ಮೇಂದ್ರಿಯಗಳು ಜ್ಞಾನೇಂದ್ರಿಯಗಳು ಶುದ್ಧಗೊಳ್ಳಬೇಕು. ಸದ್ವಸ್ತುವನ್ನು ತಿಳಿಸುವ ತತ್ತ್ವಗಳನ್ನು ಅನುಭವಿಸಿ ತಿಳಿಯಲು ಮನಸ್ಸು ಸಿದ್ಧವಾದಾಗ ಓದಿನ ಪ್ರಯೋಜನವಾಗುವದು.

ಕಗ೨

ಆಲು ಬಿಡ್ಡಲು ಧನ ಮುರಯದಲ್ಲಿಯದಂಡ್ರಿ, ಕೈಮನುಜುಂಡು ವಿಗುಲಗಷ್ಟ ಪಡುನು,
ತನಕು ನೆವರುಲೇರು ತಾನು ಬ್ರಹ್ಮಮುಗನ್ನ, ವಿಶ್ವದಾಭಿರಾಮ ವಿನುರವೇಮ,

ಮಡದಿ ಮಕ್ಕಳು ವಿತ ಮಾತೆಗಾತ ಮನುಜ
ಕನಕ ಪಡೆಯಿ ಬಹಳ ಕಷ್ಟಪಡುವ.
ತನಗೆ ಯಾರು ಇಲ್ಲ, ತಾನು ಬ್ರಹ್ಮವರಿಯೆ.
ವಿಶ್ವದಾಭಿರಾಮ ಕೇಳುನೇಮ.

ಹೆಂಡಿರು ಮಕ್ಕಳು, ತಂದೆ,-ತಾಯಿಗಳ ಪಾಲನೆ ಪೋಷಣೆಗಾಗಿ ಬಹಳಷ್ಟು ಹಣ ಕೂಡಿ ಇಡಲು ಬಯಸುತ್ತಾನೆ. ಆಪತ್ಕಾಲಕ್ಕೆ ತನ್ನ ರಕ್ತ ಸಂಬಂಧಿಗಳಿಗೆ ಉಪಯೋಗವಾಗಲಿ ಎಂದು ಹಣವನ್ನು ಹೂಳಿಡುತ್ತಾನೆ. ಧನ ಸಂಚಯ ಮಾಡಲು ತುಂಬಾ ಕಷ್ಟ ಪಡುತ್ತಾನೆ. ಆದರೆ 'ಬ್ರಹ್ಮ, ವರಿತರೆ ಹೆಂಡಿರು ಮಕ್ಕಳು ತಾಯಿ-ತಂದೆ ಎಂಬ ಮೋಹ ಭಾವ ಉಳಿಯುವದಿಲ್ಲ. ಒಂದೇ ಆತ್ಮ ಎಲ್ಲರೂ ಉಂಟು, ಆಯಾ ದೇಹದ ಉಪಾಧಿಯಿಂದ ಭಿನ್ನತೆ ತೋರುತ್ತದೆ; ಬ್ರಹ್ಮವರಿತೊಡನೆ ಈ ಭೇದವೆಲ್ಲ ಇಲ್ಲದಾಗಿ, ಅಸಕ್ತಿ ಹಿಂಗಿ ಭಕ್ತಿಯೊಂದೇ ಉಳಿಯುತ್ತದೆ.

(ಶಂಕರಾಚಾರ್ಯರ ಅಭಿಪ್ರಾಯ ನೋಡಿರಿ: "ಯಾವದ್ವಿತ್ತೋಪಾರ್ಜನಶಕ್ತ
ಸ್ತಾವನ್ನಿಜ ಪರಿವಾರೋ ರಕ್ತಃ। ಪಶ್ಚಾಜ್ಜೀವತಿ ಜರ್ಜರ ದೇಹೇ ವಾರ್ತಾಂ ಕೋಪಿ ನ
ಪೃಚ್ಛತಿ ಗೇ ಹೇ ॥

ಎಲ್ಲಿಯ ವರೆಗೆ ಹಣ ಗಳಿಸಲು ಶಕ್ತನಾಗಿರುವನೋ, ಅಲ್ಲಿಯ ವಾತ್ರ ಸ್ವಂತ ರಕ್ತ ಸಂಬಂಧ ಪರಿವಾರವೆಲ್ಲ ದೇಹ ಮುಪ್ಪಾದ ಮೇಲೆ ಯಾವ ರಕ್ತ--ಸಂಬಂಧಿಗಳೂ ಹೇಗೆ? ಎಂತು? ಕೇಳುವುದಿಲ್ಲ.)

ಕಗ೩

ಆಸ ಪಾಪ ಜಾತಿ ಯನ್ನಿಂಟಿಕಂಟೆನು, ಆಸಚೇತ ಯತುಲು ಮೋಸಪೋರೆ?
ಚೂಚು ವಿಡುಚುವಾರು ಶ್ರದ್ಧಾತ್ಮಲೆಂದುನು, ವಿಶ್ವದಾಭಿರಾಮ ವಿನುರ ವೇಮ,

ಆಶೆ ಪಾಪವಹುದು ಎಲ್ಲಕಿಂತ ಆಚೆ.
ಆಶೆಯಿಂದ ಮುನಿಯು ಮೋಸಗೊಳನೆ?
ಸಮೀಕ್ಷಿಸಿ ಬಿಡುವವ ಶುದ್ಧಾತ್ಮನೆನಿಪನು.
ವಿಶ್ವದಾಭಿರಾಮ ಕೇಳು ವೇಮ.

ಯಾವ ಕರ್ಮದಿಂದ ನಮ್ಮ ಚಿತ್ತವೃತ್ತಿಗಳು ಹೀನ ವಸ್ತುಗಳ ಮೇಲೆ ಹರಿದು ಅಧರ್ಮಕ್ಕೆ ದಾರಿ ಮಾಡುವವೋ, ಅಂಥ ಕರ್ಮ ಫಲವೇ ಪಾಪ ಹೆರವರ ವಸ್ತುವನ್ನು ಅಪಹರಿಸುವುದು ದಾಪ. ಕರ್ಮೇಂದ್ರಿಯತಂದ ವಸ್ತುವನ್ನು ಎತ್ತಿ ಒಯ್ಯುವದು ಕಳವು. ಮನಸ್ಸಿನಲ್ಲಿ ಹೆರವರ ವಸ್ತು ಬಯಸಿ ಅದು ತನ್ನದಾಗಲೆಂದು ಕಳವಿಗೆ ಪೂರ್ವ ಭಾವಿಯಾಗಿ ಉಂಟಾಗುಣ ಆಶೆಯೂ ಪಾಪವೇ. ಅಷ್ಟೇ ಸರ್ವ ಹೀನ ಕಾರ್ಯಗಳಿಗೆ ಮೂಲವಾಗಿರುವ ಆಶೆ ಮಹಾಪಾಪವೇ ಸರಿ.

"ಜನ್ಮೌಷಧಿ-ಮಂತ್ರ-ತಪಃ- ಸಮಾಧಿಜಾಃ ಸಿದ್ಧಯಃ।"

"ಜನ್ಮ, ಔಷಧಿ, ಮಂತ್ರ, ತಪಸ್ಸು ಅಥವಾ ಏಕಾಗ್ರತೆಯಿಂದ ಸಿದ್ಧಿಗಳು ದೊರಕುತ್ತವೆ" ಎಂದು ಪತಂಜಲಿ ಮಹರ್ಷಿಯು ಯೋಗಸೂತ್ರ ತಿಳಿಸುತ್ತದೆ. ಇವಗಳಿಂದ ವಿವಿಧ ಚಿತ್ತಗಳನ್ನು ಪಡೆಯಬಹುದು. ಆ ಚಿತ್ ಶಕ್ತಿಯಿಂದ ಮಹಿಮೆ ವ್ಯಕ್ತಗೊಳಿಸಬಹುದು. ಆದರೆ ಚಿತ್ತೈಕಾಗ್ರತೆಯಿಂದ ಪಡೆದ ಸಮಾಧಿ ಮಾತ್ರ ಆಶಾರಹಿತವಾದದ್ದು. ಉಳಿದ ಸಮಾಧಿಗಳಲ್ಲಿ ಆಸೆಯಿದೆ. ಅಂದ ಮೇಲೆ, ಮಂತ್ರ, ತಪಸ್ಸುಗಳಿಂದ ಸಮಾಧಿ ಚಿತ್ತ ಹೊಂದುವ ಮುನಿ, ಆಸೆಯ ಪ್ರಭಾವಕ್ಕೆ ಒಳಗಾಗುವ ಸಂಭವವುಂಟು.

ಒಳಿತು-ಕೆಡಕುಗಳನ್ನು ಸರಿಯಾಗಿ ಕಂಡು, ಕೆಡುಕಿನಿಂದಾಗುವ ತುರ್ತು ಸುಖವನ್ನೂ ದೂರದ ಮಹಾದುಃಖವನ್ನೂ ತೊರೆಯುವವನುಶುದ್ಧ ಆತ್ಮವುಳ್ಳವನಾಗುತ್ತಾನೆ.

೫೯

ನಿಜಮುಲಾಡುವಾನಿ ನಿಂದಿಂಚು ಜಗಮೆಲ್ಲ, ನಿಜಮುಲಾಡೆರಾದು ನೀಚುತೋಡ
ನಿಜಮುಹಾತ್ಮ ಗೂಡಿ ನಿಜಮಾಡಲಯಮುರಾ ವಿಶ್ವದಾಭಿರಾಮ ವಿನುರ ವೇಮ,

ನಿಜವನಾಡುವವನ ನಿಂಡಿಸುವುದು ಜಗವು.
ನಿಜವಾಡಬಾರದು, ನೀಚರೊಡನೆ.
ನಿಜಮಹಾತ್ಮರೊಡನೆ ನಿಜವನಾಡಬೇಕು.
ವಿಶ್ವದಾಭಿರಾಮ ಕೇಳು ವೇಮ.

ಅಸ್ತಿ ಇತಿ "ಸತ್" ಎಂದು ವ್ಯಾಖ್ಯೆ. ಸತ್ಯವೆಂದರೆ ನಿಜ. ಯಾವುದು ಎಲ್ಲ ಕಾಲಗಳಲ್ಲಿ ಇರುವುದೋ ಅದು ನಿಜ. ನಮ್ಮ ವಸ್ತು ಒಡವೆಗಳಾಗಲಿ, ಭೂಮಿ-ಸೀಮೆಗಳಾಗಲಿ ದೊರೆತನ, ಸಿರಿತನಗಳಾಗಲಿ ಯಾವಾಗಲೂ ಇರುವಂಥವಲ್ಲ. ಆದರೆ ಇವನ್ನೇ ಶಾಶ್ವತವೆಂದು ನಂಬಿ, ಪೂಜಿಸುವ ಕೆಳಮಟ್ಟದ ಬುದ್ಧಿಯವರು, ಅಂದರೆ ನೀಚ ಜನರು ಇರುತ್ತಾರೆ. ಅವರೆದುರು, ನಿಜವಾದುದನ್ನು ಹೇಳಿದರೆ, ಅವರು ನಿಂದೆ ಮಾಡತೊಡಗುವರು. ಕಾರಣ ಅವರೊಂದಿಗೆ ನಿಜವನ್ನು ಆಡಿ ಏನು ಫಲ? ಅದಕ್ಕಿಂತ ಮೌನವಾಗಿರುವುದೇ ಲೇಸು.

ನಿಜವಾಗಿ ಮನೋವೈಶಾಲ್ಯ ಪಡೆದ ಜ್ಞಾನಿಗಳ ಆತ್ಮ ಮಹಿಮೆಯರಿತವರ

ಮಹಾತ್ಮರು. ಅಂಥವರೊಂದಿಗೆ ನಿಜವಾಡಬೇಕು. ಅವರು ನಿಜದ ಅರಿವು ಪಡೆಯುತ್ತಾರೆ. ಮತ್ತೆ ಉಳಿದವರಿಗೆ ಮಾರ್ಗ ತೋರಿಸುತ್ತಾರೆ.

೬೯

ಭೂಮಿನಾದಿಯನ್ನ ಭೂಮಿ ಫಕ್ಕುನನವ್ವು, ದಾನಹೀನುಜೂಚಿ ಧನಮುನವ್ವು
ಕದನಭೀತು ಜೂಚಿ ಕಾಲುಂಡು ನವ್ವುನು, ವಿಶ್ವದಾಭಿರಾಮ ವಿನುರ ವೇಮ.

ಭೂಮಿ ತನ್ನದೆನಲು ಭೂಮಿ ನಗುವುದಲ್ಲ !
ದಾನಹೀನ ಕಂಡು ಧನ ನಗುವುದು.
ಕದನ ಭೀರು ಕಂಡು ಕಾಲರಾಯ ನಗುವ.
ವಿಶ್ವದಾಭಿರಾಮ ಕೇಳು ವೇಮ.

ರಾಜನು ತನ್ನ ರಾಜ್ಯಕ್ಕೆ ಸೇರಿದ ಭೂಮಿಯೆಲ್ಲ ತನ್ನದೆಂದು ಜಂಭ ಕೊಚ್ಚಿಕೊಳುವನು. ಭೂಮಿ ಸೃಷ್ಟಿಸಿದ ಶಕ್ತಿ ಬೇರೆ; ಭೂಕಂಪಾದಿಗಳಿಂದ, ಭೂಮಿಯನ್ನು ನಾಶಗೊಳಿಸುವ ಶಕ್ತಿಯೂ ಅದೇ. ಇಂಥ ಶಕ್ತಿಯೊಂದು ಭೂಮಿಯ ಸ್ವಾಮ್ಯ ಪಡೆದಿರುವಾಗ, ಅಲ್ಪ ಕಾಲ ಇದ್ದು ಹೋಗುವವನೊಬ್ಬನು ಈ ಭೂಮಿಯು ತನ್ನದೆಂದು ಹೇಳಿದರೆ, ಭೂಮಿಯ ಜನರೆಲ್ಲ ನಗಲಾರರೆ? ಧನವು ಬರುತ್ತದೆ; ಧನವು ಹೋಗುತ್ತದೆ. ಅದೃಷ್ಟದಿಂದ ಆಗುವ ಕಾರ್ಯವದು. ಈ ಹಣ ನಾನು ಕೂಡಿ ಹಾಕಿದೆ. ಇನ್ನೂ ಇಷ್ಟು ಹಣ ಕೂಡಿ ಹಾಕುತ್ತೇನೆ. ಅನ್ಯರು ಇದಕ್ಕೆ ಸಂಬಂಧ ಪಡೆದವರಲ್ಲ ! ಎಂದು ದಾನ ನೀಡದೆ ಹಣ ಕೂಡಿ ಹಾಕುವ ಲೋಭಿಯನ್ನು ಕಂಡು, ಧನದ ಅಸ್ಥಿರತೆಯನ್ನು ಅರಿತವರು ನಗುತ್ತಾರೆ.

ಹುಟ್ಟಿದವನಿಗೆ ಮರಣ ಬಂದೇ ಬರುತ್ತದೆ. 'ಜಾತಸ್ಯ ಹಿ ಧ್ರುವೋ ಮರಣಂ ? ಎಂದು ಗೀತೆಯೂ ಸಾರುತ್ತದೆ. ದೇಹ ವಿಸರ್ಜನೆ ಮರಣ; ಹಳೆಯ ಅಂಗಿ ಕಳಚಿದಂತೆ. ಎಂಬ ಸತ್ಯವರಿಯದೆ, ಎಲ್ಲಿ ಪ್ರಾಣ ಹೋಗುವದೋ? ಸತ್ತರೆ ಮುಂದೇನು? ಎಂದು ಭೀತಿಗೊಂಡ ಅಂಜುಗುಳಿ ಭಟನನ್ನು ಕಂಡು ಕಾಲರಾಯನು ನಗುತ್ತಾನೆ. ಬರುವ ಮರಣದಿಂದ ಯಾರೂ ತಪ್ಪಿಸಿಕೊಳ್ಳರು, ಎಂದು ಕಾಲ ನಿಯಂತ್ರಿಸುವ ಯಮನು ಅಂಜುಗುಳಿಯನ್ನು ಕಂಡು ನಗದೆ ಇರುವುದೆಂತು?

೬೯

ಪಂಕಜಾಕ್ಷಿಗನ್ನ ಬಂಗಾರು ಬೊಡಗನ್ನ ದಿವ್ಮುವಟ್ಟು ವೇಗ ದೆಲಿವಿಕೆಲ್ಲ
ಮನುಜುಲಕ್ಕನು ದತ್ತ್ವ ಮಹಿ ಮೆಟ್ಲುಗಲುಗುರಾ ? ವಿಶ್ವದಾಭಿರಾಮ ವಿನುರ ವೇಮ.

ಕಮಲನಯನೆ ಕಂಡು ಕನಕದೊಡವೆ ಕಂಡು.
ದಿವ್ಮೆನುವುದು ಬೇಗ ತಿಳಿವಿಗೆಲ್ಲ.
ಮನುಜರೆಲ್ಲ ತತ್ತ್ವ ಮಹಿಮೆಯೆಂತರಿವರು ?
ವಿಶ್ವದಾಭಿರಾಮ ಕೇಳು ವೇಮ.

ಕಾಮಿನಿ– ಕಾಂಚನ, ಇವೆರಡು ಸಾಧಕನಿಗೆ ಇರುವ ದೊಡ್ಡ ಆತಂಕಗಳು. ಚಿತ್ತದ ಶಾಂತಿ ಸಮತೆಗಳು ಕಾಮಿನಿ ಕಾಂಚನದ ಮೋಹ ಮೀರಿದ ಬಳಿಕ ಮಾತ್ರ ಸಾಧ್ಯ.

ಕಮಲದಂತೆ ಕಣ್ಣಿರುವವಳನ್ನೂ ಬಂಗಾರವನ್ನೂ ಕಂಡೊಡನೆ ಗಂಡಿನ ಬುದ್ಧಿ ಭ್ರಮೆಗೊಳ್ಳುವುದು. ಚಿತ್ತದ ಏಕಾಗ್ರತೆ ಸಾಧಿಸಲು ಇವುಗಳ ಮೋಹ ತೊಡಕಾಗಿರುವುದು. ಇವುಗಳ ಮೋಹ ಬಿಡದಿದ್ದರೆ, ಸಮಾಧಿ ಸ್ಥಿತಿಯಲ್ಲಿ ಪಡೆಯಬಹುದಾದ ಆತ್ಮ ಸಾಕ್ಷಾತ್ಕಾರದ ಮಹಿಮೆ ಹೊಳೆಯುವುದೆಂತು ?

ದ್ವಿಜ ಜನರಿಗೂ 'ತತ್'ತ್ವ ತಿಳಿಯದಿರುವುದರೆ ಗುಟ್ಟೇ ಇದು. ಏಕೆಂದರೆ ಎಲ್ಲರೂ ತತ್ತ್ವವರಿಯುವಷ್ಟು ಮುಂದೆ ಹೋಗದೆ, ಎಡವುತ್ತಾರೆ.

(ಶ್ರೀ ಶಂಕರಾಚಾರ್ಯರೆ ಅಭಿಪ್ರಾಯ ನೋಡಿರಿ:
ನಾರೀಸ್ತನ ಭರ ನಾಭಿ ದೇಶಂ ದೃಷ್ಟ್ವಾ ಮಾಯಾಮೋಹಾವೇಶಮ್ |
ಏತನ್ಮಾಂಸವಸಾದಿ ವಿಕಾರಂ ಮನಸಿ ವಿಚಿಂತಯ ವಾರಂ ವಾರಮ್ ||

"ತುಂಬಿದೆದೆಯನಾರಿ ಕಂಡು ಮಾಯಾ-ಮೋಹಗಳು ಆವರಿಸುವವು. ಇವೆಲ್ಲ ಕೇವಲ ಮಾಂಸ ಮಜ್ಜಗಳು ವಿಕೃತ ವಾದವುಗಳೆಂದು ಮನಸ್ಸಿನಲ್ಲಿ ಮೇಲಿಂದ ಮೇಲೆ ವಿಚಾರಿಸು."

ಮೂರ್ಖ ಮನಸ್ಸೇ, ಗೋವಿಂದನನ್ನು ನೆನೆ. ಸಾಯುವ ಕ್ಷಣ ಸಮೀಪಿಸಿತು ! ವ್ಯಾಕರಣ ಛಂದಸ್ಸುಗಳು ಉಪಯೋಗವಿಲ್ಲ.)

೫೯೭

ಮೊಂಡಿವಾನಿಕೇಲ ಮುಂಜೇತಿಕಡಿಯಾಲು, ತೊರ್ರಿವಾನಿಕೇಲ ಕರ್ರಪಂಡ್ಲು
ಗಾಡಿದಲಕುನೇಲ ಗಡ್ಡಮುಲ್ ೀಸಮುಲ್, ವಿಶ್ವದಾಭಿರಾಮ ವಿನುರ ವೇಮ.

ಮೊಂಡ ಜನರಿಗೇಕೆ ಮುಂಗೈಕಡಗಗಳು ?
ಬಚ್ಚ ಬಾಯಿಗೇಕೆ ಕಾಷ್ಟದಂತ ?
ಗಾರ್ದಭಕ್ಕೆ ಏಕೆ ಗಡ್ಡ ಮೀಸೆ ಹುಚ್ಚು ?
ವಿಶ್ವದಾಭಿರಾಮ ಕೇಳು ವೇಮ.

ಯಾರ ಕೈ ಮೊಂಡವಾಗಿದೆಯೋ ಅವರಿಗೆ 'ಮುಂಗೈ ಕಡಗ'ವೆಂಬ ಆಭರಣದಿಂದ ಪ್ರಯೋಜನವಿಲ್ಲ.

ಯಾರ ಬಾಯಿಯ ಹಲ್ಲುಗಳೆಲ್ಲ ಬಿದ್ದು ಹೋಗಿ ಬಚ್ಚ ಬಾಯಿಯವರಾಗಿರುವರೋ ಅವರಿಗೆ ಕಟ್ಟಿಗೆ ಹಲ್ಲು ಹಾಕಿಕೊಂಡರೆ ಪ್ರಯೋಜವಿನಲ್ಲ.

ಕತ್ತೆ ಹೇಂಕರಿಸುತ್ತದೆ. ಕಾಲು ಹಾರಿಸುತ್ತದೆ. ತನ್ನ ಘನತೆಯನ್ನು ತೋರಲು ಅದಕ್ಕೆ ಇವುಗಳೇ ಸಾಕು. ಪುರುಷ ಮಾನವರು ತಮ್ಮ ಅಹಮಹಮಿಕೆಯನ್ನು ಗಡ್ಡವನ್ನು

ನೇವರಿಸುವುದರಿಂದ ಇಲ್ಲವೆ ಮೀಸೆ ಹುರಿಗೊಳಿಸುವುದರಿಂದ ವ್ಯಕ್ತಗೊಳಿಸುತ್ತಾರೆ. ಕತ್ತೆಗೆ ಇದರ ಹುಚ್ಚು ಬೇಕಾಗಿಲ್ಲ.

ಆತ್ಮವರಿಯುವ ಸಾಧನೆಯು ಕಷ್ಟಕರ. ಕಠಿಣ ಪರೀಕ್ಷೆಗಳಲ್ಲಿ ತೇರ್ಗಡೆಯಾಗದೆ ಯಶಸ್ಸುಕಷ್ಟ ಸಾಧ್ಯ. "ನಾಯಮಾತ್ಮಾ ಬಲಹೀನೇನ ಲಭ್ಯೋ" ಈ ಆತ್ಮವು ಬಲಹೀನನಿಂದ ಹೊಂದಲ್ಪಡಲಾರದು, ಎಂದು ಮುಂಡಕೋಪನಿಷತ್ತಿನಲ್ಲಿ ಹೇಳಲಾಗಿದೆ.

ಆತ್ಮ ಜ್ಞಾನಕ್ಕಾಗಿ ಹಂಬಲಿಸುವವರಲ್ಲಿ, ಸದಸದ್ವಿವೇಕ, ವೈರಾಗ್ಯ, ಶಮ ದಮಾದಿ ಷಟ್ಸಂಪತ್ತಿ ಇರಬೇಕಾಗುತ್ತದೆ. ಆಗ ಮಾತ್ರ ಮೋಕ್ಷ ಪ್ರಾಪ್ತಿ. ಇದಿಲ್ಲದೆ ಮೋಕ್ಷಪ್ರಾಪ್ತಿಗೆ ಅಣಿಯಾಗುವುದು ಮೊಂಡಗೈಯವನು ಮುಂಗೈ ಕಡಗ ತೊಡಲು ಅಪೇಕ್ಷಿಸಿದಂತೆ.

೫೯೮

ಮೊದಲಕ್ರಿಯನುದಪ್ಪಿ ಮೋಸಂಬು ಜೇಸಿಯು, ಬೊಟ್ಟಕೊರಕೆ ಮನಸು ಬೊಂದು ಪರಚಿ,
ಬೀದಕುಕ್ಕ ರೀತಿ ಬೆರಗುನು ಮನುಜುಂಡು. ವಿಶ್ವದಾಭಿರಾಮ ವಿನುರ ವೇಮ

ಮೊದಲಕ್ರಿಯೆ ತಪ್ಪಿ ಮೋಸವನೆ ಕಾಣುತ,
ಹೊಟ್ಟೆಗಾಗಿ ಮನಸು ಹೊಂದಿಸಿಹನು,
ಬೀದಿ ನಾಯಿ ರೀತಿ ಬೆಳಿವ ಮನುಜನಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ವೇದಕಾಲದಲ್ಲಿ ಆರ್ಯರು ಒಕ್ಕಲುತನ, ದನಕರು—ಕುರಿ ಸಾಕಣೆಯಿಂದ ಜೀವಿಸುತ್ತಿದ್ದರು. ಅವರಿಗೆ ಮಳೆ ಬೇಕಾಗಿತ್ತು. ಗುಡ್ಡದೋರೆಯ ಹುಲ್ಲುಗಾವಲು ಬೇಕಾಗಿತ್ತು. ಮಳೆಯ ದೇವರಾದ ಇಂದ್ರನನ್ನು ಪ್ರಾರ್ಥಿಸುತ್ತಿದ್ದರೆ. ಅಂಡಲೆಯುವ ಆ ಜನಾಂಗದಲ್ಲಿ ರಾತ್ರಿ ಕ್ರೂರ ಮೃಗಾದಿಗಳ ಭಯವಾಗುತ್ತಿತ್ತು. ಅವರು ರಾತ್ರಿ ದೇವಿಯನ್ನು ಪ್ರಾರ್ಥಿಸುತ್ತಿದ್ದರು. ರಾತ್ರಿಯ ನಂತರ ಬರುವ ಬೆಳಗು ಉಷಾದೇವಿಯ ಪ್ರಸನ್ನತೆಯೆಂದು ಅವಳನ್ನು ಪ್ರಾರ್ಥಿಸುತ್ತಿದ್ದರು. ತಾವು ಪಡೆಯುವ ಗಾಳಿ, ಬಳಸುವ ಅಗ್ನಿ, ಎಲ್ಲವೂ ಮಹಾ ದೇವತೆಗಳು. ವೇದವೆಂದರೆ, ಈ ಪ್ರಾರ್ಥನೆಗಳ ಸಾರ—ಸಂಗ್ರಹ. ಇಲ್ಲಿ ಸತ್ಯ ಜ್ಞಾನ ಮಿಣುಕು ಹುಳದಂತೆ ಕಾಣಬರುತ್ತಿತ್ತು. ಆದರೆ ಕರ್ಮ ಮುತ್ತಿದ ಕತ್ತಲೆಯಂತಿತ್ತು. ಆದರೆ ಯಜ್ಞ ಕರ್ಮಾದಿಗಳು ಸಾದಾ ರೀತಿಯವು. ತಮ್ಮ ಹೊಲ-ತಾಂಡೆಗಳಲ್ಲಿ ನಡೆಸುತ್ತಿದ್ದ ಭಯ ಭಕ್ತಿಯ ದೇವತಾ ಪ್ರಾರ್ಥನೆಗಳೇ ಅವು. ಮುಂದೆ ವೇದ-ಮಂತ್ರಗಳಿಗೆ ಅರ್ಥ ವಿವರಣೆ ನೀಡುವ ಬ್ರಾಹ್ಮಣಗಳನ್ನು ಬರೆಯಲಾಯಿತು. ಇಲ್ಲಿ ಶಬ್ದಾಡಂಬರ, ಶುಷ್ಕ ನೇಮ-ವ್ರತ ಇವುಗಳಿಗೆ ಪ್ರಾಧಾನ್ಯವಿತ್ತು, ವೇದ ಮಂತ್ರಗಳನ್ನು ವಿವರಿಸಲಾಯಿತು. ವೇದ–ಯಜ್ಞ, ಸಮಾರಂಭದ ಸ್ವರೂಪ ತಾಳಿತು. ಅದರ ಕ್ರಮ ಎಲ್ಲರಿಗೂ ತಿಳಿಯದಷ್ಟು ಸುದೀರ್ಘವೂ ಸಂದಿಗ್ಧವೂ ಆಯಿತು. ಇವುಗಳನ್ನು ನೆನಪಿಟ್ಟು ನಡೆಸಿಕೊಡುವ ಪುರೋಹಿತ ವರ್ಗವೇ ಬೆಳೆಯಿತು. ಇವರ ಉಪಜೀವನದ ವ್ಯವಸ್ಥೆಯೂ ಬ್ರಾಹ್ಮಣಗಳಲ್ಲಿ ನಮೂದಿಸಲ್ಪಟ್ಟಿತು. ಶತಪಥ ಬ್ರಾಹ್ಮಣದಲ್ಲಿರುವ ವಿಧಿ ನೋಡಿರಿ: "ಯಜ್ಞಕಾಲಕ್ಕೆ ಮಾಡಲಿಕ್ಕೆ ತಪ್ಪಿದುದನ್ನು

ಅವನು ಪುರೋಹಿತರಿಗೆ ದಕ್ಷಿಣೆ ನೀಡಿ ತುಂಬಿಕೊಳ್ಳಬಹುದು. ಅದರಿಂದ ಯಜ್ಞ ಯಶಸ್ವಿಯಾಗುವದು. ಇದಕ್ಕಾಗಿಯೇ ಅವನು ಪುರೋಹಿತರಿಗೆ ದಕ್ಷಿಣೆ ಕೊಡುತ್ತಾನೆ....” ಹೀಗೆ ಯಜ್ಞದ ಪೂರ್ವದ ಭಯ ಭಕ್ತಿಯ ಪ್ರಾರ್ಥನೆ ಹೋಗೆ ಉದರಿ ನಿರ್ವಾಹದ ದಕ್ಷಿಣೆ ಪಡೆಯುವದು ಆರಂಭವಾಯಿತು. ಮನುಷ್ಯ ಜೀವನ ಕೂಳಿಗಾಗಿ ಅಲೆಯುವ ಬೀದಿಯ ನಾಯಿಯ ಜೀವನದಂತೆ ಬೆಳೆದು ಬರತೊಡಗಿದೆ.

೫೯

ಎಟ್ಟವಾನಿಕೈನ ಬುಟ್ಟುನು ಮೋಹಂಬು, ಪುಟ್ಟ ಮೋಹಮೆಲ್ಲ ಬೂಡ ದ್ರೊಕ್ಕಿ,
ಗಟ್ಟಚೇಸಿಚೂಡ ಗನುಪಿಂಚು ಬ್ರಹ್ಮಂಬು, ವಿಶ್ವದಾಭಿರಾಮ ವಿನುರ ವೇಮ

ಅಂಥವಿಂಥನೇನು? ಅಂಟುತಿಹುದು ಮೋಹ.
ಹುಟ್ಟಿದೆಲ್ಲಮೋಹ ಹೂಳಿ ತುಳಿದು,
ಗಟ್ಟಿಯಾಗಿ ನೋಡೆ, ಗುರುತಿಸುವ ಬ್ರಹ್ಮ
ವಿಶ್ವದಾಭಿರಾಮ ಕೇಳು ವೇಮ.

ಪ್ರಪಂಚದ ವಸ್ತುಗಳತ್ತ ಮನಸ್ಸು ಆಕರ್ಷಿತವಾಗುವುದು ಕಾಮ. ಈ ಕಾಲದ ಮನಸ್ಸಿನ ಪ್ರವೃತ್ತಿಯೇ ಆಸಕ್ತಿ. ಕಾಮಾಸಕ್ತಿ ಮೋಹ. ಒಳ್ಳೆಯದು ಒಂದು. ಸುಖಕರವಾದುದು ಇನ್ನೊಂದು. ಒಂದು ಶ್ರೇಯಸ್, ಇನ್ನೊಂದು ಪ್ರೇಯಸ್. ಪ್ರೇಯದತ್ತ ಮನಸ್ಸು ಮೋಹಗೊಳ್ಳುತ್ತದೆ. ಸುಖವರಸುತ್ತದೆ. ಇದರಿಂದ ಮನುಷ್ಯನು ಯಾವುದನ್ನು ತ್ಯಜಿಸಬೇಕಾಗಿತ್ತೋ, ಅದಕ್ಕೇ ಅಂಟಿಕೊಳ್ಳುತ್ತಾನೆ. ತತ್ಪರಿಣಾಮವಾಗಿ ತನಗೆ ಪ್ರಾಪ್ತಿಯಾಗಬೇಕಾದ ‘ಸದಾ ಕಲ್ಯಾಣ’ಕ್ಕೆ ತಾನು ಹೊರತಾಗುವನಲ್ಲದೆ, ತಮ್ಮ ಕಲ್ಯಾಣದ ಬಗೆಗೆ ಯಾರು ಶ್ರದ್ಧೆಯಿಂದ ಪ್ರಯತ್ನಿಸುವರೋ ಅವರ ಬಗೆಗೆ ಸಹ ಅಸೂಯೆ ಪಡುತ್ತಾನೆ.

ಅದು ಕಾರಣ, ನಮಗೆ ಪ್ರಿಯವಾದ ವಸ್ತುಗಳಲ್ಲಿ ಅನುರಕ್ತರಾಗಬಾರದು. ಅದೇಕೆ? ಅಪ್ರಿಯವಾದ ವಸ್ತುಗಳಲ್ಲಿ ಕೂಡ. ಏಕೆಂದರೆ ಪ್ರಿಯ ವಸ್ತುಗಳನ್ನು ಕಾಣದಿರುವುದರಿಂದ, ಮತ್ತು ಅಪ್ರಿಯ ವಸ್ತುಗಳು ಕಣ್ಣಿಗೆ ಬೀಳುವುದರಿಂದ, ನಮಗೆ ಕ್ಲೇಶವಾಗುತ್ತದೆ.

ಮೋಹ ಜನಿಸಿದಾಗಲೆಲ್ಲ ಮನಸ್ಸನ್ನು ನಿಗ್ರಹಿಸಿ, ದೃಢಮನಸ್ಸಿನಿಂದ ನೋಡುವುದನ್ನು ಸಾಧಿಸಿದರೆ ಬ್ರಹ್ಮವನ್ನು ಗುರುತಿಸಲು ಶಕ್ತನಾಗುವನು.

೬೦೦

ಪಟ್ಟಕೊಮ್ಮಲೇಕ ಹಲುಪಾಟ್ಲು ಬಡುವಾರು, ವೆಟ್ಟಪೋಯಲೇಕ ನೆಟ್ಟುವಾರು.
ಮುಟ್ಟ ಶಿವುನಿಪೂಜ ಮೊದಲೆನೇಯಗಲೇರು ವಿಶ್ವದಾಭಿರಾಮ ವಿನುರ ವೇಮ.

ಹಿಡಿಯೆ ಕೊಂಬೆಯಿಲ್ಲ; ಹಲಸಾಡು ಪಡುವರು.
ಇಟ್ಟು ಹೋಗಲಿಲ್ಲ; ಅಟ್ಟುವವರು.
ಮುಟ್ಟ ಶಿವನ ಪೂಜೆ ಮೊದಲೆ ಮೂಡರವರು.
ವಿಶ್ವದಾಭಿರಾಮ ಕೇಳು ವೇಮ.

ಹಲವು ಜನರು ನಿರಾಶ್ರಿತರಾಗಿರುವರು. ಅವರು ಮೇಲಕ್ಕೆ ಏರಲು ಆಧಾರಗಳೇ ಇಲ್ಲದೆ ತೊಳಲಾಡುವರು. ಒಂದುಕೊಂಬೆಯ ಆಸರದಿಂದ ಇನ್ನೊಂದಕ್ಕೆಜಿಗಿದು ಮೇಲೇರುವ ಮಂಗಕ್ಕೆ ಕೊಂಬೆಯಿಲ್ಲದಿದ್ದರೆ ಆಗುವ ಸ್ಥಿತಿಯೇ ಈ ನಿರಾಶ್ರಿತ ಧನಹೀನರಿಗೆ ಆಗುತ್ತದೆ. ಏಕೆಂದರೆ ಅವರ ದೃಷ್ಟಿ, ಸಾಧನೆಯ ಮಾರ್ಗವೆಂದರೆ ಹಣವೆಚ್ಚಮಾಡಿ ಯಾಗ-ವ್ರತಾದಿಗಳನ್ನು ನಡೆಸುವುದು, ಎಂದಾಗಿದೆ. ಆದರೆ, ಧನವು ತಮ್ಮಲ್ಲಿ ಇಲ್ಲದೆ ತೊಳಲಾಡುವರು.

ಇನ್ನು ಧನವಿದ್ದು ಅದನ್ನು ಇತರರಿಗೆ ನೀಡಲಾರದೆ ಮೋಹಗೊಂಡು ಬಚ್ಚಿಡುವವರು ಮತ್ತು ಕೇಳಬಂದ ಜನರನ್ನು ಏನೂ ನೀಡದೆ ಹೊರಹಾಕುವವರು, ತಮ್ಮ ಧನದ ಮೋಹದಿಂದಾಗಿ, ಪುಣ್ಯಕಾರ್ಯ ಮಾಡಲಾರದೆ, ಮನಸ್ಸನ್ನು ಸಂಕುಚಿತಗೊಳಿಸಿಕೊಂಡವರು. ಸ್ಥೂಲವಾದ ಕನಕಾದಿಗಳ ಕುರಿತು ಕೇಂದ್ರೀಕೃತವಾದ, ಇವರ ಮನಸ್ಸು ಸ್ಥೂಲವಾಗುತ್ತ ಹೋಗುತ್ತದೆ. ಸೂಕ್ಷವಾದ, ಸೂಕ್ಷ್ಮತರವಾದ, ಸೂಕ್ಷ್ಮತಮವಾದ ಆತ್ಮ ಸ್ವರೂಪ ತಿಳಿದುಕೊಳ್ಳಲು ಶಕ್ಯವಾಗದೆ ಹೋಗುವುದು.

ಈ ಎರಡು ವರ್ಗಗಳ ಜನರು ಧನದ ಬಗೆಗೆ ಮೋಹ ತಾಳಿ ದೇವರ ಉಪಾಸನೆಯು ಧನವನ್ನವಲಂಬಿಸಿದೆಯೆಂದು ತಿಳಿದವರು. ಆದರೆ, ದೇವರು ಶಿವಸ್ವರೂಪನು. ಅಂದರೆ ಸತ್ವ ರಜ-ತಮೋಗುಣಗಳ ಸಮತೆಯುಳ್ಳ ಸ್ಥಿತಿಯಲ್ಲಿ ಮನಸ್ಸು ಬಂದಾಗ ಗೋಚರಿಸುವ ಕಲ್ಯಾಣಮಯನು. ಆ ಸ್ಥಿತಿಯನ್ನು ಮುಟ್ಟಿ, ತತ್ತ್ವ ಧ್ಯಾನಿಸಬೇಕು. ಇದುವೇ ಶಿವಪೂಜೆ. ಇದನ್ನು ಮೊದಲು ಮಾಡಬೇಕು. ಇಲ್ಲಿ ಹಣದ ಗೊಡವೆಯೇ ಇಲ್ಲ. ಅದೇಕೆ ಹಣದ ಗೊಡವೆ ಬಿಟ್ಟರೆ ಮಾತ್ರ ಶಿವಪೂಜೆ ಸಾಧ್ಯ.

೬೦೧

ಆತ್ಮಲೋನ ಶಿವುನಿ ನನುವುನಾ ಶೋಧಿಂಚಿ, ನಿಶ್ಚಲಮುಗ ಭಕ್ತಿ ನಿಲಿಪೆನೇನಿ,
ಸರ್ವಮುಕ್ತುಡೌನು ಸರ್ವಂಬುದಾ ನೌನು ವಿಶ್ವದಾಭಿರಾಮ ವಿನುರ ವೇಮ.

ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ,
ನಿಶ್ಚಲಾಗಿ ಭಕ್ತಿ ನಿಲಿಸಿದವನು,
ಸರ್ವಮುಕ್ತನಹನು, ಸರ್ವತಾನಾಗುವ.
ವಿಶ್ವದಾಭಿರಾಮ ಕೇಳು ವೇಮ.

(‘ಜೀವಶ್ಶಿವಃ’ ಎಂದರೆ ಜೀವವೇ ಶಿವ. ‘ಜೀವೋ ಬ್ರಹ್ಮ ಸ್ವರೂಪಃ ಎಂದರೆ ಜೀವವು ಬ್ರಹ್ಮ ಸ್ವರೂಪವು. ಜೀವವೇ ಬ್ರಹ್ಮ; ಜೀವವೇ ಶಿವ.

ಪ್ರತೀಕಗಳಲ್ಲಿ ಆತ್ಮ ಬುದ್ಧಿಯನ್ನು ಇಡಕೂಡದು. ಏಕೆಂದರೆ ಆ ಉಪಾಸಕನು, ಅದನ್ನು ಆತ್ಮನೆಂದು ತಿಳಿಯಲಾರನು. ‘ನ ಪ್ರತೀಕೇ ನ ಹಿ ಸಃ” ಎಂದು ಬ್ರಹ್ಮಸೂತ್ರಕಾರ ಬಾದರಾಯಣರು ಹೇಳುತ್ತಾರೆ. “ಪ್ರತೀಕವೂ ಬ್ರಹ್ಮಕಾರ್ಯವಾದುದರಿಂದ ಅದೂ ಬ್ರಹ್ಮವೇ, ಎಂದು ತಿಳಿಯುವುದು ತಪ್ಪು. ಏಕೆಂದರೆ, ಕರ್ತೃತ್ವಾದಿ ಸಂಸಾರ ಧರ್ಮ ನಿರಾಕರಿಸಿದ ಮೇಲೆಯೇ ಬ್ರಹ್ಮವು ಆತ್ಮನೆಂದು ಉಪದೇಶಿಸಬೇಕಾಗಿದೆ. ಆದರೆ ಇಂಥ

ನಿರಾಕರಣೆಯ ಪೂರ್ವದಲ್ಲಿಯೇ ಉಪಾಸನೆ ಮಾಡಬೇಕಾಗಿರುವುದರಿಂದ, ಉಪಾಸಕನು ಪ್ರತೀಕಗಳಿಗೆ ಸಮನಾಗುವನು. ಕಾರಣ ಅವನು ಪ್ರತೀಕಗಳಲ್ಲಿ ಆತ್ಮಬುದ್ಧಿಯನ್ನಿಡಲು ಸಾಧ್ಯವಿಲ್ಲ'' ಎಂದು ಶಂಕರಾಚಾರ್ಯರೆ ವಿಚಾರಸಾರ.

ಅಂದ ಮೇಲೆ, ಚೆನ್ನಾಗಿ ಶೋಧಿಸಿದರೆ, ಆತ್ಮದಲ್ಲಿಯೇ ಶಿವನು ಎಂಬುದು ತಿಳಿಯುವುದು. ಹಾಗೆ ಕಂಡುಕೊಂಡ ಪ್ರಪಂಚದ ವಸ್ತುಗಳ ಆಕರ್ಷಣೆಯ ಆಸಕ್ತಿ ಬಿಟ್ಟು, ಸದ್ವಸ್ತುವಿನ ಬಗ್ಗೆ ಆಕರ್ಷಣೆ ಹೊಂದಿ ಭಕ್ತಿ ತಾಳಿ, ಸ್ಥಿರ-ಭಾವದಿಂದಿರಬೇಕು.

ಅಂಥವನು ಸುಖ-ದುಃಖ, ಆಶೆ-ನಿರಾಶೆಗಳ ದ್ವಂದ್ವಗಳಿಂದ ಮುಕ್ತನಾಗುವನು. "ಎಲ್ಲಿಡೆಯಿಂದ ಸರ್ವವ್ಯಾಪಿ ಬ್ರಹ್ಮವನ್ನು ಕಂಡು ಅದರೊಂದಿಗೆ ತಾನು ಸೇರಿ ಹೋಗುವನು."

೬೦೨

ಎರಗಿನ ಶಿವಪೂಜ ಯೆನ್ನಡು ಜಿಡಿಪೋದು, ಮೊದಲ ಬಟ್ಟು ಪಟ್ಟು ವದಲರಾದು.
ಮೊದಲ ವಿಡಿಚಿ ಗೋಡ ತುದಿಬೆಟ್ಟನಿಲ್ಪುನಾ? ವಿಶ್ವದಾಭಿರಾಮ ವಿನುರ ವೇಮ

ಅರಿವಿನ ಶಿವಪೂಜೆ ಬರಿದಲ್ಲವೆಂದೂ,
ಮೊದಲು ಹಿಡಿದ ಪಟ್ಟು ಬದಲಿಸದಿರು.
ಮೊದಲ ಬಿಟ್ಟು ಗೋಡೆ ತುದಿಕಟ್ಟಲುಳಿವುದೆ?
ವಿಶ್ವದಾಭಿರಾಮ ಕೇಳು ವೇಮ.

ಶಿವಪೂಜೆ ಎಂದರೆ ಬ್ರಹ್ಮಸಾಕ್ಷಾತ್ಕಾರದ ಸಾಧನೆ. ತತ್ತ್ವಗಳನ್ನು ತಿಳಿದು ಮಾಡುವ ಉಪಾಸನೆಯು, ಎಂದೂ ವ್ಯರ್ಥಹೋಗಲಾದರು. ಅದಕ್ಕೆ ಫಲ ಪ್ರಾಪ್ತಿ ಉಂಟು. ಬ್ರಹ್ಮತ್ವವೆಂದರೇನು? ಎಂಬುದನ್ನು ಓದಿ ಇಲ್ಲವೆ ಕೇಳಿ ಇಲ್ಲವೆ ಚಿಂತಿಸಿ ತಿಳಿಯಬೇಕು. ಇಂದ್ರಿಯಗಳನ್ನು ಸಾಧಿಸಿ, ಚಿತ್ತವನ್ನು ಏಕಾಗ್ರಗೊಳಿಸಿ, ಬ್ರಹ್ಮತ್ವವನ್ನು ಅನುಭವಿಸಬೇಕು. ಈ ಸಾಧನೆಯ ಮಾರ್ಗ ದೀರ್ಘವಾಗಿರಬಹುದು. ಆದರೆ ಸರಿಯಾದ ಹಾದಿಯಲ್ಲಿ ಮಾಡಿದ ಯಾವ ಉಪಾಸನೆಯೂ ಅದಕ್ಕೆ ತಕ್ಕ ಫಲ ನೀಡುವುದು. ಗುರಿ ತಲುಪಲು ವಿಳಂಬವಾಯಿತೆಂದು ಸಾಧನೆಯ ಮಾರ್ಗದಿಂದ ವಿಚಲರಾಗಕೂಡದು. ಯಮನಿಯಮಾದಿ ಪ್ರಾಥಮಿಕ ಹಂತಗಳು ತಳಹದಿ ಇದ್ದಂತೆ. ಅವುಗಳನ್ನು ತೊರೆದು ಧಾರಣ ಧ್ಯಾನ ಸಮಾಧಿಯ ಹಂತಕ್ಕೆ ಬರಲು ಸಾಧ್ಯವಿಲ್ಲ. ಕಟ್ಟಡಕ್ಕೆ ಭದ್ರವಾದ ತಳಹದಿಬೇಕು. ತಳಹದಿಯ ಥರ ಗಟ್ಟಿಯಾಗಿಲ್ಲದಿದ್ದರೆ, ತಳಹದಿ ನಿರ್ಮಾಣಕ್ಕೆ ವೇಳೆ ತಗಲುವುದೆಂದು, ಮೇಲಿನ ಕಟ್ಟಡವನ್ನು ಶುರು ಮಾಡುವದು ಮೂರ್ಖತನ. ಹಾಗೆ ಮಾಡಿದರೆ ಮಳಲ ಮೇಲೆ ಮನೆ ಕಟ್ಟಿದಂತೆ. ಆತ್ಮ ಸಾಕ್ಷಾತ್ಕಾರದ ಸಾಧನೆಯ ವಿಷಯದಲ್ಲಿಯೂ ಅದೇ ರೀತಿ. ಪ್ರಾರಂಭಿಕ ಅಡೆತಡೆಗಳೇನಿದ್ದರೂ ಅವನ್ನು ಎದುರಿಸಿ, ಮುಂದಾಗಬೇಕು. ಎಷ್ಟರ ಮಟ್ಟಿಗೆ ಸಾಧನೆಯಾಗಿದೆಯೋ, ಅಷ್ಟರಿಂದಲೂ ಫಲವಿದ್ದೇ ಇದೆ. ನೇರವಾಗಿ ಮೂಗಿನ ತುದಿಯ ಮೇಲೆ

ಮನಸ್ಸಿಟ್ಟು ಧ್ಯಾನಿಸುವದರಿಂದ ಮನಶ್ಶಾಂತಿ ದೊರೆಯುತ್ತದೆ. ಪ್ರಣಾಯಾಮದ ಹಂತದಲ್ಲಿ ಇನ್ನೂ ಹೆಚ್ಚು ಶಾಂತಿ ದೊರೆಯಬಹುದು.

೬೦೩

ಚೇಟುವಚ್ಚೆನೇನಿ ಜೀಡನಾಡು ದೈವಮುನ್ ಮೇಲುವಚ್ಚೆನೇನಿ ಮೆಚ್ಚುದನ್ನು
ಚೇಟು ಮೇಲುದಲಪ ಜೇಸಿನ ಕರ್ಮಮೇ ವಿಶ್ವದಾಭಿರಾಮ ವಿನುರ ವೇಮ.

ಕೇಡು ಬಂದಿತೆಂದು ಕೆಟ್ಟದೆನುವ ದೈವ;
ಮೇಲು ಬಂದಿತೆಂಬ ಮೆಚ್ಚು ತನಗೆ.
ಕೇಡು ಮೇಲು ತಿಳಿಯೆ, ಗೈದ ಕರ್ಮವಷ್ಟೆ
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯ ಯಾವಾಗಲೂ ಸುಖವರಸುತ್ತ ತಡಕಾಡುತ್ತಾನೆ. ಸುಖವು ಒಳ್ಳೆಯ ಕಾರ್ಯದಿಂದ ಮಾತ್ರ ಬರುವುದಿಲ್ಲ. ಯಾರದೋ ವಸ್ತುವನ್ನು ತನ್ನದಾಗಿಸಿಕೊಂಡರೆ, ಸುಖವೆನಿಸುತ್ತಿದ್ದರೆ; ಅದನ್ನು ಮಾಡುತ್ತಾನೆ. ಅದರ ಪ್ರತಿಫಲವಾಗಿ ಕೇಡು ಉಂಟಾಗುತ್ತದೆ. ಇದು ಒಂದು ರೀತಿ. ಇನ್ನು ತನಗೆ ಇಂಥ ಕೆಲಸದಲ್ಲಿ ಇಂತಿಷ್ಟು ಪ್ರಾಪ್ತಿಯಾಗಲಿ ಎಂದು ಬಯಸಿ ದೇವತೆಗೆ ಹರಕೆ ಹೊರುತ್ತಾನೆ. ಯಜ್ಞ ಮಾಡುತ್ತಾನೆ. ಪೂಜೆ ಸಲ್ಲಿಸುತ್ತಾನೆ. ಹರಕೆ ಈಡೇರಿ, ಬಯಸಿದ ವಸ್ತು ಪ್ರಾಪ್ತವಾಗದಿದ್ದರೆ, ದೈವವು ಕೆಟ್ಟದ್ದು. ಎಂದು ಉಸಿರ್ಗರೆಯುವನು. ನಿರಾಶೆ ಹೊಂದುವುನು. ಆದರೆ ಬಯಕೆಯಂತೆ ಪ್ರಾಪ್ತಿ ದೊರೆತರೆ; ತನ್ನ ಪ್ರಯತ್ನಶೀಲತೆಯನ್ನೂ, ಸಾಮರ್ಥ್ಯವನ್ನೂ, ಮೆಚ್ಚಿಕೊಳ್ಳುತ್ತಾನೆ.

ಕೇಡು-ಮೇಲುಗಳೆಂದರೇನು? ನಾವು ಗೆಯ್ದ ಕರ್ಮಫಲಗಳಷ್ಟೇ. ನಾವು ಇನ್ನೊಬ್ಬರಿಂದ ಏನು ಬಯಸುತ್ತೇವೆಯೋ ಅದನ್ನೇ ಅವನಿಗೆ ಬಯಸಬೇಕು. ಹಾವಿಗೆ ಹಾಲೆರೆಯುವುದರಿಂದ ಹಾವು ತೃಪ್ತಿ ಬಡುವುದೆಂಬ ತಿಳಿವಳಿಕೆ ಗಟ್ಟಿಯಾಗಿದ್ದರೆ, ಹಾಲೆರೆದಾಗ ಹಾವು ತೃಪ್ತಿಹೊಂದಿ, ಹೆಡೆ ತೆರೆದು ಆಡಿ ನಮ್ಮನ್ನು ತೃಪ್ತಿಗೊಳಿಸುತ್ತದೆ. ನಾವು ಹಾಲನೆರೆಯುವ ಹಾವಿಗೆ ಭೀತಿಯೆನಿಸುವಂತಿದ್ದರೆ, ಹಾವು ಭಯಗೊಂಡು ನಮ್ಮನ್ನು ಕಚ್ಚುತ್ತದೆ. ನಾವು ಒಳಿತು ಕೆಡುಕಿನ ವಿಚಾರ ಮಾಡುವಾಗ ನಮ್ಮ ಬೇಕು-ಬೇಡಗಳಿಗಿಂತ,ನಾವು ಯಾರನು ಕುರಿತು ಕರ್ಮ ಪ್ರವೃತ್ತರಾಗಿರುವೆವೋ ಅವರ ಬೇಕು ಬೇಡಗಳನ್ನು ಕುರಿತು ವಿವೇಕದಿಂದ ವರ್ತಿಸಬೇಕು. ಹೋಳಿಗೆ ತುಪ್ಪ ನಮಗೆ ರುಚಿಯೆನಿಸಿದರೆ, ಸರ್ವಶಕ್ತನೂ, ನಿರಾಕಾರಿಯೂ, ಆನಂದಮಯನೂ ಆದ ದೇವರಿಗೆ ರುಚಿಯೆಂದು ಅರ್ಪಿಸಿದರೆ, ಅದು ವಿವೇಕ್ಷವಲ್ಲ. ಸರ್ವವ್ಯಾಪಿಯಾದ ದೇವನನ್ನು ಸರ್ವರಲ್ಲಿ ಕಂಡು ಇಲ್ಲದವರಿಗೆ ಅನ್ನ ಬಡಿಸಿದರೆ, ಅದು ಸತ್ಕರ್ಮ. ಅದರಿಂದ ಒಳ್ಳೆಯ ಫಲವುಂಟು.

೬೦೪

ಕಡುಪುಚಿಚ್ಚುಚೇತ ಗಾವಾನಲಮುಚೇತ, ಗ್ರೋಧವಹ್ನಿಚೇತ ಗುಟಲಪಡಳ
ಒಕ್ಕ ಮನಸು ತೋಡ ನುಂಡಿನಪ್ಪುಡೆ ಮುಕ್ತಿ ವಿಶ್ವದಾಭಿರಾಮ ವಿನುರ ವೇಮ.

ಕೆಟ್ಟ ಹಸಿವಿನಿಂದ ಕಾಮ ಜ್ವಾಲೆಯಿಂದ,
ಕ್ರೋಧದಗ್ನಿಯಿಂದ ಕುಟಿಲ ಪಡದೆ,
ಒಂದೆ ಮನಸಿನಿಂದ ಇದ್ದೊಡಿಹುದು ಮುಕ್ತಿ
ವಿಶ್ವದಾಭಿರಾಮ ಕೇಳು ವೇಮ.

ತಪಸ್ಸು ಮಾಡುತ್ತೇವೆಂದು ಅನ್ನಾಹಾರಗಳಿಲ್ಲದೆ, ಕೆಟ್ಟ ಹಸಿವಿನಿಂದ ದೇಹ ದಂಡಿಸುವುದಾಗಲೀ, ಇಂದ್ರಿಯಗಳನ್ನು ನಿಗ್ರಹಿಸಲು ಶಕ್ತನಾಗದೆ, ಪ್ರಪಂಚದ ವಿಷಯ-ವಸ್ತುಗಳಲ್ಲಿ ಆಸಕ್ತನಾಗಿ ಕಾಮಜ್ವಾಲೆಯಿಂದ ಕಸಿವಿಸಿ ಪಡುವುದಾಗಲೀ, ಇಲ್ಲವೆ ಕಾಮದಾಸೆಗಳು ತೃಪ್ತಿಯಾಗದಿರುವುದರಿಂದ ಹುಟ್ಟುವ. ಕ್ರೋಧದಿಂದ, ಮನಸ್ಸಿನಲ್ಲಿ ಭ್ರಮೆಗೊಳಗಾಗದೆ, ಮಿತಾಹಾರಿಯಾಗಿ, ಜಿತೇಂದ್ರಿಯನಾಗಿ, ಸಮಚಿತ್ತನಾಗಿ ಇರುವುದೇ ಮುಕ್ತಿ ಎನಿಸುತ್ತದೆ. ಇಂಥ ಅಸತ್ ವಸ್ತುಗಳಿಂದ ಮನಸ್ಸು ಸೆಳೆದವನಾಗಿ, ಸತ್ ವಸ್ತುವೇ ಮನದಲ್ಲಿ ಪ್ರತಿಬಿಂಬಿಸಿ ಇರುವುದೇ ಮುಕ್ತಿ, ತಾನೇ.

(ಗೀತೆ ಉಪನಿಷತ್ತುಗಳ ಅಭಿಪ್ರಾಯ ಹೋಲಿಸಿ ನೋಡಿರಿ.

"ಯಾವ ಜನರು ದಂಭಾಹಂಕಾರಗಳಿಂದಲೂ, ಕಾಮರಾಗಬಲಗಳಿಂದಲೂ ಕೂಡಿದವರಾಗಿ ಅವಿವೇಕಿಗಳಾಗಿ, ಶರೀರದಲ್ಲಿರುವ ಇಂದ್ರಿಯ ಸಮುದಾಯವನ್ನೂ ಮತ್ತು (ಅವರ ಬುದ್ಧಿ ಕರ್ಮಗಳಿಗೆ ಸಾಕ್ಷಿಯಾಗಿರುವ) ನನ್ನನ್ನೂ ಕ್ಲೇಶಗೊಳಿಸುತ್ತಿರುವರೋ, ಮತ್ತು ಶಾಸ್ತ್ರವಿಹಿತವಲ್ಲದ ಘೋರವಾದ ತಪಸ್ಸನ್ನು ಮಾಡುತ್ತಿರುವರೋ, ಅಂತಹವರನ್ನು ಅಸುರೀ ಬುದ್ಧಿಯುಳ್ಳವರೆಂದು ತಿಳಿ" -ಭಗವದ್ಗೀತೆ. ೧೭-೫,೬.

"ಆದುದರಿಂದ ಹೀಗೆ ಅರಿತುಕೊಂಡಿರುವವನು ಶಾಂತನೂ, ದಾಂತನೂ, ಉಪರತನೂ, ತಿತಿಕ್ಷನೂ, ಸಮಾಹಿತನೂ ಆಗಿ, ತನ್ನ ಶರೀರದಲ್ಲಿಯೇ ಆತ್ಮನನ್ನು ನೋಡುತ್ತಾನೆ.
-ಬೃಹದಾರಣ್ಯಕೋಪನಿಷತ್. ೪-೪-೨೩.)

ಪಾಲು ವೆರುಗು ವೆನ್ನ ಪಾಯಸಾನ್ನಮು ನೆಯ್ಯಿ, ಜುನ್ನುನೆನ್ನೆಯ್ಯಿನ ಜೂಡಬಾಲೆ,
ಪಾಲಿವಂಟಕುಲಮು ಬ್ರಹ್ಮಂಬು ಗಾನರು, ವಿಶ್ವದಾಭಿರಾಮ ವಿನುರ ವೇಮ.

ಹಾಲು ಮೊಸರು ಬೆಣ್ಣೆ ಪಾಯಸಾನ್ನ ತುಪ್ಪ,
ರೂಪವೆಷ್ಟಾದರು, ನೋಡೆ ಹಾಲೆ?
ಹಾಲಿನಂಥ ಕುಲದ ಬ್ರಹ್ಮವನೆ ಕಾಣರು
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮವು ಜಗತ್ಕಾರಣವೆಂತು? ಕುಂಬಾರ ಮಣ್ಣು ಚಕ್ರಗಳ ಸಾಧನದಿಂದ ಮಡಿಕೆ ತಯ್ಯಾರಿಸುತ್ತಾನೆ. ನೇಕಾರ ನೂಲು, ಮಗ್ಗದ ಸಾಧನದಿಂದ ಬಟ್ಟೆ ತಯ್ಯಾರಿಸುತ್ತಾನೆ.

ಸಾಧನವಾವುದೂ ಇಲ್ಲದೆ ಬ್ರಹ್ಮವು ಹೇಗೆ ಜಗತ್ಕಾರಣವಾದೀತು? ಎಂಬ ವಾದವುಂಟು ಯಾವುದೇ ಬಾಹ್ಯ ಸಾಧನವಿಲ್ಲದೆ, ಹಾಲು ಮೊಸರಾಗುವುದು. ಮೊಸರು ಬೆಣ್ಣೆಯಾಗುವುದು. ಬೆಣ್ಣೆ ತುಪ್ಪವಾಗುವುದು. ಹಾಲು ಮೊಸರು ಇತ್ಯಾದಿ ಆಗಬೇಕಾದರೆ, ಉಷ್ಣವೇ ಮೊದಲಾದ ಬಾಹ್ಯ ಸಾಧನಗಳು ಬೇಕಲ್ಲವೇ? ಇಲ್ಲ. ಉಷ್ಣಾದಿಗಳು ಹಾಲಿನ ರೂಪಾಂತರವನ್ನು ತ್ವರಿತಗೊಳಿಸುತ್ತವಷ್ಟೇ. ಹಾಲು ಅನೇಕ ರೂಪವಾಗಿ, ಬದಲಾವಣೆಯ ನಂತರ ಕಂಡುಬಂದರೂ ಮೂಲದಲ್ಲಿರುವ ಹಾಲು ಒಂದೇ. ಬ್ರಹ್ಮವು ಅನೇಕ ರೂಪ-ನಾಮಗಳಿಂದ ಗೋಚರಿಸುವ ಸೃಷ್ಟಿಯಾಗಿದ್ದರೂ, ಮೂಲದಲ್ಲಿ ಸೃಷ್ಟಿಯೆಲ್ಲ ಬ್ರಹ್ಮವೇ.

(ಬ್ರಹ್ಮ ಸೂತ್ರ ಭಾಷ್ಯದಲ್ಲಿ ಈ ರೀತಿ ಅಭಿಪ್ರಾಯ ಪಡಲಾಗಿದೆ:

(ತಸ್ಮಾದೇಕಸ್ಯಾಪಿ ಬ್ರಹ್ಮಣೋ ವಿಚಿತ್ರ ಶಕ್ತಿ ಯೋಗಾತ್ ಕ್ಷೀರಾದಿ ವನ್ ವಿಚಿತ್ರ ಪರಿಣಾಮ ಉಪಪದ್ಯತೆ॥,

ಆದುದರಿಂದ, ಬ್ರಹ್ಮವು ಏಕವಾಗಿದ್ದರೂ ತನ್ನ ವಿವಿಧ ಶಕ್ತಿಗಳಿಂದ ಹಾಲಿನಂತೆ ವಿಚಿತ್ರ ಪರಿಣಾಮ ಹೊಂದಲು ಶಕ್ತವಾಗಿದೆ.)

ಚದುವುಲಂದು ರಾಜ್ಯ ಪದವುಲಂದುನು ಬಾಡಿ, ಪೊದವುಲಂದು ಸ್ತ್ರೀಲ ಪೆಡವುಲಂದು
ನಾಳ ಲುಡುಗುನಟ್ಟಿ ಯಯ್ಯ ಲು ಮುಕ್ತು ಲು, ವಿಶ್ವ ದಾಭಿರಾಮ ವಿನುರವೇಮ.

ಓದಿನಲ್ಲಿ, ರಾಜ್ಯ ಪದವಿಯಲ್ಲಿ ನಶಿಸಿ,
ಹೆಣ್ಣ ಪಶುಗಳಲ್ಲಿ ಸ್ತ್ರಿಯೆಧರದಿ,
ಅಶೆಯುಡುಗಿದಂಥ ಆಯ್ಯನಯ್ಯ ಮುಕ್ತ
ವಿಶ್ವದಾಭಿರಾಮ ಕೇಳು ವೇಮ

ಓದಬೇಕು; ಇನ್ನೂ ಓದಬೇಕು, ಬೇರಾವ ಗ್ರಂಥಗಳಲ್ಲಿ ದೇವರ ಬಗ್ಗೆ, ಮುಕ್ತಿ ಸಾಧನೆಯ ಬಗ್ಗೆ ಹೆಚ್ಚಿನ ವಿಷಯ ತಿಳಿಸಿರುವರೋ ಹೇಗೆ?' ಎಂದು ಓದುವ ಆಶೆ ಉಡುಗದಿರುವ ವರೆಗೆ ಸಾಧನೆಯಲ್ಲಿ ಹೆಚ್ಚಿನ ಪ್ರಗತಿಯಾಗದು. ರಾಜ್ಯಪದವಿಯಲ್ಲಿ ಮೌನ ಸನ್ಯಾನ ಸಂಭ್ರಮಗಳಲ್ಲಿ ಸತ್ಕಾರ ಪೂಜಾದಿಗಳನ್ನು ಪಡೆಯುವ ದಂಭದಲ್ಲಿರುವ ಆಶೆಯು ಉಡುಗುವವರೆಗೂ ಅಷ್ಟೇ.

ಆಳಲು ಇತ್ಯಾದಿ ಕೈನಪಶುಗಳನ್ನು ಪಡೆದುಕೊಳ್ಳುವ ಮತ್ತು ದಕ್ಷಿಣೆಯಾಗಿ ಪುರೋಹಿತರಿಗೆ ನೀಡುವ ಕರ್ಮದಿಂದ ಮೋಕ್ಷ ದೊರೆಯುವುದೆಂಬ ಭಾವನೆಯು ಬಯಲಾಗುವ ವರೆಗೆ ಮುಕ್ತಿಯಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ದೇವ ಪೂಜೆಯ ಹೆಸರಿನಲ್ಲಿ ತಾಂತ್ರಿಕರು ನಡೆಸುವ ಸ್ತ್ರೀ ಯೋನಿ ಪೂಜೆಯಾಲಿ, ಇತರರು ನಡೆಸುತ್ತಿದ್ದ ದೇವಕನ್ನಿಕೆ ನೇವದ್ಯ ಭಕ್ಷ ನೃತ್ಯಾಳಾ

ಪನೆಗಳಲ್ಲಿ ಅನುರಕ್ತರಾಗಿ, ಅವಳಅಧರದಾಸೆಗಾಗಿ ಮಿಡುಕುವ ಇಂದ್ರಿಯದಾಸ್ಯವಿರುವ ವರೆಗೆ ಮುಕ್ತಿ ಇಲ್ಲ.

ಗ್ರಂಥ ಜ್ಞಾನಕ್ಕಿಂತ ಗುರುವಿನ ಸ್ವಂತ ಅನುಭವದ ಮಾರ್ಗದರ್ಶನ ಮೇಲು; ರಾಜಾಶ್ರಯ ಪದತ ಸಮ್ಮಾನಗಳಿಂತ ಸರಳಸಾದಾ ಜೀವನ ಮೇಲು; ಅಕಳುಗಳ ಸಂಖ್ಯೆಯಿಂದ ಪುಣ್ಯ ಅಳೆಯುವದಕ್ಕಿಂತ, ಇಂಥವುಗಳಲ್ಲಿ ಅನಾಶಕ್ತಿ ಮೇಲು. ಅದೇ ರೀತಿ ಸ್ತ್ರೀ ಸಂಗ ಇತ್ಯಾದಿ ವಿಷಯಗಳಿಂದ ಆಕರ್ಷಿತರಾಗದಂತೆ, ಜಿತೇಂದ್ರಿಯರಾಗಿರುವುದು ಮೇಲು. ಆಗ ಮಾತ್ರ ಮುಕ್ತಿ ಪಡೆಯಲು ಶಕ್ತರಾಗಬಹುದು.

೬೦೭

ಕಡುಪುಕೇಲ ಮನಶ! ಕಳವಳಪಥಿಯೆದು? ಕಡುಪುಕೇಡದ್ಯಪ್ತ ಕಲುಗುಚುಂಡು?
ಕಡುಪುರಾಲೋನಿ ಕಪ್ಪ ಕುಗಲುಗದಾ? ವಿಶ್ವದಾಭಿರಾಮ ವಿನುರ ವೇಮ,

ಹೊಟ್ಟೆಗಾಗಿ ಮನ ಹ್ರಾಸಗೊಳುವುದೇಕೆ
ಹೊಟ್ಟೆಯೆಲ್ಲಿ ತೃಪ್ತಿ ಹೊಂದುತಿಹುದು?
ಹೊಟ್ಟೆಯುಂಟು ಕಲ್ಲು ಹೊದರೊಳಿಹ ಕಪ್ಪೆಗೆ
ವಿಶ್ವದಾಭಿರಾಮ ಕೇಳು ನೇಮ,

ದೇಹ ಪೋಷಣೆಗೆ ಅನ್ನಬೇಕು, ನಾವು ಸೇವಿಸಿದ ಅನ್ನವು ಜಠರಾಗ್ನಿ ಸೇರಿ ರಕ್ತ ಮಾಂಸ ಮಾಂಸ ಮಜ್ಜಾದಿಗಳಾಗಿ ಮಾರ್ಪಡುತ್ತದೆ. ವೀರ್ಯ ಓಜಸ್ಸು ತಯ್ಯಾರಾಗ್ತತ್ತವೆ. ಅಂದ ಬಳಿಕ, ಸಮೀಚೀನವಾಗಿ ಉಂಡು ವಿರಮಿಸುವುದರಿಂದ, ಬುದ್ಧಿ ಬೆಳೆಯುತ್ತದೆ ಮೆದುಳು ಬಲಯುತವಾದರೆ ಹೆಚ್ಚು ಜ್ಞಾನ ಮಾಡಿಕೊಳ್ಳಬಹುದು. ಎಂದು ಗ್ರಹಿಸಿ,ಒಳ್ಳೆಯ ಊಟ-ವಸ್ತು ಪಡೆಯಲು ಪ್ರಯತ್ನಿಸುತ್ತಾರೆ. ಹೊಟ್ಟೆ ತುಂಬಿಕೊಳ್ಳಲು ತಮ್ಮ ಮನಸ್ಸನ್ನೇ ಕಳವಳಕ್ಕೆ ಈಡು ಮಾಡುತ್ತಾರೆ.ಮನಸ್ಸಿನ ತೃಪ್ತಿ ಮುಖ್ಯವಲ್ಲದೆ ಹೊಟ್ಟೆ ಹೊರೆಯುವದಲ್ಲ. ಹೊಟ್ಟೆ ತೃಪ್ತಿಗೊಳ್ಳುವದೇ ಮನಸ್ಸಿನಲ್ಲಿ ನಮ್ಮ ಇಂದ್ರಿಯಗಳೆಲ್ಲ ಬಾಹ್ಯ ವಸ್ತುವಿನಿಂದ ಉಂಟಾದ ಪರಿಣಾಮವನ್ನು ಮೆದುಳಿನ ಕೇಂದ್ರಕ್ಕೆ ಒಯ್ಯುತ್ತವೆ. ಈ ಕೇಂದ್ರಗಳು ಅದನ್ನು ಮನಸ್ಸಿಗೆ ಒಯ್ಯುತ್ತವೆ. ಅಂದ ಮೇಲೆ ನಾವು ಹೊಟ್ಟೆ ತುಂಬಿದ ಅನ್ನದಿಂದ ತೃಪ್ತಿಗೊಳ್ಳಬೇಕಾದುದು ಮನಸ್ಸು ತಾನೇ. ಆ ಮನಸ್ಸನ್ನೆ ಕಳವಳ ಪಡಿಸಿ ಹೊಟ್ಟೆ ಹೊರೆಯುವುದೇಕೆ?

ಕಲ್ಲು ಹೊದರಲ್ಲಿರುವ ಕಪ್ಪೆ ಗೂ ಹೊಟ್ಟೆಯುಂಟು. ಅದು ಅಲ್ಲಿದ್ದುಕೊಂಡು ಬದುಕಿರುತ್ತದೆ. ಆದರೆ ಉದರನಿರ್ವಾಹಕ್ಕೆ ಅತ್ಯವಶ್ಯವಾದ ಅನ್ನ ಅಲ್ಲಿಯೇ ಸಿಕುತ್ತದೆ. ಮಾನವನು ಸಹ ಕೇವಲ ಹೊಟ್ಟೆಹೊರೆಯಲು ಶಾಸ್ತ್ರಗಳನ್ನು ಕಲಿಗೆಡಿಸಬೇಕಾಗಿಲ್ಲ.

೬೦೮

ಗಾಂತಮೊನಸಮುನ ಜಲ್ಲನೈ ಶೀತಾಂಶು, ಪಗಿದಿಸುನ್ನವಾಡು ಪರಮಯೋಗಿ
ಅಟ್ಟ ಮುಕ್ತಿ ನತಿವೇಗಗ್ಗಕೋನು. ವಿಶ್ವದಾಭಿರಾಮ ವಿನುರ ವೇಮ

ಶಾಂತ ಮನಸ್ಸಿನವ; ಶೀತದಂಶವಿಹನು;
ಪರಿಯಿಂತಿರುವವನು, ಪರಮಯೋಗಿ.
ಅಂಥವನು. ಮುಕ್ತಿಯು ಅತಿ ಬೇಗ ಹೊಂದುವ.
ವಿಶ್ವದಾಭಿರಾಮ ಕೇಳು ನೇಮ

(ಮುಕ್ತಿ ಎಂದರೆ ಬಿಡುಗಡೆ. ಆತ್ಮದ ಬಿಡುಗಡೆಯದು. ಪ್ರಪಂಚದ ವಿಷಯ ವಸ್ತುಗಳ ಬಗೆಗಿನ ಕಾಮಾಸಕ್ತಿಗಳಿಂದ ವಿವಿಧ ಚಿತ್ತವೃತ್ತಿಗಳೇಳುತ್ತವೆ.ಈ ಚಿತ್ತವೃತ್ತಿಗಳು ಮನಸ್ಸಿನ ಮೇಲೆ ಮುಸುಕು ಹಾಕಿದಂತೆ ಮುತ್ತಿರುತ್ತವೆ. ಮನಸ್ಸು ಬಾಹ್ಯ ವಸ್ತುಗಳ ಪರಿಣಾಮವನ್ನು ಇಂದ್ರಿಯಗಳಿಂದ ಪಡೆಯುತ್ತದೆ- ಕಾರಣ ಇಂದ್ರಿಯಗಳನ್ನು ನಿಗ್ರಹಿಸಿ, ಮನಸ್ಸನ್ನು ಜಯಸಬೇಕು. ಗೆಲ್ಲುವವರೆಗೆ ಮನಸ್ಸು ಶತ್ರುವಿನಂತೆ. ಗೆದ್ದ ಬಳಿಕ ಬಂಧುವಿನಂತೆ. ಪರಮ ಮಿತ್ರನಂತೆ. ಜಿತೇಂದ್ರಿಯನ ಮನಸ್ಸಿನಲ್ಲಿ ಚಿತ್ತವೃತ್ತಿಗಳು ಒಂದೊಂದಾಗಿ ಕ್ಷೀಣಿಸುತ್ತವೆ. ಮನಸ್ಸು ಹಸನಾಗುತ್ತದೆ. ಹೀಗೆ ಶುದ್ಧಿಗೊಳ್ಳುವ ಮನಸ್ಸು ಶಾಂತವಾಗಿರುತ್ತದೆ. ವಿಚಾರ—ವೃತ್ತಿಗಳ ತಾಕಲಾಟವಿಲ್ಲದಿರುವುದರಿಂದ 'ಶಣ್ತೆಗೆ' ಇರುವುದು, ಸಿಡುಕು ಸಂಮೋಹಗಳ ಕಾವು, ಇಂಥ ಮನಸ್ಸಿನ ಸ್ಥಿತಿಯಲ್ಲಿರಲಾರದು. ಇಂಥ ಸಶುದ್ಧವಾದ ಪ್ರಶಾಂತವಾದ ಮನಸ್ಸು ಏಕಾಗ್ರತೆಗೆ ಒಳ್ಳೆದು.ಚಿತ್ತೈಕಾಗ್ರತೆ ಸಾಧಿಸಿದರೆ, ಸಮಾಧಿಯ ಸ್ಥಿತಿ ತಲುಪಬಹುದು. ಆಗ ತತ್ತ್ವಗಳ ಒಟ್ಟು ಬದಲಾವಣೆಯು ಅಂತ್ಯದಲ್ಲಿ ಗೋಚರಿಸುವದು. ಸತ್ಯವಾದದು ಆತ್ಮ. ಉಳಿದುದು ಅಸತ್ಯ. ಆತ್ಮ ಬೇರೆ.ಜೀವದ ಕರ್ತೃತ್ವ, ಭೋಕ್ತೃತ್ವದ ಗೊಡವೆ ಅದಕ್ಕಿಲ್ಲ,ಎಂದು ತಿಳಿಯುವುದು. ಈ ಬಿಡುಗಡೆಯ ಅರಿವು ಮುಕ್ತಿ)

ಮನಸ್ಸು ಪ್ರಶಾಂತವಾಗಿರುವವನೂ, ಶೀತದ ಅಂಶವಳ್ಳವನೂ ಆಗಿರುವ ರೀತಿಯಲ್ಲಿ ಪರಮಯೋಗಿ ಇರುತ್ತಾನೆ ಹೀಗೆ ಇರುವವನು ಅತಿ ಬೇಗ ಚಿತ್ತೈಕಾಗ್ರತೆ ಸಾಧಿಸಿ ಮುಕ್ತಿ ಪಡೆಯುವನು.

೬೦೯

ಮಧುರಸಂಬುಗೋರಿ ವಕ್ಷಿಕಂಬುಲು ಜೇರಿ, ಚೊಚ್ಚಿ ಪೆಡಲಲೇಕ ಸೂಕ್ಕಿನಟ್ಲು
ಮುನಿಗಿ ವೆಡಲಲೇರು ಮೋಹುಬು ರಾಶಿಲೋ ವಿಶ್ವದಾಭಿರಾಮ ವಿನುರ ವೇಮ,

ಮಧುರಸವನು ಕೋರಿ ಮಕ್ಷಿಕಗಳು ಸೇರಿ,
ಬಯಸಿ ಬಿಟ್ಟು ಬಿಡದೆ, ಬಂತು ನಾಶ.
ಮುಳುಗಿ ಬಿಡಲಾರರು, ಮೋಹರಾಶಿಯಲ್ಲಿ
ವಿಶ್ವದಾಭಿರಾಮ ಕೇಳು ನೇಮ.

(ಮನಸ್ಸು, ಇಂದ್ರಿಯಗಳು ಮತ್ತು ಪ್ರಪಂಚ ವಸ್ತು ಪಂಚಭೂತಾದಿಗಳಿಂದ ಉಂಟಾಗಿವೆ. ಅದೇ ವಸ್ತುವಿನ ಸೂಕ್ಷ್ಮ-ಸ್ಥೂಲ ರೂಪಗಳಿವು. ವಸ್ತುಗಳಲ್ಲಿ ಪರಸ್ಪರ ಆಕರ್ಷಣವಿರುವುದು ಎಲ್ಲರಿಗೂ ಗೊತ್ತು ಸೂಕ್ಷ್ಮ-ಸ್ಥೂಲ ವಸ್ತು. ಇನ್ನೊಂದು ವಿಶೇಷವೆಂದರೆ ಸ್ಥೂಲವನ್ನು ಸೂಕ್ಷ್ಮ ಗ್ರಹಿಸಬಲ್ಲದು. ಆದರೆ ತಿರುವುಮುರುವಾಗಿ ಅಲ್ಲ.

ಇದರಿಂದ ಬಾಹ್ಯ ವಸ್ತುಗಳಿಂದ ಹೊರಟ ತರಂಗಗಳು, ಇಂದ್ರಿಯಗಳ ಮೇಲೆ ಪರಿವರ್ತನೆಗೊಳ್ಳುತ್ತವೆ ಇಂದ್ರಿಯಗಳಿಂದ ಮನಸ್ಸಿನ ಮೇಲೆ ಪರಿವರ್ತನೆಗೊಳ್ಳುತ್ತವೆ. ಇದು. ಸಹಜ ಕ್ರಮವಾದುದರಿಂದ ಸುಖಭೋಗವನ್ನೆನ್ನಿಸುವುದು. ಆದರೆ ಸುಖವು ಬೇರೆ ಆನಂದ ಬೇರೆ. ಪ್ರೇಯ ಬೇರೆ; ಶ್ರೇಯ ಬೇರೆ. ಪ್ರೇಯದಲ್ಲಿ ಸುಖವರಸುವ ಮನಸ್ಸು ಶ್ರೇಯವನ್ನು ಶೋಧಿಸಲಾರದು. ಕೊನೆಗೆ ಜನನ-ಮರಣದ ಚಕ್ರದಲ್ಲಿ ಸಿಲುಕಿ ಬೀಳುವುದಷ್ಟೇ)

ನೊಣಗಳು ಜೇನುತುಪ್ಪ ಸವಿಯಲು ಅದರತ್ತ ಬರುತ್ತವೆ ಸಮೀಪ ಹೋಗುತ್ತವೆ. ಜೇನು ತುಪ್ಪದ ಜಿಗುಟು ಅಂಟಿ, ನೊಣಕ್ಕೆ ನಡೆಯಲು ಹಾರಲು ಬಾರದೆ, ಅಲ್ಲಿಯೇ ಸತ್ತು ಹೋಗುತ್ತದೆ- ಅದೇ ರೀತಿ ಜನರು ವಿಷಯ ವಸ್ತುಗಳ ಮೋಹ ರಾಶಿಯಲ್ಲಿ ಬಿದ್ದು ನಾಶಗೊಳ್ಳುವರು.

("ನಾನು ಹಣವಂತನು ಮತ್ತು ಕುಲೀನನು; ನನಗೆ ಸಮನಾದವನು ಯಾವ ನಿದ್ದಾನೆ? ನಾನು ಯಾಗ ಮಾಡುವೆನು, ದಾನ ಮಾಡುವೆನು, ಮೊದ ಪಡುವೆನು-ಎಂದು ಅಜ್ಞಾನದಿಂದ ಮೋಹಿತರಾಗಿ, ಅನೇಕ ಚಿಂತೆಗಳಿಂದ ಭ್ರಾಂತರಾಗಿ, ಮೋಹಜಾಲದಿಂದ ಆವರಿಸಲ್ಪಟ್ಟವರಾಗಿ, ಕಾಮ ಭೋಗಗಳಲ್ಲಿ ಆಸಕ್ತರಾಗಿ ಅಶುಚಿಯಾದ ನರಕದಲ್ಲಿ ಬೀಳುತ್ತಾರೆ. (ಗೀತೆ ೧೬-೧೫ ಮತ್ತು ೧೬)

೬೧೦

ಬ್ರಹ್ಮಮುನ್ನ ಜೋಟು ವರಗಂಗೆ ದೆಳಿಯಕ,ಯೆಂಹೊ ದೆದುಕಬ್ರಹ್ಮ ಮೇಲ ಕಲುಗು?
ಅಂಜನಂಬು ಜೇಕ ಯಾಸೊಮ್ಮು ಬೊರಕುನಾ? ವಿಶ್ವದಾಭಿರಾಮ ವಿನುರ ವೇಮ.

ಬ್ರಹ್ಮನಿರುವ ತಾಣ ಪರೀಕ್ಷಿಸಿ ತಿಳಿಯದೆ,
ಎಲ್ಲೊ ಅರಸೆ, ಬ್ರಹ್ಮ ಎಂತು ಸಿಗುವ?
ಅಂಜನಿರದೆ. ಯಾವ ಒಡವೆ ದೊರಕಬಹುದು?
ವಿಶ್ವದಾಭಿರಾಮ ಕೇಳು ವೇಮ

'ಸರ್ವಂ ಖಲ್ವಿದಂ ಬ್ರಹ್ಮ." "ನಿಜವಾಗಿ ಇದೆಲ್ಲವೂ ಬ್ರಹ್ಮವೇ "ಎಂದು ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಲಾಗಿದೆ. "ಹೃದಯದಲ್ಲಿರುವ ಇವನು ನನ್ನ ಆತ್ಮನು "ಏಷವೇ ಆತ್ಮ ಅಂತರ್ಹೃದಯೆ" ಎಂದು ಅದೇ ಉಪನಿಷತ್ತು ತಿಳಿಸುತ್ತದೆ ಎಲ್ಲೆಡೆಗೂ ಇರುವ ಬ್ರಹ್ಮವೇ ಹೃದಯದೊಳಗಿರುವ ಆತ್ಮ ಹೇಗೆ? ಬ್ರಹ್ಮ ಆಕಾಶದಂತೆ ಅವಿಚ್ಛಿನ್ನವಾಗಿದೆ. ಗಡಿಗೆಯೊಳಗಿನ ಆಕಾಶ ವಿಚ್ಛಿನ್ನವೆನ್ನಿಸುವುದು.ಗಡಿಗೆಯ ಉಪಾಧಿಯಂದ ಆ ಭಾವನಷ್ಟೇ ಅದೇ ರೀತಿ ಅವಿಚ್ಛಿನ್ನವಾದ ಬ್ರಹ್ಮ, ದೇಹ ಇಂದ್ರಿಯ ಮನಸ್ಸು ಬುದ್ಧಿಗಳ ಉಪಾಧಿಯಿಂದ ವಿಚ್ಛಿನ್ನವಾಗಿ ತೋರುವುದು. ಅಜ್ಞಾನಿಗಳಿಂದ 'ಜೀವ ಎನ್ನಿಸಿಕೊಳ್ಳುವುದು. ಆತ್ಮದ ಅವಿಚ್ಛಿನ್ನ ರೂಪವನ್ನು ಅನುಭವಿಸಿ ತಿಳಿಯುವ ವರೆಗೆ,ಎಲ್ಲರೂ ಅಜ್ಞಾನಿಗಳೇ. 'ಎಲೈ ಅರ್ಜುನ, ಸರ್ವ ಪ್ರಾಣಿಗಳನ್ನೂ ಯಂತ್ರಾರೂಢವಾದ ಬೊಂಬೆಗಳಂತೆ

ಮಾಯೆಯಿಂದ ತಿರುಗಿಸುತ್ತ ಈಶ್ವರನು ಸರ್ವಜೀವಿಗಳ ಹೃದಯ ಪ್ರದೇಶದಲ್ಲಿ ನಲೆಸಿರುತ್ತಾನೆ, ಎಂದು ಗೀತೆಯಲ್ಲಿ ಹೇಳಲಾಗಿದೆ. (ಗೀತಾ ೧೬—೬೧)

ಬ್ರಹ್ಮನಿರುವ ಸ್ಥಾನ ಯಾವುದು ಎಂದು ಸದಸದ್ವಿವೇಕಾದಿಗಳಿಂದ ಪರೀಕ್ಷಿಸಿ ತಿಳಿಯದೆ, ಬ್ರಹ್ಮ ಹುಡುಕುತ್ತ ಕಾಶಿ ರಾಮೇಶ್ವರ ಸುತ್ತಿದರೆ, ಗಂಗೆ-ಗೋದಾವರಿ, ಕೃಷ್ಣೆ-ಕಾವೇರಿಯಲ್ಲಿ ಮಿಂದು ಬಂದರೆ ವಿಂದ್ಯಾದ್ರಿ ಶೇಷಾದ್ರಿ ಬೆಟ್ಟ ಅಲೆದರೆ ಬ್ರಹ್ಮ ಸಿಗುವದೆಂತು? ಬ್ರಹ್ಮವರಿಯಲು ತತ್ವ ತಿಳಿಯಬೇಕು. ಕಾಣದ ವಸ್ತುವನ್ನು ಗುರುತಿಸಲು ಕಣ್ಣಿಗೆ ಅಂಜನ ಹಚ್ಚಿ ನೋಡುತ್ತಾರೆ. ಅದನ್ನು ಕಂಡ ಬಳಿಕ ಶೋಧ, ಭೂಮಿಯು ಆಗೆತ ಪ್ರಾರಂಭವಾಗುತ್ತದೆ. ಅದೇ ರೀತಿ ತತ್ತ್ವರಿತು ಬ್ರಹ್ಮ ಸರ್ವತ್ರ ಉಂಟು. ಹೃದಯದೊಳಗಿರುವ ಆತ್ಮವನ್ನು ಅರಿಯುವವರ ಮೂಲಕ ಬ್ರಹ್ಮವರಿಯಬಹುದು ಎಂಬ ತಿಳಿವೇ ಅಂಜನವಿದ್ದಂತೆ. ಅನಂತರ ಆತ್ಮ ಸಾಕ್ಷಾತ್ಕಾರ ಸಾಧ್ಯ.

೬೧೧

ಹೀನು ದೆನ್ನಿ ವಿದ್ಯೆ ಲಿಲನಭ್ಯ ಸಿಂಚಿನ, ಘನುಡು ಕಾಡು ಹೀನ ಜನುಡೆ ಕಾನಿ,
ಪರಿಮಳಮುಲ ಗರ್ಧಭಮು ಮೋಯ ಘನ ಮೌನೆ? ವಿಶ್ವದಾಭಿರಾಮ ವಿನುರ ವೇಮ.

ಹೀನರೆಷ್ಟು ವಿದ್ಯೆ ಹೊಂದಲಭ್ಯಸಿಸಲು,
ಘನರು ಅಲ್ಲ; ಹೀನ ಜನರು ಅಷ್ಟೆ.
ಪರಿಮಳವನು ಕತ್ತೆ ಹೊತ್ತರೆಂತು ಘನವು?
ವಿಶ್ವದಾಭಿರಾಮ ಕೇಳು ವೇಮ.

ನರಮೇಧ, ಗೋಮೇಧ, ಅಶ್ವಮೇಧ, ಇತ್ಯಾದಿ ಯಜ್ಞಗಳನ್ನು ನಡೆಸಿ ಮನುಷ್ಯರನ್ನೂ, ಆಕಳುಗಳನ್ನೂ, ಕುದುರೆಗಳನ್ನೂ ದೇವರ ಹೆಸರಿನಲ್ಲಿ ಬಲಿ ಕೊಟ್ಟು, ಅದನ್ನೇ ಯಜ್ಞಶೇಷವೆಂದೂ, ಅಮೃತವೆಂದೂ ಸೇವಿಸುವ ವೇದಕಾಲವೊಂದಿತ್ತು. ಅಂದಿನ ನಿತ್ಯ ಜೀವನವು ಈ ಪರಿ ಇದ್ದಾಗ ಮುನಿಗಳು ಅದರಲ್ಲೆಯೇ ದೇವತಾ ಉಪಾಸನೆಯ ಮಾರ್ಗ ಬೋಧಿಸಿದರು. ಈ ಸಾಹಿತ್ಯವೇ ವೇದ. ಇಂದು ವಿಕ್ಷಿಪ್ತವಾಗಿ ಕಾಣುವ ಈ ಸಾಹಿತ್ಯದಲ್ಲಿ ನಿತ್ಯ ನೂತನ ಸತ್ಯವೂ ಹಾಸುಹೊಕ್ಕಾಗಿ ತುಂಬಿದೆ. ಯಜ್ಞ ಯಾಗಗಳನ್ನು ವಿರೋಧಿಸಿದವರು, ಇಲ್ಲವೆ ಆಚರಿಸದವರು, ಶೂದ್ರರೆನಿಸಿದರು. ತಿರಸ್ಕರಿಸಿದವರನ್ನು ಬಹಿಷ್ಕರಿಸುವದು ಸ್ವಾಭಿಮಾನದ ಪ್ರತಿಕ್ರಿಯೆ. ಆದರೆ ಉಪನಿಷತ್ಕಾರರು ಯಜ್ಞ ಕರ್ಮ ತುಚ್ಛೀಕರಿಸಿ ಬ್ರಹ್ಮ ಜ್ಞಾನಕ್ಕೆ ಮೇಲ್ಕೆ ಕೊಟ್ಟರು. ಇಲ್ಲಿ ಶೂದ್ರತ್ವವು ವಿದ್ಯೆಗೆ ಅನರ್ಹತೆ ಎನಿಸಲಿಲ್ಲ. ಆದರೆ ಮುಂದೆ ಸಂಸ್ಕೃತ ಸಾಹಿತ್ಯ ವಿಶಿಷ್ಟ ಜನರ ನಶವಾಗಿ ತಮ್ಮ ಉದರ ನಿರ್ವಾಹಕ್ಕಾಗಿ ಮಂತ್ರೋಪದೇಶ ಬಳಸುವ ಪರಿಪಾಠ ಶುರುವಾಯಿತು. ದೇಶದ ಮುಕ್ಕಾಲು ಪಾಲು ಜನತೆಗೆ ಮೂಲ ಗ್ರಂಥಗಳ ಅಧ್ಯಯನ ನಿರಾಕರಿಸಲ್ಪಟ್ಟತು ಕೆಲವೇ ಜನ ವಿದ್ಯೆ ಪಡೆದರು. ಅವರಿಗೆ ಸೌಕರ್ಯ ಅಪರಿಮಿತವಾಗಿತ್ತು. ಎಲ್ಲರೂ ವಿದ್ಯಾವಂತರಾದರೆ ಸೌಕರ್ಯ ತಪ್ಪುವುದಲ್ಲಾ! ಎಂಬ ಭಯದಿಂದ ಇತರರನ್ನೂ ದೂರ ಇಡುವದೇ ಗತ್ತು ಆಯಿತು ಸಂಸ್ಕೃತ ಪಂಡಿತರು ಗ್ರಂಥ ಬರೆದರು. ಆಚಾರ್ಯರೆನಿಸಿದರು. ಆದರೆ ಅವರ ಹೀನ ಸಂಕುಚಿತ ಬುದ್ಧಿ ಹೋಗಲಿಲ್ಲ. ಬ್ರಾಹ್ಮಣ, ಅನೆ, ನಾಯಿ

ನಾಯಿ ತಿನ್ನುವವ ಎಲ್ಲರೂ ಒಂದೇ ಎಂದು ತಿಳಿಯುವವನೇ ಪಂಡಿತ ಎಂದು ಶ್ರೀ ಕೃಷ್ಣ ಗೀತೆಯಲ್ಲಿ ಹೇಳಬೇಕಾಯಿತು, ಭಗವಾನ ಬುದ್ಧ ಕಟೂಕ್ತಿಯ ಖಂಡನೆಗೆ ನಿಲ್ಲಬೇಕಾಯಿತು. ಇದೆಲ್ಲ ನೋಡಿದರೆ ವಿದ್ಯೆಯನ್ನು ಎಷ್ಟು ಕಲಿತರೂ ಹೀನ ಗುಣ ತೊರೆಯದಿದ್ದ ಮನುಷ್ಯ ಘನನೆನಿಸಲಾರನು. ಅವನಲ್ಲಿ ಉದಾರ ಬುದ್ಧಿ ಉದಿಸದು. ಕತ್ತೆ ಪರಿಮಳವನ್ನು ಹೊತ್ತಂತೆ. ಪರಿಮಳವು ಘನವಂತನಿಗೆ ಶೋಭೆ ನೀಡುವಂಥದಲ್ಲ ಅವನಿಂದ ಅನುಭವಿಸುವಂಥದಲ್ಲ. ಅದನ್ನು ಹೊರುವ ಕತ್ತೆಗೆ ಅದರಿಂದೇನು?

೬೧೫

ಮನಸುಲೋನುನ್ನ ಮಮತಲನ್ನಿ ಯುಗೋಸಿ ಧೃಡಮು ಜೇಸಿ ಮನಸು ದೇಟ ಬರಚಿ
ಘಟಮು ನಿಲ್ಪು ವಾಡು ಘನತರಯೋಗಿರಾ, ವಿಶ್ವದಾಭಿರಾಮ ವಿನುರ ವೇಮ.

ಮನಸಿನೊಳಗೆ ಇಪ್ಪ ಮಮತೆಯನ್ನು ಕಡಿದು,
ಧೃಡವ ಗೈದು ಮನಸು ದೇಟು ಮಾಡಿ,
ಘಟವ ನಿಲಿಸುವವನು ಘನತರನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸಿನಲ್ಲಿ ಮಮತೆ ಇದ್ದರೆ, ವಿಷಯ ವಸ್ತುಗಳಲ್ಲಿ ಆಸಕ್ತಿ ಹುಟ್ಟುತ್ತದೆ ಆಸಕ್ತಿಯಿಂದ ಕಾಮ ಕಾಮದಿಂದ ಕ್ರೋಧ, ಕ್ರೋಧದಿಂದ ಸಂಮೋಹ ಸಂಮೋಹದಿಂದ ಸ್ಮೃತಿ ವಿಭ್ರಮ ಉಂಟಾಗಿ ಬುದ್ಧಿ ನಾಶವಾಗುವದು. ಕಾರಣ ಮೊದಲು ಮನಸ್ಸಿನಲ್ಲಿರುವ ಮಮತೆಯನ್ನೇ ಕಡಿದೊಗೆದರೆ ರಾಗ ದ್ವೇಷಗಳಿಂದ ಬಿಡುಗಡೆ ಹೊಂದಬಹುದು. ಮನಸ್ಸನ್ನು ಏಳೆತ-ಏಳೆತಗಳಿಂದ ಕೊಂಕದಂತೆ ನೇರವಾಗಿ ಉಳಿಯುವಂತೆ ನೋಡಿಕೊಳ್ಳಬೇಕು. ಮನಸ್ಸನ್ನು ಧೃಡಗೊಳಿಸಿದ ಮೇಲೆ ಸೂಕ್ತವಾದ ಆಸನವನ್ನಾರಿಸಿಕೊಂಡು ಮನಸ್ಸನ್ನು ಏಕಾಗ್ರ ಮಾಡಿ ಚಿತ್ತೇಂದ್ರಿಯಗಳನ್ನು ನಿಗ್ರಹಿಸಿ ಘಟವನ್ನು ನಿಲ್ಲಿಸುವವನು ಶ್ರೇಷ್ಠತರನಾದ ಯೋಗಿಯೆನ್ನಿಸುವನು.

೬೧೬

ಕಾಗಲಪನುಲೆಲ್ಲ ಗಾನೆಟುಬೋವುನು? ಕನಿಪನುಲು ಕಾನೆ ಕಾವು ಭುವಿನಿ,
ಮಹಿಮ ವೇರೆಯುಂಡೆ ಮನತೋಡನನ್ನ ದಾ? ವಿಶ್ವದಾಭಿರಾಮ ವಿನುರ ವೇಮ.

ಆಗುತಿಪ್ಪ ಕಾರ್ಯ ಆಗದೆಂತು ಇಹವು?
ಆಗದಂಥ ಕಾರ್ಯ ಆಗದೆಂದು.
ಮಹಿಮೆ ಬೇರೆಯುಂಟು; ಮನುಜರೊಳಗೆ ಉಂಟೆ?
ವಿಶ್ವದಾಭಿರಾಮ ಕೇಳು ವೇಮ

(ಕರ್ಮಗಳಲ್ಲಿ ಸಂಚಿತ ಕರ್ಮ, ಆರಬ್ಧ ಕರ್ಮ ಮತ್ತು ಆಗಮಿ ಕರ್ಮಗಳೆಂದು ಮೂರು ವಿಧ. ನಾವು ಮಾಡುವ ಕರ್ಮಗಳು ಅವುಗಳ ಫಲಪುಣ್ಯವಿರಲಿ ಪಾಪವಿರಲಿ

ಸಂಗ್ರವಾಗುತ್ತ ಹೋಗುತ್ತದೆ. ಕರ್ಮಸಂಚಯವು ಪೂರ್ವ ಶರೀರದ ಕರ್ಮಗಳು ಮತ್ತು ವರ್ತಮಾನ ಜನ್ಮದಲ್ಲಿ ಗೆಯ್ದ, ಮತ್ತು ಗೆಯ್ಯುವ ಕರ್ಮಗಳಾಗಿವೆ. ಇನ್ನು ಪ್ರಾರಬ್ಧಕರ್ಮಗಳೆಂದರೆ ಸಂಚಿತ ಕರ್ಮದ ಕೆಲವೊಂದು ಪಾಲು ಕರ್ಮಫಲವನ್ನು (ಹಿಂದಿನ ಮತ್ತು ಇಲ್ಲವೆ ವರ್ತಮಾನ ಶರೀರದಲ್ಲಿ ಗೆಯ್ದು) ವರ್ತಮಾನ ಶರೀರದಲ್ಲಿ ಅನುಭವಿಸಬೇಕು. ವರ್ತಮಾನ ಶರೀರದಲ್ಲಿ ಮುಕ್ತಿ ಪಡೆದರೆ, ಮುಂದೆ ಗೆಯ್ದೆ ಕರ್ಮ ಫಲಗಳು ಹತ್ತುವದಿಲ್ಲ. ಕೇವಲ ಹಿಂದಿನ ಪ್ರಾರಬ್ಧ ಕರ್ಮಗಳನ್ನು ಭೋಗಿಸಿದರೆ ಮುಂದೆ ಶರೀರ ಧಾರಣೆಯ ಅಗತ್ಯವಿಲ್ಲ; ಎಂಬುದು ಕರ್ಮಸಿದ್ಧಾಂತ. ಇದರನ್ವಯ ಕಾರ್ಯಗಳು ಪ್ರಾರಬ್ಧ ಕರ್ಮಫಲಗಳಾಗಿ ನಡೆಯುವುದರಿಂದ ತಪ್ಪಿಸಿಕೊಳ್ಳುವದು ಶಕ್ಯವಿಲ್ಲ. ಆದರೆ ಕರ್ಮ ಫಲಗಳಲ್ಲಿ ನಿರಾಸಕ್ತಿ ತಾಳಿದರೆ, ಇಂಥ ಕರ್ಮಫಲಗಳಿಂದ ಹಿಗ್ಗು ಕುಗ್ಗು ಆಗುವುದಿಲ್ಲ.

ಆಗುವಂಥ ಕಾರ್ಯಗಳು ವಿಧಿನಿಯಮದಂತೆ ಆಗಿಯೇ ತೀರುತ್ತದೆ. ಅವು ಆಗದೆ ಇರುವುದು ಸಾಧ್ಯವಿಲ್ಲ. ಆಗದಂಥ ಕಾರ್ಯವು ನಾವೆಷ್ಟೇ ಪ್ರಯತ್ನಿಸಿದರೂ ಆಗಲಾರದು. ಏಕೆಂದರೆ ಪ್ರಯತ್ನಗಳಿಗೆ ಯಶ ದೊರೆಯುವುದಾಗಲಿ, ದೊರೆಯದಿರುವುದಾಗಲಿ ಪ್ರಾರಬ್ಧ ಕರ್ಮವನ್ನವಲಂಬಿಸಿದೆ. ಮನುಷ್ಯನ ಹೀಗೆ ಬೇರೆಯೇ ಇದೆ. ಮನುಷ್ಯರ ವಶವರ್ತಿಯಾಗಿಲ್ಲ.

೬೧೪

ಪಾಮುಕನ್ನ ಲೇದು ಪಾಪಿಷ್ಠ ಮಗು ಜೀವಿ, ಆಟ್ಟಿಪಾಮು ಚೆಪ್ಪಿ ನಟ್ಲು ವಿನುನು,
ಇಲನು ಮೋಹಿಂದೆಲ್ಪ ನೆವ್ವರಿವಶಮಯಾ? ವಿಶ್ವದಾಭಿರಾಮ ವಿನುರ ವೇಮ,

ಹಾವಿಗಿಂತ ಹೆಚ್ಚು ಪಾಪಿ ಜೀವಿಯಿಲ್ಲ.
ಅಂಥ ಹಾವು ನುಡಿಯೆ ಆಲಿಸುವುದು.
ಇಳೆಯಲ್ಲಿ ಮೋಹಿಗೆ ತಿಳಿಸಲಾರು ಶಕ್ತ?
ವಿಶ್ವದಾಭಿರಾಮ ಕೇಳು ವೇಮ.

ಹಾವು, ಕೀಟ-ಕಪ್ಪೆಗಳನ್ನು ಹಿಡಿದ[illegible]ತ್ತದೆ. ತನಗೆ ಹಾಲೆರೆದವನನ್ನೆ ಕಚ್ಚಿ ಕೊಲ್ಲುತ್ತದೆ. ತನ್ನ ಭಯದಿಂದಾಗಿ ಇತರ[illegible] ಕಚ್ಚುತ್ತದೆ. ಅದರ ವಿಷದಂತ ನಾಟದರೆ, ಮನುಷ್ಯ ವಿಷವೇರಿ ಸಾಯುತ್ತಾನೆ. ಬೇರೆ ಪ್ರಾಣಿಗಳಿಗಿಂತಲೂ ಹೆಚ್ಚಾಗಿ ಹಾವು ಇತರರಿಗೆ ಕೆಡಕು ಮಾಡುವ ಜೀವಿ; ಪಾಪಿ ಜೀವಿ. ಇಂಥ ಪಾಪಿಜೀವಿಯಾದ ಹಾವನ್ನು ಕೆಡುಕು ಕಾರ್ಯದಿಂದ ಪಾರಜ್ಮಾಡಿಗೊಳಿಸಬಹುದು. ಮೋಡಿಕಾರನ ಪುಂಗಿಯ ಸ್ವರ ಹಾವಿನ ಮೇಲೆ ವಿಶೇಷ ಪರಿಣಾಮ ಬೀರುತ್ತದೆ. ಪುಂಗಿಯ ಸಂಗೀತ ಕೇಳುತ್ತ ಹಾವು ಹೆಡೆ ತೆರೆದು ನಲಿಯುತ್ತದೆ. ಕಚ್ಚಹೋಗುವದಿಲ್ಲ.

ಹೀಗೆ ಪಾಪಿಜೀವಿಯಾದ ಹಾವನ್ನು ಹಾದಿಗೆ ತರುವ ಉಪಾಯ ಉಂಟು. ಆದರೆ, "ತೃಪ್ತಿಪಡಿಸಲಾಗದ ಕಾಮವನ್ನು ಆಶ್ರಯಿಸಿ ದಂಭ-ಮಾನ-ಮದಗಳಿಂದ ಕೂಡಿದವನಾಗಿ; ಮೋಹದಿಂದ, ಅನ್ಯಾಯದಿಂದ ಸಂಪಾದಿಸಲ್ಪಟ್ಟ ವಸ ಗಳನ್ನು

ಇಟ್ಟುಕೊಂಡ," ಮೋಹಿಗೆ ತಿಳಿಹೇಳಲು ಯಾರಿಗೆ ತಾನೇ ಸಾಧ್ಯ? ಅವನು ತನ್ನ ತಪ್ಪನ್ನು ತಾನೇ ತಿಳಿದುಕೊಳ್ಳುವುದರಿಂದ ಮಾತ್ರ ಕೆಡುಕಿನ ಪಂಥ ತೊರೆದು ಸತ್ಪಥದಲ್ಲಿ ಕಾಲಿರಿಸಬಹುದು.

೬೧೫

ಗತಮುಜೇಸಿನಟ್ಟಿ ಕರ್ಮಬಂಧಮುಲನ್ನಿ, ಪರಿಸಿತ್ತೋವು ಸತ್ಯ ಗುರುನಿವಲನ
ಕುಮ್ಮರಿಕೊಕಯೇಡು ಗುದಿಯಕು ನೊಕನಾಡು ವಿಶ್ವದಾಭಿರಾಮ ವಿನುರ ವೇಮ.

ಹಿಂದೆ ಮಾಡಿದಂಥ ಕರ್ಮಬಂಧವೆಲ್ಲ,
ಗಮಿಸುತಿಹವು ಸತ್ಯ ಗುರುವಿನಿಂದ.
ಕುಂಬಾರಗೆ ವರ್ಷ, ದೊಣ್ಣೆಗೊಂದೆ ದಿವಸ.
ವಿಶ್ವದಾಭಿರಾಮ ಕೇಳು ವೇಮ.

ಗುರುವು ವ್ಯಕ್ತಿಯಾಗಿರಬಹುದು; ಗ್ರಂಥವಾಗಿರಬಹುದು; ಅಂತಪ್ರೇರಣೆಯಾಗಿರಬಹುದು. ಸತ್ಯವೇ ಗುರುವಾಗಿರಬಹುದು. ಯಾವುದು ಸತ್ಯ ದರ್ಶನ ಮಾಡಿಸುವುದೋ ಅದೆಲ್ಲ ಗುರುವೇ. "ಗುರುರ್ಬ್ರಹ್ಮ, ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರ:॥ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮ:॥ ಎಂದು ಗುರು ಸ್ತೋತ್ರ ಮಾಡುತ್ತಾರೆ. ಪರಬ್ರಹ್ಮವೇ ಗುರುವು. ಸತ್ಯವೇ ಪರಬ್ರಹ್ಮ. ಹಿಂದೆ ಮಾಡಿದಂಥ ಕರ್ಮವೆಲ್ಲ ಸತ್ಯ ಸಾಕ್ಷಾತ್ಕಾರದಿಂದ ನಾಶವಾಗುವವು. ಸತ್ಯವೇ ಗುರುವಾದಾಗ ಪ್ರಾರಬ್ಧವಷ್ಟೇ ಉಳಿದು ಇತರ ಸಂಚಿತ ಕರ್ಮಫಲವು ಬಾಧಿಸುವುದಿಲ್ಲ. ಅನಂತರ ಗೈದ ಕರ್ಮಫಲವೂ ಬಾಧಿಸುವುದಿಲ್ಲ.

ಸತ್ಯ ಗುರುವಿಲ್ಲದಿದ್ದರೆ ಅದೆಷ್ಟೋ ಶರೀರಗಳನ್ನು ಧಾರಣಮಾಡಿ ಕರ್ಮ ಫಲವನ್ನು ಅನುಭವಿಸಬೇಕಾಗುತ್ತದೆ ಸತ್ಯ ದರ್ಶನವಾದರೆ, ಕರ್ಮಫಲ ಬಾಧೆ ತಪ್ಪುತ್ತದೆ. ಗಡಿಗೆ ಮಾಡಲು ಕುಂಬಾರನಿಗೆ ವರ್ಷಾರು ತಿಂಗಳು ಹಿಡಿಯಬಹುದು. ಆದರೆ ಅದನ್ನು ಒಡೆದು ಪುಡಿ ಪುಡಿ ಮಾಡಲು ದೊಣ್ಣೆಗೆ ಒಂದು ನಿಮಿಷ ಸಾಕು. ಕರ್ಮಫಲನಾಶಕ್ಕೆ ಸತ್ಯದರ್ಶನವು ದೊಣ್ಣೆಯಂತೆ.

೬೧೬

ಅನ್ನಿ ಚಾಡಲುಡಿಗಿ ಯಾನಂದ ಕಾಮುಡ್ಯೆ, ನಿನ್ನು ನಮ್ಮ ಜಾಲು ನಿಷ್ಠ ಕೋಡ
ನಿನ್ನು ನಮ್ಮ ಮುಕ್ತಿ ನಿಕ್ಕಂಬು ನೀಯಾನ ವಿಶ್ವದಾಭಿರಾಮ ವಿನುರ ವೇಮ.

ಅಖಿಲ ಜಾಡು ತೊರೆದ ಆನಂದ ಕಾಮಿಯು,
ನಿನ್ನನಂಬಲಾಗ ನಿಷ್ಠೆಯಿಂದ.
ನಿನ್ನ ನಂಬಿ ಮುಕ್ತಿ ನಿಶ್ಚಯ ನಿನ್ನಾಣೆ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಪುಣ್ಯ ಕರ್ಮಗಳಿಂದ ಉಂಟಾಗುವ ಸುಖವನ್ನು ಸವಿಯಲು ಅಪೇಕ್ಷಿಸುವವನು, ಸುಖ-ದು:ಖ ಜಾಡು ತೊರೆದು, ದ್ವಂದ್ವಾತೀತನಾಗಿ ಬ್ರಹ್ಮನಿಷ್ಠೆ ಹೊಂದಿದರೆ, ಮುಕ್ತಿಯು ನಿಶ್ಚಯವಾಗಿ ದೊರೆಯುತ್ತದೆ. ಇದರಲ್ಲೇನೂ ಸಂಶಯವಿಲ್ಲ.

[ಮುಂಡಕೋಪನಿಷತ್ತಿನಲ್ಲಿರುವ ದೃಷ್ಟಾಂತ ನೋಡಿರಿ: "ಒಂದೇ ಮರೆದ ಮೇಲೆ ಎರಡು ಹಕ್ಕಿಗಳು ಸಮಾನವಾದವುಗಳೂ, ಸಖಗಳಾದವುಗಳೂ ಆಗಿ ಕುಳಿತಿವೆ. ಒಂದು ಗಿಡದ ಸವಿಫಲ ತಿನ್ನುವುದು. ಇನ್ನೊಂದು ತಿನ್ನದೆ ಸಖನನ್ನು ನೋಡುತ್ತದೆ.

ಒಂದೇ ಗಿಡದಲ್ಲಿ ಕುಳಿತ ಹಕ್ಕಿಯಂತೆ ಪುರುಷ ಅನೀಶತ್ವದಿಂದಾಗಿ ಮೋಹಗೊಂಡು ಶೋಕಿಸುತ್ತಾನೆ. ಈಶತ್ವವನ್ನು ಹೊಂದಿದ ಇನ್ನೊಂದನ್ನು ನೋಡಿದೊಡನೆ. ಎಲ್ಲವೂ ಅದರ ಮಹಿಮೆಯೇ ಎಂದರಿತು ಶೋಕ ಹಿಂಗಿದವನಾಗುತ್ತಾನೆ" ಜೀವ ಮೋಹಗೊಂಡುದನ್ನೂ, ಬ್ರಹ್ಮವರಿತೊಡನೆ ಶೋಕಾತೀತನಾಗುವುದನ್ನೂ, ಬಣ್ಣಿಸಲಾಗಿದೆ. ಮುಂದೆ ನೋಡಿರಿ:

"ಯದಾ ಪಶ್ಯ: ಪಶ್ಯತೇ ರುಕ್ಮವರ್ಣಂ,
ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಂ|
ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ,
ನಿರಂಜನ: ಪರಮಂ ಸಾಮ್ಯಮುಪೈತಿ ॥
– ಮುಂಡಕ. ಉ. ೩– (೧) — ೩

ಯಾವಾಗ ನೋಡುವವನಾಗಿ, ಬಂಗಾರ-ಬಣ್ಣದ, ಕರ್ತಾರನಾದ, ಈಶನಾದ ಬ್ರಹ್ಮ ಮೂಲನಾದ ಪುರುಷನನ್ನು ನೋಡುವನೋ, ಆಗ ಅವನು ವಿದ್ವಾನನಾಗಿ ಪುಣ್ಯ—ಪಾಪಗಳನ್ನು ತೊರೆದು, ನಿರಂಜನನಾಗಿ, ಪರಮ ಸಾಮ್ಯವನ್ನು ಹೊಂದುವನು.]

೬೧೭

ಚಿಪ್ಪಲೋನ ಬಡ್ಡ ಚಿನುಕು ಮುತ್ಯಂಬಾಯೆ, ನೀಳ್ಳಬಡ್ಡ ಚಿನುಕು ನೀಳ್ಳಗಲಿಸೆ,
ಪ್ರಾಪ್ತಮುಂಡು ಚೋಟ ಫಲಮೇಲ ತಪ್ಪುರಾ ? ವಿಶ್ವದಾಭಿರಾಮ ವಿನುರ ವೇಮ.

ಚಿಪ್ಪಿನಲ್ಲಿ ಬಿದ್ದ ಚಿಮುಕು ಮುತ್ತೆ ಆಯ್ತು.
ನೀರಿನಲ್ಲಿ ಚಿಮುಕು ನೀರೆ ಆಯ್ತು.
ಪ್ರಾಪ್ತಿಯಿರುವ ತಾಣ,ಫಲವೆಂತು ದೊರೆಯದು ?
ವಿಶ್ವದಾಭಿರಾಮ ಕೇಳು ವೇಮ.

ಸ್ವಾತೀ ನಕ್ಷತ್ರದ ಮಳೆ ಬೀಳುತ್ತಿರುವಾಗ ಅದರ ಹನಿ ಕಪ್ಪೆಯ ಚಿಪ್ಪಿನ ಒಳಕ್ಕೆ ಬಿದ್ದರೆ, ಆ ಹನಿ ಮುತ್ತಾಗುವದು ಎಂದು ಹೇಳುತ್ತಾರೆ. ಚಿಪ್ಪಿನಲ್ಲಿರುವ ಕಪ್ಪೆ ಸ್ವಾತೀ ನಕ್ಷತ್ರದಲ್ಲಿ ನೀರಿನ ಮೇಲಕ್ಕೆ ಬಂದು, ತನ್ನ ಚಿಪ್ಪನ್ನು ತೆರೆದುಕೊಂಡು, ಬೀಳುವ ಅಮೂಲ್ಯವಾದ ಹನಿಗಾಗಿ ತೇಲುತ್ತಿರುತ್ತದೆ. ಆದರೊಳಗೆ ಹನಿಯೊಂದು ತತ್ಕ್ಷಣವೆ ಮುಚ್ಚಿ, ನಿಧಾನವಾಗಿ ಅದನ್ನು ಮುತ್ತು ಮಾಡಲು ಕಡಲಿನ ತಳಕ್ಕೆ ಹೋಗುತ್ತದೆ. ಸಾಧಕನೂ ಕಪ್ಪೆಯ ರೀತಿ ಇರಬೇಕು. ತತ್ತ್ವವರಿತುಕೊಂಡು ಧ್ಯಾನಸಕ್ತನಾಗಿ ಕಾಯಬೇಕು. ಸ್ಥಿರ ಮನಸ್ಸಿನಿಂದ, ನೇರ ಕುರಿತು ಏಕಾಗ್ರಚಿತ್ತನಾಗಿದ್ದರೆ, ಪೂರ್ಣಗೊಂಡ ಬದಲಾವಣೆಯು ಗೋಚರಿಸುವ ಅಮೃತ ಘಳಿಗೆ ಬಂದೇ ಬರುವುದು.

ಯೋಗ ಸಾಧನೆಯು ಪ್ರಾಪ್ತಿಯಾಗುವಂಥ ಸ್ಥಾನ. ಇಲ್ಲಿ ಗೆಯ್ದ ಸಾಧನೆ ಫಲ ನೀಡದೆ, ನಿರರ್ಥಕವಾಗದು.

೬೧೮

ಪಪ್ಪುಲೇನಿಕೂಡು ಪರುಲಕಸಹ್ಯಮೌ, ಅಪ್ಪುಲೇನಿವಾಡೆ ಯಧಿಕ ಬಲುಡು.
ಮುಪ್ಪುಲೇನಿವಾಡು ಮೊದಲ ಸುಜ್ಞಾನುಂಡು, ವಿಶ್ವದಾಭಿರಾಮ ವಿನುರ ವೇಮ

ಬೇಳೆಯಿರದ ಸಾರು ಬೇರೆಯವಗಸಹ್ಯ.
ಸಾಲವಿಲ್ಲದವನು ಸಬಲ ತಾನು;
ಮುಪ್ಪು ಇಲ್ಲದವನು,ಮೊದಲು ಸುಜ್ಞಾನಿಯು.
ವಿಶ್ವದಾಭಿರಾಮ ಕೇಳು ವೇಮ.

(ಅತಿಥಿಸತ್ಕಾರವು ಗೃಹಸ್ಥ ಧರ್ಮದಲ್ಲಿ ಅತ್ಯಂತ ಹೆಚ್ಚಿನ ಮಹತ್ವ ಪಡೆದಿದೆ. ಉಣ ಬಂದ ಅತಿಥಿಗೆ ಅವನು ಬೇಡಿದ ಊಟ ನೀಡಿ ತೃಪ್ತಿಪಡಿಸಬೇಕು. ತಮ್ಮಲ್ಲಿ ಇಲ್ಲದ ವಸ್ತು ಗಳನ್ನು ಅತಿಥಿ ಬೇಡಿದರೆ, ಏನಾದರೂ ಕೈಗಡ, ಸಾಲ ಮಾಡಿ ಅತಿಥಿಯ ಸತ್ಕಾರ ಮಾಡು ವುದು ಧರ್ಮವೆನಿಸಿತ್ತು. ಅದಕ್ಕೂ ಹೆಚ್ಚಾಗಿ ಕರ್ತವ್ಯವೆನಿಸಿತ್ತು. ಕರ್ತವ್ಯ ಲೋಪಕ್ಕೆ ಶಿಕ್ಷೆಯ ಭೀತಿಯಿತ್ತು. ಧರ್ಮ ಲೋಪಕ್ಕೆ ಅತಿಥಿಯ ಶಾಪದ ಭಯವಿತ್ತು. ನಮ್ಮ ಪುರಾಣ ಕತೆಗಳೆಲ್ಲ ಅತಿಥಿ ಸತ್ಕಾರ ಲೋಪದ ಅನಾಹುತದ ಭೀಷಣ ಚಿತ್ರ ನೀಡುತ್ತವೆ.)

ಹೊರಗಿನ ಜನರಾರೂ ಇಲ್ಲದಿದ್ದರೆ, ಬೇಳೆ, ಸಾರು ಇಲ್ಲದೆ ಊಟವಿದ್ದರೂ ಅಡ್ಡಿ ಯಿಲ್ಲ. ಆದರೆ ಬೇರೆಯವರು ಊಟಕ್ಕೆ ಬಂದಾಗ ಬೇಳೆ-ಸಾರು ಇತ್ಯಾದಿ ಪಾಕಗಳನ್ನು ಔಪಚಾರಿಕ ಸತ್ಕಾರವೆಂದಾದರೂ ಮಾಡಬೇಕು. ಇಲ್ಲವಾದರೆ ಅವರಿಗೆ ಅಸಡ್ಡೆ ತೋರಿ ದಂತೆ. ಆದರೆ ಇದನ್ನು ಮೀರಿ ಅವರಿವರಿಗೆ ಉಣಬಡಿಸಿದರೆ ಪುಣ್ಯವೆಂದು ಗ್ರಹಿಸಿ, ಸಾಲ ಮಾಡಿ ತಂದು ಹಾಕಬಾರದು. ಸಾಲದಿಂದ ಪ್ರಾಬಲ್ಯ ಹೋಗಿ, ದಾಸ್ಯತ್ವ ಬರುತ್ತದೆ. ಸಾಲದ ಚಿಂತೆ ಹೆಚ್ಚಾಗಿ ಮನುಷ್ಯನಿಗೆ ಬಹುಬೇಗ ಮುಪ್ಪು ಆಡರುತ್ತದೆ. ಮುಪ್ಪಿನಿಂ ದಾಗಿ, ವಿಚಾರಶಕ್ತಿಯೂ ಕ್ಷೀಣಿಸುತ್ತದೆ. ಕಾರಣ ಮುಪ್ಪು ಇಲ್ಲದವನು, ಉತ್ಸಾಹಿಯಾಗಿ ರುತ್ತಾನೆ. ತಿಳಿದುಕೊಳ್ಳುವ ಹಂಬಲವಿರುತ್ತದೆ. ಅವನು ತಿಳಿದುಕೊಂಡಂತೆಲ್ಲ ಜಾಣನಾಗು ತ್ತಾನೆ; ಸುಜ್ಞಾನಿಯಾಗುತ್ತಾನೆ.

೬೧೯

ಮೊಗಮುಜೂಚಿನಪುಡೆ ಮೋಹಂಬು ಘಟಮೌನು, ಧನಮು ಜೂಚಿನಪುಡೆ ತಗುಲು ಮನಸು.
ಕೂಲಿನಪ್ಪುಡರಯ ಗುಸುಲಿಲ್ಲ ವಿರುಗುನು, ವಿಶ್ವದಾಭಿರಾಮ ವಿನುರ ವೇಮ.

ಮುಖವ ನೋಡಿದೊಡನೆ, ಮೋಹ ಘನವಾಯಿತು;
ಧನವ ನೋಡಿದೊಡನೆ ತಗಲಿ ಮನಸು;
ಆಡಿಗೆ ಬೀಳಲಾಗ, ಅಂಗಾಂಗ ಮುರಿವವು.
ವಿಶ್ವದಾಭಿರಾಮ ಕೇಳು ವೇಮ.

ಹೆಣ್ಣು ಮತ್ತು ಹೊನ್ನು ಇವೆರಡು ಅಧ್ಯಾತ್ಮಿಕ ಸಾಧನದಲ್ಲಿಯ ದೊಡ್ಡ ಆತಂಕ ಗಳು. ಸುಂದರ ಸ್ತ್ರೀಯ ಮುಖವನ್ನು ನೋಡಿದೊಡನೆ ಅವಳತ್ತ ಆಕರ್ಷಣೆ ಉಂಟಾಗು ತ್ತದೆ. ಕಾಮವುಂಟಾಗುತ್ತದೆ. ಮನಸ್ಸು ಆಸಕ್ತವಾಗುತ್ತದೆ. ಮೋಹ ಆವರಿಸುತ್ತದೆ.

ಹೊನ್ನು ನೋಡಿದೊಡನೆ ಅದನ್ನು ಪಡೆಯುವ ಆಶೆ ಉದಿಸುತ್ತದೆ. ಮನಸ್ಸು ಅದರ ಲ್ಲಿಯೇ ತಗಲಿಕೊಳ್ಳುವುದು. ಯೋಗ ಸಾಧನೆಯಲ್ಲಿ ಮುಂದುವರೆದ ಸಾಧಕನು, ಹೊನ್ನು ಹೆಣ್ಣಿನ ಆಶೆಗೆ ಬಿದ್ದು ಯೋಗ–ಸಾಧನೆಯ ಮೇಲ್ಮಟ್ಟದಿಂದ ಪತಿತನಾದರೆ, ಗಮ್ಯಸ್ಥಾನ ತಲುಪುವ ಹಂಬಿಕೆ ಹಾಳಾಗುವುದು. ಎತ್ತರದ ಮೇಲಿಂದ ಆಳವಾದ ಕಂದಕದ ಅಡಿಗೆ ಬೀಳುವ ಮನುಷ್ಯನ ಶರೀರದ ಭಾಗಗಳು ಮುರಿದು ಹೋಗುವಂತೆ,ಇದೆಲ್ಲ ನಡೆಯುವುದು.

[ಭಗವದ್ಗೀತೆಯಲ್ಲಿ ಆಸುರೀ ಸ್ವಭಾವವನ್ನು ತಿಳಿಸುತ್ತ ಶ್ರೀಕೃಷ್ಣ ಹೀಗೆ ಹೇಳುತ್ತಾನೆ.
"ಈ ಜಗತ್ತು ಬ್ರಹ್ಮಾತ್ಮಕವಾದುದಲ್ಲ. ಪ್ರತಿಷ್ಠೆ ಇಲ್ಲದ್ದು; ಈಶ್ವರ ರಹಿತವಾದದ್ದು; ಸ್ತ್ರೀ ಪುರುಷರ ಸಂಯೋಗದಿಂದ ಉಂಟಾಗಿದ್ದು; ಅದೇಕೆ, ಕಾಮವೇ ಸೃಷ್ಟಿಗೆ ಕಾರಣವು ಎಂದು ಅವರು ಹೇಳುವರು.''

"ಅನೇಕ ಚಿಂತೆಗಳಿಂದ ಭ್ರಾಂತರಾಗಿ, ಮೋಹ ಜಾಲದಿಂದ ಆವರಿಸಲ್ಪಟ್ಟವರಾಗಿ ಕಾಮಭೋಗಗಳಲ್ಲಿ ಆಸಕ್ತರಾಗಿ, ಅಶುಚಿಯಾದ ನರಕದಲ್ಲಿ ಬೀಳುತ್ತಾರೆ''
ಗೀತಾ ೧೬—೮, ೧೬.)

೬೨೦

ಧರ್ಮಮನ್ನವಿನರು ತಮುನಮ್ಮಿಭೂನರುಲ್, ಯಮುನಿಭಟುಲುವೆಚ್ಚಿಯಡಲುನಿಂಚಿ,
ಜೊಚ್ಚಿಕೊಟ್ಟ ದಮುರು ಜೊರಬಾರಗಲರೊಕೋ, ವಿಶ್ವದಾಭಿರಾಮ ವಿನುರ ವೇಮ.

ಧರ್ಮವೆನೆ ಕೇಳರು, ತಮ್ಮ ನಂಬಿ ಜನರು,
ಯಮುನ ಭಟರು ಬರಲು, ಯಾತನೆಯದು.
ಸಾಯುವಂತೆ ಜಡಿಯೆ, ಸರಿದುಕೊಳ್ಳಬಹರೆ?
ವಿಶ್ವದಾಭಿರಾಮ ಕೇಳು ವೇಮ.

"ಜಗತ್ತಿನ ಈಶತ್ವ ಹೊಂದಿದ ಈಶ್ವರನು ಇಲ್ಲ." " ಸ್ತ್ರೀ ಪುರುಷ ಸಂಯೋಗದಿಂದ ಉಂಟಾದುದು; ಇದಲ್ಲದೆ, ಕಾಮವೇ ಸೃಷ್ಟಿಗೆ ಕಾರಣವು." ಎಂದು ಗ್ರಹಿಸುತ್ತಾರೆ. " ಈ ಧನವು ನನಗುಂಟು ; ಇನ್ನೂ ಹೆಚ್ಚಿನ ಧನ ನಾನು ಪಡೆಯುತ್ತೇನೆ. " " ಈ ಶತ್ರುವು ನನ್ನಿಂದ ಕೊಲ್ಲಲ್ಪಟ್ಟನು ; ಇತರ ಶತ್ರುಗಳನ್ನೂ ಕೊಲ್ಲುವೆನು. ನಾನು ಈಶ್ವರ, ಭೋಗಿ,ಬಲವಂತ,ಮತ್ತು ಸುಖ."ಎಂದು ತಮ್ಮನ್ನೇ ನಂಬಿದ ಜನರು ಇತರರನ್ನು ತಮ್ಮಂತೆ ಕಾಣುವ ಧರ್ಮವನ್ನು ತಿಳಿಯುವುದಿಲ್ಲ.

ಯಮಭಟರು ಬಂದಾಗ ಅಂದರೆ ಸಾಯುವ ಮುನ್ನ ಪ್ರಾಣಕ್ರಿಯೆ ನಿಂತು,ಪ್ರಾಣ ವಾಯು ಅಪಾನವಾಯುಗಳು ತಾಕಲಾಟವಾಡಿ,ಸಮಾನವಾಯುವನ್ನು ಸೇರಿ, ನಾಭಿ ಶ್ವಾಸ ಪುಂಟಾಗಿ, ವ್ಯಾನ ವಾಯು ಸೇರಿ, ಕೊನೆಗೆ ಉದಾನವಾಯುವಿನೊಂದಿಗೆ ಒಟ್ಟಾಗಿ ಹೊರಟು ಹೋಗುವವು. ಈ ಪರಿಣಾಮವನ್ನು ಅಹಮಹಮಿಕೆಯಿಂದ ತಪ್ಪಿಸಿಕೊಳ್ಳ ಬಹುದೇ ?

(ಹೋಲಿಸಿ ನೋಡಿರಿ :

ಹಮ್ಮು ತನುವಿನ ಧರ್ಮವಾದಡೆ, ದೊಮ್ಮೆಯಾಧರ್ಮಿಯನು, ಬಿಡದೆ,
ನೆಮ್ಮಿಕೊಂಡಿರಬೇಕು ಪೃಥ್ವಿಯ ಗಂಧ ಬಿಡದಂತೆ||
ಹಮ್ಮು ಮರಣದ ಕೆಚ್ಚಿನೊಳು, ತನು, ನೆಮ್ಮಿಕೊಂಡರೆ ಹುಯ್ಯಲಿಕ್ಕದೆ, ಒಮ್ಮೆ
ಅದರಿಂ ಹಮ್ಮು ತನುವಿನ ಧರ್ಮವಲ್ಲೆಂದ ||

ಅನುಭವಾಮೃತ ೯-೬.)

೬೨೧

ಕನ್ನಪುತ್ರನಾಸ ಕನಕಂಬುಮೀ ದಾಸ, ಸ್ತ್ರೀಲಮೀದ ನಾಸ ಚಿತ್ತ ಮೊಡಲಿ.
ಭ್ರಮಲುವಿಡುವಕುನ್ನ ಬ್ರಹ್ಮಮುನ್ ಗಾನೆರು. ವಿಶ್ವದಾಭಿರಾಮ ವಿನುರ ವೇಮ.

ಹೆತ್ತ ಪುತ್ರನಾಶೆ ಹೇಮದ ಮೇಲಾಶೆ,
ಸ್ತ್ರೀಯ ಮೇಲಿನಾಶೆ ಚಿತ್ತ ಭ್ರಾಂತಿ,
ಭ್ರಮೆಯ ಬಿಡದಿರಲು, ಬ್ರಹ್ಮವನು ಕಾಣರು.
ವಿಶ್ವದಾಭಿರಾಮ ಕೇಳುವೇಮ.

ಹಡೆದ ಮಕ್ಕಳ ಮೇಲಿನ ಆಶೆ, ಬಂಗಾರ ದ್ರವ್ಯದ ಮೇಲಿನ ಆಶೆ, ಸ್ತ್ರೀಯ ಮೇಲಿನ ಆಶೆಯಿಂಬೆ ಮನಸ್ಸು ಕದಡುತ್ತದೆ.

ಪುತ್ರೇಷಣ,ವಿತ್ತೇಷಣ,ದಾರೇಷಣಗಳೆಂಬ ಈಷಣ ತ್ರಯಗಳನ್ನು ಆಶಿಸಿದರೆ ಲೋಭ ಮೋಹ ಮಮಕಾರಗಳಿಗೆ ಒಳಗಾಗಿ ಅಜ್ಞ ಮನುಷ್ಯ ಭ್ರಮೆಗೊಳ್ಳುವುನು. ಈ ಭ್ರಮೆತ್ತಿಯನ್ನು ಬಿಡದೆ ಇದ್ದರೆ, ಮನಸ್ಸಿನಲ್ಲಿ ಆಶಿಸಿದ ವಿಷಯ ವಸ್ತುಗಳ ತರಂಗಗಳು ಸೇರಿ ತಾಕಲಾಟವಾಡುತ್ತವೆ. ಭಿನ್ನ ಭಿನ್ನ ಚಿತ್ತವೃತ್ತಿಗಳಿಂದ ಮನಸ್ಸು ಅಶುದ್ಧವಾಗಿ ಯಾವುದೊಂದನ್ನೂ ಗ್ರಹಿಸಲು ಶಕ್ತವಾಗುವುದಲ್ಲ. ಸತ್ಯ ಇಲ್ಲವೆ ಬ್ರಹ್ಮವನ್ನು ಅರಿಯಲು ಚಿತವೃತ್ತಿಗಳು ಅಡಗಿ ಮನಸ್ಸು ಶುದ್ಧವಾಗಬೇಕು. ಆಗ ಏಕಾಗ್ರತೆ ಸಾಧ್ಯವೆನಿಸಬಹುದು. ಬಹ್ಮ ಗೋಚರಿಸುವುದೂ ಈ ಸ್ಥಿತಿಯಲ್ಲಿಯೇ.

(ಗೀತೆಯ ಅಭಿಪ್ರಾಯ ನೋಡಿರಿ:
"ಆಶಾ ಪಾಶ ಶತೈರ್ಬದ್ಧಾಃ ಕಾಮಕ್ರೋಧ ಪರಾಯಣಾಃ |
ಈಹಂತೇ ಕಾಮ ಭೋಗಾರ್ಥಂ ಅನ್ಯಾಯೇನ ಅರ್ಥ ಸಂಚಯಾನ್

– ಗೀತೆ ೧೬-೧೨.

ಆಶೆಯೆಂಬ ನೂರಾರು ಹಗ್ಗಗಳಿಂದ ಕಟ್ಟಲ್ಪಟ್ಟವರಾಗಿ, ಕಾಮಕ್ರೋಧ ಪರಾಯಣರಾಗಿ, ಕಾಮದ ಭೋಗಕ್ಕಾಗಿ ಅನ್ಯಾಯದಿಂದ ಧನಸಂಚಯಗಳನ್ನು ಮಾಡಲು ಪ್ರಯತ್ನಿಸುತ್ತಾರೆ.)

೬೨೨

ಚೆಟ್ಟು ಚೇಮಗೊಟ್ಟ ಚುಟ್ಟುಗೋಡಬೆಟ್ಟ, ಯಿಟ್ಟುನಟ್ಟು ಪೆದ್ದಯಿಲ್ಲು ಗಟ್ಟ,
ವಿಟ್ಟಪಡುನು ನರುಡು ಮೀದಿ ಜೇಟಿರುಗಕ, ವಿಶ್ವದಾಭಿರಾಮ ವಿನುರ ವೇಮ.

ಗಿಡ ಬಳ್ಳಿ ನೆಟ್ಟು ಗೋಡೆ ಸುತ್ತು ಕಟ್ಟಿ,
ಅಂತೆ ಗೂಡು ಅಗಲ ಮನೆಯು ಕಟ್ಟಿ,
ಮಹಾಗರ್ವ ಪಡಲು ಮೇಲೆ ಕೇಡರಿಯದೆ ?
ವಿಶ್ವದಾಭಿರಾಮ ಕೇಳು ವೇಮ.

ಧರ್ಮ ಪೀಠಾಧಿಕಾರಿಗಳೂ ಮತ್ತು ಸಾಧನೆಯ ಮಾರ್ಗದಲ್ಲಿರುವವರು,"ಬೃಂದಾವನ" ವೆಂದು ಕರೆಯಲಾಗುವ ಉಪವನವನ್ನು ನಿರ್ಮಿಸಿಕೊಳ್ಳುತ್ತಾರೆ. ಅದರಲ್ಲಿ ಆಶ್ರಮದ ಕಟ್ಟಡ ಇತ್ಯಾದಿ ಕಟ್ಟಿಸಿಕೊಂಡು ತಾವು ಹೆಚ್ಚಿನವರೆಂದೂ, ಇತರರಿಗೆ ಬೋಧಿಸುವ,ಗುರುಗಳೆಂದೂ, ಯತಿಗಳೆಂದೂ, ಪುಣ್ಯತೀರ್ಥರೆಂದೂ, ಜಗದ್ಗುರುಗಳೆಂದೂ ಹೆಮ್ಮೆಪಟ್ಟುಕೊಳ್ಳುತ್ತಾರೆ. ಆದರೆ ಅಹಂಕಾರ, ಭೋಗ ವಸ್ತುಗಳ ಬಯಕೆ, ಸುಖಾಸಕ್ತಿ ಹೊಂದಿರುವವನು ಆತ್ಮ ದರ್ಶನದ ಅನುಭವ ಪಡೆಯುವುದೆಂತು ? ಐಹಿಕ ಭೋಗ ವಸ್ತುಗಳ ಆಸಕ್ತಿ ಇಲ್ಲದಿರುವುದೇ ಆಧ್ಯಾತ್ಮಿಕ ಸಾಧನೆಗೆ ಮೂಲವಾದುದು. ಧ್ಯಾನಕ್ಕೆ ಬೇಕಾದುದು ಪ್ರಶಾಂತ ಸ್ಥಳ. ಆಲದ ಗಿಡದ ನೆರಳು ಸಾಕು. ಯಾವುದೋ ನೆರಳು ಆಶ್ರಯಿಸಿದಂತೆ, ' ಬೃಂದಾವನ ಆಶ್ರಮ ' ಹೊಂದುವುದೆಲ್ಲ. ಅದಕ್ಕೆ ಹೆಚ್ಚಿನ ಬೆಲೆ ಇಲ್ಲಿ ಜನರಿಂದ ದೊರೆಯಬಹುದೇ ಹೊರತು, ಸಾಧನೆಯ ಮೇಲು ಹಂತದಲ್ಲಿ ಅದಕ್ಕೆ ಬೆಲೆಯಿಲ್ಲ.

(" ಕಾಯದಲಿ ಸನ್ಯಾಸಿ ವೇಷವು, ಬಾಲೇ ಬ್ರಹ್ಮವನು ಮನದಲಿ,
ರಾಯಪಟ್ಟವ ಕಟ್ಟಿಕೊಳಬೇಕೆಂಬುದನು ತಳೆದು ||
ಜ್ಞಾಯೆಯೊಬ್ಬಳ ಬಿಟ್ಟಿನೆಂಬೀ, ನ್ಯಾಯದವ ತಾ ವಾದಿಯಲ್ಲದೆ,
ಮಾಯೆಯಳಿದಾತ್ಮಜ್ಞನೇ ಸನ್ಯಾಸಿಯವನಲ್ಲ ||

– ಅನುಭವಾಮೃತ–೧೦--೯೭.

ಸನ್ಯಾಸಿ ವೇಷಧರಿಸಿ, ಮನಸ್ಸಿನಲ್ಲಿ ನಾನೇ ಬ್ರಹ್ಮವೆಂದು ತಿಳಿದು, ಮಾನ ಸನ್ಮಾನದ ...ರಾಯ ಪಟ್ಟ'ವನ್ನು ಸ್ಥಾಪಿಸಿಕೊಳ್ಳಬೇಕೆಂದು ಮದುವೆಯ ಹೆಂಡತಿಯನ್ನು ತೊರೆದು, ಇರುವವನು ವಾದಿಯಷ್ಟೇ. ಸಂನ್ಯಾಸಿಯಲ್ಲ. ಜಗತ್ತಿನ ಮಾಯೆಯು ಯಾವನಲ್ಲಿ ಅಳಿಯುವುದೋ, ಯಾವನು ಮೋಹದಿಂದ ದೂರವಾಗುವುನೋ ಅವನು ಆತ್ಮಜ್ಞ. ಅವನೇ ಸಂನ್ಯಾಸಿ.)

೬೨೩

ಒಕ್ಕತೋಲುದೆಚ್ಚಿ ಯೊರಪು ಬೊಮ್ಮನುಜೇಸಿ, ಆಡುನಟ್ಲು ಜೇಸಿ, ಯಟ್ಟಿವೇಯು,
ತನ್ನುದ್ರಿಪ್ಪುವಾನಿ ದಾನೇಲಗಾನಡೋ, ವಿಶ್ವದಾಭಿರಾಮ ವಿನುರ ವೇಮ.

ಒಂದು ತೊಗಲು ತಂದು, ಒಪ್ಪ ಗೊಂಬೆ ಗೈದು,
ಆಡಿದಂತೆ ಮಾಡಿ ಅತ್ತ ಒಗೆಯೆ,
ತನ್ನ ತಿರುಗಿಸುವನ ತಾನೇಕೆ ಕಾಣನೊ ?
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ಯಾವ ವಸ್ತುವಿನಿಂದ ಆಗಿದೆಯೋ ಅದೇ ವಸ್ತುವಿನಿಂದ ಈ ದೇಹವೂ ಆಗಿದೆ. ಇವುಗಳಲ್ಲಿ ಸೂಕ್ಷ್ಮ-ಸ್ಥೂಲ ರೂಪ ಭೇದವಷ್ಟೇ ಇದೆ. ಹೀಗೆ ಇರುವ ದೇಹವು ಮತ್ತು ಮನಸ್ಸು ಯಾವುದೋ ಒಂದು ಶಕ್ತಿಯ ಆಜ್ಞೆಯಂತೆ ರೂಪುಗೊಳ್ಳುತ್ತವೆ. ಒಂದು ದೇಹದ ರೂಪ ಒಂದು ರೀತಿ. ಮನುಷ್ಯ ಜಾತಿಯ ರೂಪವೊಂದು ರೀತಿ. ಪ್ರಾಣಿ ಪಕ್ಷಿಗಳಿಗೆ ಒಂದೊಂದು ರೂಪದ ಶರೀರವುಂಟು. ತೊಗಲು ತಂದು ಒಪ್ಪ ಹಾಕಿ ರೂಪ ಕೊಟ್ಟಂತಿರುವ ಈ ಶರೀರವನ್ನು ಧರಿಸಿ ಅದರೊಡನೆ ಆಟವಾಡಿದಂತೆ ಹಲವು ದಿನ ಒಳಗಿದ್ದು, ಅನಂತರ ಅದನ್ನು ಒಗೆದು, ತನ್ನನ್ನೇ ನಿಯಂತ್ರಿಸುವ ಅಂತರ್ಯಾಮಿಯೆನ್ನು ಮನುಷ್ಯನು ಅದೇಕೆ ಅರಿಯುವುದಿಲ್ಲವೋ?

[ಪಶ್ನೋಪನಿಷತ್ತಿನ ಅಭಿಪ್ರಾಯ ನೋಡಿರಿ: " ಆ ಪುರುಷನು ಪ್ರಾಣನನ್ನು ಸೃಷ್ಟಿಸಿದನು. ಪ್ರಾಣನಿಂದ ಶ್ರದ್ಧೆ (ಸರ್ವ ಪ್ರಾಣಿಗಳು ಶುಭಕಾರ್ಯದಲ್ಲಿ ಪ್ರವೃತ್ತರಾಗುವಂತೆ) ಆಕಾಶ, ವಾಯು ಜ್ಯೋತಿ, ನೀರು ಪೃಥ್ವಿ ಇಂದ್ರಿಯ ಮನಸ್ಸು ಮತ್ತು (ಪ್ರಾಣಿಗಳ ಜೀವನಕ್ಕಾಗಿ) ಅನ್ನವನ್ನೂ, ಅನ್ನದಿಂದ ವೀರ್ಯ, ತಪಸ್ಸು, ಮಂತ್ರ, ಕರ್ಮ, ಲೋಕಗಳನ್ನೂ ಮತ್ತು ಲೋಕಗಳಲ್ಲಿ (ಸಮಸ್ತ ವಸ್ತುಗಳ ಹೆಸರುಗಳು) ನಾಮವನ್ನೂ ಸೃಷ್ಟಿಸಿದನು.]

೬೨೪

ಪರಬಲಂಬು ಜೂಚಿ, ಪ್ರಾಣರಕ್ಷಣಮುನ, ಕುರಿಕಿಪಾರಿಪೋವು ಬರಿಕಿನರುಡು,
ಯಮುಡು ಕುಪಿತು ಡೈನ ನೆಡ್ಡಮೆವ್ವಂಡಯಾ ? ವಿಶ್ವದಾಭಿರಾಮ ವಿನುರ ವೇಮ.

ಪರಬಲವ ನೋಡಿ ಪ್ರಾಣ ರಕ್ಷಣೆಗೆಂದು
ಹೊರಳಿ ಓಡುವವನು ಹೇಡಿ ನರನು.
ಯಮನು ಕುಪಿತನಿರಲು ಎಡರು ಯಾವುದುಂಟು ?
ವಿಶ್ವದಾಭಿರಾಮ ಕೇಳು ವೇಮ.

ದೇಶ ರಕ್ಷಣೆಗೆ ಅಣಿಯಾದವನು, ಸೈನಿಕನು. ಅವನು ನಾಡ ರಕ್ಷಕನು. ನಾಡಿನ ಸೀಮೆಯನ್ನು ಪರಕೀಯರ ದಾಳಿಯಿಂದ ರಕ್ಷಿಸಿ ಉಳಿಸುವುದೇ ಅವನ ಕರ್ತವ್ಯ; ಧರ್ಮ. ತನ್ನ ಧರ್ಮವನ್ನು ತೊರೆದು ಪರಕೀಯರ ಸೈನ್ಯ ಬಲವು ಬಹಳವಿದೆಯೆಂದು ಅಂಜಿ, ತನ್ನ ಪ್ರಾಣವನ್ನು ಉಳಿಸಿಕೊಳ್ಳಲು, ರಣರಂಗದಿಂದ ಹಿಂತಿರುಗಿ ಓಡಿ ಹೋಗುವವನು, ಹೇಡಿಯು.

ಓಡಿ ಹೋಗುವುದೇಕೆ? ಜೀವ ಉಳಿಸಿಕೊಳ್ಳಲು ಓಡಿಹೋದವರೆಷ್ಟು ಜನ ಸಾಯುತ್ತಿಲ್ಲ? ಯಮನು ಕುಪಿತನಾದ ಮೇಲೆ ಪ್ರಾಣ ಹೋಗಲು ತೊಂದರೆಯೇನುಂಟು? ಸಾವು ನೋವಿನ ಚಿಂತೆ ಬಿಟ್ಟು ಧೈರ್ಯ ತಂದುಕೊಂಡು ಹೋರುವುದೇ ಧೀರನ ಧರ್ಮ.

(ಗೀತೆಯಲ್ಲಿ ಜನನ ಮರಣದ ಬಗೆಗೆ ಇರುವ ಅಭಿಪ್ರಾಯ ನೋಡಿರಿ:
"ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ |
ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ ||.

ಏಕೆಂದರೆ ಹುಟ್ಟಿದವನಿಗೆ ಮರಣವು ನಿಶ್ಚಯವು ಮತ್ತು ಸತ್ತವನಿಗೆ ಜನ್ಮವು ನಿಶ್ಚಯವು. ಆದುದರಿಂದ ಪರಿಹರಿಸಲಾಗದ ಈ ವಿಷಯದಲ್ಲಿ ನೀನು ಶೋಕಿಸಬಾರದು.)
ಗೀತಾ ೨-೨೭)

೬೨೫

ತಲ್ಲಿ ತಂಡ್ರಿ ಚಾವ ದನಯುಡು ತಾನೆಡ್ಡು, ಮಗಡು ಚಾವ ನಾಲು ವೆಗಚು ಚುಂಡು
ಕಾರ್ಯವಶಮೆಕಾನಿ ಕಲುಗದು ಮೋಹಂಬು ವಿಶ್ವದಾಭಿರಾಮ ವಿನುರ ವೇಮ.

ತಾಯಿ ತಂದೆ ಮಡಿಯೆ, ತನಯ ತಾನು ಅಳುವ;
ಪತಿಯು ಮಡಿಯೆ ಮತ್ತೆ, ಪತ್ನಿ ಶೋಕ;
ಕಾರ್ಯವಶದಿ ಅಷ್ಟೆ ; ಕುದುರಲಿಲ್ಲ ಮೋಹ.
ವಿಶ್ವದಾಭಿರಾಮ ಕೇಳು ವೇಮ.

ಹಡೆದ ತಂದೆ ತಾಯಿ ಸತ್ತರೆ ಮಗನು ಹೆಚ್ಚಾಗಿ ಅಳುತ್ತಾನೆ. ಗಂಡನು ಸತ್ತರೆ, ಹೆಂಡತಿಯು ರಾಗ ತೆಗೆದು ಹಾಡಿ,ಹಾಡಿ ಅಳುತ್ತಾಳೆ. ಹಡೆದವರು ಸತ್ತಾಗ ಮಗನು ಶೋಕ ವ್ಯಕ್ತಪಡಿಸದಿದ್ದರೆ ಹೇಗೆ ? ಗಂಡ ಸತ್ತಾಗ ಹೆಂಡತಿ ಬೋರಾಡಿ ಅಳದಿದ್ದರೆ ಜನ ಏನೆನಬಹುದು ? ಎಂಬ ಕಾರ್ಯವಶರಾಗಿ ಜನರು ಅತ್ತು ಕರೆಯುತ್ತಾರೆ. ಸಮಾಜದ ಸಂಪ್ರದಾಯಗಳು ಕಾರಣ ; ಶೋಕ ಕಾರ್ಯ. ಕಾರ್ಯವಶರಾದ ಸಂಬಂಧಿಗಳು ಶೋಕಿಸುತ್ತಾರೆ. ಸಾಯುವ ಪೂರ್ವದಲ್ಲಿ ದ್ವೇಷ ಮಾಡುತ್ತಿದ್ದರೂ, ಪರಸ್ಪರ ಸಂಬಂಧದಿಂದ ಅವರವರು ಶೋಕವನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಾರೆ. ಆದರೆ ಯಾರು ಸತ್ತರೂ ಮೋಹ ಹುಟ್ಟುವದಿಲ್ಲ !

೬೨೬

ಮನಸುಲೋನಿ ಮುಕ್ತಿ ಮರಿಯೊಕ್ಕ ಚೋಟನು, ವೆದಕ ಬೋವುವಾಡು ವೆರ್ರಿವಾಡು,
ಗೊರ್ರೆ ಜರಿಕಬೆಟ್ಟ ಗೊಲ್ಲವೆದಕು ರೀತಿ, ವಿಶ್ವದಾಭಿರಾಮ ವಿನುರ ವೇಮ.

ಮನಸಿನಲ್ಲಿ ಮುಕ್ತಿ; ಮತ್ತೆ ಒಂದು ಕಡೆಗೆ,
ಹುಡುಕ ಹೋಗುವವನು ಹುಚ್ಚನಷ್ಟೆ;
ಕುರಿಯ ಬಗಲೊಳಿಟ್ಟು ಕುರುಬ ಹುಡುಕುವಂತೆ
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನವನ್ನು ಪಡೆದುಕೊಳ್ಳಬೇಕಾದರೆ, ಮನಸ್ಸಿನ ಏಕಾಗ್ರತೆ ಎಂಬ ಒಂದೇ ಮಾರ್ಗವಿರುವುದು. ರಾಸಾಯನಿಕ ಶಾಸ್ತ್ರ, ಖಗೋಳ ಶಾಸ್ತ್ರ ಇತ್ಯಾದಿಗಳಿಗೆ ಸಂಬಧಿಸಿದ ಬಾಹ್ಯ ವಸ್ತು ವಿಷಯಗಳಲ್ಲಿ ಮನಸ್ಸು ಏಕಾಗ್ರಗೊಳ್ಳುವಂತೆ, ಮಾನಸಿಕ ಅನುಭವ ಅಧ್ಯಯನದಲ್ಲಿ ಸಹ ಏಕಾಗ್ರಗೊಳಿಸಿದರೆ, ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಬಹುದು.

ಮನಸ್ಸು ಸೂಕ್ಷ್ಮವಾದುದು. ಸೂಕ್ಷ್ಮವಾದ ಮನಸ್ಸು ಇತರ ಸ್ಥೂಲವಸ್ತುಗಳನ್ನು ಗ್ರಹಿಸಬಲ್ಲದು. ಇದಲ್ಲದೆ ಮನಸ್ಸು ತನಗಿಂತ ಬೇರೆಯಾದ ಸತ್ಯವಾದ ಆತ್ಮದ ಪ್ರತಿಬಿಂಬವನ್ನು ತನ್ನಲ್ಲಿ ಕಂಡುಕೊಳ್ಳಬಹುದು. ಹೀಗೆ 'ಸತ್' ಮತ್ತು 'ಅಸತ್' ಎಂಬವೆರಡೂ ಮನಸ್ಸಿನಲ್ಲಿ ತಿಳಿಯಬಹುದಾದುದರಿಂದ ಸತ್ಯವು ಮಿಥ್ಯೆಯಿಂದ ಬೇರೆಯೆಂದು ತಿಳಿಯಬಹುದು. ಮಿಥ್ಯೆಯ ಆವರಣದಿಂದ ಬಿಡುಗಡೆಯಾಗುವುದೇ ಮುಕ್ತಿ.

ಹೀಗೆ ಮನಸ್ಸು ಜಯಿಸಿ, ಏಕಾಗ್ರಗೊಳಿಸಿ ಮುಕ್ತಿ ಪಡೆಯುವ ಬದಲು, ತೀರ್ಥಕ್ಷೇತ್ರ, ಗುಡ್ಡ, ಬೆಟ್ಟ, ನದಿ-ಸಾಗರಗಳ ದಂಡೆಯಲ್ಲಿ ಮುಕ್ತಿ ಪಡೆಯ-ಹೋಗುವುದು ಜಾಣತನವಲ್ಲ. ಕುರುಬನ ಬಗಲೊ-ಳಗೆ ಕುರಿಯುಂಟು. ಆದರೆ ಅವನಿಗೆ ಮೈಮರೆವು. ಅದೇ ಕುರಿಯನ್ನು ಶೋಧಿಸಲು ಬೇರೆಡೆಗೆ ನೋಡುತ್ತಾನೆ. ತನ್ನ ಬಗಲು ಮುಟ್ಟಿನೋಡಿಕೊಳ್ಳಬೇಕಷ್ಟೇ. ಅದೇ ರೀತಿ, ಮನಸ್ಸು ನಿಗ್ರಹಿಸಿ ತಿಳಿದರೆ, ಅಲ್ಲಿಯೇ ಮುಕ್ತಿಯುಂಟು.

೬೨

ಆಶಕನ್ನ ದುಃಖ ಮತಿಶಯಂಬುಗಲೇದು, ಚೂಪುನಿಲುಪಕುನ್ನ ಸುಖಮುಲೇದು
ಮನಸು ನಿಲುಪಕುನ್ನ ಮರಿಮುಕ್ತಿ ಲೇದಯಾ, ವಿಶ್ವದಾಭಿರಾಮ ವಿನುರ ವೇಮ.

ಆಶೆಗಿಂತ ದುಃಖ ಅತಿಶಯವಾಗಿಲ್ಲ.
ಸಮೀಕ್ಷಿಸದೆ ಇರಲು ಸುಖವೆ ಇಲ್ಲ.
ಮನಸು ನಿಲಿಸದಿರಲು ಮತ್ತೆ ಮುಕ್ತಿಯಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ನಾವು ವಸ್ತುಗಳನ್ನು ಪಡೆಯಲು ಆಶಿಸುತ್ತೇವೆ. ವಸ್ತುಗಳನ್ನು ಪಡೆಯುವ ನಮ್ಮ ಪ್ರಯತ್ನ ಕೈಗೂಡದಿದ್ದರೆ, ಮನಸ್ಸು ವ್ಯಾಕುಲಗೊಳ್ಳುವುದು. ಆ ವಸ್ತುಗಳನ್ನು ಎಲ್ಲೆಡೆಯಿಂದ ಪಡೆದುಕೊಳ್ಳಲು ಚಿತ್ತವೃತ್ತಿಗಳು ದಶದಿಕ್ಕುಗಳಲ್ಲಿ ಹರಿಯುವವು. ಆ ವಸ್ತುಗಳಿಂದ ಬರುವ ತರಂಗಗಳು ಮನಸ್ಸಿನ ಮೇಲೆ ಪರಿಣಾಮಗಳನ್ನುಂಟು ಮಾಡುವುವು. ಇದರಿಂದ ಮನಸ್ಸಿನ ಸ್ಥಿಮಿತ ನಾಶವಾಗುವುದು. ಈ ಮನಸ್ಸಿನ ಬದಲಾವಣೆಗಳನ್ನು ತಪ್ಪಿಸುವುದು ಸಾಧ್ಯವಿಲ್ಲ. ಕಾರಣ ಆಶೆಯನ್ನು ತೊರೆಯುವುದೊಂದೇ ಸೂಕ್ತ ಮಾರ್ಗ. ನಮ್ಮ ಬಯಕೆಯ ಒಳಿತು-ಕೆಡಕು ಪರಿಣಾಮಗಳನ್ನು ಸಮೀಕ್ಷಿಸಿ ನೋಡಿದರೆ, ಇದೇನೂ ಅಸಾಧ್ಯವಲ್ಲ. ಆಶೆಯನ್ನು ತೊರೆದರೆ ಮಾತ್ರ ಚಿತ್ತವೃತ್ತಿಗಳ ಮುಸುಕು ಬಯಲಾಗುತ್ತದೆ. ಪುರುಷ ಆತ್ಮಜ್ಯೋತಿಯಿಂದ ಬೆಳಗಿ, ಆತ್ಮವೇ ಎನಿಸುವುದು. ಇದೇ ಮುಕ್ತಿ.

("ತತ್ಪರಂ ಪುರುಷಖ್ಯಾತೇರ್ಗುಣ ವೈತೃಷ್ಣ್ಯಮ್"
ವಿಷಯದ ಆಸೆಯನ್ನೂ ಕೂಡ ತ್ಯಜಿಸಿದ ತೀವ್ರ ವೈರಾಗ್ಯವೇ, ಪುರುಷನ ನೈಜ ಸ್ವಭಾವವನ್ನು ತೋರುವುದು.

— ಪತಂಜಲಿ ಯೋಗ ಸೂತ್ರ. ೧--೧೬)

೬೨೫

ತತ್ತ್ವ ಹೀನುಲುಂದ್ರು ತಕಟುಗಾ ಭುವಿಲೋನ, ದತ್ತ್ವ ಮೆತುಗುವಾರು ತಕಟು
ತೇಲು ಕಲಿಗೆನಿವಾರು ಕನ್ನಿಂಚರಾರಲು ವಿಶ್ವದಾಭಿರಾಮ ವಿನುರ ವೇಮ.

ತತ್ತ್ವಹೀನ ನರರು ತುಂಬಿಹರು ಜಗದೊಳು.
ತತ್ತ್ವ ತಿಳಿದ ನರರು ತುಂಬಲಿಲ್ಲ.
ಕಂಡ ಜಾಣ ನರರು ಕಣ್ಣಿಗೇ ಬೀಳರು.
ವಿಶ್ವದಾಭಿರಾಮ ಕೇಳು ವೇಮ.

"ತತ್" ಎಂದರೆ ಬ್ರಹ್ಮ- ತತ್ತ್ವ ಎಂದರೆ ಬ್ರಹ್ಮತ್ವ. ಬ್ರಹ್ಮತ್ವವೇ ಇಲ್ಲದ ಜನರು ಈ ಜಗತ್ತಿನಲ್ಲಿ ತುಂಬಿಕೊಂಡಿದ್ದಾರೆ.

ತತ್ತ್ವವನ್ನು ತಿಳಿದಂಥ ಜನರು ಜಗತ್ತಿನಲ್ಲಿ ಹೆಚ್ಚಾಗಲಿಲ್ಲ. ಇದೊಂದು ವಿಧಿಲೀಲೆ!

ಇನ್ನು ತತ್ತ್ವವನ್ನು ತಿಳಿದು, ಆದನ್ನು ಮನಶ್ಚಕ್ಷುವಿನಿಂದ ಕಾಣಲು ಮನಸ್ಸನ್ನು ಪರಿಶುದ್ಧಗೊಳಿಸಿಕೊಂಡು ಚಿತ್ತೈಕಾಗ್ರತೆಯಿಂದ ಸಮಾಧಿ ಸ್ಥಿತಿಯಿಂದ ಬ್ರಹ್ಮತ್ವವನ್ನು ಮನಸ್ಸಿನಲ್ಲಿ ಪ್ರತಿಬಿಂಬರೂಪವಾಗಿ ಕಂಡು ಅನುಭವಿಸಿದವರು, ಕಣ್ಣಿಗೆ ಬೀಳದಷ್ಟು ವಿರಳರಾಗಿರುವರು.

೬೨೬

ತಾನುನಿಂದ್ರಿಯಮುಲು ದನಕ ಜಯಿಂಚಿನ, ದತ್ತ್ವ ಮುರಸಿಚೂಡ ತಾನಯುಗುನು,
ರಾಜಯೋಗಿಯಿಟ್ಲು ದೇಜರಿಲ್ಲುಚುನುಂಡು, ವಿಶ್ವದಾಭಿರಾಮ ವಿನುರ ವೇಮ.

ತಾನು ಇಂದ್ರಿಯಗಳ ತೂಗಿ ಜಯಿಸಿ, ಮತ್ತೆ
ತತ್ತ್ವವರಸಿ ನೋಡೆ, ತಾನಾಗುವ
ರಾಜಯೋಗಿಯಂತೆ ರಾರಾಜಿಸುತಿಹನು
ವಿಶ್ವದಾಭಿರಾಮ ಕೇಳು ವೇಮ

ಯೋಗಸಾಧನೆಯನ್ನು ಅಷ್ಟಾಂಗವಾಗಿ ವಿಭಾಗಿಸುತ್ತಾತೆ. ಯಮ, ನಿಯಮ, ಆಸನ; ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ ಧ್ಯಾನ, ಸಮಾಧಿಗಳೇ ಆ ಎಂಟು ಅಂಗಗಳು, ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಗಳನ್ನು ಭೋಗ ವಸ್ತುಗಳ ಸಹಜ ಆಕರ್ಷಣೆಯಿಂದ ಪರಾವರ್ತಗೊಳಿಸಿ, ನಿಯಂತ್ರಣದಲ್ಲಿರಿಸಿಕೊಳ್ಳಬೇಕು. ಇಂದ್ರಿಯಗಳ ನಿಯಂತ್ರಣವೇ ಇಂದ್ರಿಯಗಳನ್ನು ಜಯಿಸಿದಂತೆ. ಅಷ್ಟಾಂಗ ಯೋಗ, ನಿತ್ಯ ನೈಮಿತ್ತಿಕ ಆಹಾರದಲ್ಲಿದ್ದು ಸಾಧಿಸುವ ಮಾರ್ಗ. ಇಂದ್ರಿಯ ಜಯಿಸಿದ ನಂತರ "ತತ್" ಅಂದರೆ ಬ್ರಹ್ಮತ್ವವನ್ನು ತೋಧಿಸಿ ನೋಡಬೇಕು. ಗುರುವಿನಿಂದ, ಸ್ವಮಾನ ಗ್ರಂಥಗಳಿಂದ ತಿಳಿದ ತತ್ವಗಳನ್ನು ಅನುಭವಿಸುವುದೇ ಯೋಗ. ಬ್ರಹ್ಮತ್ವ ಅರಿತವನು ತಾನೇ ಬ್ರಹ್ಮವಾಗುವನು. ಈ ರಾಜಯೋಗ ಮಾರ್ಗದಿಂದ ನಡೆದವನು, ರಾರಾಜಿಸುವನು.

(ಕಂಠೋಪನಿಷತ್ತಿನ ಅಭಿಪ್ರಾಯ ನೋಡಿರಿ:

"ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯ ಧಾರಣಾಮ್।
ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ॥

ಇಂದ್ರಿಯಗಳನ್ನು ಭದ್ರವಾಗಿ ಸಂಯಮಗೊಳಿಸುವುದೇ ಯೋಗವೆನ್ನಿಸುವುದು ಸಂಯಮವನ್ನು ಸಾಧಿಸಿದ ನಂತರ ಸಹ ಅದು ತಪ್ಪುವ ಸಂಭವವಿರುವುದರಿಂದ ಸದಾ ಜಾಗ್ರತೆ ಅವಶ್ಯವಾಗಿದೆ. ಕಠ, ಉ. ೨-೩-೧೪)

೬೩೦

ಗುರಮುಗೂಡು ಜೇಸಿ ಗುಣಮು ವತ್ತಿ ಗ ಜೇಸಿ, ಸರವಿಗರ್ಮ ಸಮಿತಿ ಜಮುರು ಜೇಸಿ
ಮೂಲಸೊಕ್ಕ ಜ್ಯೋತಿ ಮುಟ್ಟಿಂಚಿ ಜೂಡರಾ, ವಿಶ್ವದಾಭಿರಾಮ ವಿನುರ ವೇಮ,

ಕಾಯ ಪಣತೆ ಮಾಡಿ, ಗುಣವ ಬತ್ತಿ ಮಾಡಿ,
ತನ್ಮ ಕರ್ಮ ಕುಲವ ತೈಲ ಮಾಡಿ,
ಮೂಲವೊಂದೆ ಜ್ಯೋತಿ ಮುಟ್ಟಿ ನೋಡಿದಾಗ
ವಿಶ್ವದಾಭಿರಾಮ ಕೇಳು ನೇಮ.

ಪಣತೆಯಲ್ಲಿ ಬತ್ತಿ ಹೊಸೆದು ಇಟ್ಟು ಎಣ್ಣೆ ಹಾಕಿ ತೊಯ್ಯಿಸಿ ದೀಪ ಉರಿಸುವುದುಂಟು. ಪಣತೆ ಮಣ್ಣಿನದಿರಬಹುದು; ತಾಮ್ರದ್ದಿರಬಹುದು. ಬತ್ತಿ ಬಂದೆಳೆಯದಿರಬಹುದು. ಎರಡು,—ಮೂರೆಳೆಯದಿರಬಹುದು. ಎಣ್ಣೆ, ಕುಸುಬೆ, ಸೇಂಗಾ, ಅಗಸೆ ಬೆಡಲ ಇತ್ಯಾದಿ ಯಾವುದಾದರೂ ಆಗಬಹುದು. ಆದರೆ ಜ್ವಲಿಸುವ ದೀಪ ಪಣತೆಯ ಧಾತುವಿನಿಂದಾಗಲಿ ಇಲ್ಲವೆ ಎಣ್ಣೆ ಕಾಳಿನ ಜಾತಿಯಿಂದಾಗಲಿ (ಉರಿಯುವ ಜ್ಯೋತಿಯ) ಗುಣ ಹೆಚ್ಚು ಕಡಿಮೆಯಾಗಲಾರದು. ಜ್ಯೋತಿಯೊಂದೆ. ಶಬ್ದ, ಸ್ಪರ್ಶ ಮತ್ತು ರೂಪ ಉಳ್ಳ ಜ್ಯೋತಿಯದು.

ಇದೇ ರೀತಿ, ಪಣತೆಯಂತೆ ಶರೀರಗಳು ಬೇರೆಯಾಗಿರಬಹುದು. ಎಳೆಗಳಂತೆ ಸತ್ತ್ವ ರಜಸ್ಸು, ತಮಸ್ಸು ಗುಣಗಳು ಹೆಚ್ಚು ಕಡಿಮೆಯಿರಬಹುದು; ಎಣ್ಣೆಯಂತೆ ಕರ್ಮ ಸಂಚಯವು ಪಾಪಮಯವಾಗಲಿ ಪುಣ್ಯಮಯವಾಗಲಿ ಇದ್ದು, ಬೇರೆ ಬೇರೆಯಾಗಿರಬಹುದು; ಆದರೆ ಗಮ್ಯ ಸದ್ವಸ್ತುವಾದ ಆತ್ಮದ ತಿಳಿವಳಿಕೆಯ ಹಂತ ಮುಟ್ಟಿನೋಡಿದಾಗ, ಮೂಲವಾದುದು ಆತ್ಮವೇ, ಇದು ಬಂದೇ ತೆರನಾಗಿದೆ. ಎಂಬುದು ತಿಳಿಯುವುದು.

೬೩೧

ಎನ್ನಿಯೆನ್ನಿ ಪೂಜ ಲೆನ್ನಿ ಚೇಸಿನ ನೇಮಿ? ಭಕ್ತಿ ಲೇನಿ ಪೂಜ ಫಲಮು ಲೇದು
ಭಕ್ತಿಫಲಗು ಪೂಜ ಬಹುಳ ಕಾರಣಮುರಾ, ವಿಶ್ವದಾಭಿರಾಮ ವಿನುರ ವೇಮ.

ಮಣಿಸುತೆಷ್ಟು ಪೂಜೆಯೆಷ್ಟು ಮಾಡಲೇನು.
ಭಕ್ತಿಯಿರದೆ ಪೂಜೆ ಫಲವು ಇಲ್ಲ.
ಭಕ್ತಿಯಿರುವ ಪೂಜೆ ಬಹಳ ಕಾರಣವದು.
ವಿಶ್ವದಾಭಿರಾಮ ಕೇಳು ನೇಮ.

ಜಪಮಣಿಯಿಂದ ನಾಮ ಸಂಖ್ಯೆ ಎಣಿಸುವ ಪೂಜಾದಿಗಳನ್ನು ಎಷ್ಟು ಮಾಡಿದರೂ ಸಹಾಯಕವಾದವು. ಅಸಕ್ತಿ ಇಲ್ಲವಾಗಬೇಕು, ಆಗ ಭಕ್ತಿ ಹುಟ್ಟುತ್ತದೆ, ಭಕ್ತಿ ಹುಟ್ಟಲು ಯೋಗ ಸಾಧನವೇಕು, ಭಕ್ತಿ ಇಲ್ಲದ ಪೂಜೆ ಫಲದಾಯಕವಲ್ಲ. ಭಕ್ತಿಯಿರುವ ಪೂಜೆಯಷ್ಟೇ ಫಲ ನೀಡಬಹುದು.

(ಮಣಿಗಳನ್ನೆಣಿಸುವ ಜಪದ ಮಣಿಯು ಸಾಧನ ಮಾರ್ಗದಲ್ಲಿ ಅಷ್ಟೊಂದು ಸಹಾಯಕವಾಗಿದು. "ಹರ" "ಹರ" ಇಲ್ಲವೆ "ರಾಮ" ರಾಮ" ಎಂದು ಇತರರಿಗೆ ಕೇಳಿಸುವಂಥ ನಾಮೋರಣೆಯೇ ವಾಚಕ ಜಪ. ಇತರರಿಗೆ ಕೇಳಿಸದಂತೆ, ಪಠಿಸುವುದು; ಉಪಾಂಶ" ಜಪ. ಒನ್ನು ತನ್ನ ಕಿವಿಗೂ ಕೇಳದಂತೆ ಕೇವಲ ಮಾನಸಿಕವಾಗಿ ಮಾತ್ರ ಗ್ರಹಿಸಲು ಬರುವಂತಿರುವುದೇ ಮಾನಸಿಕ ಜಪ. "ಲಕ್ಷ ಜಪ"; "ಕೋಟಿ ಜಪ"ದ ವ್ರತದವರು ನಾಮೋಚ್ಚಾರಣೆಯ ಸಂಖ್ಯೆಯ ಲೆಕ್ಕ ಹಾಕಲು ಮಣಿಯಷ್ಟೆ ಬಳಸುತ್ತಾರೆ. ಸಾಧನ ಮಾರ್ಗದಲ್ಲಿ ಜಪವು ಮುಕ್ತ ಸಾಧನೆಗೆ ಅಷ್ಟೊಂದು ಸಹಾಯಕವೆನಿಸಿಲ್ಲ ತಂತ್ರದಲ್ಲಿ ಈ ಅಭಿಪ್ರಾಯವುಂಟು,

"ಉತ್ತಮೋ ಬ್ರಹ್ಮಸದ್ಭಾವೋ ಮಧ್ಯಮೋ ಧ್ಯಾನ ಧಾರಣಾ। ಜಪಸ್ತುತಿರಧಮಾ ಧಮಾ ಮೂರ್ತಿ ಪೂಜಾ ಅಧಮಾಧಮಾ॥ ಅಂದರೆ, ಬ್ರಹ್ಮ ಸದ್ಭಾವವು ಎಲ್ಲಕ್ಕಿಂತ ಮಿಗಿಲು. ಧಾರಣ-ಧ್ಯಾನಗಳು ದ್ವಿತೀಯ ಶ್ರೇಣಿಯ ಜಪ ಸ್ತುತಿಗಳು ಅಧಮವಾದವು. ಮೂರ್ತಿ ಪೂಜೆಯು ಅದಕ್ಕಿಂತ ಕೀಳಾದ ವ್ರ...

ಭಕ್ತಿಯೆಂದರೆ ಪರಿಪೂರ್ಣ ಸದ್ವಸ್ತುವಿನ ಕಡೆಗಿರುವ ಆಕರ್ಷಣೆಯೇ ಆಗಿದೆ. ಈ ಆಕರ್ಷಣೆಯು ಕಾಲದ ಮಾನಸಿಕ ಒಲವು ಭಕ್ತಿ. ಭಕ್ತಿ ಅಸಕ್ತಿಗೆ ವಿರೋಧವಾದುದು. ಜಗದ ಅಸ್ಥಿರ ವಸ್ತುಗಳ ಕುರಿತು ಆಕರ್ಷಣೆ ಕಾಮ; ಕಾಮದ ಮನಸ್ಸಿನ ಸ್ಥಿತಿಯೇ ಅಸಕ್ತಿ.)

೬೩೨

ಆಪಗಾಲಿವೆಂಟಿ ನದವುಲವೆಕಟನು, ಕೊಂಡರಾಳ್ಳ ವೆಂಟ ಗೊಡವದೇಲ?
ಉಲ್ಲಮುಂದುನೆ ಶಿವ ಡುಂದುಟದೆಲಿಯೆರು, ವಿಶ್ವದಾಭಿರಾಮ ವಿನುರ ವೇಮ.

ನದಿತೀರವ ಕುರಿತು, ನಡುಕಾನನ ಕುರಿತು,
ಗುಡ್ಡ ಕಲ್ಲು ಕುರಿತು ಗೊಡನೆಯೇಕ?
ಮನಸಿನಲ್ಲಿ ಶಿವನು ಮಡಗಿಹುದನರಿಯರು,
ವಿಶ್ವದಾಭಿರಾಮ ಕೇಳು ವೇಮ.

(ಕಾವೇರಿ—ಕೃಷ್ಣಾ, ಗಂಗಾ-ಯಮುನಾ ನದಿಗಳ ದಂಡೆಯು ಪ್ರದೇಶವಾಗಲಿ. ಕಾಶಿಯ ತ್ರಿವೇಣಿ ಸಂಗಮ, ಕೂಡಲಸಂಗಮಗಳಾಗಲಿ ಪವಿತ್ರ ಸ್ಥಾನಗಳಲ್ಲ, ಶ್ರೀಶೈಲ, ವೆಂಕಟಾಚಲ, ವಿಂಧ್ಯ-ಸಹ್ಯಾದ್ರಿಗಳೂ ಪವಿತ್ರವಾಸವುಗಳಲ್ಲ. ದುಡಕಾರಣ್ಯವೂ ಅಲ್ಲ; ನೈಮಿಷಾರಣ್ಯವೂ ಅಲ್ಲ. ಏಕೆಂದರೆ ಧ್ಯಾನ ಮಾಡಲು, ಸಮಾಧಿ ಸ್ಥಿತಿ ಹಿಡಿಯಲು, ದಿಕ್ಕು ದೇಶಕಾಲಗಳನ್ನು ಕುರಿತು ವೇದೋಪನಿಷತ್ತುಗಳು ಹೇಳಿಲ್ಲ. "ಮನೋಽನುಕೂಲೆ" ಅಂದರೆ "ಮನಸ್ಸಿಗೆ ಅನುಕೂಲವಾದ" ಸ್ಥಾನವೆನ್ನೇ ಸೂಚಿಸಿದೆ.)

(ಮೂಢ ಭಕ್ತಯ ಶರಣರ ಅಭಿಪ್ರಾಯ ನೋಡಿರಿ :
ಗಂಗೆ ಚ ಯಮುನೇ ಚೈವ ಗೋದಾವರಿ ಸರಸ್ವತೀ ।
ನರ್ಮದೇ ಸಿಂಧು ಕಾವೇರಿ ಜಲೇಽಸ್ಮಿನ್ ಸನ್ನಿಧಿಂ ಕುರು ॥
ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದಾ, ಸಿಂಧು ಕಾವೇರಿ ಇತ್ಯಾದಿ ಜಲ ಕ್ಷೇತ್ರಗಳಲ್ಲಿ ಸಾತ್ವಾತ್ಕಾರದ ಸಾಧನ ಮಾಡು.
ಹೀಗಿದೆ : ಪುಣ್ಯ ಭೂಮಿಯೆಂದು ದೇಶವನ್ನು ನಿರ್ದೇಶಿಸುವ ದೃಷ್ಟಿ.
'ಅರ್ಯಾವರ್ತಃ ಪುಣ್ಯ ಭೂಮಿಃ ಮಧ್ಯಂ ವಿಂಧ್ಯ ಹಿಮಾಗಯೋಃ ।
ಹಿಮಾಲಯ ಮತ್ತು ವಿಂಧ್ಯ ಪರ್ವತಗಳ ಮಧ್ಯದಲ್ಲಿರುವ ದೇಶವು ಆರ್ಯಾವರ್ತ ಜೀಡು; ಅದು ಪುಣ್ಯ ಭೂಮಿ.")

ಧ್ಯಾನದ ಸ್ಥಾನವನ್ನು ಕುರಿತು ಯೋಚಿಸುವಾಗ ನದಿಯ ದಂಡೆ, ಅರಣ್ಯದ ಮಧ್ಯ ಪ್ರದೇಶ ಗುಡ್ಡದ ಪ್ರದೇಶ ಕಲ್ಲುಬಂಡೆಯ ಪೀಠಾದಿ ಕುರಿತು ಗೊಡವೆ ಬೇಡ. ಆತ್ಮ ಸ್ವರೂಪಿಯಾದ ಶಿವನು ಮನಸ್ಸಿನಲ್ಲಿಯೇ ಇರುತ್ತಾನೆಯೇ.

೬೩

ಗಾತಿದ್ಯಮೆಕುಂಗು ಗಂಧಂಭುವಾಸನ ? ಕುಕ್ಕುಟೋಮೆಕುಂಗು ಶೌಚ್ಛಕೊತ್ತ.
ಅಲ್ಪುಡೇನಕುಂಗು ಹರನಿಗೊಲ್ಲು ವಿರಕ್ತ, ವಿಶ್ವದಾಭಿರಾಮ ವಿನುರ ವೇಮ.

ಗಾರ್ದಭೇನರಿವುದು ಗಂಧದ ವಾಸನೆಯ ?
ಸೊಣಗವೇನರಿವುದು ಸರಿಯೊ-ತಪ್ಪು ?
ಅಲ್ಪವೇನರಿವನು ಹರನೊಲಿವ ವಿರಕ್ತ ?
ವಿಶ್ವದಾಭಿರಾಮ ಕೇಳು ವೇಮ.

ಕತ್ತೆಯ ಮೈಯ್ಗೆ ಶ್ರೀಗಂಧವನ್ನು ಲೇಪಿಸಿದರೂ, ಅದಕ್ಕೆ ಶ್ರೀಗಂಧದ ವಾಸನೆಯನ್ನು ಆಸ್ವಾದಿಸುವ ತಿಳಿವಳಿಕೆ ಇದೆಯೇ ? ಹಲವರು ಹಣೆ, ಕೈ, ಎದೆಗಳಿಗೆಲ್ಲ ಗಂಧವನ್ನು ಲೇಪಿಸುತ್ತಾರೆ. ಮೂರ್ತಿಗೆ ಹಚ್ಚುವ ಗಂಧವನ್ನು ತಾವೂ ಲೇಪಿಸಿಕೊಳ್ಳುತ್ತಾರೆ ಗಂಧದ ಕೊರಡು ತಾನೇ ಸವೆ-ಸವೆದು ಲೋಕದ ಜನರನ್ನು ಆನಂದಗೊಳಿಸಿದಂತೆ, ತಾನು ಉರಿದರೂ ಉತ್ತಮ ವಾಸನೆ ಬೀರುವಂತೆ, ಸಾಧಕನ ನಡೆನುಡಿ ಇರಬೇಕೆಂಬ ಮೂಲ ಕಲ್ಪನೆ. ಗಂಧ ತೇಯ್ದು ಒಂಮ, ಎರಡು, ಮೂವರ , ಉದ್ದ ಅಡ್ಡ ಗೆರೆಗಳ ಸಂಕೇತವಾಗಿ ಹಚ್ಚಿದೆ. ಅನ್ಯರ ತೋಷಣೆಯನ್ನೇ ತನ್ನ ಉದರ ನಿರ್ವಾಹಕ್ಕಾಗಿ ಬಳಸುವ ವಂಚಕನೂ ಸ್ಮೃತುಂಬ ಗಂಧ ಬಳಿಯುತ್ತಾನೆ. ಅದರಿಂದೇನು ?

ಮನುಷ್ಯನಿಗೆ ಸದಸದ್ವಿವೇಕವಿದೆ. ಸೃಷ್ಟಿ ಕೃಮದಲ್ಲಿ, ಭೂ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಪಂಚಭೂತಗಳಿಂದ ಚಿತ್ತವಿಲ್ಲದ ಏಕಾಣು-ಜೀವಿಗಳು, ಚಿತ್ ಇರುವ ಸಸ್ಯ-ಪಕ್ಷಿ, ಚಿತ್ ಬುದ್ಧಿಗಳಿರುವ ಮಾನವ ಇತ್ಯಾದಿ ಉಂಟಾಗುವವು. ನಾಯಿ ಬುದ್ಧಿ ಇಲ್ಲದ ಕೇವಲ ಚಿತ್ ಇರುವ ಪ್ರಾಣಿಜಾತಿಯದು. ಆದರಿಂದ ನಾಯಿಗೆ ಸತಿ-ತಪ್ಪು ತಿಳಿಯುವ ಶಕ್ತಿಯಿಲ್ಲ.

ಅಸತ್ ವಸ್ತುಗಳ ಸಂಬಂಧ ಕಡಿದುಕೊಂಡವನು ವಿರಕ್ತ. ವಿರಕ್ತಿಯಿಂದ ಸಾಧನೆ ಮುಂದುವರೆಸಿದರೆ, ಭವದ ಸಂಬಂಧ ಹರಿಯುತ್ತದೆ- ಹರ ಎಂದರೆ "ಕದಿ" ಇಲ್ಲವೆ "ತೆಗೆದುಕೊಂಡು ಹೋಗು" ಎಂದರ್ಥ. ನಮ್ಮ ಪಾಪಗಳನ್ನು ತೆಗೆದುಕೊಂಡು ಹೋಗುವವನು ಹರನು. ಭವದಿಂದ ನಮ್ಮನ್ನು ತೆಗೆದುಕೊಂಡು ಹೋಗುವವನು, ಭವ ಹರನು ವಿರಕ್ತನಾದ ನೀಲೆ ಹರನು ಒಲಿಯುವನು. ಆದರೆ ಅಲ್ಪನಾದವನು ವಿರಕ್ತ ನಾಗಲಾರನು, ವಿರಕ್ತಿ ಇಲ್ಲದೆ ಹರ ಒಲಿಯನು.

೬೪

ನೂರೊಮ್ಮೆ ಕೇಳೆಂದು ಮುವೆ ಮುತ್ತೋ ಶಿವನಾತ್ಮ, ಬೂಜನೆಯುವಾಗು ಪುಣ್ಯ ಮೂರಿ
ಪೂಜೆಲೇಕ ಮೋಕ್ಷಭೋಗಂಬು ದೊರಕುನಾ? ವಿಶ್ವ ಜಾಭಿರಾನು ವಿನುತ ವೇಮ.

ನೂರು ನೇಳೆಯಲ್ಲಿ ನುಡದಲಿ ಶಿವನಾತ್ಮ
ಪೂಜೆ ಮಾಡುವನೆವನು, ಪುಣ್ಯಮೂರ್ತಿ.
ಪೂಜೆಯಿರದೆ ಮೋಕ್ಷ ಭೋಗ ಹೊರೆಯುಬಹುದೆ?
ವಿಶ್ವದಾಭಿರಾಮ ಕೇಳು ವೇಮ.

ಯೋಗ ಸಾಧನೆಗೆ ಬೆಳಗಿನ ಹೊತ್ತು, ಸಂಜೆ ಮುಂಜಾವಿನ ಉಟ್ಕೃಂತ ಪೂರ್ಕ ಹೊತ್ತು ಅನುಕೂಲವೆಂದು ಯೋಗಿಗಳ ಅಭಿಪ್ರಾಯ. ಈ ವೇಳೆಯಲ್ಲಿ ಸಾಧಕನ್ನು ಹರ್ಷ ಚಿತ್ತನಾಗಿ ತಿನುಹುವಾದ ಆತ್ಮವನ್ನು ಕುರಿತು ಧ್ಯಾನಿಸಬೇಕು. ಆತ್ಮ ಪೂಜೆ ನಡೆಸಬೇಕು. ಆತ್ಮ ಪೂಜೆ ನಡೆಸುವನರೇ ಪುಣ್ಯ ಮೂರ್ತಿಗಳು.

ಆತ್ಮ ಪೂಜೆ ಮಾಡದಿದ್ದರೆ ಆತ್ಮ ಜ್ಞಾನವಾಗದು. ಆತ್ಮ ಜ್ಞಾನವಾಗದೆ, ಸತ್ಯವಾವುದು? ಮಿಥ್ಯವಾವುದು? ತಿಳಿಯದು. ಇಂದ್ರಿಯಾಕರ್ಷಣೆಯ ಸುಖ-ಭೋಗ ವಸ್ತುಗಳನ್ನು ತೊರೆಯದಿದ್ದರೆ, ಮೋಕ್ಷವು ದೊರೆಯದು; ಮೋಕ್ಷದ ನಿತ್ಯಾನಂದ ಭೋಗವೂ ದೊರೆಯದು.

೬೫

ಒಡಲು ಬಡಲು ಜೀಸಿ ಯೋಗುಲಮನುವಾರು, ಮನಸು ಕಲ್ಮ ಪಂಬು ಮಾನ್ವ ಲೇಕು
ಪುಟ್ಟವಿಡಗೊಟ್ಟ ಭುಜಗಂಬು ಚಚ್ಚುನಾ? ವಿಶ್ವದಾಭಿರಾಮ ವಿನುರ ವೇಮ

ಒಡಲು ಗಾಸಿಗೊಳಿಸಿ ಯೋಗಿಯೆನ್ನುತಿಹರು.
ಮನದ ಕಲ್ಮಷವದು ಮಾಯಗೊಳದೆ,
ಹುತ್ತು ನೇಲೆ ಹೊಡೆಯೆ ಹಾಯಿಬಹುದೆ?
ವಿಶ್ವದಾಭಿರಾಮ ಕೇಳು ನೇಮ.

ಯೋಗವೆಂದರೆ ಸೇರಿಕೊಳ್ಳುವುದು ಒಂದಾಗುವುದು. ಆದರೆ ಜನರ ಕಲ್ಪನೆ, ಯೋಗಿಯ ಕುರಿತು ವಿಧವಿಧವಾಗಿ ಮೂಡಿಬಂದಿದೆ. ವಿವಿಧ ಆಸನಗಳನ್ನು ಅಭ್ಯಸಿಸುವುದು, ಇಲ್ಲವೆ ಇಂದ್ರಿಯನಿಗ್ರಹದ ಅಭ್ಯಾಸದ ಹೆಸರಿನಲ್ಲಿ ಬಹು ದಿನ ಆಹಾರ ಸೇವನೆ

ಲ್ಲಿಸುವುದು, ಬೇಸಗೆಯಲ್ಲಿ ಕಡುಬಿಸಿಲಿನಲ್ಲಿ ನಿಲ್ಲುವುದು ಇಲ್ಲವೆ ಚಳಿಗಾಲದಲ್ಲಿ ಕೊರೆಯುವ ತಣ್ಣೀರಿನಲ್ಲಿ ನಿಂತುಕೊಳ್ಳುವುದು, ಇತ್ಯಾದಿ ಮಾಡಿ ವ್ಯರ್ಥ ದೇಹವನ್ನು ಗಾಸಿಗೊಳಿಸುವವರಿಗೆ ಯೋಗಿ ಎಂದು ಕರೆಯಲಾಗುತ್ತದೆ.

ಯಾವುದು ಒಳ್ಳೆಯದೋ, ಅದರತ್ತ ಮನಸ್ಸನ್ನು ಏಕಾಗ್ರಗೊಳಿಸಬೇಕು. ಸತ್ಯವೊಂದೇ ನಿತ್ಯ ಕಲ್ಯಾಣಕರ. ಸತ್ಯದಲ್ಲಿ ಮನಸ್ಸನ್ನು ಏಕಾಗ್ರಗೊಳಿಸಬೇಕು. ಅನೇಕವೇಳೆ, ನಾವು ನಮ್ಮ ಉತ್ತಮ ಸ್ವಭಾವಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತೇವೆ, ನಮ್ಮ ದೋಷಪೂರ್ಣ ಮನಸ್ಸು ಅತ್ತ ನಮ್ಮನ್ನು ಸೆಳೆಯುತ್ತದೆ- ಮನಸ್ಸಿನಲ್ಲಿ ಕಲ್ಮಶವು ಇಲ್ಲದಂತೆ ಶುದ್ಧಗೊಳಿಸಬೇಕು. ಮನಸ್ಸು ಶುದ್ಧಗೊಳಿಸದೆ, ಯೋಗ ಸಾಧನೆಗೆ ತೊಡಗಿದರೆ ಫಲವಿಲ್ಲ. ಹಾವು ಒಳಗಿಟ್ಟು ಮೇಲೆ ಹುತ್ತುವನ್ನು ಹೊಡೆದಂತೆ. ಹೊಡೆದವರ ಕೈನೋವು ಅಷ್ಟೇ! ಹಾವು ಸಾಯಲಾರದು.

೬೩೭

ಕುಕ್ಕಯೇಕತಂಬು ಗೊಕ್ಕ ರಥ್ನಾಂಬು, ವಿರಮಿಸಿರಾಗಮೆನ್ನ ಗಪ್ಪ ಮುನುಕ,
ಆತ್ಮನೆರುಗುಭಾವ ಮದಿಯೇಲ ಗಾನರೊ ವಿಶ್ವದಾಭಿರಾಮ ವಿನುರ ವೇಮ.

ನಾಯಿ ಏಕಾಂತವು, ನೋಡು ಬಕ ಧ್ಯಾನ;
ಕತ್ತೆರಾಗದೆಣಿಕೆ, ಕಪ್ಪೆ ಜಳಕ;
ಆತ್ಮವರಿವ ಭಾವ ಅರಿಯರೇಕೊ ಮನದಿ?
ವಿಶ್ವದಾಭಿರಾಮ ಕೇಳು ವೇಮ.

ಇಂದ್ರಿಯ ನಿಗ್ರಹವನ್ನು ಮಾಡುವ ಶಕ್ತಿಯಿಲ್ಲದವನು, ತಪಸ್ಸಿಗಳ ರೂಪ ತಾಳಿ ಲೋಕದ ಜನರಿಗೆ ಸಂಶಯ ಬರದಂತೆ ನಟಿಸಬಹುದು. ಮನಸ್ಸಿನಲ್ಲಿ ವೈರಾಗ್ಯವಿಲ್ಲದಿದ್ದರೂ, ವಿರಾಗಿಗಳ ವೇಷ ತಾಳಿ, ಜನವಂಚನೆಗೆ ಅಣಿಯಾಗಬಹುದು.

ಕಚ್ಚುವ ನಾಯಿ ಮುರೆಯಲ್ಲಿ ಅವಿತು ನಿಲ್ಲುವದು; ಅದುವೇ ಅದರ ಏಕಾಂತ. ಬಕ ಪಕ್ಷಿ ನೀರಿನಲ್ಲಿದ್ದು ಜಲಕ್ರಿಮಿಗಳನ್ನು ಹಿಡಿಯಲು ಹೊಂಚುಹಾಕಿ ಕುಳಿತಿರಬಹುದು ಅದು ಹೊಂಚು ಹಾಕಿದುದನ್ನೇ ಧ್ಯಾನವೆನ್ನಬಹುದೇ ? ಕತ್ತೆ ಕೆಸರಲ್ಲಿ ಹೊರಳಾಡಿ, ಸಂತೋಷ ಪಟ್ಟು ಒದರುತ್ತದೆ. ಅದನ್ನೇ ದೇವಸ್ತುತಿಯ ರಾಗಾಲಾಪನೆಯೆನ್ನಬಹುದೇ? ಕಪ್ಪೆ ನೀರಲ್ಲಿಯೇ ಇರುತ್ತದೆ. ಮೇಲೆ ಕಮಲದೆಲೆಯ ಮೇಲೆ ಕುಳಿತಿರುವ ಕಪ್ಪೆ ಕ್ರಿಮಿಕೀಟ ಕಂಡೊಡನೆ ನೀರಿಗೆ ಧುಮುಕಿ ಮುಳುಗುತ್ತದೆ. ಕಪ್ಪೆಯ ಈ ನೀರು ಮುಳುಗುವಿಕೆಯನ್ನು ಶುಚಿಗೊಳಿಸುವ ಸ್ನಾನವೆನ್ನಬಹುದೇ ? ಮನಸ್ಸು ಪರಿಶುದ್ಧವಾಗದೆ, ಆಚರಿಸುವ ವ್ರತನೇಮಗಳಿಂದ ಯಾವ ಪ್ರಯೋಜನವೂ ಇಲ್ಲ.

ಆತ್ಮ ಸಾಕ್ಷಾತ್ಕಾರವು ಜ್ಞಾನದಿಂದ ಮಾತ್ರ ಸಾಧ್ಯ. ತತ್ತ್ವಗಳನ್ನು ಹೆಚ್ಚು ಹೆಚ್ಚಾಗಿ ಅರಿತು ಅನುಭವಿಸಬೇಕು.

("ಈ ಆತ್ಮವು ಬಲಹೀನನಿಗೆ ಇಲ್ಲವೆ ದೋಷಪೂರ್ಣ ತಪಸ್ಸಿನಿಂದ ಶಕ್ಯವಾಗದು. ಅದು ಭಕ್ತಿಯಿಲ್ಲದ ವ್ರತ-ನೇಮಗಳಿಂದ ಸಹ ಸಾಧ್ಯವಿಲ್ಲ. ಆದರೆ ಜ್ಞಾನಯುಕ್ತನಾಗಿ ಈ ಸಾಧನಗಳನ್ನು ಅನುಸರಿಸಿದರೆ, ಆತ್ಮವು ಬ್ರಹ್ಮವಾಗುವುದು." ಎಂದು ಮುಂಡಕೋಪನಿಷತ್ತು ತಿಳಿಸುತ್ತದೆ.)

೬೩೮

ಸಕಲಶಾಸ್ತ್ರ ಮುಖನು ಜದಿವಿಯು ಪ್ಯಾಪಿಯು, ದೆಲಿಯುಗಲರು ಚಾವು ದೆಲಿಯಲೇಕ ಚಾವುದೆಲಿಯಲೇನಿ ಚದಮ್ಮಲವೇಲರಾ? ವಿಶ್ವದಾಭಿರಾಮ ವಿನುರ ವೇಮ.

ಒಟ್ಟು ಶಾಸ್ತ್ರವೆಲ್ಲ ಜದಿ ಮುತ್ತಿ ಬರೆದು,
ತಿಳಿಯುವವರು ಮರಣ ತಿಳಿಯದಿಹರು.
ಮರಣವರಿಯದಿರಲು ಮರಳಿ ಓದು ಏಕೆ?
ವಿಶ್ವದಾಭಿರಾಮ ಕೇಳು ವೇಮ.

ಮರಣವನ್ನು ಅರಿಯುವುದೇ ಮಹಾ ಓದು. ಮರಣವೆಂದರೇನು? ಮರಣದಾಚೆ ಇರುವದೇನು? ಇದನ್ನು ಅರಿತರೆ ಸತ್ಯ ಅರಿತಂತೆ. ಪ್ರಾಣವು ಪುರುಷನ ನೆರಳಿನಂತೆ ಪ್ರಾಣ ಅಪಾನ, ಸಮಾನ, ವ್ಯಾನ ಉದಾನಗಳೆಂಬ ಐದು ತೆರೆದಲ್ಲಿ ಸ್ವಯಂ ನೇಮಕಗೊಳ್ಳುವದು. ಮೂಗು ಬಾಯಿಯಿಂದ ಎಳೆಯುವ ವಾಯುವೇ ಅಪಾನವೆನಿಸುವುದು. ಉಂಡ ಅನ್ನವು ಜಠರಾಗ್ನಿಯಲ್ಲಿ ಪಚನವಾದ ಮೇಲೆ ಉಂಟಾದ ಶಕ್ತಿಯು ಸಪ್ತ ಅಗ್ನಿ ಶಿಖೆಯೆಂಬ ಲಾಕ್ಷಣಿಕ ಅರ್ಥದಲ್ಲಿ ಎರಡು ಕಣ್ಣು, ಎರಡು ಕಿವಿ ಎರಡು ನಾಸಿಕ ರಸನೇಂದ್ರಿಯಗಳಲ್ಲಿ ದರ್ಶ, ಶ್ರವಣ, ಆಘ್ರಾಣ ಮತ್ತು ಆಸ್ವಾದನ ಲಕ್ಷಣದ ಜ್ಞಾನ ಮಾಡುವದು.

ಶರೀರಕ್ಕೆ ಅಪಾಯ ಸಂಭವಿಸಿದಾಗ ಪ್ರಾಣ ಅಪಾನಗಳು ಸಮಾನದೊಡನೆ ತಾಕಲಾಡಿ, ಅದನ್ನೊಳಗೊಂಡು, ಉದಾನದೊಡನೆ ತಾಕಲಾಟವಾಡಿ, ಉದಾನದೊಡನೆ, ಕೂಡಿ ಉತ್ಕ್ರಮಿಸುವುದು. ಶರೀರದಿಂದ ಪ್ರಾಣ ಬೇರ್ಪಟ್ಟಾಗ, ಶರೀರ ಕಳಚಿದಂತಾಗುತ್ತದೆ. ಪ್ರಾಣವಾದರೋ, ಆತ್ಮದ ನೆರಳಿನಂತಾಗಿ ಉಳಿಯುವದು.

"ಕರ್ಮಕ್ಕನುಸಾರವಾಗಿಯೂ ಕೆಲವರು ದೇಹಿಗಳು ಶರೀರ ಗ್ರಹಣಕ್ಕಾಗಿ ಯೋನಿಯನ್ನೂ, ಇನ್ನು ಕೆಲವರು ಸ್ಥಾವರ ಜನ್ಮವನ್ನೂ ಹೊಂದುತ್ತಾರೆ." ಎಂದು ಕಠೋಪನಿಷತ್ತಿನಲ್ಲಿ ಹೇಳಲಾಗಿದೆ. ಯೋಗಸಾಧನದಿಂದ ಮೋಕ್ಷ ಪಡೆಯುವವರೆಗೂ ಬರುಹೋಗುವ ಸಂಸಾರ ಚಕ್ರವು ಉಂಟು ನಾವು ಶಾಸ್ತ್ರ ಬರೆಯುವ ಬರೆಹ, ಮರಣವನ್ನು ತಿಳಿಯುವದನ್ನು ಕುರಿತು ಇರಬೇಕು. ಅದನ್ನರಿಯದಿದ್ದರೆ, ಓದುವದಾದರೂ ಏತಕ್ಕಾಗಿ. ?

೬೩೮

ಕೊಂಚರಾಳ್ಗಲ್ಲಬೆಟ್ಟ ಕೋರಿಕಗಟ್ಟನ, ಗುಳ್ಳ ಬೋನದಿರಿಗಿ ಕುಳ್ಳನೇಲ?
ಪಾಯಕಾನಿಶಿವುಡು ಪ್ರಾಣಯ್ಯೆಯುಂಡಂಗ, ವಿಶ್ವದಾಭಿರಾಮ ವಿನುರ ವೇಮ.

ಬೆಟ್ಟ ಕಲ್ಲಿನಿಂದ, ಬಯಕೆ ಕೋರಲೇಕೆ?
ಕಟ್ಟಿದ ಗುಡಿಗಳಲಿ ಕರುಬಲೇಕೆ?
ಬಿಡಲಾರದ ಶಿವನು ಪ್ರಾಣಿಗಳಲ್ಲಿಹನು.
ವಿಶ್ವದಾಭಿರಾಮ ಕೇಳು ನೇಮ.

ಮೂರ್ತ ಎಂದರೆ ಸ್ಥೂಲವಾದುದು. ಮೂರ್ತಿ ಎಂದರೆ ಸೂಕ್ಷ್ಮದ ಸ್ಥೂಲ ಸಂಕೇತ; ಚಿನ್ನ, ಸ್ಥೂಲದ ಪೂಜೆಯಿಂದ, ಪೂಜಿಸುವವನೂ ಸ್ಥೂಲನಾಗುವನು. ಮೂರ್ತಿ ಪೂಜೆ ಮಕ್ಕಳಾಟದಂತೆ, ಎಂದು ತಂತ್ರ ಸಾರುತ್ತದೆ. "ಬಾಲ ಕ್ರೀಡನವತ್ ಸರ್ವಂ ರೂಪನಾಮಾದಿ ಕಲ್ಪಂ" ರೂಪ ನಾಮಾದಿಗಳ ಕಲ್ಪನೆಯು ಮಕ್ಕಳಾಟದಂತೆ.

ಮೂರ್ತಿಯ ರೂಪವಾಗಲಿ ಇಲ್ಲವೆ ನಾಮವಾಗಲಿ ನಮ್ಮ ಕಲ್ಪನೆಯಷ್ಟೇ. ನಾನೇ ಕಂಡ ಸ್ವಪ್ನದಂತೆ. ಸತ್ಯ ಲೋಕದಲ್ಲಿ ಅದಕ್ಕೆ ಬೆಲೆಯಿಲ್ಲ.

"ಮೃಚ್ಛಿಲಾತುಪಾರ್ವಾದಿ ಮೂರ್ತಾ ವಿಶ್ವರ ಬದ್ಧಯಃ।
ಕ್ಲೇಶಂ ತಸ್ಯ ಪನಾ ಜ್ಞಾನಂ ವಿನಾ ನೋಕ್ಷಂ ನ ಯಾಂತಿತೇ॥
— ತಂತ್ರ.

ಮಣ್ಣು, ಕಲ್ಲು, ಧಾತು, ಕಟ್ಟಿಗೆಯಿಂದ ಮಾಡಿದ ಮೂರ್ತಿಯಲ್ಲಿ ಈಶ್ವರನನ್ನು ಬದ್ಧನಾಗಿರಿಸಬಹುದೇ? ಮುಂತ್ಯಾದಿ ಪಶಿಸಿ ಮೂರ್ತಿಯಲ್ಲಿ ಪ್ರಾಣ ತುಂಬಬಹುದೇ? ಅದು ನಾಟಕವೆನ್ನಿಸದೇ? ಜ್ಞಾನವಿಲ್ಲದಿದ್ದರೆ, ಘೋರ ತಪಸ್ಸು ಮಾಡಿದರೂ ಸಹ, ಮೋಕ್ಷ ಪಡೆಯುವದು ಅಸಾಧ್ಯ."

ಅಂದ ಮೇಲೆ, ಒಂದು ಸ್ಥೂಲ ಮೂರ್ತಿ ಕಲ್ಪನೆಯಿಂದೇನು? ದೊಡ್ಡ ಗುಡಿಯಿಂದೇನು? ಕಟ್ಟಿದ ಗುಡಿಗಳಲ್ಲಿ ಕರುಬಿದರೆ ಫಲ ದೊರೆಯದು. ಸ್ಥೂಲದ ಕಲ್ಪನೆ ನಮ್ಮ ಮುಂದಿನ ಸಾಧನೆಯಲ್ಲಿ, ಜ್ಞಾನಾರ್ಜನೆಯಲ್ಲಿ, ಅತಂಕವಾಗಿ ನಿಲ್ಲುವ ಸಂಭವವೇ ಹೆಚ್ಚು.

ಶಿವನು ಅಭೇದ. ಜೀವವೇ ಶಿವನು. "ಜೀವೋ ಬ್ರಹ್ಮ ಸ್ವರೂಪಃ" ಜೀವವಿಂದ ಅಭೇದನಾದಂಥ ಬ್ರಹ್ಮ ಪ್ರಾಣಿಗಳಲ್ಲಿಯೇ ಉಂಟು. ಕಲ್ಲಿಗೆ, ಕಟ್ಟಿಗೆಗೆ, ಬೆಟ್ಟಕ್ಕೆ ಹರಕೆ ಹೊರುವುದೇಕೆ?

೬೩೯

ವಿಶ್ವಮುನುನಡಿಪೆಡು ವಿಶ್ವೇಶ್ವರುಂಡುಂಡ, ಬ್ರಭುವು ನೇನಟುಂಚು ಬಲುಕನೇಲ?
ವನಮುಲೋನಿ ಕೋತಿ ವಸುಮತಿನಡವುನಾನ? ವಿಶ್ವದಾಭಿರಾಮ ವಿನುರ ವೇಮ.

ವಿಶ್ವ ನಡೆಸುವವನು ವಿಶ್ವೇಶ್ವರನಿರಲು
ಪ್ರಭುವು ನಾನು ಎಂದು ಹೇಳಲೇಕೆ ?
ವನದೊಳಗಿಹ ಕೋತಿ ವಸುಧೆ ನಡೆಸಬಹುದೆ ?
ವಿಶ್ವದಾಭಿರಾಮ ಕೇಳು ನೇಮ.

ಈ ವಿಶ್ವದ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಕರ್ತನಾದ ವಿಶ್ವೇಶ್ವರನೇ ಬ್ರಹ್ಮ. ಯಾವುದರಿಂದ ಈ ಪ್ರಾಣಿಗಳು ಹುಟ್ಟುವವೋ, ಹಾಗೆಯೇ ಹುಟ್ಟಿದವುಗಳು ಯಾವುದರಿಂದ ಜೀವಿಸುತ್ತಿವೆಯೋ ಮತ್ತು ಇಲ್ಲಿಂದ ಹೊರಡುವಾಗ ಯಾವುದನ್ನು ಪ್ರವೇಶಿಸುವುವೋ ಅದನ್ನು ತಿಳಿದುಕೋ. ಅದೇ ಬ್ರಹ್ಮ (ತೈತರೇಯೋಪನಿಷತ್-೩-೧)

ಬ್ರಹ್ಮ ಸರ್ವ ಶಕ್ತ; ಸರ್ವಜ್ಞ. ಸರ್ವವನ್ನೂ ನಡೆಸುವ ಪ್ರಭುವು. ಅವನ ಆಜ್ಞೆಯಿಲ್ಲದೆ ಮರದ ಎಲೆಯೂ ಚಲಿಸಲಾರದು. ಹೀಗಿರುವಾಗ ಯಾವನೋ ಒಬ್ಬ, ಇನ್ನಿತರರನ್ನು ನಿಯಂತ್ರಿಸುವ, ಪಾಲಿಸುವ, ಪ್ರಭು ತಾನು ಎಂದು ಹೇಳುವುದೇಕೆ ?

ವನದಲ್ಲಿ ಇರುವ ಮಂಗವು ತನ್ನಲ್ಲಿ ತಾನು ಪ್ರಭುವೆಂದು ತಿಳಿದುಕೊಂಡರೆ, ವಸುಧೆಯನ್ನು ಆಳುವ ಶಕ್ತಿ ಪಡೆಯಲಾರದು. ಚಂಚಲಮತಿಯೂ, ಅಹಂಕಾರಿಯೂ ಆದ ರಾಜನೂ ಅದೇ ರೀತಿ.

೬೪೦

ಬೂದಿಪೂತಲೆನ್ನ ಭುಜಮುಲ ಪೊಂಕಾಲು, ಪ್ರಾಲುಲಿಂಗ ಮುಲುನು ವರುಸಮುತಮು.
ಲಿಕ್ಕಡದಗಗಾಕ ಯಕ್ಕಡದಗವೆಪ್ಪು, ವಿಶ್ವದಾಭಿರಾಮ ವಿನುರ ವೇಮ.

ಬೂದಿ ಬಳಿಯಲೆಷ್ಟೊ ಭುಜದಿ ಅಲಂಕಾರ,
ಧರಿಸಿದ ಲಿಂಗಗಳು ತರದ ಮತವು;
ಇಲ್ಲಿ ಮಾತ್ರವಷ್ಟೆ; ಅಲ್ಲಿ ಸಲ್ಲವಯ್ಯ
ವಿಶ್ವದಾಭಿರಾಮ ಕೇಳು ನೇಮ.

ಭೂತ ಎಂದರೆ ಹಿಂದಾದುದು ಎಂದು ಸಾಮಾನ್ಯ ಅರ್ಥ. ಭೂತವೆಂದರೆ ಸೃಷ್ಟಿಗೊಂಡ ವಸ್ತು. ಭೂತಿ ಇಲ್ಲವೆ ಬೂದಿ ಈ ರೀತಿ 'ಉಂಟಾದ ವಸ್ತು'. ಯಜ್ಞ ಕರ್ಮದಲ್ಲಿ ಅಗ್ನಿಹೋತ್ರದ ಬೂದಿ, ಸ್ಮಶಾನದ ಶವಸಂಸ್ಕಾರದ ಬೂದಿ, ಇಲ್ಲವೆ ಆಕಳ ಶಗಣಿಯನ್ನು ಒಣಗಿಸಿ, ಸುಟ್ಟು, ಸೋಸಿ, ಗೋ ಮೂತ್ರದಿಂದ ಕಲೆಸಿ, ಉಂಡೆ ಮಾಡಿದ ಬೂದಿ, ವಿಶೇಷ ರೀತಿಯ ಭೂತಿ; ವಿಭೂತಿ. ಈ ಬೂದಿಯನ್ನು ಶಿರಸ್ಸು ಮುಖ, ಎದೆ, ಗುಹ್ಯಸ್ಥಾನಾದಿಗಳಲ್ಲಿ ಮಂತ್ರಪೂರ್ವಕ ಲೇಪಿಸುವರು. ಇನ್ನು ವಿಭೂತಿಧಾರಣವಾದ ಮೇಲೆ, ಕಂಠ, ತೋಳು, ಮುಂಗೈ ಇತ್ಯಾದಿಗಳಿಗೆ ಇಂತಿಷ್ಟು ರುದ್ರಾಕ್ಷಿ ಮಣಿಗಳನ್ನು ಕಟ್ಟಬೇಕೆಂದು ಪಾಶುಪತ ಶೈವಾದಿಗಳ ವ್ರತ. ವಿಭೂತಿ– ರುದ್ರಾಕ್ಷಿ ಧಾರಣೆಗೆ ಅನುಗುಣವಾಗುವಂತೆ ವಿಶಿಷ್ಟ ಕಲ್ಪನೆಗಳೂ, ಧಾರಣಕಾಲಕ್ಕೆ ಪಠಿಸಬೇಕಾದ ನಿರ್ದಿಷ್ಟ ಮಂತ್ರಾದಿಗಳೂ ಉಂಟು.

ಇನ್ನು ವೀರಶೈವರು ವಿಷ್ಣ್ವಾದಿ ದೇವತೆಗಳು ತೃಣವೆಂದೂ, ಶಿವನೊಬ್ಬನೇ ಶ್ರೇಷ್ಠನೆಂದು ನಂಬಿ, ಪಿಂಡಾಂಡ ಬ್ರಹ್ಮಾಂಡದ ಕುರುಹಾಗಿ; ಚಿಕ್ಕ ಗೋಲಾಕಾರದ ಹರಳು ಕಲ್ಲು ಇದೆಯೆಂದು ಭಾವಿಸಿ, ಅಂತರಂಗದಿಂದ ಬಹಿರಂಗಕ್ಕೆ ಬಂದ ಪ್ರಾಣ ಚಿಹ್ನೆಯೆಂದು ಗ್ರಹಿಸಿ,ಅದನ್ನು ಕೊರಳಿಗೆ ಇಳಿಬಿಟ್ಟು,ದಾರಕ್ಕೆ ಕಟ್ಟಿ ಧರಿಸುತ್ತಾರೆ. ಈ ಬೂದಿಯ ಲೇಪನ, ರುದ್ರಾಕ್ಷಿ ಧಾರಣ, ಮತ್ತು ಲಿಂಗ ಕಟ್ಟೋಣ ಒಂದು ವಿಶಿಷ್ಟ ಮತವೆನ್ನಿಸುವುದಷ್ಟೇ. ಈ ಪ್ರಪಂಚದಲ್ಲಿ ಇಂಥ ಕಲ್ಪನೆಗೆ ಬೆಲೆ ಇರಬಹುದು. ಆದರೆ ಸತ್ಯವನ್ನರಿಯುವ ಮಾರ್ಗದಲ್ಲಿ, ಸತ್ಯಲೋಕದಲ್ಲಿ ಇಂಥ ಮತ ಚಿನ್ಹೆಗಳಿಗೆ ಯಾವ ಬೆಲೆಯೂ ಇಲ್ಲ.

೬೪೧

ಕಡಕನಿದ್ರಿಯಮಲು ಗಟವೇಯಗಲೇಕ, ಚಾವುವಚ್ಚುನಪುಡು ಸನ್ಯಸಿಂಚು,
ಆತ್ಮ ಜಿತಮುಲೇಕ ಯಂದುನಾ ನೋಕ್ಷಂಬು ? ವಿಶ್ವದಾಭಿರಾಮ ವಿನುರ ವೇಮ.

ಕೊನೆಗೆ ಇಂದ್ರಿಯಗಳ ಕಟ್ಟಿ ಹಾಕಲಾರ;
ಸಾವು ಬಂದ ಕಾಲ ಸಂನ್ಯಾಸಿಯು;
ಆತ್ಮಜಯಿಸುವನಕ ಅವಗತವೇ ನೋಕ್ಷ ?
ವಿಶ್ವದಾಭಿರಾಮ ಕೇಳು ವೇಮ.

ಕಣ್ಣು, ಕಿವಿ, ಮೂಗು, ನಾಲಗೆ, ತ್ವಚೆ ಇವು ಐದು ಜ್ಞಾನೇಂದ್ರಿಯಗಳು. ವಾಕ್, ಹಸ್ತ, ಉಪಸ್ಥ, ಪಾಯು ಮತ್ತು ಪಾದ ಇವು ಐದು ಕರ್ಮೇಂದ್ರಿಗಳು. ಇವೆಲ್ಲ ಬಾಹ್ಯಕರಣಗಳು. ಇವು ಬಾಹ್ಯ ವಿಷಯಗಳತ್ತ ಹರಿಯುತ್ತವೆ. ಈ ಇಂದ್ರಿಯಗಳನ್ನು ನಿಗ್ರಹಿಸಿದರೆ, ಇವುಗಳಿಂದ ವಿಷಯಗ್ರಹಣ ನಿಲ್ಲುವುದು. ವಿಷಯಗ್ರಹಣ ನಿಂತರೆ, ಚಿತ್ತವೃತ್ತಿಗಳೂ ನಿಲ್ಲುವವು. ಇದನ್ನು ಮೊದಲಿನಿಂದ ಸಾಧಿಸುವ ಪ್ರಯತ್ನ ಮಾಡಬೇಕು. ಆದರೆ ಚತುರಾಶ್ರಮದ ಕಟ್ಟಿಗೆ ಬಿದ್ದವರು, ಮೊದಲು ಇಂದ್ರಿಯಗಳನ್ನು ಹರಿಬಿಟ್ಟು, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥಾದಿ ಆಶ್ರಮದ ಅವಧಿ ಮುಗಿಸಿ, ಕೊನೆಗೆ ಸಾಯುವ ಕಾಲಕ್ಕೆ ಸನ್ಯಾಸ ಸ್ವೀಕರಿಸಿದರೆ ಏನುಂಟು ?

ಮೋಕ್ಷ ದೊರಕಬೇಕಾದರೆ, ಜೀವಶಕ್ತಿ ಇರುವ ಕಾಲದಲ್ಲಿಯೇ ಸಾಧನ ಗೆಯ್ಯಬೇಕು. ಆತ್ಮವನ್ನು ಜಯಿಸಬೇಕು.

(ಉಪನಿಷತ್ತಿನ ಅಭಿಪ್ರಾಯ ನೋಡಿರಿ:

" ಈ ಆತ್ಮನು ಬಲಹೀನನಿಗೆ ಲಭ್ಯನಲ್ಲ. ಪ್ರಮಾದದಿಂದಾಗಲಿ ಸನ್ಯಾಸವಿಲ್ಲದ ತಪಸ್ಸಿನಿಂದಾಗಲಿ ಲಭ್ಯನಲ್ಲ; ಆದರೆ (ಬಲ, ಅಪ್ರಮಾದ, ಸನ್ಯಾಸ ಮತ್ತು ಜ್ಞಾನ) ಈ ಸಾಧನೆಗಳಿಂದ ಯಾವ ವಿದ್ವಾಂಸನು ಪ್ರಯತ್ನಿಸುವನೋ, ಅವನ ಈ ಆತ್ಮವು ಬ್ರಹ್ಮ ಧಾಮವನ್ನು ಪ್ರವೇಶಿಸುವುದು. "
ಮುಂಡಕ. ಉ. ೩-೨-೪)

೬೪೨

ಅಧಿಕ ಸೂಕ್ಷ್ಮ ಮೈನ ಯಾನಂದ ಮೆರುಗಕ. ಮತಿಯುಲೇಕ ಚದಿವಿ ಮಗುಡಗುನು,
ಅತಿ ರಹಸ್ಯಮದ್ದಿ ಯಲ್ಪುಡೆರುಂಗುನಾ? ವಿಶ್ವದಾಭಿರಾಮ ವಿನುರ ವೇಮ.

ಅಧಿಕ ಸೂಕ್ಷ್ಮವಾದ ಆನಂದವರಿಯುದೆ,
ಮತಿಯು ಇರದೆ ಓದಿ ಮುಗ್ನನಾದ;
ಅತಿ ರಹಸ್ಯವದನು ಅಲ್ಪನರಿವನೆಂತು ?
ವಿಶ್ವದಾಭಿರಾಮ ಕೇಳು ವೇಮ.

ಉಪನಿಷತ್ತು ಬ್ರಹ್ಮ ಸ್ವರೂಪವನ್ನು, ಬೇರೆ ಬೇರೆ ಬ್ರಹ್ಮ ಧರ್ಮಗಳನ್ನು ಸೂಚಿಸುವ ವಿಶೇಷಣಗಳಿಂದ ತಿಳಿಸುತ್ತವೆ. ಉದಾ: ಆನಂದ ರೂಪ, ಸರ್ವಗತ, ಸರ್ವಾತ್ಮ ಇತ್ಯಾದಿ. ಈ ವಿಶೇಷಣಗಳು ಬೇರೆಯಾದರೂ ವಿಶೇಷ್ಯವು ಒಂದೇ ಆಗಿದೆ.

ಅತಿ ಸೂಕ್ಷ್ಮವಾದ ಬ್ರಹ್ಮ, ಆನಂದ ರೂಪಿ; ಇಂಥ ಬ್ರಹ್ಮವನ್ನು ತಿಳಿಯಬೇಕು. ಇದು ಪರಾ, ಎಂದರೆ ಮೇಲು ವಿದ್ಯೆ. ಇದನ್ನು ಬಿಟ್ಟು, ವೇದ-ಛಂದಸ್ಸುಗಳಲ್ಲಿ ಮಗ್ನನಾಗಿ ಅವುಗಳ ಪಠಣ ಮಾಡುತ್ತ, ಅದೇ ಸರ್ವಸ್ವವೆಂದು, ಬ್ರಹ್ಮ ಸಾಕ್ಷಾತ್ಕಾರದ ಸಾಧನೆ ಮಾಡದೆ ಇರುವುದು, 'ಅಪರಾ' ಅಂದರೆ ಕೇಳು ವಿದ್ಯೆ.

ಬ್ರಹ್ಮ ವಿದ್ಯೆ ರಹಸ್ಯವಾದದ್ದು. ಬ್ರಹ್ಮ ವಿದ್ಯೆಯು ಉಪನಿಷತ್ತುಗಳಲ್ಲಿ ತಿಳಿಸಲ್ಪಟ್ಟಿದೆ. 'ಉಪನಿಷತ್,' ಶಬ್ದಕ್ಕೆ 'ರಹಸ್ಯ' ಮತ್ತು 'ಗುಹ್ಯ ಆದೇಶ,' ಎಂಬ ಶಬ್ದಗಳು ಸಮನಾರ್ಥಕವಾಗಿ ಉಪನಿಷತ್ತುಗಳಲ್ಲಿ ತಿಳಿಸಲ್ಪಟ್ಟಿದೆ. 'ಉಪನಿಷದಂ ರಹಸ್ಯಂ ಯತ್ ಚಿಂತ್ಯಮ್' ಎಂದು ಆಚಾರ್ಯ ಶಂಕರರೂ ಕೇನೋಪನಿಷತ್ ಭಾಷ್ಯದಲ್ಲಿ ಹೇಳಿದ್ದಾರೆ. ಈ ರಹಸ್ಯ ಅರಿಯಲು ದೀರ್ಘ ಸಾಧನ ಬೇಕು. ಅಲ್ಪರಿಂದ ಅದು ಸಾಧ್ಯವಾಗದು.

(ಮುಂಡಕೋಪನಿಷತ್ತಿನ ಅಭಿಪ್ರಾಯ ನೋಡಿರಿ: " ಅವುಗಳಲ್ಲಿ ಅಪರಾ ವಿದ್ಯೆ ಯಾವುದೆಂದರೆ,-ಋಗ್ವೇದ ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ; ಈಗ ಪರಾ ವಿದ್ಯೆ-ಯಾವುದರಿಂದ ಅಕ್ಷರವು (ಪರ ಬ್ರಹ್ಮ) ಹೊಂದಲ್ಪಡುವದೋ ಅದು.]

೬೪೩

ದೇವಪೂಜೆ ಜೇಯು ದಿವ್ಯಭೋಗಮು ಗಲ್ಗು, ದತ್ತ್ವಮೆರಿಗೆನೇನಿ ದೈವಸಮುಡೆ,
ಏಮಿ ಲೇನಿನರುನ ಕೇಗತಿಲೇದುರಾ, ವಿಶ್ವದಾಭಿರಾಮ ವಿನುರ ವೇಮ.

ದೇವಪೂಜೆ ಗೆಯ್ಯೆ ದಿವ್ಯ ಭೋಗವುಂಟು.
ತತ್ತ್ವವರಿಯುವವನು ದೈವ ಸಮನು.
ಏನು ಇರದ ನರಗೆ ಯಾವ ಗತಿಯು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಉಪಾಸನೆಗಳು ಒಂದೇ ಉಪಾಸ್ಯ ಕುರಿತು ಇರಬಹುದಾದರೂ, ಹಲವು ವಿಧವಾಗಿರಬಹುದು. ಹಲವರು ವಿಶ್ವರೂಪ ದೇವತೆಯನ್ನು ಭಯಭಕ್ತಿಯಿಂದ ಪೂಜಿಸಬಹುದು. (ವಿಶ್ವರೂಪ ದರ್ಶನ, ಭಗವದ್ಗೀತೆಯ ೧೧ನೇ ಅಧ್ಯಾಯದಲ್ಲಿ ವಿವರಿಸಿದುದರ ಸಂಕ್ಷೇಪ ರೂಪ ಹೀಗೆ:

ಸಹಸ್ರ ಸೂರ್ಯರ ಪ್ರಭೆಯುಂಟು. ಚರ ಅಚರ ಜಗತ್ತೆಲ್ಲ ಒಂದೆಡೆಗೆ ಕಾಣುವುದು. ಅನೇಕ ಬಾಹು, ಉದರ ಮುಖ ನೇತ್ರಗಳುಳ್ಳ ಅವನೇ ಎಲ್ಲೆಡೆಯೂ ಕಾಣುವನು. ಸೂರ್ಯ–ಚಂದ್ರರೇ ಅವನ ಕಣ್ಣುಗಳು. ಅಗ್ನಿಯಂತೆ ಅವನ ಬಾಯಿ; ತನ್ನ ತೇಜಸ್ಸಿನಿಂದ ಅವನು ಜಗತ್ತನ್ನು ತಪಿಸುವನು; ದ್ಯು-ಭೂಲೋಕಗಳ ಈ ಮಧ್ಯಭಾಗವೂ ಎಲ್ಲ ದಿಕ್ಕುಗಳೂ ಅವನಿಂದ ವ್ಯಾಪ್ತವಾಗಿವೆ. ಆ ರೂಪ ಕಂಡು ಮೂರುಲೋಕಗಳೂ ಭಯಗೊಂಡಿವೆ. ಅವನಿಗೆ ಕೋರೆದಾಡೆಗಳಿಂದ ಕರಾಳವಾಗಿರುವ, ಪ್ರಳಯಾಗ್ನಿಯಂತಿರುವ ಮುಖವುಂಟು. ನದಿಗಳು ಸಮುದ್ರ ಸೇರುವಂತೆ, ದೀಪದ ಹುಳು ದೀಪಜ್ವಾಲೆ ಪ್ರವೇಶಿಸುವಂತೆ ಈ ಲೋಕದ ಜನರೆಲ್ಲ ಅವನ ಮುಖವನ್ನು ಪ್ರವೇಶಿಸುತ್ತಾರೆ. ಅವನಿಗೆ ಅಂಜಿ ರಾಕ್ಷಸರು ದೂರ ಓಡುತ್ತಾರೆ. ಸಿದ್ಧಪುರುಷರು ನಮಸ್ಕರಿಸುತ್ತಾರೆ. ಇವನೇ ಆದಿ ದೇವ; ಪುರಾಣ ಪುರುಷ; ಸರ್ವಾತ್ಮ. ಅವನು ಭಕ್ತನ ತಂದೆ; ಸ್ನೇಹಿತ; ಪ್ರಿಯಕರ. ಅವನೆದುರು ಭಕ್ತ ಶರೀರವನ್ನು ಕೋಲಿನಂತೆ ಬೀಳಿಸಿ, ದೀರ್ಘದಂಡ ನಮಸ್ಕಾರ ಮಾಡುತ್ತಾನೆ.) ಇಂಥ ಉಪಾಸಕ ಮರಣಾನಂತರ ಚಂದ್ರಾದಿಲೋಕಗಳಿಗೆ ಹೋಗಬಹುದು. "ಅಲ್ಲಿ ಅವನು ನಗುತ್ತ, ಕ್ರೀಡಿಸುತ್ತ, ಸ್ತ್ರೀಯರೊಂದಿಗೆ ಜ್ಞಾತಿಗಳೊಂದಿಗೆ ಅಥವಾ ವಾಹನಗಳಿಂದ ರಮಿಸುತ್ತ ಸಂಚರಿಸುತ್ತಾನೆ" ಎಂದು ಛಾಂದೋಗ್ಯ ಉಪನಿಷತ್ತು (೮–೧೨–೩) ಹೇಳುತ್ತದೆ.

ಆದರೆ ತತ್ತ್ವ ಎಂದರೆ ಬ್ರಹ್ಮತ್ವವನ್ನು ಅರಿತುಕೊಳ್ಳುವ ಸಿದ್ಧಪುರುಷನು ದೇವ ಸಮವಾಗಿ ಬಿಡುತ್ತಾನೆ. "ಬದುಕಿರುವ ವರೆಗೂ ಹೀಗೆ ಆಚರಿಸುತ್ತಿದ್ದರೆ, ಅವನು ಬ್ರಹ್ಮ ಲೋಕವನ್ನು ಹೊಂದುತ್ತಾನೆ; ಹಿಂದಿರುಗುವುದಿಲ್ಲ; ಖಂಡಿತವಾಗಿ ಹಿಂದಿರುಗುವುದಿಲ್ಲ." [ಛಾಂದೋಗ್ಯ ಉ. ೮–೧೫–೧] ಆದರೆ ದೇವಪೂಜೆಯನ್ನೂ ಮಾಡದೆ, ತತ್ತ್ವಜ್ಞಾನವನ್ನೂ ಹೊಂದದೆ, ಇರುವವನು ಏನನ್ನೂ ಪಡೆಯನು.

೬೪೪

ಚೇವಿನಿನಿಲ್ಲುಗಟ್ಟ ಚೆಪ್ಪೆನು ವೇಮನ, ಬಟ್ಟಬಯಲನುಂಡು ಬ್ರಹ್ಮಮನುಚು,
ಬುದ್ಧಿಕಲಿಗಿದಾನಿ ಬೊಂದಿ ಸುಖಿಂಪುಡೀ, ವಿಶ್ವದಾಭಿರಾಮ ವಿನುರ ವೇಮ.

ಕಿವಿಯ ಗೂಡು ಗೈದು, ಕೂಗಿದನು ವೇಮನ;
ಬಟ್ಟಬಯಲೊಳುಂಟು ಬ್ರಹ್ಮವೆಂದು;
ಹೊಳೆಯೆ ಬುದ್ಧಿಗದನೆ, ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು ವೇಮ.

(ಈ ಭೂತಗಳೆಲ್ಲ ಆಕಾಶದಿಂದಲೇ ಉತ್ಪನ್ನವಾಗುತ್ತವೆ" (ಛಾಂದೋಗ್ಯ ಉ. ೧—೯–೧) ಎಂದು ಹೇಳಿರುವುದರಿಂದ ಮತ್ತು ಆಕಾಶ ಎಂದರೆ ಬ್ರಹ್ಮ ಎಂಬ ಅರ್ಥವೂ ಇರುವುದರಿಂದ ಆಕಾಶವೇ ಬ್ರಹ್ಮವೆಂದು ಉಪನಿಷತ್ತಿನ ಸೂತ್ರಕಾರರು ಮತ್ತು ಭಾಷ್ಯಕಾರರಾದ ಶಂಕರ, ರಾಮಾನುಜರ ಅಭಿಪ್ರಾಯ. ಆದರೆ, ಆಕಾಶವು ಬ್ರಹ್ಮವೆಂಬ ಅರ್ಥವು

ಗೌಣವಾದುದು. 'ಈ ಭೂತಗಳೆಲ್ಲ ಆಕಾಶದಿಂದ ಉತ್ಪನ್ನವಾಗುತ್ತವೆ' ಎಂದು ಹೇಳಿದುದರಿಂದ, ಆಕಾಶ ಬ್ರಹ್ಮವೆಂದು ಹೇಳಲಾಗದು. ಏಕೆಂದರೆ, "ಆ. ಈ ಆತ್ಮನಿಂದ ಆಕಾಶವು ಉತ್ಪನ್ನವಾಯಿತು. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ " (ತೈತರೇಯ ಉ. ೨. ೧] ಎಂದು ಹೇಳಿರುವುದರಿಂದ ಬ್ರಹ್ಮ ಬೇರೆ, ಆಕಾಶ ಬೇರೆ ಎಂದು ಅರ್ಥ ಮಾಡಬೇಕು. " ಬಯಲು ಬ್ರಹ್ಮವೆಂದು ಭಾಷ್ಯಗೆಯ್ಯುತಿಹರು| ಬಯಲು ತಾನದೆಂತು ಬ್ರಹ್ಮವಹುದು? || ಬ್ರಹ್ಮವಾದ ಬಯಲು ಭಾವದಲ್ಲಿ ಇರದೆ? ವಿಶ್ವದಾಭಿರಾಮ ಕೇಳು ವೇಮ||"]

ಬಯಲು ಎಂದರೆ ಆಕಾಶ. ಆಕಾಶದ ತನ್ಮಾತ್ರೆ ಶಬ್ದ! ಎಲ್ಲಿ ಶಬ್ದವುಂಟೋ ಅದು ವೆಲ್ಲ ಆಕಾಶ. ಹೃದಯದಲ್ಲಿ ಶಬ್ದವುಂಟು. ಅಂದಮೇಲೆ ಅಲ್ಲಿಆಕಾಶವೂ ಉಂಟು. ಆಕಾಶವೇ ಬ್ರಹ್ಮವಲ್ಲ. ಆಕಾಶದಲ್ಲಿ ಬ್ರಹ್ಮವುಂಟು. ಶಬ್ದ ಇಂದ್ರಿಯವಾದ ಕವಿಯನ್ನು ಆಧಾರ ಮಾಡಿಕೊಂಡು, ವೇಮನ ದೃಢವಿಶ್ವಾಸದಿಂದ ಸಾರಿ ಹೇಳುವ ಮಾತಿದು. ಬಟ್ಟ ಬಯಲಿನೊಳಗೆ ಬ್ರಹ್ಮ ಉಂಟು. ಯಾರ ಬುದ್ಧಿಗೆ ಈ ಸತ್ಯ ತಿಳಿಯುವುದೋ, ಅವರು ಅದನ್ನು ಹೊಂದಿ, ತೃಪ್ತಿ ಪಡೆಯುವರು.

೬೪೫

ಪೊಂಕಮುಗನು ಮನಸು ಪೋನಿಕ ಸರ್ವೇಶು, ವಂಕನಿಲ್ಪುವಾಡು ವಂಶಕರುಡು,
ವಂಕ ನಿಲ್ಪಕುನ್ನ ವಚ್ಚುನಾಪದವುಲು ? ವಿಶ್ವದಾಭಿರಾಮ ವಿನುರ ವೇಮ.

ಸೂಕ್ತಗೊಳಿಸಿ ಮನಸು ಸರ್ವೇಶ ಭಾವದಿ,
ವಕ್ರ ತೊಡೆಯುವವನ ವಂಶವೃದ್ಧಿ.
ವಕ್ರತೊಡೆಯುವನಕ ವರಿಸಬಹುದೆ ಪದವ ?
ವಿಶ್ವದಾಭಿರಾಮ ಕೇಳು ವೇಮ.

ಸರ್ವೇಶನೆಂಬ ವಿಶೇಷಣದಿಂದ ಸೂಚಿತವಾದ ವಿಶೇಷ್ಯವೇ ಬ್ರಹ್ಮ. ಬ್ರಹ್ಮಭಾವವೆಂದರೆ, ಸರ್ವ ಪ್ರಾಣಿಗಳನ್ನು ಸಮನಾಗಿ ಕಾಣುವುದು, ವೈಷಮ್ಯ ಕ್ರೂರತ್ವಗಳಿಲ್ಲದಿರುವುದು, ಸಕಲ ಸೃಷ್ಟಿ-ಸ್ಥಿತಿಲಯಗಳನ್ನು ಲೀಲಾಮಯವಾಗಿ ಕಾಣುವುದು, ಇತ್ಯಾದಿಯಾಗಿದೆ. ಬ್ರಹ್ಮಭಾವದಲ್ಲಿ ಮನಸ್ಸನ್ನು ಹೊಂದಿಸಬೇಕು.

ಸಮಾಧಿ ಸ್ಥಿತಿಯಲ್ಲಿಯ ಮನಸ್ಸಿನಲ್ಲಿ ಏಳುವ ತರಂಗಗಳನ್ನು ವಿವಿಧ ರೇಖೆಗಳಿಂದ ಸಾಂಕೇತಿಕವಾಗಿ ವ್ಯಕ್ತಗೊಳಿಸಬಹುದು. ನಿರ್ಗುಣ ಬ್ರಹ್ಮವನ್ನು ಹೊಂದುವ ಸ್ಥಿತಿಯನ್ನು ಸರಳ ರೇಖೆಯಿಂದ ಗುರುತಿಸುವಾ. ಇದುವೇ ಗಮ್ಯ ಪದವಿ. ಗಮ್ಯ ಪದವಿ ಮುಟ್ಟಬೇಕಾದರೆ, ಮನೋತರಂಗಗಳು ಸರಳ ರೇಖೆಯವಾಗಿರಬೇಕು. ಇಲ್ಲಿ ಸತ್ವ, ರಜಸ್ ಮತ್ತು ತಮಸ್ ಎಂಬ ತ್ರಿಗುಣಗಳ ಗೊಡವೆ ಇಲ್ಲ. ತ್ರಿಗುಣಾತೀತವನ್ನು ಗ್ರಹಿಸುವ ಸೂಕ್ಷ್ಮ ಸ್ಥಿತಿಯದು. ತ್ರಿಗುಣಗಳಲ್ಲಿ ಒಂದು, ಇನ್ನೆರಡಕ್ಕಿಂತ ಹೆಚ್ಚು ಪ್ರಬಲವಾಗಬಹುದು. ಇವುಗಳಿಂದಾಗಿ ಮನೋತರಂಗಗಳು ವಕ್ರವಾಗುತ್ತವೆ. ಈ ವಕ್ರತೆಯ ಪರಿಮಾಣವು ಹೆಚ್ಚು ಕಡಿಮೆಯಾಗಿರಬಹುದು. ಯಾವನು ಇಂಥ ವಕ್ರವನ್ನು ತೊಡೆಯುವನೋ, ಅವನು ಜನರೆನ್ನು ತನ್ನವರಾಗಿ ಕಾಣುವನು. ತಂದೆ–ಮಕ್ಕಳ ಸಂಬಂಧಕ್ಕೆ ಸಮನಾದ ಪ್ರೇಮಾದಿಗಳು ಮೂಡುತ್ತವೆ. ಇದರಿಂದ ಅವನ ವಂಶವೃದ್ಧಿಯಾದಂತೆ.

೬೪೬

ಉಂಡಿಯುಂಡಿ ಜ್ಞಾನಿ ಯುಗಮುಲುಚನಿಪೋವ, ಪ್ರಾಣಹಾನಿಲೇದು ಪ್ರಳಯಮುನನು,
ಪ್ರಾಣಹಾನಿಯೈನ ಬರಮಾತ್ಮ ಗಲಿಯುನು, ವಿಶ್ವದಾಭಿರಾಮ ವಿನುರ ವೇಮ.

ಉಂಟು ಉಂಟು ಜ್ಞಾನಿ, ಯುಗಯುಗಾದಿ ಕಳೆಯೆ,
ಪ್ರಾಣಹಾನಿಯಿಲ್ಲ ಪ್ರಳಯವಿರಲು;
ಪ್ರಾಣಹಾನಿಯಿರಲು ಪರಮಾತ್ಮ ಸೇರುವ.
ವಿಶ್ವದಾಭಿರಾಮ ಕೇಳು ವೇಮ.

ಯುಗವೆಂದರೆ ಅಧ್ಯಾತ್ಮಿಕ ಸಾಧನೆಯ ಒಂದು ಹಂತ. ಕೃತ, ತ್ರೇತ, ದ್ವಾಪರ ಯುಗಗಳು ಕಳೆದು ಕಲಿಯುಗವು ಪ್ರಾರಂಭವಾಗಿದೆಯೆಂಬ ಕಲ್ಪನೆ. ಎಷ್ಟೊಂದು ಯುಗಗಳು ಕಳೆದರೂ, ಜ್ಞಾನಿಗಳು ಹುಟ್ಟುತ್ತ ಬಂದಿದ್ದಾರೆ. ಶಿವ, ರಾಮ, ಕೃಷ್ಣ, ಬುದ್ಧರು ಆಯಾ ಯುಗದ ಜ್ಞಾನಿಗಳೆನ್ನಬಹುದು. ಬ್ರಹ್ಮಜ್ಞಾನವುಳ್ಳವರು ಜ್ಞಾನಿಗಳು. ಋಷಿ ಮುನಿಗಳು, ಯೋಗಿಗಳು, ಸಿದ್ಧರು, ಇವರೆಲ್ಲ ಜ್ಞಾನಿಗಳು.ಇವರು ತಮ್ಮ ಜನ್ಮ ಅರಿತಿರುತ್ತಾರೆಂದು ಗೀತಾಕಾರರು ಹೇಳುತ್ತಾರೆ:"ಎಲೈ ಅರ್ಜುನ,ನನಗೂ ನಿನಗೂ ಅನೇಕ ಜನ್ಮಗಳು ಕಳೆದು ಹೋದುವು; ಎಲೈ ಪರಂತಪನೆ, ನಾನು ಅವುಗಳನ್ನು ಅರಿತಿದ್ದೇನೆ, ನೀನು ತಿಳಿದಿಲ್ಲ.'

ಪ್ರಳಯ ಕ್ರಮ ಉತ್ಪತ್ತಿ ಕ್ರಮದ ವಿಪರ್ಯಯವಾಗಿದೆಯೆಂದು, ಬಾದರಾಯಣ ಸೂತ್ರ ಹೇಳುತ್ತದೆ. ಉತ್ಪತ್ತಿ ಕ್ರಮವನ್ನು ಪ್ರಶ್ನೋಪನಿಷತ್ತಿನಲ್ಲಿ ಹೀಗೆ ಹೇಳಲಾಗಿದೆ: "ಆ ಪುರುಷನು ಪ್ರಾಣವನ್ನು ಸೃಷ್ಟಿಸಿದನು. ಪ್ರಾಣನಿಂದ, ಆಕಾಶ, ವಾಯು, ಜ್ಯೋತಿ, ನೀರು,ಪೃಥ್ವಿ.....ಸೃಷ್ಟಿಸಿದನು" ಇದರ ವಿಪರೀತ ಕ್ರಮವೇ ಲಯ ಕ್ರಮವು. ಕಾರಣ, ಪ್ರಲಯವಾದರೂ ಪ್ರಾಣವಿರುವುದು. ಏಕೆಂದರೆ ಪೃಥಿವ್ಯಾದಿ ಪಂಚ ಭೂತಗಳಿಗೆ ಪ್ರಳಯ ಅನ್ವಯಿಸುತ್ತದೆ. ಪ್ರಳಯದಲ್ಲಿ ಪ್ರಾಣಹಾನಿ ಇಲ್ಲ.

ಜ್ಞಾನಿಯಾದವನಿಗೆ ಪ್ರಾಣಹಾನಿ ಆಗುವುದಾದರೆ, ಅವನು ಪರಮಾತ್ಮನನ್ನೇ ಸೇರುವನು.

ಭಗವದ್ಗೀತೆಯೂ ಇದನ್ನೇ ಸಾರುತ್ತದೆ: "ಆಸಕ್ತಿ- ಭಯ- ಕ್ರೋಧಗಳಿಲ್ಲದವರಾಗಿ,ನನ್ನಲ್ಲಿಯೇ ಮನಸ್ಸುಳ್ಳವರಾಗಿ, ನನ್ನನ್ನೇ ಆಶ್ರಯಿಸಿದವರಾಗಿ, ಅನೇಕರು ಜ್ಞಾನ ರೂಪವಾದ ತಪಸ್ಸಿನಿಂದ ಪವಿತ್ರರಾಗಿ,ನನ್ನ ಭಾವವನ್ನು ಹೊಂದಿರುತ್ತಾರೆ."

೬೪೭

ಗುರುವು ತಾನಯಿನನು ಹರುನಿದಾಜೂಪುನು, ಬ್ರಹ್ಮಲೋಕಮುದಗ ಬಾರಜೂಪು,
ಶಿಷ್ಯುನರಸಿಪಟ್ಟ ಚೀಂಕಟ ಬಾಪುರಾ, ವಿಶ್ವದಾಭಿರಾಮ ವಿನುರ ವೇಮ.

ಗುರುವೆ ತಾನಾಗುವ, ಹರನ ತೋರುವವನು;
ಬ್ರಹ್ಮಲೋಕವನೆ, ಪ್ರತ್ಯಕ್ಷಿಸುವ;
ಕಿಂಕರನ ಶೋಧಿಸಿ ಕತ್ತಲೆಯ ತೊಡೆವನು.
ವಿಶ್ವದಾಭಿರಾಮ ಕೇಳು ವೇಮ.

ಹರಃ ಎಂದರೆ ತೆಗೆದುಕೊಂಡೊಯ್ಯು. ಯಾವನು ಪಾಪಗಳನ್ನೂ ಚಿಂತೆಗಳನ್ನೂ ಕೊಂಡೊಯ್ಯುವನೋ, ಅವನು ಹರ. ನಮ್ಮ ಪಾಪಗಳನ್ನೂ, ಚಿಂತೆಗಳನ್ನೂ, ದೂರ ಗೊಳಿಸುವ ಮಾರ್ಗ ತಿಳಿಸಿ, ಅವುಗಳು ದೂರಾದ ಅನುಭವವನ್ನು ಹೊಂದುವಂತೆ ಮಾಡುವವನು ಗುರುವಾಗುವನು. ಗುರುವಾದವನು ಶಿಷ್ಯರಿಗೆ ಭವಹರನನ್ನು, ಬ್ರಹ್ಮನನ್ನು ತೋರಿಸಬೇಕು.

ಮುಕ್ತಿ ಪಡೆಯುವವನು ಹಲಲೋಕ ಅಂದರೆ ಬ್ರಹ್ಮಲೋಕವನ್ನು ತಲುಪಬೇಕಾಗುವುದು. ಏಕೆಂದರೆ ' ಹರ ' ಪುರುಷನ ಸೂಕ್ಷ್ಮತನು ಪದವಿಯಾಗಿದೆ. ಮರಣಾನಂತರ ಎಲ್ಲರೂ ಚಂದ್ರಲೋಕಕ್ಕೆ ಹೋಗುವರು. ಅಲ್ಲಿ ಅವರವರ ಕರ್ಮಾನುಸಾರ ಏರುವಿಕೆ ಇಳ್ಳವೆ ಇಳಿಯುವಿಕೆ (ಆರೋಹ ಇಲ್ಲವೆ ಅವರೋಹ) ಅನುಭವಿಸುವರು. ಆದರೆ ಯೋಗಿಗಳು ಬ್ರಹ್ಮಲೋಕ ಸೇರುವರು. ಇಂಥ ಬ್ರಹ್ಮಲೋಕವನ್ನು ಗುರು,ತತ್ತ್ವದರ್ಶನ ಸಾಧನದಿಂದ ತೋರಿಸಿಕೊಡುವನು.

ನಿಜವಾದ ಗುರು ಅರ್ಹ ಶಿಷ್ಯರನ್ನು ಹುಡುಕುತ್ತಿರುತ್ತಾನೆ. ಸಾಧನ ಗೆಯ್ಯಲು, ಪಾರ ಮುಟ್ಟುವವರೆಗೆ ಸಾಧನ ಮಂದುವರೆಸುವ ಮನಸ್ಸಿನ ಸಿದ್ಧತೆ, ಸ್ಥಿರತೆ, ಸಮತೆ ಇರುವವನನ್ನು ಗುರುತಿಸಿ, ' ರಹಸ್ಯ ವಿದ್ಯೆ ' ಯನ್ನು ತಿಳಿಸುವನು.

೬೪೮

ನೀಳ್ಳು ಪೋಸಿ ಕಡಿಗಿ ನಿತ್ಯಂಬು ಶೋಧಿಂಚಿ, ಕೂಡುಬೆಟ್ಟವೀದ ಗೋಕಗಟ್ಟ,
ಏವಿಪಾಟ್ಲು ಬಡುದು ರೀದೇಹಮುನ ಕಿಲ, ವಿಶ್ವದಾಭಿರಾಮ ವಿನುರ ವೇಮ.

ನೀರು ಸುರಿದು ತೊಳೆದು ನಿತ್ಯ ಶೋಧಿಸುತ್ತ,
ಕೂಳು ಹಾಕಿ ಮೇಲೆ ಕಟ್ಟಿ ಬಟ್ಟೆ,
ಏನು ಪಾಡು ಪಡುವ, ಈ ದೇಹಕ್ಕಾಗಿ ?
ವಿಶ್ವದಾಭಿರಾಮ ಕೇಳು ವೇಮ.

ಅಷ್ಟಾಂಗ ಯೋಗ ಸಾಧನದಲ್ಲಿ ಯಮ-ನಿಯಮಾದಿಗಳಲ್ಲಿ ಒಳಗೊಂಡ ಶೌಚದ ಅಂಗವಾಗಿ ಸ್ನಾನವಿದೆಯಷ್ಟೇ. ಶರೀರದ ಶೌಚವನ್ನು ಬಾಹ್ಯ ಶೌಚ, ಅಂತರ್‌ಶೌಚ ಎಂದು ವಿಂಗಡಿಸಬಹುದು. ಅವಶ್ಯವಾದ ಶೌಚವೆಂದರೆ ಅಂತರ್‌ಶೌಚ. ಮನಸ್ಸಿನ ಮಲ ಹರಣ ಮಾಡಲು ಮಂತ್ರ, ಧ್ಯಾನ ಮಾಡುವುದರಿಂದ ಅಂತಃಶುದ್ಧಿಯಾಗುವುದು. ಮಂತ್ರವೆಂದರೆ ಹಲವು ಸ್ವರದ ಶಬ್ದಗಳನ್ನು ಉಚ್ಚರಿಸುವಾಗ ನಿರ್ದಿಷ್ಟ ಪ್ರಮಾಣದ ವಾಯು ಶರೀರದಲ್ಲಿ ವಿಶಿಷ್ಟ ಗತಿಯಲ್ಲಿ ಸೇರಿ ಬದಲಾವಣೆಯನ್ನು ಮಾಡುವಂತಹ ಶಬ್ದ

ಸಮುಚ್ಚಯ ಅಂತಃಶುದ್ಧಿ ಪ್ರಧಾನ; ಬಾಹ್ಯ ಶುದ್ಧಿ ಗೌಣ. ಬಾಹ್ಯಶೌಚದಲ್ಲಿ ಶರೀರಕ್ಕೆ ಮಣ್ಣು ಮೆದ್ದಿ, ಮತ್ತು ನೀರಿನಿಂದ ತೊಳೆದು ಶುದ್ಧಿಗೊಳಿಸುವುದು; ಮಲ ಹರಣ ಮಾಡುವುದು. ಇದಕ್ಕೆ ಸ್ವಚ್ಛ, ಶುದ್ಧ ನೀರು ಬೇಕು. ' ಪವಿತ್ರ ', ' ಹೊಲೆ ' ಎಂಬ ಭಾವ ಇಲ್ಲ.

ವಿಚಿತ್ರವೆಂದರೆ, ಜನರು ದೇಹದ ಬಾಹ್ಯ ಶೌಚಕ್ಕೇ ಅಂಟಿಕೊಂಡು, ಅಂತರ್‌ಶೌಚ ಮರೆಯುತ್ತಿದ್ದಾರೆ. ದೇಹವು ಅಧ್ಯಾತ್ಮಿಕ ದೃಷ್ಟಿಯಲ್ಲಿ ಕ್ಷಣಿಕ, ನಶ್ವರ. ಇದನ್ನು ಕಾಪಾಡಲು ನೀರು ಸುರುವಿ, ದಿನಾಲು ಹಸನುಗೊಳಿಸಿ, ಅನ್ನ ಉಂಡು, ಮತ್ತೆ ಬಟ್ಟೆ ಬರೆ ಸುತ್ತಿ, ಎಷ್ಟೋ ಪಾಡು ಪಡುವ! ಧರ್ಮ ವಿರೋಧಿ ಆಚರಣೆಯೇ ಲಜ್ಜೆ. ಇಂಥ ಲಜ್ಜೆ ತೊರೆಯಬೇಕು. ಅರಿವೆಯಿಂದ ಅವಯವ ಮುಚ್ಚಿಕೊಂಡರೆ, ಲಜ್ಜೆ ಹೋಗದು. ಮನಸ್ಸಿನ ಲಜ್ಜೆ ತೊರೆಯಬೇಕು.

(ಹೋಲಿಸಿ ನೋಡಿರಿ :-

(ತೊಲಗುವರು ಕಡೆ ಕಡೆಗೆ ತಾ ಹೊಲೆ | ಹೊಲೆಯೆನುತ ಕಳವಳಿಸಿ ಮೂತ್ರದ|
ಬಿಲದೊಳಗೆ ಬಂದಿಹುದ ಕಾಣದೆ ಬರಿದೆ ಮನನೊಂದು|| ಜಲದೊಳಗೆ ಮುಳುಗಿದರೆ ತೊಲಗದು| ಹೊಲೆಗೆಲಸವೀ ದೇಹದೊಳು, ನೀ|
ನೆಲೆಸಿರಲು ಹೊಲೆಯುಂಟೆ ? ರಕ್ಷಿಸು ನಮ್ಮನನವರತ ||

ಕನಕದಾಸರು–ಹರಿಭಕ್ತಸಾರ– ೯೯)

೬೪೯

ಲೇಡು ಲೇಡು ನಿನನು ಲೇಡುಲೇನೇಲೇಡು, ಕಾಡು ಕಾಡಟನ್ನ ಗಾನೆಕಾಡು.
ತೋಡು ತೋಡನಿನನು ತೋಡನೇ ತೋಡೌನು, ವಿಶ್ವದಾಭಿರಾಮ ವಿನುರ ವೇಮ.

ಇಲ್ಲ ಇಲ್ಲವೆನಲು ಇಲ್ಲವೇನು ಇಲ್ಲ;
ಅಲ್ಲ ಅಲ್ಲ ವೆನಲು ಅಲ್ಲವಲ್ಲ;
ಸೇರು ಸೇರು ಎನಲು ಸೇರಿ ಸೇರುತಿಹರು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಸರ್ವಶಕ್ತನಾದ, ಸರ್ವಜ್ಞನಾದ ಪರಮಾತ್ಮ, ಪರಶಿವ, ಪುರುಷೋತ್ತಮ ಇಲ್ಲವೆ ಕೃಷ್ಣ ಇರುವನೆಂಬ ಭಾವನೆ ಇಟ್ಟು ನಡೆದರೆ, ಅದನ್ನು ಅರಿತುಕೊಳ್ಳಬಹುದು. ಅಂಥ ಯಾವುದೂ ಇಲ್ಲವೆಂದು ಗ್ರಹಿಸಿ ಸಾಗಿದರೆ, ಅದು ಇಲ್ಲವೆಂದೇ ಎನ್ನಿಸುವುದು. ಏಕೆಂದರೆ, ಪರಮಾತ್ಮ ನಿಮಿತ್ತ ಮಾತ್ರನಾಗಿ ಈ ಸಂಸಾರ ನಡೆಸುತ್ತಾನೆ. ಜೀವನು ತನ್ನ ಪಾಪ ಪುಣ್ಯಗಳ ಸಂಕಲ್ಪ ಮಾಡುವಲ್ಲಿ ಮತ್ತು ಅವುಗಳ ಫಲ ಪಡೆಯಲು ಶರೀರಾದಿ ಧಾರಣ ಮಾಡುವಲ್ಲಿ, ಪೂರ್ಣ ಸ್ವತಂತ್ರನಾಗಿದ್ದಾನೆ. ಪಾಪ ಮಾಡುತ್ತ ಹೋದರೆ, ಪಾಪ ಕೂಡಿ ಬೀಳುತ್ತ ಹೋಗುತ್ತದೆ. ಪಾಪದ ಫಲ ಕಷ್ಟ ಸೋಸುವುದು. ಪಾಪದ ಫಲವನ್ನು ಕರ್ತೃವು ಅನುಭವಿಸಬೇಕು. ಆರು ದಿನದ ಪಾಪವನ್ನು ಏಳನೆಯ ದಿನ ದೇವರು ಕ್ಷಮೆ ಮಾಡುವುದಿಲ್ಲ. ಆದರೆ, ಆರು ದಿನದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಗಿ, ಮನಸ್ಸು ಪಾಪ

ದಿಂದ ಪರಾವೃತ್ತವಾಗಿ ಪುಣ್ಯ ಕರ್ಮದತ್ತ, ಅನಂತರ ಪಾಪ-ಪುಣ್ಯಗಳ ಕಾಮ್ಯ ಫಲ ಮೀರಿದ, ನಿಷ್ಕಾಮ ಕರ್ಮದತ್ತ ಮನಸ್ಸು ತಿರುಗಿದರೆ, ಮುಂದೆ ಜೀವಕ್ಕೆ ಕರ್ಮಫಲ ಭೋಗದ ಗೊಡವೆಯಿಲ್ಲ.

ಇದು ಪರಮಾತ್ಮನಿಂದ ಆದುದಲ್ಲ; ಸೃಷ್ಟಿ ಪರಮಾತ್ಮನಿಂದಾದುದಲ್ಲ. ಕೇವಲ ಕಾಮವೇ ಸೃಷ್ಟಿಗೆ ಮೂಲ ಎಂದು ವಾದಿಸಿದರೆ, ಅವರಿಗೆ ಅದೆಲ್ಲ 'ಅಲ್ಲ' ವೆನ್ನಿಸುತ್ತದೆ.

ಆದರೆ ಯೋಗ ದೃಷ್ಟಿಯುಳ್ಳವರು, ಪರಮಾತ್ಮ 'ಸತ್ಯ' (ಎಂದಿಗೂ ಇರುವವ) ನೆಂದು ತಿಳಿಯುತ್ತಾರೆ. ಅವನು ಹೃದಯಾಕಾಶದಲ್ಲಿ ವಾಸಿಸುವವನೆಂದೂ, ಶರೀರದ ಉಪಾಧಿಯಿಂದ ಪರಬ್ರಹ್ಮ ಆತ್ಮಗಳು ಭಿನ್ನವಾಗಿವೆಯಷ್ಟೇ. ಪರಬ್ರಹ್ಮನಲ್ಲಿ ಸೇರು(ಯುಜ್ ಯೋಗ ಸೇರುವಿಕೆ) ಎಂದು ಉಪಾಸನೆ ಮಾಡುವ ಸಾಧಕನು ಯೋಗಿಯಾಗುವನು.

೬೫೦

ಲೋಭ ಮೋಹಮುಲನು ಬ್ರಾಭವಂಬುಲು ತಪ್ಪು, ದಲಚಿನಪನುಲೆಲ್ಲ ದಪ್ಪಿಚನುನು,
ತಾಮೊಕಟ ತಲಚಿನ ದೈವವೊಂಡುದಲಂಚು, ವಿಶ್ವದಾಭಿರಾಮ ವಿನುರ ವೇಮ.

ಲೋಭ ಮೋಹದಿಂದ ಲಾಭ ಪ್ರಾಪ್ತಿಯಿರದು.
ನೆನೆದ ಕಾರ್ಯವೆಲ್ಲ ನೇರವೇರವು.
ತಾವೊಂದು ಬಗೆದರೆ ದೈವದ ಬಗೆಯೊಂದು.
ವಿಶ್ವದಾಭಿರಾಮ ಕೇಳು ವೇಮ.

ಬೇರೆಯವರಿಗೆ ಸಲ್ಲಬೇಕಾದ ವಸ್ತುವನ್ನು ಅಪಹರಿಸುವುದು ಚೌರ್ಯ; ಕಳವು. ಆ ವಸ್ತುವನ್ನು ಪಡೆಯಬೇಕೆಂಬ ಆಶೆ ಕಳವಿಗೆ ಮೂಲ. ಆ ವಸ್ತುವಿನ ಬಗೆಗೆ ಮುಗ್ಧರಾಗುವದು ಮೋಹ. ಆ ವಸ್ತುವಿನ ಅತಿ ಸಂಗ್ರಹ, ಇಲ್ಲವೆ ಇತರರಿಗೆ ಅತ್ಯವಶ್ಯವಿರುವಾಗ ಸಹ ನೀಡದಿರುವ ಸ್ವಭಾವಕ್ಕೆ ಮೂಲವಾಗಿರುವುದೇ ಮೋಹ. ಲೋಭ-ಮೋಹಗಳಿಂದ ಲಾಭವಾಗುವದಿಲ್ಲ. ಏಕೆಂದರೆ ಲೋಭದಿಂದ ವಸ್ತುವನ್ನು ಬಿಡಬಾರದೆಂದು ಬಯಸಿದರೆ, ಇಲ್ಲವೆ ಮೋಹದಿಂದ ಅದಕ್ಕಂಟಿಕೊಂಡರೆ, ಆ ವಸ್ತು ನಮ್ಮದಾಗದು. ವಿಧಿಯ ಕೈವಾಡವೊಂದು ಇದೆ.

ಆಗುವ ಕಾರ್ಯಗಳು ವಿಧಿನಿಯಮದಂತೆ ನಡೆಯುತ್ತವೆ. ನಮ್ಮ ಬಯಕೆಯಂತೆ ಕಾರ್ಯಗಳು ಆಗದಿರುವದಕ್ಕೆ ಇದೇ ಮೂಲ. ದೈವದೃಷ್ಟಿಯಂತೆ ಕಾರ್ಯಗಳು ನಡೆಯುತ್ತವೆ. ಜೀವ ದೃಷ್ಟಿಯಿಂದ ಅಲ್ಲ. ತಾನೊಂದು ಬಗೆದರೆ ದೈವದ ಬಗೆಯೊಂದು!

(ಶ್ರೀ ಕೃಷ್ಣನ ಬೋಧೆಯನ್ನು ಹೋಲಿಸಿ ನೋಡಿರಿ:

"ಕಾಮ ಕ್ರೋಧ ಮತ್ತು ಲೋಭ-ಈ ಮೂರು ವಿಧವಾದ ನರಕದ್ವಾರವು ಆತ್ಮ ನಾಶಕ್ಕೆ ಕಾರಣ. ಆದುದರಿಂದ ಈ ಮೂರನ್ನು ಬಿಡಬೇಕು.

" ಎಲೈ ಅರ್ಜುನ, ಈ ಮೂರು ತಮೋದ್ವಾರಗಳಿಂದ ಬಿಡಲ್ಪಟ್ಟ ಮನುಷ್ಯನು ತನ್ನ ಶ್ರೇಯಸ್ಸನ್ನು ಮಾಡಿಕೊಳ್ಳುತ್ತಾನೆ.ಅದರಿಂದ ಪರಮಗತಿಯನ್ನು ಹೊಂದುತ್ತಾನೆ. "

– ಭಗವದ್ಗೀತಾ -೧೬-೨೧, ೨೨)

೬೫೦

ತಾಮುದಿನಕ ಯಟುಲೆ ಧರ್ಮಂಬುಜೇಯಕ, ಕೊಡುಕುಲಕನಿ ಧನಮುಗೂಡೆಬೆಟ್ಟ,
ತೆಲಿಯ ಜೆಪ್ಪಲೇಕ ತೀರಿಪೋವುನುದಾನು, ವಿಶ್ವದಾಭಿರಾಮ ವಿನುರ ವೇಮ-

ತಾವು ತಿನ್ನಲಿಲ್ಲ; ಧರ್ಮ ಮಾಡಲಿಲ್ಲ.
ಸುತರಿಗಾಗಿ ಸೊತ್ತು ಶೇಖರಿಸಿ,
ತಿಳಿಸಿ ಹೇಳದಂತೆ ತೀರಿಹೋಹನವನು.
ವಿಶ್ವದಾಭಿರಾಮ ಕೇಳು ವೇಮ

ಲೋಭಿಯಾದವರು ತಾವು ಪಡೆದ ಸಂಪತ್ತನ್ನು, ತಾವೂ ಭೋಗಿಸಿ ಆನಂದ ಪಡುವುದಿಲ್ಲ; ಇಲ್ಲವೆ ಇಲ್ಲದವರಿಗೆ ನೀಡಿ, ಅವರು ಆನಂದ ಪಡುವುದನ್ನು ಕಂಡು, ತಾವು ಸಂತೋಷಿಸುವುದಿಲ್ಲ. ಕೊಡುವುದರಿಂದಾಗುವ ಸುಖವನ್ನು ಅನುಭವಿಸಿ ತಿಳಿಯದವರು ತಾವು ಸಂಪಾದಿಸಿದ ಧನವನ್ನು ಮುಂದೆ ಮಕ್ಕಳು, ವಂಶದವರು ಅನುಭವಿಸಲೆಂದು ಕೂಡಿಡುತ್ತಾರೆ; ಬಚ್ಚಿಡುತ್ತಾರೆ. ಧರ್ಮಕಾರ್ಯಗಳನ್ನೂ ಸಹ ಮಾಡುವುದಿಲ್ಲ.

ಕೊನೆಗೆ ಪರಿಣಾಮವೇನು ? ತಮಗರಿವಿಲ್ಲದಂತೆ ಯಾವುದೋ ಅಕಾಲದಲ್ಲಿ ಮರಣಕ್ಕೆ ತುತ್ತಾಗುತ್ತಾರೆ. ತಾವು ಹೂತಿಟ್ಟ ಹಣವನ್ನು ಕುರಿತು, ಅದನ್ನು ಹುಗಿದಿಟ್ಟ ಸ್ಥಾನವನ್ನು ಕುರಿತು, ತಮ್ಮ ಮಕ್ಕಳಿಗೆ ಸಹ ಹೇಳದಂತೆ ಸತ್ತು ಹೋಗುತ್ತಾರೆ.

(ಶ್ರೀ ತಿರುವಳ್ಳುವರು ಅವರೆ ಅಭಿಪ್ರಾಯ ಹೋಲಿಸಿ ನೋಡಿರಿ :
" ಇತ್ತು ನಲಿಯುವ ಸುಖವನರಿಯರೋ ಏನೋ ?
ತಮ್ಮೊಡವೆಯವನು ಬಚ್ಚಿಟ್ಟ ಕಳೆವ ಕಡುಮನಸಿನವರು. "

—ತಿರುಕ್ಕುರಳ್ ೨೩-೬.

೬೫೨

ದಾಚಿನಧನಮುನಕು, ದಾರಯುಗೊಡುಕುನು, ವಾಂಛಬಡುಟಿಕಾನಿ ವಟ್ಟಿ ಭ್ರನುಲು,
ಭಾಗ್ಯಹೀನುಲಕುನು ಫಲಮುಲಭಿಂಚುನಾ ? ವಿಶ್ವದಾಭಿರಾಮ ವಿನುರ ವೇಮ.

ಶೇಖರಿಸಿದ ಧನಕೆ ಸತಿ-ಸುತಾದಿಯೆಲ್ಲ
ಆಶೆಪಡುವರಷ್ಟೆ ಅದು ಭ್ರಮೆಯು.
ಭಾಗ್ಯಹೀನರಿರಲು, ಫಲವು ಲಭ್ಯವೆಂತು. ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಹಣ ಸಂಪಾದಿಸುತ್ತಾನೆ. ನಿಜವಾಗಿ ಸಂಪತ್ತು ಉಂಟು ಮಾಡುವ ವಿಧಿಯಿಂದ, ಅವನಲ್ಲಿ ಪ್ರಯತ್ನಶೀಲತೆ ಉಂಟಾಗಿರುತ್ತದೆ. ಅವನ ಹೆಂಡಿರು ಮಕ್ಕಳು, ಕೂಡಿಟ್ಟ ಆ ನಿಧಿಯು ತಮ್ಮ ಉಪಭೋಗಕ್ಕೆ ದೊರೆಯುವುದೆಂದು, ಆಶೆ ಮಾಡಿಕೊಂಡಿರುತ್ತಾರೆ. ಆದರೆ ಇಂಥ ಆಶೆ ಕೇವಲ ಮನಸ್ಸಿನ ಭ್ರಮೆಯಷ್ಟೇ. ಏಕೆಂದರೆ,ಹಿರಿಯರು ಗಳಿಸಿಟ್ಟ ನಿಧಿಯು, ಹೆಂಡಿರು-ಮಕ್ಕಳ ಪಾಲು ಎಂದು ನಾವು ನಿರ್ಧರಿಸುತ್ತೇವೆ. ಆದರೆ ವಿಧಿಯು ಗೆಯ್ಯುವ ಪಾಲು ಬೇರೆಯಾಗಿರಬಹುದು. ಯಾರ ಉಪಭೋಗಕ್ಕಾಗಿ ಆ ನಿಧಿಯನ್ನು ತೆಗೆದಿರಿಸುವೆವೋ, ಅವರ ಕರ್ಮ-ಫಲ ನಿಶ್ಚಯದ ಮೇಲೆ, ವಿಧಿ ಸಂಕಲ್ಪ, ವ್ಯಕ್ತಿ ಸಂಕಲ್ಪ ಏಕವೋ, ಭಿನ್ನವೋ ಎಂಬುದು ನಿಶ್ಚಯವಾಗುವುದು. ಏಕೆಂದರೆ ' ಬ್ರಹ್ಮ ವಿಧಿಗೆ ಕರ್ತ; ಕರ್ಮಕೆ ತಾ ಕರ್ತ. '

ಫಲವನ್ನು ಪಡೆಯಬೇಕೆಂದಿರುವ ಹೆಂಡಿರು ಮಕ್ಕಳು ಪುಣ್ಯಕರ್ಮಿಗಳಾಗಿದ್ದರೆ, ಅವರಿಗೆ ಫಲ ದೊರಕಬಹುದು. ಅವರು ತಮ್ಮ ಪಾಪ ಕರ್ಮಗಳ ಫಲವಾಗಿ ಭಾಗ್ಯ ಹೀನರಾಗಿದ್ದರೆ, ಸುಖದ ಫಲವನ್ನನುಭವಿಸಲು ಹೇಗೆ ಶಕ್ತರಾಗುವರು ?

೬೫೩

ಭಾಗ್ಯಹೀನುನಕುನು ಬರುಸವೇದಿ ದೊರುಕಕ, ನದಿಯು ನಿಲುವದಪುಡೆ ವದಲುಗಾನಿ,
ವಾನತೋಡವಚ್ಚು ವಡಗಂಡ್ಲು ನಿಲ್ಚುನಾ ? ವಿಶ್ವದಾಭಿರಾಮ ವಿನುರ ವೇಮ.

ಭಾಗ್ಯಹೀನವಿಹಗೆ ಪರುಸವೇದಿ ದೊರೆಯೆ,
ಹೊಂದಿ ಇರುವುದಿರಲಿ ಹೊರಟಿತಷ್ಟೆ;
ಬರೆಲು ಮಳೆಯ ಜೊತೆಗೆ, ಬಾಳದಾಲಿಕಲ್ಲು.
ವಿಶ್ವದಾಭಿರಾಮ ಕೇಳು ವೇಮ.

ಪಾಪ ಇಲ್ಲವೆ ಪುಣ್ಯ ಕರ್ಮಗಳ ಫಲವು ಮಾಡಿದವನಿಗೇ,ನೇರವಾಗಿ ಸೇರುವದಕ್ಕೆ ಹೇತುವಾಗಿರುವದೇ, ವಿಧಿ ಇಲ್ಲವೆ ದೈವ. ದೈವ ಅನುಕೂಲವಾಗಿರುವುದೇ ಭಾಗ್ಯ. ದೈವ ಪ್ರತಿಕೂಲವಾಗಿದ್ದರೆ, ಭಾಗ್ಯಹೀನತೆ.

ಪರುಷವೇದಿ ಎಂದರೆ ಕೇಳು ಧಾತುವಿನಿಂದ ಬಂಗಾರು ತಯ್ಯಾರಿಸುವ ತಂತ್ರ. ಪರುಸವೇದಿ ಎಂದರೆ ಪರುಷಮಣಿ ಎಂದೂ ಅರ್ಥ. ಪರುಷ ಮಣಿಯ ಸ್ಪರ್ಶದಿಂದ ಲೋಹವು ಸ್ವರ್ಣವಾಗುವದೆಂಬ ಬಣ್ಣನೆ ಬಹಳಷ್ಟು ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುತ್ತದೆ. ಆದರೆ ಪರುಷ ಮಣಿ ದೊರಕಿಸುವವರೆಲ್ಲಾ ಭಾಗ್ಯವಂತರೇನೂ ಅಲ್ಲ. ಪರುಷಮಣಿ ಪಡೆದರೂ ಭಾಗ್ಯವಿಹೀನನಾಗಿದ್ದರೆ, ಅದನ್ನು ಕಳೆದುಕೊಳ್ಳುವನು. ಹೇಗೆಂದರೆ, ಆಣೇಕಲ್ಲು ಮಳೆಯ ಜೊತೆಗೆ ಬರುತ್ತದೆ. ಆದರೆ ಆಣೇಕಲ್ಲಾಗಿ ಹೆಚ್ಚು ಹೊತ್ತು ಉಳಿಯದು. ಆಣೇಕಲ್ಲಿನಂತೆ ಧನವೂ ಹೆಚ್ಚು ಹೊತ್ತು ಹತ್ತಿರ ಉಳಿಯದು. ಕರಗಿ ಹೋಗುತ್ತದೆ, ಎಂದು ತಿಳಿದು ಬಾಳಬೇಕು.

೬೫೪

ಧನವಿಹೀನುಡೈನ ತಂಡ್ರಿಗರ್ಭಂಬುನ, ಭಾಗ್ಯಪುರುಷುಡೊಕಡು ಪರಗಬುಟ್ಟ,
ಬಹುಳ ಧನಮುಗಲ್ಗಿ ಪರುಲಕುಪಕರಿಂಚು, ವಿಶ್ವದಾಭಿರಾಮ ವಿನುರ ವೇಮ.

ಧನವಿಹೀನನಾದ ತಂದೆ ಗರ್ಭದಲ್ಲಿ,
ಭಾಗ್ಯಪುರುಷನೋರ್ವ, ಬರಲು ಹುಟ್ಟಿ,
ಬಹಳ ಧನವಹೊಂದಿ ಪರರಿಗುಪಕರಿಸುವ.
ವಿಶ್ವದಾಭಿರಾಮ ಕೇಳು ವೇಮ.

ಶ್ರೀಮಂತರ ಹೊಟ್ಟೆಯಲ್ಲಿ ಹುಟ್ಟಿದವರು, ರಾಜಕುಟುಂಬದಲ್ಲಿ ಜನ್ಮ ತಾಳಿದವರು, ಸಮಾಜದಲ್ಲಿ ಮೇಲಿನ ಸ್ಥಾನಗಳಿಸಿದ ವರ್ಣಗಳಲ್ಲಿ ಜನ್ಮ ಪಡೆದವರು ಭಾಗ್ಯ ಪುರುಷರೆಂದು ಸಾಮಾನ್ಯ ಭಾವನೆ. ಆದರೆ ಇದು ಸತ್ಯವಲ್ಲ. ಯಾವನೊಬ್ಬನಿಗೆ ಭೋಗ—ಭಾಗ್ಯವಾಗಲಿ, ನಿತ್ಯಾನಂದವಾಗಲಿ ದೊರಕುವದು, ಅವನ ಪ್ರಾರಬ್ಧ ಕರ್ಮದಿಂದ. ಅವನು ಗೆಯ್ದ, ಕರ್ಮದ ಫಲವದು. ಜನ್ಮದಿಂದ, ಪರಿಸರದಿಂದ ಭಾಗ್ಯ ನಿರ್ಧಾರವಾಗದು. ರಾಜನ ಮಗನಾಗಿ ಜನಿಸಿ, ಕರ್ಮ ಫಲದಿಂದ ರಂಕನಾಗಬಹುದು. ಪಂಡಿತನ ಮಗ ಪೆದ್ದನಾಗಬಹುದು.

ಆದರೆ ಭಾಗ್ಯವಂತನಾದ ಪುರುಷನ ತಂದೆ ಬಡವನಾಗಿರಲಿ; ತಂದೆಯ ಬಳಿ ಬಿಡಿಕಾಸೂ ಇಲ್ಲದಿರಲಿ; ಅವನಿಗೆ ದೈವಾನುಗ್ರಹವಾಗುವುದು. ಧನಾರ್ಜನೆಯ ಕರ್ಮನಿರ್ವಹಣೆಯಲ್ಲಿ ಅವನು ನಿರತನಾಗುವನು. ಧನ ಹೊಂದುವನು. ಅವನು ಹೊಂದಿದ ಧನ ಅವನನ್ನು ದುರ್ಮಾರ್ಗಕ್ಕೆ ಒಯ್ಯದು. ಏಕೆಂದರೆ ಅವನು ಹಣದ ಮರ್ಯಾದೆಯನ್ನು ತಿಳಿದು ಆದರೆ ಪ್ರಭಾವಕ್ಕೆ ತಾನು ಸಿಗದೆ, ಒಳಿತಿನ ಕಾರ್ಯಕ್ಕೆ ಧನ ವಿನಿಯೋಗವಾಗುವಂತೆ, ನಿಯಂತ್ರಿಸುತ್ತಾನೆ. ಹೀಗೆ, ಪರರಿಗೆ ಉಪಕಾರ ಗೆಯ್ಯುವನು.

೬೫೫

ಇಹಮುನಂದು ಬಾಧಲೆನ್ನೆ ನಬಡವಚ್ಚು, ಯಮುನಿಬಾಧಲೇಕ ಯಮುರ ವಲೆನು,
ಪರಮುನ ವ್ಯಥಲೇಕ ಬ್ರತುಕುಡೀನರುಲಾರ. ವಿಶ್ವದಾಭಿರಾಮ ವಿನುರ ವೇಮ

ಇಹದ ಬಾಧೆಯೆಷ್ಟೊ, ಇರಲು ಬಹುದು ತಾಳಿ,
ಯಮನ ಬಾಧೆ ಇರದೆ, ಅಮರರಂತೆ.
ಪರದಿ ವ್ಯಥೆ ಇರದ, ಬದುಕರಿಯಿರಿ ನರರೆ.
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆಯ ಕಾರ್ಯಗಳನ್ನು ಲೋಕದ ಜನರು ಮೆಚ್ಚುದಿರಬಹುದು. ಒಳ್ಳೆಯ ನಡತೆಯಿಂದ ಕಷ್ಟ ಎದುರಿಸುವ ಪ್ರಸಂಗ ಸಹ ಬರಬಹುದು. ಹೇಗೆಂದರೆ, ಆಳುವ ವರ್ಗ ದೇವರ ಹೆಸರೆತ್ತುವದು, ದ್ರೋಹ ಎಂದು ಸಾರಿದಾಗ, ದೇವಧ್ಯಾನ ಮಾಡುವವರಿಗೂ ಕಷ್ಟ ಬರಬಹುದು. ಇಲ್ಲವೆ ಕಪಟಿಯಾದವನೊಬ್ಬ ಮರೆ–ಮೋಸದಿಂದ ಜನರನ್ನು ವಂಚಿಸುತ್ತಿದ್ದರೆ, ಅಂಥವನ ವಿಷಯದಲ್ಲಿ ನಿಜವನ್ನು ಬಯಲಿಗೆಳೆದರೆ, ಅವನ ಸಿಟ್ಟು ಕ್ರೂರ ಪ್ರತಿಕ್ರಿಯೆಗಳನ್ನು ಎದುರಿಸಬೇಕಾಗುವದು. ಪರಿಸ್ಥಿತಿ ಹೀಗಿದ್ದರೂ, ತಾಳಿಕೊಂಡು ಬಾಳಬಹುದಾದಂಥವುಗಳಾಗಿರುತ್ತವೆ.

ಸತ್ಕಾರ್ಯಗಳನ್ನೇ ಮಾಡುವುದರಲ್ಲಿ ಮಗ್ನರಾದವರು, ತಮ್ಮ ಪುಣ್ಯ ಫಲ ನಿಮಿತ್ತವಾಗಿ ಚಂದ್ರಲೋಕಕ್ಕೆ ತೆರಳಿ, ಅಲ್ಲಿಂದ ಬ್ರಹ್ಮ ಲೋಕಕ್ಕೆ ತೆರಳುವರು. ಇಲ್ಲಿ ಯಮಬಾಧೆಯಿಲ್ಲ. ಮರಣವಿಲ್ಲ. ಆನಂದಮಯವಾದದ್ದು ಇದು. ಲೋಕದ ಜನರೆಲ್ಲ ಕೇಳಿಃ ನೀವು ಬದುಕುವ ಇಚ್ಛೆಯುಳ್ಳವರಾಗಿದ್ದರೆ, ಫಲಾಕಾಂಕ್ಷೆಗಳಾಗಿದ್ದರೆ. ಈ ರೀತಿ ಬದುಕಲು ಕಲಿಯಿರಿ.

ಇನ್ನು ವಿಷಯಗಳಲ್ಲಿ ನಿರಾಸಕ್ತರಾಗಿ, ಕರ್ಮದಲ್ಲಿ ನಿಷ್ಕಾಮಿಗಳಾದರಂತೂ ಬ್ರಹ್ಮವೇ ಆಗುವಿರಿ.

೬೫೬

ಧರ್ಮಕಂಟಕುಂಡು ಧನಮುಚೇ ಗರ್ವಿಂಚಿ, ಸಕಲಸಂಪದಲನು ಚಾರಜೊರಲಿ,
ಕಡಕುದಾನು ಮೇಲು ಗಾನಕಚಿಡಿಪೋವು, ವಿಶ್ವದಾಭಿರಾಮ ವಿನುರ ವೇಮ.

ಧರ್ಮಕಂಟಕನವ ಧನದಿ ಗರ್ವ ತಾಳಿ,
ಸಕಲಸಂಪದದಲಿ ಸುತ್ತಿಸುರುಳಿ,
ಕಡೆಗೆ ತಾನು ಮೇಲ್ಮೆ ಕಾಣದೆ ಕೆಡುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಧೃ (ಧಾರಣ ಮಾಡು) ಎಂಬ ಧಾತುವಿಗೆ ಮನ್ ಎಂಬ ಪ್ರತ್ಯಯ ಸೇರಿ ಉಂಟಾದ ಶಬ್ದವೇ ಧರ್ಮ. "ಧಾರಣಾದ್ಧರ್ಮ ಇತ್ಯಾಹುಃ ಧರ್ಮೋ ಧಾರಯತಿ ಪ್ರಜಾಃ" ಮನಸ್ಸಿನಲ್ಲಿ ಧ್ಯಾನಿಸಲು, ಏನನ್ನು ಧಾರಣ ಮಾಡತಕ್ಕುದೋ ಅದು ಧರ್ಮ.

ಜನರನ್ನು ಹಿಡಿದು ನಿಲ್ಲಿಸುವ, ಒಗ್ಗೂಡಿಸಿ, ಪರಸ್ಪರವಾಗಿ ಸಹಾನುಭೂತಿಯಿಂದ ಸಹಕರಿಸುತ್ತಿರುವಂತೆ ಪ್ರೇರಿಸುತ್ತಿರುವ ತತ್ತ್ವ ಅಥವಾ ಶಕ್ತಿ ಧರ್ಮವೆನಿಸುವುದು. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವವನು, ಧರ್ಮಾಚರಣೆಗೆ ಆತಂಕ ಒಡ್ಡುವವನು, ಧರ್ಮಕಂಟಕನು.

ಈ ಧನವು ನನ್ನದು. ಇಷ್ಟು ಧನವನ್ನು ನಾನು ಸಂಗ್ರಹಿಸಿದ್ದೇನೆ ಇನ್ನಿಷ್ಟು ಧನ ಕೂಡಿ ಹಾಕುವೆನು. ಇವನನ್ನು ಕೊಲ್ಲಿಸಿದೆನು. ಇನ್ನು ಅವನನ್ನು ಕೊಲ್ಲಿಸುವೆ. ಧನ ಸಂಪತ್ತಿನ ಮಹಿಮೆಯೆದುರು ಎಲ್ಲವೂ ತೃಣ ಸಮಾನ. ಎಂದು ಗರ್ವದಲ್ಲಿ ಸಿಲುಕಿ, ಕೀಳು ಅಭಿರುಚಿಯಲ್ಲಿ ಅನುರಕ್ತನಾಗಿರುವವನು, ಯಾವುದು ನಿಜವಾಗಿ ಶ್ರೇಷ್ಠವೋ ಅದನ್ನೇ ಕಾಣದೆ, ಕೆಟ್ಟು ಹೋಗುವನು.

೬೫೭

ಮತ್ಸರಂಬು ಮದವು ಮುಮುಕಾರ ಮನಿಯೆಡು, ವ್ಯಸನಮುಲನು ದವಿಲಿ ನುಸಲಬೋಕ,
ಪರುಲಕುಪಕರಿಂಚಿ ಪರಮೆ ನಮ್ಮುನು ಯೋಗಿ, ವಿಶ್ವದಾಭಿರಾಮ ವಿನುರ ವೇಮ.

ಮದವು ಮತ್ಸರಾದಿ ಮುಮುಕಾರವೆನ್ನುವ,
ವ್ಯಸನಗಳ ದಹಿಸಿ ವೇಗವಾಗಿ,
ಪರರಿಗುಪಕರಿಸಲು, ಪರ ನಂಬುವ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ತನ್ನಲ್ಲಿ ಸಿರಿ ಸಂಪದವಿರುವಾಗ ಗರ್ವ ತಾಳಬಾರದು. ಗರ್ವದಿಂದಿರುವವನು ಕೇಡು ಮಾಡಲು ಹೇಸುವುದಿಲ್ಲ. ಅನ್ಯಾಯವೆಸಗಲು ಮುಂದಾಗುತ್ತಾನೆ.

ಅನ್ಯರಲ್ಲಿ ಸಿರಿ ಸಂಪದವಿರುವಾಗ, ಅವರ ಬಗ್ಗೆ ಮತ್ಸರಭಾವನೆ ತಾಳಬಾರದು. ಮತ್ಸರದಿಂದ ದ್ವೇಷ ಹುಟ್ಟುತ್ತದೆ. ದ್ವೇಷವು ಕೆಡುಕು ಮಾಡಲು ಪ್ರೆರೇಪಿಸುತ್ತದೆ.

ಈ ದೇಹ ನನ್ನದು. ಈ ಧನ ನನ್ನದು. ಈ ಮನೆ ನನ್ನದು. ಈ ಭೂಮಿ ಸೀಮೆ ನನ್ನದು. ಈ ಅಧಿಕಾರ ನನ್ನದು. ಈ ಶಕ್ತಿ ನನ್ನದು ಎನ್ನುವ ಮಮಕಾರವೂ ಸಹ ಪ್ರತಿಸ್ಪರ್ಧಿಗಳನ್ನು ಸಹಿಸುವದಿಲ್ಲ. ಅದರಿಂದ ಕೇಡು ಉಂಟಾಗುವುದು.

ಇವೆಲ್ಲ ವ್ಯಸನಗಳು ವಿಷಬೀಜದಂತೆ ಪೋಷಿಸಿದರೆ ಮೊಳಕೆಯೊಡೆಯುವವು. ವಿಷವೃಕ್ಷ ಬೆಳೆಯುವುದು. ಈ ವ್ಯಸನಗಳ ವಿಷಬೀಜವನ್ನು ಸುಡಬೇಕು. ಸುಟ್ಟಬೀಜ ಮೊಳಕೆಯೊಡೆಯದು. ಅರ್ಥಾತ್ ವ್ಯಸನಗಳು ಹೆಚ್ಚದಂತೆ ನೋಡಿಕೊಳ್ಳಬೇಕು.

ಇಲ್ಲಿ ಪರರಿಗೆ ಹಿತವಾದುದನ್ನು ಮಾಡುವ ಯೋಗಿಯು ಪರವನ್ನು ಮಾತ್ರ ನಂಬುತ್ತಾನೆ.

೬೫೮

ದಾನಧರ್ಮಮುಲುನು ದಯಯು ಸತ್ಯಮುನೀತಿ, ವಿನಯ ಧೈರ್ಯಧುರ್ಯ ವಿತರಣವ ಲು,
ರಾಜಪಾಲಿಟ ಕಿವಿ ರಾಜಯೊಗಂಬುಲು, ವಿಶ್ವದಾಭಿರಾಮ ವಿನುರ ವೇಮ.

ದಾನಧರ್ಮವೆಲ್ಲ; ದಯೆಯು ಸತ್ಯನೀತಿ,
ವಿನಯ ಧೈರ್ಯ-ವಿತರಣಗಳು
ರಾಜಪಾಲಿಗಿಹವು; ರಾಜಯೋಗವಿದುವೆ.
ವಿಶ್ವದಾಭಿರಾಮ ಕೇಳು ವೇಮ.

ಏನೂ ಇಲ್ಲದವರಿಗೆ, ಅವರಿಗೆ ಬೇಕಾದ ವಸ್ತುಗಳನ್ನು ಕೊಡುವುದೇ ದಾನ ಲೋಕದಲ್ಲಿ ಗೊಂದಲ ತಿಕ್ಕಾಟ ಘರ್ಷಣೆಗಳಿಗೆ ಅವಕಾಶವೀಯದೆ ಮುಂದುವರೆಯಲ್ಕೆ ಸಹಾಯ ಮಾಡುವುದೇ ಧರ್ಮ. ಅನ್ಯರ ಕಷ್ಟ ಕಾರ್ಪಣ್ಯ ಕಂಡು ಅನುಕಂಪ ತಾಳ್ವುದು ದಯೆ. ಯಾರಿಗೂ ಬಾಧೆಯಾಗದಂಥ ನಡೆಯೇ ನೀತಿ. ತನ್ನಲ್ಲಿ ಶಕ್ತಿ-ಸಂಗದಾ

ಧಿಕಾರಗಳಿದ್ದರೂ, ಅವುಗಳಿಲ್ಲದಂತೆ ಭಾವಿಸಿ ಬಾಗಿ ನಡೆಯುವುದು ವಿನಯ. ಒಳಿತು ಮಾಡುವಾಗ ಕಷ್ಟಗಳೆದುರಾದರೂ ಚಿಂತೆಯಿಲ್ಲ; ಎಂದು ಮುಂದಾಗುವುದಕ್ಕೆ ಹೇತುವಾದುದು, ಧೈರ್ಯ. ಜೀವನದ ಆದಿ ಮತ್ತು ಅಂತ್ಯಗಳು ಧುರ್ಯ. ಇರುವ ಸಂಪತ್ತನ್ನು ಸಕಲರ ಹಿತವನ್ನು ಸಾಧಿಸುವಂತೆ ಹಂಚುವದು, ವಿತರಣ. ಈಯೆಲ್ಲ ಗುಣಕರ್ಮಗಳು ರಾಜನ ಪಾಲಿನ ಕರ್ತವ್ಯ ಕರ್ಮಗಳೆಂದು ವ್ಯವಹಾರ. ಈ ಗುಣಕರ್ಮಗಳ ಸಾಧನೆಯು ರಾಜಯೋಗವೂ ಆಗಿದೆ.

ಯಾವುದು ರಾಜನ ಕರ್ತವ್ಯವೆಂದು ಲೋಕವ್ಯವಹಾರದಲ್ಲಿ ರೂಢವಾಗಿದೆಯೋ, ಅದನ್ನು ಸಾಧಿಸುವುದು, ಯಮನಿಯಮ, ಆಸನ, ಪ್ರಣಾಯಾಮ, ಪ್ರತ್ಯಹಾರ, ಧಾರಣ, ಧ್ಯಾನ-ಸಮಾಧಿಯೆಂಬ ಅಷ್ಟಾಂಗಿಕ ಯೋಗದ ಗುರಿಯಾದುದರಿಂದ,ಅದಕ್ಕೆ ರಾಜಯೋಗವೆಂದು ಕರೆಯುವರು.

೬೫೯

ಪಗಲು ರೇಯು ಮುರಚಿ ಭಾವಂಬುನು ಮುರಚಿ, ತಾನು ನೇನನಿಯೆಡಿ ತಲಪುಮುರಚಿ,
ಉಂಡುವಾನಿನೆಂಚು ಮುತ್ತಮುಯೋಗಿಗಾ, ವಿಶ್ವದಾಭಿರಾಮ ವಿನುರ ವೇಮ.

ಹಗಲು ಇರುಳು ಮುರೆತು, ಭಾವವನ್ನೆ ಮುರೆತ:,
ತಾನು ನಾನು ಎನುವ, ತಿಳಿವು ತೊರೆದು,
ಉಳ್ಳ ಮನುಜನೆ ತಿಳಿ ಉತ್ತಮುಯೋಗಿಯವ.
ವಿಶ್ವದಾಭಿರಾಮ ಕೇಳು ವೇಮ.

ಹಗಲು ಎಚ್ಚರವಾಗಿರುವುದನ್ನು ಸೂಚಿಸುತ್ತದೆ. ರಾತ್ರಿ ನಿದ್ರೆ ಹೋದುದನ್ನೂ, ಎಚ್ಚರವಿಲ್ಲದಿರುವಿಕೆಯನ್ನೂ ಸೂಚಿಸುತ್ತದೆ.

ಹಗಲು ಜಾಗೃತ ಕಾಲವೆನಿಸುವದು; ರಾತ್ರಿ ಸ್ವಪ್ನ ಕಾಲವೆನಿಸುವುದು. ಜಾಗೃತ ಸ್ವಪ್ನದ ಅವಸ್ಥೆಯನ್ನು ಮೀರಿದ ಅವಸ್ಥೆಯೂ ಉಂಟು. ಇದು ಸುಷುಪ್ತಿ; ಆಳ ನಿದ್ರೆ ಇದರಾಚೆಯ ಚತುರ್ಥ ಸ್ಥಿತಿ,ತುರೀಯಾವಸ್ಥೆ. ಯೋಗಿ ಹಗಲು–ಇರುಳಿನ ಅವಸ್ಥೆ ಮರೆತಿರುತ್ತಾನೆ. ಅವನು ಜಾಗೃತ ಸ್ವಪ್ನಾವಸ್ಥೆಯಾಚೆ ಹೋಗಿರುತ್ತಾನೆ.

ಮನಸ್ಸು ಬುದ್ಧಿ ಚಿತ್ತ ಅಹಂಕಾರ ಇವು ಅಂತಃ ಕರಣಗಳು. ಮನಸ್ಸು ವಿಷಯಗಳನ್ನು ಇಂದ್ರಿಯಗಳ ಮುಖಾಂತರ ಗ್ರಹಿಸುತ್ತದೆ. ಬುದ್ಧಿ ನಿಶ್ಚಯಿಸುತ್ತದೆ. ಚಿತ್ತ ಸುಖವರಸುತ್ತದೆ.

ವಿಷಯಗಳಿಂದ ಪರಾವೃತ್ತವಾದ ಮನಸ್ಸಿನಿಂದ ಬುದ್ಧಿ ಸ್ಥಿರವಾಗುವುದು. ಸ್ಥಿರ ಬುದ್ಧಿಯವನ ಚಿತ್ತ ಪ್ರಸನ್ನವಾಗಿ ಸಮಸ್ತ ದುಃಖಗಳು ನಾಶವಾಗುವವು. ಆಗ ಆತ್ಮಜ್ಞಾನದ ಆಸಕ್ತಿ ಎಂದರೆ ಭಾವವೊಂದೇ ಉಳಿಯುವುದು. ಯೋಗಿ ಇದನ್ನು ದಾಟಬೇಕು.

ಭಾವದಾಚೆಯ ಸ್ಥಿತಿಯಲ್ಲಿ ತನ್ನದು ಎಂಬ ಮಮಕಾರವಾಗಲಿ, 'ನಾನು' ಎಂಬ ಅಹಂಕಾರವಾಗಲಿ, ಜ್ಞೋದ್ಯವಾಗುವ ತಿಳಿವು ತೊರೆದು, ಇರುವವನು, ಉತ್ತಮ ಯೋಗಿ.

೬೬೦

ಮುಂಟ ಲೋಹಮುಂದು ಮ್ರಾಕುಲ ಶಿಲಲುಂದು ಬಟಮುಗೋಡಲುಂದು ಖ್ಯತಿಮಲುಂದು
ದನ್ನುದೆಲುಪುಕೊರಕು ದಗುಲದಾ ಪರಮಾತ್ಮ. ವಿಶ್ವದಾಭಿರಾಮ ವಿನುರ ವೇಮ

ಮಣ್ಣು ಲೋಹಗಳಲಿ, ಮರ ಶಿಲಾದಿಗಳಲಿ,
ಪಟ-ಗೋಡೆಗಳಲಿ,ಪ್ರತಿಮೆಗಳಲಿ;
ತನ್ನ ನೆನಪು ಕೊಡಲು ತವಕಿಸ ಪರಮಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಮಣ್ಣು, ಲೋಹ, ಕಟ್ಟಗೆ ಶಿಲೆಗಳಿಂದ ಮಾಡಿದ ಮೂರ್ತಿಗಳು ಮತ್ತು ಗೋಡೆಗೆ ತೂಗು ಹಾಕಿದ ಚಿತ್ರಗಳು ಪರಮಾತ್ಮನ ಸ್ಮರಣೆಯ ಸಾಧನಗಳೆಂದು ಹೇಳುತ್ತಾರೆ. ಆದರೆ ಪರಮಾತ್ಮ ವಾಸಿಸುವುದು ಹೃದಯಾಕಾಶದಲ್ಲಿ. ಇಂದ್ರಿಯ ವೃತ್ತಿಗಳನ್ನು ಸ್ಥೂಲ ವಸ್ತುಗಳಿಂದ ಪರಾವೃತ್ತಗೊಳಿಸಿ, ಒಳನೋಟ ಬೀರದೆ ಆತ್ಮ ದರ್ಶನವಾಗದು.

ಮೂರ್ತಿ ಕಲ್ಪನೆಯು ಮನಸ್ಸನ್ನು ಹೊರಗಿನ ವಸ್ತುಗಳತ್ತ ಪ್ರೇರೇಪಿಸುತ್ತದೆ. ಅಂತರ್ಮುಖಿಯಾದರೆ,ಹೊರವಸ್ತುಗಳ ಆಸಕ್ತಿ ತೊರೆಯಬೇಕು. ಮೂರ್ತಿಯನ್ನು ಪೂಜಿಸುತ್ತ ಹೋಗುವವರ ಚಿತ್ತವು, ಮೂರ್ತ [ಸ್ಥೂಲ]ವಾಗುತ್ತದೆ. ಅದು ಸೂಕ್ಷ್ಮವನ್ನು ಗ್ರಹಿಸಲು ಅಸಮರ್ಥವಾಗುವುದು. ಇದರಿಂದ ಅವನಲ್ಲಿ ಪಶುವೃತ್ತಿ ಬೆಳೆಯುವುದು. ಬುದ್ಧಿ ಹೀನತೆ ಪಶುವಿನ ಗುಣ. ಮೂರ್ತಿ ಪೂಜೆಗೆ ಅಂಟಿ ಸಾಗುವುದೂ ಬುದ್ಧಿ ಹೀನತೆಯಾಗುವುದು. (ಹೋಲಿಸಿ ನೋಡಿರಿ:

"ಮೃಚ್ಛಿಲಾಧಾತುದಾರ್ವಾದಿ ಮೂರ್ತಾವೀಶ್ವರಬುದ್ಧಯ,|
ಕ್ಲಿಷ್ಯಂತಸ್ತಪಸಾ ಜ್ಞಾನಂ ವಿನಾ ಮೋಕ್ಷಂ ನ ಯಾಂತಿ ತೇ "||

ಮಣ್ಣು, ಕಲ್ಲು, ಧಾತು, ಕಟ್ಟಗೆಗಳಿಂದ ಮಾಡಿದ ಮೂರ್ತಿಗೆ ಈಶ್ವರನನ್ನು ಬದ್ಧಗೊಳಿಸುವುದೆಂತು? ತಪಸ್ಸಿನಿಂದ, ಜ್ಞಾನವಿಲ್ಲದೆ ಅವರು ಮೋಕ್ಷ ಪಡೆಯುವುದೆಂದು ?
— ತಂತ್ರ)

೬೬೧

ಪುಟ್ಟನದಿಯು ಮೊದಲು ಪುರುಷುಡೇಕಾಲಂಬು, ಪಾಪಮೆರಿಗಿ ಶುದ್ಧ ಪಶುವುಗಾಕ,
ಮುದಿಸಿ ಯೋಗಿ ಕರಣಿ ಮುದಯೊಪ್ಪಗಾವಲೆ, ವಿಶ್ವದಾಭಿರಾಮ ವಿನುರ ವೇಮ.

ಹುಟ್ಟದಂದಿನಿಂದ ಪುರುಷನ ಕಾಲದೊಳು;
ಪಾಪವರಿಯೆ ಶುದ್ಧ; ಪಶುವು ಅಲ್ಲ.
ಮುದದಿ ಯೋಗಿ ರೀತಿ, ಮನವೊಪ್ಪುವಂತಿದೆ
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮದಿಂದ ಭೂತಗಳು ಉಂಟಾದಂತೆ, ಭೂತಗಳಿಂದ ಘಟವು ರೂಪಗೊಂಡು, ಏಕಾಣು ಜೀವಿಯಿಂದ ಮನುಷ್ಯನ ವರೆಗೆ ಪ್ರಾಣಿಗಳು ನಿರ್ಮಾಣಗೊಂಡು, ಕೊನೆಗೆ ಬ್ರಹ್ಮವನ್ನೇ ಕೂಡುತ್ತವೆ. ಇದು ಬ್ರಹ್ಮಚಕ್ರ.

ಏಕಾಣು ಜೀವಿಗಳು, ಬೆನ್ನೆಲುಬಿಲ್ಲದ ಜಲಚರ ಜೀವಿಗಳು, ಬೆನ್ನೆಲುಬು ಇರುವ ಪ್ರಾಣಿಗಳು, ಮೊಲೆಹಾಲುಣ್ಣುವ ಸ್ತನ್ಯ ಪ್ರಾಣಿಗಳು, ಜೀವಶಾಸ್ತ್ರದ ಉತ್ಕ್ರಾಂತಿ ಕ್ರಮದಲ್ಲಿ ಮೂಡಿಬಂದಿವೆ. ಈ ಉತ್ಕ್ರಾಂತಿ ಕ್ರಮದನ್ವಯ ದೇಹರಚನೆಯಂತೆ ಮನಸ್ಸಿನ ಸ್ವರೂಪವೂ ಸ್ಥೂಲದಿಂದ ಸೂಕ್ಷ್ಮವಾಗುತ್ತ ಹೊರಟಿದೆ. ಮನುಷ್ಯ ಮಟ್ಟದ ವರೆಗೆ ಬುದ್ಧಿ ಮತ್ತು ಇಚ್ಛಾಶಕ್ತಿಗಳು ಪ್ರಚ್ಛನ್ನವಾಗಿರುವದರಿಂದ ವ್ಯಕ್ತವಾಗುವದಿಲ್ಲ. ಮನುಷ್ಯನ ಮನಸ್ಸಿನಲ್ಲಿ ಮಾತ್ರ, ಬುದ್ಧಿ ಮತ್ತು ಇಚ್ಛಾಶಕ್ತಿ ವ್ಯಕ್ತವಾಗುವವು. ಬುದ್ಧಿಯಿಂದ ಮಾತ್ರ ಒಳಿತು-ಕೆಡುಕುಗಳನ್ನು ವಿಂಗಡಿಸಿ ತಿಳಿಯಬಹುದು. ಪಶುವಿಗೆ ಬುದ್ಧಿ ಇಲ್ಲ. ಅದು ಒಳಿತು ಕೆಡುಕುಗಳನ್ನು ವಿಂಗಡಿಸಿ ತಿಳಿದು ರಚನಾತ್ಮಕವಾಗಿ ಮುಂದುವರೆಯಲಾರದು.

ಮನುಷ್ಯನು ಹುಟ್ಟಿದಂದಿನಿಂದ ಯಾವುದು ಪಾಪಕಾರ್ಯವೋ ಅದನ್ನು ತಿಳಿದುಕೊಂಡು, ತನ್ನ ಜೀವನಕಾಲವನ್ನು ಕಳೆದರೆ, ಅವನು ಪರಿಶುದ್ಧನಾಗಿ ಉಳಿಯುವನು. ಹೀಗೆ ಮಾಡುವವನು ಮಾತ್ರ ಪಶುವಾಗಲಾರನು ಯೋಗಿಯು ಮನುಷ್ಯನ ಮನಸ್ಸು ಬುದ್ಧಿಗಳ ಶಕ್ತಿಯ ಮಹತ್ವ ತಿಳಿದು, ಅವುಗಳನ್ನು ಉಪಕರಣಗಳಾಗಿ ಬಳಸಿ, ಅಹಂ ತತ್ತ್ವ, ಮಹತ್ ತತ್ತ್ವಗಳನ್ನು ದಾಟಿ, ಬ್ರಹ್ಮ ಸೇರುವನು. ಮನಸ್ಸಿಗೆ ಒಪ್ಪುವಂಥ ಮುದವಾದ ರೀತಿಯೇ ಇದಾಗಿದೆ.

೬೬೨

ಜನುಡು ತೆಲಿವಿನೊಂದ ಜಂಚಲಿಂಪದು ಮದಿ, ದೈವಮುನು ದೆಲಿಸಿನ ದಗುಲು ಬುದ್ಧಿ
ತಿವುರು ಭಾನು ಜೂಚಿ ತಿಮಿರಂಬು ನಿಲ್ಚುನಾ? ವಿಶ್ವದಾಭಿರಾಮ ವಿನುರ ವೇಮ.

ಮನುಜ ತಿಳಿವು ಹೊಂದಿ ಮನವ ಚಲಿಸದಿಹನು,
ದೈವವನು ತಿಳಿಯಲು ಧೀ ಆಂಟಿತು.
ಕಂಡು ಉದಯ ರವಿಯ, ಕತ್ತಲೆ ನಿಲ್ಲುವುದೆ ?
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮದಿಂದ ಭೂತ ನಿರ್ಮಾಣವಾಗುತ್ತವೆ. ಭೂತಗಳಿಂದ ಘಟದೇಹಗಳಾಗಿ ಕೊನೆಗೆ ಬ್ರಹ್ಮಗೂಡುವುವೆಂಬುದೇ ತಿಳಿವು. ಇದಕ್ಕೆ ಘಟದೇಹದ ಮನಸ್ಸು ಸ್ಥೂಲದಿಂದ ಸೂಕ್ಷ್ಮವಾಗಬೇಕು. ಮನಸ್ಸು ಸೂಕ್ಷ್ಮವನ್ನು ಗ್ರಹಿಸಬೇಕಾದರೆ, ಅದು ಶುದ್ಧವಾಗಿರಬೇಕು. ಅಂದರೆ ಮನಸ್ಸು ಬಾಹ್ಯ ವಿಷಯಾಸಕ್ತಿಯಿಂದ ದೂರವಾಗಬೇಕು. ಆಗ ಚಿತ್ತವೃತ್ತಿಗಳಿರುವುದಿಲ್ಲ ಮನಸ್ಸು ಸ್ಥಿರವಾಗುವುದು. ಚಂಚಲತೆ ಅಳಿಯುವುದು.

ಮನಸ್ಸು ಸ್ಥಿರಗೊಳಿಸಿದ ಬಳಿಕ. ತತ್ತ್ವಧಾರಣೆ ಮಾಡಲು ಸಾಧ್ಯ. ಯಾವುದು ಒಳಿತು, ಯಾವುದು ಕೆಡುಕು ಎಂಬುದನ್ನು ವಿಶ್ಲೇಷಿಸುವ ಶಕ್ತಿ ಬುದ್ಧಿಗಿದೆ. ಮನುಷ್ಯನಿಗೆ ಮಾತ್ರ ಬುದ್ಧಿ ಇದೆ. ಮನುಷ್ಯ ಜನ್ಮದಿಂದ ಮಾತ್ರ ದೈವತ್ವವೇತತ್ತ್ವ.

ತತ್ತ್ವ ಜ್ಞಾನವಾದ ಬಳಿಕ, ಅಜ್ಞಾನ-ಇರುವದಿಲ್ಲ. ವಿದ್ಯೆ ಹೊಳೆದ ಬಳಿಕ, ಅವಿದ್ಯೆ ಉಳಿಯದು. ಮೂಡುವ ಸೂರ್ಯನನ್ನು ಕಂಡು ಕತ್ತಲೆ ನಿಲ್ಲಬಹುದೇ ?

೬೬೩

ಮನಸುಲೋನಿವಾನಿ ಮಾನುಗಾದೆಲಿಸಿನ, ನುರ್ವಿಜನುಲುವಾನಿ ಯೋಗಿಯಂಡ್ರು
ನೀವು ನಿನ್ನೆರುಂಗ ನೀವೆಪೋ ಶಿಪುಡವು, ವಿಶ್ವದಾಭಿರಾಮ ವಿನುರ ವೇಮ.

ಮನಸಿನಲ್ಲಿರುತಿಹ ಮಹಿಮೆಯನು ಅರಿಯಲು,
ಅವನಿ ಜನ ನುಡಿವರು; ಅವನೆ ಯೋಗಿ.
ನೀನು ನಿನ್ನನರಿಯೆ,ನೀನೆ ಹೋಗು ಶಿವನು.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ಮತ್ತು ಭೂತಗಳು ಒಂದೇ ವಸ್ತುವಿನಿಂದ ಆಗಿವೆ. ಅವುಗಳಲ್ಲಿರುವ ಅಂತರ ಸೂಕ್ಷ್ಮ ಮತ್ತು ಸ್ಥೂಲವಾಗಿರುವುದಷ್ಟೇ. ಸೂಕ್ಷ್ಮವಾದುದು ಸ್ಥೂಲವಾದುದನ್ನು ಗ್ರಹಿಸಬಲ್ಲುದು. ಸಾಧಾರಣ ಮನಸ್ಸು ಗ್ರಹಿಸದಷ್ಟು ಸೂಕ್ಷ್ಮವಾದ ತತ್ತ್ವಗಳಿವೆ. ಕಾರಣ, ಮನಸ್ಸು ಹೆಚ್ಚು ' ಹರವು ' ಗೊಳ್ಳಬೇಕು. ಹೆಚ್ಚು ಹರವಾದ ಮನಸ್ಸು ಹೆಚ್ಚು ತತ್ತ್ವಗಳನ್ನು ಗ್ರಹಿಸುವುದು. ಮನಸ್ಸಿನ ಹರವು ಹೆಚ್ಚಾಗುವುದೆಂದರೆ, ತತ್ತ್ವ ಗ್ರಹಿಸುವ ಶಕ್ತಿ ಹೆಚ್ಚಾಗುವುದು, ಎಂದು ಅರ್ಥ. ಇದಕ್ಕಾಗಿ ಮನಸ್ಸು ಚಿತ್ತವೃತ್ತಿ ಗಳಿಲ್ಲದೆ ಶುದ್ಧವೂ ಆಗಿರಬೇಕು. ಮನಸ್ಸಿನ ಗ್ರಹಣಶಕ್ತಿ ಹೆಚ್ಚಾಗಲು, ದೈಹಿಕ, ಮಾನಸಿಕ, ದೈವಿಕ ಶಕ್ತಿಗಳೆಲ್ಲ ಕ್ರಿಯೆ ಪ್ರತಿಕ್ರಿಯೆಗಳನ್ನುಂಟು ಮಾಡುತ್ತವೆ. 'ಅಹಂ' ತತ್ತ್ವ, ಮಹತ್ ತತ್ತ್ವ (ಶುದ್ಧ 'ನಾನು' ಎಂಬುದರ ಅರಿವು) ಗಳನ್ನೂ ಸೂಕ್ಷ್ಮತರ ಮನಸ್ಸು ದಾಟಿ, ಆತ್ಮ ಗ್ರಹಿಸುವಷ್ಟು ಸೂಕ್ಷ್ಮತಮವಾಗುತ್ತದೆ. ಆತ್ಮ ಗ್ರಹಿಸಿದರೆ, ಎಲ್ಲವೂ ತೀರಿತು. ಇದು ಮನಸ್ಸಿನ ಮಹಿಮೆ. ಯಾರು ಈ ಮಹಿಮೆಯನ್ನು ತಿಳಿದು ಕೊಂಡಿರುವನೋ, ಅವನು ಬ್ರಹ್ಮ ಸೇರಿದವನು; ಯೋಗಿ ಎಂದು ಅವನನ್ನು ಲೋಕದ ಜನರು ಕರೆಯುತ್ತಾರೆ.

ಹೀಗೆ, ತಾನು ತನ್ನ ಸ್ವರೂಪವನ್ನು ಅಂದರೆ ಬ್ರಹ್ಮತ್ವವನ್ನು [ಜಗತ್ಕಾರಣತ್ವ, ಅಮೃತತತ್ತ್ವ, ಸತ್ಯ, ಸರ್ವಾತ್ಮ, ಸರ್ವಜ್ಞ, ಆನಂದಮಯ, ಲೀಲಾಮಯ] ತಿಳಿದರೆ, ತಾನೇ ಶಿವನು. ಶಿವ ಎಂಬ ಸಾಂಕೇತಿಕ ಶಬ್ದದ ಅರ್ಥವೇ ಬ್ರಹ್ಮತ್ವದ ಜ್ಞಾನಿ ಎಂದು.

೬೬೪

ಮುಷ್ಟಿವೇಷಚೆಟ್ಟು ಮೊದಲು ಗಾಬ್ರಜಲಕು, ಬರಗಮೂಲಿಕಲಕು ಬನಿಕಿವಚ್ಚು,
ನಿರ್ದಯಾತ್ಮಕುಂಡು ನೀಚು ಡೆಂದುನಕಗು ? ವಿಶ್ವದಾಭಿರಾಮ ವಿನುರ ವೇಮ.

ವಿಷವು ಬೇವಿನ ಮರವೆಷ್ಟು ಪ್ರಜೆಗಳಿಗೆ,
ಪರಮ ಮೂಲಿಕೆಗೆ ಪ್ರಯೋಜನವು.
ನಿರ್ದಯಾತ್ಮನಾದ ನೀಚನಿಂದ ಏನು ?
ವಿಶ್ವದಾಭಿರಾಮ ಕೇಳು ವೇಮ.

ಬೇವಿನ ಮರದ ಕಾಂಡ, ಸೊಪ್ಪು ಎಲ್ಲವೂ ವಿಷಕರವಾಗಿರುತ್ತದೆ. ಅದು ನಾಲಗೆಗೆ ರುಚಿಯಲ್ಲ. ಇಂದ್ರಿಯ ಸುಖದ ದೃಷ್ಟಿಯಿಂದ ಅದು ಸೇರಿಕೆಯಾಗದು. ಆದರೆ ಬೇವಿನ ಮರದಲ್ಲಿ ಅನೇಕ ರೋಗಗಳನ್ನು ಗುಣಪಡಿಸುವ ಶಕ್ತಿ ಇದೆ.

ಬೇವಿನ ಸೊಪ್ಪನ್ನು ರಕ್ತದೋಷ, ವಿಷಪ್ರಾಶನ, ಹುರುಕು ಕಜ್ಜಿ, ಇಸುಬು ಇತ್ಯಾದಿ ರೋಗಗಳು ಅಂಟಿದಾಗ ಸೇವಿಸುತ್ತಾರೆ. ಬೇವಿನ ಎಣ್ಣೆಯನ್ನು ಕ್ರಿಮಿನಾಶಕ ಸಾಬೂನುಗಳಲ್ಲಿ ಬೆರೆಸುತ್ತಾರೆ. ಬೇವಿನ ಸೊಪ್ಪು ನೀರಲ್ಲಿ ಕುದಿಸಿ, ಆ ನೀರಿನಿಂದ ಸ್ನಾನ ಮಾಡುತ್ತಾರೆ.

ಆದರೆ ಕಷ್ಟಪಡುವವರನ್ನು ಕಂಡು ದಯೆ ಹುಟ್ಟದಂಥ ನೀಚನು, ಮನುಷ್ಯನಾಗಿ ಹುಟ್ಟಿದರೂ ಸಹ, ಅವನು ಯಾರಿಗೆ ಪ್ರಯೋಜನವಾಗಬಲ್ಲನು ? ಮನುಷ್ಯ ಶರೀರ ಹೊಂದಿದಾಗ ಇರುವ ಬುದ್ಧಿಯನ್ನು ಸದ್ವಿನಿಯೋಗಿಸದಿದ್ದರೆ, ಅವನು ಅವಕಾಶವನ್ನು ವ್ಯರ್ಥಗೊಳಿಸಿದಂತೆ.

೬೬೫

ಕೋಪಮುನನು ನರಕ ಕೂಪಂಬು ಜೆಂದುನು, ಕೋಪಮುನನು ಗುಣಮು ಕೊಂಚೆಮುಗುನು,
ಕೋಪ ಮುನನು ಬ್ರತುಕು ಕೊಲದಿಯೈಪೋವುನು, ವಿಶ್ವದಾಭಿರಾಮ ವಿನುರ ವೇಮ.

ಕೋಪದಿಂದ ನರಕ ಕೂಪವನು ಸೇರುವ,
ಕೋಪದಿಂದ ಗುಣವು ಕೊಂಚವಹುದು.
ಕೋಪದಿಂದ ಬಾಳು ಕೀಳು ಆಗುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಕೆಡುಕು ಕರ್ಮ ಫಲವು ಕಷ್ಟ ಸೋಸುವುದೇ ಆಗಿದೆ.ಅದುವೇ ನರಕ. ಕೋಪ ತಾಳಿದರೆ, ಬುದ್ಧಿಯ ಮೇಲೆ ಅಂಕೆ ಇರಿಸಲು ತಪ್ಪುವರು. ಅಂಕೆ ತಪ್ಪಿದ ಬುದ್ಧಿ, ಕೆಡುಕು ಮಾಡುವುದನ್ನು ಪ್ರತಿಬಂಧಿಸದು. ಕೆಡುಕಿನಿಂದ ಕೆಡುಕು ಬೆಳೆದು ಬಳ್ಳಿಯಾಗುವುದು. ಕೋಪ ತಾಳುವವನು, ಹೀಗೆ ನರಕ ಕೂಪವನ್ನೇ ಸೇರುವನು.

ಸಾಮಾನ್ಯವಾಗಿ ಶ್ರೇಷ್ಠ ಗುಣವನ್ನು ಹೊಂದಿರಬಹುದು. ಸಾತ್ವಿಕ ಗುಣ ಹೊಂದಿರ ಬಹುದು. ಆದರೆ ಕೋಪದಿಂದ ಸಾತ್ವಿಕ ವೃತ್ತಿ ತೊಲಗಿ, ತಾಮಸಿಕ ಗುಣವೇ ಮೇಲಾಗು ವುದು. ಹೀಗಾಗಿ ಸಣ್ಣತನಕ್ಕಿಳಿಯುತ್ತಾರೆ.

ಕೆಡುಕು ಪ್ರವೃತ್ತಿ, ಸಣ್ಣತನದ ಗುಣಗಳಿಂದ, ಬಾಳು ಕೀಳುಮಟ್ಟಕ್ಕಿಳಿಯುತ್ತದೆ. ಕೋಪದಿಂದ ಕೀಳು ಬಾಳೇ ಗತಿಯಾಗುವುದು.

[ಹೋಲಿಸಿ ನೋಡಿರಿ ಃ-

" ಕ್ರೋಧಾದ್ಭವತಿ ಸಂಮೋಹಃ, ಸಂಮೋಹಾತ್ ಸ್ಮೃತಿವಿಭ್ರಮಃ ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ."

ಕ್ರೋಧದಿಂದ ಸಂಮೋಹವು (ವಿವೇಕಹೀನತೆ) ಉಂಟಾಗುವುದು. ಸಂಮೋಹದಿಂದ ಸ್ಮೃತಿಯ (ಒಳಿತು ಕೆಡುಕುಗಳ ಸ್ಮರಣೆ) ಭ್ರಮೆಯುಂಟಾಗುವುದು; ಸ್ಮೃತಿ ಭ್ರಮೆಯಿಂದ ಬುದ್ಧಿನಾಶವಾಗುತ್ತದೆ. ಬುದ್ಧಿನಾಶದಿಂದ ನಾಶವಾಗುವನು.

ಭಗವದ್ಗೀತಾ –೨-೬೩)

೬೬೬

ಚೇಕೊನುಚುನು ದನಕು ಜೀಯಿಸಾಗಿನಂತಲೋ, ಚೀಡಿನ ಪ್ರಜಲ ರಕ್ಷನೇಯಲೇನಿ
ತನದುಸಾಗುಟೇಮಿ ? ತನತನುವದಿಯೇಮಿ ? ವಿಶ್ವದಾಭಿರಾಮು ವಿನುರ ವೇಮು.

ಮಾಡಿಮುಗಿಸೆ ತನಗೆ ಮಾಡಲಾರದಷ್ಟು,
ಕೆಟ್ಟ ಜನಕೆ ರಕ್ಷೆ ಕೊಡನು ಅವನು.
ತನ್ನದು ನಡೆಯದೇ ? ತನ್ನ ಬದುಕು ಏಕೆ ?
ವಿಶ್ವದಾಭಿರಾಮು ಕೇಳು ವೇಮು.

ಪುಣ್ಯ ಕಾರ್ಯಗಳನ್ನು ಮಾಡುತ್ತ ಹೋದಂತೆಲ್ಲ ಪುಣ್ಯ ಕಾರ್ಯಗಳ ಸಮೂಹವೇ ಮಾಡುವವನೆದುರು ನಿಲ್ಲುತ್ತದೆ. ಸತ್ಕರ್ಮಗಳನ್ನು ಎಷ್ಟು ಮಾಡಿದರೂ ಕಡಿಮೆಯೇ. ಸತ್ಕರ್ಮಗಳನ್ನು ಮಾಡುವವನು ಕರ್ಮಫಲವನ್ನಾಶಿಸದ ನಿಷ್ಕಾಮಕರ್ಮಿಯಾಗಿದ್ದರಂತೂ ಅವನು ಎಷ್ಟೇ ಮಾಡಿದರೂ ಅವನು ಮಾಡಿ ಮುಗಿಸಲಾರದಷ್ಟು, ಅವನ ದೃಷ್ಟಿಗೆ ಬೀಳತೊಡಗುವುದು.

ಒಳಿತು ಮಾಡುತ್ತ ಸಾಗುವವನು, ಕೆಟ್ಟ ಜನರಿಗೆ ರಕ್ಷಣೆಯೀಯಲಾರನು.

ತನಗಾಗಿ ತನ್ನ ಬದುಕು ಎನ್ನುವುದಾದರೆ, ಅಂಥ ಬದುಕಿನಿಂದೇನು? ತನ್ನ ಉದರ ನಿರ್ವಾಹ, ಜೀವನ, ಹೇಗೋ ನಡೆಯುತ್ತದೆ. ಹೊಟ್ಟಿಗಾಗಿ, ಗೇಣು ಬಟ್ಟೆಗಾಗಿ ಈ ಆಯುಷ್ಯ ಸವೆಯಿಸಬೇಕೆ? ಇಲ್ಲಿ ಸರ್ವ ಸಮತೆಗಾಗಿ, ಸಕಲರ ಹಿತಸಂವರ್ಧನೆಗಾಗಿ ನಮ್ಮ ಕಾಲವನ್ನು ಮೀಸಲಾಗಿರಿಸಬೇಕು.

ಪುಣ್ಯ ಪುರುಷನ ಜೀವನೋದ್ದೇಶವನ್ನು ಈ ಪದ್ಯದಲ್ಲಿ ಹೇಳಲಾಗಿದೆ.

(ಹೋಲಿಸಿ ನೋಡಿರಿ:

" ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ |
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ.||

ಭಗವದ್ಗೀತಾ ೪-೮

ಪುಣ್ಯ ಪುರುಷನು ಸಾಧು ಸಜ್ಜನರನ್ನು ರಕ್ಷಿಸುತ್ತಾನೆ. ದುಷ್ಕೃತಿಗಿಳಿದವರನ್ನು ನಾಶಗೊಳಿಸುತ್ತಾನೆ. ಧರ್ಮ ಸ್ಥಾಪನೆ ಮಾಡುತ್ತಾನೆ. ಪ್ರತಿ ಯುಗದಲ್ಲಿ ಸಂಭವಿಸಿ ಈ ಕಾರ್ಯಗಳನ್ನು ನೆರವೇರಿಸುತ್ತಾನೆ.)

೬೬೭

ಮನಸುನಿಲ್ಪಿನಟ್ಟಿ ಮರ್ಮಜ್ಞುಲಗುವಾರು, ಗರಿಮಮೋಕ್ಷ ಪದಮು ಗನ್ನವಾರು.
ಚೇಟುಬೆಟ್ಟಿ ಫಲಮು ಜೊಕೊನಡಾ ತಾನು, ವಿಶ್ವದಾಭಿರಾಮ ವಿನುರ ವೇಮು.

ಮನಸು ನಿಲಿಸಿದಂತೆ ಮರ್ಮಜ್ಞರಾಗುವರು.
ಶ್ರೇಷ್ಠ ಮೋಕ್ಷಪದವ ಸೇರುತಿಹರು.
ಸಸಿಯ ನೆಟ್ಟು ಫಲವ ಸೇರದಿಹನೆ ತಾನು?
ವಿಶ್ವದಾಭಿರಾಮ ಕೇಳು ವೇಮು.

ಸಮಾಧಿಯನ್ನು ಎರಡು ವಿಧವಾಗಿ ವಿಭಾಗಿಸುವರು. ಒಂದು ಸಂಪ್ರಜ್ಞಾತ. ಮತ್ತೊಂದು ಅಸಂಪ್ರಜ್ಞಾತ. "ಯುಕ್ತಿ ಪೂರ್ವಕವಾಗಿ ವಿಮರ್ಶೆಯಿಂದ ಕೂಡಿ, ಆನಂದ ಮಯವಾಗಿ, ಸ್ವಲ್ಪವೂ ಅಹಂಕಾರವಿಲ್ಲದೆ ಇರುವ, ಏಕಾಗ್ರತೆಯನ್ನೇ ಸಂಪ್ರಜ್ಞಾತ ಎನ್ನುವುದು."

ಅಸಂಪ್ರಜ್ಞಾತೆಯನ್ನು ಪತಂಜಲಿ ಯೋಗಸೂತ್ರದಲ್ಲಿ ಹೀಗೆ ಬಣ್ಣಿಸಿದ್ದಾರೆ: "ಎಲ್ಲಾ ಮಾನಸಿಕ ಕ್ರಿಯೆಯನ್ನು ನಿಲ್ಲಿಸಿ, ಚಿತ್ತವು ಯಾವ ಅವ್ಯಕ್ತ ಸ್ವಭಾವವನ್ನು ಮಾತ್ರ ಉಳಿಸಿಕೊಂಡಿರುವುದೋ, ಅದರಿಂದ ಮತ್ತೊಂದು ಸಮಾಧಿಯನ್ನು ಹೊಂದಬಹುದು." ಮನಸ್ಸನ್ನು ನಿಲ್ಲಿಸಿದವರು ಹುಟ್ಟು ಸಾವುಗಳಿಲ್ಲದ ಮರ್ಮವನ್ನು ಅರಿಯುವರು. ಇವರು ಸಿದ್ಧಿಗಳನ್ನು ಸಹ ತೊರೆದು, ಮೋಕ್ಷ ಪದವಿಯನ್ನು ಹೊಂದುತ್ತಾರೆ. ಚಿತ್ತೈಕಾಗ್ರತೆಯ ಸಾಧನೆಗೆ ಪ್ರಾರಂಭಿಸಿದರೆ ಮೋಕ್ಷ ದೊರಕದಿರದು. ಸಸಿಯ ನೆಡುವವನು ಫಲ ಪಡೆಯದೆ ಇರುವುದೆಂತು ?

[ಹೋಲಿಸಿ ನೋಡಿರಿ:

ಮಯ್ಯಾವೇಶ್ಯ ಮನೋಯೇ ಮಾಂ ನಿತ್ಯಯುಕ್ತಾ ಉಪಾಸತೇ |
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ||

ಯಾರು ನನ್ನಲ್ಲಿ ಮನಸ್ಸನ್ನು ನಿಲ್ಲಿಸಿ, ನಿತ್ಯಯುಕ್ತರಾಗಿ, ಪರಮ ಶ್ರದ್ಧೆಯಿಂದ ಕೂಡಿದವರಾಗಿ, ನನ್ನನ್ನು ಉಪಾಸನೆ ಮಾಡುತ್ತಾರೆಯೋ, ಅವರು ಯುಕ್ತತಮರೆಂದು ನನ್ನ ಮತ.

– ಭಗವದ್ಗೀತಾ ೧೨–೨.]

೬೬೮

ಮುಂಚಿವಾರುಲೇರು ಮಹಿಮೀದವೆದಕಿನ, ಕಷ್ಟುಲೆಂದರ್ನೆನ ಗಲರು ಭುವಿನಿ,
ಪಸಿಡಿಲೇದುಕಾನಿ ಪದಡೆಂತಲೇದಯಾ, ವಿಶ್ವದಾಭಿರಾಮ ವಿನುರ ವೇಮು.

ಇಲ್ಲ ಒಳ್ಳೆಯವರು, ಇಳೆಯಲ್ಲಿ ಅರಸಲು,
ದುಷ್ಟರೆಷ್ಟೊ ಇಹರು, ಧರಣಿಯಲ್ಲಿ;
ಹೊನ್ನು ಇಲ್ಲವಷ್ಟೆ; ಮಣ್ಣಿಗೇನು ಕೊರತೆ ?
ವಿಶ್ವದಾಭಿರಾಮ ಕೇಳು ವೇಮು.

ಈ ಜಗತ್ತಿನಲ್ಲಿ ಎಷ್ಟೇ ಹುಡುಕಾಡಿದರೂ ಒಳ್ಳೆಯ ಜನ ಸಿಗುವುದು ಬಲು ಕಷ್ಟ ದಾಯಕ. ಇಲ್ಲವೆಂದರೂ ನಡೆದೀತು !

ದುಷ್ಟ ಜನರಾದರೋ, ಭೂಮಿಯ ತುಂಬ ಉಂಟು. ದಂಭ, ದರ್ಪ, ಅಹಂಕಾರ, ಕ್ರೋಧ, ಬಿರುನುಡಿ ಮತ್ತು ಅಜ್ಞಾನಗಳು ದುಷ್ಟ ಜನರ ಸ್ವಭಾವಗಳೆನ್ನಬಹುದು.

ಜಗತ್ತಿನಲ್ಲಿ ಬಂಗಾರ ಸಿಗುವುದು ದುರ್ಲಭ. ಆದರೆ ಮಣ್ಣಿಗೇನು ಕೊರತೆ? ಎಲ್ಲೆಡೆ ಉಂಟು. ಒಳ್ಳೆಯ ಜನರು ಸಹ ಬಂಗಾರದಂತೆ,ಅಪರೂಪವಾಗಿ ಕಾಣಸಿಗುತ್ತಾರೆ.

ಜಗತ್ತು ಕೆಟ್ಟಿದೆ, ಜಗತ್ತು ಇನ್ನೂ ಹೆಚ್ಚಾಗಿ ಕೆಡುತ್ತದೆ. ಸಾಧ್ಯವಿದ್ದರೆ, ತರ_ತಮಗಳಾಚೆ ಕೆಡುತ್ತದೆ, ಎನ್ನುತ್ತಾರೆ. ಕೆಟ್ಟುಹೋದ ಜಗತ್ತು ಇನ್ನೂ ಕೆಡುವುದೆಂದರೇನು ? ಒಳ್ಳೆಯವರು ದುರ್ಲಭವಾಗಿಯಾದರೂ ದೊರಕುತ್ತಾರೆ. ಅವರು ಕೆಡುಕು ತೊಡೆಯಲು ಯತ್ನಿಸಬೇಕು.
(ಹೋಲಿಸಿ ನೋಡಿರಿ :

" ದ್ವೌ ಭೂತ ಸರ್ಗೌ ಲೋಕೇಸ್ಮಿನ್ ದೈವ ಆಸುರೆ ಏವ ಚ |
ಎಲೈ ಅರ್ಜುನ, ಈ ಲೋಕದಲ್ಲಿ ದೈವವೆಂದೂ ಅಸುರವೆಂದೂ ಎರಡು ವಿಧವಾದ ಮನುಷ್ಯ ಸೃಷ್ಟಿಗಳುಂಟು. —ಭಗವದ್ಗೀತಾ ೧೬-೬.)

೬೬೯

ಆಶಲುಡುಗಗಾನಿ ಪಾಶಮುಕ್ತುಡುಗಾಡು, ಮುಕ್ತಡೈನಗಾನಿ ಮುನಿಯುಗಾಡು,
ಮುನಿಯುನ್ನೈನಗಾನಿ ಮೋಹಂಬುಲುಡುಗವು, ವಿಶ್ವದಾಭಿರಾಮ ವಿನುರ ವೇಮ.

ಆಶೆಯುಡುಗುವನಕ ಪಾಶಮುಕ್ತ.ನಲ್ಲ
ಮುಕ್ತನಾಗ ಬಹುದು ಮುನಿಯಾಗನು.
ಮುನಿಸಿಯೆ ಆಗ ಬಹುದು; ಮೋಹವಬಿಡಲಾರ
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ತನ್ನ ಅಸಂಖ್ಯಾತ ಆಶೆಗಳಿಂದ ಮತ್ತೊಬ್ಬನಿಗಾಗಿ ಕೆಲಸ ಮಾಡುವುದು. ಮನಸ್ಸು ಅನೇಕ ವಸ್ತುಗಳ ಮಿಶ್ರ. ಆದಕಾರಣ ಅದು ತನಗೋಸ್ಕರವಾಗಿ ಕೆಲಸ ಮಾಡಲಾರದು. ಪ್ರಪಂಚದಲ್ಲಿರುವ ಎಲ್ಲ ವಸ್ತುಗಳಿಗೂ ಕೂಡ, ಹಾಗೆ ಮಿಶ್ರವಾಗುವುದಕ್ಕೆ ಒಂದು ಗುರಿಯಿದೆ. ಇದು ಮೂರನೆಯದಕ್ಕಾಗಿ ನಡೆಯುವುದು. ಆಶೆಯಿದ್ದರೆ, ಮನಸ್ಸು ಕಟ್ಟುಹಾಕಿದಂತೆ. ಆಶೆಯಿಂದ ಆಲೋಚನೆಗಳು ಬರುತ್ತವೆ. ಅವುಗಳನ್ನು ಹೊಡೆದು ಅಟ್ಟಬೇಕು. ಮನಸ್ಸಿನಲ್ಲಿ 'ಸತ್ಯ' ಚಿಂತನೆಯ ಹೊರತು, ಬೇರಾವ ಆಲೋಚನೆಗಳೂ ಬಾರದಂತೆ ಮಾಡಬೇಕು. ಆಗ ಆಶಾಪಾಶದಿಂದ ಮುಕ್ತನಾಗನು. ಆಶೆ ಉಡುಗದೆ ಪಾಶ ಮುಕ್ತನಾಗುವನು.

ಆಶಾಪಾಶದಿಂದ ಮುಕ್ತನಾದವನು ಮನಸ್ಸನ್ನು ಶೂನ್ಯಗೊಳಿಸುವನು. ಮನಸ್ಸನು ಶೂನ್ಯಗೊಳಿಸಲು ಸಾಕಷ್ಟು ಅಭ್ಯಾಸ ಬೇಕು. ಅಭ್ಯಾಸವೆಂದರೆ ಚಿತ್ತವೃತ್ತಿಯನ್ನು ಸಂ

ಪೂರ್ಣ ಸ್ವಾಧೀನದಲ್ಲಿಡುವುದಕ್ಕಾಗಿ ಪ್ರಯತ್ನಿಸುವುದು. ಅಭ್ಯಾಸವಿಲ್ಲದೆ ಮನಸ್ಸನ್ನು ಶೂನ್ಯಮಾಡಲು ಪ್ರಯತ್ನಿಸಿದರೆ, ಆಗ ಮನಸ್ಸು ಜಡವಾಗಿ, ಸೋಮಾರಿಯಾಗುವುದು. ಅಜ್ಞಾನದಿಂದ ಇದನ್ನೇ ಶೂನ್ಯಗೊಳಿಸುವಿಕೆ ಎಂದು ಭ್ರಮಿಸುವರು. ಪ್ರಜ್ಞೆಯಿಂದ ಕೂಡಿದ ಏಕಾಗ್ರತೆಯಲ್ಲಿ ಮಾತ್ರ ಮನಸ್ಸು ಚಿತ್ತದ ಅಲೆಗಳನ್ನು ನಿಗ್ರಹಿಸಲು ಸಾಧ್ಯ. ಇದು ಮುನಿಗೆ ಮಾತ್ರ ಸಾಧ್ಯ. ಆಶಾಪಾಶ ಮುಕ್ತನೆಂಬ ಭಾವನೆಯು, ಜಡವಾದಾಗ ಸಹ ಇರಬಹುದು; ಅಂಥವನು ಮುನಿಯಾಗಲಾರನು.

ಮುನಿಯಾದವನು ಮನಸ್ಸನ್ನು ಶೂನ್ಯಗೊಳಿಸುತ್ತಾನೆ. ಆದರೂ ಪೂರ್ವ ಸಂಸ್ಕಾರದಿಂದ ಸಂತೋಷಕ್ಕಾಗಿ ಕೆಲವು ಬಾಹ್ಯವಸ್ತುಗಳು ಬೇಕು ಎಂಬ ಮೋಹ ಉಂಟಾಗುವುದು. ಅದಕ್ಕಾಗಿ ಹೀಗೆ ಹೇಳುತ್ತಾರೆ. ಮುನಿಯು ಆಗಬಹುದು; ಮೋಹವನ್ನು ಬಿಡಲಾರನು. ಇದೆಲ್ಲವನ್ನೂ ದಾಟಿ, ಮನಸ್ಸನ್ನೂ ಜ್ಞಾನವನ್ನೂ ದಾಟಿ ಹೋಗುವುದೇ ಮೋಕ್ಷ.

೬೭೦

ದೈವಮತುಲ ನರುಲು ತಮವಂಟಿವಾರನಿ, ಯರಸಿ ಗೂಢತತ್ತ್ವ ಮರಯಲೇರು,
ಇಟ್ಲು ಮಾಯಬಡಿನ ನೆಟ್ಲುಮರ್ಮಮೆರುಂಗು ? ವಿಶ್ವದಾಭಿರಾಮ ವಿನುರ ವೇಮ.

ದೈವಮತಿಯ ನರರು ತಮ್ಮ ತರಹವೆಂದು,
ಅರಸೆ ಗೂಢ ತತ್ತ್ವ, ಅರಿಯದಿಹರು.
ಇಂಥ ಮಾಯೆ ಬಡಿಯೆ ಎಂತು ಮರ್ಮ ತಿಳಿವ
ವಿಶ್ವದಾಭಿರಾಮ ಕೇಳು ವೇಮ.

ದೈವ ಮತಿಯ ನರರು ಯಾರು ? ಭಗವದ್ಗೀತೆಯಲ್ಲಿ ಹೀಗೆ ವಿವರಿಸಲಾಗಿದೆ '
" ಅಭಯ, ಅಂತಃಕರಣ ಶುದ್ಧಿ, ಜ್ಞಾನ, ಯೋಗ, ವ್ಯವಸ್ಥಿತಿ, ದಾನ, ಬಾಹ್ಯೇಂದ್ರಿಯಗಳ ನಿಗ್ರಹ, ಯಜ್ಞ, ಸ್ವಾಧ್ಯಾಯ, ತಪಸ್ಸು ಸರಳತೆ, ಚಾಡಿ ಹೇಳುವುದು, ಭೂತದಯೆ, ವಿಷಯಲಂಪಟತನವಿಲ್ಲದಿರುವಿಕೆ, ಮೃದುಸ್ವಭಾವ ಅಕೃತ್ಯಗಳನ್ನು ಮಾಡುವುದರಲ್ಲಿ ನಾಚುಗೆ, ಅಪೇಕ್ಷಾರ್ಹ ವಿಷಯಗಳು ಸಮೀಪದಲ್ಲಿರುವಾಗಲೂ ಚಾಪಲ್ಯವಿಲ್ಲದಿರುವುದು, ದುರ್ಜನರಿಂದ ಪರಾಭವಗೊಳ್ಳದಿರುವಿಕೆ, ಕ್ಷಮೆ, ಧೈರ್ಯ, ಬಾಹ್ಯೇಂದ್ರಿಯಗಳ ಮತ್ತು ಮನಸ್ಸಿನ ನಿರ್ಮಲತೆ, ಅದ್ರೋಹ ಅನಭಿಮಾನ-ಈ ಗುಣಗಳು ದೈವೀ ಸಂಪತ್ತಿಗೆ ಹುಟ್ಟಿದವನಿಗೆ ಉಂಟಾಗುವವು" (ಗೀತಾ. ೧೬-೧,೨, ೩,) ಇಂಥ ಸ್ವಭಾವವುಳ್ಳ ಜನರು ಇಲ್ಲಿ ಹಲವರಾದರೂ ಉಂಟು. ಆದರೆ ಅವರು ತತ್ತ್ವ ಅಂದರೆ ಬ್ರಹ್ಮತ್ವವೂ ತಮ್ಮಂತೆಯೆಂದು ಸಾಧನೆಯಿಂದ ಹುಡುಕಿ, ತಿಳಿಯದಿರುವರು.

ತಾವು ಹಡೆದವರು, ತಮ್ಮನ್ನು ಹಡೆದವರು, ತಾವು ಹೊಂದಿದ ಆಸ್ತಿ ಸಂಪತ್ತು, ಇವುಗಳಲ್ಲಿ ಅನುರಕ್ತರಾಗಿ ಇವುಗಳಲ್ಲಿ ಸುಖ ಹುಡುಕುತ್ತಾರೆ. ಬಾಹ್ಯ ಪೂಜೆ ಕರ್ಮಗಳಲ್ಲಿ ಆಸಕ್ತರಾಗುತ್ತಾರೆ. ಓದಿದ ಜ್ಞಾನವೇ ಬ್ರಹ್ಮತ್ವವೆಂದೂ, ಸ್ವಕಲ್ಪಿತ ದೇವತೆಯೇ ಸರ್ವಸ್ವವೆಂದೂ ಭಾವಿಸುತ್ತಾರೆ. ಇಂಥ ಮಾಯೆ ಬಡಿದುಕೊಂಡರೆ, ಸತ್ಯದ ಮರ್ಮ ಗೊತ್ತಾಗುವುದೇ ಹೇಗೆ?

೬೭೧

ನೀವು ಕಲಿಗಿಯುಂಡು ನೆಲವು ದೆಲಿಯುವಾಡು, ವಸುಧಯುಂದು ದ್ರೋವ ವದಲಡೆಂದು,
ಕಾಲು ಕದಲ ನೀಕಗ್ರಕ್ಕುನೆ ನಿನುಜೀರು, ವಿಶ್ವದಾಭಿರಾಮ ವಿನುರ ವೇಮು..

ನೀನು–ಇರುತಲಿಪ್ಪ ನೆಲವ ತಿಳಿಯುವವನು.
ವಸುಧೆಯಲ್ಲಿ ಹೋಗಿ ವರ್ಜಿಸನವ.
ಕಾಲ ಕದಲದಂತೆ. ಕೂಡುವನು ನಿನ್ನನೆ.
ವಿಶ್ವದಾಭಿರಾಮ ಕೇಳು ವೇಮ.

ಛಾಂದೋಗ್ಯ ಉಪನಿಷತ್ತಿನಲ್ಲಿ ' ಸರ್ವಂ ಖಲ್ವಿದಂ ಬಹ್ಮ ' ' ನಿಜವಾಗಿ ಸರ್ವವೂ ಈ ಬ್ರಹ್ಮವೇ ಆಗಿದೆ ' ಎಂದು ಹೇಳಲಾಗಿದೆ. ಅದೇ ಉಪನಿಷತ್ತು, ಇನ್ನು ಆ ದ್ಯುಲೋಕಕ್ಕಿಂತ ಆಚೆಗೆ, ಎಲ್ಲಕ್ಕಿಂತ ಮೇಲುಗಡೆ, ಎಂದರೆ ಪ್ರತಿಯೊಂದರ ಮೇಲುಗಡೆ, ಉತ್ಕೃಷ್ಟವಾದ ಉತ್ತಮ ಲೋಕಗಳಲ್ಲಿ ಯಾವ ಜ್ಯೋತಿಯು ಪ್ರಕಾಶಿಸುತ್ತಿರುವುದೋ ಅದೇ ಪುರುಷ ಶರೀರದಲ್ಲಿರುವ ಜ್ಯೋತಿಯು " ಎಂದು ಹೇಳುವುದು. ಇನ್ನು ಕಠೋಪನಿಷತ್ತಿನಲ್ಲಿ ಹೀಗೆ ಹೇಳಲಾಗಿದೆ: " ಅಂಗುಷ್ಠದಷ್ಟಿರುವ ಅಂತರಾತ್ಮನಾದ ಪುರುಷ ಯಾವಾಗಲೂ ಪ್ರಾಣಿಗಳ ಹೃದಯದಲ್ಲಿ ನೆಲೆಸಿರುವನು." ಮುಂಡಕೋಪನಿಷತ್ತು " ಪುರುಷನೇ ಈಯೆಲ್ಲ ವಿಶ್ವವು. ಇವನೇ ಕರ್ಮ, ತಪ, ಬ್ರಹ್ಮ, ಪರಾ, ಅಮೃತ ಎಲೈ ಸೌಮ್ಯನೇ, ಇವನೇ ಹೃದಯ ಗುಹೆಯಲ್ಲಿ ಅಡಗಿರುವನು. ಯಾವನು ಈ ಹೃದಯದ ಗುಟ್ಟು ತಿಳಿದಿರುವನೋ, ಅವನು ಅವಿದ್ಯೆಯ ಗಂಟು ಬಿಚ್ಚಿ ಒಗೆಯುವನು."

ಬ್ರಹ್ಮ ಇರುವ ನೆಲವು ದೇಹದೊಳಗೆ; ಹೃದಯದಲ್ಲಿ. ಇದೇ ಸರ್ವೋಪನಿಷತ್ತಿನ ಹೇಳಿಕೆಯೂ ಆಗಿದೆ. ಇದನ್ನು ತಿಳಿಯುವವನು ಅಲ್ಲಿ ಇಲ್ಲಿ, ತೀರ್ಥಕ್ಷೇತ್ರಗಳಲ್ಲಿ ಹುಡುಕಾಡುತ್ತ ಕಾಲ ಕಳೆಯುವದಿಲ್ಲ. ಗಮ್ಯ ಸ್ಥಾನವನ್ನು ಗುರುತಿಸಿ ಬ್ರಹ್ಮವೇ ತಾನಾಗುವನು.

೬೭೨

ನೀವು ನಿಲ್ಚಿಯುಂಡ ನಿಖಿಲಂಬು ನಿಲುವದು, ನಿಲ್ಚಿಯುಂಡು ನೆಂಡ ನೀರುವಲೆನು.
ನೀವು ನಿಶ್ಚಯುಂಬು ನಿಖಿಲಂಬು ಮಾಯಯೇ, ವಿಶ್ವದಾಭಿರಾಮ ವಿನುರ ವೇಮ.

ನೀನು ನಿಂತುಕೊಳುವೆ; ನಿಖಿಲವೂ ನಿಲ್ಲದು;
ಬಿಸಿಲುಗುದುರೆಯಂತೆ ಬರಿದೆ ನಿಲುವು;
ನೀನು ನಿಶ್ಚಯನಿಹೆ;ನಿಖಿಲವೂ ಮಾಯೆಯೆ.
ವಿಶ್ವದಾಭಿರಾಮ ಕೇಳು ವೇಮ.

ಶರೀರ ಬರುತ್ತದೆ; ಶರೀರ ಹೋಗುತ್ತದೆ. ಈ ಲೋಕದ ವಸ್ತುಗಳೂ ಅದೇ ರೀತಿ. ಪಂಚಭೂತಗಳಿಂದ ಸೃಷ್ಟಿಯಾಗುತ್ತವೆ. ಮತ್ತೆ ಪಂಚಭೂತಗಳಲ್ಲಿಯೇ ಲಯವಾಗುತ್ತದೆ. ಯಾವುದು ಸೃಷ್ಟಿ ಸ್ಥಿತಿ ಲಯಗಳ ಬದಲಾವಣೆಯನ್ನು ಮೀರಿದೆಯೋ, ಯಾವುದು ದೇಶ,

ಕಾಲ, ವ್ಯಕ್ತಿಗಳ ಚಕ್ರದಿಂದ ದೂರವಾಗಿದೆಯೋ ಅದು ಅಕ್ಷರ. ಕ್ಷರ ಎಂದರೆ, ವಿರೂಪ, ರೂಪಾಂತರ, ರೂಪಾತಿಕ್ರಮ. ಈ ಪ್ರಪಂಚದಲ್ಲಿ ಏನೇನು ಕಾಣಬರುವುದೋ ಅದೆಲ್ಲ ಕ್ಷರ.

ಅಕ್ಷರವಾದ ಆತ್ಮ ನಿಲ್ಲುವುದು. ಕ್ಷರವಾದ ನಿಖಿಲ ಪ್ರಪಂಚ ನಿಲ್ಲಲಾರದು. ಈ ಲೋಕ ದೃಷ್ಟಿಯಿಂದ ನೋಡಿದಾಗ 'ಕ್ಷರಂ ಪ್ರಧಾನಂ' ಎನ್ನಿಸಬಹುದು. ಆದರೆ ಇಲ್ಲಿ ಇರುವುದೆಲ್ಲ ಬಿಸಿಲುಗುದುರೆಯಂತೆ. ಬಿಸಿಲುಗುದುರೆಯೆಂದರೆ, ನೀರಡಿಸಿದ ಕುದುರೆಗೆ ನೆಲದ ಮೇಲೆ, ಉರಿಬಿಸಿಲು ಇರುವಾಗ, ನೀರಿನಂತೆ ಕಾಣುವ ಛಾಯೆ. ಆದರೆ ಅಲ್ಲಿ ನೀರಿಲ್ಲ. ಅನಂತ ಕಾಲದ ಆತ್ಮ ದೃಷ್ಟಿಯಲ್ಲಿ ಆಯುಷ್ಯ ಅರೆನಿಮಿಷದಂತೆ. ಇಲ್ಲಿ ಸುಖ-ದುಃಖ ವೆಂಬುದು, ಅರನುನೆ-ಅರಣ್ಯವೆಂಬುದು, ಈಗ ಕಂಡು, ಇನ್ನೊಂದು ಗಳಿಗೆಯಲ್ಲಿ ಕಾಣದಾದಂತೆ. ಬಿಸಿಲುಗುದುರೆಯಂತೆ.

ಆತ್ಮನಷ್ಟೇ ನಿಶ್ಚಯವಾಗಿರುವವನು. ಮಾಯೆಯಿಂದ ಆವೃತನಾಗಿಲ್ಲ. ಉಳಿದುದೆಲ್ಲ ಮಾಯೆಯಿಂದ ಆವೃತವಾಗಿದೆ. ಅದರಿಂದ ಬದಲಾವಣೆ ಹೊಂದುತ್ತಿದ್ದರೂ, ಕ್ಷಣಿಕವಾಗಿದ್ದರೂ, ನಿತ್ಯವೆಂಬ ಭಾವನೆಯನ್ನು ಹುಟ್ಟಿಸುತ್ತವೆ.

೬೭೩

ಪಿಕಮು ವನಮುಲೋನ ವಿಲಸಿಲ್ಲಬಲಿಕಿನ, ಭಂಗಿ ಪ್ರಾಜ್ಞಜನುಲಪಲಕು ಗಲಕು,
ಕಾಕಿಕೂತ ಬೋಲು ಕಲುಷಾತ್ಮುವನಂಬು, ವಿಶ್ವದಾಭಿರಾಮ ವಿನುರ ವೇಮ.

ಕೋಗಿಲೆ ವನದಲ್ಲಿ 'ಕುಹೂ'ಹಾಡುವಂತೆ,
ನುರಿತ ಜನರ ಭಾವ; ನಡೆಯು–ನುಡಿಯು.
ಕಾಗೆ ಕೂಗಿನಂತೆ ಕಲುಷಾತ್ಮನ ವಚನ.
ವಿಶ್ವದಾಭಿರಾಮ ಕೇಳು ವೇಮ.

ಕೋಗಿಲೆ ವಸಂತಕಾಲದಲ್ಲಿ ಚಿಗುರುವ ಮಾಮರದಲ್ಲಿ ಕುಳಿತು ಸುತ್ತಲೂ ನಿಸರ್ಗದ ಸೊಬಗು ಕಂಡು ತಣಿಯುತ್ತದೆ. ಆನಂದ ತುಂದಿಲವಾಗಿ 'ಕುಹೂ' 'ಕುಹೂ' ಎಂದು ಮಧುರ ಕಂಠದಿಂದ ಇಂಚರಗೈಯ್ಯುತ್ತದೆ. ತನ್ನ ಸ್ವಾನುಭವ ಆನಂದವೇ ಕೋಗಿಲೆಯ ಕೊರಳು ಧ್ವನಿಯಾಗಿ ಹೊರಸೂಸುವುದು.

ಕಾಗೆಯ ರೀತಿ ಬೇರೆ. ಕಾಗೆ ಒಂದು ಅನ್ನದ ಅಗಳು ಕಂಡರೆ ತೀರಿತು. ಅದಕ್ಕಾಗಿ ಸುರುವಾಯಿತು. 'ಕ್ಕಾವ್' 'ಕ್ಕಾವ್' ಎಂದು ಕರ್ಣ ಕಠೋರವಾಗಿ ಒದರುತ್ತದೆ. ತನ್ನ ಬಳಗವನ್ನೆ ಅಲ್ಲಿ ಕೂಡಿಸುತ್ತದೆ.

ಸುತ್ತು–ಮುತ್ತು ಪಸರಿಸಿದ ಸಂತೋಷವನ್ನು ತನ್ನದಾಗಿ ಮಾಡಿಕೊಂಡ ಭಾವ ಹೊಂದಿ, ಅನ್ಯರಿಗೆ ಸಂತೋಷವಾಗುವಂತೆ ನಡೆಯುವದೂ, ನುಡಿಯುವದೂ ನುರಿತ ಜನರ ಸ್ವಭಾವ. ಇದೇ ಕೋಗಿಲೆಯ ರೀತಿ.

ಏನನ್ನೋ ಕಂಡು, ಆಶೆಬಟ್ಟು ತನ್ನ ಬಂಧು-ಬಳಗವನ್ನೂ ಕಲೆ ಹಾಕಿಕೊಂಡು, ಕಚ್ಚಾಡುವದು, ಕೂಗಾಡುವದು, ಕಲುಷಾತ್ಮನ ನುಡಿಯು; ಇದೇ ಕಾಗೆಯ ರೀತಿ.

೬೭೪

ಜ್ಞಾನುಲಮನಿಯೆ ೨ಚಿ ಚಪಲಾತ್ಮುಲಗುವಾರು, , ತೆಲಿವಿಲೇಕ ತಮ್ಮುದೆಲಿಯುಲೇರು.
ಕಷ್ಟಗಹನಮುದು ಭ್ರಷ್ಟುಲೈಯುಂದರು, ವಿಶ್ವದಾಭಿರಾಮ ವಿನುರ ವೇಮು.

ಜ್ಞಾನಿಯೆಂದು ತಿಳಿದು ಚಪಲಾತ್ಮರಾದರು.
ತಿಳಿವು ಇಲ್ಲ; ತಮ್ಮ ತಿಳಿಯರಲ್ಲ.
ಕಷ್ಟವೆಂಬರಣ್ಯ ಭ್ರಷ್ಟರಾಗಿ ಹೊಗುವ.
ವಿಶ್ವದಾಭಿರಾಮ ಕೇಳು ವೇಮ.

'ವಿದ್ಯಾ-ವಿನಯಗಳಿಂದ ಕೂಡಿದ ಬ್ರಾಹ್ಮಣ, ಆಕಳು, ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವನು - ಇವರೆಲ್ಲರಲ್ಲಿಯೂ ಸಮದರ್ಶಿಯಾಗಿರುವವರು ಜ್ಞಾನಿಗಳು''

ಭಗವದ್ಗೀತೆ - ೫ – ೧೮

ಸರ್ವಭೂತಗಳಲ್ಲಿಯೂ, ಸಮನಾದ ದೋಷರಹಿತವಾದ ಆತ್ಮನೊಬ್ಬನೇ ಇರುವನೆಂದು ತಿಳಿದು, ಸ್ಥಿರ ಬುದ್ಧಿ ಹೊಂದಿ ಇರುವವನು ಬ್ರಹ್ಮಜ್ಞಾನಿ. ಆದರೆ ಬಹ್ಮ ಸ್ವರೂಪವನ್ನು, ಇಷ್ಟೇ ಎಂದು ಓದಿ ತಿಳಿದಿರುವೆವೆಂದೂ, ತಾವು ಜ್ಞಾನಿಗಳಾಗಿರುವೆವೆಂದೂ, ಹೇಳಿಕೊಂಡು ತಿರುಗುವವರು ಸ್ಥಿರಬುದ್ಧಿಯವರಲ್ಲ. ಅವರು ತಾವು ಓದಿಕೊಂಡುದನ್ನು ಸಾಧನೆಯ ಮೂಲಕ ಕಂಡುಕೊಂಡಿರೆ, ಆತ್ಮಜ್ಞಾನಿಯಾಗುವರು. ಇಲ್ಲವಾದರೆ, ಅವರು ವಿಷಯ ವಸ್ತುಗಳಲ್ಲಿ ಆಸಕ್ತರಾಗುತ್ತಾರೆ. ಸುಖ ಅರಸುತ್ತ ಸಾಗುತ್ತಾರೆ. ವಿಷಯ ವಸ್ತು ಹೊಂದುವ ಚಪಲ ಉಂಟಾಗುತ್ತದೆ. ಅವರು ಮೋಹದಿಂದ ಮೂಢರಾಗುತ್ತಾರೆ. ಹೀಗೆ ಸತ್ಯದ ತಿಳಿವು ಅವರಿಗೆ ಆಗದಿರುವದರಿಂದ ಅವರು ತಮ್ಮ ದೈವಸ್ವರೂಪವನ್ನು ತಿಳಿಯದೆ, ಇತರ ಅವಿದ್ಯೆಯ ದಾಸರಂತೆ ವರ್ತಿಸುತ್ತಾರೆ.

ಹೀಗೆ ಅವರು ಜ್ಞಾನಾನುಭವದ ಸಾಧನವಾದ ಸ್ವಾಧ್ಯಾಯ ನಡೆಸಿದರೂ, ಚಪಲಕ್ಕೊಳಗಾಗಿ ಓದು ಜ್ಞಾನವೆಂದು ತಪ್ಪಾಗಿ ತಿಳಿದು, ಜ್ಞಾನಾನುಭವ ಮಾರ್ಗದಿಂದ ಭ್ರಷ್ಟರಾಗಿ, ಅಜ್ಞಾನದ ಅಡವಿ ಸೇರುವರು.

೬೭೫

ಪಾಪಪುಣ್ಯಮುಲನು ಪಶುಲಕಾಪೆರುಗುನಾ ? ಧರನು ಬರಮಯೋಗಿಯೆರುಗುಗಾನಿ.
ಲೋನಿಪೊಂದಿಕಗನಿ ಲೋಹಮುಲ್ ಗೂರ್ಪುಮು, ವಿಶ್ವದಾಭಿರಾಮ ವಿನುರ ವೇಮು.

ಪಾಪಪುಣ್ಯಗಳನು ಪಶುಪಾಲನರಿವನೆ ?
ಅವನಿ ಪರಮಯೋಗಿ ಅರಿಯುತಿಹನು.
ಗುಣವನರಿಯದೆಂತು ಕೂಡಿಸುವುದು ಧಾತು ?
ವಿಶ್ವದಾಭಿರಾಮ ಕೇಳು ವೇಮ.

'ಪಶ್ಯನಾತ್ ಪಾಶನಾಚ್ಚ ಪಶವಃ ನೋಡುವುದರಿಂದ ಮತ್ತು [ಕಾರ್ಯಕಲಿಯಿಂದ] ಪಾಶನದಿಂದ ಪಶುವೆನ್ನಿಸುವುದು. ಪಶುಗಳಲ್ಲಿ ದೇವ, ಮನುಷ್ಯ ಮತ್ತು ತಿರ್ಯಗ್ಜಂತುಗಳು ಸಮಾವೇಶವಾಗುತ್ತವೆ. ಪಶುಗಳನ್ನು ಪಾಲಿಸುವವನು ಪಶುಪಾಲನು. ಪಶುಗಳ ರಕ್ಷಕನು.

ಒಳಿತು ಮಾಡುವದು ಪುಣ್ಯ. ಕೆಡುಕು ಮಾಡುವುದು ಪಾಪ. ಪಾಪ ಪುಣ್ಯಗಳು ದೇಶಕಾಲ ವ್ಯಕ್ತಿಗಳ ಮರ್ಯಾದೆಯ ಕಟ್ಟಿಗೊಳಗಾಗಿ ನಡೆಯುವ ಧರ್ಮಾಧರ್ಮ ಕಾರ್ಯ. ಸರ್ವ ಪಶುಗಳ ಪಾಲಕನು ನಿಮಿತ್ತ ಮಾತ್ರನಾಗಿದ್ದು, ಪಾಪ ಪುಣ್ಯಗಳ ಭೇದಾದಿ ಲಕ್ಷಿಸುವುದಿಲ್ಲ.

"ಪರೋಪಕಾರ: ಪುಣ್ಯಾಯ ಪಾಪಾಯ ಪರಪೀಡನಂ ||"
ಸಂತೋಷಂ ಜನಯೇತ್ ಪ್ರಾಜ್ಞ: ತದೇನೇಶ್ವರ ಪೂಜನಂ||

ಲೋಕದಲ್ಲಿ ಪರಮಯೋಗಿಗಳಾದ ಪ್ರಾಜ್ಞರು ಪಾಪ ಪುಣ್ಯಗಳನ್ನು ತಿಳಿಯುತ್ತಾರೆ. ''ನಾವು ಇತರರಿಗೆ ಉಪಕರಿಸಿದರೆ ಪುಣ್ಯವು; ಇತರರನ್ನು ಪೀಡಿಸಿದರೆ ಪಾಪ. ಪ್ರಾಜ್ಞರು ಸದಾ ಸಂತೋಷ ಹುಟ್ಟಿಸುತ್ತಾರೆ. ಇದೇ ಈಶ್ವರ ಪೂಜೆ." ಇದುವೇ ಧರ್ಮ.

"ಧರ್ಮ ಏವ ಹತೋ ಹಂತಿ, ಧರ್ಮೋ ರಕ್ಷತಿ ರಕ್ಷಿತಃ" "ನಾವು ಧರ್ಮವನ್ನು ನಾಶ ಮಾಡಿದರೆ, ಧರ್ಮ ನಮ್ಮನ್ನು ನಾಶ ಮಾಡುತ್ತದೆ. ಧರ್ಮವನ್ನು ರಕ್ಷಿಸುವವನು ನಿಜವಾದ ರಕ್ಷೆ ಹೊಂದಿದವನು." ಪಾಪ ಪುಣ್ಯ ಧರ್ಮಗಳನ್ನು ಪರಮಯೋಗಿ ಅರಿತಿರುವನು.

ಧಾತುಗಳನ್ನು ಜೋಡಿಸಬೇಕಾದರೆ, ಆಯಾ ಧಾತುಗಳು ಗುಣವನ್ನರಿಯಬೇಕಷ್ಟೇ. ಅದೇ ರೀತಿ ಪಾಪ--ಪುಣ್ಯಗಳನ್ನು ಅರಿಯದೆ. ಒಳಿತು ಆರಿಸಿ, ಸಾತ್ವಿಕ ಗುಣ ಹೊಂದಿ, ಅದನ್ನೂ ದಾಟಿದ ಸ್ಥಿತಿ ತಲುಪಬೇಕಲ್ಲವೇ?

೬೭೬

ಪೆದ್ದಲವಚನಮುಲು ಪ್ರೇಮತೋದಾವಿನಿ, ಅಟುಲನಡುವ ಬೋವ ನನುವುಪಡದು.
ಪುಲಿನಿಜೂಚಿ ನಕ್ಕ ಪೂತಪೂಸಿನಯಟ್ಲಿ, ವಿಶ್ವದಾಭಿರಾಮ ವಿನುರ ವೇಮು.

ಹಿರಿಯರ ನುಡಿಗಳನು ಹದುಳದಿಂದಾಲಿಸಿ,
ಅಂತೆ ನಡೆಯದಿರಲು ಅಲ್ಲ ಫಲವು.
ಹುಲಿಯ ಕಂಡು ನರಿಯು ಗಂಧ ಬಳಿದ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಋಷಿಗಳು ಉಪನಿಷತ್ತಿನಲ್ಲಿ ಬ್ರಹ್ಮ ತಿಳಿಸುವ, ಹೊಂದುವ ವಾಕ್ಯಗಳನ್ನುಸುರಿದಿದ್ದಾರೆ. ಅಲ್ಲಿಂದೀಚೆಗೆ ಅನೇಕ ಯೋಗಿಪುಂಗವರು ಅನುಭವ ನುಡಿಗಳನ್ನು ತಿಳಿಸಿದ್ದಾರೆ. ಅವುಗಳನ್ನು ಪ್ರೀತಿಯಿಂದ ಕೇಳಿ, ಅದರಂತೆ ಬಾಳಬೇಕು. ನಮ್ಮ ನಡೆ-ನುಡಿಗಳಿಗೆ ಋಷಿಗಳ ವಾಕ್ಯಗಳಲ್ಲಿ ಮೂಡಿದ ಭಾವನೆಯು ಪ್ರೇರಕವಾಗಬೇಕು.

ಆ ರೀತಿ ನಡೆಯದಿದ್ದರೆ ಫಲವು ದೊರಕದು. ಬರಿ ವಾಕ್ಯಗಳನ್ನು ಓದಿ,ಕಂಠ ಪಾಠ ಮಾಡಿ, ಪ್ರವಚನಗಳಲ್ಲಿ ಉದ್ಧರಿಸುವುದರಿಂದ ಆತ್ಮಜ್ಞಾನವಾಗಲಾರದು.

ಹಿರಿಯ ಋಷಿಗಳು ಹುಲಿಗಳಂತೆ. ಅವರು ಶಕ್ತಿ ಸಂಪಾದಿಸಿದ್ದರು. ಅವರನುಡಿ ಗುಡುಗಿನಂತೆ ಪ್ರಭಾವಿಯೆನಿಸಿತು. ನರಿಗೆ ಶಕ್ತಿಯಿಲ್ಲ. ಹುಲಿಯ ಶಕ್ತಿ ಗಳಿಸದ ನರಿಯೊಂದು, ವೈಗೆ ಹುಲಿಯಂತೆ ತೋರುವ ರೆಸ ಲೇಪಿಸಿಕೊಂಡರೆ ಬರುವುದೇನು ?

೬೭೭

ಬುದ್ಧಿಯುತುನಕೇಲ ಪೊಸಗನಿ ಸಖ್ಯಂಬು ? ಕಾರ್ಯವಾದಿಕೇಲ ? ಕಡುಜಲಂಬು,
ಕುತ್ಸಿತುನಕುನೇಲ ಗುರುದೇವತಾ ಭಕ್ತಿ ? ವಿಶ್ವದಾಭಿರಾಮ ವಿನುರ ವೇಮ.

ಸುಬುದ್ಧಿಯವಗೇಕೆ ? ಸಲ್ಲದವನ ಸಖ್ಯ.
ಕಾರ್ಯವಾದಿಗೇಕೆ ? ಕಡುತರ ಹಠ.
ಕುತ್ಸಿತನಿಹಗೇಕೆ ? ಗುರುದೇವತಾ ಭಕ್ತಿ?
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆಯ ಬುದ್ಧಿ ಇರುವವನು ಒಳಿತು ಕೆಡುಕುಗಳನ್ನು ನಿಶ್ಚಯಿಸಬಲ್ಲನು. ಇವುಗಳನ್ನು ನಿಶ್ಚಯಿಸುವ ಶಕ್ತಿ ಬುದ್ಧಿಯ ವಿಶೇಷ. ಯಾವನು ಯೋಗ್ಯವಾದುದನ್ನು ಮಾಡುವುದಿಲ್ಲವೋ ಅವನು ಸಲ್ಲದವನು. ಸಲ್ಲದವನೆಂದು ತಿಳಿದ ಮೇಲೆ ಸಂಗ ತಕವಲ್ಲ. ಏಕೆಂದರೆ, ಸಂಗದಿಂದ ಮನಸ್ಸಿನಲ್ಲಿ ಚಪಲವುಂಟಾಗುವುದು. ಚಪಲದಿಂದ ವಿಷಯಾಸಕ್ತಿ ಹುಟ್ಟುವುದು. ಕಾರಣ ಸುಬುದ್ಧಿ ಉಳ್ಳವನು ಸಲ್ಲದವನ ಸಖ್ಯ ಮಾಡಬಾರದು.

ಯಾರು ಕಾರ್ಯಸಾಧನೆಗಾಗಿ ಪ್ರಯತ್ನಿಸುವರೋ, ಅವರು ತಮ್ಮ ಮನಸ್ಸಿನ ಹ್ನ ಸಾಧಿಸಲಾರರು. ತಮ್ಮ ಕಾರ್ಯವು ಹೇಗೆ ಉಂಟಾಗುವುದೋ,ಅಂಥ ಸುಲಭ ಉಪಾಯ ಕಂಡುಕೊಳ್ಳುತ್ತಾರೆ.

ಕುತ್ಸಿತನು ಕೇಳು ವಿಷಯಾಭಿಸಕ್ತನು. ಭಕ್ತಿ, ಆತ್ಮದತ್ತ ಆಕರ್ಷಣೆ. ಅಂದರೆ ಪ್ರೇಮವಿರುವಾಗ ಇರುವ ಮನಸ್ಸಿನ ಸ್ಥಿತಿ. ಈ ಸ್ಥಿತಿಯಲ್ಲಿ ಗುರು–ದೇವತೆಗಳಲ್ಲಿ ಪ್ರೇಮ ಉಂಟಾಗುವವು. ಮನಸ್ಸು ಅತ್ತ ಒಲಿಯುವುದು. ಕುತ್ಸಿತನ ಆಕರ್ಷಣೆ ವಿಷಯ–ವಸ್ತುಗಳಲ್ಲಿ. ಅದು ಕಾಮ. ಅಲ್ಲಿ ಕೇವಲ ಆಸಕ್ತಿ ಉಂಟು. ಭಕ್ತಿ ಇಲ್ಲ. ಕುತ್ಸಿತನಾದವನು ಗುರುದೇವತೆಗಳಲ್ಲಿ ಭಕ್ತಿ ಉಳ್ಳವನೆಂದುಕೊಂಡರೆ, ಅದು ಕೇವಲ ಬೂಟಾಟಕೆ.

೬೭೮

ಎಲ್ಲಿ ನೇಡು ಮರಿಯು ನೆಲ್ಲುಡಿಯೈನನು, ಮನಸು ನಿಲ್ಪವಾಡು ಮುಂಚಿವಾಡು.
ಶಿವುಡು ಬರ್ತ ಕರ್ತಚಿಂತಿಂಪ ದಾನಯಾ, ವಿಶ್ವದಾಭಿರಾಮ ವಿನುರ ವೇಮ.

ಇಂದಿನ ದಿನ ಮತ್ತೆ ಎಂದಾದರಾಗಲಿ,
ಮನಸು ನಿಲಿಸುವವನು ಮತಿವಂತನು.
ಶಿವನೆ ಭರ್ತ ಕರ್ತ, ಚಿಂತಿಸುವನು ತಾನು.
ವಿಶ್ವದಾಭಿರಾಮ ಕೇಳು ವೇಮ.

ಸಾಧನೆಯನ್ನು ಎಷ್ಟು ಬೇಗ ಪ್ರಾರಂಭಿಸುವರೋ, ಅಷ್ಟು ಒಳ್ಳೆಯದು. ಕಳೆದ ನಿಮಿಷ ಮರಳಿ ಬಾರದು. ಇಂದೇ ಏಕಾಗಬಾರದು ? ಶುಭಸ್ಯ ಶೀಘ್ರಂ. ಹೋಗಲಿ, ನಾಳೆಯಾದರೂ ಆಗಲಿ; ಸಾಧ್ಯವಾಗದಿದ್ದರೆ, ನಾಡಿದ್ದು ಆಗಲಿ. ಮನಸ್ಸು ವಿಷಯ ವಸ್ತುಗಳತ್ತ ಚಲಿಸದಂತೆ ನಿಗ್ರಹಿಸುವನು. ಒಳ್ಳೇ ಬುದ್ಧಿಶಾಲಿಯು.

ಅಂಥ ಇಂಥ ವಿಚಾರ ಬೇಡ. ಶಿವ ಅಂದರೆ, ಬ್ರಹ್ಮ; ಸಕಲ ಚರಾಚರದ ಈಶತ್ವ ಹೊಂದಿದ ಪ್ರಭು; ಭರ್ತ ಬ್ರಹ್ಮನೇ ತನ್ನ ಸಂಕಲ್ಪ ಮಾತ್ರದಿಂದ ಎಲ್ಲವನ್ನೂ ಸೃಷ್ಟಿ ಮಾಡುವನು. ಅವನೇ ಚಿಂತಿಸುತ್ತಾನೆ. ಎಲ್ಲವೂ ಅವನ ಸಂಕಲ್ಪದಂತೆ ನಡೆಯುತ್ತದೆ.

(ಹೋಲಿಸಿ ನೋಡಿರಿ:

"ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು |
ಮಾಮೇ ವೈಷ್ಯಸಿ ಸತ್ಯಂ ತೇ ಪ್ರತಿ ಜಾನೇ ಪ್ರಿಯೋಽಸಿ ಮೇ ||.
"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ |
ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ||

ನನ್ನಲ್ಲಿಯೇ ಮನಸ್ಸುಳ್ಳವನಾಗು,ನನ್ನ ಭಕ್ತನಾಗು. ನನ್ನನ್ನೇ ಆರಾಧಿಸುವವನಾಗು. ನನ್ನನ್ನು ನಮಸ್ಕರಿಸು, ನನ್ನನ್ನೇ ಸೇರುವೆ; ಸತ್ಯವಾಗಿ ಪ್ರತಿಜ್ಞೆ ಮಾಡುತ್ತೇನೆ. [ಏಕೆಂದರೆ ನೀನು] ನನಗೆ ಪ್ರಿಯನಾಗಿರುವೆ.

ಸರ್ವ ಧರ್ಮಗಳನ್ನು (ಎಂದರೆ ಧರ್ಮ–ಅಧರ್ಮಗಳ ಜೊಂಜಾಟ ತೊರೆದು ನಿಷ್ಕರ್ಮಿಯಾಗಿ) ಪರಿತ್ಯಾಗ ಮಾಡಿ, ನನ್ನೊಬ್ಬನಲ್ಲಿ ಶರಣು ಹೊಂದು. ನಾನು ನಿನ್ನನ್ನು ಸರ್ವ ಪಾಪಗಳಿಂದ ಬಿಡಿಸುವೆನು; ಶೋಕಿಸಬೇಡ. ಭಗವದ್ಗೀತಾ ೧೮–೬೫,೬೬)

೬೭೯

ಏಮಿಗೊಂಚುವಚ್ಚಿ ನೇಮಿದಾಗೊನಿಪೋವು, ಪುಟ್ಟುವೇಳ ನರುಡು ಗಿಟ್ಟುವೇಳ.
ಧನಮು ಲೆಚಟಕೇಗು ದಾನೇಗು ನೆಚಟಕಿ ? ವಿಶ್ವದಾಭಿರಾಮ ವಿನುರ ವೇಮ.

ಏನು ಕೊಟ್ಟು ಬಂದೆ ? ಏನು ಕೊಂಡೊಯ್ಯುವೆ ?
ಜನಿಸುವಾಗ ನರನು ಸಾಯುವಾಗ,
ಧನವೆಲ್ಲಿ ಹೋಹುದೊ ? ತಾನೆಲ್ಲಿ ಹೋಹನೊ ?
ವಿಶ್ವದಾಭಿರಾಮ ಕೇಳು ನೇಮ.

ಆತ್ಮ ಸಂಕಲ್ಪದಿಂದ ಸೃಷ್ಟಿಯಾಗುವುದು. 'ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ' 'ಇದರಿಂದ ಪ್ರಾಣ, ಮನಸ್ಸು ಮತ್ತಿತರ ಸಕಲ ಇಂದ್ರಿಯಗಳೂ ಉಂಟಾಗುವವು, ಎಂದು ಮುಂಡಕೋಪನಿಷತ್ತಿನಲ್ಲಿ ಸೃಷ್ಟಿಕ್ರಮ ಹೇಳಲ್ಪಟ್ಟಿದೆ. ಪ್ರಳಯವು ಸೃಷ್ಟಿಯ ವಿಪರ್ಯಯ ಕ್ರಮವಷ್ಟೇ. ಬರುವುದು, ಹೋಗುವುದು ಎಂದು, ಸೃಷ್ಟಿಯಾಗುವ, ಲಯವಾಗುವ ಈ ಶರೀರ ಕುರಿತು ಹೇಳಲಾಗುತ್ತಿದೆ. ಈ ಶರೀರವು ಸೃಷ್ಟಿಯಾ

ಗುವಾಗ, ಆತ್ಮ ಸಂಕಲ್ಪ ಹೊರತು ಮತ್ತಾವ ಕಾರಣವಿಲ್ಲ. ಶರೀರದ ಲಯವಾದ ಮರಣವೂ ಆಪ್ತೆ ಅಲ್ಲಿ ಧನ ಕನಕಗಳ ಗೊಡವೆಯೇ ಇಲ್ಲ.

ಆದರೆ ವಿಚಿತ್ರವೆಂದರೆ, ಲೋಕ ವ್ಯವಹಾರದಲ್ಲಿ ಜನರು ಧನ-ಕನಕಗಳೇ ತಮ್ಮ ಸರ್ವಸ್ವವೆಂದು ಬಗೆಯುತ್ತಾರೆ. ಧನ-ಕನಕಗಳಿಂದ ಸರ್ವಸುಖ ಲಭ್ಯವೆಂದು ಬಗೆಯುತ್ತಾರೆ. ಸತ್ಯವಾದರೋ ಬೇರೆ ವಿಧವಾಗಿದೆ. ಜನಿಸುವಾಗ ಇಲ್ಲವೆ ಸಾಯುವಾಗ, ತಾನು ಎಂದು ತಿಳಿದ ಶರೀರವೂ ನಾಶವಾಗುತ್ತದೆ. ಧನದ ಸಂಬಂಧವೂ ಉಳಿಯುವುದಿಲ್ಲ.

(ಹೋಲಿಸಿ ನೋಡಿರಿ:

"ಹತ್ತು ಎಂಟು ಲಕ್ಷಗಳಿಸಿ ಮತ್ತೆ ಸಾಲದೆನುತ ಪರರ |
ಅರ್ಥಕಾಗಿ ಆಸೆ ಮಾಡಿ ನ್ಯಾಯಮಾಡುವರೊ ||
ಬಿತ್ತಿ ಬೆಳೆವೆನೆಂದು ನೀವು ವ್ಯರ್ಥ ಚಿಂತೆ ಮಾಡಿ ಬರಿದೆ,
ಸತ್ತು ಹೋದ ಮೇಲೆ ನಿಮ್ಮ ಅರ್ಥವಾರಿಗೊ ? ||"

ಕನಕದಾಸರು- ಕೀರ್ತನೆಗಳು)

೬೮೦

ಕಡುಪುಲೋನಿ ರೋತ ಕಡುನೋಟಯೆಂಗಿಲಿ, ಗಡುಗವಶಮೆ ಬ್ರಹ್ಮಕೊಡುಕುಕ್ಕೈನ ?
ಸತ್ಯಮುನ್ನಗೊಂತ ಜಗತಿಪೈಸಿದ್ಧಿಂಚು, ವಿಶ್ವದಾಭಿರಾಮ ವಿನುರ ವೇಮ.

ಉದರದಲ್ಲಿ ಹೊಲಸು ಉಂಡ ಬಾಯಿಂಜಲು,
ಕಡೆಗೆ ವಶವೆ ? ಬ್ರಹ್ಮ ಕಂದರಿರಲು,
ಸತ್ಯವಿಷ್ಟು ಇರದೆ, ಸಿದ್ಧಿಯೆಂತು ಜಗದಿ. ?
ವಿಶ್ವದಾಭಿರಾಮ ಕೇಳು ವೇಮ.

ಪುರುಷೋತ್ತಮನೇ ಕೃಷ್ಣ; ಪರಶಿವ. ಅವನೇ ಭರ್ತ; ಕರ್ತ. ಹೊರೆಯುವವನೂ ಅವನೇ ; ಹುಟ್ಟಿಸುವವನೂ ಅವನೇ. ' ಸರ್ವಂ ಖಲ್ವಿದಂ ಬ್ರಹ್ಮ ' ಸರ್ವವೂ ಅವನೇ ಎಂದು ತಿಳಿಯುವುದು ಜ್ಞಾನ; ಸರ್ವವೂ ಅವನದೇ ಎಂದು ನಡೆಯುವುದು ನಿಷ್ಕಾಮ ಕರ್ಮ. ಸರ್ವವನ್ನು ಅವನಿಗೊಪ್ಪಿಸುವುದು ಭಕ್ತಿ. ಸರ್ವವನ್ನೂ ಅವನಿಗೊಪ್ಪಿಸಿದಾಗ, ಸರ್ವವೂ ಅವನದೇ ಆಗಿರುವಾಗ, ಸರ್ವವೂ ಅವನೇ ಆಗಿರುವಾಗ ' ನಾನು ' ' ನನ್ನದು ' ಎನ್ನಲಾಗದು. ಮೈಲಿಗೆ ಹೊಲೆ ಎನ್ನಲಾಗದು. ತನುವು ತಾಗದ ಮುನ್ನ, ಮನವು ತಾಗದ ಮುನ್ನ ಅವನಿಗರ್ಪಿಸಬೇಕು. ಯಾವುದನ್ನು ಮುಟ್ಟಿದೆ, ನೋಡಿದೆ, ಮೂಸಿದೆ, ರುಚಿ ನೋಡಿದೆ, ಕೇಳಿದೆ ಎನ್ನಬಹುದೋ ಅದನ್ನು ಅರ್ಪಿಸಿದಂತಲ್ಲ. ಯಾವುದನ್ನು ಮನಸ್ಸು ಅಪೇಕ್ಷಿಸುವುದೋ ಅದೂ ಸಹ ಅರ್ಪಿಸುವಂಥದಲ್ಲ. ದೇಹದಲ್ಲಿ ಮಲ ತುಂಬಿದ ಭಾಗವಿರುವಾಗ, ನಾವು ತಿಂದಾಗ ಎಂಜಲು ಆಗುವುದೆಂಬ ಭಾವವಿರುವಾಗ, ಮನಸ್ಸು ಅಶುದ್ಧವಾಗಿರುತ್ತದೆ.ವಿಷಯ ವಸ್ತುಗಳನ್ನುಮನ ಅಪೇಕ್ಷಿಸುತ್ತದೆ. ಹೀಗಿರುವವರು ಬ್ರಹ್ಮನ ಮಕ್ಕಳೇ ಇದ್ದರೂ, ಅವರು ಇಂದ್ರಿಯಗಳನ್ನು ವಶಪಡಿಸಿಕೊಳ್ಳುವುದೆಂತು ? ಯಾವುದು ಯಾವಾಗಲೂ ಇರುವುದೋ ಆ ಸತ್ಯವನ್ನು ತಿಳಿಯದೆ, ಈ ಜಗತ್ತಿನಲ್ಲಿ ಸಿದ್ಧಿಯನ್ನು ಪಡೆಯುವುದೆಂತು ?

೬೮೧

ಆಶಗೋಸಿವೇಸಿ ಯನಲಂಬು ಜಲ್ಲಾರ್ಚಿ, ಗೋಚಿ ಬಿಗಿಯಗಟ್ಟಿ ಕೋಪ ಮುಣಚಿ.
ಆಶವಿಡಿಚಿನೇನಿ ನತಡು ದಾ ಯೋಗಿರಾ, ವಿಶ್ವದಾಭಿರಾಮ ವಿನುರ ವೇಮ.

ಆಶೆಗಳನು ಕಡಿದು ಅಗ್ನಿಯನು ಆರಿಸಿ,
ಕಟ್ಟಿ ಬಿಗಿದು ಚಡ್ಡಿ, ಕೋಪ ತಗ್ಗಿ,
ಆಶೆ ಬಿಟ್ಟು ಇರುವ, ಅವನೆ ಯೋಗಿಯೆನಿಪ.
ವಿಶ್ವದಾಭಿರಾಮ ಕೇಳು ವೇಮ.

ಯಾವ ವಸ್ತುವೂ ತನಗೆ ಬೇಡ ಎಂದು ಇರುವುದೇ ಆಶಾರಾಹಿತ್ಯ. ಆಶೆಯೇ ಹುಟ್ಟಿಗೆ ಕಾರಣವಾದುದು. ಆಶೆಯನ್ನು ಕತ್ತರಿಸಿದರೆ, ಹುಟ್ಟು ಕತ್ತರಿಸಿದಂತೆ. ಅದುವೇ ಜನ್ಮರಾಹಿತ್ಯ. ಆಶೆ ಇಲ್ಲದಿರುವುದೇ ವೈರಾಗ್ಯ. ರಾಗವು ಅಗ್ನಿಯಂತೆ; ಕ್ಷೋಭೆಕಾರಕ. ರಾಗದಗ್ನಿಯನ್ನು ಆರಿಸುವುದೇ ವೈರಾಗ್ಯ. ಇಂದ್ರಿಯ ಸುಖಭೋಗಾಸಕ್ತಿಯೇ ರಾಗ. ಸ್ತ್ರೀ ಸಂಗದ ಆಕರ್ಷಣೆ ಕಾಮ. ಕಾಮವು ದೈಹಿಕವಾದುದು. ಚಡ್ಡಿ ಬಿಗಿದು ಕಟ್ಟುವುದೇ ಕಾಮನಿಗ್ರಹ. ಆಸಕ್ತಿ ಮಾನಸಿಕವಾದುದು. ಅಪೇಕ್ಷೆ ಕೈಗೂಡದಿರಲು ಕ್ರೋಧ ಉಂಟಾಗುತ್ತದೆ. ಕ್ರೋಧವನ್ನು ತಗ್ಗಿಸಬೇಕು. ಹೀಗೆ ರಾಗ, ಕಾಮ, ಆಸಕ್ತಿ ಕ್ರೋಧಗಳಿಗೆ ನೂಲವಾದುದು ಆಶೆ. ಆಶೆಯೇ ಹುಟ್ಟಿಗೂ ಮೂಲ. ಆಶೆ ತೊರೆದರೆ, ಬ್ರಹ್ಮಗೂಡುವನು. ಯೋಗಿ ಎಂದರೆ ಸೇರುವವ. ಆಶೆಯನ್ನು ತೊರೆದವನೇ ಯೋಗಿ ಎನಿಸುವನು.

(ಹೋಲಿಸಿ ನೋಡಿರಿ:

"ನಾರು ನೂಲಿನಿಂದ ಮಾಡಿದುದು, ಭದ್ರವಾದ ಬೇಡಿಯಲ್ಲ; ಕಾಷ್ಟ ಲೋಹಗಳಿಂದ ಮಾಡಿದುದೂ ಅಲ್ಲ. ಆದರೆ ರತ್ನಾಭರಣ, ಮಡದಿ-ಮಕ್ಕಳನ್ನು, ಪಡೆಯುವ ಅತಿಶಯವಾದ ಭೋಗಾಪೇಕ್ಷೆಯು ಅತಿ ಹೆಚ್ಚಿನ ಬೇಡಿಯಾಗಿದೆ, ಎಂದು ಜಾಣರ ಅಭಿಪ್ರಾಯ. ಅದು ಬಂದಿಯನ್ನು ಕೆಳಕ್ಕೆ ತಳ್ಳುತ್ತದೆ. ನೋಡಲು ಸಡಿಲಾಗಿದ್ದರೂ, ಅದರಿಂದ ಪಾರಾಗುವುದು, ಕಠಿಣ; ಎಂದೂ ಜಾಣರು ಹೇಳುತ್ತಾರೆ. ಪ್ರಾಜ್ಞರು ಇದನ್ನೂ ಕಡಿದೊಗೆಯುವರು. ಐಂದ್ರಿಕ ಸುಖಭೋಗವನ್ನು ಬಿಟ್ಟುಕೊಟ್ಟು,ಆಶಾರಹಿತರಾಗಿ, ಅವರು ಇಹವನ್ನು ತೊರೆಯುವರು"

ಗೌತಮಬುದ್ಧ- ಧರ್ಮಪಾದ- ೩೪೫,೩೪೬)

೬೮೨

ಗುಣವಿಹೀನ ಜನುನಿ ಗುಣಮೆಂಚಗಾನೇಲ ? ಬುದ್ಧಿ ಲೇನಿವಾನಿ ಪೂಜಯೇಮಿ ?
ಮನಮು ಲೇನಿವಾನಿ ಮಂತ್ರಂಬುಲೇಮಯಾ, ವಿಶ್ವದಾಭಿರಾಮ ವಿನುರ ವೇಮ.

ಗುಣವಿಹೀನರಲ್ಲಿ ಗುಣವನೆಣಿಸಲೇಕೆ ?
ಬುದ್ಧಿಯಿಲ್ಲದವನ ಪೂಜೆಯೇಕೆ ?
ಮನಸು ಇಲ್ಲದವನ ಮಂತ್ರ ಮತ್ತೆ ಏಕೆ ?
ವಿಶ್ವದಾಭಿರಾಮ ಕೇಳು ವೇಮ.

ಗುಣ ಎಂದರೆ ಪೂರ್ವ ಸಂಸ್ಕಾರದಿಂದ ಉಂಟಾದ ಸ್ವಭಾವ. ಸತ್ತ್ವ, ರಜಸ್ಸು, ತಮಸ್ಸು ಎಂಬಿವು, ಪ್ರಕೃತಿಯಿಂದಾದ ಗುಣಗಳು. ಇವುಗಳಲ್ಲಿ ಸತ್ತ್ವಗುಣವು ನಿರ್ಮಲವಾದುದರಿಂದ ಪ್ರಕಾಶಕವೂ ನಿರುಪದ್ರವವೂ ಆಗಿದೆ. ರಜೋ ಗುಣವು ರಾಗಾತ್ಮಕವಾಗಿದೆ. ಅದರಿಂದ ವಿಷಯಾಸಕ್ತಿ, ಸಲ್ಲದ ವಸ್ತುಗಳ ಬಯಕೆ, ಉಂಟಾಗುವುದು. ತಮೋಗುಣವು ಅಜ್ಞಾನದಿಂದ ಹುಟ್ಟುತ್ತದೆ. ಸಮಸ್ತ ಪ್ರಾಣಿಗಳನ್ನು ಮೋಹಗೊಳಿಸುತ್ತದೆ. ಸತ್ತ್ವ ರಜಸ್ಸು ತಮಸ್ಸು ಎಂಬಿವು ಗುಣತ್ರಯಗಳು. ಆದರೆ ವ್ಯಾವಹಾರಿಕವಾಗಿ ಗುಣ ಶಬ್ದ ಪ್ರಯೋಗವು ಸತ್ತ್ವ ಗುಣವನ್ನೇ ಸೂಚಿಸುತ್ತದೆ. ಇದೇ ಸದ್ಗುಣ. ಗುಣವಂತ ಎಂದರೆ ಸದ್ಗುಣಿ.

ಗುಣಹೀನನಾದವನೆಂದರೆ ಸದ್ಗುಣಗಳಿಲ್ಲದವನು. ಅಂಥವನಲ್ಲಿ ಒಳ್ಳೆ ಗುಣ ಹುಡುಕುವುದರಿಂದ ಫಲವೇನು? ಗುಣವಿಲ್ಲದವನು ಒಳ್ಳೆಯ ಕರ್ಮ ಮಾಡುವನೆಂದು ಅಪೇಕ್ಷಿಸುವುದೇಕೆ?

ಒಳಿತು ಕೆಡುಕುಗಳನ್ನು ವಿಮರ್ಶಿಸಿ ನಿಶ್ಚಯಿಸುವುದೇ ಬುದ್ಧಿ. ಯಾವುದು ಒಳಿತೋ ಅದು ಬ್ರಹ್ಮತ್ವ; ತತ್ತ್ವ. ಸರ್ವ ಭೂತಾತ್ಮತ್ವ, ಸರ್ವೇಶತ್ವ, ಸರ್ವಜ್ಞತ್ವ, ನಿರ್ಗುಣತ್ವ, ನಿರ್ಮಲತ್ವಗಳನ್ನು ತಿಳಿದು, ವಿಷಯಾಸಕ್ತಿಯಿಂದ ದೂರಾಗಿ, ಬ್ರಹ್ಮದಲ್ಲಿ ಭಕ್ತಿ ಹೊಂದಿ, ಚಿತ್ತೈಕಾಗ್ರತೆಯಿಂದ ಧ್ಯಾನಿಸುವುದೇ ಪೂಜೆ. ಬುದ್ಧಿಯಿಲ್ಲದವನ ಫಲ-ಪುಷ್ಪ, ಗಂಧ ಅಕ್ಷತೆಗಳ ಪೂಜೆಯಿಂದ ಫಲವೇನು? ಕನಿಷ್ಠ ಫಲ ಪುಷ್ಪಾದಿ ಸಂಕೇತಗಳ ಅರ್ಥವರಿಯುವ ಬುದ್ಧಿಯಿದ್ದರೂ, ಎಷ್ಟೋ ವಾಸಿ.

ಮಂತ್ರವು ಉದಾತ್ತ ವಿಚಾರಗಳನ್ನು ಹೊರಸೂಸುವ ಪದಸಮುಚ್ಚಯ. ಅವುಗಳನ್ನು ಛಂದಸ್ಸಿಗನುಸಾರವಾಗಿ ಪಠಿಸುವದರಿಂದ ನಿರ್ದಿಷ್ಟ ವಿಧಿಯಂತೆ, ಉಸಿರಾಟ ಸಾಗಿ, ದೇಹದ ಮೇಲೆ ಒಳ್ಳೆ ಪರಿಣಾಮ ಮಾಡುತ್ತವೆ. ಆದರೆ ಮನಸ್ಸು ಇಲ್ಲದಾಗ, ಮಂತ್ರದ ಅರ್ಥವೂ ಆಗದು. ಅದರ ಪಠಣವೂ ಕ್ರಮಬದ್ಧವಾಗಿ ಸಾಗದು. ಕಾಗೆಯಂತೆ, ಏನೋ ಸ್ವರ ತೆಗೆದರೆ ಬಂದ ಭಾಗ್ಯವೇನು?

೬೮೩

ಧರ್ಮ ಸತ್ಯಮುಲನು ದಪ್ಪಕಚೇಯನಿ, ಕರ್ಮಜೀವಿ ಮೇಲು ಗಾನಲೇಡು.
ನಿರ್ಮಲಹೃದಯುಂಡು ನೀರೂಹ ಮುನನುಂಡು, ವಿಶ್ವದಾಭಿರಾಮ ವಿನುರ ವೇಮ.

ಧರ್ಮಸತ್ಯಗಳೆನು ತಪ್ಪದೆ ಮಾಡದಿರೆ,
ಕರ್ಮಜೀವಿ ಮೇಲೆ ಕಾಣಲಾರ.
ನಿರ್ಮಲ ಹೃದಯದವ ನಿನ್ನ ರೂಪದೊಳಿಹ.
ವಿಶ್ವದಾಭಿರಾಮ ಕೇಳು ವೇಮ.

"ಧಾರಣಾದ್ಧರ್ಮ ಇತ್ಯಾಹುಃ" ಜನರನ್ನು ಹಿಡಿದು ನಿಲ್ಲಿಸುವ ಶಕ್ತಿ ಇಲ್ಲವೆ ತತ್ತ್ವವೇ ಧರ್ಮ. ಯಾವುದು ಯಾವಾಗಲೂ ಇರಬಲ್ಲದೋ ಅದು ಸತ್; ಸತ್ಯ

"ಸತ್ಯಂ ವದ; ಧರ್ಮಂ ಚರ" (ತೈತ್ತರೀಯ ಉಪನಿಷತ್) ಎಂದರೆ ಸತ್ಯವನ್ನು ಹೇಳು; ಧರ್ಮವನ್ನು ಆಚರಿಸು. ಹೀಗೆ ನಡೆಯದಿದ್ದರೆ, ಕರ್ಮ ಜೀವಿಯಾದ ಮನುಷ್ಯನಿಗೆ ಯಾವುದೇ ಶ್ರೇಷ್ಠ ಗತಿ ದೊರಕದು. ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇ ಚ್ಛತಂ ಸಮಾಃ। ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರ॥" ಎಂದರೆ "ಈ ಲೋಕದಲ್ಲಿ ಕರ್ಮವನ್ನು ಮಾಡುತ್ತಲೆ ನೂರು ವರ್ಷ ಜೀವಿಸಲು ಇಚ್ಛಿಪಡಬೇಕು. ಹೀಗಿರುವ ಮನುಷ್ಯನಾದ ನಿನಗೆ ಕರ್ಮ ಅಂಟಿಕೊಳ್ಳದ ಬೇರೆ ಯಾವುದೂ ಇಲ್ಲ; (ಈಶ. ಉ. ೨.)

ಕರ್ಮ ಜೀವಿಯಾಗಬೇಕಾದುದು ಅನಿವಾರ್ಯವೆಂದಾಯಿತು. ನಿಷ್ಕಾಮಕರ್ಮದಿಂದ ಕರ್ಮದಲ್ಲಿ ನಿರತರಾಗಬೇಕು. ಇದಕ್ಕೆ ನಿರ್ಮಲ ಹೃದಯಬೇಕು. ನಿರ್ಮಲ ಹೃದಯ ಉಳ್ಳವನು ಬ್ರಹ್ಮಸ್ವರೂಪನು.
(ಹೋಲಿಸಿ ನೋಡಿರಿ:

"ಕಲ್ಮಶವಿಲ್ಲದವರೂ, ದ್ವಂದ್ವರಹಿತರೂ ಜಿತೇಂದ್ರಿಯರೂ ಸರ್ವ ಪ್ರಾಣಿಗಳ ಹಿತದಲ್ಲಿ ನಿರತರೂ ಆದ ಋಷಿಗಳು, ಮುಕ್ತಿಯನ್ನು ಪಡೆಯುತ್ತಾರೆ.")

೬೮೪

ಚಚ್ಚುವಾರಲೆವರೋ,ಚಾವನಿವಾರೇರೋ, ಚಚ್ಚಿ ಬ್ರತಿಕಿಯುಂದು ಜನಮುತೆವರೊ
ವಿಚ್ಚಲವಿಡಿಗಾನು ವಿವರಿಂಚಿ ಚೂಡರಾ, ವಿಶ್ವದಾಭಿರಾಮ ವಿನುರ ವೇಮ,

ಸಾಯುವವರು ಯಾರೊ? ಸಾಯದವರು ಯಾರೊ?
ಸತ್ತು ಬದುಕಿರುವ ಸುಜನರಾರೊ?
ನಿಶ್ಚಯಿಸಿ ಕಂಡುಕೊ; ನೋಡು ವಿವರವನು.
ವಿಶ್ವದಾಭಿರಾಮ ಕೇಳು ವೇಮ.

ದೇಹಕ್ಕಿಂತ ಬೇರೆಯವನಾದ ಆತ್ಮನಿದ್ದಾನೆ. ದೇಹವಿದ್ದರೂ ಅದರಲ್ಲಿ ಆತ್ಮ ಧರ್ಮಗಳು ಕಂಡುಬರುವದಿಲ್ಲ ಸಾವು, ಜನ್ಮಗಳು ದೇಹ ಧರ್ಮವಷ್ಟೇ. ಆತ್ಮಧರ್ಮವು ಅವ್ಯಕ್ತವಾಗಿರುವದು. ಜನ್ಮಾತೀತ; ಮರಣಾತೀತ. ಯಾರು ಆತ್ಮಧರ್ಮವನ್ನು ಅರಿತು ಆಚರಿಸುವರೋ,ಇವರು ಜನನ ಮರಣದಿಂದ ಬಿಡುಗಡೆ ಹೊಂದುತ್ತಾರೆ ಅವರಿಗೆ ಸಾವು ಎಂಬುದೇ ಇಲ್ಲ. ಸಾಯದವರು ಅವರು ಆತ್ಮವರಿಯದೆ, ಇರುವವರಿಗೆ ಸಾವು ಉಂಟು. ಸಂಸಾರ ಉಂಟು. ಸಾಯುವವರು ಅವರು.

ಇನ್ನು ಹಲವರು ಸತ್ಕೀರ್ತಿಯನ್ನು ಅಪೇಕ್ಷಿಸಿ, ಪುಣ್ಯ ಕರ್ಮ ಮಾಡುತ್ತಾರೆ. ಪರೋಪಕಾರ ಮಾಡಿ ಪುಣ್ಯವಂತರೆನಿಸುತಾರೆ. ಅವರ ದೇಹ, ಸತ್ತನಂತರ ಮರೆಯಾದರೂ, ಇವರ ಸತ್ಕೀರ್ತಿ ಸ್ಮರಣೀಯವಾಗಿ ಉಳಿಯುವುದು. ಇವರು ಸತ್ತು ಬದುಕುವವರು. ನಿಶ್ಚಯ ಶಕ್ತಿ ಇರುವ ಬುದ್ಧಿಯಿಂದ ಎಲ್ಲ ವಿವರಗಳನ್ನು ಅರಿತು ನಿರ್ಣಯಿಸಿ ನಡೆಯಬೇಕು.

(ಹೋಲಿ ನೋಡಿರಿ:

"ಈ ಆತ್ಮನು ಅವ್ಯಕ್ತನು. ಅಚಿಂತ್ಯನು, ವಿಕಾರಹಿತನು ಎಂದು ಹೇಳಲ್ಪಟ್ಟಿರುತ್ತಾನೆ. ಆದುದರಿಂದ, ಈತನನ್ನು ಹೀಗೆ ತಿಳಿದುಕೊಂಡು ನೀನು ಶೋಕಿಸಬಾರದು.

ಒಂದು ಪಕ್ಷ (ದೇಹಾತ್ಮವಾದಿಯ ದೃಷ್ಟಿಯಿಂದ) ಈ ಆತ್ಮನು ಯಾವಾಗಲೂ ಹುಟ್ಟುತ್ತಿರುವನೆಂದೂ ಅಥವಾ ಯಾವಾಗಲೂ ಸಾಯುತ್ತಿರುವನೆಂದೂ ನೀನು ತಿಳಿಯುವೆಯಾದರೆ, ಎಲೈ ಮಹಾಬಾಹುವೆ, ಆಗಲೂ ಕೂಡ ಹೀಗೆ ಶೋಕಿಸಬಾರದು.

ಏಕೆಂದರೆ, ಹುಟ್ಟಿದವನಿಗೆ ಮರಣವು ನಿಶ್ಚಯವು. ಮತ್ತು ಸತ್ತವನಿಗೆ ಜನ್ಮವು ನಿಶ್ಚಯವು. ಆದುದರಿಂದ ಪರಿಹರಿಸಲಾರದ ಈ ವಿಷಯದಲ್ಲಿ ನೀನು ಶೋಕಿಸಬಾರದು.

ಎಲೈ ಅರ್ಜುನ, ಎಲ್ಲರ ದೇಹದಲ್ಲಿ ಇರುವ ಆತ್ಮನು ಎಂದಿಗೂ ನಾಶವಾಗುವದಿಲ್ಲ. ಆದುದರಿಂದ ನೀನು ಸಮಸ್ತ ಪ್ರಾಣಿಗಳನ್ನು ಕುರಿತು ಶೋಕಿಸಬಾರದು.

ಭಗವದ್ಗೀತೆ-೨ ೨೫,೨೭,೨೭,೩೦)

೬೮೫

ಚಿತ್ತ ಮುಗಲಯೋಗಿ ಶಿವನಿವಲೆಸೆಯುಂಡು,ಮಿಥ್ಯ ಯೋಗಿಯುಂಡು ಮಿಡುತವಲೆನು,
ನಿತ್ಯ ಡೈನಯೋಗಿ ನೀವಲೆನುಂಡುರಾ, ವಿಶ್ವದಾಭಿರಾಮ ವಿನುರ ವೇಮ.

ಚಿತ್ತ ಶುದ್ಧಯೋಗಿ ಶಿವನ ರೀತಿಯಿಹನು
ಮಿಥ್ಯಯೋಗಿಯುಂಟು ಮಿಡತೆ ತೆರದಿ
ನಿತ್ಯನಾದ ಯೋಗಿ ನಿನ್ನ ರೀತಿ ಇಹನು.
ವಿಶ್ವದಾಭಿರಾಮ ಕೇಳು ವೇಮ.

ಬಾಹ್ಯ ವಿಷಯಗಳಿಂದ ಹೊರಟ ತರಂಗಗಳು ಇಂದ್ರಿಯಗಳ ಮೂಲಕ ಚಿತ್ತದಲ್ಲಿ ಸಂಚಯವಾಗುವವು.ಇದರಿಂದ ಚಿತ್ತವು ಚಿತ್ತವೃತ್ತಿಗಳಿಂದ ಮುತ್ತಿಕೊಳ್ಳುತ್ತದೆ. ಕಲ್ಮಶ ಹಾಗುತ್ತದೆ ಚಿತ್ತವೃತ್ತಿಗಳು ಇಲ್ಲದಂತೆ ಮಾಡಿದರೆ ಚಿತ್ತ ಶುದ್ಧವಾಗುತ್ತದೆ. ಒಂದೇ ಜಾತಿಯ ವೃತ್ತಿಗಳನ್ನು ಗ್ರಹಿಸಲು ಶಕ್ತವಾಗುವುದು. ಇದು ಧಾರಣ ಸ್ಥಿತಿ. ಮುಂದೆ ಒಂದೇ ಜಾತಿಯ ಅನೇಕ ವೃತ್ತಿಗಳು ಒಂದು ಆಗುವಿಕೆಯೇ ಧ್ಯಾನ ಸ್ಥಿತಿ. ಧ್ಯಾನ ಸ್ಥಿತಿಯಿಂದ ಮುಂದೆ ಸಮಾಧಿ. ಸತ್ತ್ವ ರಜಸ್ಸು ಮತ್ತು ತಮಸ್ಸು ಗುಣಗಳು ಜಗತ್ತವೃತ್ತಿಗಳನ್ನು ಹುಟ್ಟಿಸುತ್ತವೆ. ತ್ರಿಗುಣಾತೀತ ಸ್ಥಿತಿಯಲ್ಲಿ ಚಿತ್ತವೃತ್ತಿಗಳಿಲ್ಲ. ಚಿತ್ತಶುದ್ಧವಾಗಿರುತ್ತದೆ. ಇದೇ ಶಿವಸ್ಥಿತಿ. ಚಿತ್ತ ಶುದ್ಧನಾದ ಯೋಗಿ ಶಿವನ ರೀತಿಯಾಗಿರುವನು.

ಇಂದ್ರಿಯ ನಿಗ್ರಹವನ್ನು ಸಾಧಿಸುವ ಶಕ್ತಿಯಿಲ್ಲದವನು,ಅದನ್ನು ಸಾಧಿಸಿದ ಯೋಗಿಗಳ ರೂಪ ತಾಳಿ, ಜನರಿಗೆ ಸಂಶಯ ಬರದಂತೆ ನಟಿಸುತ್ತ,ಗುಟ್ಟಿನಲ್ಲಿ ಇಂದ್ರಿಯ ಸುಖಗಳನ್ನು ಅನುಭವಿಸುತ್ತಿರುವನು. ಇವನು ಕಪಟ, ಮಿಥ್ಯಯೋಗಿ. ಇವನು ಸೈರು ಹಾಳು ಮಾಡುವ ಮಿಡತೆಯಂತೆ ಮಿಡತೆ ಹೊಕ್ಕ ಹೊಲ ಹಾಳಾದಂತೆ, ಇಂಥ ಮಿಥ್ಯಯೋಗಿ ಪ್ರಭಾವಿಯಾಗಿ ಇರುವ ಸ್ಥಾನವೂ ಧಾರ್ಮಿಕ ಅವನತಿ ಹೊಂದುವುದು.

ನಿತ್ಯಯುಕ್ತನಾದ ಯೋಗಿ ಧರ್ಮ-ಕರ್ಮಗಳನ್ನುಚಾರಿತ್ರ; ನಿಷ್ಕಾಮ ಕರ್ಮಿಯಾಗಿ ಜೀವನ್ಮುಕ್ತನಾಗಿ, ನಿನ್ನಂತೆ ಇರವನು.

೬೮೬

ಓಗುಬಾಗೆರುಗನಿ ಯುತ್ತ ಮೂಢ ಜನಂಬು, ಲಿಲಸುಧೀಜನಮುಲ ನೆಂಚುಟಿಲ್ಲ,
ಕಾಕ್ಕ ಸಿಂಗವು ಗನುಗೊನಿ ಮೊರಿಗಿನ ರೀತಿ ವಿಶ್ವದಾಭಿರಾಮ ವಿನುರ ವೇಮ.

ಓರೆಕೋರೆಯರಿಯ ದೊಣಮೂಢ ಜನಗಳು,
ಎಂತೊ ಸಾಧುಜನರ ಎಣಸುತಿಹುದು,
ನೋಡಿ ಸಿಂಹವನ್ನು ನಾಯಿ ಬೊಗಳಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಒಳಿತು ಕೆಡುಕುಗಳನ್ನು ಸಾಮಾನ್ಯ ಜನರು ಅರಿತಿರುವುದಿಲ್ಲ. ಯಾವುದು ಸುಖಕರವೋ, ಅದು ಒಳಿತಾದುದೆಂದು ತಿಳಿಯುತ್ತಾರೆ. ಆದರೆ ಇಂದ್ರಿಯ ಸುಖ ನೀಡುವುದು ಬೇರೆ. ಒಳಿತಾದುದು ಬೇರೆ. ಧನ-ಕನಕ ಸಂಗ್ರಹಿಸುವವನು ಅದನ್ನು ನೋಡಿ, ಮುಟ್ಟಿ ಸುಖಿಸುವನು. ಆದರೆ ಧನದ ಬಗ್ಗೆ ಆಸಕ್ತಿ ತಾಳದವನು, ಅದನ್ನು ಹೊಂದಿದ ಬಗ್ಗೆ ಉಬ್ಬುವದಿಲ್ಲ; ಹೊಂದದ ಬಗ್ಗೆ ಕುಗ್ಗುವುದಿಲ್ಲ. ಅವರ ಗೊಡವೆಗೇ ಹೋಗುವದಿಲ್ಲ.ತನ್ನ ಶರೀರವನ್ನೇ ತ್ಯಜಿಸಲು ಸಿದ್ಧನಾಗಿ ಹೋಗುವವನಿಗೆ ಹಣದ ಗೊಡವೆಯೆಲ್ಲಿ? ಇಂಥ ಸೂಕ್ಷ್ಮಗಳನ್ನು ಅರಿಯದ ಮೂಢರು ಸಾಧು ಜನರನ್ನು ಏನೋ ಒಂದು ರೀತಿಯಾಗಿ ಕಾಣುತ್ತಾರೆ. ಹೀಯಾಳಿಸುತ್ತಾರೆ. ಅವರಿಗೆ ಸಾಧುವಿನ ರೀತಿ ಸರಿಕಾಣುವದಿಲ್ಲ ಸೊಣಗ ಸಿಂಹವನ್ನು ಗುರುತಿಸದೆ, ಏನೋ ವಿಚಿತ್ರ ಪ್ರಾಣಿಯೆಂದು ಬೊಗಳಿದಂತೆ ಮೂಢರು ನಿಂದಿಸುವ ರೀತಿ.

(ಹೋಲಿಸಿ ನೋಡಿರಿ :

ಶ್ರೇಯವಾದ ವಸ್ತುವೊಂದು, ಪ್ರೇಮವಾದುದು ಮತ್ತೆ ಬೇರೊಂದು. ಎರಡೂ ಬೇರೆ ಬೇರೆ ಅರ್ಥಗಳಲ್ಲಿ ಮನುಷ್ಯನನ್ನು ಆವರಿಸುತ್ತವೆ. ಇವುಗಳಲ್ಲಿ ಶ್ರೇಯವಾದುದನ್ನು ಯಾವನು ಸ್ವೀಕರಿಸುವನೋ, ಅವನು ಸಾಧು ಸ್ವಭಾವಿಯು. ಪ್ರೇಯವಾದುದನ್ನು ಆರಿಸಿಕೊಳ್ಳುವವನು, ಜೀವನದ ಗುರಿಯಿಂದ ದೂರವಾಗುತ್ತಾನೆ."

—ಕಠ ಉ ೧ ೨-೧)

೬೮೭

ನೇರನಿಜನುಲಕುನ್ನು ನೇರ್ಪಿ ನೇರಮುಲೆಲ್ಲ, ಜಕ್ಕ ಜೇತರರಯ ಸಾಧುಜನುಲು,
ಒಪ್ಪೆದುರ್ಜನಮುಲು ತಪ್ಪುಗ ನೆಂತುರು ವಿಶ್ವದಾಭಿರಾಮ ವಿನುರ ವೇಮ.

ತಿಳಿಯದಿಪ್ಪ ಜನಕೆ ತಪ್ಪನೆಲ್ಲ ತಿಳಿಸಿ,
ಸರಿಯ ಹೇಳುತಿಹರು ಸಾಧು
ಒಪ್ಪನೆ, ದುರ್ಜನರು ತಪ್ಪೆಂದೆಣಿಸುವುರು.
ವಿಶ್ವದಾಭಿರಾಮ ಕೇಳು ವೇಮ

ಒಳಿತು ಕೆಡಕುಗಳನ್ನು ವಿಂಗಡಿಸಿ ತಿಳಿಯುವ ವಿವೇಕ ಬುದ್ಧಿಯಿಲ್ಲದ ಜನರು ಇಂದ್ರಿಯಗಳ ಭೋಗವಸ್ತುಗಳಿಂದ ಸುಖ ಪಡೆಯಲು ಆಸಕ್ತರಾಗುತ್ತಾರೆ ರಾಗಿಗಳಾಗುತ್ತಾರೆ. ಅದನ್ನು ಪಡೆಯಲು ಕರ್ಮನಿರತರಾಗುವರು. ಕರ್ಮಬದ್ಧರಾದಮೇಲೆ ಕರ್ಮ ಫಲ ಅನುಭವಿಸಬೇಕು. ಜನನ-ಮರಣ ಚಕ್ರದಲ್ಲಿ ಸಿಲುಕುವರು,

ಕಾರಣ ಜನನ-ಮರಣ ಚಕ್ರದಿಂದ ಪಾರಾಗಲು ನಿಷ್ಕಾಮ ಕರ್ಮಿಗಳಾಗಬೇಕು. ನಿರಾಸಕ್ತರಾಗಬೇಕು, ಅಂದರೆ, ಇಂದ್ರಿಯ ನಿಗ್ರಹ ಸಾಧಿಸಬೇಕು. ಸಾಧುಗಳು ಬಯಸುವುದು, ಆನಂದ; ವಿಷಯ ವಸ್ತುಗಳ ಸುಖಭೋಗವಲ್ಲ. ಆದರೆ ಅನ್ನಗಳಲ್ಲಿ ಆಸಕ್ತಿ ಹೊಂದದ ಮನಸ್ಥಿತಿ ಪಡೆದು, ಇರಲಿ; ಇಲ್ಲದಿರಲಿ,ಆ ಬಗ್ಗೆ ಚಿಂತಿಸದಿರುವ ಆನಂದಮಯ ಸ್ಥಿತಿಯೇ ಗಮ್ಯತಾಣವಾಗಬೇಕು ಎಂದು ಬೋಧಿಸುತಾರೆ.

ದುಷ್ಟ ಜನರು ಒಳಿತಾದುದನ್ನೇ ತಪ್ಪಾದುದೆಂದು ತಿಳಿದು, ಒಳಿತು ಅನುಸರಿಸುವವರನ್ನು ಹೀಗಳೆಯುತ್ತಾರೆ.

(ಹೋಲಿಸಿ ನೋಡಿರಿ:

"ನಾನು ಹಣವಂತನು ಮತ್ತು ಕುಲೀನನು; ನನಗೆ ಸಮನಾದವನು ಬೇರೆ ಯಾವನಿದ್ದಾನೆ? ನಾನು ಯಾಗ ಮಾಡುವೆನು, ದಾನ ಮಾಡುವೆನು, ಮೋದ ಪಡುವೆನು' ಎಂದು ಅಜ್ಞಾನದಿಂದ ಮೋಹಿತರಾಗಿ, ಅನೇಕ ಚಿಂತೆಗಳಿಂದ ಭ್ರಾಂತರಾಗಿ, ಮೋಹ ಜಾಲದಿಂದ ಆವರಿಸಲ್ಪಟ್ಟವರಾಗಿ, ಕಾಮಭೋಗಗಳಲ್ಲಿ ಆಸಕ್ತರಾಗಿ ಅಶುಚಿಯಾದ ನರಕದಲ್ಲಿ ಬೀಳುತ್ತಾರೆ. ಭಗವದ್ಗೀತಾ ೧೬-೧೫,೧೬)

೬೮೮

ಪಲುಗುವಾನಿಕೇಲ ಪರಸಮೃದ್ಧಿದಲಂಪ? ಪಲುಗುವಾನಿಕೇಲ ಭಕ್ತಿ ಪಥಮು?
ಪಲುಗುವಾನಿಕೇಲ ಪರಮಾರ್ಥ ತತ್ತ್ವಂಬು, ವಿಶ್ವದಾಭಿರಾಮ ವಿನುರ ವೇಮ.

ಪಾಪಿಯಿರುವಗೇಕೆ ಪರಸಮೃದ್ಧಿಯರಿಯೆ?
ಪಾಪಿಯಿರುವಗೇಕೆ ಭಕ್ತಿಪಥವು.
ಪಾಪಿಯಿರುವಗೇಕೆ ಪರಮಾರ್ಥ ತತ್ತ್ವವು.
ವಿಶ್ವದಾಭಿರಾಮ ಕೇಳು ವೇಮ.

ಸರ್ವರ ಹಿತ ಸಾಧಿಸುವುದೇ ಧರ್ಮ. ಸರ್ವ ಹಿತಕ್ಕೆ ವಿರೋಧವಾದುದು ಅಧರ್ಮ ನಮ್ಮೆದುರು ಎರಡು ಮಾರ್ಗಗಳಿವೆ. ಒಂದು ಶ್ರೇಯಸ್ಸಿನ ಮಾರ್ಗ. ಇನ್ನೊಂದು ಪ್ರೇಯಸ್ಸಿನ ಮಾರ್ಗ. ಪ್ರೇಯಸ್ಸಿನ ಮಾರ್ಗದಲ್ಲಿ ವಿಷಯ ವಸ್ತು ಗಳ ಆಕರ್ಷಣವುಂಟು; ಆಸಕ್ತಿ ಉಂಟು. ವಸ್ತು ಪಡೆಯಲು ಕರ್ಮಬಂಧನವುಂಟು, ಅನ್ಯರಿಗೆ ಕೇಡು ಬಗೆಯುವ ಕರ್ಮಫಲ ಪುಣ್ಯ; ಅನ್ಯರಿಗೆ ಕೇಡು ಬಗೆಯುವ ಕರ್ಮದ ಫಲ ಪಾಪ. ಪ್ರೇಯಸ್ಸಿನ ಮಾರ್ಗದಲ್ಲಿರುವವನು ಅನ್ಯರಿಗೆ ಕೇಡು ಬಗೆಯುವ ಪಾಪಿಯಾಗಬಹುದು. ಇಂಥವನಿಗೆ ಪರರ ಸಮೃದ್ಧಿಯ ಗೊಡವೆ ಇರುವುದೆಂತು?

ಪಾಪಿ ಶ್ರೇಯಸ್ಸಿನ ಕೆಡುಕು ದಾರಿಯಲ್ಲಿರುವನು. ಆದರೆ ಶ್ರೇಯಸ್ಸಿನ ಮಾರ್ಗದಲ್ಲಿ ಬ್ರಹ್ಮತ್ವದ ಬಗ್ಗೆ ಆಕರ್ಷಣವುಂಟು. ಪ್ರೇಮವುಂಟು. ಮನಸ್ಸಿನಲ್ಲಿ ಭಕ್ತಿಯೂ ಉಂಟು. ಪಾಪಿ ಇರುವವನಿಗೆ ಭಕ್ತಿ ಪಥದ ಗೊಡವೆಯೇಕೆ ? ಪರಮಾರ್ಥ ತತ್ತ್ವ ಗೊಡವೆಯಾದರೂ ಪಾಪಿಗೇಕೆ ?

(ಹೋಲಿಸಿ ನೋಡಿರಿ :

"ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ ।
ಸಂತೋಷಂ ಜನಯೇತ್ತಾಜ್ಞಃ ತದೇವೇಶ್ವರಂ ಪೂಜನಂ ॥"

(ನಾವು ಇತರರಿಗೆ ಉಪಕಾರ ಮಾಡಿದರೆ, ಪುಣ್ಯವು; ಇತರರನ್ನು ಪೀಡಿಸಿದರೆ ಪಾಪವು. ಪ್ರಾಜ್ಞರು ಸದಾ ಸಂತೋಷ ಹುಟ್ಟಿಸುತ್ತಾರೆ. ಇದೇ ಈಶ್ವರ ಪೂಜೆ.)

೬೮೯

ಉಚಿತವಂತುಡೈನ ನುದ್ಯೋಪರುಡೌಚು, ಸಾಗಿಪೋರಿಯನ್ನ ಸಮಯಮುಯುನನು
ಪರುಲಕುಪಕರಿಂಚಿ ಪರಗಕ್ಷಿಂಚುನು, ವಿಶ್ವದಾಭಿರಾಮ ವಿನುರ ವೇಮ.

ಉಚಿತವಂತನಿರಲಿ ಉದ್ಯೋಗಪರನಿತೆ,
ಸಾಗಿಹೋಗುತಿರುವ ಸಮಯದಲ್ಲಿ.
ಪರರಿಗೆ ಉಪಕರಿಸಿ ಪಾಲಿಸುತಿರಬೇಕು
ವಿಶ್ವದಾಭಿರಾಮ ಕೇಳು ವೇಮ.

ಉಚಿತವಾದ ಕರ್ಮಗಳಿಂದಲೇ ಇಷ್ಟ ಫಲಗಳನ್ನು ಹೊಂದುವವನು ಉಚಿತವಂತನು. ಪರಾವಲಂಬಿಯಾಗದೆ,ಆಲಸ್ಯ ನಿದ್ರೆಗಳಂಥ ತಾಮಸಿಕ ವೃತ್ತಿಗಳನ್ನು ತೊರೆದು,ಉದ್ಯೋಗದಲ್ಲಿ ನಿರತನಾದವನು ಉದ್ಯೋಗಪರನು. ಉಚಿತವಂತನೂ ಉದ್ಯೋಗಪರನೂ ಆಗಿರುವುದು ಒಳ್ಳೆದು ಆದರೆ ಇಷ್ಟರಿಂದ ಎಲ್ಲ ಸಾಧಿಸಿದಂತಾಗಲಿಲ್ಲ.

ಆಯುಷ್ಯ ಕಾಲವು ಕ್ಷಣಕ್ಷಣಕ್ಕೆ ಕಡಿಮೆಯಾಗುವುದು.ಪುಣ್ಯಲೋಕಬಯಸುವವರು, ಉಳಿದ ಕಾಲದಲ್ಲೆಯಾದರೂ ಪುಣ್ಯ ಸಂಚಯ ಮಾಡಬೇಕು."ಪರೋಪಕಾರಃ ಪುಣ್ಯಾಯ ಪರರಿಗೆ ಉಪಕಾರ ಮಾಡುವದರಿಂದ ಪುಣ್ಯಫಲ ಸಂಚಯವಾಗುವದು. 'ಪುಣ್ಯೇನ ಪುಣ್ಯ ಲೋಕಂ ನಯತಿ." 'ಪುಣ್ಯದಿಂದ ಪುಣ್ಯಲೋಕ ಸೇರುವರು.' ಸಕಲರನ್ನು ಪಾಲಿಸುವದು ಪರಮಾತ್ಮ ತತ್ತ್ವ. ಪರಮಾತ್ಮನ ತತ್ತ್ವ ಆಚರಿಸುವುದೆಂದರೆ ಪರರಿಗೆ ಇಲ್ಲದಾಗ ಅನ್ನ ನೀಡಿ, ಕಷ್ಟದಲ್ಲಿದ್ದಾಗ ಆಶ್ರಯ ನೀಡಿ, ಪೇಚಿನದ್ದಾಗ ರಕ್ಷಣೆ ನೀಡಿ ಪಾಲಿಸಬೇಕು. "ಧಾರಣಾದ್ಧರ್ಮ ಇತ್ಯಾಹುಃ ಧರ್ಮೋ ಧಾರಯತಿ ಪ್ರಜಾಃ।" ಎಂದರೆ ಜನರನ್ನು ಹಿಡಿದು ನಿಲ್ಲಿಸಿರುವ. ಶಕ್ತಿ ಧರ್ಮವೆನಿಸುವದು ಧರ್ಮವು ಪ್ರಜೆಗಳನ್ನೂ ಒಗ್ಗೂಡಿಸಿ ಹತ್ತರ ಸಹಕರಿಸುವಂತೆ ಪ್ರೇರೇಪಿಸುವುದು. ಧರ್ಮಾಚರಣೆ, ಪರೋಪಕಾರ ಬಾಳಿಗೆ ಭೂಷಣವಾಗಿದೆ.

೬೯೦

ಬಂಗರು ಬೊಡಗನ್ನ ಭಾವುಲ ಬೊಡಗನ್ನ, ಜಿತ್ತ ಮುನನು ಜಿಂತ ಜೇಯಡೇನಿ,
ವಾಚೆ ಪರಮಯೋಗಿ ನರ್ನಿಂಪ ಜಗಮಂದು, ವಿಶ್ವದಾಭಿರಾಮ ವಿನುರ ವೇನ.

ಬಂಗಾರ ನೋಡುತ, ಭಾನಿಯರ ನೋಡುತ,
ಮನಸಿನಲ್ಲಿ ಚಿಂತೆ ಮಾಡದವನು.
ಅವನೆ ಪರಮಯೋಗಿ ಅವನಿಯಲಿ ಬಣ್ಣಿಸೆ.
ವಿಶ್ವದಾಭಿರಾಮ ಕೇಳು ವೇಮ.

ಹೊನ್ನು ಹೆಣ್ಣು ಇವು ಎರಡೂ ಚಿತ್ತ ಸ್ಥಿರತೆ ಕೆಡಿಸುವ ವಸ್ತುಗಳು. "ಅಪರಿಮೇಯವೂ ಸಾಯುವವರೆಗೆ ಇರುವಂಥದೂ ಆದ ಚಿಂತೆಯನ್ನು ಆಶ್ರಯಿಸಿದವರಾಗಿ, ಕಾಮೋಪಯೋಗಪರಾಯಣರಾಗಿ, ಇದೇ ಪರಮ ಪುರುಷಾರ್ಥವೆಂದು ನಿಶ್ಚಯಿಸಿದವರಾಗಿ ಆಶೆಯಿಂದ ನೂರಾರು ಹಗ್ಗಗಳಿಂದ ಕಟ್ಟಲ್ಪಟ್ಟವರಾಗಿ, ಕಾಮುಕ್ರೋಧಪರಾಯಣರಾಗಿ, ಕಾಮದ ಭೋಗಕ್ಕಾಗಿ ಅನ್ಯಾಯದಿಂದ ಧನಸಂಚಯವನ್ನು ಮಾಡಲು ಪ್ರಯತ್ನಿಸುತ್ತಾರೆ" ಎಂದು ಆಸುರೀ ಸ್ವಭಾವದವರನ್ನು ಕುರಿತು ಶ್ರೀಕೃಷ್ಣ ಹೇಳುತ್ತಾನೆ.

ಯಾವನು ಬಂಗಾರ ಮತ್ತು ಭಾಮಿನಿಯರನ್ನು ನೋಡಿಯೂ, ಮನಸ್ಸಿನಲ್ಲಿ ಆ ಬಗ್ಗೆ ಚಿಂತೆ ಮಾಡದ ಮಟ್ಟ ಮುಟ್ಟಿರುವನೋ, ಅವನೇ ಈ ಲೋಕದಲ್ಲಿ ಪರಮಯೋಗಿ ಎಂದು ವರ್ಣಿಸಲರ್ಹನಾದವನು.

(ಹೋಲಿಸಿ ನೋಡಿರಿ :

ಸುವರ್ಣ ನಾಣ್ಯಗಳ ಸುರಿಮಳೆಯಾದರೂ ಆಶೆ ಹಿಂಗದು. ಇಂದ್ರಿಯ ಸುಖವಾಡರೋ, ನೀಡುವ ಸುಖವು ಅಲ್ಪ ; ದುಃಖವೇ ಹೆಚ್ಚು. ಜಾಣನು ಇದೆಲ್ಲವನ್ನೂ ಅರಿತು, ಯಾವ ಸ್ವರ್ಗೀಯ ಸುಖಭೋಗದಲ್ಲಿಯೂ ಸಂತೋಷ ಪಡೆಯನು- ಪರಮ ಬುದ್ಧನ ಶಿಷ್ಯನು, ಕೋರಿಕೆ (ಚಿಂತೆ) ಗಳನ್ನೇ ನಾಶಗೊಳಿಸುವಲ್ಲಿ ತೃಪ್ತಿಪಡುತ್ತಾನೆ.

ಬುದ್ಧ—ಧಮ್ಮಪಾದ ೧೮೬-೧೮೭

೬೯೦

ಕಂಡಕಾಪರಮುನ ಗಾನದು ಮರಣಂಬು, ದನುಮದಮುನ ಗನಡು ತತ್ತ್ವಮಿಟ್ಲು,
ಭೋಗವಾಂಛಚೇತ ಬುಣ್ಯಂಬುಗಾನಡು, ವಿಶ್ವದಾಭಿರಾಮ ವಿನುರ ವೇಮ.

ಖಂಡಮಾಂಸದಿಂದ ಕಾಣಲಾರ ಮರಣ.
ತನುವಾದದೊಳು ತಾನು ತತ್ತ್ವವರಿಯ,
ಭೋಗದಾಶೆಯಿಂದ ಪುಣ್ಯ ಕಾಣಲಾರ.
ವಿಶ್ವದಾಭಿರಾಮ ಕೇಳು ವೇಮ.

ನಾನು ಬರೆಯುತ್ತೇನೆ; ನಾನು ಓದುತ್ತೇನೆ; ನೋಡುತ್ತೇನೆ; ಕೇಳುತ್ತೇನೆ;ಮೂಸುತ್ತೇನೆ; ರುಚಿಸುತ್ತೇನೆ; ಮುಟ್ಟುತ್ತೇನೆ. ನನಗೆ ಮನೆ ಮಾರು ಉಂಟು, ಕುಲಜಾತಿ

ಉಂಟು; ಎಂದು ಖಂಡಮಾಂಸದಿಂದ ತುಂಬಿದ ದೇಹಭಾವದಿಂದ ಕೂಡಿರುವವನು ಇದೆಲ್ಲ ಸತ್ಯ ಎನ್ನುವನು. ಅವನಿಗೆ ಮರಣ ಎಂಬುದೊಂದು ಉಂಟು; ಅದು ಈ ಖಂಡಮಾಂಸದ ದೇಹಕ್ಕುಂಟು; ಈ ಇಂದ್ರಿಯಗಳುಳ್ಳ ಅಸ್ಥಿ ಪಂಜರಕ್ಕುಂಟು; ಇದು ಸತ್ (ಎಂದರೆ ಇರುವಂಥದ್ದು) ಅಲ್ಲ- ಎಂಬುದು ತಿಳಿಯದು. ತತ್ತ್ವ ಎಂದರೆ ಬ್ರಹ್ಮತತ್ತ್ವ. ಅನ್ಯ ತತ್ತ್ವ, ಆತ್ಮ ದೇಹದಿಂದ ಬೇರೆ ಉಂಟು. ಆತ್ಮಕ್ಕೆ ಮರಣವಿಲ್ಲ. ಜನನವೂ ಇಲ್ಲ. ಜನನ-ಮರಣ ಕೇವಲ ಶರೀರಕ್ಕೆ ಆತ್ಮ ಸಂಕಲ್ಪದಿಂದ ಹಳೆಯ ಅಂಗಿ ಕಳಚಿ ಹೊಸ ಅಂಗಿ ತೊಡುವ ರೀತಿಯಲ್ಲಿ ಶರೀರ ಸಂಬಂಧ ಉಂಟಾಗುತ್ತದೆ. ಆತ್ಮವೇ ಬ್ರಹ್ಮ. ಆತ್ಮವು ಘಟ ದೇಹದ ಉಪಾಧಿ ಭೇದದಿಂದ ಬೇರೆ ಬೇರೆಯಾಗಿ ಕಾಣುವುದು. "ಸರ್ವಂ ಖಲ್ವಿದಂ ಬ್ರಹ್ಮ." ಇದೆಲ್ಲವೂ ಬ್ರಹ್ಮವೇ ಎಂಬಿತ್ಯಾದಿ ತತ್ತ್ವಗಳನ್ನು ದೇಹದ ಮದದಿಂದ ದೇಹವಾದಿ ತಿಳಿಯುವದಿಲ್ಲ.

ತನುವಿನಲ್ಲಿ ಇಂದ್ರಿಯಗಳುಂಟು. ಇಂದ್ರಿಯಗಳು ಸಹಜ ಸ್ವಭಾವದಿಂದ ಹೊರಮುಖವಾಗಿ ವರ್ತಿಸುವವು. ಬಾಹ್ಯ ವಿಷಯ ವಸ್ತುಗಳ ಮೇಲೆ ಇಂದ್ರಿಯಗಳು ಹರಿಯುವವು. ವಿಷಯ ವಸ್ತುಭೋಗದಾಸೆಯಿಂದ, ಸಲ್ಲದ ಕರ್ಮದಲ್ಲಿ ತೊಡಗುವನು. ಇದರಿಂದ ಪುಣ್ಯ ಕಾಣದ ಗುರಿಯಿಂದ ದೂರ ಸರಿಯುತ್ತಾನೆ.

೬೯೨

ಪೆಟ್ಟಿನಂತ ಫಲವು ಪೆಕ್ಕಂಡ್ರ ಕಪಕೃತಿ, ಜೇಯಕರಿನ್ನ ದಾನು ಜಿರುಪಕುನ್ನ
ಬೆಂಡ್ಲಿ ಜೇಯುನಟ್ಟಿ ಪೆದ್ದಫಲಂಬುರಾ, ವಿಶ್ವದಾಭಿರಾಮ ವಿನುರ ವೇಮ.

ಕೊಡುಗೆಯಷ್ಟು ಫಲವು ಕೂಡುವುದಪಕಾರ
ಗೆಯ್ಯದಿರಲು ತಾನು, ಕೆಡಿಸದಿರಲು,
ಮುದುನೆ ಮಾಡಿದಷ್ಟು ಮಹಾಫಲವು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಪರರಿಗೆ ಉಪಕಾರ ಮಾಡಿದರೆ ಪುಣ್ಯ ಉಂಟು. ಪುಣ್ಯಕಾರ್ಯದಿಂದ ಪುಣ್ಯಲೋಕ ಪ್ರಾಪ್ತಿ. ಬರಿಗೈಯವರಿಗೆ, ಅವರಿಗೆ ಬೇಕಾದುದನ್ನು ಈವುದೇ ಕೊಡುಗೆ.ಕೊಡುಗೆಯಂಥ ಉಪಕಾರ ಬೇರೊಂದಿಲ್ಲ. ಇದರಿಂದ ಅನ್ಯರು ಸಂತೋಷಪಡುವಂತೆ ಆಗಿ, ಆ ಸಂತೋಷದಲ್ಲಿ ತಾವೂ ಭಾಗಿಗಳಾಗುತ್ತಾರೆ. ಅನ್ಯರ ಸಂತೋಷವನ್ನು ಹಾಳುಮಾಡುವ ಯಾವ ಕಾರ್ಯಕ್ಕೂ ಕೈಹಾಕಬೇಡಿ. ಯಾರಿಗೂ ಅಪಕಾರ ಮಾಡಬೇಡಿ. ನೀವು ಮಾಡುವ ಅಪಕಾರದಿಂದ ಅನ್ಯರಿಗೆ ನೋವಾಗುತ್ತದೆ. ಅವರ ಸಂತೋಷ ಹಿಂಗುತ್ತದೆ. ಅಪಕಾರ ಮಾಡದಿರುವದೂ, ಉಪಕಾರ ಮಾಡುವದಕ್ಕೆ ಸಮವಾಗಿ ಉಂಟು.

ಲಗ್ನ ಸಂಬಂಧ ಕುದುರಿಸುವದು ತುಂಬಾ ಕಷ್ಟದ ಕೆಲಸ. "ನೂರು ಸುಳ್ಳು ಹೇಳಿದರೂ ಚಿಂತೆಯಿಲ್ಲ; ಒಂದು ಲಗ್ನ ಮಾಡು, ಎಂದು ವ್ಯವಹಾರದ ಮಾತು. ಲಗ್ನಕಾರ್ಯ ಪರೋಪಕಾರದ ಕಾರ್ಯ; ಪುಣ್ಯದ ಕಾರ್ಯ ಎಂದು ತಿಳಿವಳಿಕೆ. ಆಗುವ ಕಾರ್ಯದಲ್ಲಿ ಹುಳಿ ಹಿಂಡದಿದ್ದರೆ ಸಾಕು: ಲಗ್ನ ಕಾರ್ಯ ಮಾಡಿದಷ್ಟೇ ಪುಣ್ಯ ಉಂಟು.

ಮನುಷ್ಯ ಒಳ್ಳೆಯದನ್ನು ಮಾಡುವ ಅವಕಾಶ ಪಡೆಯದಿದ್ದರೂ, ಕೆಟ್ಟದನ್ನು ಮಾಡದೆ ಇದ್ದರೆ ಸಾಕು.

೬೯೩

ಮೋಕಜಂಕಬೆಟ್ಟ ಮೆಲಗುಚುಮಂದಲೋ ಬ್ರವಂಸಿವೆದಕು ಗೊಲ್ಲಪಗಿಪೆ ಹೃದಿನಿ,
ದೈವಮೆರುಗಕ ಪಕದೈವತ ಮುಲದಲ್ಲು, ವಿಶ್ವದಾಭಿರಾಮ ವಿನುರ ವೇಮು.

ಆಡು ಬಗಲೊಳಿಟ್ಟು ಅಲೆಯುತಿರುವ ಗೊಲ್ಲ.
ಹುಡುಕುವಂತೆ ಭ್ರಮಿಸಿ; ಹೃದಯದಲ್ಲಿ,
ದೈವವರಿಯದೆ ಪರ ದೈವನನೆ ನೆನೆವುದು,
ವಿಶ್ವದಾಭಿರಾಮ ಕೇಳು ನೇಮ.

ನಾವು ಹುಡುಕುವುದು ಏನನ್ನು ? ಎಂಬ ಅರಿವು ಶೋಧಕನಿಗೆ ಮೊದಲು ಬೇಕು. ನಂತರ, ಅದು ಎಲ್ಲಿರಬಹುದು ? ಎಂಬುದರ ತಿಳಿವಳಿಕೆ ಬೇಕು. ಅದು ಹತ್ತಿರವಿರುವಾಗ ಶೋಧಕ ಪ್ರಜ್ಞೆಯಿಂದಿದ್ದು, ಗುರುತಿಸಬಲ್ಲವನಾಗಬೇಕು.

ನಮ್ಮ ಹತ್ತಿರವಿರುವ ಎಷ್ಟೋ ವಸ್ತುಗಳ ಅರಿವಿಲ್ಲದೆ, ನಾವು ವರ್ತಿಸುತ್ತೇವೆ. ಬೇರೆ ಕಡೆಗೆ ಚಿತ್ತ ಹರಿಯುವುದರಿಂದ ನಮಗೆ "ಅರಿವು-ಮರಿವು" ಆಗುತ್ತದೆ. ಕುರುಬನ ಉದಾಹರಣೆ ವ್ಯವಹಾರದಲ್ಲಿ (ಬಳಕೆಯಲ್ಲಿ) ಉಂಟು. ಕುರಿಮರಿಯನ್ನು ತನ್ನ ಬಗಲಲ್ಲಿಟ್ಟುಕೊಂಡು ಕುರಿಗಳ ಎಣಿಕೆ ಮಾಡುತ್ತಾನೆ. ಒಂದು ಕಡಿಮೆಯಾಗುತ್ತದೆ ಅದು ಎಲ್ಲಿರಬೇಕು ? ಎಂದು ಅತ್ತ ಇತ್ತ ದೃಷ್ಟಿ ಹಾಯಿಸುತ್ತಾನೆ. ಆತ್ಮ ಶೋಧಕನು ಹೊರಗೆ ಬ್ರಹ್ಮ ಹುಡುಕ ಹೋಗುವುದೂ ಅದೇ ರೀತಿ. ಬ್ರಹ್ಮ ಹೃದಯಾಕಾಶದಲ್ಲಿ ಉಂಟು. ಅಂತರ್ಮುಖಿಯಾಗಿ ಧ್ಯಾನಿಸಿ ತಿಳಿಯಬೇಕು.

(ಹೋಲಿಸಿ ನೋಡಿರಿ :
ಏಷ ಸರ್ವೇಷು ಭೂತೇಷು ಗೂಢೋಽತ್ಮಾ ನ ಪ್ರಕಾಶತೇ ।
ದೃಶ್ಯತೇ ತ್ವಗ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥

ಸರ್ವಭೂತ ಪ್ರಾಣಿಗಳಲ್ಲಿಯೂ ಅವನು ಗೂಢವಾಗಿರುವ ಆತ್ಮನಾಗಿದ್ದಾನೆ.ಅವನು ನೋಟಕ್ಕೆ ಹೊಳೆಯುವುದಿಲ್ಲ. ಆದರೂ ಸಹ ಅವನು ಸೂಕ್ಷ್ಮವರಿಯಬಲ್ಲ ದೃಷ್ಟಾರಿಂದ ಸೂಕ್ಷ್ಮ ಬುದ್ಧಿಯಿಂದ ಕಂಡರಿಯಲ್ಪಡುವವನಾಗಿದ್ದಾನೆ.
ಕಠೋಪನಿಷತ್ ೩-೧೨.)

೬೯೪

ವೆರ್ರಿ ಪಟ್ಟುವಾನಿ ವಿನಯಂಬುಲಧಿಕಮುಲ್, ಚಿಡ್ಡ ಮುಂಡ ಮುನುಗ ಚೆಲಗಿಪೆಟ್ಟು
ಚೆಡಿಪೆಕೊಡುಕು ಮಿಗುಲಜೀಯು ನಾಚಾರಂಬು, ವಿಶ್ವದಾಭಿರಾಮ ವಿನುರ ವೇಮ.

ಹುಚ್ಚು ಹಿಡಿದಿರುವವ ಹೆಚ್ಚು ವಿನಯಶಾಲಿ.
ಮೂಳರಂಡೆ ಮುಸುಕು ಮೇಲೆ ಇಹುದು.
ಕೆಟ್ಟು ಹೋದ ಮೂಳಗೆಷ್ಟು ಆಚಾರವು?
ವಿಶ್ವದಾಭಿರಾಮ ಕೇಳು ನೇಮ.

'ವಿದ್ಯೆಗೆ ವಿನಯ ಶೋಭಿಸುವುದು' ಎನ್ನುತ್ತಾರೆ. ಓದು-ಬರೆಹದ ವಿದ್ಯೆಯವನು, ತನ್ನ ಓದಿನಿಂದ ತಾನೆಲ್ಲ ತಿಳಿದಿರುವೆನೆಂದು ಭ್ರಮಿಸಿ, ವಿದ್ಯಾಮದದಿಂದ ಅಹಮಹಮಿಕೆಯನ್ನು ಮೆರೆಸುವವನು ಪಡೆದ ವಿದ್ಯೆ,ನಿಷ್ಪ್ರಯೋಜಕವಾಗುವದು. ಅವನು ವಿನಯ ಶಾಲಿಯಾಗಿದ್ದರೆ, ಅವನಲ್ಲಿ ಅಹಂಕಾರವಳಿದು, ಸರ್ವಸಮತಾಭಾವವು ಕುದುರುವುದು. ಆದರೆ ಹುಚ್ಚು ಹಿಡಿದಿರುವವನಿಗೆ ಅರಿವು ತಿರುವು ಮುರುವಾಗಿರುತ್ತದೆ. ಬುದ್ಧಿಯೇ ಭ್ರಮಿತವಾದಾಗ ವಿವೇಕವೆಂತು ಸಾಧ್ಯ ? ಸತ್ಯವಾವುದೆಂಬುದನ್ನು ಕಂಡರಿಯದಿರುವಾಗ, ವಿನಯ ಕಂಡು ಬಂದರೇನು ? ಅದು ನಿಷ್ಪ್ರಯೋಜಕ.

ಪತಿಯು ಇರುವಾಗ ಅಂಕೆ ಮೀರಿದ ಹೆಂಡತಿಯಾಗಿದ್ದು, ಪತಿಯು ತೀರಿದಾಗ ಮುಸುಕು ಹಾಕಿಕೊಂಡು, ಒಳ್ಳೆಯ ವರ್ತನೆಯ ನಾಟಕವಾಡುವವಳೇ ಮೂಳರಂಡೆ. ಅಂಥವಳು ಮೇಲೆ ಹೊದೆವ ಮುಸುಕಿನಿಂದ ಪ್ರಯೋಜನವೇನು ? ಮನಸ್ಸು ಶುದ್ಧವಿರಬೇಕಷ್ಟೇ.

ಹುಚ್ಚು ಹಿಡಿದವನ ವಿನಯವಾಗಲಿ, ಮೂಳರಂಡೆಯ ಮುಸುಕಾಗಲಿ, ಎಷ್ಟು ನಿಷ್ಪ್ರಯೋಜನವೋ, ನಡತೆ ತಪ್ಪಿ,ಪರಧನ,ಪರಸ್ತ್ರೀಯರಿಗಾಸಿಸಿ,ಕೆಟ್ಟುಹೋದ ಮೂಳನು, ಗುಡಿಗೆ ಹೋಗುವುದು, ವ್ರತ-ನೇಮಗಳಲ್ಲಿ ತೊಡಗುವದು, ಮುಂತಾದ ಬಾಹ್ಯಾಚಾರಗಳೂ ಸಹ, ಅಷ್ಟೇ ನಿಷ್ಪ್ರಯೋಜನಕರವಾಗಿವೆ.

೬೯೫

ನೊಸಲು ಬತ್ತುಡಾಚು, ನೋರುತೋಡೇ ಲೌನು, ಮನಸು ಭೂತಮುವಲೆ ಮುಲಯುಗಾನು
ಶಿವುನಿಗಂಟನನ್ನ ಸಿಗ್ಗೆಟ್ಲು ಕಾದುಕೋ, ವಿಶ್ವದಾಭಿರಾಮ ವಿನುರ ವೇಮ.

ನೊಸಲು ಭಕ್ತನಿರಲಿ ನಾಲಗೆ ತೋಳನದು.
ಚಿತ್ತ ಭೂತದಂತೆ ಚಲಿಸುವವನು.
ನೋಡಿದೆ ಶಿವನನೆನೆ, ನಾಚುಗೆ ಎನಿಸದೆ ?
ವಿಶ್ವದಾಭಿರಾಮ ಕೇಳು ನೇಮ.

ಹಣೆಗೆ ಹಲವರು ಆಕಳ ಶಗಣಿಯನ್ನು ವಿಧಿಪೂರ್ವಕವಾಗಿ ಸುಟ್ಟು ಉಂಡೆ ಮಾಡಿಟ್ಟ ವಿಭೂತಿಯನ್ನು ಲೇಪಿಸುತ್ತಾರೆ. ಇನ್ನು ಹಲವರು ಚಂದನದ ಕೊರಡ್ಡು ತೇಯ್ದು ತಯ್ಯಾರಿಸಿದ ' ಗಂಧ ' ವನ್ನು ಲೇಪಿಸಿಕೊಳ್ಳುತ್ತಾರೆ. ಮತ್ತೆ ಹಲವರು ಕುಂಕುಮ ಲೇಪಿಸಿಕೊಳ್ಳುತ್ತಾರೆ. ವಿಭೂತಿ, ಯಜ್ಞಾವಶೇಷವಾದ ಬೂದಿಯ ಪ್ರತೀಕವೆಂದೂ, ಗಂಧ ಪರಸೇವೆಯಲ್ಲಿ ನಿರತರಾದಷ್ಟೂ ಸತ್ಕೀರ್ತಿ ಪ್ರಸಾರಗೊಳುವುದೆಂಬುದರ

ದ್ಯೋತಕವೆಂದೂ, ಕುಂಕುಮ, ಶ್ರೀ ಲಕ್ಷ್ಮಿಯ ಸಂಕೇತವೆಂದೂ ಗ್ರಹಿಕೆ. ಅವುಗಳನ್ನು ವಿಧಿಪೂರ್ವಕ ನಿರ್ದಿಷ್ಟ ರೀತಿಯಲ್ಲಿ ಲೇಪಿಸಿಕೊಂಡ, ಲಿಪ್ತವಾದ ಹಣೆಯು ಪರಮಾತ್ಮನದೇ ಆದಂತೆ ' ಎಂದು ಅರ್ಥ ಹೇಳುತ್ತಾರೆ.

ಈ ಹಣೆಯ ಭಕ್ತಿ ಒತ್ತಟ್ಟಿಗಿರಲಿ. ಹಣೆಯ ಅಲಂಕಾರ ಮಾಡಿಕೊಂಡು ಪೂಜೆಗಿಳಿದರೋ ತೀರಿತು ! ನಾಲಗೆ ಎದುರಿಗಿಟ್ಟ ಎಡೆಯ ಮೇಲೆ. ಎಡೆಯು ಯಜ್ಞಪಶುವೇ ಇರಲಿ. ' ಅಮ್ಮನಿಗೆ ' ಬಲಿಗೊಟ್ಟ ಕುರಿಯ ಮಾಂಸವೇ ಇರಲಿ; ಹುಗ್ಗಿ-ಹಯಗ್ರೀವ-ಹೋಳಿಗೆಯೇ ಇರಲಿ. ನಾಲಗೆ, ರುಚಿ ನೋಡಲು ಮುಂದಾಗುವುದು. ತೋಳನ ನಾಲಗೆಯದು. ಭಕ್ತನ ನಾಲಗೆಯಲ್ಲ. ಭಕ್ತನಾದವನು ತನು ಮುಟ್ಟದೆ, ಮನ ಮುಟ್ಟದೆ, ಸರ್ವಾರ್ಪಣ ಮಾಡುತ್ತಾನೆ.

ಇನ್ನು ಮನಸ್ಸಾದರೋ; ಮಾಡುವ ಮೂರ್ತಿ ಪೂಜೆಯಲ್ಲಿ ನಿಲ್ಲದು. ಎಲ್ಲೆಲ್ಲಿಯೋ ಭೂತ ಸಂಚರಿಸುವಂತೆ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಚಲಿಸುತ್ತದೆ.

ಇಂಥ ಸೋಗಿನ ಭಕ್ತನು ಶಿವನನ್ನು (ಬ್ರಹ್ಮ) ಕಂಡೆನೆಂದರೆ, ನಾಚುಗೆ ಎನ್ನಿಸಬೇಕಷ್ಟೇ.

೬೯೬

ಭೂತಿದೇಹಮುಂದು ಬೂಸಿನನಾಯೆನಾ ? ನಿಷ್ಠ ಶಿವುನಿಯಂದು ನಿಲುಪವಲಯು.
ಗಾಕ ಭಸ್ಮಮಂದು ಗಾಡಿದ ದೊರ್ಲದಾ, ವಿಶ್ವದಾಭಿರಾಮು ವಿನುರ ವೇಮು.

ಬೂದಿ ದೇಹದಲ್ಲಿ ಬಳಿದುಕೊಂಡರೇನು ?
ನಿಷ್ಠೆ ಶಿವನ ಮೇಲೆ ನಿಲಿಸಬೇಕು.
ಹೊರತು, ಭಸ್ಮದಲ್ಲಿ ಹೊರಳಿದೇನು ಕತ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಸುಟ್ಟು ಭಸ್ಮವಾದದ್ದು ಬೂದಿ. ಭೂತ ಎಂದರೆ ನಡೆದು ಹೋದದ್ದು. ಭೂತಿ ಎಂದರೆ ಬೂದಿ. ಮನುಷ್ಯ ತನಗೆ ಬೇಕಾದ ವಸ್ತುಗಳನ್ನು ಯಜ್ಞದ ಅಗ್ನಿಯಲ್ಲಿ ಚೆಲ್ಲಿ ಬೂದಿ ಮಾಡಬೇಕು. ಅದರಿಂದ ಅವನಲ್ಲಿ ನಿರಾಸಕ್ತಿ ಹುಟ್ಟುತ್ತದೆ, ಎಂದು ಅರ್ಥ ಹೇಳುತ್ತಾರೆ. ತಮಗೆ ಪ್ರೀಯವಾದುದೂ ದೇವರಿಗೆ ಪ್ರೀಯವಾದುದೆಂದು ಗ್ರಹಿಸಿ ಆದನ್ನೇ ಯಜ್ಞದಲ್ಲಿ ಅರ್ಪಿಸುತ್ತಾರೆ. ಅದನ್ನೇ ಮೆಯ್ಗೆ ಬಳಿದುಕೊಳ್ಳುತ್ತಾರೆ. ಇಲ್ಲವಾದರೆ, ಸುಡುಗಾಡದಲ್ಲಿ ಶವಸಂಸ್ಕಾರದ ಅವಶೇಷವಾದ ಬೂದಿಯನ್ನು ಮೆಯ್ಗೆ ಬಳಿದುಕೊಳ್ಳುತ್ತಾರೆ. ಆದರೆ, ಇದು ಬಾಹ್ಯ ಆಚಾರ ಮಾತ್ರ.

ಯಜ್ಞದಗ್ನಿಯಲ್ಲಿ ದರ್ಭೆ, ತುಪ್ಪ ಸುಟ್ಟರೇನು ಬಂತು ? ಜ್ಞಾನದಗ್ನಿಯಲ್ಲಿ ವಿಷಯವಾಸನೆಗಳನ್ನು ಸುಡಬೇಕು. ಇದೆಲ್ಲ ಮಾನಸಿಕ ಬದಲಾವಣೆಯಿಂದ ಮಾತ್ರ ಸಾಧ್ಯ. ಮನಸ್ಸನ್ನು ನಿಗ್ರಹಿಸಿ, ಬಾಹ್ಯ ವಸ್ತುಗಳಿಂದ ಚಿತ್ತವೃತ್ತಿಗಳು ಬಂದು ಸೇರದಂತೆ ನೋಡಿ

ಕೊಂಡರೆ, ಮನಸ್ಸು ಹಸನವಾಗುತ್ತದೆ. ಹಸನಾದ ಮನಸ್ಸಿನಿಂದ ಶಿವ-ತತ್ತ್ವಗಳನ್ನು ಧ್ಯಾನಿಸಿ, ಸ್ಥಿತಪ್ರಜ್ಞನಾಗಿ, ತತ್ತ್ವನಿಷ್ಠನಾಗಿ ಉಳಿಯಬೇಕು. ಇದಕ್ಕೆ ಸಾಧನ ಮಾಡಬೇಕು.

ಮೆಯ್ಗೆ ಬೂದಿ ಬಳಿದುಕೊಂಡರೆ, ಎಷ್ಟಾದರೂ ಪ್ರಯೋಜನವಾಗುವಂತಿದ್ದರೆ, ಬೂದಿಯಲ್ಲಿ ಹೊರಳಾಡುವ ಕತ್ತೆಗೂ ಪ್ರಯೋಜನವಾಗಬಹುದಿತ್ತು. ಆದರೆ ಬಾಹ್ಯಲೇಪನವೆಲ್ಲ ನಿಷ್ಪ್ರಯೋಜಕವು.

೬೯೭

ಆಕುಲೆಲ್ಲ ದಿನ್ನ ಮೇಕಪೋತುಲ ಕೆಲ, ಗಾಕಪೋಯೆನಯ್ಯ ಕಾಯಸಿದ್ಧಿ.
ಲೋಕುಲೆಲ್ಲ ವೆರ್ರಿಪೋಕಿಲ್ಲ ಬೋದುರು, ವಿಶ್ವದಾಭಿರಾಮು ವಿನುರ ವೇಮು.

ಮೇವು ಹುಲ್ಲು ತಿನುವ ಮೇಕೆ ಹೋತಿಗೆಲ್ಲ;
ದೊರೆಯದೆ ಹೋಗುವುದೆ ' ದೇಹಸಿದ್ಧಿ ' ?
ಪ್ರಜೆಗಳೆಲ್ಲ ಬರಿಯೆ ಪೆಚ್ಚಾಗಿ ಹೋದರು.
ವಿಶ್ವದಾಭಿರಾಮ ಕೇಳು ವೇಮ.

ಅಹಿಂಸೆ ಎಂದರೆ ಜೀವಿಗಳನ್ನು ಕೊಲ್ಲದಿರುವುದು, ಎಂದು ಭಾವನೆ. ಅಹಿಂಸೆಯು ಪುಣ್ಯಕರವೆಂದು ಗ್ರಹಿಕೆ. ಪ್ರಾಣಿ-ಪಕ್ಷಿಗಳನ್ನು ಕೊಲ್ಲದೆ, ಜೀವಿಸುವುದು, ಪುಣ್ಯಜೀವನವೆಂದು ಬಗೆದು, ಕೇವಲ ಸಸ್ಯಾಹಾರದ ಮೇಲೆ ಜೀವಿಸಿದ್ದರೆ, ಸಿದ್ಧಿ ದೊರೆಯುವುದು ಎಂದು ನಂಬುತ್ತಾರೆ. ಸಾತ್ತ್ವಿಕ ಆಹಾರವೆಂದರೆ ರಸಯುಕ್ತವಾದ, ಸ್ನಿಗ್ಧವಾದ, ಹೃದಯಪ್ರಿಯ ಆಹಾರವೆನ್ನಲಾಗುತ್ತದೆ. ಹಾಗಾದರೆ, ಆಡು—ಹೋತು, ಹಚ್ಚ-ಹಸುರಾದ, ರಸಭರಿತ ಎಲೆ-ಚಿಗುರೆಲೆಗಳನ್ನೇ ತಿನ್ನುತ್ತವೆ. ಮನುಷ್ಯನಾದರೋ, ಉಪ್ಪು, ಖಾರ, ಹುಳಿಯಾದ, ದುಃಖ, ಶೋಕ, ರೋಗಗಳನ್ನುಂಟು ಮಾಡುವ, ರಾಜಸಿಕ ಆಹಾರ ಸೇವಿಸುತ್ತಾನೆ. ಆಹಾರದಿಂದ ಹೆಚ್ಚಿನ ಸಿದ್ಧಿಯಾಗುವಂತಿದ್ದರೆ, ಅದು ಆಡು-ಹೋತಿಗೆ ಆಗುತ್ತದೆಯಷ್ಟೇ.

ಇಲ್ಲಿ ನಿಜವಾಗಿ ತಿಳಿಯಬೇಕಾದುದು ಬೇರೆ. ಆಹಾರ ಮುಖ್ಯವಲ್ಲ. ಸಾಧಕನಿಗೆ ಇಂದ್ರಿಯ ನಿಗ್ರಹ ಮಾಡುವಾಗ ಆತಂಕವಾಗುವಂಥ ವಿಷಯ ವಾಸನೆಗಳು ಪ್ರಬಲವಾಗಬಾರದೆಂದು ಸಾತ್ವಿಕ ಆಹಾರ ಮೇಲು ಎಂದು ತಿಳಿಯಬೇಕಷ್ಟೇ. ಆದರೆ ಮನಸ್ಸನ್ನು ಏಕಾಗ್ರಗೊಳಿಸುವ ಸಾಧನೆಯು ಮುಖ್ಯವಾದುದು. ಮಾಂಸಾ-ಹಾರಿಯಾದವರೂ ಚಿತ್ತೈಕಾಗ್ರತೆ ಸಾಧಿಸಬಲ್ಲರು. ಶಾಕಾಹಾರಿಯಾಗಿದ್ದರೂ ಚಂಚಲರಾಗಿರಬಹುದು.

ಒಳಮರ್ಮವನ್ನು ಅರಿಯದೆ, ಬಳ್ಳಿಳ್ಳಿ ತಿನ್ನದವರದೇ ಒಂದು ಜಾತಿ, ಮಾಂಸ ತಿನ್ನದವರದೇ ಒಂದು ಜಾತಿ, ಕಾಯಿಪಲ್ಯ ಕಾಳು-ಕಡಿ ಬಳಸುವವರದೊಂದು ಜಾತಿ ಎಂದು ವಿಭಾಗಗಳಾಗಿವೆ.

೬೯೮

ಬೋಡಿತಲಲ ಜಡಲ ಬೂಡಿದ ಪೂತಲ, ಭಾಷಣಾಸಲನಮುಲ ವೇಷಮುಲನು,
ಯೋಗಿಕಾಡುಲೋನ ಬಾಗುಗಾಕುಂಡಿನ, ವಿಶ್ವದಾಭಿರಾಮ ವಿನುರ ವೇಮ

ಬೋಳು, ತಲೆಯ ಜಡೆಯು, ಬಳಿದುಕೊಂಡ ಬೂದಿ
ಭಾಷಣಾಸನಗಳು ವೇಷವಷ್ಟೆ.
ಯೋಗಿಯೂಗನೊಳಗೆ ಬಾಗು ಉಳ್ಳತನಕ.
ವಿಶ್ವದಾಭಿರಾಮ ಕೇಳು ವೇಮ.

ಯೋಗಿ, ಜ್ಞಾನಿ ಮತ್ತು ಮಹಾತ್ಮಾ ಎಂದು ಹೇಳಿಕೊಂಡು ಮೆರೆಯುವವರು ಅದೆಷ್ಟೋ ಜನ ಉಂಟು. ದೇವರಿಗೆ ಅರ್ಪಿಸಿದ್ದೇನು ? ಕೂದಲು ಜಡೆ ಕಟ್ಟುತ್ತಾರೆ. ಶರೀರದ ಕಲ್ಮಶವೇ ಕೂದಲು ರೂಪದಲ್ಲಿ ಉಂಟು, ಎಂದು ಕೂದಲು ತೆಗೆಸುತ್ತಾರೆ. ಮೈಯ್ಗೆ ಬೂದಿ ಬಳಿಯುವುದು ಸಂನ್ಯಾಸ ಲಕ್ಷಣವೆಂದು, ಬೂದಿ ಬಳೆಯುತ್ತಾರೆ. ಶ್ರಾವಣದಿಂದ ಚತುರ್ಮಾಸಗಳಲ್ಲಿ ಪಾಠ ಪ್ರವಚನ ನಡೆಸುವುದು ಆಶ್ರಮ ಧರ್ಮವೆಂದು ಆ ಕಾಲದಲ್ಲಿ ಭಾಷಣ ಪ್ರಾರಂಭಿಸುತ್ತಾರೆ. ಇನ್ನು ಹಲವರು ಆಸನಾದಿ ವಿಧಿಯಿಂದ ಪೆಟ್ಟಿಗೆಯಲ್ಲಿಯೋ, ಮಣ್ಣಿನಲ್ಲಿಯೋ ಕುಳಿತು, ತಾವು ಯೋಗಿಗಳೆಂದು ಪ್ರದರ್ಶಿಸುತ್ತಾರೆ, ಆದರೆ ಯೋಗವಿದಲ್ಲ. ತಲೆ ಬೋಳಾದರೇನಂತೆ ! ಮನವು ಬೋಳಾಗಬೇಕು. ಮನಸ್ಸಿನಲ್ಲಿ ವಿಷಯಾಸಕ್ತಿ, ಆಶೆ, ಅಹಂಕಾರಗಳನ್ನು ಜ್ಞಾನದ 'ಕತ್ತಿ'ಯಿಂದ ಬೋಳಿಸಬೇಕು. ಅವಿದ್ಯೆಯ ಮುಂಡ ಮಾಡುವ ಉಪನಿಷತ್ತು 'ಮುಂಡಕ' ಉಪನಿಷತ್ತೆಂದು ಕರೆಯಲ್ಪಡುತ್ತದೆ.'ಅಯಮಾತ್ಮಾ ನ ಲಭ್ಯಃ ಪ್ರವಚನೇನ.' ಈ ಆತ್ಮವು ಪ್ರವಚನ ಮಾಡುವುದರಿಂದ ಲಭಿಸದು. ಆಸನಾದಿಗಳ ಹಂತ ದಾಟಿ ದೂರ ಸಾಗಬೇಕು, ಮನಸ್ಸು, ಸ್ಥಿರ ಬುದ್ಧಿ ಉಂಟಾದಾಗ, ಯೋಗಿ ಎನ್ನಿಸುವನು. ಮನಸ್ಸಿನಲ್ಲಿ ಬಾಗು, ವಕ್ರತೆ ಇದ್ದರೆ ಅವನು ಯೋಗಿಯಲ್ಲ.

(ಹೋಲಿಸಿ ನೋಡಿರಿ :— "ಬೋಳಿಸುವುದೂ ನೀಳವಾಗಿಸುವುದೂ ಬೇಡ
ಲೋಕ ಹಳಿದುದು ತಾನು ಉಳಿದು ಬಿಟ್ಟರಲು." — ತಿರುವಳ್ಳವರು

೬೯೯

ವೇಷಭಾಷಲೆರಿಗಿ ಕಾಷಾಯ ವಸ್ತ್ರಮುಲ್, ಬೋಡಿನೆತ್ತಿ ಕಲಿಗಿ ಪೊರಯುಚುಂಡು.
ತಲಲು ಬೋಡುಲ್ಕೆನ ದಲಪುಲು ಬೋಡುಲಾ ? ವಿಶ್ವದಾಭಿರಾಮ ವಿನುರ ವೇಮ.

ವೇಷಭಾಷೆಯೆರಿತು ಕಾಷಾಯ ವಸ್ತ್ರವ,
ಬೋಳುನೆತ್ತಿ ಹೊಂದಿ ಪಡಲು ಗರ್ವ,
ಬೋಳು ತಲೆಯದಷ್ಟೆ ಬೋಳಿಹವೆ ಯೋಚನೆ ?
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಿಯನ್ನು ಗುರುತಿಸಲು ಅವನ ಬಾಹ್ಯ ವೇಷ-ಭೂಷಣಾದಿಗಳು ಸಹಾಯಕ್ಕೆ ಬರವು. ಸಾಧುವಿನ ಹೊರ-ಭಂಗಿಗಳತ್ತ ಲಕ್ಷ್ಯ ಹರಿಸಲೂ ಬಾರದು. ಏಕೆಂದರೆ ಅದರಿಂದ

ಮೋಸಗೊಳ್ಳುವ ಸಂಭವವೇ ಹೆಚ್ಚು. ಅವನು ಏನನ್ನೇ ತಿನ್ನಲಿ; ಎಂಥ ವೇಷವನ್ನೇ ಧರಿಸಲಿ; ಅವನು ತನ್ನ ಕೂದಲನ್ನು ತನ್ನಿಚ್ಛೆ ಬಂದಂತೆ ಇಟ್ಟುಕೊಳ್ಳಲಿ. ಬೇಕಾದರೆ ಮುಂಡ ಬೋಳಿಸಿಹಾಕಲಿ. ಅದರಿಂದೇನು? ತಾನು ಬೋಳದಲೆಯವನೆಂದೂ, ಕಾಷಾಯ ವಸ್ತ್ರ ಧಾರಿಯೆಂದೂ, ಜಂಭ ಕೊಚ್ಚಿಕೊಂಡರೆ, ಅವನೊಬ್ಬ ಮುರ್ಖನಷ್ಟೇ.

ಯಾರು ಜ್ಞಾನನಿಷ್ಠೆಯುಳ್ಳವರೋ, ಸ್ವರೂಪ ಸ್ಥಿತಿ ತಿಳಿದವರೋ; ಅವರು ಜನ ನಿಬಿಡದ ಪಟ್ಟಣದಲ್ಲಿದ್ದರೂ, ವನವಾಸಿಗಿಂತ ಹೆಚ್ಚಿನ ಸಾಧನೆ ಗೆಯ್ಯಬಲ್ಲರು.ಮನಸ್ಸಿನಿಂದ ಚಿತ್ತವೃತ್ತಿಗಳು ಇಲ್ಲವಾಗಬೇಕು. ಅಂದರೆ ಯೋಚನೆಗಳು ಇಲ್ಲವಾಗುತ್ತವೆ. ಚಿಂತೆಯನ್ನು ಕಡಿದೊಗೆಯುವುದೇ ಮನಸ್ಸನ್ನು ಬೋಳಿಸಿದಂತೆ. ಬೋಳುತಲೆಯೆಂದರೆ ಬೋಳುಮನಸು. ಕೂದಲು ಕತ್ತರಿಸಿ, ಕಾಶಿ ತೀರ್ಥದಲ್ಲಿ ಮುಳುಗಿ ಎದ್ದರೆ, ವಿಶ್ವೇಶ್ವರನ ವಿಶ್ವವ್ಯಾಪ್ತಿ, ಸರ್ವೇಶತ್ವ ಗ್ರಹಿಸುವ ಶಕ್ತಿ ಮನಸ್ಸಿಗೆ ಬರುವುದೆಂತು? ಯೋಗ ಸಾಧನವೊಂದೇ ಬ್ರಹ್ಮವರಿಯುವ ಮಾರ್ಗ.

೭೦೦

ಕಾಲನೇಯಿವಂಚಿ ಗಾಲಿನಿಂಡುಗಜೇರ್ಚಿ, ನೇಲವ್ರಾಲಿಮರಿಯು ನಿಲಿಚಿ ಚೇಯು,
ನಾಸನಮುಖ ವಿದ್ಯ ಲಭ್ಯಾಸವಿದ್ಯಲು,ವಿಶ್ವದಾಭಿರಾಮ ವಿನುರ ವೇಮ.

ಕಾಲುಕ್ಕೈಯ ಮಣಿಸಿ, ಗಾಳಿ ತುಂಬಿ ಹಿಡಿದು,
ನೆಲಕೆ ಮಣಿದು ಮತ್ತೆ ನೀಟು ನಿಲುವ,
ಆಸನಾದಿ ವಿದ್ಯೆ ಅಭ್ಯಾಸ ವಿದ್ಯೆಯು.
ವಿಶ್ವದಾಭಿರಾಮ ಕೇಳು ವೇಮ.

ರಾಜಯೋಗದ ಪ್ರಾರಂಭಿಕ ಸಾಧನಾವಸ್ಥೆಯಲ್ಲಿ ಕೆಲವೊಂದು ಶಾರೀರಕ ಮತ್ತು ಮಾನಸಿಕ ಸಾಧನೆಯನ್ನು ಮಾಡಬೇಕಾಗುತ್ತದೆ. ಆದ-ಕಾರಣ ದೀರ್ಘ ಕಾಲ ಕುಳಿತು ಕೊಳ್ಳಲು ಸಾಧ್ಯವಾಗುವ ಒಂದು ಆಸನವನ್ನು ಕಂಡು ಹಿಡಿಯುವುದು, ಅತ್ಯಾವಶ್ಯಕ. ಆಸನಗಳು ಕೇವಲ ಮನಸ್ಸನ್ನು ಏಕಾಗ್ರಗೊಳಿಸುವ ಅಭ್ಯಾಸ ಮಾತ್ರ.

ರಾಜಯೋಗದ ಈ ಭಾಗ ಶಾರೀರಕವಾದ ಹಠಯೋಗಕ್ಕೆ ಹೋಲುವಂತಿದೆ. ಹಠಯೋಗದ ವಿವಿಧ ಆಸನಗಳಲ್ಲಿ ಕಾಲು ಕೈಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಮಣಿಸಿ ಪೂರಕ, ಕುಂಭಕ, ರೇಚಕ ಕ್ರಮದಲ್ಲಿ ಉಸಿರಾಟ ನಡೆಯುವುದು. ನಂತರ ನೆಲಕ್ಕೆಮಣಿದು ನೀಟಾಗುವ ಕ್ರಮಗಳುಂಟು. ಈ ಆಸನಗಳೆಲ್ಲ ಕೇವಲ ಅಭ್ಯಾಸಪರವೆಂದು ತಿಳಿಯಬೇಕು. ಅವುಗಳನ್ನು ಮಾಡುವುದಕ್ಕೂ 'ಯೋಗ'ಕ್ಕೂ ಅಷ್ಟು ಸಂಬಂಧವಿಲ್ಲ.

(ಹೋಲಿಸಿ ನೋಡಿರಿ:

"ಹಠಯೋಗವು ದೇಹಕ್ಕೆ ಸಂಬಂಧಪಟ್ಟ ವಿಷಯವನ್ನುಮಾತ್ರ ಕುರಿತಾದದ್ದು. ದೇಹವನ್ನು ದೃಢವಾಗಿ ಮಾಡುವುದೇ ಅದರ ಗುರಿ. ಇಲ್ಲಿ (ರಾಜಯೋಗ ವಿವೇಚನೆಯಲ್ಲಿ)

ಅದಕ್ಕೂ ನಮಗೂ ಏನೂ ಸಂಬಂಧವಿಲ್ಲ....ಅದರಿಂದ ಆಧ್ಯಾತ್ಮಿಕ ಉನ್ನತಿಗೆ ಅಷ್ಟೇನೂ ಸಹಾಯವಾಗುವುದಿಲ್ಲ. ಇಂತಹ ಅನೇಕ ಅಭ್ಯಾಸಗಳನ್ನು ಅಂದರೆ ಬಹು ವಿಧದ ಆಸನಗಳನ್ನು ಮಾಡುವುದನ್ನು ನೀವು ಹಲವಾರು ಕಡೆ ನೋಡಿರಬಹುದು. ಇದರ ಗುರಿ ಶಾರೀರಕವೇ ಹೊರತು ಮಾನಸಿಕವಲ್ಲ''

– ಸ್ವಾಮಿ ವಿವೇಕಾನಂದ)

ಕಾವಿ ಪಂಚೆಗಟ್ಟ, ಕಡುಯೋಗಿವಲೆನುಂಡಿ, ನೆಲಕಿಗೋರ್ಕುಲೆಲ್ಲ ವಿಡಿಚಿಪೆಟ್ಟ
ತೊಡರಿ ತಿರುಗುವಾಡು ದೊಂಗ ಸನ್ಯಾಸಯಾ ವಿಶ್ವದಾಭಿರಾಮ ವಿನುರ ವೇಮ.

ಕಾವಿಪಂಜೆಯುಟ್ಟು ಕಡುಯೋಗಿಯಂದದಿ,
ಉಚ್ಚ ಕೋರಿಕೆಗಳ ಊದಿಬಿಟ್ಟು,
ಸೆಟೆದು ತಿರುಗುವವನು ಸನ್ಯಾಸಿಗಳ್ಳನು.
ವಿಶ್ವದಾಭಿರಾಮ ಕೇಳು ವೇಮ.

ಕ್ಯಾವಿ ಇಲ್ಲವೆ ಕೆಂಪು ಬಣ್ಣದ ಬಟ್ಟೆ ಧರಿಸುವುದರ ಉದ್ದೇಶವಾದರೂ ಏನು? ಕ್ಯಾವಿ ಬಟ್ಟೆ ಉಟ್ಟರೆ ಯಾರಾದರೂ ಸಾಧುಗಳಾಗುವರೇ? ಎರಡು ವಸ್ತುಗಳ ನಡುವೆ ಇರುವ ಪರಸ್ಪರ ಆಕರ್ಷಣೆ ರಾಗದ್ವೇ ಆಗಿದೆ. ಇದುವೇ ಬಣ್ಣದ್ದು. 'ರಾಗ' ಶಬ್ದವು 'ರಂಜ' ಧಾತ್ವು ಮೂಲದಿಂದ ವ್ಯುತ್ಪತ್ತಿಯಾಗಿದೆ. 'ರಂಜ' ಎಂದರೆ ಬಣ್ಣ ಹಾಕುವುದು. ರಾಗವೇ ಸತತವಾಗಿ ನಿಯಮಿತವಾಗಿ ಇದ್ದರೆ, ಅನುರಾಗವೆನಿಸುವುದು. ಅನುರಾಗವೆಂದರೆ ಅದೇ ಸದ್ವಸ್ತುವಿನ ಬಣ್ಣವನ್ನು ತನ್ನ ಮನಸ್ಸಿಗೆ ಬಳಿಯುವುದು. ಇದು ನಿಜವಾದ ಭಾವ. ಹೊರಗೆ ಪಂಜೆ, 'ಕಫನಿ'ಗಳಿಗೆ ಕ್ಯಾವಿ ಬಣ್ಣಕೊಟ್ಟು ನಾಟಕ ಮಾಡಿದರೇನು, ಬಂತು? ಒಳಗೆ ಮನಸ್ಸಿಗೆ ಬಣ್ಣಕೊಡಬೇಕು. ಇಂಥ ಉಚ್ಚ ಕೋರಿಕೆ ತೊರೆದು, ಹಲವು ಜಾತಿಯ ಜನರು ಧಾರ್ಮಿಕ ಸಾಧನೆಯ ಹೆಸರಿನಲ್ಲಿ, ಬಟ್ಟೆಗೆ ಇಲ್ಲವೆ ದೇಹಕ್ಕೆ ಬಣ್ಣ ಬಳಿಯುತ್ತಾರೆ. ಅಂತರಂಗದಲ್ಲಿ ಮನಸ್ಸಿಗೆ ಸದ್ವಸ್ತುವಿನ ಬಣ್ಣ ಬಳಿಯದಿದ್ದರೆ, ಬಾಹ್ಯ ಬಣ್ಣವೆಲ್ಲ ವ್ಯರ್ಥವೆಂದು ನಂಬಿರಿ.

ಉಚ್ಚ ಕೋರಿಕೆಗಳನ್ನೆಲ್ಲ ಊದಿ ಬಿಟ್ಟು, ಮಹಾಯೋಗಿಯಂತೆ, ಕ್ಯಾವಿ ಬಟ್ಟೆಯನ್ನು ಬಾಹ್ಯದಲ್ಲಿ ತೊಟ್ಟು ಗರ್ವದಿಂದ, ಎದೆ ಸೆಟೆಸಿ ತಿರುಗುವವರು ಸಂನ್ಯಾಸಿಗಳ್ಳರು. ಅವರನ್ನು ನಂಬಬೇಡಿರಿ.

(ಹೋಲಿಸಿ ನೋಡಿರಿ.

"ಕಾವಿ ಕೆಂಪು ಬಟ್ಟೆಯಿಂದ ಯೋಗಿಯಲ್ಲ.
ಬಣ್ಣವಿರದ ಮನಸು ಇದ್ದರಾಯಿತಲ್ಲ "

ಹಿಂದಿ ಮೂಲ– ಕಬೀರದಾಸ.)

ಕಲಿಯುಗಮುನಬುಟ್ಟ ಕಡತೇರಗಾಲೇಕ, ಒಡಲು ಬಡಲ ಜೇಸಿ ಯುಗ್ರ ತಪಮು,
ದಾಮುಜೇಸಿ ಯೇಮಿ ತತ್ತ್ವಂಬು ಗಂದುರೋ ವಿಶ್ವದಾಭಿರಾಮ ವಿನುರ ವೇಮ.

ಕಲಿಯುಗದೊಳು ಹುಟ್ಟಿ ಕಡೆಯ ಗುರಿ ತಲುಪದೆ,
ಒಡಲು ಬಡವ ಮಾಡಿ, ಉಗ್ರ ತಪವ,
ತಾವು ಗೆಯ್ದರೆಷ್ಟು? ತತ್ತ್ವ ಕಾಣಬಹುದೆ?
ವಿಶ್ವದಾಭಿರಾಮ ಕೇಳು ವೇಮ.

ನಾವು ಇರುವುದು ಕಲಿಯುಗದಲ್ಲಿ. ಕೌರವ-ಪಾಂಡವರಲ್ಲಿ ದಾಯಾದಿ ಹಕ್ಕಿಗಾಗಿ ಹೋರಾಟ ನಡೆದು, ಭಾರತದ ಬಹುಭಾಗವನ್ನು ಬಳಸಿತು. ಜನತೆಯಲ್ಲಿ ಧಾರ್ಮಿಕ ಕಲ್ಪನೆ ಬದಲಾಯಿತು. ಕರ್ತವ್ಯ ನಿರ್ವಹಣೆಯಲ್ಲಿ, ಗುರುವಧೆ, ಬಂಧುವಧೆ ದೋಷಕರವಲ್ಲ ಎಂಬ ಭಾವನೆಯನ್ನು ಶ್ರೀಕೃಷ್ಣ ಮೂಡಿಸಿದ. ಜನರನ್ನು ವಿಂಗಡಿಸುವಿಕೆಗೆ, ಅವರು ಯಾರ ಮಕ್ಕಳು? ಯಾರ ಹೊಟ್ಟೆಯಲ್ಲಿ ಹುಟ್ಟಿದವರು? ಎಂಬುದರ ಸಂಬಂಧವೇ ಇಲ್ಲ. ಇದು ಕೇವಲ ಅವರವರ ಗುಣ ವತ್ತು ಕರ್ಮಗಳ ಮೇಲಿಂದ ನಿರ್ಧಾರವಾಗಬೇಕು, ಸ್ವತಃ ಕೃಷ್ಣ ಯಾದವ ಜಾತಿಯವ. ಅವನ ಮಾವನು ಋಷಿಯು. ಬ್ರಾಹ್ಮಣ. ಶ್ರೀ ಕೃಷ್ಣ ಕ್ಷತ್ರಿಯನಾದ. ಏಕೆಂದರೆ, ಯುದ್ಧಗಳಲ್ಲಿ, ಆಡಳಿತ ವ್ಯವಹಾರಗಳಲ್ಲಿ ಕೈಹಾಕುತ್ತಿದ್ದ. ಪೂರ್ವದ ವಿಚಾರಧಾರೆಗಿಂತ ಬಹಳ ಅಂತರ ಕಂಡುಬಂದಿತು. ದೈವಿಕ ಇಲ್ಲವೆ ಅಧ್ಯಾತ್ಮಿಕ ಸಾಧನೆಯ ನೂತನ ವಿಚಾರದ ಕಾಲ ಪ್ರಾರಂಭವಾಯಿತು. ಇದೇ ಹೊಸ ಯುಗ; ಕಲಿಯುಗ.

ಇಂದಿಗೆ ಕಲಿಯುಗಾರಂಭವಾಗಿ ಐದು ಸಾವಿರ ವರ್ಷಗಳಾದವು. ಜನರ ದೇಹರಚನೆ, ಬುದ್ಧಿಯ ಮಟ್ಟ ಬಹಳಷ್ಟು ಬದಲಾವಣೆ ಹೊಂದಿದೆ. ಮಾನಸಿಕ ನಿಗ್ರಹ ಸಾಧನೆಗೆ ದೇಹದ ಸ್ವಾಸ್ಥ್ಯವೂ ಸ್ವಲ್ಪು ಸಂಬಂಧಿಸಿರುವುದರಿಂದ ನಾವು ಅಂದಿನ ಶಾಸ್ತ್ರಗಳನ್ನು ಓದಿ ತಿಳಿಯುವಾಗ ಎಚ್ಚರವಾಗಿರಬೇಕು. ಹವಾಮಾನವು ಈ ದೀರ್ಘಕಾಲದಲ್ಲಿ ಹೆಚ್ಚು ಕಡಿಮೆಯಾಗಿದೆ. ಇಂದು ಬೇಯಿಸಿದ ಅಡುಗೆಗೆ ಹೊಂದುವಂತೆ ಶರೀರ ರಚನೆಯಾಗಿದೆ. ಕಂದಮೂಲ ತಿನ್ನಬೇಕಾಗಿಲ್ಲ. ಚಿಕ್ಕ ದೊಡ್ಡ ಹೋಣೆಗಳ ಮನೆಗಳನ್ನು ಕಟ್ಟಲಾಗುತ್ತದೆ. ಪ್ರಶಾಂತ ವಾತಾವರಣ, ಧ್ಯಾನಕ್ಕೆ ಸಾನುಕೂಲವಾದುದು, ಮನೆಯಲ್ಲಿ ದೊರೆಯುವುದು. ಗಿರಿ–ಗುಹೆಗಳಿಗೆ ಹೋಗಬೇಕಾಗಿಲ್ಲ. ನೆಲಮಾಳಿಗೆ ಯಾಗಬಹುದು. ಮೇಲಿನ ಅಂತಸ್ತು ಆದರೂ ನಡೆದೀತು. ಬಡಶರೀರವನ್ನು ಬಿಸಿಲಿಲ್ಲಿ, ಛಳಿಯಲ್ಲಿ ಕೊರಗಿಸಿ ದಂಡಿಸುವ ತಪಸ್ಸು ಬೇಕಾಗಿಲ್ಲ. ಮನಸ್ಸನ್ನು ಶುದ್ಧಗೊಳಿಸಿ, ಗಮ್ಯಸ್ಥಾನವನ್ನು ಕುರಿತು ಏಕಾಗ್ರಗೊಳಿಸುವ ಸಾಧನವಾದರೆ ತೀರಿತು. ಛಾಪಖಾನೆಗಳು ವಿಪುಲವಾಗಿವೆ. ಹಾಳೆಯ ಮಿಲ್ಲುಗಳೂ ಉಂಟು. ಪುಸ್ತಕಗಳನ್ನು ಪಠಿಸಿ ವಿಷಯ ಸಂಗ್ರಹಿಸಬಹುದು. ಕವಿಯಿಂದ ಕವಿಗೆ ಮುಂತ್ರಗಳು ಹಾಯ್ದು ಹೋಗಬೇಕಾಗಿಲ್ಲ. ವಿಷಯ ಗ್ರಹಿಸಿ, ಗುರುವಿನ ಮಾರ್ಗದರ್ಶನ ಪಡೆದು ಸಾಧನೆಯಲ್ಲಿ ನಿರತರಾದರೆ, ಜ್ಞಾನ ಸಾಧ್ಯ. ಇದನ್ನು ಬಿಟ್ಟು ಗುಡ್ಡ ಸೇರಿ, ಒಂದೆರಡು ಕಾಲನ್ನೊ, ಕೈಯನ್ನೋ ಎತ್ತಿ ಹಿಡಿದು ತಪಸ್ಸು ಮಾಡಿದರೆ, ತತ್ತ್ವ ಅರಿಯುವುದೆಂತು?

೭೦೩

ಇಲ್ಲುನಾಲುವಿಡಿಚಿ ಯಿನುಪಕಚ್ಚಲುಗಟ್ಟ, ವಂಟಕಂಬು ನೀರು ವಾಂಛಲುಡಿಗಿ,
ಒಂಟನುನ್ನಯೆಂತ ನೊರುಗುನಾ ತತ್ತ್ವಂಬು, ವಿಶ್ವದಾಭಿರಾಮ ವಿನುರ ವೇಮ.

ಮನೆಯ ಮುಡದಿ ಬಿಟ್ಟು ಮತ್ತೆ ಕಚ್ಚೆ ಕಟ್ಟ,
ಅಡುಗೆ, ತಿಂಡಿ, ನೀರು ಆಶೆ ಹಿಂಗಿ,
ಒಂಟಿಯಾದೊಡೆ ಆಗ ಉಂಟಾದುದೆ ಮೋಕ್ಷ?
ವಿಶ್ವದಾಭಿರಾಮ ಕೇಳು ವೇಮ.

ಮೋಕ್ಷ ಪಡೆಯುವುದೆಂತು? ಚತುರಾಶ್ರಮವಾದಿಗಳು ನಡೆಯುವುದು ಹೀಗೆ. "ಓದುವುದಕ್ಕೆ, ಶಿಕ್ಷೆ ಪಡೆಯುವುದಕ್ಕೆ ದೇಹದಾರ್ಢ್ಯಹೊಂದಲಿಕ್ಕೆ ಬ್ರಹ್ಮಚರ್ಯಾಶ್ರಮ; ಎಲ್ಲ ರೀತಿಯ ಉತ್ತಮ ವ್ಯವಹಾರ ನೆರವೇರಿಸಲು ಗೃಹಸ್ಥಾಶ್ರಮ. ವಿಚಾರಜ್ಞಾನ, ಮತ್ತು ವಿಜ್ಞಾನಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ತಪಸ್ಸು ಮಾಡಲು ವಾನಪ್ರಸ್ಥಾಶ್ರಮ, ವೇದ ಶಾಸ್ತ್ರಗಳ ಪ್ರಚಾರ ಧರ್ಮ ಪೂರ್ಣ ವ್ಯವಹಾರ ಗ್ರಹಣ ದುಷ್ಟವ್ಯವಹಾರ ತ್ಯಾಗ ಮಾಡಲು ಸಂನ್ಯಾಸಾಶ್ರಮ. ಒಂದೊಂದು ಆಶ್ರಮ ಇಪ್ಪತ್ತೈದು ವರ್ಷ ಅವಧಿಯದು. ವಾನಪ್ರಸ್ಥ ಆಶ್ರಮದಲ್ಲಿ ಸೇರುವವನು, ಕೂದಲು ನೆರೆತು, ನಡು ಬಾಗಿ, ಗಲ್ಲ ಸುಕ್ಕು ಗಟ್ಟಿದ ಮೇಲೆ ಹೆಂಡತಿಯನ್ನು ಮಕ್ಕಳ ರಕ್ಷೆಯಲ್ಲಿಟ್ಟು ಇಲ್ಲವೆ, ಜೊತೆಗೆ ಕರೆದುಕೊಂಡು ಅಡವಿಗೆ ಹೋಗಿ, ಅಲ್ಲಿ ಶಾಕ, ಮೂಲ, ಫಲ, ಪುಷ್ಪ ಮತ್ತು ಕಂದಗಳನ್ನು ಸೇವಿಸಿ, ಅತಿಥಿಗಳಿಗೂ ಅದನ್ನೇ ಬಡಿಸಿ, ಇರುವುದು. ಈ ಕಾಲದಲ್ಲಿ ತಪಶ್ಚರ್ಯ ಮಾಡಬೇಕು! ಆ ಮೇಲೆ ಎಪ್ಪತ್ತೈದರ ಇಳಿವಯಸ್ಸಿನಲ್ಲಿ ಸನ್ಯಾಸ ಗ್ರಹಣದ ವಿಧಿ! ಹೆಂಡತಿಯನ್ನು ಕರೆತಂದಿದ್ದರೆ, ಮಕ್ಕಳಲ್ಲಿಗೆ ಕಳಿಸಬೇಕು. ಇಷ್ಟರಲ್ಲಿಯೇ ಅಡುಗೆ ತಿಂಡಿ ಆಸೆಯನ್ನೂ ಭೋಗದಾಸೆಯನ್ನೂ ಬಿಡಬೇಕಷ್ಟೆ! ಮುಂದೆ ಸರ್ವವನ್ನೂ ಬಿಟ್ಟು ಸನ್ಯಾಸ ಗ್ರಹಣ ಮಾಡಬೇಕು. ಸರ್ವಸಂಗ ತೊರೆಯಬೇಕು. ಏಕಾಕಿಯಾಗಬೇಕು. ಆಗ ಮೋಕ್ಷ." ಎನ್ನುತ್ತಾರೆ. ಇದು ಸಾಧ್ಯವೇ? "ನೂರು ವರುಷಕಾಲ ಆಯುಷ್ಯವುಂಟೇ? ಮನೆಯಿಂದ ದೂರ, ಮಡದಿಯಿಂದ ದೂರ ಸರಿದು, ಅದುವರೆಗೆ ಸವಿದ ಅಡುಗೆ ತಿಂಡಿ ಪೇಯಗಳನ್ನು ತೊರೆದು ಆಶೆಯನ್ನು ತುಳಿದು, ಏನೂ ಸಿಗದಂತೆ ಮಾಡಿಕೊಂಡು, 'ಅಭಾವ' ವೈರಾಗ್ಯ ತಂದುಕೊಂಡರೆ, ಮನಸ್ಸಿನ ಶುದ್ಧಿಯಾದೀತೆ? ಮನಸ್ಸು ಹಸನಾಗಿರಬೇಕು. ವಿಷಯ-ವಾಸನೆಗಳು ಹುಟ್ಟದಂತೆ ಇಂದ್ರಿಯ ನಿಗ್ರಹ ಮಾಡಬೇಕು. ಜಗತ್ತು ಬಿಟ್ಟು ಓಡಿಹೋಗುವ, ಅಂಜುಗುಳಿ ಮೋಕ್ಷ ಸಾಧಿಸನು. ಎದುರಿಸಿ ಜಯಿಸುವವನೇ ವಿಜಯಿ. ಮೋಕ್ಷ ಸಂಪಾದನೆ ಅವನಿಂದ ಮಾತ್ರ ಸಾಧ್ಯ.

೭೦೪

ಜೀವಲಿಂಗ ಪೂಜ ಜೇಸಿನವಾರಿಕಿ, ಶಿಲಲರೂಪನುಂದು ಜಿಂತಯುನ್ನೆ?
ಚೆಲಗಿ ಮಧುವು ಗ್ರೋಲ ಜೇದು ರುಚಿಂಚುನಾ? ವಿಶ್ವದಾಭಿರಾಮ ವಿನುರ ವೇಮ.

ಜೀವಲಿಂಗ ಪೂಜೆ ಜನರು ಮಾಡುತಿರಲು,
ಶಿಲೆಯ ರೂಪ ಕುರಿತು ಚಿಂತೆಯುಂಟೆ?
ಸಿಹಿ ಮಧು ಸೇವಿಸಲು, ಕಹಿಯು ರುಚಿಸುವುದೇ?
ವಿಶ್ವದಾಭಿರಾಮ ಕೇಳು ವೇಮ.

'ದೇಹೋ ದೇವಾಲಯಃ ಪ್ರೋಕ್ತಃ ಜೀವ ಏವಸದಾಶಿವಃ "ದೇಹವೇ ದೇವಾಲಯವೆನ್ನುತ್ತಾರೆ. ಅದರಲ್ಲಿರುವ ಜೀವವೇ ಸದಾಶಿವನು. ಜೀವವೇ ಶಿವ. ಜೀವನೇ ಶಿವದ ಗುರುತು; ಅಂದರೆ ಲಿಂಗ. (ಜೀವಲಿಂಗ.) ದೇಹದೊಳಗೆ ಹೃದಯಾಕಾಶದಲ್ಲಿ ಶಿವಲಿಂಗವುಂಟು; ಬ್ರಹ್ಮವುಂಟು. ಮನಸ್ಸು ಶುದ್ಧಗೊಳಿಸಿ ಹೃದಯಾಕಾಶದಲ್ಲಿರುವ ಬ್ರಹ್ಮವನ್ನೇ ಕುರಿತು ಧ್ಯಾನ ಮಾಡುತ್ತ, ಚಿತ್ತವೃತ್ತಿಗಳೆಲ್ಲವನ್ನೂ ಅದೇ ಸದ್ವಸ್ತುವಿನ ಬಗೆಗೆ ಹೊಂದಾಣಿಕೆಗೈದು, ಒಂದಾಗಿಸಿ, ಪೂಜೆ ಮಾಡಬೇಕು. ಬೇರೆ ವಿಚಾರಗಳೆಲ್ಲ ಪೂಜಿಯಾಗಬೇಕು. ಶೂನ್ಯವಾಗಬೇಕು. ಬಯಲಾಗಬೇಕು. ಆ ಶೂನ್ಯದಲ್ಲಿ ಯಾವುದು ಜ್ಯೋತಿಯಂತೆ ಹೊಳೆಯುತ್ತಿದೆಯೋ, ಅದೇ ಆತ್ಮಜ್ಯೋತಿ. ಆತ್ಮಜ್ಯೋತಿಯಲ್ಲಿ ಪರಂಜ್ಯೋತಿ ಹೊಳೆಯುವುದು. ಅದೇ ಪರಬ್ರಹ್ಮ. ಇಂಥ ಬ್ರಹ್ಮಸಾಕ್ಷಾತ್ಕಾರದ ಧ್ಯಾನಪೂಜೆಗಳನ್ನು ಜನರು ಆಚರಿಸುತ್ತಿದ್ದಾರೆ. ಋಷಿಮುನಿಗಳೂ ಇದೇ ಮಾರ್ಗದಿಂದ ದಿವ್ಯದರ್ಶನ ಪಡೆದರು. ಅದನ್ನೇ ಇತರರಿಗೆ ಉಪನಿಷತ್ತುಗಳಲ್ಲಿ ಬೋಧಿಸಿದರು.

ಹೀಗಿದ್ದರೂ, ಶಿಲೆಯ ರೂಪವನ್ನು ಕುರಿತು ಚಿಂತಿಸುವುದೇಕೆ? ನಮ್ಮ ಬಯಕೆಯಂತೆ ರೂಪಕೊಟ್ಟು, ಕಲ್ಲು ಕಟೆದು ನಿಲ್ಲಿಸುತ್ತೇವೆ. ಕಲ್ಲಿಗಿಂತ ಜೀವಿ ಸೂಕ್ಷ್ಮ; ಸೂಕ್ಷ್ಮವಾದ ರೂಪ ಬಿಟ್ಟು, ಸ್ಥೂಲದ ಹಿಂದೆ ಹೋಗುವುದೇಕೆ? ಮನಸ್ಸು ಸಹ ಸ್ಥೂಲವಾಗಲಿಕ್ಕಿಲ್ಲವೇ?

ಸಿಹಿಕರವಾದ ಜೇನುತುಪ್ಪ ಸವಿದ ನಾಲಗೆ ಕಹಿಯಾದುದನ್ನು ಬಯಸಬಹುದೇ? ಸ್ಥೂಲ ಶಿಲೆಯ ಪೂಜೆ ಕಹಿಯಾದುದು; ಸೂಕ್ಷ್ಮ ಆತ್ಮಪೂಜೆ ಮಧುವಿನಂತೆ ಸಿಹಿಯಾದುದು.

೭೦೫

ರಾತಿಪ್ರತಿಮದೆಚ್ಚಿ ರಾಜಸಂಜ್ಞನನುಂಚಿ, ಪೂಜ ಜೇಯು ನರುಡು ಬುದ್ಧಿಮಾಲಿ,
ಭಾವಮುಂದು ಬರಮು ಭಾವಿಂಪ ನೇರಡು, ವಿಶ್ವದಾಭಿರಾಮ ವಿನುರ ವೇಮ.

ಶಿಲೆ ಪ್ರತಿಮೆ ತಂದು ಸಮವು ರಾಜಗೆಂದು.
ಪೂಜೆಗೈವ ನರನು ಬುದ್ಧಿಗೇಡಿ,
ಭಾವದಲ್ಲಿ ಪರವ ಭಾವಿಸಿ ತಿಳಿಯನೇ?
ವಿಶ್ವದಾಭಿರಾಮ ಕೇಳು ವೇಮ

"ರಾಜಾ ಪ್ರತ್ಯಕ್ಷ ದೇವತಾ." ರಾಜನೇ ಪ್ರತ್ಯಕ್ಷ ದೇವರೆಂಬ ಭಾವನೆ ಬೆಳೆಸಿದ್ದರು. ಇಂಥ ರಾಜರಾಗಲಿ, ಸಮಾಜದ ಮುಖಂಡರಾಗಲಿ ಸತ್ತಾಗ, ಅವರ ವಿಗ್ರಹ

ಗಳನ್ನೋ ಲಿಂಗಗಳನ್ನೋ ಇಟ್ಟು ಗುಡಿ, ಚೈತ್ಯ, ಸ್ತೂಪಗಳನ್ನು ಕಟ್ಟುತ್ತಿದ್ದರು. ದೇವಾಲಯವು ಸಮಾಜದ ಮುಖಂಡನ ಇಲ್ಲವೆ ರಾಜನ ಮನೆಯೂ ಆಗಿತ್ತು. ಬುದ್ಧಾನಂತರ ಕ್ರಿಸ್ತಪೂರ್ವದ ಅವಧಿಯಲ್ಲಿ ಭಾರತವನ್ನಾಳಿದ " ಮೌರ್ಯರು ಹಿರಣ್ಯಾರ್ಥವಾಗಿ ದೇವತಾ ವಿಗ್ರಹಗಳನ್ನು ಮಾಡಿಸುತ್ತಿದ್ದರೆಂದೂ, ಇದು ಕೀಳಾದುದೆಂದೂ ಕೌಟಿಲ್ಯನ ಅರ್ಥಶಾಸ್ತ್ರ ಪತಂಜಲಿಯ ಮಹಾಭಾಷ್ಯಗಳಲ್ಲಿ ಹೇಳಲಾಗಿದೆ. ಹೀಗೆ ಮೌರ್ಯರು ಮೂರ್ಖ ಜನರನ್ನು ಮೋಸಗೊಳಿಸಿ, ರಾಜಕಾರ್ಯ ಸಾಧಿಸುತ್ತಿದ್ದರೆಂದೂ, ಅವೇ ಗ್ರಂಥಗಳು ಹೇಳುತ್ತಿವೆ.

ಇದನ್ನು ತಿಳಿದು ಸಹ, ಕಲ್ಲಿನ ಪ್ರತಿಮೆಯನ್ನು ತಂದು, ಅದು ರಾಜನಿಗೆ ಸಮನಾದುದೆಂದು ರಾಜಭಕ್ತಿಯುಳ್ಳ ಪ್ರಜೆಗಳು ಮೂರ್ತಿಪೂಜೆ ಮಾಡುವುದು ಮೂರ್ಖತನವು. ಪರಮಾತ್ಮನ ವಿಶ್ವರೂಪವನ್ನು ಮನಸ್ಸಿನಲ್ಲಿ ಭಾವಿಸಿ ತಿಳಿಯಲಾರರೇಕೆ ?
(ಹೋಲಿಸಿ ನೋಡಿರಿ

ವರಕವಿಗಳ ಮುಂದೆ ನರಕವಿಗಳ ವಿದ್ಯೆ ಮಾಡಬಾರದು | ಪ |
ಧಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು | ಅ | ಪ |
ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು ಬಹು |
ಕೋಪಿಗಳಿದ್ದಲ್ಲಿ ಅನುಭವ ಗೋಷ್ಠಿಯ ಆಡಬಾರದು ||
ಮುಂದೆ ಭಲಾ ಎಂದು ಹಿಂದೆ ನಿಂದಿಪರನ್ನು ಕೂಡಬಾರದು |
ನಮ್ಮ ತಂದೆ ಬಡದಾದಿಕೇಶವನ ಸ್ಮರಣೆಯ ಬಿಡಬಾರದು ||

---ಕನಕದಾಸರು)

೭೦೬

ವೇದವಿದ್ಯಲೆಲ್ಲ ವೇಶಲವಂಟವಿ, ಭ್ರಮಲಬೆಟ ತೇಟ ಪಡಗನೀವು.
ಗುಪ್ತವಿದ್ಯೆಯೊಕಟಿ ಕುಲಕಾಂತನಂಟದಿ, ವಿಶ್ವದಾಭಿರಾಮ ವಿನುರ ವೇಮ.

ವೇದ ವಿದ್ಯೆಯೆಲ್ಲ ವೇಶ್ಯೆಯಂತೆ ಇಹುದು.
ಭ್ರಮೆ ಹಿಡಿಸಿ ಬಯಲು ಪಡೆಯಗೊಡದು.
ಗುಪ್ತವಿದ್ಯೆಯೊಂದೆ ಕುಲಕಾಂತೆಯಂತಿದೆ.
ವಿಶ್ವದಾಭಿರಾಮ ಕೇಳು ವೇಮ.

ವೇದ ವಿದ್ಯೆ ವೇಶ್ಯೆಯಂತಿದೆ. ನಿಚ್ಚಳವಾದ ಮಾರ್ಗ ತೋರದೆ ಯಜ್ಞಕರ್ಮಾದಿಗಳ ಬೋಧೆಯಿಂದ ಭ್ರಮೆ ಹಿಡಿಸುತ್ತದೆ. ಇದರಿಂದ ಮನಸ್ಸು ನಿಗ್ರಹಿಸಲು ಆತಂಕವಾಗಿ ಹೃದಯದಲ್ಲಿರುವ ಆಕಾಶದತ್ತ ಮನಸ್ಸು ತಿರುಗಿಸಲು ಸಾಧ್ಯವೆನಿಸುವುದಿಲ್ಲ.

ಆದರೆ ಗುಪ್ತ ವಿದ್ಯೆ ಎನ್ನಿಸುವ ಉಪನಿಷತ್ ವಿದ್ಯೆ ಒಳ್ಳೆಯ ಸಾಧ್ವಿ ಸ್ತ್ರೀಯಂತೆ ನಿತ್ಯಾನಂದದಾಯಕವಾಗಿದೆ.

(ವೇಶ್ಯೆಯಲ್ಲಿ ಸ್ತ್ರೀ ಸಹಜ ಗುಣವಿದ್ದರೂ, ಅವಳದು ಬಾಹ್ಯ ಪ್ರೇಮ. ಹಣದಾಸೆಯಿಂದ ಸನಿಹಕ್ಕೆ ಬಂದವಳಾಕೆ. ಭ್ರಮೆ ಹಿಡಿಸುವ ಹಾವ-ಭಾವದವಳು.

ವೇದವು ಪ್ರಪಂಚದ ಅತಿಪ್ರಾಚೀನ ಸಾಹಿತ್ಯ. ಇವು ಮಂತ್ರಗಳ ಸಂಗ್ರಹ. ಮಂತ್ರಗಳಲ್ಲಿ ಆರ್ಯರ ಭಾವನೆಗಳನ್ನು ಕಾಣಬಹುದು: ಗುಡುಗಿನಿಂದ ಘರ್ಜಿಸುವ ಇಂದ್ರ ಮಳೆಯನ್ನು ತಡೆದ ಸರ್ಪವನ್ನು ತನ್ನ ತನ್ನ ವಜ್ರಾಯುಧದಿಂದ ಹೊಡೆಯುವನು. ಆಗ ಮಳೆ ಸುರಿಯುವುದು. ಆರ್ಯರಿಗೆ ತೃಪ್ತಿಯಾಗಿ, ಅವರು ಇಂದ್ರನಿಗೆ ಹವಿಸ್ಸು ಅರ್ಪಿಸಿ ಪೂಜಿಸುತ್ತಿದ್ದರು. ಒಂದು ಯಜ್ಞಮಾಡಿ, ಅದಕ್ಕೆ ಹಲವು ಪ್ರಾಣಿಗಳನ್ನು ಬಲಿ ಕೊಟ್ಟು, ಇದರ ಮಾಂಸವನ್ನು ಅದರಲ್ಲಿ ಸುಟ್ಟು, ಇಂದ್ರನಿಗೆ ಅರ್ಪಿಸುವರು. ಸೋಮ್ಯ ವೆಂಬ ಬಳ್ಳಿಯ ಮಾದಕ ರಸ ಹಿಂಡಿ ತೆಗೆದು ಇಂದ್ರನಿಗೆ ಕೊಟ್ಟು ತಾವೂ ಸೇವಿಸುತ್ತಿದ್ದರು. ಹೆಚ್ಚು ಸೇವಿಸಿ, ಇಂದ್ರನಿಗೂ ಹೆಚ್ಚು ಕುಡಿಸುತ್ತಿದ್ದರು. ಇಂದ್ರ ಒಮ್ಮೆ ಮೇರೆ ಮೀರಿ ಕುಡಿದು, ಎಚ್ಚರದಪ್ಪಿ ಬಾಯಿಗೆ ಬಂದಂತೆ ಮಾತನಾಡಿದನು, ಎಂಬುದನ್ನೂ ವೇದ ಮಂತ್ರಗಳಲ್ಲಿ ಕಾಣಬಹುದು.

ಇಂಥ ಬಾಹ್ಯಾಚಾರ ವ್ಯಾಮೋಹವು 'ಸತ್ಯ' ಕ್ಕೂ ತಮಗೂ ಮಧ್ಯೆ ತೆರೆಯನ್ನು ತಂದೊಡ್ಡಿದೆಯೆಂದು ಆರ್ಯ ಧೀಮಂತರು ಅನಂತರ ತಿಳಿದರು. ಅವರ ವಿಚಾರ ಮಂಥನದಿಂದ ಮುಂಡಕೋಪನಿಷತ್ತಿನಲ್ಲಿ ಅಭಿಪ್ರಾಯ ಮೂಡಿ ಬಂದಿದೆ : 'ತಿಳಿಯಬೇಕಾದ ಎರಡು ವಿದ್ಯೆಗಳಿವೆ. ಅವುಗಳಲ್ಲಿ ಒಂದು ಮೇಲು ವಿದ್ಯೆ; ಇನ್ನೊಂದು ಕೀಳು ವಿದ್ಯೆ, ಋಕ್ ಯಜುಸ್, ಸಾಮ ಮತ್ತು ಅಥರ್ವ ವೇದಗಳು, ರಾಗಾಲಾಪ, ವ್ಯಾಕರಣ, ನಿರುಕ್ತ ಛಂದಸ್ಸು ಜ್ಯೋತಿಷ ಇತ್ಯಾದಿಗಳು ಕೀಳು ವಿದ್ಯೆ; ಅಪರಾ ವಿದ್ಯೆ. ಆದರೆ 'ಅಕ್ಷರ, (ಕ್ಷರವಾದ, ಕ್ಷೀಣಿಸುವ, ಪ್ರಕೃತಿಗೆ ಸಾಕ್ಷಿಯಾಗಿರುವುದೇ ಅಕ್ಷರ) ದತ್ತ ಸಾಗುವ ವಿದ್ಯೆಯೇ ಮೇಲು ವಿದ್ಯೆಯು; ಪರಾ ವಿದ್ಯೆಯು.)

೭೦೭

ವ್ರತಮುಲೆನ್ನಿಯ್ಯೆನ ವಟ್ಟಚಿಕ್ಕುಲೆಕಾನಿ, ಆತ್ಮಚಿಕ್ಕುಗಾನ ನಲವಿಕಾವು.
ಆತ್ಮಚಿಕ್ಕುಬಾಪು ನತಡಪೋ ಘನಯೋಗಿ, ವಿಶ್ವದಾಭಿರಾಮ ವಿನುರ ವೇಮ.

ವ್ರತಗಳೆಷ್ಟೊವಿನೊ ? ವ್ಯರ್ಥ. ಸಿಗುವುದಿರಲಿ,
ಆತ್ಮಸಿಕ್ಕು ನೋಡೆ, ಅಸಾಧ್ಯವದು.
ಆತ್ಮಸಿಕ್ಕು ಬಿಡಲು, ಅವನೇ ಘನಯೋಗಿ,
ವಿಶ್ವದಾಭಿರಾಮ ಕೇಳು ವೇಮ.

ಚಂದ್ರಮಾನದಿಂದ ಹನ್ನೊಂದನೆಯ ದಿನ [ಏಕಾದಶಿ] ಉಪವಾಸ ಮಾಡುವುದು; ಪೂರ್ಣ ಚಂದ್ರನಿರುವ ದಿನ ಪೂರ್ಣಿಮೆ ಹಬ್ಬ ಆಚರಿಸುವುದು, ಯಜ್ಞ-ಹೋಮದಂಥ ಬಾಹ್ಯ ವ್ರತಗಳನ್ನು ಆಚರಿಸುವುದು, ಮಣಿ ಎಣಿಸುವುದು, ಇತ್ಯಾದಿ ವ್ರತಗಳೆಷ್ಟೋ ಉಂಟು. ಅವೆಲ್ಲ ವ್ಯರ್ಥ. ಇವುಗಳಿಂದ ಆತ್ಮ ಜ್ಞಾನವಾಗುವ ಮಾತು ದೂರುಳಿಯಿತು!

ಆತ್ಮ ಸಿಕ್ಕಿತ್ತೆನ್ನುವ ಮಟ್ಟಕ್ಕೆ ಬಂದಾಗ ಸಹ, ಅದನ್ನು ಕಂಡು ಅರಿಯುವುದು ಕಷ್ಟಸಾಧ್ಯ. ಸವಿಕಲ್ಪ, ಸಾಲೋಕ್ಯ ಸಾಮೀಪ್ಯ, ಸಾಯುಜ್ಯ ಇತ್ಯಾದಿ ಸಮಾಧಿ ಸ್ಥಿತಿಗಳನ್ನು ದಾಟಿದ ನಂತರ ನಿರ್ವಿಕಲ್ಪ ಸಮಾಧಿಯುಂಟು. ಇದು ಆತ್ಮ ಗೂಡುವ ಸ್ಥಿತಿ. ಒಮ್ಮೆ ಆತ್ಮ ಸಿಕ್ಕು ಬಿಟ್ಟರೆ, ತೀರಿತು! ಅವನೇ ಘನಯೋಗಿ ಆಗುವನು.

(ಹೋಲಿಸಿ ನೋಡಿರಿ :—

"ಸೌಮೇ ಭೌಮೇ ವ್ಯತೀಪಾತೇ ಸಂಕ್ರಾಂತಿ ಶಿವರಾತ್ರಯೋಃ |
ಏಕಭುಕ್ತೋಪವಾಸೇನ ನರಕೇ ಕಾಲಮಕ್ಷಯಮ್ ||

ಎಂದುದಾಗಿ, ಇದು ಕಾರಣ, ದಿನವಾರಂಗಳು ಶ್ರೇಷ್ಠವೆಂದು ಏಕಭುಕ್ತೋಪವಾಸಂಗಳನ್ನು (ಒಂದು ಹೊತ್ತು ಊಟ ಮತ್ತು ಉಪವಾಸ) ಮಾಡುವುದರಿಂದ ಎಂದೆಂದಿಗೂ ನರಕವೇ ಗತಿಯಾಗುವುದು. "
— ಬಸವಣ್ಣನವರು.

"ನ ಮುಕ್ತಿರ್ತಪನಾದ್ಧೋಮಾದುಪವಾಸಃ ಷಟೈರಪಿ |
ಬ್ರಹ್ಮೈವಾಹಮಿತಿ ಜ್ಞಾತ್ವಾ ಮುಕ್ತೋ ಭವತಿ, ದೇಹಭೃತ್||. "
ಇಂಥ ತಪ, ಹೋಮ, ಉಪವಾಸ ಇತ್ಯಾದಿಗಳಿಷ್ಟಾದರೂ ಮುಕ್ತಿ ಇಲ್ಲ. ದೇಹ ಭಾವದವನು, ಬ್ರಹ್ಮವೇ ನಾನು ಎಂಬುದನ್ನು ಅರಿತೊಡೆ, ಆಗ ಮಾತ್ರ ಮುಕ್ತನಾಗುವನು
— ತಂತ್ರ.)

೭೦೮

ನಲ್ಲಬೋದಿತಲಲು ದೆಲ್ಲನಿಗೊಂಗಳ್ಳು ಒಡಲಬೂದಿಪೂತ ಲೊಂಟನುನ್ನ,
ಇಟ್ಟವೇಷಮುಲಿಲ ಬೊಟ್ಟಕೋಸಮೆನುಮೀ, ವಿಶ್ವದಾಭಿರಾಮ ವಿನುರ ವೇಮ.

ಬೊಕ್ಕು ಬೋಳು ತಲೆಯು ಬಿಳಿಯುಣ್ಣೆಯ ಬಟ್ಟೆ
ಬೂದಿ ಬಳಿದ ದೇಹ, ಬೇಸರಷ್ಟೆ.
ಇಷ್ಟು ವೇಷವೆಲ್ಲ ಹೊಟ್ಟೆಗಾಗಿಯಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಕೇವಲ ತಲೆ ಬೋಳಿಸುವದರಿಂದ ಮೋಕ್ಷವಾಗುವಂತಿದ್ದರೆ, ಮೈಕೂದಲು ತೆಗೆಸುವ ಕುರಿ–ಟಗರುಗಳಿಗೂ ಮೋಕ್ಷವಾಗಬಹುದಿತ್ತು. ಕಪ್ಪು ಶೂದ್ರರೆ ಬಣ್ಣ, ಬಿಳಿದು ಬ್ರಾಹ್ಮಣರ ಬಣ್ಣ, ಬಿಳಿಯ ಉಣ್ಣೆಯ ಬಟ್ಟೆ ಉಟ್ಟರೆ, ಮೊಕ್ಷವಾಗುವದೆಂದಾದರೆ, ಬಿಳಿಯ ಕರಡಿಗೆ ಮೋಕ್ಷವಾಗುತ್ತಿತ್ತು. ಬಿಳಿಯ ನಾಯಿಗೆ ಮೋಕ್ಷವಾಗುತ್ತಿತ್ತು. ದೇಹಕ್ಕೆ ಬೂದಿ ಬಳೆದರೆ, ಮೊಕ್ಷವಾಗುವಂತಿದ್ದರೆ, ಬೂದಿಯಲ್ಲಿ ನಿತ್ಯ ಹೊರಳಾಡುವ ಕತ್ತೆಗೆ ಮೋಕ್ಷವಾಗುತ್ತಿತ್ತು. ಇಲ್ಲ. ಬಾಹ್ಯ ವೇಷ ಆಚಾರಗಳು ನಿಷ್ಪ್ರಯೋಜಕ. ಮನಸ್ಸಿನಲ್ಲಿ ಅನ್ಯ ಯೋಚನೆಗಳು ಮಾಯವಾದರೆ, ತಲೆ ಬೋಳಾದಂತೆ. ಕೇವಲ ಶಾಂತ, ವಿವೇಕ, ವೈರಾಗ್ಯದಿಂದ ಇದ್ದರೆ, ಶುದ್ಧ ಸಾತ್ವಿಕ ಜೀವನ ಕಳೆದಂತೆ. ಬಿಳಿಯ ಬಟ್ಟೆ ಧರಿಸಿದಂತೆ. ಜ್ಞಾನದಗ್ನಿಯಲ್ಲಿ

ವಿಷಯಾಸಕ್ತಿ, ರಾಗಗಳನ್ನು ದಹಿಸಿ ಬೂದಿಯಾಗಿಸಿದರೆ, ಬೂದಿ ಬಳಿದುಕೊಂಡಂತೆ. ಇಲ್ಲದೆ ಹೋದರೆ, ವೇಷಗಳೆಲ್ಲ ಕೂಳಿಗಾಗಿ ಹಾಕಿದ, ಸೋಗಿನ ಪೋಷಾಕಿನಂತೆ ಆಗುತ್ತವೆ.

(ಹೋಲಿಸಿ ನೋಡಿರಿ :—

"ಜಟಿಲೋ ಮುಂಡೀ ಲುಂಚಿತ ಕೇಶಃ ಕಾಷಾಯಾಂಬರ ಬಹುಕೃತ ವೇಷಃ|
ಪಶ್ಯನ್ನಪಿ ಚ ನ ಪಶ್ಯತಿ ಮೂಢೋ ಉದರ ನಿಮಿತ್ತೋ ಬಹುಕೃತ ವೇಷಃ||
ಭಜ ಗೋವಿಂದಂ ಭಜ ಗೋವಿಂದಂ ಭಜ ಗೋವಿಂದಂ ಮೂಢಮತೇ|
ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನ ಹಿ ನ ಹಿ ರಕ್ಷತಿ ಡುಕೃಂಕರಣೇ||"
ಶಂಕರಾಚಾರ್ಯ–ಚರ್ಪಟ ಪಂಜರಿಕಾಸ್ತೋತ್ರಮ್–ಳ.

ಹಲವರು ಜಡೆಗಟ್ಟುತ್ತಾರೆ. ಹಲವರು ತಲೆ ಬೋಳಿಸುತ್ತಾರೆ. ಇನ್ನು ಹಲವರು ಎಲ್ಲ ಕೂದಲುಗಳನ್ನು ಕಿತ್ತುಹಾಕುತ್ತಾರೆ. ಕ್ಯಾವಿ ವಸ್ತ್ರವನ್ನು ಹಲವರು ತೊಟ್ಟರೆ, ಬೇರೆ ಬಣ್ಣದ ವಸ್ತ್ರಗಳನ್ನು ಉಳಿದವರು ತೊಡುವರು. ಸತ್ಯವು ಎದುರಿಗಿದ್ದರೂ ಮೂಢರು ನೋಡುವದಿಲ್ಲ. ವೇಷ-ವೈವಿಧ್ಯವೆಲ್ಲ ಕೇವಲ ಹೊಟ್ಟೆ ಹೊರೆಯುವ ಉಪಾಯವಷ್ಟೇ. ಎಲೈ ಮೂಢಮತಿಯೇ, ಗೋವಿಂದನನ್ನು ಭಜಿಸು. ಭಜಿಸು ಗೋವಿಂದನ. ಮರಣ ಸನ್ನಿಹಿತವಾದಾಗ, ವ್ಯಾಕರಣ ಛಂದಸ್ಸುಗಳ ನಿಯಮ ಪ್ರಯೋಜನವೀಯದು.)

೭೦೯

ಪುಸ್ತಕಮುಲು ಜಡಲು ಬುಲಿತೋಲು ಬಿತ್ತಂಬು, ಗಕ್ಷಪಾಲಲು ಬದಿಲಕ್ಷ್ಮ ಲೈನ,
ಮೋತಚೇಟಕಾನಿ ಮೋಕ್ಷಂಬು ಲೇದಯಾ, ವಿಶ್ವದಾಭಿರಾಮ ವಿನುರ ವೇಮ.

ಪುಸ್ತಕಗಳು, ಜಡೆಯು, ಹುಲಿಯ ತೊಗಲು, ಬಿತ್ತ,
ಜೋಳಿಗೆಗಳು, ಹತ್ತು ಲಕ್ಷವಿರಲಿ;
ಹೊರಲು ಭಾರವಷ್ಟೆ ಹೊಂದಲಾರ ಮೋಕ್ಷ.
ವಿಶ್ವದಾಭಿರಾಮ ಕೇಳು ವೇಮ.

ಸಂನ್ಯಾಸಿ ಯಾರು? ಸಂನ್ಯಾಸವೆಂದರೇನು? ಸಂನ್ಯಾಸವೆಂದರೆ, ತನ್ನನ್ನು ಸಂಪೂರ್ಣ ಪರಮಾತ್ಮನಿಗೊಪ್ಪಿಸುವುದು. ಸಂನ್ಯಾಸಿಯಾದವನಿಗೆ ಹಿಂದಿನ ರಕ್ತ ಸಂಬಂಧಗಳು ಬಾಧಿಸವು. ಆಸ್ತಿ-ಪಾಸ್ತಿಗಳ ಸಂಬಂಧ ಹತ್ತದು. ಅವನ ಪ್ರತಿಜ್ಞೆ ಅಷ್ಟು ಘೋರವಾದುದು. ಅಂಥ ಧೀರ ಮನಸ್ಸು ಪಡೆದವನು ಮಾತ್ರ ಸಂನ್ಯಾಸ ಸ್ವೀಕರಿಸಬೇಕು. ಸಂನ್ಯಾಸ ಸ್ವೀಕರಿಸಿದೆನೆಂದು ವೇಷ ಬದಲಿಸಿದರೆ ಮನಸ್ಸು, ಬದಲಾಗುವುದಿಲ್ಲ. ಆಗ ಅದು ವೇಷ ಭೂಷಣಗಳ ಸೋಗು ಆಗುತ್ತದೆ.

ಸಂನ್ಯಾಸಿಯಾಗುವವನು ತತ್ತ್ವವನ್ನು ಅರಗಿಸಿಕೊಂಡವನು. ತತ್ತ್ವ ತಿಳಿಯದೆ ಧೀರ ಮನಸ್ಸು ಬಂದ ಮೇಲೆ, ಪುಸ್ತಕಗಳ ಹೊರೆ ಹೊತ್ತು ತಿರುಗಬೇಕಾಗಿಲ್ಲ. ಹುಲಿಯ, ತೊಗಲನ್ನು ಧೀರ ಮನಸ್ಸಿನ ಇನ್ನೊಂದು ಸಂಕೇತವಾಗಿ ಇಟ್ಟುಕೊಳ್ಳುತ್ತಾರೆ. ಸಂನ್ಯಾಸಿ

ಕೈಯಲ್ಲಿ ದಂಡ ಧರಿಸುತ್ತಾನೆ, ದಂಡಧಾರಿಗುತ್ತಾನೆ. ಅಡವಿಯಲ್ಲಿ ಮೃಗಗಳನ್ನು ಹೆದರಿಸಲು ಉಪಯೋಗವಾಗುವಂತಿದ್ದರೆ, ಆ ಮಾತು ಬೇರೆ. ದಂಡ ನೇರವಾಗಿರುವಂತೆ ಅದನ್ನು ಹಿಡಿದವನ ಮನಸ್ಸು ನೇರವಾಗಿ ಉಂಟು ಎನ್ನುತ್ತಾರೆ. ಕಾಮಕ್ರೋಧಾದಿಗಳನ್ನು ಓಡಿಸುವುದರ ಸಂಕೇತವೇ ದಂಡ ಎನ್ನುತ್ತಾರೆ. ಇದರೊಂದಿಗೆ ಜೋಳಿಗೆ ಉಂಟು. ತಾನು ದೊಡ್ಡವ ಎಂಬ ಭಾವ ಹಿಂಗಲು ಭಿಕ್ಷೆ ಬೇಡುತ್ತಾರೆ. ಜೋಳಿಗೆಯು ಸಂನ್ಯಾಸಿಯ ಪೋಷಾಕಿನ ಒಂದು ಅಂಗವೇ ಆಗಿದೆ. ಮನಸ್ಸು ದೃಢವಾಗಿದ್ದರೆ, ಇವೆಲ್ಲ ಹೊರಲಿಕ್ಕೆ ಭಾರವಾದ ವಸ್ತುಗಳಷ್ಟೇ.

"ಎಲವೋ ಬುದ್ಧಿಹೀನನೇ, ನಿನ್ನ ಜಡೆಗಟ್ಟಿದ ಕೂದಲಿನಿಂದೇನು? ಚಿಗರೆಯ ಚರ್ಮದ ಉಡುಪಿನಿಂದೇನು? ನಿನ್ನೊಳಗೆ ರಾಗ-ದ್ವೇಷ ತುಂಬಿದೆ. ಬಾಹ್ಯದಲ್ಲಿ ಮಾತ್ರ ನೀನು ಶೌಚ ಆಚರಿಸುತ್ತೀಯಷ್ಟೇ!

ಗೌತಮಬುದ್ಧ—ಧಮ್ಮಪಾದ—೩೯೪]

೭೧೦

ಆಸನಮುಲಬನ್ನಿ ಯಂಗಂಬು ಬಿಗಿಯಿಂಚಿ, ಒಡಲುವಿಹಚುಕೊನೆಡು ಯೋಗ ಮೆಟ್ಟ್ಲ,
ಜೆಟ್ಟಿ ಸಾಮುಕನ್ನ ಜಿಂತಾಕು ತಕ್ಕುವ, ವಿಶ್ವದಾಭಿರಾಮ ವಿನುರ ವೇಮ.

ಆಸನಾದಿಯಿಂದ ಅಂಗಗಳನು ಬಿಗಿದು
ಒಡಲು ಹೊರೆಯುವವನ ಯೋಗವೆಲ್ಲ.
ಜಟ್ಟಿ ಸಾಮಿಗಿಂತ ಜಿನುಗು ಕಡಿಮೆಯಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಅಷ್ಟಾಂಗ ಯೋಗದಲ್ಲಿ, ಯೆಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ, ಇವು ಅಷ್ಟ ಅಂಗಗಳು. ಇಲ್ಲಿ ಆಸನವೆಂದರೆ, ದೀರ್ಘಕಾಲ ಕುಳಿತುಕೊಳ್ಳಲು ಸಾಧ್ಯವಾಗುವ ದೇಹವನ್ನಿರಿಸುವಿಕೆಯಷ್ಟೇ. ಎದೆ, ಕತ್ತು ಮತ್ತು ತಲೆ ಈ ಮೂರನ್ನೂ ಒಂದೇ ಸಮನಾಗಿ ಬೆನ್ನೆಲುಬಿಗೆ ಯಾವ ಅಡಚಣೆಯೂ ಇಲ್ಲದೆ ಇಡುವುದು. ನಮ್ಮ ದೇಹದಲ್ಲಿ ಬಹು ಮುಖ್ಯವಾದ ಕಾರ್ಯ ನಡೆಯುವುದು ಬೆನ್ನೆಲುಬಿನ ಮೂಲಕ. ಬೆನ್ನೆಲುಬು ನೇರವಾಗಿದ್ದರೆ, ಸುಲಭವಾದ ಮತ್ತು ನೈಸರ್ಗಿಕ ಆಸನವಾಗುವುದು. ರಾಜಯೋಗದ ಈ ಭಾಗ ಹಠಯೋಗಕ್ಕೆ ಹೋಲುವಂತಿದೆ. ಆದರೆ ಹಠಯೋಗ ಶಾರೀರಿಕ ಅಭ್ಯಾಸವಷ್ಟೇ. ದೇಹವನ್ನು ದೃಢವಾಗಿ ಮಾಡುವುದೇ ಅದರ ಗುರಿ.

ಆದರೆ ಕೆಲವರು ಹಠಯೋಗದ ವಿವಿಧ ಆಸನಗಳನ್ನು ಕಲಿತು ದೇಹದ ಆಂತರಿಕ ನಾಡಿಕೇಂದ್ರಗಳ ಮೇಲೆ ನಿಯಂತ್ರಣ ಪಡೆಯುವರು. ಇಂಥವರು ಅಲ್ಲಿ ಇಲ್ಲಿ ಅಲೆದು, ಆಸನ ಪ್ರದರ್ಶಿಸುವರು. ದೇಹಶಕ್ತಿಯನ್ನು ಪ್ರದರ್ಶಿಸುವರು. ಇಂಥ ಯೋಗಸಾಧನೆಯು ಗರಡಿಯ ಮನೆಯ ಜಟ್ಟಿಯ ಸಾಮಿಗಿಂತ ಎಷ್ಟೂ ಕಡಿಮೆಯಲ್ಲ. ಅಲ್ಲಿ ದೈವಿಕವಾದುದರ ಗೂಡವೆಯೇ ಇರುವದಿಲ್ಲ.

ಹೋಲಿಸಿ ನೋಡಿರಿ :—

"ತನುವ ದಂಡಿಸಬೇಡ; ಮನವ ನಿಲ್ಲಿಸಬೇಡ;
ಧನವ ನೀಗಿರಬೇಡ; ಮನೆ ಮಾರು ತೊರೆದು,
ವನವಾಸ ಬೇಡ, ನಿನಗಿನಿತು ತತ್ತ್ವಜ್ಞಾನ ಸಂ.
ಜನಿಸಲಘವೆಲ್ಲವನು ಕೆಡಿಸುವದರಿಂದೆ."

- ಶ್ರೀ ನಿಜಗುಣಯೋಗಿ.

೭೧೧

ಕಡುಪು ಬೋರಗಿಂಚಿ ಕನ್ನುಲು ಮುಕ ಳಿಂಚಿ, ಬಿರ್ರಬಿಗಿಸಿಯುನ್ನ ಬೀದಯೋಗಿ,
ಯಮುನಿಬಾರಿಗೊರ್ರೆ ಯತಡೇವಿ ಚೇಯುನು ? ವಿಶ್ವದಾಭಿರಾಮ ವಿನುರ ವೇಮ.

ಒಡಲಿನೊಳಗೆ ಎಳೆದು ಒಡನೆ ಕಣ್ಣು ಮುಚ್ಚಿ,
ಬಿರ್ರನೆ ಬಿಗಿದಿರುವ ಭಂಡ ಯೋಗಿ.
ಯಮುನ ಸಾಲಿನ ಕುರಿ ಏನು ಮಾಡುವನವ ?
ವಿಶ್ವದಾಭಿರಾಮ ಕೇಳು ವೇಮ.

ಪ್ರಾಣಾಯಾಮ ಎಂದರೆ ಉಸಿರಾಟದ ನಿಯಂತ್ರಣ, ಎಂದು ಸಾಮಾನ್ಯ ಭಾವನೆ. ಆದರೆ ಅದು ಸರಿಯಲ್ಲ. ಉಸಿರಾಟಕ್ಕೂ ಸ್ವಲ್ಪ ಸಂಬಂಧವುಂಟು. ನಿಜವಾದ ಪ್ರಾಣಾಯಾಮಕ್ಕೆ ಪ್ರವೇಶಿಸಬೇಕಾದರೆ, ಉಸಿರಾಡುವುದು ಅನೇಕ ಸಾಧನೆಗಳಲ್ಲೊಂದು, ಎನ್ನಿಸುವುದಷ್ಟೇ. ಪ್ರಾಣಾಯಮವೆಂದರೆ ಪ್ರಾಣಗಳ ನಿಗ್ರಹ. ಯಾವ ಎರಡು ವಸ್ತುಗಳ ಸಂಯೋಗದಿಂದ ಈ ಪ್ರಪಂಚವೆಲ್ಲವೂ ಆಗಿದೆಯೋ, ಅದರಲ್ಲಿ ಒಂದು ಆಕಾಶ; ಇನ್ನೊಂದು ಪ್ರಾಣ. ಪ್ರಾಣ ಎಂದರೆ ಚಾಲಕ ಶಕ್ತಿ. ನಮ್ಮ ದೇಹದ ಚಲನೆಯೆಲ್ಲವೂ ಯಾವುದನ್ನು ಆಧರಿಸಿದೆಯೋ ಅದೇ ಪ್ರಾಣ. "ಮುಖ್ಯ ಪ್ರಾಣನು ರೋಷದಿಂದ ಮೇಲಕ್ಕೆದ್ದಂತೆ ಮಾಡಿದನು; ಅವನು ಮೇಲಕ್ಕೆದ್ದ ಕೂಡಲೇ ಇತರರೆಲ್ಲರೂ (ಆಕಾಶ, ವಾಯು, ಅಗ್ನಿ, ನೀರು ಪೃಥಿವಿ ಮತ್ತು ವಾಕ್, ಮನಸ್ಸು, ಕಣ್ಣು, ಕಿವಿ) ಎದ್ದರು. ಮತ್ತು ಅವನು ನಿಲ್ಲಲು ಎಲ್ಲರೂ ನಿಂತರು. ತಮ್ಮ ರಾಜನು ಮೇಲಕ್ಕೆದ್ದಾಗ, ಎಲ್ಲ ಜೇನು ಹುಳುಗಳು ಮೇಲಕ್ಕೇಳುವಂತೆ. ಮತ್ತು ಅವನು ನಿಂತಾಗ ಎಲ್ಲವೂ ನಿಲ್ಲುವಂತೆ, ವಾಕ್ಕು, ಮನಸ್ಸು ಕಣ್ಣು ಮತ್ತು ಕಿವಿ ಇವರು ಪ್ರೀತರಾಗಿ ಪ್ರಾಣನನ್ನು ಸ್ತುತಿಸಿದರು." [ಪ್ರಶ್ನ ಉ. ೨—೪] ಈ ಪ್ರಾಣವೇ ಸೂರ್ಯ ಚಂದ್ರ ಇತ್ಯಾದಿ. ಪ್ರಾಣದ ಮೇಲೆ ನಿಗ್ರಹ ಸ್ಥಾಪಿಸುವುದೇ ಪ್ರಾಣಾಯಾಮ. ಆಗ ಯೋಗಿಯ ಸುಷುಮ್ನಾ ಕಾಲುವೆ ತೆರೆಯುವುದು. ಹೀಗಾದಾಗ ಯೋಗಿ ಇಂದ್ರಿಯಗಳ ಸಹಾಯವಿಲ್ಲದೆ ಸಾಗಬಲ್ಲ.

ಪ್ರಾರಂಭಿಕ ಹಿತವೆಂದರೆ ಶ್ವಾಸಕೋಶಗಳ ಚಲನೆಯ ನಿಗ್ರಹ. ಶ್ವಾಸೋಚ್ಛ್ವಾಸಗಳನ್ನು ವ್ಯವಸ್ಥೆಗೊಳಿಸುವ ನರಗಳ ಕೇಂದ್ರಕ್ಕೆ ಉಳಿದ ನರಗಳ ಮೇಲೆ ಸ್ವಲ್ಪ ಅಧಿಕಾರವುಂಟು. ಆದಕಾರಣ ನಿಯಮಿತ ಉಸಿರಾಟ ಆವಶ್ಯಕ. ಉಸಿರಾಟವು ಪೂರಕ [ಎಳೆಯುವುದು], ಕುಂಭಕ (ನಿಲ್ಲಿಸುವುದು) ರೇಚಕ (ಬಿಡುವುದು) ಎಂಬ ನಿಯಮದಂತೆ ನಡೆ

ಯಬೇಕು. ಆದರೆ ಹಲವು ಜನರು ಪ್ರಾರಂಭಿಕ ಅವಸ್ಥೆಯಲ್ಲಿ ಕೆಲ ಆಂತರಿಕ ಶಕ್ತಿ ಪಡೆಯುತ್ತಾರೆ. ಉಸಿರು ಹಿಡಿಯುವಲ್ಲಿ ಸಮರ್ಥರಾಗುತ್ತಾರೆ. ಒಡಲಿನೊಳಗೆ ಉಸಿರೆಳೆದು, ಕಣ್ಣು ಮುಚ್ಚಿಕೊಂಡು, ನೀರಿನ ಮೇಲೆ ಕೂಡುವುದು, ಬೆಂಕಿಯ ಮೇಲೆ ಆಡ್ಡಾಡುವುದು, ಇತ್ಯಾದಿ ಪ್ರದರ್ಶನ ಮಾಡುವವನು ಭಂಡ ಯೋಗಿ. ದೇಹದ ಮೇಲೆ ನಿಯಂತ್ರಣ ಹೊಂದಿರುವ ಅವನ ಪ್ರಭುತ್ವ ಎಷ್ಟರದು? ಯಮನ ಪಾಲಿಗೆ, ಕುರಿಯಂತೆ ಬಲಿಯಾಗುವವನಲ್ಲವೇ?

೭೧೨

ಇಹಮುವಿಡಿಚಿ ಫಲಮು ಲಿಂಪುಗಲವನಿ, ಮಹಿನಿ ಬಲ್ಕುವಾರಿ ಮತಮುಕಲ್ಲ
ಇಹಮು ಲೋನ ಬರಮು ನೆನಗುಟಗಾನರು ವಿಶ್ವದಾಭಿರಾಮ ವಿನುರ ವೇಮ.

ಇಹವ ತೊರೆದು ಫಲವು ಇಹುದು ಎನ್ನುವವರು,
ಮಹಿಯೊಳು ಪೇಳುತಿಹ, ಮತವಯೋಗ್ಯ;
ಇಹದಲ್ಲಿಯೆ ಪರವು ಇಹುದೆಂಬುದರಿಯರು.
ವಿಶ್ವದಾಭಿರಾಮ ಕೇಳು ನೇಮ.

ಮರಣ ಸಮಯದ ವರೆಗೂ ಉಪಾಸನೆಯನ್ನು ಮಾಡಬೇಕು. ಆದರೆ ಕರ್ಮಫಲವು ಇಹ ಲೋಕದಲ್ಲಿ ಸಿಗುವುದೋ? ಪರಲೋಕದಲ್ಲಿ ಸಿಗುವುದೋ? ಇಹ-ಪರಗಳೆಂದು ಭಿನ್ನ ಪ್ರದೇಶಗಳಾದರೂ ಉಂಟೇ? ಇಲ್ಲ. ಇಹ ಲೋಕವೂ ಪರಲೋಕವೂ ಒಂದೇ. "ಈ ಜೀವನು ಯಾವ ಚಿತ್ತದಿಂದ ಕೂಡಿರುವನೋ, ಅದರಿಂದ ಪ್ರಾಣವನ್ನು ಹೊಂದುತ್ತಾನೆ. ಪ್ರಾಣನು ತೇಜಸ್ಸಿನಿಂದ ಕೂಡಿ ಆತ್ಮನೊಂದಿಗೆ ಅವನ ಸಂಕಲ್ಪಕ್ಕೆ ಅನುಸಾರವಾದ ಲೋಕಕ್ಕೆ ಒಯ್ಯುತ್ತಾನೆ." [ಪ್ರಶ್ನೋಪನಿಷತ್—೩-೧೦] ಎಂದು ಹೇಳುವುದರಲ್ಲಿ ಆತ್ಮ ಸಂಕಲ್ಪ, ಚಿತ್ತಿನ ಅವಸ್ಥೆಯ ಲೋಕ ತಿಳಿಸುತ್ತದೆ. ಚಿತ್ ಬೇರೆ ಬೇರೆ ಅವಸ್ಥೆಗಳಲ್ಲಿ ಹೀಗೆ ಇದೆ. "ಕಲ್ಲು, ಮಣ್ಣು ಚಿತ್ತದ ಅತಿ ಸ್ಥೂಲ ರೂಪ. 'ಪುರುಷ'ನ 'ಮಹತ್' ಮತ್ತು 'ಅಹಂ:' ತತ್ತ್ವಗಳು ಚಿತ್ತದಲ್ಲಿ ಅಡಗಿಕೊಂಡಿರುವವು. ಕಾರಣ, ಮನಸ್ಸಿನ ಪ್ರಾರಂಭಿಕ ಅವಸ್ಥೆಯಲ್ಲಿ ಅಂದರೆ ಬೆಳವಣಿಗೆ ಹೊಂದದ ಪ್ರಾಣಿಗಳಲ್ಲಿ ಮತ್ತು ಸಸ್ಯಾದಿಗಳಲ್ಲಿ ಚಿತ್ತಕ್ಕಿಂತ ಸೂಕ್ಷ್ಮವಾದುದೇನೂ ಇಲ್ಲ. ಸಂಸ್ಕಾರ ಹೊಂದಿದ ಚಿತ್ತವುಳ್ಳ ಪ್ರಾಣಿಗಳಲ್ಲಿ ಮನಸ್ಸಿನ ಸೂಕ್ಷ್ಮಾಂಶಗಳಾದ ಮಹತ್ ಮತ್ತು ಅಹಂ ತತ್ತ್ವಗಳು ವ್ಯಕ್ತವಾಗಿರುವವು. ಇವು ಜೀವ ಶಕ್ತಿಯಾದ ಪ್ರಾಣವನ್ನು ನಿಯಂತ್ರಿಸುವವು" ಎಂದು 'ಆನಂದ ಮಾರ್ಗ' ತಿಳಿಸುತ್ತದೆ. "ಎಲೈ ಅರ್ಜುನ, ಮರಣಕಾಲದಲ್ಲಿ ಯಾವ ಯಾವ ಭಾವವನ್ನಾದರೂ ಸ್ಮರಿಸುತ್ತ ದೇಹವನ್ನು ಬಿಡುವನೋ, ಯಾವಾಗಲೂ ಆ ಭಾವವನ್ನೇ ಭಾವಿಸುತ್ತಿರುವ ಅವನು ಅದನ್ನೇ ಹೊಂದುವನು" (ಭಗವದ್ಗೀತೆ ೮-೧೦) ಹೀಗೆ ಅವನು ತನ್ನ ಕರ್ಮಫಲದಿಂದ ಮನಸ್ಸನ್ನು ಇಹದಲ್ಲಿರುವಾಗ ಯಾವ ಅವಸ್ಥೆಯಲ್ಲಿ ಇರಿಸುವನೋ ಅದೇ ಮುಂದಿನ ಜನ್ಮದ ಶರೀರಕ್ಕೆ ಹೇತುವಾಗುವುದು. ಆದರೆ ಕರ್ಮ ಫಲವು ಇದದಲ್ಲಿಯೇ ಉಂಟು. ಇನ್ನು ಬ್ರಹ್ಮಜ್ಞಾನವಾದಾಗ ಮುಂದಿನ ಪಾಪ ಅಂಟುವಂತಿಲ್ಲ. ಹಿಂದಿನ ಪಾಪ ನಾಶವಾಗುವುದು. 'ಹೇಗೆ ಪದ್ಮ ಪತ್ರಕ್ಕೆ ನೀರು ಅಂಟಿಕೊಳ್ಳುವದಿಲ್ಲವೋ ಹಾದಿಯೇ ಬ್ರಹ್ಮವನ್ನು

ಅರಿತುಕೊಂಡವನಿಗೆ ಪಾಪ ಕರ್ಮವು ಅಂಟಿಕೊಳ್ಳುವದಿಲ್ಲ. (ಛಾಂದೋಗ್ಯಉ.೪-೧೪-೩) ಕಾರಣ, ಇಹವನ್ನು ಬಿಟ್ಟು ಬೇರೆಡೆ ಫಲವಿದೆಯೆನ್ನುವ ಮತವು ಅಯೋಗ್ಯವಾಗಿದೆ.

೭೧೩

ವ್ಯಾತವೆಂಟಕಾನಿ ವರಮೀಡು ದೈವಂಬು, ಜೇತಕೊಲದಿಕಾನಿ ವ್ಯಾತಕಾದು,
ವ್ಯಾತಕಜುಡು ಕರ್ತ ಚೇತಕುದಾಗರ್ತ ವಿಶ್ವದಾಭಿರಾಮ ವಿನುರ ವೇಮ

ವಿಧಿಯು ಬೆನ್ನಿಗಿರಲು ವರವೀವುದು ದೈವ.
ಅದುವೆ ಕರ್ಮದಿಂದ; ಆಲ್ಲ ವಿಧಿಯು.
ಕರ್ತ ಅಜನು ವಿಧಿಗೆ, ಕರ್ಮಕೆ ತಾ ಕರ್ತ,
ವಿಶ್ವದಾಭಿರಾಮ ಕೇಳು ನೇಮ.

ಆತ್ಮ ಕಾರಣ. ಮನಸ್ಸು, ಬುದ್ಧಿ, ಚಿತ್ತಗಳೆಲ್ಲ ಅಂತ:ಕರಣಗಳು. ಕಣ್ಣು, ಮೂಗು, ಕಿವಿ, ನಾಲಗೆ, ತ್ವಚೆಗಳು ಬಾಹ್ಯಕರಣಗಳು. ನೋಡುವಿಕೆ, ಮೂಸುವಿಕೆ, ಕೇಳುವಿಕೆ, ರುಚಿಸುವಿಕೆ, ಸ್ಪರ್ಶಿಸುವಿಕೆಗಳು ಕರ್ಮಗಳು. ಸ್ವ-ಸ್ತ್ರೀಯನ್ನು ನೋಡುವುದು, ಮುಟ್ಟುವುದು ಧರ್ಮ. ಪರಸ್ತ್ರೀಯನ್ನು ನೋಡುವುದು, ಮುಟ್ಟುವುದು ಅಧರ್ಮ. ಧರ್ಮವು ಪುಣ್ಯ ಕರ್ಮ. ಅಧರ್ಮವು ಪಾಪ ಕರ್ಮ. ಪುಣ್ಯ-ಪಾಪಗಳು ಕರ್ಮ ಫಲಗಳು. ಕರ್ಮಗಳ ಫಲವು ಮಾಡಿದವರನ್ನೇ ಹೋಗಿ ಸೇರುವುದಕ್ಕೆ ಹೇತುವಾಗಿರುವ ನಿಯತಿಯೇ ವಿಧಿ. ವಿಧಿಗೆ ಬ್ರಹ್ಮನೇ ಕರ್ತ. ಆದರೆ ಕರ್ಮಕ್ಕೆ ಜೀವನೇ ಕರ್ತ. ' ಮನುಷ್ಯನು ಪುಣ್ಯ ಕರ್ಮದಿಂದ ಪುಣ್ಯವಂತನಾಗುತ್ತಾನೆ. ಪಾಪ ಕರ್ಮದಿಂದ ಪಾಪಿಯಾಗುತ್ತಾನೆ. ' ಎಂದು ಬೃಹದಾರಣ್ಯಕ ಉಪನಿಷತ್ತು ಹೇಳುವುದು ವರವೋ, ಶಾಪವೋ, ಕರ್ಮ ಫಲದ ಮೇಲಿಂದ, ವಿಧಿ ನಿಯಮದಂತೆ, ದೈವವು ಕೊಡುತ್ತದೆ. ಪಾಪ-ಕರ್ಮಿಗೆ ಪಾಪ-ಕರ್ಮದ ಫಲ ಮಾತ್ರ, ದೈವದಿಂದ ವರವಾಗಿ ದೊರೆಯುವದು. ಅದೇ ರೀತಿ ಪುಣ್ಯ ಕರ್ಮಿಗೆ.

ಬ್ರಹ್ಮವು ವಿಧಿಗೆ ಕರ್ತನೆನಿಸುವುದು ಹೀಗೆ : ಕರ್ಮಗಳಲ್ಲಿ ಸಂಚಿತ, ಪ್ರಾರಬ್ಧ, ಆಗಮಿ ಎಂದು ನಿಯತಿಗೊಳಿಸಿ, ಅನುಭವಿಸಬೇಕಾದ ಕರ್ಮಗಳಲ್ಲಿ (ಪ್ರಾರಬ್ಧ) ಸಂಚಿತ ಕರ್ಮದ ಪಾಲು, ಮುಕ್ತನಾಗುವ ವರೆಗೆ ಗಿಯ್ಯುವ ಕರ್ಮದ ಪಾಲು ಸೇರುತ್ತವೆ. ಪ್ರಾರಬ್ಧ ಕರ್ಮ ಮುಗಿಯುವವರೆಗೆ, ಮುಕ್ತನಾದವನಿಗೂ ಶರೀರ ಸಂಬಂಧವುಂಟಾಗುವುದು.

(ಹೋಲಿಸಿ ನೋಡಿರಿ:

" ಕೋಟಿ ವಸ್ತುಗಳನ್ನು ಕೂಡಿಟ್ಟವರಿಗೆ ಕೂಡ ಪಾಲು ಮಾಡಿಟ್ಟ ವಿಧಿ, ಪಾಲು ಮಾಡಿಕೊಟ್ಟ ರೀತಿಯಿಂದಲ್ಲದೆ, ಬೇರೆ ರೀತಿಯಲ್ಲಿ ಅನುಭವಿಸಲಿಕ್ಕೆ ಸಾಧ್ಯವಿಲ್ಲ.

ವಿಧಿಯ ಹಾಗೆ, ಬಲವತ್ತಾದುದು ಬೇರೆ ಯಾವುದಿದೆ? ಬೇರೊಂದನ್ನು ನೆನೆದರೂ ತಾನೇ ಮುಂದೆ ಬಂದು ನಿಲ್ಲುತ್ತದೆ.

"ಅಳಿಯುವ ವಿಧಿ ಬಂದಾಗ, ತಿಳಿವಳಿಕೆಯಿದ್ದರೂ ಹೆಡ್ಡನನ್ನಾಗಿ ಮಾಡುವದು. ಆಗುವ ವಿಧಿ ಬಂದಾಗ ತಿಳಿವಳಿಕೆ ಕಡಿಮೆಯಿದ್ದರೂ ಹಿಗ್ಗಿಸುವದು.''

ತಿರುವಳ್ಳುವೊರ್–ತಿರುಕ್ಕುರುಳ್.)

೭೧೪

ಕಂಟಗಂಟ, ನನುಚು ಗರ್ಮಾಧಿಕಾರಂಬು, ವೆಂಚಬಟ್ಟಚೆಡುನು ವೆರ್ರಿಜನುಡು,
ಬಟ್ಟಬಯಲು ಮುಕ್ತಿ ಬಾಟಂಚಿಚೂಡಡು, ವಿಶ್ವದಾಭಿರಾಮ ವಿನುರ ವೇಮ.

ಕಣ್ಣು ಕಂಡಿತೆನಲು ಕರ್ಮಾಧಿಕಾರವು.
ಹಿಂದೆ ಬಿದ್ದು ಕೆಡುವ, ಹುಚ್ಚು ಮನುಜ.
ಬಟ್ಟ ಬಯಲು ಮುಕ್ತಿ ಪರಿಪರಿಯಲಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ದೇವರನ್ನು ಕಣ್ಣಿನಿಂದ ಕಾಣಬಹುದೇ? ಎಲ್ಲರೂ ಕೇಳುವ ಪ್ರಶ್ನೆಯಿದು. ''ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮ್ ಅಬುದ್ಧಯಃ '' ಅವಿವೇಕಿಗಳು ಅವಕ್ತನಾದ ನನ್ನನ್ನು, ವ್ಯಕ್ತನಾದವನೆಂದು ಎಣಿಸುತ್ತಾರೆ. ಎಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಹೇಳುತ್ತಾನೆ. "ಈ ಮೂಢ ಜನರು ಅಜನೂ ಅವ್ಯಯನೂ ಆದ ನನ್ನನ್ನು ಅರಿಯರು' ಎಂದೂ ಹೇಳಿದ್ದಾನೆ. ಅವ್ಯಕ್ತ ಎಂದರೇನು? ಇಂದ್ರಿಯಗಳಿಗೆ ಗೋಚರಿಸಲಾರದವನು. ಕಣ್ಣು ಇಂದ್ರಿಯ ತಾನೇ. ಕಣ್ಣು ಅವನನ್ನು ಕಾಣದು. ಯಾರನ್ನು? 'ಅಜನಾದ ಅವ್ಯಯನಾದ, ವನನ್ನು. ಅವನಿಗೆ ಹುಟ್ಟು ಎಂಬುದಿಲ್ಲ. ಅವನು ಕ್ಷೀಣಿಸುವುದೂ ಇಲ್ಲ. ಅವನು 'ಸತ್' ಎಂದರೆ ಎಂದೂ ಬದಲಾಗದೆ ಇರುವವನು.

ಹಾಗಾದರೆ, ಕೆಲವು ಸಿದ್ಧಪುರುಷರು 'ನಾವು ರಾಮನ್ನು ಕಂಡೆವು. ಕೃಷ್ಣನನ್ನು ಕಂಡೆವು, ಎನ್ನುವುದರ ಅರ್ಥವೇನು? ಒಬ್ಬ ಸ್ವಾಮಿಯ ಚಿತ್ರ ನೋಡಿದಿರೆಂದು ತಿಳಿಯಿರಿ. ಇಲ್ಲವೇ ಆ ಸ್ವಾಮಿಯನ್ನೇ ನೋಡಿದಿರೆಂದು ತಿಳಿಯಿರಿ. ಆ ಸ್ವಾಮಿಯ ರೂಪ–ರೇಖೆ ನಿಮ್ಮ ಮನಸ್ಸಿನಲ್ಲಿ ಚಿತ್ತವೃತ್ತಿಗಳಾಗಿ ಸಂಚಯವಾಗುವವು. ನೀವು ಸ್ವಪ್ನಾವಸ್ಥೆಯಲ್ಲಿರುವಾಗ ಇಲ್ಲವೆ ಇನ್ನೂ ಆಳ ನಿದ್ರೆಯಲ್ಲಿರುವಾಗ, ನಿಮ್ಮ ನೋಡುವಿಕೆಯ ಕರ್ಮದಿಂದ ಉಂಟಾದ ಫಲವು ಆ ಸ್ವಾಮಿಯ ಆಕೃತಿಯ ದೃಶ್ಯವಾಗಿ ಕಾಣುವದು. ಇವೇ ಚಿತ್ತವೃತ್ತಿಗಳು ಕಣ್ಣು ತೆರೆದಾಗ ಸಹ ವ್ಯಕ್ತವಾದರೆ, ಪೂರ್ವ ನೋಟ ಮರುಕಳಿಸುವದು. ಚಿತ್ತದಲ್ಲಿ ನಡೆಯುವ ಈ ಕ್ರಿಯೆಗೆ ಮೊದಲು ನೋಡುವ ಕರ್ಮ ಫಲಕ್ಕೆ ತಾನು ಅಧಿಕಾರಿಯಾದುದರಿಂದ(ಪಡೆಯುವವನಿಗೆ)ಆ ನೋಟವು ಕರ್ಮಾಧಿಕಾರವು. ಕರ್ಮಾಧಿಕಾರದ ಹಿಂದೆ ಬಿದ್ದು, ಮನುಷ್ಯ ಮೂಢನಾಗಿ ಕೆಡುತ್ತಾನೆ. ಮನಸ್ಸು ಪರಿಶುದ್ಧವಾಗಬೇಕು. ಕಲ್ಮಶವೆಲ್ಲ ಹೋಗಬೇಕು. ಚಿತ್ತವೃತ್ತಿಗಳು ಲಯವಾಗಬೇಕು. ಆಗ ಹೃದಯದ [ಆಕಾಶ] ಬಯಲು ಬಟ್ಟಬಯಲಾಗಿ ಮನಸ್ಸಿಗೆ ತೋರುವದು. ಆಗ ಆತ್ಮವು ಅನುಭವ ವೇದ್ಯವಾಗುವದು. ಇದುವೇ ಮುಕ್ತಿ. " ಅವನು ದೃಷ್ಟಿಗೆ ಸಿಕ್ಕಾವದಿಲ್ಲ. ಮಾತಿಗೂ ಗೋಚರನಲ್ಲ. ಬೇರೆ ಇಂದ್ರಿಯಗಳಾಗಲಿ,

ತಪಸ್ಸಾಗಲಿ, ಕರ್ಮಗಳಾಗಲಿ,ಅವನ ಪ್ರಾಪ್ತಿಗೆ ಸಾಧನಗಳಲ್ಲ. ನಿಷ್ಕಲನಾದ ಪರಮಾತ್ಮನು ಪ್ರಸಾದದಿಂದ ಪರಿಶುದ್ಧಾಂತಃಕರಣನಾಗುವನು; ಅನಂತರ ಅವನನ್ನು ನೋಡುವನು.ಎಂದು (೩-೧-೮) ಮುಂಡಕೋಪನಿಷತ್ತು ಹೇಳುವುದು.

೭೧೫

ತಾನು ವಿಮಲುಡೈನ ದನಗುಣಮುಂತಯು, ಶಿವುನಿಕೀನಿ ಗುರುವು ಚೆಡ್ಡಗುರುವು.
ಗ್ರುಡ್ಡಿಗುರ್ರಮೆಕ್ಕಿ ಗುಡಿತಿರಿಗಿ ನಟುಲ್ಲೌ, ವಿಶ್ವದಾಭಿರಾಮ ವಿನುರ ವೇಮ.

ತಾನು ವಿಮಲನಿರಲು ತನ್ನ ಗುಣಗಳೆಲ್ಲ,
ಶಿವಗರ್ಪಿಸದ ಗುರು ಸೋಗಿನ ಗುರು.
ಕುರುಡು ಕುದುರೆಯೇರಿ ಗುಡಿಯು ತಿರುಗಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ವಿಮಲ ಎಂದರೆ ಯಾವನಲ್ಲಿ ದೋಷವೆಲ್ಲ ನಾಶವಾಗಿ ಹೋಗಿರುವದೋ ಅವನು. ಇದು ಪರಮಾತ್ಮನ ವಿಶೇಷಣ. ಇದೇ ರೀತಿ, ದೋಷವೇ ಇಲ್ಲದಿರುವದು, 'ಅ–ಮಲ'. ದೋಷರಾಹಿತ್ಯವು ನಿರ್ಮಲ. ತತ್ತ್ವವೆಂದರೆ ಬ್ರಹ್ಮತ್ವ ತಾನೇ. ವಿಮಲತ್ವವೂ ಬ್ರಹ್ಮತ್ವ. ತಾನು ವಿಮಲನಿದ್ದರೆ, "ವಿಮಲನೇ ತಾನು ಆಗಿರುವನು." 'ತತ್ ತ್ವಮ್ ಅಸಿ'. ಹಾಗಿದ್ದರೆ, ಅವನದೆನ್ನುವದೇನೂ ಉಳಿಯದು. ಮಮಕಾರ,ಅಹಂಕಾರ,ಮೀರಿದ ಶುದ್ಧ ಸ್ಥಿತಿಯದು. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ.' ಸಕಲ ಧರ್ಮಗಳನ್ನು ದಾಟಿ,ನನ್ನೊಬ್ಬನಲ್ಲಿಯೇ ಆಶ್ರಯ ಪಡೆ' ಎಂದು ವಾಸುದೇವ–ಕೃಷ್ಣ ಪುರುಷೋತ್ತಮನಾಗಿ ನುಡಿದಿದ್ದಾನೆ. 'ಪುರುಷೋತ್ತಮ' 'ಸಗುಣ ಬ್ರಹ್ಮ' ಸಮಾನಾರ್ಥಕ ಪದಗಳು. ಶ್ರೀಕೃಷ್ಣ 'ತಾನಾಗಿ' ಏನೂ ಬೋಧಿಸಿಲ್ಲ. 'ನಾನು' ಎಂದು ಹೇಳಿದಾಗ, 'ಸೂರ್ಯನಿಗೂ ಆದಿಯಾದ' ಪುರುಷೋತ್ತಮ ಎಂದೇ ಹೇಳಿದ್ದಾನೆ. ಇಂಥವರೇ ನಿಜವಾದ ಗುರುಗಳು. ಗುರುಗಳು ಎಲ್ಲವನ್ನೂ ಪರಶಿವನಿಗೆ ಅರ್ಪಿಸಿ ಬೋಧಿಸಬೇಕು. ಆ ಬೋಧೆ ವಿಶಾಲವಾಗುತ್ತದೆ.ವಿಶ್ವಕ್ಕೆ ಅನ್ವಯಿಸುತ್ತದೆ.ತನ್ನ ಗುಣಗಳನ್ನು ಶಿವನಿಗರ್ಪಿಸದ ಗುರು ಸೋಗಿನ ಗುರು.

ಗ್ರಹಗಳು ಸೂರ್ಯನ ಸುತ್ತು ತಿರುಗಿ ಪ್ರಕಾಶ ಪಡೆಯುತ್ತವೆ. ಸೂರ್ಯನಿಂದ ಗ್ರಹಗಳ ವ್ಯುತ್ಪತ್ತಿ ತಾನೇ. ಅದೇ ರೀತಿ,ಗುಡಿಯೆಸುತ್ತು ಪ್ರದಕ್ಷಿಣೆ ಹಾಕಿದರೆ,ಜ್ಞಾನಪ್ರಕಾಶ ದೊರೆಯುವದು, ಎಂಬ ಭಾವ. ಸೂರ್ಯನಿಗೆ ಸ್ವಯಂ ಪ್ರಕಾಶವಿದೆ. ಅವನು ಪ್ರಕಾಶ ಬೀರುವನು. ಗುಡಿಯು ಸ್ಥಾವರ ವಸ್ತು. ಮೂರ್ತಿ ಎಂದರೆ ಮೂರ್ತ; ಸ್ಥೂಲ. ಇದರ ಸುತ್ತು ಕರುಡು ಕುದುರೆಯೇರಿ ತಿರುಗುವದೆಂದರೆ ಮೂಢತನ. ಅದೇ ರೀತಿ ಶಿವನಿಗೆ ಎಲ್ಲ ಗುಣ ಅರ್ಪಿಸದ ಸೋಗಿನ ಗುರುವು, ತಾನೇ ಜ್ಞಾನ ಗುರುಡ. ಅವನ ಸಹಾಯ ಪಡೆದು ಹೋಗುವವನಿಗೆ ಹಾದಿ ದೊರೆಯದು.

೭೧೬

ಜಾರಪುರುಷಮೀದ ಸದ್ಭಕ್ತಿ ಸಲುಪುಚು, ಬತಿಕಿ ನಿಚ್ಚಕಂಬು ಬರಪು ಭಂಗಿ
ಪರಮುಕೊರಕು ಯೋಗಿ ಪಾಟಂಚು ದೇಹಂಬು, ವಿಶ್ವದಾಭಿರಾಮ ವಿನುರ ವೇಮ.

ಜಾರ ಪುರುಷನಲ್ಲಿ ಸದ್ಭಕ್ತಿ ಸಲಿಸುತ,
ಪತಿಗೆ ನಿತ್ಯವಾದ ಪ್ರೀತಿ ಭಂಗಿ.
ಪರವ ಪಡೆಯೆ ಯೋಗಿ, ಪಡುವ ದೇಹ ಕಷ್ಟ.
ವಿಶ್ವದಾಭಿರಾಮ ಕೇಳು ನೇಮ.

ಹಲವರು ಯೋಗಿಗಳೆಂದು ಹೆಸರು ಹೊತ್ತು, ತಪಸ್ಸಿನ ಹೆಸರಿನಲ್ಲಿ ದೇಹ ದಂಡಿಸ್ತ್ತಾರೆ. ಜಗತ್ತಿನಲ್ಲಿರುವ ಕಷ್ಟವನ್ನೆಲ್ಲ ತಾವು ಅನುಭವಿಸಿದರೆ, ಮುಕ್ತಿ, ಎಂದು ಅವರ ಭಾವ. ಅವರು ಉರಿಬಿಸಿಲಲ್ಲಿ ಬರಿ ಮೈಯಿಂದ ನಿಲ್ಲುತ್ತಾರೆ. ಛಳಿಯಲ್ಲಿ ಕೆಲವರು ಬಳಲುವರೆಂದು, ಕೊರೆಯುವ ಛಳಿಯಿರುವಾಗ,ತಣ್ಣೀರಿನಲ್ಲಿ ಇಲ್ಲವೆ ಭರ್ಫೆಯ ಬಂಡೆಯ ಮೇಲೆ ವಾರಗಟ್ಟಲೆ ಕುಳಿತುಬಿಡುತ್ತಾರೆ. ಜನರು ಕಲ್ಲು, ಮುಳ್ಳು ತುಳಿಯುವರೆಂದು, ತಾವು ಮೊಳೆ ಜಡಿದ ಆವಿಗೆಗಳ ಮೇಲೆ, ಪಕ್ಷಗಟ್ಟಲೆ ನಿಲ್ಲುತ್ತಾರೆ. ಮೂಢ ಜನರು ಇಂಥವರಲ್ಲಿ ದೈವಿಕ ಶಕ್ತಿ ಉಂಟೆಂದು ತಿಳಿಯುತ್ತಾರೆ. ಶಾರೀರಕ ಯೋಗ ಸಾಧನೆಯಿಂದ ಹಲವು ಆಂತರಿಕ ನಿಯಂತ್ರಣ ಶಕ್ತಿ ಹೊಂದಿದ ಈ ಠಕ್ಕ ಯೋಗಿಗಳು, ಬಲ ಪ್ರದರ್ಶಿಸಬಲ್ಲರು. ಸಹನೆ ತೋರಿಬಲ್ಲರು; ಅಬಾಧಿತರಂತೆ ಉಳಿಯಬಲ್ಲರು. ಬಂಡೆಗಲ್ಲು ಎದೆಯ ಮೇಲೆ ಇಟ್ಟುಕೊಳ್ಳಬಲ್ಲರು; ಬಿಸಿಲು ಛಳಿಯಲ್ಲಿ ಕುಳಿತು ಸಹಿಸಬಲ್ಲರು. ರಸಾಯನ ಕುಡಿಯಬಲ್ಲರು; ಕೆಂಡ ತಿನ್ನಬಲ್ಲರು. 'ಉದಾನ ನಾಡಿ'ಯ ಮೇಲೆ ನಿಯಂತ್ರಣ ಸಾಧಿಸಿ, ಗಾಳಿ ಎಳೆದುಕೊಂಡು ದೇಹವನ್ನು ಬೇಕಾದಷ್ಟು ಹಗುರವಾಗಿಸಿಕೊಂಡು, 'ಮೊಳೆಯ' 'ಆವಿಗೆಯ' ಮೇಲೆ ನಿಲ್ಲಬಹುದು. ಬೆಂಕಿಯ ಮೇಲೆ ನಡೆಯಬಹುದು, ಅದೇಕೆ? ಹೆಚ್ಚು ಪ್ರಯತ್ನಿಸಿದರೆ, ನೀರಿನ ಮೇಲೆ ಕೂಡ.

ಆದರೆ, ಯೋಗಿಯಾಗುವವನು ದೇಹಕ್ಕೆ ಕೊಡುವ ಕಷ್ಟವು ಅವನ ದಾರಿಯಲ್ಲಿ ಸಹಾಯಕವೇ? ಅಲ್ಲ. ಅದು ಯಾವ ರೀತಿ ನಿರರ್ಥಕವೆಂದರೆ, ಹೋಲಿಕೆಯಿಂದ ತಿಳಿಯುವುದೇ ಮೇಲು. ಪತಿಯಲ್ಲಿ ಪ್ರೀತಿ ತೋರುವವಳು ಸತಿ. ಪತಿಯಲ್ಲಿ ಭಕ್ತಿ ಇರಿಸಿದ ಸತಿಯೇ ಸಾಧ್ವಿ, ಗರತಿ. ಆದರೆ ಸ್ತ್ರೀ ಜಾರ ಪುರುಷನಲ್ಲಿ ಸದ್ಭಕ್ತಿ ಸಲ್ಲಿಸಿದರೆ,ಗಂಡನಲ್ಲಿ ಪ್ರೀತಿ ಭಂಗವಾಗುವದಷ್ಟೇ. ಇಬ್ಬರನ್ನೂ ಮನಸಾ ವರಿಸುವುದು ಅಶಕ್ಯ. ಯೋಗಿಯ ದೇಹದ ಕಷ್ಟ ಆ ರೀತಿ. ದೇಹದ ಕಷ್ಟದಿಂದ ಮುಕ್ತಿಯೆಲ್ಲಿ? ದೇಹಶಕ್ತಿ ಇದ್ದರೂ ಅದನ್ನು ಮನಸ್ಸಿನ ವಿಕಾಸದ ಸಾಧನವಾಗಿ ಬಳಸಿ, ಮನಶ್ಶುದ್ಧಿಗಾಗಿ ಹೆಣಗಬೇಕು.

೭೧೭

ತನುವುಲೋನಿ ಜೀವತತ್ತ್ವ ಮೆರುಂಗಕ, ವೇರೆಕಲದಟಂಚು ವೆದಕ ನೇಲ ?
ಭಾನು ದುಂಡ ದಿವ್ಪೆ ಬಟ್ಟವೆದಕ ನ್ಗಾನೆ ? ವಿಶ್ವದಾಭಿರಾಮ ಕೇಳು ವೇಮು

ತನುವಿನೊಳಿಹ ಜೀವ ತತ್ತ್ವನರಿಯುವನಕ,
ಹೊರಗೆ ಇರುವುದೆಂದು ಹುಡುಕಲೇಕೆ ?
ಭಾನುವಿರವ, ದೀಪ-ಬೆಳಕು ತೋರಬಹುದೆ ?
ವಿಶ್ವದಾಭಿರಾಮ ಕೇಳು ನೇಮ.

'ಅಂಗುಷ್ಠ ಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ.' ' ಹೆಬ್ಬಟ್ಟಿನಳತೆಯ [ಧ್ಯಾನಕ್ಕೆ ಅನುಕೂಲವಾಗಲೆಂದು ಪರಿಮಾಣ ಸೂಚ್ಯವಾಗಿದೆಯೆಂದು ಪ್ರಾಜ್ಞರ ಮತ.] ಪುರುಷನು ಆತ್ಮಮಧ್ಯೆ ನಿಂತಿರುವನು.' (ಕಠ ಉಪನಿಷತ್ ೨-೧-೧೨)

" ಪುರುಷೋ ಅಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟ." (ಅಂತರಾತ್ಮನಾದ 'ಪುರುಷ' ಯಾವಾಗಲೂ ಪ್ರಾಣಿಗಳ ಹೃದಯದಲ್ಲಿ ಇರುವನು) 'ಜೀವೋ ಬ್ರಹ್ಮ ಸ್ವರೂಪಂ' (ಜೀವವೇ ಬ್ರಹ್ಮ ಸ್ವರೂಪನಾಗಿದ್ದಾನೆ.)

ಹಲವರ ವಾದ ಹೀಗೆ: ಈ ದೇಹದಲ್ಲಿರುವ ಜೀವದ ಬ್ರಹ್ಮತ್ವ (ತತ್--ತ್ವ)ವನ್ನು ಅರಿಯುವ ವರೆಗೆ ಮೂರ್ತಿ ಪೂಜೆ ಮಾಡಿದರೆ ವಾಸಿ. ಮನಸ್ಸು ಕೆಂದ್ರೀಕರಿಸಲು ಅನುಕೂಲ. ಆದರೆ ಅಲ್ಲಿಯ ವರೆಗಾದರೂ ಹೃದಯವ ಹೊರಗೆ ಕಲ್ಲು ಪ್ರತಿಮೆಗಳಲ್ಲಿ, ತೀರ್ಥಗಳಲ್ಲಿ ದೇವರನ್ನು ಹುಡುಕುವದೇಕೆ ? ಎನಿತಾದರೂ ಆಗಲಿ, ನಿಜದ ನೆನಹೇ ಸಾಕು. ಬೆಂಕಿಯ ಗುಣವನ್ನು ಬಿಸಿನೀರಿನಲ್ಲಿ ಕಾಣಬಹುದೇ ? ಬೆಂಕಿ ಉರಿಯುತ್ತದೆ; ಉರಿಸುತ್ತಿದೆ. ಬಿಸಿನೀರು ಉರಿ ನಂದಿಸುತ್ತದೆ. ಮೂರ್ತಿ ಪೂಜೆ ಬಿಸಿ ನೀರಿನಂತೆ. ಮನಸ್ಸು ಸ್ಥೂಲವಾಗಿಸಿ, ಸೂಕ್ಷ್ಮದ ಜಿಜ್ಞಾಸೆಯನ್ನೇ ಹಾಳು ಮಾಡುತ್ತದೆ. ಆತ್ಮ, ಪುರುಷ ಸೂರ್ಯನಂತೆ. ಅವನ ಪ್ರಕಾಶದಿಂದ, ಅವನನ್ನು ಕಾಣಲು ಸಾಧ್ಯ. ದೀಪ, ಹಿಡಿದು ಸೂರ್ಯನನ್ನು ಹುಡುಕಿದರೆ, ಅವನನ್ನು ಕಾಣುವದೆಲ್ಲಿ ? ಅವನು ಕಾಣುವಾಗ ದೀಪದ ಅಗತ್ಯವೆಲ್ಲಿ ? ಹೃದಯದ ಹೊರಗೆ ದೇವರನ್ನು ಕಾಣಬಯಸುವುದು ಎಲ್ಲ ದೃಷ್ಟಿಯಿಂದಲೂ ನಿರರ್ಥಕ.

(ಹೋಲಿಸಿ ನೋಡಿರಿ :

"ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟೋ
ಮತ್ತಃ ಸ್ಮೃತಿರ್ಜ್ಞಾನ ಮಪೋ ಹನಂ ಚ ।
ವೇದೈಶ್ಚ ಸರ್ವೈರಹಮೇವ ವೇದ್ಯೋ
ವೇದಾಂತ-ಕೃದ್ವೇದವಿದೇವ ಚಾಹಮ್ ॥

ನಾನು ಎಲ್ಲರ ಹೃದಯದಲ್ಲಿಯೂ (ಅಂತರ್ಯಾಮಿಯಾಗಿ) ಇರುತ್ತೇನೆ. ಸ್ಮೃತಿ ಜ್ಞಾನ, ಅವುಗಳ ನಿವೃತ್ತಿ ನನ್ನಿಂದಲೇ (ಉಂಟಾಗುತ್ತವೆ.) ಎಲ್ಲ ವೇದಗಳಿಂದಲೂ ನಾನೇ ತಿಳಿಯಲ್ಪಡತಕ್ಕವನು. ವೇದಾಂತವನ್ನು ಮಾಡಿದವನೂ, ವೇದವನ್ನು ತಿಳಿದವನೂ ನಾನೇ.

(ನಾನು ಎನ್ನುವ ಕೃಷ್ಣನವಚನ ' ಪುರುಷೋತ್ತಮ ' ಎಂಬ ಅರ್ಥದಲ್ಲಿ ಉಪಯೋಗವಾಗಿದೆ. ಇಷ್ಟ ದೇವತೆಗಿಂತಲೂ ಪರಮ ಪದವಿದು.)

ಭಗವದ್ಗೀತಾ—೧೫-೧೫

೭೧೮

ಚಚ್ಚುವಾರಿನಿಗನಿ ಚಾವು ನಿಶ್ಚಯಮನಿ, ತತ್ತ್ವಮೆಲ್ಲ ನಾತ್ಮದಲಚಿ ತೆಲಿವಿ,
ನದುರು ಬೆದುರುಲೇಕ ಯಡರಿನ ಭಕ್ತುಂಡು ವಿಶ್ವದಾಭಿರಾಮ ವಿನುರ ವೇಮ.

ಸಾಯುವವರ ಕಂಡು ಸಾವು ನಿಶ್ಚಿತೆಂದು,
ತತ್ತ್ವವೆಲ್ಲ ಆತ್ಮ; ತಿಳಿದುಕೊಂಡು.
ಬೆದರಿ-ಅದರದಂತೆ ಬಾಳುವ ವನೇ ಭಕ್ತ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿದವರು ಸಾಯಲೇ ಬೇಕು. ಈ ಸಾವು ಬರುವುದು ಸಹ ವಿಧಿನಿಯಮದಂತೆ. 'ಮಳೆಯು ಬರುವ ಅಂದ, ಹರಣ ತೊಲಗುವಂದ, ತಿಳಿಯದಾರಿಗೇನು? ಕಣ್ಣಿದುರು ಚಿಕ್ಕವರು ಸಾಯುತ್ತಾರೆ. ತಾವು ಹಡೆದವರೂ, ತಮ್ಮನ್ನೇ ಹಡೆದವರೂ ಸಾಯುತ್ತಾರೆ. ಇದರಿಂದ ಸಾವು ಶರೀರಕ್ಕೆ ನಿಶ್ಚಿತ. ಇನ್ನು ಉಳಿಯುವುದು ಸತ್. ಅದುವೇ ತತ್. ತತ್ತ್ವವೇ ಬ್ರಹ್ಮತ್ವ; ಆತ್ಮ. ಆತ್ಮ ಅವ್ಯಯ. ಸಾವು ಹಳೆಯಂಗಿ ಕಳಚಿದಂತೆ. ಜನ್ಮ, ಹೊಸ ಅಂಗಿ ಧರಿಸಿದಂತೆ. ಒಂದು ಶರೀರ ಹೋಗಿ, ಇನ್ನೊಂದು ಬರುವುದು. ಆತ್ಮ ಅರಿತು ಕರ್ಮ ಮಾಡಿದರೆ, ಅಲ್ಲಿ ಫಲಾಪೇಕ್ಷೆಯೂ ಉಳಿಯುವುದಿಲ್ಲ. ಆಗ ಶರೀರಾದಿಗಳ ಗೊಡವೆಯೂ ತಪ್ಪುವುದು. ಅಂಥವನೇ ನಿಜವಾದ ಭಕ್ತನು.

(ಹೋಲಿಸಿ ನೋಡಿರಿ:

"ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ |
ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ ||

ಏಕೆಂದರೆ, ಹುಟ್ಟಿದವನಿಗೆ ಮರಣವು ನಿಶ್ಚಯವು. ಸತ್ತವನಿಗೆ ಜನ್ಮ ನಿಶ್ಚಯವು. ಆದುದರಿಂದ ಪರಿಹರಿಸಲಾಗದ ಈ ವಿಷಯದಲ್ಲಿ ನೀನು ಶೋಕಿಸಬಾರದು.

—ಭಗವದ್ಗೀತಾ ೨-೨೭.

ಸತ್ತವರಿಗಳಲೇಕೆ ತನ್ನನು, ಹೊತ್ತವರು ಹೆತ್ತವರುಗಳು ತಾವ್,
ಸತ್ತು ಹೋಗುವರಲ್ಲದುಳಿವರೆ ಮರುಗಲೇಕಿನ್ನು?|
ಮೃತ್ಯು ಬೆನ್ನಿನೊಳಿಹುದು, ತಾವಿನ್ನತ್ತು ಮಾಡುವುದೇನು? ಪೂರ್ವದ
ತೆತ್ತಿಗನು ನೀನೀಗ ರಕ್ಷಿಸು ನಮ್ಮನನವರತ||

ಕನಕದಾಸರು—ಹರಿಭಕ್ತಸಾರೆ-೯೨.)

೭೧೯

ಬೊಮ್ಮಲಾಟವಾಡು ಬೊಮ್ಮಲನಾಡಿಂಚು, ಭುವಿನಿ ಜನುಲುಚೂಡ ಬೊಲುಪುಮೀರ
ತಾನುಮೆರಗಿಯುಂಡಿ ದೈವ ಮಡಿಂಚುರಾ, ವಿಶ್ವದಾಭಿರಾಮ ವಿನುರ ವೇಮ.

ಬೊಂಬೆಯೊಟದವನು ಬೊಂಬೆಯಾಡಿಸುವನು.
ಧರಣಿ ಜನರ ನೋಟ-ದೆಲ್ಲಿ ಮೀರಿ.
ತಾನು ಮರೆಯೊಳಿದ್ದು ದೈವವಾಡಿಸುವನು.
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನಿಗೆ 'ಸರ್ವಾಂತರ್ಯಾಮಿ' ಎನ್ನುತ್ತಾರೆ. ಹಾಗೆಂದರೇನು? 'ಸರ್ವಾನ್ ಅಂತರ್ ಸ್ಥಿತ್ವಾ ಯಮಯತೇ ಇತಿ; 'ಸರ್ವರನ್ನೂ ಒಳಗೆ ಇದ್ದುಕೊಂಡು ನಿಯಂತ್ರಿಸುವನಾದ್ದರಿಂದ,' ಅವನು ಸರ್ವಾಂತರ್ಯಾಮಿಯೆನಿಸಿದ್ದಾನೆ. ಸಕಲ ಪ್ರಾಣಿಗಳು ಮಣಿಗಳಾದರೆ, ಪರಮಾತ್ಮನು ಸೂತ್ರದೆಳೆಯಂತೆ.

ಪರಮಾತ್ಮನ ಲೀಲೆಯನ್ನು ಸುಂದರವಾಗಿ ತಿಳಿಸಲು, ಬೊಂಬೆಯಾಟದ ದೃಷ್ಟಾಂತವೇ ಲೇಸು. ಸಕಲ ಜೀವಿಗಳೂ ಬೊಂಬೆಗಳಂತೆ. ಬೊಂಬೆಗಳಿಗೆ ದಾರ ಕಟ್ಟಿರುತ್ತಾರೆ. ಹೀಗೆ ಕಟ್ಟಿದ ಸೂತ್ರಗಳನ್ನು ಅಂದರೆ ಎಳೆಗಳನ್ನು ಹಿಡಿದುಕೊಂಡು ಮರೆಯಲ್ಲಿ ಇಲ್ಲವೆ ಪ್ರದರ್ಶನದ ಅಟ್ಟದ ಕೆಳಗೆ ಸೂತ್ರಧಾರ ಕುಳಿತಿರುತ್ತಾನೆ. ಸೂತ್ರಧಾರ ಎಳೆ ಜಗ್ಗಿ ಬಿಟ್ಟಂತೆಲ್ಲ ಬೊಂಬೆ ಚಲಿಸುತ್ತದೆ. ರಾಟೆ ನೂಲಲೂ ಬಹುದು. ಜಗತ್ತಿನ ಕರ್ಮಗಳೂ ಇದೇ ರೀತಿ. ಸೂತ್ರಧಾರ ಅದೃಶ್ಯ. ಪರಮಾತ್ಮ ಅವ್ಯಕ್ತ. ಇಂದ್ರಿಯಗಳಿಗೆ, ಮನಸ್ಸಿಗೆ ವ್ಯಕ್ತವಾಗದವನು ಅವನು. ಆದರೂ ನಡೆಯುವದೆಲ್ಲ ದೈವಲೀಲೆಯೇ ಆಗಿದೆ. ಅವನರಿಯದೆ ಗಿಡದೆಲೆಯೂ ಅಲುಗದು.

(ಅಭಿಪ್ರಾಯಗಳನ್ನು ಹೋಲಿಸಿ ನೋಡಿರಿ:

ಮಣ್ಣು ಮಣ್ಣಿನೊಳುದಿಸಲದಲಿ, ಮಣ್ಣು ಬೊಂಬೆಗಳಾಗಿ ರಂಜಿಸಿ, ಮಣ್ಣಿನಾಹಾರದಲಿ ಜೀವವ ಹೊರೆದು ಉಪಚರಿಸಿ |

ಮಣ್ಣಿನಲಿ ಬಂಧಿಸಿದ ದೇಹವ, ಮಣ್ಣುಗೂಡಿಸಬೇಡ ಜ್ಞಾನದ ಕಣ್ಣ ದೃಷ್ಟಿಯನಿತ್ತು ರಕ್ಷಿಸು ನಮ್ಮನನವರತ ||

ಕನಕದಾಸರು - ಹರಿಭಕ್ತ ಸುಧೆ - ೯೧.]

"ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ |
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ|| "

ಗೀತಾ ೧೮-೬೧

ಎಲೈ ಅರ್ಜುನ, ಸರ್ವ ಪ್ರಾಣಿಗಳನ್ನು ಯಂತ್ರಾರೂಢವಾದ ಬೊಂಬೆಗಳಂತೆ ಮಾಯೆಯಿಂದ ತಿರುಗಿಸುತ್ತ, ಈಶ್ವರನು, ಸರ್ವ ಜೀವದ ಹೃದಯ ಪ್ರದೇಶದಲ್ಲಿ ನೆಲೆಸಿರುತ್ತಾನೆ.)

೭೨೦

ವಾಕ್ಕುಶುದ್ಧಿಲೇನಿವಾಡು ಚಂಡಾಲುಂಡು, ಪ್ರೇಮಶುದ್ಧಿಲೇಕ ಪೆಟ್ಟು ಟಿಟ್ಲು ?
ನೊಸಲು ಭಕ್ತುಡೈನ ನೋರುತೋಡೇಲಯಾ, ವಿಶ್ವದಾಭಿರಾಮ ವಿನುರ ವೇಮ

ನುಡಿಯು ಶುದ್ಧವಿರದೆ, ನೀಚ ಚಂಡಾಲನು;
ಪ್ರೇಮಶುದ್ಧಿಯಿರದೆ, ಪಾತ್ರನೆಂತು ?
ತೋರಲು ಹಣೆ ಭಕ್ತ; ತೋಳ ಬಾಯಿಯವನು.
ವಿಶ್ವದಾಭಿರಾಮ ಕೇಳು ವೇಮ.

'ಸತ್ಯಂ ವದ; ಧರ್ಮಂ ಚರ' ಸತ್ಯವನ್ನು ಹೇಳು; ಧರ್ಮವನ್ನು ಆಚರಿಸು, ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತಿದೆ. ಮಾತಿನಲ್ಲಿ ದೋಷವಿರಬಾರದು; ದ್ವೇಷವಿರಬಾರದು; ರಾಗ ಪ್ರಚೋದನೆ ಇರಬಾರದು; ವಿಷಯಾಸಕ್ತಿ ಇರಬಾರದು; ಅಸೂಯೆ ಇರೆಬಾರದು; ಆಶೆ ಇರಬಾರದು; ಇಂಥ ನೂತು ಹಸನಾದ ಮಾತು; ಶುದ್ಧವಾದ ಮಾತು. ಶುದ್ಧ ಮಾತು ಇಲ್ಲದವನು ಕೇಳುಮಟ್ಟದವನು, ಪರಪೀಡಕನು; ಅನ್ಯರ ಮನಸ್ಸನ್ನು ಹಿಂಸಿಸುವವನು. ಅಷ್ಟೇಕೆ, ಅವನನ್ನು ನೀಚ ಚಂಡಾಲನೆನ್ನಬಹುದು.

ಬಾಹ್ಯ ವಿಷಯ ವಸ್ತುಗಳ ಆಕರ್ಷಣೆ, ಕಾಮ. ಆತ್ಮಪರ ಆಕರ್ಷಣೆ ಪ್ರೇಮ. ಇಂಥ ಪ್ರೇಮವು, ಅಂಥ ಇಂಥ ಸಿದ್ಧಿ-ಮಹಿಮೆಗಳನ್ನು ಹೊಂದುವ ಆಶೆಯಿಂದ ಯುಕ್ತವಾಗಿರಕೂಡದು. ಅದು ಶುದ್ಧವಾಗಿರಬೇಕು. ಹೀಗೆ ಪ್ರೇಮಶುದ್ಧಿ ಇರುವವನು ಮಾತ್ರ ಪರಮಾತ್ಮನನ್ನು, ಆ ಮನಸ್ಸಿನವನನ್ನು ಅನುಭವಿಸಿ ತಿಳಿಯಲು ಪಾತ್ರನಾಗುವನು. ಪ್ರೇಮಶುದ್ಧಿ ಇರದೆ ಪಾತ್ರನಾಗುವದೆಂತು?

ಲೋಕದಲ್ಲಿ ಕಾಣುವ ಭಕ್ತರ ಬಗೆಯೇ ವಿಚಿತ್ರ. ಅವರು ತಮ್ಮ ಭಕ್ತಿಯ ಪ್ರದರ್ಶನಕ್ಕೆ ನಿಂತಂತೆ ದಪ್ಪವಾಗಿ ವಿಭೂತಿ, ಗಂಧ ಇಲ್ಲನೆ ಕುಂಕುಮಾದಿಗಳಿಂದ ಹಣೆಯನ್ನು ಸಿಂಗರಿಸಿಕೊಳ್ಳುತ್ತಾರೆ. ಆದರೆ 'ಎಡೆಯ' ಮಡಿಕೆಯತ್ತ ನೋಡಿ, ಇವರು ಬಾಯಿ ಚಪ್ಪರಿಸುವರು. ಕುರಿಗಾಗಿ ಆಶಿಸುವ ತೋಳವು ಬಾಯಿಬಿಟ್ಟಂತೆ ಈ ಜನ.

೭೨೧

ತೋಲುಕಡುಪುಲೋನ ದೊಡ್ಡವಾಡಂಡಂಗ, ರಾತಿಗಲ್ಲಲೋನ ರಾಶಿಜೋಯ,
ರಾಯಿದೇವುಡೈನ ರಾಸುಲು ವ್ರಿಂಗಡಾ ? ವಿಶ್ವದಾಭಿರಾಮ ವಿನುರ ವೇಮ.

ತೊಗಲು ಹೊಟ್ಟೆಯಲ್ಲಿ ದೊಡ್ಡ 'ಅವನು' ಇರಲು,
ಕಲ್ಲು ಗುಡಿಗಳಲ್ಲಿ ರಾಶಿಯೇಕೆ ?
ಕಲ್ಲು ದೇವರೇನು ರಾಶಿಯ ನುಂಗುವನೇ ?
ವಿಶ್ವದಾಭಿರಾಮ ಕೇಳು ವೇಮ.

"ದೇಹೋ ದೇವಾಲಯಃ ಪ್ರೋಕ್ತಃ ಜೀವ ಏವ ಸದಾಶಿವ:" ದೇಹವೇ ದೇವಾಲಯವೆನ್ನಿಸುವುದು. ಜೀವವೇ ಸದಾಶಿವವಾಗಿದೆ. ಈ ದೇಹವು ತೊಗಲಿನ ಚೀಲದಲ್ಲಿ ಮಾಂಸ, ಮಜ್ಜ, ನರ-ನಾಡಿಗಳನ್ನು ಇರಿಸಿ ಮಾಡಿದಂತಿದೆ. ನಡುವಿನಿಂದ ಎದೆಯ ವರೆಗಿನ ಭಾಗಕ್ಕೆ 'ಆಡುವ ಮಾತಿನಲ್ಲಿ' ಹೊಟ್ಟೆಯೆನ್ನುವರು. ಹೃದಯವಿರುವುದು ಇಲ್ಲಿಯೇ. ಹೃದಯದಲ್ಲಿನ ('ಮಹತೋ ಮಹೀಯಾನ್') ದೊಡ್ಡದಕ್ಕಿಂತ ದೊಡ್ಡದಾದ ಆತ್ಮ [ಅಣೋರಣೀಯಾನ್]

ಅಣುವಿಗಿಂತ ಚಿಕ್ಕದಾಗಿ ಉಂಟು. ಹೀಗಿರುವಾಗ ಕಲ್ಲಿನ ಗುಡಿಯಲ್ಲಿ ಅನ್ನದ ರಾಶಿಯೇಕೆ? ಕಲ್ಲಿನ ಪ್ರತಿಮೆಯು, ಗ್ರಾಮವಾಸಿಗಳೆಲ್ಲ ತಂದಿಟ್ಟ 'ಎಡೆಯ ರಾಶಿ'ಯನ್ನು ನುಂಗುವುದೇ? ಇಲ್ಲದವರಿಗೆ ಅನ್ನ ನೀಡುವುದೇ ದೈವಕ್ಕಿಟ್ಟ ಪಾಲು. ಸರಿಯಾಗಿ ತತ್ತ್ವವರಿತು, ಆಚರಿಸಿದರೆ ಗುರಿ ಸಮೀಪಿಸಬಹುದು.

[ಹೋಲಿಸಿ ನೋಡಿರಿ :

"ಅಪ್ಸು ದೇವೋ ಮನುಷ್ಯಾಣಾಂ ದಿವಿ ದೇವೋ ಮನೀಷಿಣಾಂ।
ಕಾಷ್ಟ ಲೋಷ್ಟೇಷು ಮುರ್ಖಾಣಾಂ ಯುಕ್ತಸ್ಯಾತ್ಮನಿ ದೇವತಾ ||
– ನೃಸಿಂಹ ಪುರಾಣ.

ಅಗ್ನೌಕ್ರಿಯವತಾಂ ದೇವೋ ದಿವಿ ದೇವೋ ಮನೀಷಿಣಾಂ |
ಪ್ರತಿಮಾ ಸ್ವಲ್ಪ ಬುದ್ಧೀನಾಂ ಯೋಗಿನಾಂ ಹೃದಯೇ ಹರಿಃ ||

— ಕುಲಾರ್ಣವ ತಂತ್ರ.

೭೨೨

ನೇರನನ್ನವಾಡು ನೆರಜಾಣ ಮಹಿಲೋನ, ನೇರ್ತು ನನ್ನವಾಡು,ನೇರಡಿಪುಡು,
ಊರಕುನ್ನವಾಡೆ ಯುತ್ತಮೋತ್ತಮುಡೆಂದು, ವಿಶ್ವದಾಭಿರಾಮ ವಿನುರ ವೇಮ.

ತಿಳಿಯೆನೆನ್ನುವನು ತಿರೆಯೊಳು ಕಡುಜಾಣ.
ತಿಳಿದೆನೆನ್ನುವನು ತಿಳಿಯನೆಂದು.
ಮೌನವಾಗಿರುವವ ಮಹಿಮೋತ್ತಮನೆಂದು.
ವಿಶ್ವದಾಭಿರಾಮ ಕೇಳು ವೇಮ.

'ತನಗೆ ಯಾವುದು ತಿಳಿದಿಲ್ಲ ಎಂಬುದನ್ನು ತಿಳಿದವನು ಜಾಣ; ತನಗೆ ತಿಳಿದದ್ದಾದರೂ ಏನು? ಎಂಬುದನ್ನು ಸಹ ತಿಳಿಯದವನು ಕೋಣ' ಎನ್ನುವ ಗಾದೆಯಿದೆ. ಈ ಮಾತು ಆತ್ಮಸಾಕ್ಷಾತ್ಕಾರದ ವಿಷಯದಲ್ಲಿ ಇನ್ನೂ ಹೆಚ್ಚು ಅನ್ವಯವಾಗುತ್ತದೆ. ಏಕೆಂದರೆ ಆತ್ಮಸಾಕ್ಷಾತ್ಕಾರ, ತೀರ ಗಡುಚಿನದು. ಸಂತತ ಸಾಧನೆಯಿಂದ,ಬ್ರಹ್ಮತ್ವವನ್ನು ಅರಿತುಕೊಂಡು ಅನುಭವಿಸಬೇಕಾದುದು. ಇಂಥ ದಿವ್ಯ ಅನುಭವವಾದರೆ, ಆಗ ಏನಾಗುವುದು? ಆ ಅನುಭವವನ್ನು ಬಾಯಿಂದ ಹೇಳಲು ಮಾತೇ ಸಾಲದಾಗುತ್ತದೆ. ಅದು ಅನಿರ್ವಚನೀಯವಾಗುತ್ತದೆ. ಎಲ್ಲವೂ ತಾನೇ ತಾನಾದಾಗ ಯಾರಿಗೆ ಅದನ್ನು ಹೇಳುವದು? ಆ ಸ್ಥಿತಿಯಿಂದ ಇಳಿದ ಬಳಿಕ, ಅದನ್ನು ಸ್ಮರಿಸಲು ಮನಸ್ಸಿಗಾಗುದು. ಮನಸ್ಸಿನಲ್ಲಿ ಆದ ಅನುಭವವೇ; ಆದರೂ ಸ್ಮರಣೆಯಾಚೆಗಿನದು. ಬಟ್ಟಿಯ ಥಾನು ಬಿಚ್ಚಿದಾಗ ಅದರ ಅನುಭವ ಎಂದು ಋಷಿಗಳು ಹೇಳುತ್ತಾರೆ. ಹೀಗೆಯೇ ಎಂದು ಹೇಳಬೇಕೆಂದರೆ, ತಿಳಿಯದಂಥದು, ಅದು. ತಿಳಿಯೆ ಎನ್ನುವವನೇ ಕಡು ಜಾಣ. 'ತಿಳಿದೆ' ಎನ್ನುವವನು ತನ್ನ ಕಲ್ಪನೆಯ ಯಾವುದೋ ಪ್ರತಿಮೆಯನ್ನೋ, ಮನುಷ್ಯನನ್ನೋ, ಸ್ವಪ್ನದಲ್ಲಿ ಕಾಣಬಹುದು. ಅವನಿಗೆ ಅದರಾಚೆಯ

ನಿರ್ವಿಕಲ್ಪ ಸಮಾಧಿಯಲ್ಲಿ ಮಾತ್ರ ಅನುಭವ ವೇದ್ಯವಾದ ನಿತ್ಯಾನಂದವು ಎಂದೂ ತಿಳಿಯಲಾರದು. ಇದನ್ನು ವಿಚಾರಿಸಿದಾಗ, ಯಾವನು ಮೌನವಾಗುವನೋ, ಅವನು ಉತ್ತಮೋತ್ತಮನು. ಅತಿ ಹೆಚ್ಚು ಅನುಭವಿಸಿದವನು.

(ಹೋಲಿಸಿ ನೋಡಿರಿ:
ತನ್ನ ಮೂರ್ಖತನವನ್ನು ತಿಳಿದ ಮೂಢನು ಅಷ್ಟರ ಪಾಲಿಗಾದರೂ ಜಾಣನೇ; ಆದರೆ ತಾನೇ ಜಾಣನೆಂದು ಭಾವಿಸಿದ ಮೂಢನು ನಿಜವಾದ ಮೂರ್ಖನೇ ಸರಿ.”

ಗೌತಮಬುದ್ಧ-ಧಮ್ಮಪಾದ- ೬೩.)

“ಅವಿದ್ಯೆಯಲ್ಲಿ ಮುಳುಗಿ, ತಾವು ಧೀಮಂತರು ಮತ್ತು ಪಂಡಿತರು ಎಂದು ತಿಳಿದಿರುವ ಮೂಢರು, ಕುರುಡನ ನೇತೃತ್ವದಲ್ಲಿ ಸಂಚರಿಸುವ ಕುರುಡರಂತೆ, ಅನೇಕ ಅನರ್ಥಗಳಿಗೆ ಒಳಗಾಗಿ ಅಲೆದಾಡುವರು.

ಮುಂಡಕೋಪನಿಷತ್ -೧-೨-೮)

೭೨೩

ಮಾನಿನಿಮನೋಜ ಮದಿರಾನಂದೈಕ, ಲೋಲು ಡೊಲ್ಲ ಊರ್ಧ್ವಲೋಕ ಸುಖಮು,
ಮಾಲವಾಡ ಕುಕ್ಕ ಮರಿ ಯನ್ನ ಮೆರುಗುನಾ ? ವಿಶ್ವದಾಭಿರಾಮ ವಿನುರ ವೇಮ.

ಮಾನಿನೀಮನೋಜ ಮದಿರಾನಂದೈಕ-
ಲೋಲ ನೊಲ್ಲ ಊರ್ಧ್ವ ಲೋಕ ಸುಖವ.
ಮಾದರವನ ನಾಯಿ, ಮತ್ತೆ ಅನ್ನ ತಿನದು.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ಕೇವಲ ಹೆಣ್ಣಿನ ಮೇಲೆ. ಆನಂದವಾದರೋ ಕೇವಲ ಮದಿರೆಯ ಸೇವನೆಯಿಂದ ಆಗುವ ಆನಂದ. ಇದರಲ್ಲಿಯೇ ಲೋಲನಾಗಿರುವ ಮನುಷ್ಯ ಹೆಚ್ಚಿನ ಬ್ರಹ್ಮಲೋಕದ ಸುಖವನ್ನು ತಿರಸ್ಕರಿಸುವನು.

ಮಾದರವನ ನಾಯಿ ಮಾಂಸ-ತಿನ್ನುತ್ತದೆ. ಎಲುಬು ಕಡಿಯುತ್ತದೆ. ಎಲುಬು ಕಡಿಯುವಾಗ ತನ್ನ ನಾಲಗೆಗೆ ಗಾಯವಾಗಿ ರಕ್ತ ಸ್ರವಿಸಿದರೂ, ಅದು ಎಲುಬಿನಿಂದ ಬಂದುದೆಂದು ಭ್ರಮಿಸಿ, ಇನ್ನೂ ಹೆಚ್ಚು ಜೋರಿನಿಂದ ಎಲುಬು ಅಗಿಯುತ್ತದೆ. ಅದಕ್ಕೆ ಅನ್ನ ರುಚಿಸದು. ಅದೇ ರೀತಿ, ಮಾನಿನಿ ಮತ್ತು ಮದಿರೆಗಳಲ್ಲಿ ಲೋಲನಾಗಿರುವವನಿಗೆ ಊರ್ಧ್ವ ಲೋಕ ಸುಖ ರುಚಿಸದು.

ಮಾನಿನಿ ಮದಿರಾಲೋಲರಾದ ದೊರೆಗಳುಂಟು. ಮಂತ್ರಿಗಳುಂಟು. ಮುಖಂಡರುಂಟು. ಹಲವಾರು ವೇಷದ ಸಾಧುಗಳೂ ಗಾರುಡಿಗರೂ, ತಾಂತ್ರಿಕರೂ, ಬಿರುದಿನ ಜಗದ್ಗುರುಗಳೂ ಉಂಟು. ಇವರೆಲ್ಲ ಎಲುಬು ಕಡಿಯುವ ನಾಯಿಯಂತೆ, ನಮ್ಮ ನಾಶವನ್ನು ತಾವೇ ಆಹ್ವಾನಿಸುವರು; ಇತರರನ್ನೂ ಕೆಡಿಸುವರು.

(ಹೋಲಿಸಿ ನೋಡಿರಿ:

ನೂರುಬಾರಿ ಶರಣು ಮಾಡಿ ನೀರ ಮುಣುಗಲೇಕೆ ಪರ- |
ನಾರಿಯರ ನೋಟಕೆ ಗುರಿ ಮಾಡಿದಿ-ಮನ ಸೆರೆಯ ಮಾಡಿದಿ ||
ಸೋರೆಯೊಳು ಸುರೆ ತುಂಬಿ, ಮೇಲೆ ಹೂವಿನ ಹಾರ ಹಾಕಿ |
ಗೀರು ಗಂಧ ಅಕ್ಷತೆಯ ಧರಿಸಿದಂತೆ-ನೀ ಮೆರೆಸಿದಂತೆ ||
ಗಾರುಡಿಯ ಮತ ಬಿಟ್ಟು ನಾದ ಬ್ರಹ್ಮನ ಪಿಡಿದು |
ಸಾರಿ ಸಾರಿ ಮುಕ್ತಿಯನ್ನು ಶಮನದಿಂದ-ಮತ್ತೆ ಸುಮನದಿಂದ ||
ನಾರಾಯಣ ಅಚ್ಯುತಾನಂತಾದಿ ಕೇಶವನ |
ಸಾರಾಮೃತವನುಂಡು ಸುಖಿಸೊ ಲಂಡ ಜೀವನೆ-ಎಲೊ-ಭಂಡ ಜೀವವೆ||.

– ಕನಕದಾಸರು)

೭೨೪

ಎಂತಭೂಮಿದಿರಿಗಿ ಯೇ ಪಾಟ ಬಡುಚುನ್ನ, ನಂಟನೀಕ ಪ್ರಾಪ್ತಿ ವೆಂಟದಿರುಗು,
ಭೂಮಿ ಕ್ರೊತ್ತದೈನ ಭುಕ್ತುಲು ಕೊತ್ತಲಾ? ವಿಶ್ವದಾಭಿರಾಮ ವಿನುರ ವೇಮ.

ಎಷ್ಟು ಭೂಮಿ ತಿರುಗಿ ಎಷ್ಟು ಪಾಡುಬಡಲು,
ಅಂಟೆದದು ? ಪ್ರಾಪ್ತಿ; ಉಂಟು ಹಿಂದೆ.
ಭೂಮಿ ಹೊಸದಾದರು ಭುಕ್ತರು ಹೊಸಬರೇ ?
ವಿಶ್ವದಾಭಿರಾಮ ಕೇಳು ವೇಮ.

ತೀರ್ಥ ಎಂದರೆ ಪವಿತ್ರ ಸ್ಥಳ; ನದಿ, ಸಮುದ್ರಗಳ ದಡದಲ್ಲಿರುವಂಥದು. ಕ್ಷೇತ್ರ ಎಂದರೆ ಪವಿತ್ರ ಸ್ಥಳ; ಇತರತ್ರ ಇರುವಂಥದು. ತೀರ್ಥಯಾತ್ರೆಯೆಂದರೆ ಇಂಥ ಸ್ಥಳಗಳಿಗೆ ಹೋಗಿ ಬರುವುದು. ಇಂಥ ಇಂಥ ಕ್ಷೇತ್ರದರ್ಶನದಿಂದ, ಇಂಥ ಇಂಥ ತೀರ್ಥಕುಂಡದಲ್ಲಿ ಮುಳುಗಿ ಏಳುವುದರಿಂದ, ಪಾಪವೆಲ್ಲ ಪರಿಹಾರವಾಗುವುದು, ಮುಕ್ತಿ ದೊರೆಯುವುದು, ಎಂದು ಹಲವು ಹುಚ್ಚು ಆಶೆಗಳನ್ನು ಮುಗ್ಧ ಜನರಲ್ಲಿ ಪುರೋಹಿತರು ಮೂಡಿಸಿದ್ದಾರೆ. ಎಷ್ಟು ಭೂಮಿ ತಿರುಗಿ ತಿರುಗಿ ಕಷ್ಟಬಟ್ಟರೂ, ಅವನಿಗಾವ ಪ್ರಾಪ್ತಿಯೂ ಇಲ್ಲ. ಅವನ ಆರಬ್ಧ ಕರ್ಮ ಅವನ ಹಿಂದೆ ಉಂಟು. ಯಾತ್ರಿಕನು ಮೊದಲಿದ್ದವನೇ. ಹೋಗುವ ಸ್ಥಳಗಳು ಮಾತ್ರ ಹೊಸವು. ಯಾತ್ರೆ ಮಾಡುವವನು ರಾಗ, ಆಸಕ್ತಿ ತೊರೆದು, ಹೊಸ ಮನುಷ್ಯನಾಗಬೇಕು. ದಿನವೂ ಚಿತ್ತದಲ್ಲಿ ಬದಲಾವಣೆಗಳಾಗುತ್ತವೆ. ಅದು ಒಳಿತಿಗಾಗಿ ಆದರೆ ಚೆನ್ನು. ಚಿತ್ತಶುದ್ಧಿ ಅವಶ್ಯ. ತಿರುಗಾಟದಿಂದ ಕಾಲು ತೀಟೆ ಹೊರತು, ಹೊಸ ಭಾವ ಬರದು.

ಹೋಲಿಸಿ ನೋಡಿರಿ :—

“ ಕುರುತೇ ಗಂಗಾಸಾಗರಮನಂ ವ್ರತಪರಿಪಾಲನಮಥವಾ ದಾನಮ್ |
ಜ್ಞಾನವಿಹೀನೇ ಸರ್ವಮನೇನ ಮುಕ್ತಿರ್ನ ಭವತಿ ಜನ್ಮ ಶತೇನ ||

ಗಂಗೆ ಸಮುದ್ರ ಕೂಡುವ ಸ್ಥಾನಕ್ಕೆ ಹೋಗಬಹುದು; ವ್ರತ ಪರಿಪಾಲಿಸಬಹುದು, ಇಲ್ಲವೆ ದಾನ ಮಾಡಬಹುದು. ಸರ್ವಸಮತಾಭಾವವಿರದಿದ್ದರೆ, ಜ್ಞಾನವಿಹೀನನಾಗಿದ್ದರೆ, ನೂರು ಜನ್ಮ ಪಡೆದು ಬಂದರೂ ಮುಕ್ತಿ ಲಭಿಸದು.

—ಆಚಾರ್ಯ ಶಂಕರ.

ಅರ್ಥವಿಷಯಂಗಳ ಫಲವನರಿತು, ಪುಣ್ಯ |
ತೀರ್ಥಯಾತ್ರೆಗಳ ಮಾಡುವುದ ನಾನೊಲ್ಲೆ ||
ದೈತ್ಯಮರ್ದನ ಬಾಡದಾದಿಕೇಶವ ನಿನ್ನ |
ಕೀರ್ತನೆ ಗೈವರ ಸ್ತುತಿಕನೆಂದೆನಿಸೆನ್ನ ||

-ಕನಕದಾಸರು : ಕೀರ್ತನೆಗಳು)

೭೨೫

ಮನಸು ನಿಲ್ಪಲೇನಿ ಮಾಯವಿರಕ್ತುಲು, ಮನಸುಪಡುದು ರೊಕ್ಕ ಮಗುವಮೀದ,
ಇಟ್ಟವ್ಯರ್ಥಜನ್ಮ ಮೀಬ್ರತುಕೇಟಿಕಿ ? ವಿಶ್ವದಾಭಿರಾಮ ವಿನುರ ವೇಮ.

ಮನಸು ನಿಲಿಸದಂಥ ಮಾಯೆ-ವಿರಕ್ತ ಜನ;
ಮನಸಿಗಿಚ್ಛೆಯೋರ್ವ ಮಹಿಳೆ ಮೇಲೆ.
ನಿರರ್ಥಕ ಜನ್ಮದ ನಿಮ್ಮ ಬದುಕು ಏಕೆ ?
ವಿಶ್ವದಾಭಿರಾಮ ಕೇಳು ವೇಮ

ಮನಸ್ಸು ಸಹಜವಾಗಿ ಚಂಚಲವಾದುದು. ಅತ್ತ ಇತ್ತ ಹರಿಯುವುದು. ಕೋರಿಕೆಗಳು ಮನಸ್ಸಿನಲ್ಲಿ ಹುಟ್ಟುತ್ತವೆ. ಮನಸ್ಸು ಕೋರಿಕೆಗಳ ಭೋಗಕ್ಕಾಗಿ ಇಂದ್ರಿಯಗಳನ್ನು ಬಳಸುತ್ತದೆ. ಇಂದ್ರಿಯಗಳು ಭೋಗವಸ್ತುಗಳತ್ತ ಹರಿಯುತ್ತವೆ. ಈ ವಿಕ್ಷೇಪ ಕಾರ್ಯ ಸದಾ ನಡೆದಿರುವುದು. ವಿಷಯ ವಸ್ತುಗಳ ಬಣ್ಣ ಮನಸ್ಸನ್ನು ಆವರಿಸುವುದು. ರಾಗ ಹುಟ್ಟುವದು. ಸತತವಾಗಿ ರಾಗಯುಕ್ತರಾಗಿದ್ದರೆ, ಅನುರಾಗ ಹುಟ್ಟುವುದು. ಅಂಥವರೇ ಅನುರಕ್ತರು. ಇದರ ವಿಪರೀತ ಕ್ರಮ ವಿರಕ್ತರದು. ಬಾಹ್ಯ ವಸ್ತುಗಳಲ್ಲಿ ಇಂದ್ರಿಯಗಳು ನಿರತವಾಗದಂತೆ ತಡೆಯುವುದು. ಧನ ಎದುರಿಗಿದ್ದರೂ ಅದನ್ನು ನೋಡದಿರುವುದು, ಮುಟ್ಟದಿರುವುದು ಇತ್ಯಾದಿ. ಇನ್ನೂ ಮುಂದೆ ಹೋಗಿ, ಅದನ್ನು ಮನಸ್ಸಿನಲ್ಲಿ ಬಯಸದಿರುವುದು, ವಿರಕ್ತಿ. ಆದರೆ ತಾವು ' ವಿರಕ್ತ ' ರೆಂಬ ಹೆಸರು ಹೊತ್ತು ತಿರುಗುವವರು, ಮಾಯೆಯ ವಿರಕ್ತರು. ಅಂದರೆ ಅಜ್ಞಾನದ ವಿರಕ್ತರು. ವಿರಕ್ತಿಯ ನಿಜವಾದ ಜ್ಞಾನವಿಲ್ಲದೆ, ವಿರಕ್ತರೆಂದು ಭ್ರಮಿಸಿಕೊಂಡವರು. ಇಂಥವರು ತಮ್ಮ ಇಂದ್ರಿಯನಿಗ್ರಹ ಮಾಡಿಕೊಳ್ಳಲು ಅಸಮರ್ಥರಾಗಿರುವರು. ಎದುರಿಗೆ ಸ್ತ್ರೀ ಕಂಡಳೋ, ಅವಳಲ್ಲಿ ಮನಸ್ಸು. ಹರಿಸುವರು. ಹೀಗೆ ಸೋಗಿನ ವಿರಕ್ತರ ಜನ್ಮ ನಿರರ್ಥಕ. ಅರ್ಥವಿಲ್ಲದ್ದು. ಅವರ ಬಾಳು ನಿಷ್ಪ್ರಯೋಜಕ. ಅಂಥವರಿಂದ ಆಗಬೇಕಾದುದೇನೂ ಇಲ್ಲ.

(ಹೋಲಿಸಿ ನೋಡಿರಿ :

' ಅವನ ಪ್ರಸಾದದಿಂದಲೂ, ಅವನಲ್ಲಿ ಮನಸ್ಸನ್ನು ಅರ್ಪಿಸುವುದರಿಂದಲೂ, ತತ್ತ್ವ ಭಾವನೆಯಿಂದಲೂ, ಕೊನೆಯಲ್ಲಿ ವಿಶ್ವಬಂಧಕವಾದ ಮಯಾನಿವೃತ್ತಿಯು ಉಂಟಾಗುತ್ತದೆ.''
ಶ್ವೇತಾಶ್ವೇತರ ಉಪನಿಷತ್ ೧-೦೦)

" ನಾರೀ ಸ್ತನಭರನಾಭೀ ದೇಶಂ ದೃಷ್ಟ್ವಾ ಮಾಯಾಮೋಹಾವೇಶಂ |
ಏತನ್ಮಾಂಸವಸಾದಿವಿಕಾರಂ ಮನಸಿ ವಿಚಿಂತಯ ವಾರಂ ವಾರಂ ||

ಸ್ತ್ರೀಯ ಸ್ಫುಟಗೊಂಡ ಸ್ತನ, ಮತ್ತು ನಾಭಿ ಭಾಗವನ್ನು ಕಂಡು ಮಾಯಾ ಮೋಹದ ಆವೇಶಕ್ಕೆ ಬಲಿಯಾಗುವನು. ಈ ದೇಹವೆಲ್ಲ ಮಾಂಸ, ರಕ್ತ ಮಜ್ಜಾದಿಗಳ ಗೂಡೆಂದು ಮನದಲ್ಲಿಯೇ ಬಾರಿ ಬಾರಿಗೆ ವಿಚಾರಿಸು.

-ಆಚಾರ್ಯ ಶಂಕರ)

೭೨೬

ಕಾಶಿನೀಳ್ಗುಮೋಸಿ ಕಾಳ್ಗುವೊಗಮುವಾಚಿ, ಯೆಂದುಸುಖಮುಲೇಕ ಯೆಂಡಿ ಯೆಂಡಿ,
ಚಚ್ಚಿವೆನುಕ ಮುಕ್ತಿ ಸಾಧಿಂಪಗೊಲರೊಕೋ ! ವಿಶ್ವದಾಭಿರಾಮ ವಿನುರ ವೇಮ.

ಕಾಶಿ ನೀರು ಹೊತ್ತು, ಕಾಲು ಮುಖವ ತೊಳೆದು,
ಕಾಣದಲ್ಲೂ ಸುಖ ಕೊರಗಿ ಕೊರಗಿ,
ಸತ್ತಬಳಿಕ ಮುಕ್ತಿ ಸಾಧಿಸುವರೇನೋ ?
ವಿಶ್ವದಾಭಿರಾಮ ಕೇಳು ವೇಮ.

ಎಲ್ಲರೂ ತೀರ್ಥಯಾತ್ರೆ ಮಾಡಲೇಬೇಕೆಂದು ಚತುರಾಶ್ರಮವಾದಿಗಳ ನಿಯಮ. ತೀರ್ಥ ಎಂದರೆ ನದಿ ಸರೋವರಗಳ ದಡದ ಸ್ಥಳಗಳು ಎಂದೇ ವ್ಯಾವಹಾರಿಕ ಅರ್ಥ. ಗಂಗೆಯ ದಡದ ಮೇಲಿರುವ ಕಾಶಿ ಇಂಥ ತೀರ್ಥಗಳಲ್ಲಿ ಶ್ರೇಷ್ಠವಾದುದು. ಕಾಶಿಯಲ್ಲಿ ಗಂಗೆಯ ದಡದ ಮೇಲೆ ವಾಸವಾಗಿ, ನೀರು ಹೊತ್ತು ತಂದು, ಕಾಲು ಕೈ ಮುಖ ಮೈ ತೊಳೆದು, ಬೇಸರಗೊಳ್ಳುತ್ತಾನೆ. ಅಲ್ಲಿಯೂ ಅವನಿಗೆ ಸುಖವೆನಿಸುವದಿಲ್ಲ. ಏಕೆಂದರೆ ಸುಖಾನುಭವದ ಆಸಕ್ತಿ ಮನಸ್ಸಿನಲ್ಲಿ ಇರುವ ವರೆಗೆ, ಚಿಂತೆ ಬಲವಾಗಿ ಪೀಡಿಸುವುದು. ಇಂದ್ರಿಯಗಳನ್ನು ನಿಗ್ರಹಿಸಿ, ಆಶೆ ಕಡಿದೊಗೆಯದೆ ಕಾಶಿ ನೀರು ಹೊತ್ತರೆ, ಸತ್ತಮೇಲೆ ಮುಕ್ತಿ ದೊರಕಿಸುವ ಹಂಚಿಕೆ ಮಾಡಿರುವರೇನೋ ಎನ್ನಿಸುತ್ತದೆ.

ತೀರ್ಥವೆಂದರೆ ಮಹಾಪುರುಷರಿರುವ ಸ್ಥಾನ. ' ನ ಅಯೋಧ್ಯಾ ರಾಮೇಣ ವಿನಾ; ಯತ್ರ ರಾಮಃ ತತ್ರ ಅಯೋಧ್ಯಾ ' "ರಾಮನಿಲ್ಲದೆ ಅಯೋಧ್ಯೆ ಇರದು. ರಾಮನೆಲ್ಲಿಯೋ ಅಲ್ಲಿಯೇ ಅಯೋಧ್ಯೆ." ಎಂದು ಭರತ ಭಾವಿಸಿ, ಅರಣ್ಯಕ್ಕೆ ಹೋಗುತ್ತಾನೆ. ಅದೇ ತೀರ್ಥ. " ಸ ಸ್ನಾತೋ ಯೋ ದಮಸ್ನಾತಃ ಶ್ರದ್ಧಾಶುದ್ಧ ಮನೋಮಲಃ " ಎಂದರೆ " ಆತ್ಮ ನಿಗ್ರಹದಲ್ಲಿ ಮುಳುಗಿದವನು, ಮತ್ತು ಶ್ರದ್ಧೆಯಿಂದ ಮನದ ಕಲುಷವನ್ನು ತೊಳೆಯುವವನೇ ನಿಜವಾಗಿ ಸ್ನಾನ ಮಾಡಿದವನು. " ಎಂಬ ಆಳ ಭಾವದಿಂದ ಸ್ನಾನ ಮಾಡಿದರೆ, ಶ್ರದ್ಧೆಯಿಂದ ಬಾಳಿದರೆ, ಸಾಕು.

(ಹೋಲಿಸಿ ನೋಡಿರಿ :

ಕಾಶಿ ವಾರಣಾಸಿ ಕಂಚಿ ಕಾಳಹಸ್ತಿ ರಾಮೇಶ್ವರ |
ಏಸು ದೇಶ ತಿರುಗಿದರೆ ಬಾಹುದೇನೋ-ಅಲ್ಲಿ ಆಹೋದೇನೋ||
ದೋಷನಾಶೆ ಕೃಷ್ಣವೇಣಿ ಗಂಗೆ ಗೋದಾವರಿ ಭವ-|
ನಾಶಿ ತುಂಗಭದ್ರೆ ಯಮುನೆ ವಾಸದಲ್ಲಿ-ಉಪವಾಸದಲ್ಲಿ ||
ಮೀಸಲಾಗಿ ಮಿಂದು ಜಪ ತಪ ಹೋಮ-ನೇಮಗಳ |
ಏಸು ಬಾರಿ ಮಾಡಿದರೂ ಫಲವೇನೋ ಅದು ಫಲವೇನೋ ||
ವಾಸುದೇವನೆಂಬ ಒಳಗಿದ್ದ ಹಂಸನ ಸೇರಿ |
ಲೇಸನುಂಡು, ಮೋಸಗೊಳದೆ, ಮುಕ್ತನಾಗೋ-ನೀ ಶಕ್ತನಾಗೋ ||

ಕನಕದಾಸರು- ಕೀರ್ತನೆಗಳು.)

೭೨

ಚದುವ ಜದುವ ನೇಲ ? ಸನ್ಯಾಸಿಕಾನೇಲ ? ಷಣ್ಮತಮುಲ ಜಿಕ್ಕಿ ಚಾವನೇಲ ?
ಹರುನಿ ಭಜನ ಜೇಸಿ, ಯಾತ್ಮಲೋದೆಲಿಯುಂಡಿ, ವಿಶ್ವದಾಭಿರಾಮ ವಿನುರ ವೇಮ.

ಓದನೋದಲೇಕೆ ? ಸಂನ್ಯಾಸವು ಏಕೆ ?
ಷಣ್ಮತದಲಿ ಸಿಕ್ಕು ಸಾಯಲೇಕೆ ?
ಹರನ ಭಜನೆಗೈದು ಆತ್ಮದಿಹುದನು ತಿಳಿ.
ವಿಶ್ವದಾಭಿರಾಮ ಕೇಳು ವೇಮ.

ತತ್ತ್ವ ಅಂದರೆ ಬ್ರಹ್ಮತ್ವವನ್ನು ತಿಳಿದುಕೊಂಡಮೇಲೆ ಹೆಚ್ಚಿನ ಗ್ರಂಥಪರಿಚಯದಿಂದ ಏನಾಗಬೇಕಾಗಿದೆ ? ಕೇವಲ ಮಂಡನ-ಖಂಡನಗಳಲ್ಲಿ ಆಸಕ್ತರಾದ ' ದಿಗ್ವಿಜಯ. ಪಂಡಿತ ' ರಿಗೆ ಓದಿನ ಹಂಬಲ. ಓದಿನಲ್ಲಿ ಕಾಲ ಕಳೆದು ಸಾಧನವನ್ನೂ ಕಡೆಗಣಿಸುವ ಓದುಗುಳಿಗಳವರು.

ಕರ್ಮಗಳನ್ನು ತೊರೆಯುವುದು ಸನ್ಯಾಸವೆಂದು ತಿಳಿವಳಿಕೆ. ' ಕರ್ಮದಿಂದ ಬದ್ಧ; ವಿದ್ಯೆಯಿಂದ ಮುಕ್ತ ! ಕಾರಣ ಕರ್ಮತ್ಯಾಗ ಬೇಕು, ಎಂದು ವಾದ. ಸಂನ್ಯಾಸದ ಗುರಿಯಾದರೂ ಏನು ? ಆಶೆಯನ್ನು ಬಿಡುವುದು. ಆಶೆ ಏನನ್ನು ಕುರಿತು ? ಕರ್ಮಫಲವನ್ನು. ಅಂದಮೇಲೆ, ಕರ್ಮ ಫಲದ ಆಶೆಯಿಲ್ಲದೆ, ಕರ್ಮ ಮಾಡಿದರೆ ತೀರಿತು. ನಿಷ್ಕಾಮ ಕರ್ಮವೇ ಗುರಿಯಾಗಬೇಕು. ನಿಷ್ಕಾಮಕರ್ಮಿಯಾದವನಿಗೆ ಕರ್ಮಬಾಧೆಯಿಲ್ಲ. ಸಂನ್ಯಾಸಿಗೆ ತನ್ನ ಮೋಕ್ಷಫಲದ ಆಶೆಯಾದರೂ ಉಂಟು. ನಿಷ್ಕಾಮ ಕರ್ಮಿ ಅದನ್ನೂ ಮೀರಿದ ಅವಸ್ಥೆಗೇರಿದವನು. ಅಂದಮೇಲೆ, ಕರ್ಮಯೋಗಿಯಾದರಾಯಿತು. ಸಂನ್ಯಾಸವು ಏಕೆ ?

ಸಂನ್ಯಾಸಿಯ ಇನ್ನೊಂದು ಲಕ್ಷಣವೆಂದರೆ, ನಿಸ್ಸಂಗಿಯಾಗಿರುವದು. ತನ್ನ ಪೂರ್ವದ ಹಿತಸಂಬಂಧ ಬಿಡುವುದು. ಜಾತಿ ಮತಗಳ ಭಾವನೆ ಬಿಡುವುದು. ಶೈನ, ವೈಷ್ಣವ,

ಗಾಣಪತ್ಯ, ಶಾಕ್ತ, ಕೌಮಾರ, ಸೌರ ಇತ್ಯಾದಿ ಷಣ್ಮತಗಳ ಜಾಡುಬಿಟ್ಟರಾಯಿತು. ' ಏಕಂ ಸತ್ ವಿಪ್ರಾಃ ಬಹುಧಾ ವದಂತಿ ' ಒಂದೇ ' ಸತ್ಯ ' ವನ್ನು ಪ್ರಾಜ್ಞರು ಬಹು ಬಗೆಯಾಗಿ ನುಡಿದಿದ್ದಾರೆ. ಎಂದು ತಿಳಿದರೆ ಸಾಕು.

ಹೋಲಿಸಿ ನೋಡಿರಿ :

" ಬರಿದಹಂಕಾರದಲಿ ತತ್ತ್ವದ | ಕುರುಹು ಕಾಣದೆ ನಿನ್ನ ದಾಸರ |
ಜರೆದು ವೇದ ಪುರಾಣ ಶಾಸ್ತ್ರಗಳೋದಿ ಫಲವೇನು ? ||
ನರರು ದುಷ್ಕರ್ಮದಲಿ ಮಾಡಿದ | ದುರಿತವಡಗಲು ನಿಮ್ಮ ನಾಮದ |
ಸ್ಮರಣೆಯೊಂದೇ ಸಾಕು ರಕ್ಷಿಸು ನಮ್ಮನನವರತ || "

— ಕನಕದಾಸರು -ಹರಿಭಕ್ತಸಾರ -೧೦೦

" ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸ ಕರಾವುಭೌ |
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ||

ಸಂನ್ಯಾಸ (ಕರ್ಮ ತ್ಯಾಗ) ಮತ್ತು ಕರ್ಮಯೋಗ— ಈ ಎರಡೂ ಮೋಕ್ಷವನ್ನು ಉಂಟು ಮಾಡುವುವು. ಆದರೆ ಅವುಗಳಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವು ಉತ್ಕೃಷ್ಟವಾದುದು. "

ಭಗವದ್ಗೀತೆ —೫-೨.)

ಯಾವನು ನಮ್ಮ ಚಿಂತೆಗಳನ್ನು ತೆಗೆದುಕೊಂಡೊಯ್ಯುವನೋ ಪರಿಹರಿಸುವನೋ ಅಂಥ ಭವ ಹರನನ್ನು ಚಿತ್ತೈಕಾಗ್ರತೆಯಿಂದ ಭಜಿಸಿ, ಅವನೇ ಆತ್ಮಜ್ಯೋತಿಯ ಮಧ್ಯೆ ಪರಂಜ್ಯೋತಿಯಾಗಿ ಇರುವುದನ್ನು ತಿಳಿ.

೭೩

ಮನಸುಲೋನಬುಟ್ಟು ಮರಿಕೋರ್ಕುಲನ್ನಿಯು, ಗೋರ್ಕುಲಂದು ಮುಕ್ತಿ ಕುದುರಬಡದು
ಮನಮು ಬ್ರಹ್ಮಮನುಚು ಮದಿನೆರುಂಗಗಲೇರು, ವಿಶ್ವದಾಭಿರಾಮ ವಿನುರ ವೇಮು.

ಮನದಿ ಹುಟ್ಟುತಿಹವು ಮತ್ತೆ ಕೋರಿಕೆಗಳು.
ಕೋರಿಕೆಯಲಿ ಮುಕ್ತಿ ಕುದುರದಲ್ಲ.
ಮನವು ಬ್ರಹ್ಮವೆಂದು ಮನವ ತಿಳಿದುಕೊಳರು.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸಿನಲ್ಲಿ ಕೋರಿಕೆಗಳು ಹುಟ್ಟುತ್ತಿವೆ. 'ಸುಖಕ್ಕೆ ದಾಹ ನಿತ್ಯವಾಗಿರುವುದರಿಂದ ಆಸೆಯು ಅನಾದಿಯಾಗಿದೆ.' "ತಾಸಾಮನಾದಿತ್ವಂ ಚಾಶಿಷೋ ನಿತ್ಯತ್ವಾತ್" (ಪತಂಜಲಿ ಯೋಗ ಸೂತ್ರ ೪-೧೦) 'ಆಸೆಯು ನಿಮಿತ್ತ ಮತ್ತು ಪರಿಣಾಮದಿಂದ ಕೂಡಿದೆ. ಮನಸ್ಸಿನಲ್ಲಿ ಒಂದು ಆಶೆಯನ್ನು ಎಬ್ಬಿಸಿದರೆ, ಅದು ಪರಿಣಾಮವನ್ನುಂಟು ಮಾಡದೆ ಹೋಗುವುದಿಲ್ಲ. "ಹೇತುವು ಫಲ, ಆಶ್ರಯ ಮತ್ತು ಅವಲಂಬನದಿಂದ ಕೂಡಿರುವುದರಿಂದ ಇವುಗಳಿಲ್ಲದೆ ಇದ್ದರೆ ಅದೂ ಇರುವುದಿಲ್ಲ." (ಪತಂಜಲಿ ಯೋಗ ಸೂತ್ರ ೪-೧೧) ಇದರಿಂದ

ತಿಳಿಯುವುದೇನು? ಒಂದು ಕೋರಿಕೆಯನ್ನು ಮಾಡಿದಿರಿ ಎಂದಿಟ್ಟುಕೊಳ್ಳಿ. ಅದು ಬಳ್ಳಿಯಂತೆ ಹಬ್ಬುವುದು. ಮುಂದಿನ ಇನ್ನೊಂದು ಬಯಕೆಯು ಪೂರ್ವ ಕೋರಿಕೆಯ ಸ್ವಭಾವದಿಂದ ಹುಟ್ಟುವುದು. ಈ ಸರಪಳಿ ಎಲ್ಲಿಯವರೆಗೆ ? ಕೋರಿಕೆ ಕತ್ತರಿಸುವ ವರೆಗೆ. ಅಂದರೆ ಕೋರಿಕೆಗಳಿಗೆ ನಿಮಿತ್ತವಾಗಿರುವುದು, ಯಾವುದು? ಕೋರಿಕೆಗಳಿಗೆ ಆಶ್ರಯ ನೀಡುವುದು ಯಾವುದು? ಮತ್ತು ಕೋರಿಕೆಗಳು ಏನನ್ನು ಅವಲಂಬಿಸಿವೆ ? ಕೋರಿಕೆಗಳು ಕೋರಿಕೆಗಳಿಂದ. ಇವುಗಳನ್ನು ತೊಡೆಯುವುದೇ ಹಾದಿ. ಒಂದು ಕೋರಿಕೆ ಇಲ್ಲವಾದರೆ ಇನ್ನೊಂದು ಕೋರಿಕೆಯಿಲ್ಲ. ಕೋರಿಕೆಯಿಂದ ಮನಸ್ಸಿನ ಮೇಲೆ ಪರಿಣಾಮವುಂಟಾಗುವುದು, ಇದೇ ಸಂಸ್ಕಾರವಾಗಿ ಉಳಿದು ಬೆಡುವುದು. ಇದು ಹೋಗಬೇಕಾದರೆ, ಕರ್ಮ ಕ್ಷಯವಾಗುವವರೆಗೆ ಸಾಧನ ಮಾಡಬೇಕು. ಆಗ ಮನಸ್ಸು ಒಂದೇ ಸದ್ವಸ್ತು ಗ್ರಹಿಸಲು ಸಾಧ್ಯವಾಗುವುದು. "ಏಕ ಸಮಯದಲ್ಲಿ ಎರಡು ವಿಷಯಗಳನ್ನು ಗ್ರಹಿಸುವುದಕ್ಕೆ ಮನಸ್ಸಿಗೆ ಅಸಾಧ್ಯವಾಗಿರುವುದರಿಂದ" ಕೋರಿಕೆ ಹಿಂಗಲೇಬೇಕು. ಕೋರಿಕೆಯಲ್ಲಿ ಮುಕ್ತಿ ಇಲ್ಲ.

"ಜ್ಞಾನದ ಸಾರನಾದ ಪುರುಷನು ಅವಿಕಾರಿಯಾದುದರಿಂದ, ಮನಸ್ಸು ಪುರುಷನ ಆಕಾರವನ್ನು ತಾಳಿದಾಗ ಪ್ರಜ್ಞೆಯಿಂದ ಕೂಡುವದು." ಮನಸ್ಸು ಪುರುಷನ ಹತ್ತಿರ ಬಂದಾಗ, ಇದು ಮನಸ್ಸಿನ ಮೇಲೆ ಪ್ರತಿಬಿಂಬಿಸಿದಂತೆ ತೋರುತ್ತದೆ. ಮನಸ್ಸು ತತ್ಕಾಲಕ್ಕೆ ತಿಳಿಯುವಂತಾಗಿ, ಇದೇ ಪುರುಷನಂತೆ ಕಾಣುವುದು. ಮನದ ಶಕ್ತಿ ಹಿರಿದು. ಮನವು ಬ್ರಹ್ಮವೆಂದು ಮನಸ್ಸಿನ ಮಹಿಮೆಯನ್ನು ಲೋಕ ತಿಳಿಯರೇಕೋ?

೭೯

ಚದುವುಲನ್ನ ಚದಿವಿ ಚಾಲವಿವೇಕಿಂಪ, ಗಪಟಕಿನ್ನ ನೇಲ ಕಲುಗು ಮುಕ್ತಿ ?
ದಾಲಿಗುಂಟಕುಕ್ಕ ತಲಚಿನಚಂದಂಬು, ವಿಶ್ವದಾಭಿರಾಮ ವಿನುರ ವೇಮ.

ಓದನೆಲ್ಲ ಓದಿ ಒಳ್ಳೆ ವಿವೇಕಿಯೇನೆ,
ಕಪಟಿಯೆಂತು ಏನು ಕಾಣ ಮುಕ್ತಿ.
ತಿಪ್ಪೆಗುಂಡಿ ನಾಯಿ ತಳೆದ ಧ್ಯಾನ ಪರಿ.
ವಿಶ್ವದಾಭಿರಾಮ ಕೇಳು ವೇಮ.

ನಾಲ್ಕು ವೇದ ಓದಿರಬಹುದು; ಆರು ಶಾಸ್ತ್ರ ತಿಳಿದಿರಬಹುದು; ಹದಿನೆಂಟು ಪುರಾಣ ಕೇಳಿರೆಬಹುದು; ಇತಿಹಾಸಗಳೆರಡನ್ನು ತುದಿನಾಲಗೆಯ ಮೇಲೆ ಇರಿಸಿಕೊಂಡಿರಬಹುದು. ಒಳಿತು ಯಾವುದು ? ಕೆಡುಕು ಯಾವುದು ? ಎಂಬುದನ್ನು ತಿಳಿಯುವ ಶಕ್ತಿಯನ್ನೂ ಪಡೆದುಕೊಂಡಿರಬಹುದು. ಆದರೂ ತಿಳಿದೂ ತಿಳಿದೂ ಕೆಡುಕಿಗೆ ಬೀಳುವವರು ಇಲ್ಲದಿಲ್ಲ. 'ಇದು ಮಾಡಬಾರದಷ್ಟು ದೋಷಪೂರ್ಣ' ಎಂದು ತನಗೇ ಜೆನ್ನಾಗಿ ಗೊತ್ತಿರುವ ಕಾರ್ಯದಲ್ಲಿ ತನ್ನ ಮನಸ್ಸು ಹೋದರೆ, ಅಂಥ ಮನಸ್ಸಿನವನು ಎಂಥ ವಿವೇಕಿ ? ಓದುವುದು ಏತಕ್ಕಾಗಿ ? ಪರವಂಚನೆಗೋಸುಗವೇ ? ತನ್ನ ಅಂತಸ್ತಿಗೆ ಸರಿಯಾದ ಪರಿಶುದ್ಧಿ

ಇಲ್ಲದವನು ಹಾಗೆ ನಟಿಸುವುದೇಕೆ ? ಮುಗ್ಧ ಜನ ಅವನನ್ನೇ ಗುರುವೆಂದು ನಂಬಿ ಮೋಸಗೊಳ್ಳರೇ ? ಮನಸ್ಸಿನ ಶುದ್ಧಿ ಇಂಥವನಿಗೆ ಅಸಾಧ್ಯ. ಮುಕ್ತಿಯೂ ಇಲ್ಲವಷ್ಟೇ.

ಕಡಿಯಲು ಎಲುಬಿನ ತುಣುಕಿಗಾಗಿ ನಾಯಿ ತಿಪ್ಪೆ-ಗುಂಡಿ ಕೆದರುತ್ತದೆ. ಅದರಲ್ಲಿ ಮಗ್ನವಾಗಿ ಕೆದರುತ್ತ ಹೋಗುತ್ತದೆ. ಅಂಥ ನಾಯಿಯ ಧ್ಯಾನದಂತೆ, ಕಪಟಿಯ ಧ್ಯಾನ ಮತ್ತು ತಪ.
(ಹೋಲಿಸಿ ನೋಡಿರಿ:

ನಾಲುಕು ವೇದ-ಪುರಾಣ ಶಾಸ್ತ್ರ ಪಂಚಾಂಗ ಹೇಳಿಕೊಂಡು |
ಕಾಲಕಳೆಯುವುದೆಲ್ಲ, ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ||

ಕನಕದಾಸರು -ಕೀರ್ತನೆಗಳು

ಕೆಂಪು ಫಲದೊಳಗೆಲ್ಲ ಕೆಂಪು ಮೆಕ್ಕೆಯ ಹಣ್ಣು
ಕೆಂಪಾದರೊಳಗೆ ವಿಷವುಂಟೇ-ದುರ್ಜನರು
ಇಂತಿರ್ಪರಯ್ಯ ಸರ್ವಜ್ಞ.

--ಸರ್ವಜ್ಞಮೂರ್ತಿ

ಮುಗಿಲ ಮುಟ್ಟುವ ತೋರ್ಕೆ ತಾನೇನ ಮಾಡುವುದು ?
ತನ್ನ ಮನ ತಾನರಿತ ದೋಷದಲಿ ಬೀಳ್ವುದಾಗೆ.

-ತಿರುವಳ್ಳುವರುಕುರುಳ್

೭೮೦

ತಲ್ಲಿಕಡುಪುನುಂಡಿ ತಾಬುಟ್ಟನಪ್ಪುಡು, ಮೊದಟ ಬಟ್ಟಲೇದು ತುದಿ ನಿಲೇದು,
ನಡುಮು ಬಟ್ಟಗಟ್ಟ ನಗುಪಾಟುಕಾದೊಕೋ! ವಿಶ್ವದಾಭಿರಾಮ ವಿನುರ ವೇಮ.

ತಾಯಿಯುದರದಿಂದ ತಾನು ಜನಿಸಿದಾಗ,
ಆದಿಗಿಲ್ಲ ಬಟ್ಟೆ, ಅಂತ್ಯಕಿಲ್ಲ.
ನಡುವೆ ಬಟ್ಟೆಯುಡಲು ನಗುಪಾಟಲಲ್ಲವೆ?
ವಿಶ್ವದಾಭಿರಾಮ ಕೇಳು ವೇಮ.

ಯೋಗಿ ಅವಧೂತರು ಪಾಲಿಸುವ ನಗ್ನತೆಯು (ಸಂಪೂರ್ಣ ಇಲ್ಲವೆ ಲಂಗೋಟಿಯನ್ನಷ್ಟು ಉಳಿದು) ಯಾವುದರ ದ್ಯೋತಕ? ಜೈನ ಮುನಿಗಳಂತೂ ಪೂರ್ಣ ದಿಗಂಬರರಾಗಿರುವರು. ಜೈನರಲ್ಲಿ ಆರ್ತ, ಕ್ಷುಧಾ, ಪಿಪಾಸಾ, ಶೀತ, ಉಷ್ಣ, ಅರತಿ, ಆಕ್ರೋಶ ನಾಗ್ನ್ಯ ಇತ್ಯಾದಿ ಇಪ್ಪತ್ತೆರಡು ಪರೀಷಹಗಳನ್ನು ಶಾಂತ ಭಾವನೆಯಿಂದ ಸಹನೆಯಿಂದ ಸಹನ ಮಾಡಬೇಕೆಂಬ ನಿಯಮಗಳುಂಟು. ನಗ್ನತೆಯಲ್ಲಿರುವಾಗಲೂ ಮನಸ್ಸಿನಲ್ಲಿ ಯಾವ ಪ್ರಕಾರವಾಗಿಯೂ ವಿಕಾರ ಶಂಕೋಚಗಳಿಲ್ಲದಿರುವಿಕೆ. ಅವಧೂತರು ಭಾವ ದಿಗಂಬರ

ತ್ವವನ್ನು ಪಡೆಯುತ್ತಾರೆ. ಬಟ್ಟೆ ಇದ್ದರೂ ಇರಬಹುದು. ಆದರೆ ಭಾವದಿಗಂಬರತ್ವ ಸ್ಥಿತಿ ನೆಲೆಗೊಂಡಾಗ, ದೇಹ ದಿಗಂಬರವಾದರೂ ಆದರತ್ತ ಲಕ್ಷ್ಯವಿಲ್ಲ. ಅವರು ಬಾಲರಂತೆ (ಬಾಲವತ್) ಬಾಲಕರು ಕಲುಷಿತವಾಗದವರು. ಅವಧೂತ–ಯೋಗಿಗಳು ಭಾವ ಪರಿಶುದ್ಧರಾದವರು. ಅವರು ಮೂಲವನ್ನೇ ಕುರಿತು ವಿಚಾರ ಮಾಡುತ್ತಾರೆ. ಈ ಶರೀರ ಬರುವಾಗ ಹೇಗಿತ್ತು ? ಅದು ಹೋಗುವಾಗ ಆದರೊಂದಿಗೆ ಏನು ಇರುತ್ತದೆ? ನಗ್ನತೆಯಷ್ಟೇ ತಾನೇ? ನಗ್ನತೆಯೇ ಶರೀರದ ಸಹಜ ಸ್ಥಿತಿ. ಇದುವೇ 'ಸಹಜ ಯೋಗಿ' ಯ ದಾರ್ಶನಿಕ ದೃಷ್ಟಿ. ಆಸನ–ಕವಾಯತು, ವೇಷಭೂಷಣಗಳ ಸಾಧಕ ಇಲ್ಲವೆ ವೇಷಧಾರಿ ಯೋಗಿಗಳ ಮಾತು ಬೇರೆ.

ರಾಜಯೋಗವನ್ನು ಆವರಿಸಿ, ಅತಿಕ್ರಮಿಸಿದ ಸಹಜಯೋಗದಲ್ಲಿ ನಿಂತ ಮಹಾಯೋಗಿ ಹೇಳುತ್ತಾರೆ: ತಾಯಿಯ ಹೊಟ್ಟೆಯಿಂದ ತಾನು ಬರುವಾಗ, ಕೊನೆಗೆ ಮರಣಿಸುವಾಗ ಕೂಡ, ಶರೀರವು ಬಟ್ಟೆ ಹೊಂದಿರುವುದಿಲ್ಲ. ಮೊದಲೂ ಇಲ್ಲದ, ಕೊನೆಗೂ ಇಲ್ಲದ, ಬಟ್ಟೆಯನ್ನು ನಡುವೆ ಉಡಲೆಳಸುವ ಮನುಷ್ಯನ ಭಾವನೆ ಸರಳವಿರದೆ, ಏನೋ ನಗೆ ತರಿಸುವಂಥದಾಗಿದೆಯಲ್ಲವೇ ?

(ಹೋಲಿಸಿ ನೋಡಿರಿ:

ಹುಟ್ಟುತೇನು ತರಲಿಲ್ಲ, ಹೋಗುತೇನು ಒಯ್ಯಲಿಲ್ಲ !
ಸುಟ್ಟು ಸುಟ್ಟು ಸುಣ್ಣದ ಹರಳಾಯಿತೀ ದೇಹ ||
ಹೊಟ್ಟೆ ಬಲ ಕೆಟ್ಟಿದೆಂದು ಎಷ್ಟು ಕಷ್ಟ ಬಟ್ಟು ಪ್ರಾಣ !
ಬಿಟ್ಟು ಹೋಗುವಾಗ ಗೇಣು ಬಟ್ಟೆ ಕಾಣಲಿಲ್ಲವೊ ||

(– ಶ್ರೀ ಕನಕದಾಸರು ಕೀರ್ತನೆಗಳು)

೭೩೧

ಸೊಮ್ಮುಗನೆಡಿದನ್ಕ ಜ್ಯೋತಿಕಾವಲೆಗಾನಿ, ಸೊಮ್ಮುಗನ್ನವೆನ್ಕ ಜ್ಯೋತಿಯೇಲ?
ದೇವುಡ್ಮೆನವೆನ್ಕ ದೇಹಂಬು ಚಿಕ್ಕೇಲ? ವಿಶ್ವದಾಭಿರಾಮ ವಿನುರ ವೇಮು.

ಒಡನೆ ಸಿಗುವ ತನಕ, ಒಪ್ಪ ಬೆಳಕು ಬೇಕು.
ಒಡವೆ ಸಿಕ್ಕ ಬಳಿಕ, ಗೊಡವೆಯೇಕೆ ?
ದೇವರಾದ ಬಳಿಕ ದೇಹದ ತೊಡಕೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಕತ್ತಲೆಯಲ್ಲಿರುವ ಒಂದು ವಸ್ತು ಹುಡುಕುವಾಗ ಪ್ರಕಾಶಮಾನವಾದ ದೀಪವನ್ನು ಉಪಯೋಗಿಸುತ್ತೇನೆ. ಅದರಿಂದ ಆ ವಸ್ತು ಹುಡುಕಿ ಕಾಣುತ್ತೇವೆ. ಈಗ ಪ್ರಕಾಶದ ಕೆಲಸ ತೀರಿತು. ಮತ್ತೆ, ಕತ್ತಲೆ, ಮೊದಲಿನಂತೆ ಉಂಟು. ಆತ್ಮ ಶೋಧನೆಯನ್ನು ತಿಳಿಯಲು, ಸುಂದರ ದೃಷ್ಟಾಂತವಿದು. ಆತ್ಮ ಉಂಟು. ಅದು ಎಲ್ಲಿ ಉಂಟು? ಎಂಬುದನ್ನು ತಿಳಿಯಲು ದೇಹ ಬೇಕು! ಈ ಮಾನವ ದೇಹವು ಒಪ್ಪುವ ಬೆಳಕಿನಂತೆ. ಇತರ ದೇಹಗಳು ಬೇರೆ ವಿಧ.

ಅಲ್ಲಿ ಒಪ್ಪುವ ಬೆಳಕು ಇಲ್ಲ. ಕೇವಲ ಚಿತ್ತ ಅನಭಿವ್ಯಕ್ತ ಸ್ಥಿತಿಯಲ್ಲುಂಟು. ಮಾನವನ ಶರೀರದಲ್ಲಿಯಾದರೋ, ಮನಸ್ಸು–ಬುದ್ಧಿ ಮೇಲು ಸ್ಥಿತಿಯಲ್ಲಿವೆ. ಸಾಧನೆಯಿಂದ ಅವು ಅತಿ ಸೂಕ್ಷ್ಮವನ್ನು ಗ್ರಹಿಸಬಲ್ಲವು. ತತ್ತ್ವಗಳನ್ನು ತಿಳಿದಂತೆಲ್ಲ, ಆತ್ಮ ಅರಿಯಲು ಮನಸ್ಸು ಅರ್ಹವಾಗುತ್ತದೆ. ಬದಲಾವಣೆ ಕೊನೆಗೆ ವ್ಯಕ್ತವಾಗುವುದಷ್ಟೇ. ಒಮ್ಮೆ ಆತ್ಮ ಗೋಚರಿಸಿದರೆ, ತೀರಿತು. ಎಲ್ಲವೂ ತಾನೇ ತಾನಾಗಿ 'ಸರ್ವಂ ಖಲ್ವಿದಂ ಬ್ರಹ್ಮ' ಎನ್ನಿಸುವುದು. ಆಗ ಸಂಚಿತ ಕರ್ಮ ಫಲಗಳಾದ ಪುಣ್ಯ ಪಾಪಗಳು ನಾಶವಾಗುತ್ತವೆ. "ಅವನಿಗೆ ಎಲ್ಲಿಯವರೆಗೆ ಮೋಕ್ಷವಾಗುವುದಿಲ್ಲವೋ ಅಲ್ಲಿಯ ವರೆಗೆ ವಿಳಂಬ' (ಛಾಂದೋಗ್ಯ ಉಪನಿಷದ್ ೬–೧೪–೨)ಅವನಿಗೆ ನಂತರ ಕರ್ಮ–ಫಲ ಬಾಧೆ ಇಲ್ಲ. ಏಕೆಂದರೆ ಮನಸ್ಸು ಆ ಸ್ಥಿತಿಯನ್ನು ತಲುಪಿದವನು ಮಾಡುವ ಕಾರ್ಯವೂ, ದೈವಭಾವದಿಂದ ಕೂಡಿ ಉಂಟು. ದೈವ, ಕೇವಲ ನಿಮಿತ್ತ ಮಾತ್ರ. ಪಾಪ–ಪುಣ್ಯಗಳ ಸೊಡರು ಇಲ್ಲ. ಕರ್ಮಕ್ಷಯಕ್ಕಾಗಿ ದೇಹ ಬೇಕು. ಕರ್ಮಕ್ಷಯವಾದೊಡನೆ ದೇಹದ ತೊಡಕೇಕೆ ?

೭೩೨

ಬಯಲು ಬ್ರಹ್ಮಮನುಚು ಭಾಷಿಂಪುಚುಂದುರು, ಬಯಲದೇಲ ತಾನು ಬ್ರಹ್ಮಮಗನು?
ಬ್ರಹ್ಮಮ್ಮೆನ ಬಯಲು ಭಾವಮುಂದುಂಡಗಾ, ವಿಶ್ವದಾಭಿರಾಮ ವಿನುರ ವೇಮು.

ಬಯಲು ಬ್ರಹ್ಮವೆಂದು ಭಾಷ್ಯಗೆಯ್ಯುತಿಹರು.
ಬಯಲು ತಾನದೆಂತು ಬ್ರಹ್ಮವಹುದು ?
ಬ್ರಹ್ಮವಾದ ಬಯಲು, ಭಾವದಲ್ಲಿ ಇರದೆ ?
ವಿಶ್ವದಾಭಿರಾಮ ಕೇಳು ವೇಮ.

ಬಯಲು ಎಂದರೆ ಆಕಾಶ. " ಆಕಾಶಃ ತತ್ ಲಿಂಗಾತ್ " " ಆಕಾಶವೇ ಬ್ರಹ್ಮ; ಲಿಂಗವಿರುವದರಿಂದ. (ಲಿಂಗ ಅಂದರೆ ಗುರುತು ಅಥವಾ ಚಿನ್ಹೆ) " ಎಂದು ವೇದ ಉಪನಿಷತ್ತು–ಸ್ಮೃತಿಗಳಲ್ಲಿ ಬರುವ ವಿಷಯ ಪ್ರತಿಪಾದನೆಗಳನ್ನು ಸಮನ್ವಯಗೊಳಿಸಲ್ಪಟ್ಟ 'ಬ್ರಹ್ಮಸೂತ್ರ' ರಚಿಸಿದ ಬಾದರಾಯಣರು ಹೇಳುತ್ತಾರೆ (ಬ್ರ. ಸೂ. ೧-೧ ೨೨) ಈ ಸೂತ್ರವಾಕ್ಯದ ಮೇಲೆ ಭಾಷ್ಯ ಬರೆದ ಆಚಾರ್ಯತ್ರಯರ ವಿಚಾರ ದೋಡಿರಿ :

" ಆಕಾಶ ಶಬ್ದವು ಬ್ರಹ್ಮನನ್ನೇ ಸೂಚಿಸುತ್ತದೆ, ಎಂಬುದು ಯುಕ್ತವಾಗಿದೆ. ಏಕೆಂದರೆ ಶ್ರುತಿಯಲ್ಲಿ ಅದರ ಲಿಂಗಗಳನ್ನು ಹೇಳಿದೆ. 'ಈ ಭೂತಗಳೆಲ್ಲವೂ ಆಕಾಶದಿಂದಲೇ ಉತ್ಪನ್ನವಾಗುತ್ತವೆ' (ಛಾಂದೋಗ್ಯ ಉ. ೧-೯-೧) ಎಂಬುದು ಪರಬ್ರಹ್ಮದ ಲಿಂಗವು ; ಏಕೆಂದರೆ ಭೂತಗಳೆಲ್ಲವೂ ಪರಬ್ರಹ್ಮದಿಂದಲೇ ಉತ್ಪನ್ನವಾಗುತ್ತವೆ ಎಂದು ವೇದಾಂತ ವಾಕ್ಯಗಳೆಲ್ಲವೂ ಒಪ್ಪುತ್ತವೆ. "
–ಆಚಾರ್ಯ ಶಂಕರ

"ಆಕಾಶ ಶಬ್ದದಿಂದ ನಿರ್ದಿಷ್ಟನಾದವನು ಚಿದ್–ಅಚಿದ್ ವಿಲಕ್ಷಣನೂ ಸರ್ವಜ್ಞನೂ ಆದ ಬ್ರಹ್ಮನೇ. ನಿಖಿಲ ಜಗದೇಕ–ಕಾರಣತ್ವ ಪರಮಜ್ಯಾಯಸ್ತ್ವ, ಪರಾಯಣತ್ವ–ಇವು ಪರಮಾತ್ಮನ ಲಿಂಗಗಳು. ''
–ಆಚಾರ್ಯ ರಾಮಾನುಜ.

"ಆಕಾಶ ಶಬ್ದದಿಂದ ವಾಚ್ಯನಾದವನು ವಿಷ್ಣುವೇ ನಿರವಕಾಶವಾದ ಪರೋನರೀಯಸ್ತ್ವ ಮೊದಲಾದ ಲಿಂಗಗಳಿಂದ ಆಕಾಶವೆಂಬ ಹೆಸರು ವಿಷ್ಣುವಿಗೇ ವಾಚಕವಾದುದು." ಯಾರ ನಿಯಮದಿಂದ ಶ್ವಾಸ ಮಾಡುವವರಿಗೆ ಈ ಆಕಾಶವು ಅವಕಾಶವನ್ನು ಕೊಡುವುದೋ (ಅಂಥ ಆಕಾಶಕ್ಕೆ ಅವಕಾಶದಾತೃತ್ವವೂ ಸ್ವಾತಂತ್ರ್ಯವೂ ಇರಲಾರವು.) ಆದ ಕಾರಣ, ಆಕಾಶ ಶಬ್ದದಿಂದ ಹರಿಯೇ ಪ್ರತಿಪಾದ್ಯನು."

—ಆಚಾರ್ಯ ಮಧ್ವ

ಆಕಾಶ ಅಂದರೆ ಬಯಲು. ಅದು ಬ್ರಹ್ಮವು ಹೇಗೆ ? ಆಕಾಶವೆಂದರೆ ಭೂತಾಕಾಶವಷ್ಟೇ. "ಆ ಈ ಆತ್ಮನಿಂದ ಆಕಾಶವು ಉತ್ಪನ್ನವಾಯಿತು. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ....." ತೈತ್ತಿರೀಯ ಉಪ (೨-೧) ಆಕಾಶ ಬೇರೆ, ಆತ್ಮ ಬೇರೆ. ಹಾಗಾದರೆ ಆಕಾಶವು ಬ್ರಹ್ಮವೆನಿಸುವುದು ಹೇಗೆ ? ಭಾವಶುದ್ಧಿಯಿಂದ ಸರ್ವವೂ ಬ್ರಹ್ಮವೆಂದು ತಿಳಿದಾಗ ಆಕಾಶವೂ ಬ್ರಹ್ಮವೆನಿಸುತ್ತದೆ. ಬ್ರಹ್ಮವಾದ ಬಯಲು ಭಾವದಲ್ಲಿ ಇರದೇನು ?

೭೩೩

ಂಡ ನೀಡ ಚಂದ ಮೆರುಗನೇರ್ಚಿನವಾಡು, ಉಂಡು ನೆಲ್ಲಕಾಲ ಮೊಕ್ಕಚೋಟ
ತಿಂಡಿ ಪೋತುಯೋಗಿ ತಿರುಗುಚುನುಂಡರಾ, ವಿಶ್ವದಾಭಿರಾಮ ವಿನುರ ವೇಮ.

ಬಿಸಿಲು-ನೆರಳು ರೀತಿ, ಬಾಳುವವನು ತಿಳಿದು,
ಇರುವನೆಲ್ಲ ಕಾಲ ಒಂದೆ ತಾಣ,
ತಿಂಡಿ ಭಯಸಿ ಯೋಗಿ ತಿರುಗುತಿರುವನಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಮೊದಲು ಕತ್ತಲೆ ಉಂಟು. ಆಗ ವಸ್ತು ಯಾವದು ? ನೆರಳು ಯಾನದು? ಗುರುತಿಸಲು ಶಕ್ಯವಾಗದು, ಆ ನಂತರ ಪೂರ್ವದಲ್ಲಿ ರವಿ ಉದಿಸುವನು. ಬೆಳಗಾಯಿತು. ಈಗ ವಸ್ತುವಿನ ನೆರಳು ಪಶ್ಚಿಮಕ್ಕೆ ಬೀಳುವುದು. ಸೂರ್ಯ ನಡುನೆತ್ತಿಯ ಮೇಲೆ ಬಂದಾಗ, ನೆರಳು ವಸ್ತುವಿನ ಅಡಿಯಲ್ಲಿಯೇ ಬೀಳುವುದು. ಇಳಿಹೊತ್ತಿಗೆ ಸೂರ್ಯ ಪಶ್ಚಿಮ ದಿಗಂತದತ್ತ ಕಾಣಿಸುವಾಗ ನೆರಳು ಪೂರ್ವದೆಡೆಗೆ ಬೀಳುವುದು. ನೆರಳು ಚಲಿಸಿದಂತೆ ಕಾಣುವುದು. ನೆರಳು ಚಿಕ್ಕದು, ದೊಡ್ಡದು, ಆದಂತೆ ಬದಲಾವಣೆ ಹೊಂದುವಂತೆ ಕಾಣುವುದು. ನೆರಳಾದರೂ ಯಾವಾಗಲೂ ಇದೆಯೋ ? ಇಲ್ಲ. ಇಲ್ಲದ ನೆರಳು ಇಷ್ಟೆಲ್ಲ ಭಾವನೆ ಮೂಡಿಸುವುದು. ಇರುವುದು ವಸ್ತುವೊಂದೆ. ಅದು ಅಚಲ. ಆತ್ಮ ಹೀಗೆ. ನೆರಳಿನಂತೆ, ಪ್ರಪಂಚ. ಪ್ರಪಂಚದಲ್ಲಿ ಎಲ್ಲವೂ ಬದಲಾಗುತ್ತದೆ. ಜ್ಞಾನ ಸೂರ್ಯ ಮೂಡಿದಾಗ ವಸ್ತು-ನೆರಳು ಗೋಚರಿಸುತ್ತವೆ. ಒಮ್ಮೆ ವಸ್ತು ಗೋಚರಿಸಿದ ಮೇಲೆ ತೀರಿತು. ವಸ್ತುವನ್ನೇ ನೋಡುವಂತೆ ಎನ್ನಿಸುವುದು. ವಸ್ತುವಷ್ಟೇ ಕಾಣುವುದು. ಮೊದಲು ಅವಿದ್ಯೆಯ ಕತ್ತಲೆ ಆವರಿಸಿದಾಗ ಎಲ್ಲವೂ ಕತ್ತಲೆಯಾಗಿತ್ತು. ವಸ್ತು ಮತ್ತು ಅದರ ನೆರಳು ಎರಡೂ ಕತ್ತಲೆಯಲ್ಲಿ ಕಾಣದಂತಿದ್ದವು. ವಸ್ತುವನ್ನು ನೋಡಿದ ಮೇಲೆ ಮತ್ತೆ ಪ್ರಕಾಶದ ಅವಶ್ಯಕತೆಯಿಲ್ಲ.

ಮತ್ತೆ ಕತ್ತಲು. ಮೊದಲು ಸ್ವಪ್ನ; ಅನಂತರ ಸುಷುಪ್ತಿ. ಅದರಾಚೆ ತುರೀಯ. ಕತ್ತಲು, ಪ್ರಕಾಶ, ಪ್ರಕಾಶಾತೀತವಾದ ಕತ್ತಲು. ಇದು ತಿಳಿದವರ ಬಾಳಿನ ರೀತಿ. ಜ್ಞಾನಿಗಳ ಜೀವನಮಾರ್ಗ. ಇದನ್ನರಿಯಲು ಅಂಡಲೆಯುಬೇಕಿಲ್ಲ. ಸಾಧು ಎನಿಸಿಕೊಂಡ ಹಲ್ಲರು ಕಾಶಿ ಪ್ರಯೋಗ ತಿರುಗುವರು. ಭಿಕ್ಷಾಪಾತ್ರೆ ಹೊತ್ತು ತಿರುಗುವರು, ಇದೇಕೆ ? ದೇಶ ನೋಡುವ ಬಯಕೆ ತಣಿಸಲು ತೀರ್ಥಯಾತ್ರೆ! ಕಾಲು ತಿಂಡಿ ತೀರಿತಷ್ಟೇ! ಬಾಯಿ ತಿಂಡಿ ತೀರಿಸಲು ಬೇರೆ ಬೇರೆಯವರ ಮನೆಯ ತರತರದ ಭಿಕ್ಷಾನ್ನ. ಇಷ್ಟಾದರೆ, ಯೋಗಿಯೆನ್ನಬಹುದೇ ? ಗರ್ವನಾಶಕ್ಕಾಗಿ ಸಾಂಕೇತಿಕ ಭಿಕ್ಷಾಟನೆಯ ವಿಧಿಯ ಮಾತು ಬೇರೆ. ಆದರೆ ಕಣ್ಣಿಗೆ ಬೀಳುವ ಭಿಕ್ಷೆಯವರಲ್ಲಿ ಸಾಧುಗಳೆಷ್ಟು ಜನ ? ಕಡಿಮೆ.

೭೩೪

ಕರ್ಮಗುಣಮುಲನ್ನಿ ಕಡಬೆಟ್ಟನಡುವಮಿ, ದತ್ತ್ವಮೆಟ್ಲು ತನ್ನು ದಲುಗು ಕೊನನು,
ನೂನಲೇಕ ದಿನ್ನೆ ನೂವುಲವೆಲ್ಲುನಾ ? ವಿಶ್ವದಾಭಿರಾಮ ವಿನುರ ವೇಮ.

ಕರ್ಮಗುಣಗಳೆಲ್ಲ ಕೆಡೆಗಣಿಸಿ ನಡೆದರೆ,
ತತ್ತ್ವವೆಂತು ತನಗೆ ತಗಲಿ ಇಹುದು ?
ಎಣ್ಣೆ ಇರದೆ ದೀಪ ಎಳ್ಳಿಂದ ಉರಿವುದೆ ?
ವಿಶ್ವದಾಭಿರಾಮ ಕೇಳು ವೇಮ.

ಎಳ್ಳಿನಿಂದ ಎಣ್ಣೆ ತಯ್ಯಾರಾಗುತ್ತದೆ. ಎಳ್ಳು ಅರೆದರೆ ಎಣ್ಣೆ ಹೊರಬರುತ್ತದೆ. ಎಳ್ಳಿನಿಂದ ಎಣ್ಣೆ ಉಂಟಾಗಿದ್ದರೂ ಎಣ್ಣೆಯ ಗುಣವನ್ನು ಎಳ್ಳಿನಲ್ಲಿ ಕಾಣಲಾರೆವು. ಎಳ್ಳು ಪದಾರ್ಥದ ಘನರೂಪ. ಎಣ್ಣೆಯು ದ್ರವರೂಪ. ಅದರಿಂದ ಎಳ್ಳಿಗೆ ಕೇಶಾಕರ್ಷಣ ಶಕ್ತಿಯಿಲ್ಲ. ಎಣ್ಣೆಗೆ ಉಂಟು. ಎಣ್ಣೆ ಅರಳೆಯಿಂದ ಮಾಡಿದ ಬತ್ತಿಗುಂಟ ಕೇಶಾಕರ್ಷಣ ಶಕ್ತಿಯಿಂದಾಗಿ ಏರಬಲ್ಲದೆಂದೇ, ಬತ್ತಿ ಸಾವಕಾಶವಾಗಿ ಉರಿಯುತ್ತ ಎಣ್ಣೆಯನ್ನೂ ಉರಿಸುತ್ತ ಹೋಗುವುದು. ಅದರಿಂದ ಎಣ್ಣೆ ಇಂದೆ, ಎಳ್ಳಿನಿಂದ ದೀಪ ಉರಿಯಬಹುದೇ? ಎಂದು ಕೇಳಬಹುದು.

ನಮ್ಮ ದೇಹ ಮನಸ್ಸು ಬ್ರಹ್ಮ ಸೃಷ್ಟಿಯೇನೋ ನಿಜ. ಬ್ರಹ್ಮವಾಗುವುದು ಜೀವನದ ಗುರಿ ಎಂಬುದೂ ನಿಜ. ಆದರೆ, ದೇಹ ಮನಸ್ಸು ಎಳ್ಳಿನಂತೆ. ಅದು, ಕರ್ಮ ಗೆಯ್ಯುವುದರಿಂದ ಗುಣಗಳನ್ನು ಸಾಧಿಸುವುದರಿಂದ ಎಣ್ಣೆಯಾಗಿಸಬೇಕು. ಅಂದರೆ ನಮ್ಮ ಪ್ರಾರಬ್ಧ ಕರ್ಮಗಳನ್ನು ಅನುಭವಿಸಿ, ದಾಟಿ, ನಿಷ್ಕಾಮ ಕರ್ಮನಿಷ್ಠಿತಿಗೇರಬೇಕು. ಅದೇ ರೀತಿ, ತಾಮಸದಿಂದ, ರಾಜಸಕ್ಕೆ, ರಾಜಸದಿಂದ, ಸಾತ್ವಿಕಕ್ಕೆ ಗುಣಗಳ ಅತಿಕ್ರಮಣ ಮಾಡುತ್ತ, ತ್ರಿಗುಣಾತೀತರಾಗಬೇಕು. ಆಗ ಮಾತ್ರ ಜ್ಯೋತಿರ್ಮಯವಾದ ಬ್ರಹ್ಮ ಉರಿಯಬಲ್ಲದು. ಪ್ರಕಾಶ ಬೀರಬಲ್ಲದು. ಇದನ್ನರಿಯದೆ, ಅಕರ್ಮವೆಂದರೆ, ಕೆಲಸಗೇಡಿ ಎಂದೂ ತ್ರಿಗುಣ ತೊರೆಯುವುದೆಂದರೆ ಗುಣಹೀನನೆಂದೂ ತಿಳಿದರೇನು? ತತ್ತ್ವ ತಗಲಿ ಇರಬೇಕಾದರೆ ತಾನೇ 'ತತ್' ಆಗಬೇಕಾದರೆ, ಕರ್ಮ ಮತ್ತು ಗುಣಗಳನ್ನು ಕಡೆಗಣಿಸಿ ನಡೆಯಬಾರದು. ಅವುಗಳನ್ನು ಅರಿತು, ಅತಿಕ್ರಮಿಸಬೇಕು.

೭೩೫

ಗ್ರುಡ್ಡುವಚ್ಚಿಪಿಲ್ಲ ಗೋರಡಾಲಾಡಿನ, ವಿಧಮುಗಾ ನೆರುಗಕ ವೆರ್ರಿಜನುಲು,
ಜ್ಞಾನುಲ್ಕೈನುವಾರಿ ಗರ್ವಿಂತು ರೂರಕ, ವಿಶ್ವದಾಭಿರಾಮ ವಿನುರ ವೇಮ.

ನೊಟ್ಟೆ ಬಂದು ನುರಿಯ ನುತ್ತೆ ಅಣಕಿಸುತಿಹ,
ಪರಿಯ ತಿಳಿಯರೇನು ಪೆಚ್ಚು ಜನರು?
ಜ್ಞಾನಿಯಿಪ್ಪ ಜನರ, ಜರೆಯುವರು ಸುಮ್ಮನೆ.
ವಿಶ್ವದಾಭಿರಾಮ ಕೇಳು ವೇಮ.

ಲೋಕದ ಜನರ ತಿಳಿವಳಿಕೆ ಅವರ ಮನಸ್ಸಿನ ಅಶುದ್ಧತೆಯಿಂದಾಗಿ ಮಲಿನವಾಗಿರುವುದು. ತನ್ನ ನೆರೆಮನೆಯವನ ಧನಕನಕ ಕಂಡು ಅವರು ಹಲುಬುತ್ತಾರೆ; ಏಕೆಂದರೆ, ಆ ಧನದ ಮೇಲೆ ಇವರಿಗಾಶೆ. ಜ್ಞಾನಿಯಾದರೋ, ಧನವು ತನಗೆ ಬೇಡವಾದುದೆಂದು ತಿಳಿದ ಮನಸ್ಸಿನವನು. ಅವನಿಗೆ ಧನವಿಲ್ಲದವರು, ಧನವುಳ್ಳವರು, ಇಬ್ಬರಲ್ಲಿಯೂ ಬೇಧವೆನಿಸುವುದಿಲ್ಲ. ಸರ್ವ ಸಮತೆಯ ದೃಷ್ಟಿ ಅವನದು. ಲೋಕದ ಜನರಲ್ಲಿ ಯಾರೋ ಒಬ್ಬರು ಸತ್ತರೆ, ಬಡಿದುಕೊಂಡು ಅಳುತ್ತಾರೆ; ಸಂತಾಪಸೂಚಕ ವಿಧಿ ನಡೆಯುವದು. ಏನೋ, ದೊಡ್ಡ ಹುಯಿಲು. ಜ್ಞಾನಿಯ ದೃಷ್ಟಿಯಲ್ಲಿ ಮರಣವೊಂದು ಸಹಜ ಘಟನೆ. ಅದು ವಿಧಿ ನಿಯಮದಂತೆ ಆಗಿ ಹೋಗುವದು ಅಷ್ಟೇ. ಶರೀರದ ತೊಡಕು ಹೋದೊಡನೆ ತೀರಿತು; ಪ್ರಾರಬ್ಧ ಕರ್ಮಫಲ ಮುಗಿದಂತೆ. ಅವ್ಯಕ್ತವಾದ ಆತ್ಮ ತಾನೇ ತಾನಾಗುತ್ತದೆ. 'ಸರ್ವಂ ಖಲ್ವಿದಂ ಬ್ರಹ್ಮ.' ಇದನ್ನೆಲ್ಲ ಅರಿತ ಜ್ಞಾನಿ ಧನಿಕರನ್ನು ಹೆಚ್ಚು ಎಂದು ಕಾಣುವದಿಲ್ಲ. ಯಾರೋ ಸತ್ತರೆ ಶೋಕಿಸುವದಿಲ್ಲ. ಇವನೆಂಥ ವಿಚಿತ್ರ ವ್ಯಕ್ತಿ ! ಅವನಿಗೆ ಲೋಕಾಚಾರ ತಿಳಿದಿಲ್ಲ ! ಎನ್ನುತ್ತಾರೆ. ಲೋಕಾಚಾರ ದಾಟಿದ ಸ್ಥಿತಿ, ಜ್ಞಾನಿಯದು. ಈಜಲು ಗೊತ್ತಿಲ್ಲದೆ, ಈಜೆಯ ದಂಡೆಗೆ ನಿಂತವನು ಅಜ್ಞಾನಿ. ನದಿ ಈಜಿ ದಾಟಿ ಆಚೆಯ ದಡದ ಮೇಲೆ ನಿಂತವನು ಜ್ಞಾನಿ. ನದಿಯಲ್ಲಿ ಈಜುವವನು ಸಂಸಾರಿಗ, ಸಂಸಾರಿಗನಿಗೆ ಜ್ಞಾನಿ-ಅಜ್ಞಾನಿ ದಡದ ಮೇಲೆ ನಿಂತ ವ್ಯಕ್ತಿಗಳಷ್ಟೇ ಎನ್ನಿಸಬಹುದು ! ಅವನು ತಿಳಿವಳಿಕೆಯುಳ್ಳವನಾಗಿದ್ದರೆ, ಜ್ಞಾನಿ ಈಚೆಯ ದಂಡೆಯಿಂದ ನೀರಿಗಿಳಿದು, ಈಜಿ ಆಚೆಗೆ ಹೋದವನೆಂದು ತಿಳಿಯಬಹುದು. ಜ್ಞಾನಿಗಳನ್ನು ಜರೆಯುವವರ ಸಾಧನೆಯ ಮಹಿಮೆ ತಿಳಿಯದವರು, ಸಾಧನೆಯ ಪರಿಣಾಮ ಗುರುತಿಸಲಾರದವರು. ಕೋಳಿ ಮೊಟ್ಟೆಯನ್ನು ನೀವು ನೋಡಿರಬಹುದು. ಗೋಲವಾಗಿ, ನುಣ್ಣಗೆ, ಬೆಳ್ಳಗೆ, ಉಂಟು. ಕೋಳಿ ಮರಿಯಾದರೋ, ಏನೋ ಮಗು; ಕಡ್ಡಿಯಂಥ ಕಾಲು ಉಳ್ಳದ್ದು ! ಮರಿಯನ್ನು ಮೊಟ್ಟೆ ಅಣಕಿಸುತ್ತದೆ. ನೋಡು ನನ್ನ ಜೆಲುವು ನಿನಗಿದೆಯೇ ಎಂದು. ಕೋಳಿ ಮರಿ ಮೊಟ್ಟೆಯಾಗಿದ್ದು,ಆ ಬಿಳಿ ಪೊರಕೆಯನ್ನು ಬಿಸುಟಾಗ ಮರಿಯಾಗಿದೆಯೆಂಬುದನ್ನು ಮೊಟ್ಟೆ ಮರೆತಂತೆ ತಾನೆ.

೭೩೬

ಒಡಲ ಬೂದಿ ಬೂಸಿ ಜಡಲು ಧರಿಂಚಿನ, ನೊಡಯ ಡಗುನುಮುಕ್ತಿ ಬಡಯಲೇಡು,
ತಡಕ ಬಿರ್ರುವೆಟ ದಪುಲುತೋ ಸರಿಯೌನೆ ? ವಿಶ್ವದಾಭಿರಾಮ ವಿನುರ ವೇಮ

ಒಡಲು ಬೂದಿ ಬಳಿದು ಜಡೆಯ ಧರಿಸಿದೊಡನೆ,
ಒಡೆಯನಹುದು; ಮುಕ್ತಿ ಪಡೆಯಲಾರ.
ತಟ್ಟೆ ಬಿಗಿಯಾಗಿರೆ, ದ್ವಾರವೆಂತೆನಿಪುದು ?
ವಿಶ್ವದಾಭಿರಾಮ ಕೇಳು ವೇಮ.

ಬೂದಿ ಯಜ್ಞಾವಶೇಷ. ಪೂರ್ವಕಾಲದಲ್ಲಿ ಆರ್ಯರು ಯಜ್ಞ ಮಾಡುತ್ತಿದ್ದರು. ತಮಗೆ ಪ್ರಿಯವಾದ ತುಪ್ಪ, ಆಡು, ಕುದುರೆಗಳನ್ನು ಯಜ್ಞದಲ್ಲಿ ಸುಡುತ್ತಿದ್ದರು. ಅಗ್ನಿ ಅವುಗಳನ್ನು ಇಂದ್ರನಿಗೋ ಇನ್ನಾರಿಗೋ ಮುಟ್ಟಿಸುವನೆಂದು ಅವರ ಭಾವನೆ ಅದೇನೇ ಇರಲಿ; ತಮಗೆ ಬೇಕಾದ ವಸ್ತುವಿನ ತ್ಯಾಗ ಎನ್ನಿಸಬೇಕು. ಬೇಕಾದ ವಸ್ತುವಿನ ಆಶೆ ಸುಟ್ಟು ಹಾಕಬೇಕು. ಬೂದಿ ಮಾಡಬೇಕು. ಶಿವನು ಸಹ ತನ್ನ ಧ್ಯಾನಕ್ಕೆ ಆತಂಕನಾದ ಕಾಮನನ್ನು ಸುಟ್ಟು ಬೂದಿ ಮಾಡಿದ. ಬೂದಿ ಇಂಥ ಭಾವನೆಗಳನ್ನು ನೆನಪಿಗೆ ತರುವ ವಸ್ತು. ಜಡೆ ಬಿಡುವುದಕ್ಕೆ ಕಾರಣಗಳೇನು ? ಕ್ಷೌರವೆಂದರೆ ಆಯುಷ್ಕರ್ಮ. ಸಂನ್ಯಾಸಿಯಾದವನು, ಸಂಸಾರ ಕರ್ಮದಿಂದ ಬೇರೆಯಾದವನು. ಉಳಿದವರಿಗೆ ಕೂದಲು ಕತ್ತರಿಸುವುದು ಒಂದು ಕರ್ಮ. ಸಾಧು–ಸಂನ್ಯಾಸಿಗೆ ಅದು ಇಲ್ಲ. ಕರ್ಮ ಬಂಧನ ತಪ್ಪಿತು, ಎಂಬುದರ ದ್ಯೋತಕವದು. ಮುಕ್ತನಾದವನಿಗೆ ಮಾತ್ರ ಕರ್ಮಫಲ ಬಾಧಿಸುವದಿಲ್ಲ. ಅಂಥವನ ಆಂತರಿಕ ಎತ್ತರದ ಬಾಹ್ಯ ಚಿಹ್ನೆ ಬೂದಿ, ಜಡೆ.

ಆದರೆ ಬೂದಿ ಬಳಿದರೆ, ಕಾಮ–ವಾಸನೆಗಳು ಕಡಿಮೆಯಾಗುವುದಿಲ್ಲ. ಜಡೆಗಟ್ಟಿದರೆ, ಕರ್ಮಬಂಧನದಿಂದ ಬಿಡುಗಡೆಯಾಗದು. ಮುಕ್ತಿ ಸಾಧಿಸುವುದು ಹಗುರಾದುದೇನೂ ಅಲ್ಲ.

ಆದರೆ ದೇಹಕ್ಕೆ ಬೂದಿ ಬಳಿದುಕೊಂಡರೆ, ಜಡೆಗಟ್ಟಿದರೆ, ಜನರು 'ಸ್ವಾಮಿ' ಎನ್ನುವರು. ಅವನು ಒಂದು ಮಠದ 'ಸ್ವಾಮಿ ಎಂದರೆ ಒಡೆಯ' ನಾಗಲೂಬಹುದು. ದೇಹ ತೊರೆಯುವ ಭಾವ ಹೊಂದಿದವನು, ಮಾತ್ರ ಮುಕ್ತನಾಗುವನು. ಇವನು ಗುರುವಾಗಲು ತಕ್ಕವನು. ಇಂಥವರು ದೊರೆಯುವ ವರಗೆ 'ತೋರಿಕೆಯ ಸ್ವಾಮಿ' ಗುರುವಾಗಿರುವನು. ತಟ್ಟೆಯನ್ನು ಬಾಗಿಲಿಗೆ ಇಟ್ಟು ಕೆಲಸ ಸಾಗಿಸಬಹುದು. ಆದರೆ ಬಾಗಿಲು ಹೊಂದಿಸಿದರೆ, ಅದರ ಹೊಂದಾಣಿಕೆಯೇ ಬೇರೆ. ಎಂಥ ತಟ್ಟೆಯೂ ಬಾಗಿಲಿಗೆ ಸಮನಾಗದು.

೭೩೭

ರಮ್ಯಮೈನ ಮನಸು ರಾಜನಿಯೆಂಚುಚು, ಗಮ್ಯಮುಗನು ದಾನಿಗಟ್ಟು ಟಿರಿಗಿ,
ಮರಗಿ ಪೂರ್ಣ ಪದವಿ ಮಹಿಲೋನಗಾನರಾ ವಿಶ್ವದಾಭಿರಾಮ ವಿನುರ ವೇಮ.

ರಮ್ಯವಾದ ಮನಸು ರಾಜನೆಂದು ಬಗೆದು
ಗಮ್ಯ ತಾಣವದನು ಗಟ್ಟಿ ಗ್ರಹಿಸಿ,
ಮತ್ತೆ ಪೂರ್ಣ ಪದವಿ ಮಹಿಯ ಒಳಗೆ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ರಮಿಸುವುದು. ಅದು ರಾಜನಂತೆ. ಸರ್ವವನ್ನೂ ನಡೆಸುವುದು. ರಾಜನನ್ನು ಎದುರು ಹಾಕಿಕೊಂಡರೆ ಕಷ್ಟ. ರಾಜನಿಗೆ ಸಲಹೆ ಕೊಟ್ಟು ಕಾರ್ಯ ಪೂರೈಸಿಕೊಳ್ಳಬೇಕು. ರಮ್ಯವಾದ ಮನಸ್ಸು ರಾಜನಂತೆ. "ಮನಸ್ಸಿನಿಂದ ತನ್ನನ್ನು ಉದ್ಧಾರ ಮಾಡಿಕೊಳ್ಳಬೇಕು, ತನ್ನನ್ನು ಕುಗ್ಗಿಸಿಕೊಳ್ಳಬಾರದು; ಏಕೆಂದರೆ, ಮನಸ್ಸೇ ತನ್ನ ಬಂಧು; ಮನಸ್ಸೇ ತನ್ನ ಶತ್ರು" (ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್| ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ || (ಭಗವದ್ಗೀತೆ ೬—೫)

ನಾವು ಹೋಗುವುದೆಲ್ಲಿಗೆ ? ನಮ್ಮ ಗುರಿ ಯಾವುದು ? ನಿರ್ಗುಣ, ನಿತ್ಯ, ನಿರ್ವಿಕಲ್ಪ ನಿರಂಜನ, ನಿರ್ವಿಕಾರ ನಿರಾಕಾರ, ನಿರ್ಮಲ ನಿತ್ಯಮುಕ್ತನಾಗುವದು ತಾನೇ. ಶುದ್ಧವಾದ ಮನಸ್ಸಿನಿಂದ ಈ ಗುರಿಯನ್ನು ಗಟ್ಟಿಯಾಗಿ ಗ್ರಹಿಸಿ, ಆ ಪರಿಪೂರ್ಣ ಪದವಿಯನ್ನು ಈ ಮಹಿಯಲ್ಲಿ ನೋಡಬೇಕು. "ಸರ್ವಂ ಖಲ್ವಿದಂ ಬ್ರಹ್ಮ" ಎಂದು ತಿಳಿದಾಗ ಸರ್ವವೂ ಪರಿಪೂರ್ಣ ಸದ್ವಸ್ತುವಾಗಿ ತೋರುವದು.

(ಹೋಲಿಸಿ ನೋಡಿರಿ :
ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ
ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ |
ಜ್ಞಾನ ಪ್ರಸಾದೇನ ವಿಶುದ್ಧ ತತ್ತ್ವ
ಸ್ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ ||
ಅವನನ್ನು ಕಣ್ಣಿನಿಂದಾಗಲಿ, ಮಾತಿನಿಂದಾಗಲಿ, ಇತರ ಇಂದ್ರಿಯಗಳಿಂದಾಗಲಿ, ಗ್ರಹಿಸಲು ಆಗುವದಿಲ್ಲ. ತಪಸ್ಸಿನಿಂದಾಗಲಿ ಅಥವಾ ಕರ್ಮದಿಂದಾಗಲಿ ಗ್ರಹಿಸಲು ಆಗುವದಿಲ್ಲ. ಆದರೆ ಜ್ಞಾನ ಪ್ರಸಾದದಿಂದ ಶುದ್ಧವಾದ ಅಂತಃಕರಣವುಳ್ಳವನಾಗಿ ಧ್ಯಾನ ಮಾಡುವವನು, ಅದರಿಂದ ನಿಷ್ಕಲನಾದ ಆ ಆತ್ಮನನ್ನು ನೋಡುತ್ತಾನೆ.' (ಮುಂಡಕೋಪನಿಷತ್. ೩—೧-೮.)

೭೩೮

ಆತ್ಮಲೋನಿಸೊಮ್ಮು ನಂಜನಮುನ ಜೂಚಿ, ಯಂಟತಿರುಗುನಟ್ಟ ಯತಡು ಯೋಗಿ,
ಪುಂಜುಗೂಟನುಂಡಿ ಪ್ರೊದ್ದೆರಿಂಗಿಯು ಗೂಯು, ವಿಶ್ವದಾಭಿರಾಮ ವಿನುರ ವೇಮ.

ಆತ್ಮದೊಳಿಹ ವಸ್ತು ಅಂಜನದಿಂ ಕಂಡು.
ಅಂಟಿ ತಿರುಗುವಂಥ, ಅವನೆ ಯೋಗಿ.
ಹುಂಜ ಗೂಡೊಳಿದ್ದು ಹೊತ್ತು ತಿಳಿಯುವಂತೆ.
ವಿಶ್ವದಾಭಿರಾಮ ಕೇಳು ವೇಮ.

ಭೂಮಿಯಲ್ಲಿ ಹುಗಿದಿಟ್ಟ ಬಂಗಾರು ಶೋಧಿಸುವವರನ್ನು ನೀವು ನೋಡಿರಬಹುದು; ಇಲ್ಲವೆ ಅವರ ಬಗೆಗೆ ಕೇಳಿರಬಹುದು. ಹುಗಿದಿಟ್ಟ ಧನ–ಕನಕ ಬರಿಗಣ್ಣಿಗೆ ಕಾಣುವದಿಲ್ಲ. ಈ ಬಂಗಾರದ ಶೋಧಕರು ಕಣ್ಣಿಗೆ ಅಂಜನ ಹಚ್ಚಿಕೊಳ್ಳುತ್ತಾರೆ. ಆಗ ಅವರಿಗೆ ಅಲ್ಲಿರುವ ಸಂಪತ್ತು ಕಾಣುವುದೆಂದು ಹೇಳುವರಷ್ಟೇ. ಆತ್ಮನನ್ನು ನೋಡುವುದೂ ಅದೇ ರೀತಿಯಿಂದ. ಬರಿಗಣ್ಣಿಗೆ ಕಾಣುವುದಿಲ್ಲ.

೭೩೯

ಋಷು ಲೆರುಂಗನಟ್ಟ ವಿಷಯಂಬು ಭುವಿ ಲೇದು, ವಾರುಚೆಪ್ಪಿನಂತ ವರುಸ ನಗುನು,
ತೆಲಿಯ ಕನೆಡಿವಾರು ದೇಬೆಲು ನಿಜಮಯಾ. ವಿಶ್ವದಾಭಿರಾಮ ವಿನುರ ವೇಮ.

ಋಷಿಯರಿಯದಂಥ ವಿಷಯವಿಲ್ಲ ಜಗದಿ.
ಅವರು ನುಡಿದುದೆಲ್ಲ ಅದು ಕ್ರಮವು
ತಿಳಿಯದೆ ನಡೆವವರು ತಾವು ಜಡರು ಸತ್ಯ.
ವಿಶ್ವದಾಭಿರಾಮ ಕೇಳು ವೇಮ.

ಋಷಿಗಳು ಸಂಶೋಧಕರು, ಬ್ರಹ್ಮಜ್ಞಾನಿಗಳು. ಅವರು ನೋಡುವುದು ಬಾಹ್ಯ ಚಕ್ಷುವಿನಿಂದಲ್ಲ. ಮನಸ್ಸಿನ ಕಣ್ಣಿನಿಂದ. ಅವರ ಮನಸ್ಸು ಶುದ್ಧವಾದುದು. ಆತ್ಮದ ಅನುಭವ ಪಡೆದದ್ದು. ಆತ್ಮ ಅರಿತ ಮೇಲೆ ಏನು ಅರಿಯಲಿಕ್ಕಿಲ್ಲ! ಆತ್ಮ ಅನಂತ. ಆಕಾಶದಂತೆ. ಒಳಗಿನ ಆಕಾಶ ಹೊರಗಿನ ಆಕಾಶ ಒಂದೇ. ಆತ್ಮ ಎಲ್ಲಿಡೆ ಇರುವುದು. ನಾನು ಇನ್ನೊಬ್ಬನಿಂದ ಬೇರೆ ಕಾಣುವುದು, ದೇಹಭೇದದಿಂದ. ದೇಹಭಾವ ತೊರೆದಾಗ, 'ನಾನು' 'ಅವನು' ಎಂಬ ಭೇದವೇ ಇಲ್ಲ. ಎಲ್ಲವೂ ಆತ್ಮವೇ. ಸೂರ್ಯ ಚಂದ್ರ, ಭೂಮಿ, ಗಿಡ, ಮರ ಎಲ್ಲ ಆತ್ಮವೇ. ಇದೆಲ್ಲ ಋಷಿಗೆ ಗೊತ್ತಾಗುವದು. ಏಕೆಂದರೆ ಅವನು ಅತೀಂದ್ರಿಯ ಸ್ಥಿತಿಗೇರಿ, ಇದೆಲ್ಲ ತಿಳಿಯುವನು. ಋಷಿವಾಕ್ಯಗಳ ಮಾದರಿ ನೋಡಿರಿ: "ಯಾವನು ಸರ್ವಪ್ರಾಣಿಗಳನ್ನು ಆತ್ಮದಲ್ಲಿ ನೋಡುವನೋ, ಮತ್ತು ಆತ್ಮನನ್ನು ಸರ್ವಪ್ರಾಣಿಗಳಲ್ಲಿ ನೋಡುವನೋ, ಅವನು ಯಾವುದರಿಂದಲೂ ಹಿಮ್ಮೆಟ್ಟುವದಿಲ್ಲ" "ಯಾವಾಗ ತಿಳಿದವನಿಗೆ ಆತ್ಮವೆ ಎಲ್ಲ ಪ್ರಾಣಿಗಳೂ ಆಗಿವೆಯೋ, ಆಗ ಏಕತ್ವವನ್ನು ನೋಡುತ್ತಿರುವವನಿಗೆ ಮೋಹವೆಲ್ಲಿ ? ಶೋಕವೆಲ್ಲಿ ?" [ಈಶ. ಉ. ೬ ಮತ್ತು ೭)

ಋಷಿಗಳು ತಿಳಿಯಲಾರದ ವಿಷಯವೇ ಇಲ್ಲ. ಅವರು ಏನು ಹೇಳಿರುವರೋ ಅದು ಸೂಕ್ತವಾಗಿದೆ: ವೇದ ಯಜ್ಞಗಳ ಮೋಹ ತೊರೆಯ ಹೇಳಿದರು. ವರ್ಣ, ದೇಶ ಕಾಲಗಳ ಭೇದವನ್ನು ಬಿಡಲು ಹೇಳಿದರು. ಎಲ್ಲರೂ ಒಂದು. ಜೀವನು ಬ್ರಹ್ಮನ ಅಂಶ. ತನ್ನನ್ನು ತಾನು ತಿಳಿದರೆ ತೀರಿತು, ತಾನೇ ಶಿವನು. 'ಶಿವೋಹಂ ಶಿವೋಹಂ' 'ಅಯಮಾತ್ಮಾ ಬ್ರಹ್ಮ. 'ಅಹಂ ಬಹ್ಮಾಸ್ಮಿ'. 'ನಾನೇ ಶಿವ, ನಾನೇ ಶಿವ'. 'ಈ ಆತ್ಮವೇ ಬ್ರಹ್ಮ'. 'ನಾನು ಬ್ರಹ್ಮನಿರುವೆ'. ಇದನ್ನು ಅರಿಯದೆ ನಡೆಯುವರು, ತಮ್ಮ ಚೈತನ್ಯ ಶಕ್ತಿ ಗುರುತಿಸಿಕೊಂಡಿಲ್ಲ. ಕೇವಲ ಜಡರು, ಅವರು.

೭೪೦

ಟಿಪ್ಪಣಮುಲ ಜೇಸಿ ಚಪ್ಪನಿಮಾಟಲ ಜೆಪ್ಪುಚುಂದು ರನ್ನಿ ಸ್ಮೃತುಲ ಶ್ರುತುಲ.
ವಿಪ್ಪಿ ಚೆಪ್ಪರೇಲ ವೇದಾಂತ ಸಾರಂಬು, ವಿಶ್ವದಾಭಿರಾಮ ವಿನುರ ವೇಮ.

ಟಿಪ್ಪಣಿಗಳ ಗೈದು, ತಿಳಿಸಿದ ಮಾತುಗಳ
ಸಾರುತಿಹವು ಸಕಲ ಸ್ಮೃತಿ ಶ್ರುತಿ;
ವಿವರಿಸದಿಹರೇಕೆ ವೇದಾಂತ ಸಾರವ ?
ವಿಶ್ವದಾಭಿರಾಮ ಕೇಳು ವೇಮ.

ಲಿಪಿ ಇಲ್ಲದ ಕಾಲದಲ್ಲಿ ಋಷಿ–ಮುನಿಗಳಿಂದ ರಚಿತವಾದ ಮಂತ್ರ, ಕವಿಯಿಂದ ಕವಿಗೆ ಸಾಗಿ ಬಂದಿತು. ಶ್ರವಣದಿಂದ ತಿಳಿದುದು, 'ಶ್ರುತಿ' ಎಂದರೆ ಕೇಳಿದ್ದು, ಎನ್ನಿಸಿತು. ವೇದ 'ಶ್ರುತಿ' ಯಾದ ನಂತರ, ವೇದಕಾಲದ ಬಾಹ್ಯಪೂಜೆ, ಅಂದರೆ ಕರ್ಮ ಕಾಂಡಕ್ಕೆ ವಿರುದ್ಧವಾಗಿ ಅನೇಕ ದೇವತೆಗಳ ಕಲ್ಪನೆಯಿಂದ ಏಕ ದೇವ ಕಲ್ಪನೆಯೆಡೆಗೆ, ವ್ಯಕ್ತ ದೇವತೆಗಳಿಂದ ಅವ್ಯಕ್ತ ಶಕ್ತಿಯೆಡೆಗೆ ಸಾಗಿ ಬಂದ, ದಾರ್ಶನಿಕ ಸಾಹಿತ್ಯವೂ ಶ್ರುತಿಯೆನಿಸಿತು. ಮೊದಮೊದಲು ಉಪನಿಷತ್ತುಗಳು, ವೇದ ಸಂಹಿತೆಗಳ, ಬ್ರಾಹ್ಮಣ ಆರಣ್ಯಕಗಳ ಕೊನೆಯ ಅಧ್ಯಾಯಗಳಾಗಿದ್ದುದರಿಂದ ವೇದಾಂತವೆನಿಸಿದವು. ವೇದಾಂತವನ್ನು ಹೃದಯೆಂಗಮವಾಗಿ ಮಂಡಿಸುವ ಅನಂತರದ ಗ್ರಂಥವೇ ಭಗವದ್ಗೀತೆ. ಗೀತೆಯಲ್ಲಿಯ ಅನೇಕ ಶ್ಲೋಕಗಳು ಉಪನಿಷತ್ತಿನ ಶ್ಲೋಕ ಮತ್ತು ವಾಕ್ಯಗಳನ್ನು ಹೋಲುತ್ತವೆ. ಕಠ, ಮುಂಡಕ, ಶ್ವೇತಾಶ್ವತರ, ಛಾಂದೋಗ್ಯ ಉಪನಿಷತ್ತಿಗೂ ಗೀತೆಗೂ ವಿಶೇಷವಾದ ಸಾಮ್ಯವಿದೆ. ಶ್ರುತಿಯನ್ನು ಸ್ಮರಿಸಿ ರಚಿತವಾದ ಗೀತೆ ಇತ್ಯಾದಿ ದಾರ್ಶನಿಕ ಗ್ರಂಥಗಳು ಸ್ಮೃತಿಗಳೆನಿಸಿದವು.

ವೇದಾಂತಕ್ಕೆ ಉಪನಿಷತ್ ಎಂದು ಕರೆದರು. ಗುರುಗಳ ಬಳಿ (ಉಪ) ಶಿಷ್ಯರು ನಿಷ್ಠೆಯಿಂದ [ನಿ] ಕುಳಿತುಕೊಳ್ಳು (ಷದ) ವುದನ್ನು ಸೂಚಿಸುವುದರಿಂದ, ಹಾಗೆ ಮಾಡಿರಬಹುದು. ಕೇವಲ ಆಯ್ಕೆಮಾಡಿದ ಶಿಷ್ಯರಿಗೆ ಗುರು ಹೇಳಲು ಸಹಾಯಕವಾಗುವಂತೆ, ಜೋಡಿಸಿದ ಟಿಪ್ಪಣಿಗಳ ಸಮುಚ್ಚಯವೇ ಉಪನಿಷತ್. ಆಗ ಬರೆಯುವ ಪದ್ಧತಿ ಕಡಿಮೆ. ಕಂಠಪಾಠದಿಂದ ಶಿಕ್ಷಣ ಕಾರ್ಯ. ಕಾರಣ ಟಿಪ್ಪಣಿಗಳನ್ನು ಪದ್ಯರೂಪದಲ್ಲಿ ಬರೆದಿಟ್ಟರು. ಇವುಗಳನ್ನು ವಿವರಿಸಿ ತಿಳಿಸಲು ಗುರುವು ಬೇಕು. ಒಂದೇ ಶಬ್ದವನ್ನು ಅನೇಕ ಅರ್ಥಗಳಲ್ಲಿ ಬಳಕೆ ಮಾಡಿರುವುದರಿಂದ ವಿವರಿಸಿ ಹೇಳದೆ ತಿಳಿಯುವದಿಲ್ಲ. ಹಾಗಿದ್ದೂ ಶ್ರುತಿ ಸ್ಮೃತಿಗಳಲ್ಲಿರುವ ವೇದಾಂತ ಸಾರವನ್ನೇ ಎಲ್ಲರಿಗೂ ತಿಳಿಸಿ ಹೇಳಿದರೆ ಎಷ್ಟೋ ಚೆನ್ನಾಗಾಗುತ್ತಿತ್ತು. ಹಾಗೇಕೆ ಮಾಡುತ್ತಿಲ್ಲವೋ,? ತಿಳಿಯದು.

೭೪೧

ಕುಂಡ ಕುಂಭಮನ್ನ ಗೊಂಡ ಪರ್ವತಮನ್ನ, ಉಪ್ಪು-ಲವಣಮನ್ನ ನೊಕಟಕಾದೆ ?
ಭಾಷಲಿಟ್ಲಿ ವೇರು ಪರತತ್ತ್ವಮೊಕ್ಕಟೇ, ವಿಶ್ವದಾಭಿರಾಮ ವಿನುರ ವೇಮ.

'ಗಡಿಗೆ' 'ಕುಂಭ' ವೆನಲು, 'ಗುಡ್ಡ' 'ಪರ್ವತ' ವೆನಲು,
ಉಪ್ಪು-ಲವಣವೆನಲು, ಒಂದಲ್ಲವೆ ?
ಭಾಷೆಯಿಂತು ಬೇರೆ; ಪರತತ್ತ್ವ ಒಂದೇ.
ವಿಶ್ವದಾಭಿರಾಮ ಕೇಳು ವೇಮ.

'ವೇದ-ಉಪನಿಷತ್ತುಗಳು, ಶ್ರುತಿಗಳು ಮಾನವಕೃತಿಗಳಲ್ಲ. ಬ್ರಹ್ಮ ಮುಖದಿಂದ ಹೊರಟವು. ಋಷಿಗಳು ಅದನ್ನೇ ಕಂಡರು. ವ್ರತ ಆಚರಿಸುವವರಿಗೆ ಮಾತ್ರ ಈ ವಿದ್ಯೆ ಹೇಳಬೇಕು' ಎಂದು ಹಲವರು ಭಾವಿಸಿದ್ದರು. ವೇದಮಂತ್ರಗಳು, ಲಿಪಿ ಕಂಡುಹಿಡಿಯುವ ಮೊದಲು ರಚಿತವಾದುದರಿಂದ, ಅವುಗಳನ್ನು ಗುರುಗಳು ಶಿಷ್ಯರಿಗೆ ಹೇಳಿ ಗಟ್ಟಿಮಾಡಿಸುತ್ತಿದ್ದರು. ಕೇಳುವ ಮಂತ್ರಗಳು 'ಶ್ರುತಿ' ಎನಿಸಿದವು. ಈ ಮಂತ್ರಗಳನ್ನು ಆರ್ಯರು ತಮ್ಮ ವಿರೋಧಿಗಳೆದುರು ಹೇಳುತ್ತಿರಲಿಲ್ಲ. ಮುಂದೆ ಸಂಸ್ಕೃತ ಭಾಷೆ ಹಿಂದೆ ಬಿದ್ದು, ಸರಳ ಪ್ರಾಕೃತ ಭಾಷೆಯನ್ನು ಜನ ಬಳಸತೊಡಗಿದಾಗ, ವೇದಮಂತ್ರಗಳು, ಕೇವಲ ಅರ್ಥ ತಿಳಿಯದೆ ಪಠಿಸುವ, ಸ್ವರ-ಸಮೂಹ ಎನಿಸಿದವು. ಕೆಲ ಜನರು ಇವುಗಳನ್ನು ಪಠಿಸಬಲ್ಲವರಾದರು. ವೇದವನ್ನು ದಾಟಿ, ವೇದದಲ್ಲಿಯ ಬಾಹ್ಯ ಆಚಾರದ ಹಿಂದೆಯಜ್ಞಗಳನ್ನು ತಿರಸ್ಕರಿಸಿ, ಜನರನ್ನು ಅಂತರ್ಮುಖರನ್ನಾಗಿ ಮಾಡುವ ಪ್ರಯತ್ನವು, ವೇದ ಕಾಲದಿಂದ ಪ್ರಾರಂಭವಾಗಿ, ಉಪನಿಷತ್ಕಾಲದ ವರೆಗೆ ಸಾಗಿಬಂತು. ಕೊನೆಗೆ ಮೂಡಿ ಬಂದ, ಈ ದಾರ್ಶನಿಕ, ಸಾಹಿತ್ಯ ವೇದಾಂತವೆನಿಸಿತು. ಶ್ರುತಿಯೆನಿಸಿತು. ವೇದಾಂತದಲ್ಲಿ ವರ್ಣ, ಮೂಢನಂಬುಗೆ, ಮೂರ್ತಿಪೂಜೆ, ಬಾಹ್ಯ ಆಚಾರಗಳಿಲ್ಲ ಅಸಮ್ಮತವೆನಿಸಿವೆ. ಈ ವಿಚಾರಗಳು ಸಂಸ್ಕೃತದಲ್ಲಿ.ಜನರ ಭಾಷೆಯೋ ಪ್ರಾಕೃತ.ಸಂಸ್ಕೃತದ ವಿದ್ಯೆಯನ್ನು ಜನ ಭಾಷೆಯಲ್ಲಿ ತರ್ಜುಮೆ ಮಾಡುವುದೇ ಪಾಪ, ಎಂದೂ ವಿರೋಧ ನಡೆಯಿತು. ಧೀರ ಯೋಗಿಗಳು ವೇದಾಂತವನ್ನು ಜನರ ಭಾಷೆಯಲ್ಲಿ ಹೇಳಿದರು. 'ಗಡಿಗೆ' ಕನ್ನಡ ಪದ, 'ಕುಂಭ' ಸಂಸ್ಕೃತ ಪದ. ಅದೇ ರೀತಿ, ಗುಡ್ಡ-ಪರ್ವತ; ಉಪ್ಪು-ಲವಣ, ಶಬ್ದಗಳು. ಒಂದು ಕನ್ನಡ, ಒಂದು ಸಂಸ್ಕೃತ. ಭಾಷೆ ಬೇರೆ. ಅರ್ಥ ಒಂದೇ. ಪರತತ್ತ್ವವನ್ನು ಯಾವ ಭಾಷೆಯಲ್ಲಿ ಬೋಧಿಸಿದರೇನು ?

(ಶ್ರೀ ಮಹಲಿಂಗರಂಗ ಕವಿಯ ಅಭಿಪ್ರಾಯ ನೋಡಿರಿ :

" ಕನ್ನಡದ ನುಡಿಯಂದುಪೇಕ್ಷಿಸ | ಲಿನ್ನು ಹಿರಿಯರಿಗಂಜಿ ನುಡಿವೆನು |
ಕನ್ನಡಿಯೆ ದರ್ಪಣ ವದಲ್ಲದೆ ಭೇದವೇನಿದಕೆ ? ||
ಮುನ್ನಲುಪನಿಷದರ್ಥವನು ಸಂ | ಪನ್ನ ಮತಿಗಳು ಪೇಳ್ದುದನೆ ನಾ |
ನಿರ್ಣಯಿಸಿದೆನು ಕೊರತೆಯಿರ್ದೊಡೆ ಮನ್ನಿಸುವದೊಲಿದು ||
ಸುಲಿದ ಬಾಳೆಯ ಹಣ್ಣಿನಂದದಿ | ಕಳೆದ ಸಿಗುರಿನ ಕಬ್ಬಿನಂದದಿ |
ಅಳಿದ ಉಷ್ಣದ ಹಾಲಿನಂದದಿ | ಸುಲಭವಾಗಿರ್ಪ ||
ಲಲಿತವಹ ಕನ್ನಡದ ನುಡಿಯಲಿ | ತಿಳಿದು ತನ್ನೊಳು ತನ್ನ ಮೋಕ್ಷವ |
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ? ||

— ಅನುಭವಾಮೃತ ೧—೪, ೫,)

೭೪೨

ಚೆರಕುತೋಟ ಲೋನ ಜೆತ್ತ ಕುಪ್ಪುಂಡಿನ, ಗೊಂಚೆಮ್ಮೆನ ದಾನಿ ಗುಣಮು ಚೆಡದು,
ಎರುಕ ಕಲಗು ಚೋಟ ನೆಡ್ಡೆವಾಡುನ್ನಟ್ಲು, ವಿಶ್ವದಾಭಿರಾಮ ವಿನುರ ವೇಮು.

ಕಬ್ಬು ತೋಟದಲ್ಲಿ ಕಸದ ಹೊರೆಯು ಇರಲು,
ಕೊಂಚವಾದರದರ ಗುಣವು ಕೆಡದು.
ಅರಿತ ಜನರ ಜೊತೆಗೆ ಅರಿಯದವನಿಪ್ಪಂತೆ.
ವಿಶ್ವದಾಭಿರಾಮ ಕೇಳು ವೇಮ

'ಅಗ್ಗೋ! ಅಲ್ಲಿ ಬರುವವನು ಕೊಲೆಗಡಕ. ಅವನು ಪಾಪಿ. ಅವನ ನೆರಳು ಕೂಡ ಮಹಾಸ್ವಾಮಿಗಳ ಮೇಲೆ ಬೀಳದಂತೆ ನೋಡಿ ಕೊಳ್ಳಿರಿ.' 'ಅಯ್ಯೋ, ಇವಳು ಸೂಳೆ. ಇವಳ ದರ್ಶನ 'ಅಪ್ಪನವರಿಗೆ ಆಗದಿರಲಿ.' 'ಇವನು ಜೂಜುಖೋರ, ಸ್ವಾಮಿಗಳಿಗೆ ಇವನ ಸಹವಾಸ ಬೇಡ.' ಹಾಗಾದರೆ, ನಮ್ಮ ಸ್ವಾಮಿಗಳು, ಜಗದ್ಗುರುಗಳು, ಉದ್ಧರಿಸುವುದು ಯಾರನ್ನು ? ಬೋಧಿಸುವುದು ಯಾರಿಗೆ? ಯಾರಿಗೆ ಮಾರ್ಗದರ್ಶನ ನೀಡುವುದು? ಅವರ ಸಂಗ ಸಹವಾಸದಿಂದ ಇವರು ಕೆಟ್ಟಹೋಗುವರಾದರೆ, ಇವರೆಂಥ ಗುರುಗಳು ? ಬ್ರಹ್ಮಭಾವ ತಾಳಿದವನು, ಎಂದಿಗೂ ಜೀವಭಾವ ಹೊಂದನು. ನೀರು ಮುತ್ತಾಗುತ್ತದೆ. ಮುತ್ತು ನೀರಿನಲ್ಲಿಟ್ಟರೂ ನೀರಾಗುವುದಿಲ್ಲ. ಗುರು ಕಮಲದಂತೆ. ನೀರಿನ ಕಲ್ಮಶ ಹತ್ತದ ಬಾಳು ಅವನದು. ಕರ್ಮಫಲ ತಟ್ಟದ ಸ್ಥಿತಿಯವನು, ಗುರು.

ನಮ್ಮ ತೋಟದಲ್ಲಿ ಕಬ್ಬು ಬೆಳೆದಿರುತ್ತದೆ. ಅದರ ಸುತ್ತುಮುತ್ತು ಹಸನಾಗಿರಬಹುದು. ಇಲ್ಲವೆ ಕಸದ ಹೊರೆಯೇ ಒಟ್ಟಿರಬಹುದು. ಕಸದ ಹೊರೆ ಇದ್ದ ಮಾತ್ರಕ್ಕೆ ಕಬ್ಬಿನಲ್ಲಿ ರಸ ಕಡಿಮೆಯಾಗದು; ಸಿಹಿ ಕಡಿಮೆಯಾಗದು.

ಮಹಾತ್ಮರಿಗೂ ಸಾಮಾನ್ಯರಿಗೂ ಏನು ಅಂತರ? ತರ-ತಮ ಭಾವನೆಯಷ್ಟೇ? ಅಜ್ಞಾನಿಯೂ ಸಾಧನೆಯಿಂದ ಜ್ಞಾನಿಯಾಗಬಲ್ಲ. ಜ್ಞಾನ ಹುಟ್ಟುಗುಣವಲ್ಲ. ಹುಟ್ಟಿನಿಂದ ಜ್ಞಾನ ಬರುವಂತಿದ್ದರೆ, ಆಡು-ಹೋತುಗಳೂ ಜ್ಞಾನಿಗಳಾಗುತ್ತಿದ್ದವು. ಅರಿಯದವರು ಕೊಲೆ ಮಾಡುತ್ತಾರೆ; ವ್ಯಭಿಚಾರಕ್ಕೆಳಿಯುತ್ತಾರೆ, ಮದ್ಯ ಜೂಜಾಟದಲ್ಲಿ ಆಸಕ್ತರಾಗುತ್ತಾರೆ. ಜ್ಞಾನಿಗಳು ಅವರ ಮಧ್ಯೆ ಸೇರಿ ಅವರಿಗೆ ಅವರ ನಿಜ ಸ್ಥಿತಿಯ ಅರಿವು ಮಾಡಿಕೊಡುತ್ತಾರೆ. ಅಜಮಿಳನು ಮುಕ್ತನಾದದ್ದು, ಹೀಗೆ. ವಾಲ್ಮೀಕಿ ಮಹರ್ಷಿ-ಯಾದದ್ದು ಹೀಗೆ. ಅಹಲ್ಯೆ ಸಾಧ್ವಿಯಾಗಿ ಪರಿವರ್ತನವಾದದ್ದೂ ಹೀಗೆ. ಅರಿತ ಜನರೊಂದಿಗೆ ಅರಿಯದವರು ಇದ್ದರೆ, ಅರಿತವರಿಗೇನೂ ಬಾಧೆಯಿಲ್ಲ.

೭೪೩

ಚದುವರಿಮತಿಕನ್ನ ಸಾಧಕುಮತಿಮೇಲು, ವೇದಮುಲನು ಲೇದು ವಾದ ಮುಲನು,
ಒಡಲು ಶುದ್ಧಿ ಜೇಸಿ, ಯೊಡಯನಿಜೂಡನೌ, ವಿಶ್ವದಾಭಿರಾಮ ವಿನುರ ವೇಮ.

ಓದುಗ ಮತಿಗಿಂತ ಸಾಧಕ ಮತಿ ಮೇಲು
ವೇದದಲ್ಲಿ ಇಲ್ಲ ವಾದದಲ್ಲಿ.
ಒಡಲು ಶುದ್ಧಿ ಗೈದು ಒಡೆಯನನ್ನು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಮುಂಡಕ ಉಪನಿಷತ್ತು ಅವಿದ್ಯೆಯೆಂಬ ತಲೆಗೂದಲು (ಮುಂಡ) ಬೋಳಿಸುವ ಮಹಾ ಮಂತ್ರಗಳಿಂದ ಕೂಡಿದೆ. ಇದು ಪ್ರಮುಖ ಉಪನಿಷತ್ತುಗಳಲ್ಲೊಂದು. ಅಂಗೀರಸ ಋಷಿ ಶೌನಕನಿಗೆ ಬೋಧಿಸಿದ್ದು. ಇದರಲ್ಲಿಯ ಬೋಧೆಯ ಸಾರ ಹೀಗೆಃ ವಿದ್ಯೆಗಳಲ್ಲಿಎರಡು ವಿಧ; ಪರಾ ಮತ್ತು ಅಪರಾ. ನಾಲ್ಕು ವೇದ, ಆರು ಶಾಸ್ತ್ರ ಇತಿಹಾಸ ಪುರಾಣ' ಜ್ಯೋತಿಷ ಇತ್ಯಾದಿ ಅಪರಾವಿದ್ಯೆ. ಆ ಅಕ್ಷರವು (ಕ್ಷರವಲ್ಲದ ಬ್ರಹ್ಮ) ಯಾವ ವಿದ್ಯೆಯಿಂದ ಸಾಕ್ಷಾತ್ಕೃತವಾಗುವುದೋ ಅದು, ಪರಾವಿದ್ಯೆ.'ಅದು ಜ್ಞಾನೇಂದ್ರಿಗಳಿಗೆ ವಿಷಯವಲ್ಲ. ಕರ್ಮೇಂದ್ರಿಯಗಳಿಂದ ಅದರ ಗ್ರಹಣ ಅಥವಾ ವರ್ಣ ಇವುಗಳಿಂದ ಬದ್ಧವಾಗಿಲ್ಲ' ಈ ಆತ್ಮನು ಪ್ರವಚನದಿಂದ, ನಿಧಿಧ್ಯಾಸದಿಂದ, ಬಹು ಶ್ರವಣದಿಂದ ಲಭ್ಯವಿಲ್ಲ; ಯಾವ ಯತಿಗಳು ಜಿತೇಂದ್ರಿಯರಾಗಿ, ಕಾಮ್ಯ ಕರ್ಮ ತ್ಯಾಗದಿಂದ ಶುದ್ಧಾಂತಃ ಕರಣರಾಗಿ,ವೇದಾಂತ ಜ್ಞಾನದಿಂದ ತತ್ತ್ವ ನಿಶ್ಚಯವನ್ನು ಹೊಂದಿರುವರೋ, ಅವರೆಲ್ಲರೂ ಅಂತ್ಯಕ್ಷಾಲದಲ್ಲಿ ಪ್ರಸನ್ನನಾದ ಬ್ರಹ್ಮನೆಂಬ ಸಾಧನದಿಂದ, ಬ್ರಹ್ಮನಲ್ಲಿ ಮುಕ್ತರಾಗುವರು.' 'ನಿಷ್ಕಲನಾದ ಪರಮಾತ್ಮನನ್ನು ಧ್ಯಾನ ಮಾಡುವವನು ಪರಮಾತ್ಮ ಪ್ರಸಾದದಿಂದ ವಿಶುದ್ಧಾಂತಃಕರಣನಾಗುವನು. ಅನಂತರ ಅವನನ್ನು ನೋಡುವನು. ಕಾರಣ, ವೇದಶಾಸ್ತ್ರ ಓದುವ ಮತಿಗಿಂತ ಚಿತ್ತ ಶುದ್ಧಿಯ ಸಾಧನೆ ಹೆಚ್ಚಿನದು. ಪಾಂಡಿತ್ಯ ಪ್ರದರ್ಶನದ ಖಂಡನ—ಮಂಡನಗಳಲ್ಲಿ ಅರ್ಥವಿಲ್ಲ. ಮನಸ್ಸು ಶುದ್ಧವಾದರೆ, ಪರಮಾತ್ಮನನ್ನು ಅನುಭವಿಸಬಹುದು.

[ಹೋಲಿಸಿ ನೋಡಿರಿ:—
ವೇದಶಾಸ್ತ್ರ ಪುರಾಣ ಪುಣ್ಯದ | ಹಾದಿಯನು ನಾನರಿಯೆ ತರ್ಕದ |
ವಾದದಲಿ ಗುರು ಹಿರಿಯರರಿಯದ ಮೂಢ ಮತಿಯೆನಗೆ ||
ಆದಿ ಮೂರುತಿ ನೀನು ನೆರೆಕರು | ಣೋದಯ ಹೃದಯಾಂಗಣದಿ ಜ್ಞಾ |
ನೋದಯವನೆನಗಿತ್ತು ರಕ್ಷಿಸು ನಮ್ಮನನವರತ ||
ಕನಕದಾಸರು—ಹರಿಭಕ್ತಿ ಸುಧೆ.)

೭೪೪

ಜೀವ ಭೇದಮೆರಿಗಿ ಚೆಡಿಪೋನಿವಾರಲು, ಬ್ರಹ್ಮಭಾವಮೊಂದಿ ಪರಗುಚುಂದ್ರು,
ನೀರು ಮುತ್ಯಮ್ಮೆನ ನೀರುಗಾ ಮಾರುನಾ ? ವಿಶ್ವದಾಭಿರಾಮ ವಿನುರ ವೇಮ.

ಜೀವ ಭೇದವರಿತು ಸತ್ತು ಹೋಹರೆಲ್ಲ.
ಬ್ರಹ್ಮಭಾವ ಹೊಂದಿ ಬಾಳುತಿಹರು.
ನೀರು ಮುತ್ತಾದರು, ನೀರಾಗಿ ಬದಲದು.
ವಿಶ್ವದಾಭಿರಾಮ ಕೇಳು ವೇಮ.

ಜೀವ ಎಂದರೇನು? ಜೀವಾತ್ಮ. ಆತ್ಮನಿಗೆ ಶರೀರ ಸಂಬಂಧ ಉಂಟಾದಾಗಲೆಲ್ಲ ಆತ್ಮ ಜೀವಾತ್ಮನೆನಿಸುತ್ತಾನೆ. ಶರೀರ ಉಪಾಧಿಯೆನಿಸುತ್ತದೆ. ಜೀವನಿಗೆ ಜನನ ಮರಣಗಳಿಲ್ಲ. ಜನನ ಮರಣಗಳು ಶರೀರಕ್ಕೆ ಉಂಟು. " ಮಹಾಂತನೂ, ಜನ್ಮರಹಿತನೂ, ಜರಾಶೂನ್ಯನೂ, ಮೃತ್ಯುರಹಿತನೂ ಆದ ಈ ಆತ್ಮನು " (ಬೃಹದಾರಣ್ಯಕ ಉ. ೪.೪-೨೫) ಎಂದು ಜೀವಾತ್ಮನ ಗುಣ ತಿಳಿಸಲಾಗಿದೆ. 'ಶರೀರದ ಮುಪ್ಪಿನಿಂದ ಇದು ಮುಪ್ಪನ್ನು ಹೊಂದುವದಿಲ್ಲ' (ಛಾಂದೋಗ್ಯ ಉ ೮-೧-೫) ಎಂದು ಸ್ಪಷ್ಟಪಡಿಸಲಾಗಿದೆ. ಜೀವ ಕರ್ತೃ. ಜೀವನು ಶರೀರವಿಲ್ಲದೆ ಇರಲಾರನು. ಕಾರಣ ಶರೀರದೊಂದಿಗೆ ಸತ್ತು ಹೋಗುವನು, ಎಂದು ಹೇಳುವರು. ಜೀವ ಬೇರೆ; ಬ್ರಹ್ಮ ಬೇರೆ ಎಂದು ಭೇದ ಕಲ್ಪಿಸುವುದರಿಂದ, ಅಂಥ ಭಾವನೆ ಹುಟ್ಟುತ್ತಿದೆ. ಆದ್ದರಿಂದ ಜೀವ ಭೇದವನ್ನು ಗ್ರಹಿಸಿದವರು. ಸತ್ತು ಹೋಗುವೆವು, ಎಂದು ತಿಳಿಯುವರು.

ಆದರೆ, ಜೀವವು ಬ್ರಹ್ಮನ ಅಂಶವೇ. ಜೀವನು ಉಪಸನೆಯಿಂದ ತನ್ನ ನಿಜ ಸ್ವರೂಪ ತಿಳಿಯಬೇಕಷ್ಟೇ. ಬ್ರಹ್ಮಜ್ಞಾನವಾದಾಗ ಜೀವ–ಬ್ರಹ್ಮರ ಅಭೇದ ಗೋಚರವಾಗುವುದು. ಬ್ರಹ್ಮಜ್ಞಾನದಿಂದ ಹಿಂದಿನ ಪಾಪವು ನಾಶವಾಗುತ್ತದೆ. ಮತ್ತು ಮುಂದಿನ ಕರ್ಮಫಲ ಅಂಟಿಕೊಳ್ಳುವುದಿಲ್ಲ. ಉಪನಿಷತ್ತು ಹೇಳುವುದನ್ನು ನೋಡಿ: " ಯಾವನು ಆ ಪರಮ ಬ್ರಹ್ಮವನ್ನು ತಿಳಿಯುವನೋ ಅವನು ಬ್ರಹ್ಮನೇ (ತನ್ನ ಸಹಜ-ಮಹತ್ವವನ್ನು ಹೊಂದಿದವನಾಗಿ) ಆಗುವನು. ಇವನ ಕುಲದಲ್ಲಿ ಬ್ರಹ್ಮವನ್ನು ತಿಳಿಯದವನು ಹುಟ್ಟುವುದಿಲ್ಲ. ಅವನು ಶೋಕವನ್ನು ಮೀರುವನು. ಹೃದಯ ಗ್ರಂಥಿಗಳಾದ ರಾಗ ದ್ವೇಷಗಳಿಂದ ವಿಮುಕ್ತನಾಗುವನು; ಅಮೃತನಾಗುವನು. (ಮುಂಡಕ ಉ ೩-೨-೯) ಬ್ರಹ್ಮನು ಅಜ; ಅಮೃತ. ಬ್ರಹ್ಮ ತಿಳಿದವರು ಬ್ರಹ್ಮಭಾವದಿಂದ ಬಾಳುವವರು.

ಸ್ವಾತಿ ಮಳೆಯ ಹನಿಯೊಂದು ಕಪ್ಪೆಚಿಪ್ಪಿನಲ್ಲಿ ಬಿದ್ದಾಗ, ಆ ಕಪ್ಪೆ ನೀರಿನ ತಳಕ್ಕೆ ಹೋಗುವುದು. ಆ ನೀರಿನ ಹನಿ ಕೊನೆಗೆ ಮುತ್ತಾಗುವುದು. ಜೀವ ನೀರ ಹನಿ. ಕಪ್ಪೆಚಿಪ್ಪು ಶರೀರ. ಬ್ರಹ್ಮಜ್ಞಾನವಾದಾಗ, ನೀರು ಮುತ್ತಾದಂತೆ. ನೀರೇ ಮುತ್ತು. ಆದರೆ ಮುತ್ತು ನೀರಾಗದು. ಅದೇ ರೀತಿ ಬ್ರಹ್ಮವಾದ ಮೇಲೆ ತೀರಿತು. ಶರೀರ ಸಂಬಂಧ ಭಾವವಿಲ್ಲ.

೭೪೫

ಆರು ದೂಲಮುಲಕು ನಾಧಾರ ಮೈನಟ್ಟ, ಯೊಂಟಕಂಬಮಿಂಟ ನೊನರ ನಿಲ್ಪಿ,
ಯಿಂಟಕೊಕಡು ಕರ್ತ ಯೇಪಾರು ಚುಂಡುನು, ವಿಶ್ವದಾಭಿರಾಮ ವಿನುರ ವೇಮ.

ಆರು ತೊಲೆಗೆ ತಾನು ಆಧಾರವಿಹ ಪರಿ
ಒಂದು ಕಂಬ ಗೃಹದಿ, ಒಪ್ಪ ನಿಲಿಸಿ
ಒಬ್ಬ ಕರ್ತ, ಮನೆಯ ಒಡೆತನ ವಹಿಸುವನು.
ವಿಶ್ವದಾಭಿರಾಮ ಕೇಳು ವೇಮ.

"ಯೋಗಿಗಳ ಅಭಿಪ್ರಾಯದಂತೆ ನಮ್ಮ ಬೆನ್ನು ಮೂಳೆಯಲ್ಲಿ ಇಡ ಮತ್ತು ಪಿಂಗಳ ಎಂಬ ಎರಡು ನರಗಳ ಪ್ರವಾಹವಿದೆ. ಬೆನ್ನಿನ ಮೂಳೆಯ ಮಧ್ಯೆಯಲ್ಲಿ ಸುಷುಮ್ನಾ ಎಂಬ ನಾಳ ಇದೆ. ಬೆನ್ನು ಮೂಳೆ ಲಂಬರ ವರ್ಟಿಬ್ರೆಯಲ್ಲಿ ಕೊನೆಗೊಂಡ ಮೇಲೆ ಅಲ್ಲಿಂದ ಸೂಕ್ಷ್ಮ ನರಗಳು ಹೊರಗೆ ಬರುತ್ತವೆ. ಅದರೊಳಗೆ ಕೂಡ ಸುಷುಮ್ನ ಪ್ಲೆಕ್ಸಸ್ ಎಂಬಲ್ಲಿ ಈ ಕಾಲುವೆ ಕೊನೆಗಾಣುವುದು. ಅದು ಆಧುನಿಕ ಶರೀರ ಶಾಸ್ತ್ರಜ್ಞರ ಅಭಿಪ್ರಾಯದಂತೆ ತ್ರಿಕೋಣಾಕಾರವಾಗಿದೆ. ಕೆಳಗಿನ ತ್ರಿಕೋಣಾಕಾರದಲ್ಲಿರುವ ಗ್ರಂಥಿಯೇ ಮೂಲಾಧಾರ ಚಕ್ರ. ಗುದ ಮತ್ತು ನಾಭಿಯ ಮಧ್ಯೆ ಸಾಧಿಷ್ಠ ಚಕ್ರ. ನಾಭಿಯಲ್ಲಿರುವ ಗ್ರಂಥಿ ಮಣಿಪುರ ಚಕ್ರ. ಹೃದಯದಲ್ಲಿರುವ ಗ್ರಂಥಿ ಅನಾಹತ ಚಕ್ರ. ಕಂಠದಲ್ಲಿರುವ ಗ್ರಂಥಿ ವಿಶುದ್ಧಿ ಚಕ್ರ. ಭ್ರೂಮಧ್ಯೆ ಇರುವ ಗ್ರಂಥಿ ಆಜ್ಞಾ ಚಕ್ರ. ಈ ಆರು ಚಕ್ರಗಳು, ದೇಹ ಪುರಕ್ಕೆ ಆರು ತೊಲೆಗಳಂತೆ. ಈ ಆರು ತೊಲೆಗಳಿಗೆ ಕೇಂದ್ರ ಇಲ್ಲವೆ ಆಧಾರವಾಗಿರುವುದೇ, ಸುಷುಮ್ನಾ ನಾಳ. ಇದು ಕಂಭದಂತೆ ಇದೆ.

ಈ ಬೆನ್ನಿನ ನಾಳವು ಮೆದುಳಿನಲ್ಲಿ 'ಮೆಡಲ' ಎಂಬಲ್ಲಿ ಒಂದು ಗ್ರಂಥಿಯಂತೆ ಕೊನೆಗಾಣುವುದು. ಇದು ಮೆದುಳಿಗೆ ಸೇರಿಲ್ಲ. ಆದರೆ ಮೆದುಳಿನಲ್ಲಿರುವ ಒಂದು ದ್ರವದಲ್ಲಿ ತೇಲುತ್ತಿದೆ. ಈ ಗ್ರಂಥಿಯೇ ಸಹಸ್ರಾರ ಚಕ್ರ.

ಇದನ್ನು ಹೀಗೆ ಕರೆಯುವುದಕ್ಕೆ ಕಾರಣವುಂಟು. ದಶದಿಕ್ಕುಗಳಿಂದ ಬಾಹ್ಯ ಮತ್ತು ಒಳಗಿನಿಂದ ಗ್ರಂಥಿ ಉಪಗ್ರಂಥಿಗಳಿಂದ ನಿಯಂತ್ರಿತವಾದ ಐವತ್ತು ವೃತ್ತಿಗಳು (೫–೨–೫೦-೧೦೦೦) ದಶದಿಕ್ಕುಗಳಲ್ಲಿ , ಅಂತರ್ ಮತ್ತು ಬ್ಯಾಹದಲ್ಲಿ ಸಾವಿರ ವೃತ್ತಿ ಬೀಜಗಳಿರುವುದರಿಂದ ಸಹಸ್ರಾರ ಎನ್ನುವರು. ಸಹಸ್ರಾರ ಚಕ್ರದ ಮೇಲೆ ನಿಯಂತ್ರಣ ಸಾಧಿಸಿದ ಯೋಗಿಯು ನಿರ್ವಿಕಲ್ಪ ಸಮಾಧಿ ಹೊಂದಿ, ನಿರ್ಬೀಜನಾಗಿ, ಮೋಕ್ಷ ಪಡೆಯುವನು.

(ಹೋಲಿಸಿ ನೋಡಿರಿ:—
ಆಧಾರ ಮೊದಲಾದ ಆರು ಚಕ್ರ | ಶೋಧಿಸಿ ಬಿಡಬೇಕು, ಈಷಣ ಮೂರು |
ಸಾಧಿಸಿ ಸುಷುಮ್ನ ಅಲ್ಲಿ | ಭೇದಿಸಿ ನೀ ಪರಬ್ರಹ್ಮ ಸೇರು |
ಎವೆ ಹಾಕದೆ ಮೇಲೆ ನೋಡು ಮುಂದೆ | ತವಕದಿಂದಲಿ ವಾಯು ಬಂಧನ ಮಾಡು||
ಸವಿದು ನಾದವ ಪಾನ ಮಾಡು ಅಲ್ಲಿ | ನವವಿಧ ಭಕ್ತಿಲೆ ನಲಿ ನಲಿದಾಡು ||
ಪುರಂದರ ದಾಸರು.)

೭೪೬

ಆದಿಜೂಚು ಚುಂಡ ನನ್ನಿಟದಾನುಂಡು, ನಾದಿಜೂಡ ನೆವರಿ ಕಲವಿಕಾದು,
ಆದಿಮುಕ್ತಿ ತೇರು ಮದಾತ್ಮನೇಯುಂಡನು, ವಿಶ್ವದಾಭಿರಾಮ ವಿನುರ ವೇಮ.

ಆದಿ ನೋಡುತಿರಲು ಅದರೊಳಿಹುದು ಸಕಲ.
ಆದಿ ನೊಡಲಾರು 'ಆಳು' ಅಲ್ಲ.
ಆದಿ ಮುಕ್ತಿಮಾರ್ಗ ಆತ್ಮದಲ್ಲಿ ಇಹುದು.
ವಿಶ್ವದಾಭಿರಾಮ ಕೇಳು ವೇಮ.

ಈ ವಿಶ್ವವೆಲ್ಲ ಹೇಗೆ ಉಂಟಾಯಿತು.? ಇದರ ಮೂಲವಾದರೂ ಏನು? ಎಂದು ದೀರ್ಘವಾಗಿ ಅಭಿಸಿಸಿದರೆ, ಆದಿಯಲ್ಲಿಯೇ ಸಕಲವೂ ಉಂಟು. ಆದರೆ ಅದನ್ನು ನೋಡಲು ಸಮರ್ಥರಾದವರಾರುಂಟು.? ಪ್ರಶ್ನೋಪನಿಷತ್ತಿನಲ್ಲಿ ಬರುವ ಸೃಷ್ಟಿಯ ವಿವರ ನೋಡಿರಿ: ಪ್ರಜಾಪತಿಯು ರಯಿ ಪ್ರಾಣ ಎಂಬ ಜೋಡಿಯನ್ನು ಸೃಷ್ಟಿ ಮಾಡುತ್ತಾನೆ. ಆದಿತ್ಯನೆ) ಪ್ರಾಣ. ಚಂದ್ರನೇ ರಯಿ. ಮೂರ್ತ(ಸ್ಥೂಲ ವಸ್ತು) ಮತ್ತು ಅಮೂರ್ತ(ಸೂಕ್ಷ್ಮವಸ್ತು ವಾದುದೆಲ್ಲ ರಯಿ. ಅಮೂರ್ತಕ್ಕಿಂತ ಮೂರ್ತವಾದುದೇ ರಯಿ.(ವ್ಯವಹಾರ ದೃಷ್ಟಿಯಿಂದ) ಸ್ಥೂಲವಾದ ಮೂರ್ತವೇ ರಯಿಯಾಗಿ ಸೂಕ್ಷ್ಮವಾದ ಅಮೃತದಿಂದ ಭೋಗಿಸಲ್ಪಡುತ್ತದೆ. ಸೂರ್ಯನು ತನ್ನ ಕಿರಣಗಳಿಂದ ಸರ್ವ ದಿಕ್ಕುಗಳನ್ನು ಆವರಿಸಿ ಪ್ರಾಣಿಗಳ ಕಣ್ಣಿಗಳಿಗೆ ಗೋಚರವಾಗುತ್ತ, ಸರ್ವ ಪ್ರಾಣಗಳನ್ನು ತನ್ನ ರಶ್ಮಿಗಳಲ್ಲಿ ಸೇರಿಸಿಕೊಳ್ಳುವನು. ಹೀಗೆ ಸೂರ್ಯ ಪ್ರಜೆಗಳ ಪ್ರಾಣನಾಗಿರುವನು. ಇತ್ಯಾದಿ. ಹೀಗೆ ಆದಿಯಲ್ಲಿ ಇಲ್ಲದುದು ಯಾವದೂ ಇಲ್ಲ.

ಆದಿಯನ್ನು ಕಾಣುವುದೆಂತೇ? ಅದೇನು ಕಣ್ಣಿಗೆ ಕಾಣುವ ನೋಟವೇ.? ಅಲ್ಲ. ಅದು ಬಾಹ್ಯ ಇಂದ್ರಿಯ ಗೋಚರವಲ್ಲ. ಸ್ಥೂಲದಿಂದ ಸೂಕ್ಷ್ಮದತ್ತ ಮನಸ್ಸಿನ ಗ್ರಹಣ ಶಕ್ತಿ ಹೆಚ್ಚಬೇಕು. ಮನಸ್ಸಿನ ಹರವು ಹೆಚ್ಚಿದಂತೆಲ್ಲ ಸೂಕ್ಷ್ಮವಾದುದೂ ಅದರ ಹರವಿನಲ್ಲಿ ಬರುತ್ತದೆ. ಮನಸ್ಸು ಪರಿಶುದ್ಧವಾದಾಗ ಅದರ ಹರವು ಅನಂತವಾಗುತ್ತದೆ. ಆಗ ಅನಂತವಾದುದೆಲ್ಲ ಅದರ ಹರವಿನಲ್ಲಿ ಬರುವುದು. ಆದರೆ ಇಂಥ ಮನ: ಶುದ್ಧಿಯ ಸಾಧನೆ ಸರ್ವರಿಗೂ ಸಾಧ್ಯವಲ್ಲ.

ಪರಿಪೂರ್ಣ ಶುದ್ಧ ಮನಸ್ಸಿಗೆ ಆತ್ಮ ಗೋಚರಿಸುವನಷ್ಟೇ. ಒಳಗೆ ಆತ್ಮ. ಹೊರಗೂ ಅದೇ ಆತ್ಮ. ಸರ್ವತ್ರ ಅದೇ ಆತ್ಮ. ಸರ್ವಾತ್ಮವಾದದ್ದು ಗೋಚರವಾಗುತ್ತದೆ. ಆತ್ಮ ಗೋಚರಿಸಿದಾಗ, ಆದಿ-ಅಂತ್ಯಗಳಿಲ್ಲ; ಆದಿಯಿಂದ ಮುಕ್ತಿ, ಬಿಡುಗಡೆ ಹೊಂದುವ ಮಾರ್ಗವೇ ಆತ್ಮಾನುಭವ.

೭೪೭

ಇಹಮುನ ಸುಖಿಯಿಂಪ ಹೇಮಕಾರಕ ವಿದ್ಯೆ, ಪರಮುನ ಸುಖಿಯಿಂಪ ಬ್ರಹ್ಮವಿದ್ಯ,
ಕಡಮ ವಿದ್ಯಲೆಲ್ಲ ಗನನಿಷ್ಪಲಂಬುನೇ, ವಿಶ್ವದಾಭಿರಾಮ ವಿನುರ ವೇಮ.

ಹಾಯಾಗಿರೆ ಇಹದಿ, ಹೇಮಕಾರ ವಿದ್ಯೆ.
ಪರದಲ್ಲಿ ಸುಖಿಸಲು ಬ್ರಹ್ಮವಿದ್ಯೆ.
ಅನ್ಯ ವಿದ್ಯೆಯೆಲ್ಲ ಅಂತೆ ನಿಷ್ಫಲವದು.
ವಿಶ್ವದಾಭಿರಾಮ ಕೇಳು ವೇಮ.

ಹಣ ಇದ್ದರೆ ವಾಸಿ. ಹಾಯಾಗಿ ಇರಬಹುದು. ದಾನ ಮಾಡಬಹುದು. ಹಣ ಹೊಂದುವ ವಿದ್ಯೆ ಈ ತೆರನಾದ ಜನರಿಗೆ ಇವ್ವರೇನಂತೆ? ಯಾರು ತಮ್ಮ ಮನಸ್ಸನ್ನು ಪ್ರವೃತ್ತಿ ಮಾರ್ಗದಿಂದ ನಿವೃತ್ತಿ ಮಾರ್ಗದತ್ತ ತಿರುಗಿಸಲಾರರೋ, ಅವರು ನಿರ್ಧನರಾದರೆ ತುಂಬಾ

ಕಷ್ಟ. ಮನೋನಿಗ್ರಹ ಹೊಂದದೆ, ಸುಮ್ಮನೆ ಇರುವ ಹಣ ಕಳೆದುಕೊಂಡು, ಬಿಟ್ಟರೆ, ಅವರಿಗೆ ಮುಂದೆ ಹಳಹಳಿ ತಪ್ಪಿದ್ದಲ್ಲ. ನಿನಗೆ ಆಸೆ ತಪ್ಪದ ವರೆಗೆ ದಾನದ ಹೆಸರಿನಲ್ಲಿ ಏನೂ ನೀಡಬೇಡ. ಅದರಿಂದ ನಿನಗೆ ಹಳಹಳಿಯಾಗುವುದು. ಕಷ್ಟ ಉಂಟಾಗುವುದು.

ಬ್ರಹ್ಮ ವಿದ್ಯೆಯಿಂದ ಐಹಿಕ ಸುಖದ ಕಲ್ಪನೆ ತಪ್ಪೆಂದು ತೋರುವುದು, ಮೈಮೇಲೆ ಬಂಗಾರು ತೊಡುಗೆ ಇಟ್ಟುಕೊಂಡು ಸಂತೋಷಿಸುವುದು, ಶುದ್ಧ ಮೂರ್ಖತನವೆನಿಸುವುದು. ಈ ದೇಹದ ಬಗ್ಗೆ ಬೇರೊಂದು ರೀತಿಯ ವಿಚಾರಧಾರೆ ಮಿನುಗುವುದು. ದೇಹವು ನಶ್ವರ ಎಂದು ತಿಳಿಯುವುದು. ಪರಿಶುದ್ಧ ಮನಸ್ಸಿನಿಂದ ಆತ್ಮಭಾವ ಹೊಂದಿದಾಗ, ಶರೀರದ ಗೊಡವೆಯೇ ಇಲ್ಲ. ಎಲ್ಲವೂ ಆನಂದಮಯ. "ಆನಂದಂ ಬ್ರಹ್ಮ". ಇತರೆ ಶಾಸ್ತ್ರವಿದ್ಯೆ, ವ್ರತೋಪಚಾರೆ, ಕಲ್ಪ, ನಿರುಕ್ತ, ಛಂದಸ್ಸಾದಿಗಳೆಲ್ಲ ಮಿಥ್ಯವಾದ ವಿದ್ಯೆಗಳಷ್ಟೇ. ಅವುಗಳೆಲ್ಲ ನಿಷ್ಫಲ.

(ಹೋಲಿಸಿ ನೋಡಿರಿ:—

ಧರ್ಮ ಮಾರ್ಗದಲಿ ಮನೆಬಾಳ್ಕೆ ನಡೆಸಿದರೆ,
ಹೊರ ಮಾರ್ಗದಲಿ ಹೋಗಿ ಪಡೆವುದೇನು?
ಭೂಮಿಯಲಿ ಬಾಳಬೇಕಾದಂತೆ ಬಾಳ್ವನು.
ಸ್ವರ್ಗದಲಿ ವಾಸಿಸುವ ದೇವರಲಿ ಗಣನೆ ಪಡುವಂ.

ಕುರುಳ್—ತಿರುವುಳ್ಳವೂರ್.

"ಕುರುತೀ ಗಂಗಾಸಾಗರೆಗಮನಂ ವ್ರತಪರಿಪಾಲನಮಥವಾ ದಾನಂ |
ಜ್ಞಾನವಿಹೀನಂ ಸರ್ವ ಮನೇನ ಮುಕ್ತಿರ್ನ ಭವತಿ, ಜನ್ಮ ಶತೇನ ||
–ಜರ್ಪಟ ಪಂಜರಿಕಾ ಸ್ತೋತ್ರಂ – ಆಚಾರ್ಯ ಶಂಕರ

ಗಂಗೆಸಾಗರ ಕೂಡುವಲ್ಲಿಗೆ ತೀರ್ಥಯಾತ್ರೆಮಾಡಬಹುದು. ವ್ರತಗಳನ್ನು ಪರಿಪಾಲಿಸಬಹುದು. ಧನಕನಕ ಹೊಂದಿ ದಾನ ನಿರತನಾಗಬಹುದು. ಆದರೆ ಅದೆಲ್ಲ ಇಲ್ಲಿ ಮಾತ್ರ. ಆದರೆ ಬ್ರಹ್ಮಜ್ಞಾನವನ್ನು ಹೊರತು ಪಡಿಸಿ, ಇವುಗಳಾವವುಗಳಿಂದ, ನೂರು ಜನ್ಮ ಕಳೆದರೂ ಮುಕ್ತಿ ಲಭಿಸದು.

೭೪೮

ಪಿಲ್ಲಿ ಯೆಲುಕ ಬಟ್ಟ ಪ್ರಿಯಮುನ ನುಂಡಕ, ಯದಿಯೆ ಕೋಡಿಬಟ್ಟ ನನುಗವುಂಚು,
ಮಮತ ಮಿಡುವಕುನ್ನ ಮುರಿಸೋಕ್ಕಮಬ್ಬುನಾ ? ವಿಶ್ವದಾಭಿರಾಮ ವಿನುರ ವೇಮ.

ಇಲಿಯು ಹಿಡಿಯೆ ಬೆಕ್ಕು ಇಷ್ಟಪೂರ್ಣವಿಹುದೆ ?
ಕೋಳಿ ಹಿಡಿಯೆ ಸಿದ್ಧ--ಗೊಳ್ಳುತಿಹುದು.
ಮಮತೆ ತೊರೆಯದನಕ ಮೋಕ್ಷ ದೊರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

'ಸುಖಕೆ ದಾಹ ನಿತ್ಯವಾಗಿರುವುದರಿಂದ ಆಸೆ ಅನಾದಿ' (ತಾನುಶಾಸನಾದಿತ್ವಂ ಚಾಶಿಷೋ ನಿತ್ಯತ್ವಾತ್ ॥ ಪತಂಜಲಿ ಸೂತ್ರ ೪-೧೦) 'ನಮ್ಮ ಅನುಭವವೆಲ್ಲ ಸುಖದ ಮೇಲಿನ ಆಶೆಯಿಂದ ಮೊದಲಾಗುವುದು. ಪ್ರತಿಯೊಂದು ಅನುಭವವೂ ಹಿಂದಿನ ಅನುಭವದ ಸ್ವಭಾವದ ಮೇಲೆ ನಿಂತಿರುವುದರಿಂದ ಅನುಭವಕ್ಕೆ ಆದಿಯಿಲ್ಲ.

ಇದನ್ನು ತಿಳಿಯಲು ಕಷ್ಟವೇನಿಲ್ಲ. ನಮ್ಮ ದಿನ ನಿತ್ಯದ ಸಾಮಾನ್ಯ ದೃಶ್ಯಗಳಿಂದಲೂ ಇದನ್ನು ತಿಳಿಯಬಹುದು. ಬೆಕ್ಕು ತನ್ನ ಮಾಂಸದ ಬಯಕೆ ತೀರಿಸಿಕೊಳ್ಳಲು ಇಷ್ಟಪಡುತ್ತದೆ. ಅದರಿಂದ ಬೆಕ್ಕಿಗೆ ಇಲಿಯ ಮೇಲಾಸೆ. ಇಲಿಯನ್ನು ಹಿಡಿಯುತ್ತದೆ, ತಿನ್ನುತ್ತದೆ. ಹೊಟ್ಟೆತುಂಬಿತು. ಆದರೆ ಆಸೆ ಹಿಂಗುವುದಿಲ್ಲ. ಏಕೆಂದರೆ ಮಾಂಸಭಕ್ಷಣದಿಂದ ಆದ ಸುಖಾನುಭವದಿಂದ ಮತ್ತೆ ಆ ಅನುಭವ ಪಡೆಯುವ ಅವಕಾಶ ಹುಡುಕಲು ಹವಣಿಸುತ್ತದೆ. ಕೋಳಿ ಕಂಡಿತೋ, ತೀರಿತು. ಟಣ್ಣನೆ ಹಾರಿ ಕೋಳಿ ಹಿಡಿಯಲು ಸಿದ್ಧವಾಗುತ್ತದೆ.

ಸುಖ-ಭೋಗ ವಸ್ತುಗಳನ್ನು ಕುರಿತು ಆಸಕ್ತಿ ತೊರೆಯದಿದ್ದರೆ, ಮನಸ್ಸಿನಲ್ಲಿ ಆಸೆಯಿಂದೆದ್ದ ಚಿತ್ತವೃತ್ತಿಗಳು ಸಂಚಯವಾಗುತ್ತವೆ. ಇವುಗಳಿಂದ ಪರಿಣಾಮ ಉಂಟಾಗುವುದು. ಆ ಪರಿಣಾಮ ಕರ್ಮಕ್ಷಯವಾಗುವ ವರೆಗೆ ಕೆಲಸ ಮಾಡಿದರೆ, ಮಾತ್ರ ನಾಶವಾವುದು ಆಗ ಮನಸ್ಸು ಶುದ್ಧವಾಗುವುದು. ಶುದ್ಧ ಮನಸ್ಸಿನಲ್ಲಿ ಆತ್ಮ ಪ್ರತಿಬಿಂಬಿಸುವುದು. ಆತ್ಮ ಮನಕ್ಕೆ ಗೋಚರಿಸಿದಾಗ ನಿತ್ಯ-ನಶ್ವರಗಳ ಅರಿವು ಉಂಟಾಗಿ ಮನಸ್ಸು ಅವಿದ್ಯೆಯಿಂದ ಮುಕ್ತವಾಗುವುದು. ಆದರೆ ಮಮತೆ ತೆರೆಯದೆ ಇದ್ದರೆ ಮೋಕ್ಷವೆಂತು ಸಾಧ್ಯ?

೭೪೯

ತರುಣಿ ಸುತಲು ಧನಮು, ಧಾನ್ಯಮುಲ್ ಸಂಪದ, ಲೆಂತಚುಟ್ಟುಕೊನಿನ ನಂತ ಚೇಟು ಪಸಿರಿ ಕಾಯ ಪುರುಗು ಪದ್ದತಿ ಕಾನಂಗ, ವಿಶ್ವದಾಭಿರಾಮ ವಿನುರ ವೇಮ.

ತರುಣಿ ಸುತರು ಧನವು ಧ್ಯಾನ್ಯಾದಿ ಸಂಪದ,
ಎಷ್ಟು ಸುತ್ತುವುದೋ ಅಷ್ಟು ಕೇಡು.
ರೇಶ್ಮೆಯಾ ಹುಳುವಿನ ರೀತಿಯಿಹುದು ಕಣಾ.
ವಿಶ್ವದಾಭಿರಾಮ ಕೇಳು ವೇಮ.

ರೇಶ್ಮೆ ಹುಳು ಹಸಿರು ತೊಪ್ಪಲು ಮೇಲೆ ಜೀವಿಸುವುದಷ್ಟೇ. ಆ ಹಸಿರೆಲೆಗಳಿಂದ ರಸ ಹೀರಿಕೊಂಡು, ಅನಂತರ ತನ್ನ ಸುತ್ತು ತಂತುಗಳನ್ನು ನಿರ್ಮಿಸುತ್ತದೆ. ಕಾಲಕಳೆದಂತೆಲ್ಲ ರೇಶ್ಮೆ ಹುಳುವಿನ ಸುತ್ತಲು ರೇಶ್ಮೆಯ ಗೂಡು ಬೆಳೆಯುತ್ತದೆ. ಹುಳುವಾದರೋ ತಾನೇ ನಿರ್ಮಿಸಿದ ಪಂಜರದಲ್ಲಿ ಸಿಲುಕಿಕೊಳ್ಳುವುದು.

ಮನುಷ್ಯನ ಹಾಡೂ ಇದೇ ರೀತಿ. ತಾನು ಪುರುಷ. ಪ್ರಜಾಭಿವೃದ್ಧಿಗ್ಯಾಯೂ ಬಂದವ. ಅಂದ ಮೇಲೆ ಹೆಂಡತಿ ಬೇಡವೇ? ಹೆಂಡತಿ ಅಪುತ್ರಳಾಗಿ ಸತ್ತರೆ ಸ್ವರ್ಗವೆಲ್ಲಿ?

ಹಾಂ! ಮಕ್ಕಳನ್ನೂ ಹೊಂದುವನು. ಮಕ್ಕಳು-ಹೆಂಡಿರುಗಳ ಪೋಷಣೆಗೆ ಧನ ಬೇಕು. ಧಾನ್ಯ ಬೇಕು. ಅವುಗಳನ್ನು ಪಡೆಯಲು ಪ್ರಯತ್ನಿಸುವನು. ಈ ಬೇಕುಗಳ ಬಳ್ಳಿ ಬೆಳೆದು ಸುತ್ತಿಕೊಳ್ಳುವುದು. ತೀರದ ಆಶೆಗೆ ಸುರುವಾಯ್ತು. ಇದರಿಂದ ಕೇಡು ಉಂಟು. ಬೇಕು ಹೆಚ್ಚಾದರೆ, ಕೇಡು ಸಹ ಅಷ್ಟೇ ಹೆಚ್ಚು.

ರೇಶ್ಮೆ ಹುಳು ತನ್ನ ತಂತುವಿನ ಪೊರಟೆಯಲ್ಲಿ ಸಿಕ್ಕು ಸಾಯುವಂತೆ, ಮನುಷ್ಯನೂ ಪ್ರಾಪ್ತಿಯ ಆಶೆಯಲ್ಲಿ ಸಿಕ್ಕು ನಾಶವಾಗುವನು.

(ಹೋಲಿಸಿ ನೋಡಿರಿ:

"ಅರ್ಥಮನರ್ಥಂ ಭಾವಯ ನಿತ್ಯಂ ನಾಸ್ತಿ ತತಸ್ಸುಖಲೇಶಸ್ಸತ್ಯಮ್ |
ಪುತ್ರಾದಪಿ ಧನಭಾಜಾಂ ಭೀತಿಸ್ಸರ್ವತ್ರೈಷಾ ವಿಹಿತಾ ರೀತಿಃ ||
ಕಾ ತೇ ಕಾಂತಾ ಕಸ್ತೇ ಪುತ್ರಸ್ಸಂಸಾರೋಽಯಮತೀವ ವಿಚಿತ್ರಃ |
ಕಸ್ಯತ್ವಂ ಕಃ ಕುತ ಆಯಾತಃ ತತ್ತ್ವಂ ಚಿಂತಯ ತದಿಹ ಭ್ರಾತಃ ||"

೭೫೦

ತೆವುಲು ಪಡ್ಡವಾಡು ದೇವತಾಭಕ್ತುಂಡು, ಈಟಲೇನಿವಾಡು, ಪೋಟು ಬಂಟು, ಕಾಸುಲೇನಿವಾಡು ಕಡುಬ್ರಹ್ಮಚಾರಿಯೌ, ವಿಶ್ವದಾಭಿರಾಮ ವಿನುರ ವೇಮ.

ದೊಡ್ಡ ರೋಗ ಬಡಿಯೆ, ದೇವತಾ ಭಕ್ತನು.
ಈಟಿಯಿಲ್ಲದವನು ಇರಿವ ಬಂಟ!
ಕಾಸು ಇಲ್ಲದವನು ಕಡು ಬ್ರಹ್ಮಚಾರಿ.
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯ ತನ್ನ ಮನಸ್ಸಿನ ಶಕ್ತಿಯ ಉತ್ಕರ್ಷಕ್ಕಾಗಿ ಸಾಧನೆ ಮಾಡಬೇಕು. ದೇಹಾರೋಗ್ಯವಿದ್ದರೆ, ಮನಸ್ಸಿನ ಆರೋಗ್ಯವೂ ಉಂಟು. ದೇಹಾರೋಗ್ಯದ ವಿಚಾರ ಅಷ್ಟರ ಮಟ್ಟಿಗೆ ಮಾತ್ರ. ಆದರೆ ಮನಸ್ಸಿಗೆ ಅನಂತವನ್ನು ಗ್ರಹಿಸುವ ಶಕ್ತಿ ಉಂಟು. ಇದಕ್ಕಾಗಿ ಮನಸ್ಸಿನಲ್ಲಿ ಅನವಶ್ಯಕವಾದ ವಿಷಯವೃತ್ತಿಗಳು ಹುಟ್ಟದಂತೆ ನೋಡಿಕೊಳ್ಳಬೇಕು. ವಿಷಯದ ಆಸಕ್ತಿ ಇಲ್ಲವಾಗಬೇಕು. ಆಗ ಮನಸ್ಸು ನಿವೃತ್ತಿಯತ್ತ ಹೊರಳುವುದು. ದೈವ ಪ್ರೇಮ ಕುದುರುವುದು. ಇದು ಭಕ್ತಿ. ಆದರೆ ದೊಡ್ಡ ರೋಗ ಬಡಿದಾಗ, ಯಾವ ದೇಹವು ನಶ್ವರವೆಂದು ತತ್ತ್ವ ಸಾರುವುದೋ, ಅದನ್ನು ಕಾಪಾಡಲು ಮಾತ್ರ ವೈದ್ಯ ಹಕೀಮರಲ್ಲಿ ಪ್ರಯತ್ನಿಸಿ, ಕೊನೆಗೆ 'ದೇವರೇ ನೀನೇ ಗತಿ!' ಎಂದು ಫಲದಾಸೆಯಿಂದ ನುಡಿದರೆ, ಅಲ್ಲಿ ಭಕ್ತಿಯೆಲ್ಲಿ? ಇಂಥವರೇ ಕಲ್ಲುದೇವರ ಭಕ್ತರು! ಕಲ್ಲುಮೂರ್ತಿಗೆ ಬೆಳ್ಳಿಯ ಮೀಸೆ, ಬಂಗಾರದ ಗಿಲೀಟು ಹಾಕಿಸುವ ಹರಕೆ ಹೊರುವ, ಭಕ್ತಾಗ್ರೇಸರರಿವರು!! ದೊಡ್ಡ ರೋಗ ಬಡಿದಾಗಲೂ, ಎದೆಗುಂದಬಾರದು. ಚಿತ್ತಸ್ವಾಸ್ಥ್ಯ ಕಾಪಾಡಿಕೊಳ್ಳಬೇಕು. ರೋಗ ವಾಸಿಯಾಗುವಂತಿದ್ದರೆ, ನಿಶ್ಚಯವಾಗಿ ವಾಸಿಯಾಗುವುದು.

ಇಂಥ ' ಸಂಕಟ ಬಂದಾಗ ವೆಂಕಟರಮಣ ' ಅನ್ನುವ, ಭಕ್ತರನ್ನು ಕಂಡರೆ, ಯಾರು ನಗಲಿಕ್ಕಿಲ್ಲ ? ನನ್ನ ಭಕ್ತಿಯಿಂದ ನಾನು ದೇವರನ್ನೇ ಗೆಲ್ಲುತ್ತೇನೆ' ಎಂದು ಹಲವರು ಹೇಳುವುದು, ಹೇಗೆಂದರೆ, ಚೂರಿಯೇ ಹತ್ತಿರ ಇಲ್ಲದವನು ಬರಿ ಬಾಯಿಂದ '' ನನಗೆ ಕೋಪ ತರಿಸಬೇಡ. ಇರಿದು ಬಿಟ್ಟೀನು. ' ಎಂದು ಬರಿಗೈಯಿಂದ ಇರಿಯ ಹೋದವನ ಬಂಟತನದಂತೆ. ಹಣವುಳ್ಳವನಿಗೆ ವೇಶ್ಯಾಗೃಹಕ್ಕೆ ಪ್ರವೇಶ. ಹಣವೇ ಇಲ್ಲದಿದ್ದರೆ ಅಲ್ಲಿಗೆ ಹೋಗುವಂತಿಲ್ಲ. ಅದರಿಂದ ಅಷ್ಟು ಕಾಲ ತಾನು ಬ್ರಹ್ಮಚಾರಿಯಾಗಿದ್ದೆ? ಎಂದು ಜಂಬ ಕೊಚ್ಚಿದಂತೆ, ಬ್ರಹ್ಮಚಾರಿ ಕಾಯಾ, ವಾಚಾ, ಮನಸಾ ಬ್ರಹ್ಮಚರ್ಯದಿಂದ ಯುಕ್ತನಾಗಿರಬೇಕಷ್ಟೇ.

೭೫೦

ಆದಿಕಾರಣಮುನು ನಲ್ಪುಡೆಟ್ಟುಲೆರುಂಗು ? ಜಿಪ್ಪಲೇಡುಕಾನಿ ತಪ್ಪುಬಟ್ಟು,
ತ್ರೋಯನೇರ್ಪುಕುಕ್ಕ ದೊಂತುಲ ಬೇರ್ಪುನಾ ? ವಿಶ್ವದಾಭಿರಾಮ ವಿನುರ ವೇಮು.

ಆದಿ ಕಾರಣವನು ಅಲ್ಪನರಿವನೆಂತು ?
ಹೇಳಲಾರನವನು ತಪ್ಪು ತಿಳಿದು,
ಚೆಲ್ಲಲರಿತ ನಾಯಿ ಜೋಡಿಸಿಡದು ಪಾತ್ರೆ.
ವಿಶ್ವದಾಭಿರಾನು ಕೇಳು ವೇಮು.

ಸೃಷ್ಟಿಯ ಆದಿಯಲ್ಲಿ ಏನಿತ್ತು ? ಸೃಷ್ಟಿಗೆ ಕಾರಣವಾದುದೇನು ? ಎಂಬುದು ಎಷ್ಟು ರಹಸ್ಯವಾದುದೋ, ಅಷ್ಟೇ ಕಠಿಣವಾದ ವಿಷಯ. ಐತರೀಯೋಪನಿಷತ್ತಿನ ಮೊದಲನೆಯ ಅಧ್ಯಾಯದಲ್ಲಿ ಈ ಬಗ್ಗೆ ಪ್ರಸ್ತಾಪವುಂಟು. ಆ ಅಧ್ಯಾಯದ ಮೇಲೆ ಆಚಾರ್ಯ ಶಂಕರರು ನೀಡಿದ ವಾಕ್ಯಾರ್ಥ ನೋಡಿರಿ: ' ಜಗತ್ತಿನ ಉತ್ಪತ್ತಿ-ಸ್ಥಿತಿ-ಪ್ರಳಯಗಳನ್ನು ಮಾಡುವವನೂ, ಅಸಂಸಾರಿಯೂ, ಸರ್ವಜ್ಞನೂ, ಸರ್ವ ಶಕ್ತಿಯುಳ್ಳವನೂ, ಸರ್ವವಿದನೂ ಆದ ಪರಮಾತ್ಮನು ಈ ಜಗತ್ತನ್ನೆಲ್ಲ-ತನಗಿಂತ ಭಿನ್ನವಾದ ಬೇರೊಂದು ವಸ್ತುವನ್ನು ಉಪಾದಾನವಾಗಿ ತೆಗೆದುಕೊಳ್ಳದೆ, ಆಕಾಶಾದಿ ಕ್ರಮದಿಂದ ಸೃಷ್ಟಿಸಿದನು. ಅನಂತರ ಆತ್ಮ ಪ್ರಬೋಧಕ್ಕಾಗಿ ಪ್ರಾಣವೇ ಮೊದಲಾದವುಗಳಿಂದ ಕೂಡಿರುವ, ಸರ್ವಶರೀರಗಳನ್ನೂ ತಾನೇ ಪ್ರವೇಶಿಸಿದನು. ಮತ್ತು ಪ್ರವೇಶಿಸಿದ ಮೇಲೆ ಯಥಾರ್ಥವಾದ ತನ್ನ ಆತ್ಮನನ್ನೇ, " ಈ ಬ್ರಹ್ಮವೇ ಆಗಿರುತ್ತೇನೆ " ' ಇದಂ ಬ್ರಹ್ಮಾಸ್ಮಿ ' ಎಂದು ಸಾಕ್ಷಾತ್ತಾಗಿ ಅರಿತುಕೊಂಡನು. ಆದುದರಿಂದ ಸರ್ವ ಶರೀರಗಳಲ್ಲಿಯೂ ಅವನೊಬ್ಬ ಆತ್ಮನೇ ಹೊರತು ಬೇರೊಬ್ಬನಿಲ್ಲ. ಆದ ಕಾರಣ ಎಲ್ಲರೂ " ಅವನು ನನ್ನ ಆತ್ಮನು " ' ಸ ಮ ಆತ್ಮಾ ' ' ನಾನು ಬ್ರಹ್ಮನಾಗಿದ್ದೇನೆ .' ' ಅಹಂ ಬ್ರಹ್ಮಾಸ್ಮಿ ' (ಬೃ. ಉ.) ಎಂದು ಅರಿಯಬೇಕು "

ಹೀಗೆ ಆದಿ ಕಾರಣನು ಪರಮಾತ್ಮನೇ. ಇದನ್ನು ಅಲ್ಪನಾದವನು ತಿಳಿಯುವುದು ಹೇಗೆ ? ಪೂರ್ಣ ಪರಿಶುದ್ಧ ಮನಸ್ಸು ಇರದೆ, ಅವನು ಸತ್ಯ ತಿಳಿಯಲಾರನು, ಅಶುದ್ಧ ಮನಸ್ಸಿನಿಂದ ತಿಳಿಯ ಹೋದರೆ, ತಪ್ಪಾಗಿ ತಿಳಿಯುವ ಸಂಭವನವೇ ಹೆಚ್ಚು. ತಪ್ಪು ಗ್ರಹಿಕೆಯ

ವನು ಸತ್ಯ ವಿವರಿಸುವುದೆಂತು ? ತಪ್ಪಿನಿಂದ ತಪ್ಪು ಮಾಡುವುದೇ ಸ್ವಭಾವವಾಗುವುದಷ್ಟೇ ? ಪಾತ್ರೆಗಳನ್ನು ನಾಯಿ ಚಲ್ಲಾಪಿಲ್ಲಿ ಮಾಡುತ್ತದೆ. ಆದರೆ ಅದು ಅವೇ ಪಾತ್ರೆಗಳನ್ನು ಪೂರ್ವದಲ್ಲಿದ್ದಂತೆ ಜೋಡಿಸಿ ಇಡಲಾರದು ಜೋಡಿಸಿಡುವುದು ಅದರ ಸ್ವಭಾವವಲ್ಲ.

೭೫೧

ಅಂತರಂಗಮುಂದು ನಪರಾಧವುಲ ಜೇಸಿ, ಮುಂಚಿವಾನಿವಲೆನೆ ಮನುಜುಡುಂಡು,
ಇತರುಲೆರುಗಕುನ್ನ ನೀಶ್ವರು ಡೆರುಗಡಾ ? ವಿಶ್ವದಾಭಿರಾಮ ವಿನುರ ವೇಮು.

ಅಂತರಂಗದಲ್ಲಿ ಅಪರಾಧವ ಗೈದು,
ಒಳ್ಳೆಯವ ನರೀತಿ ಉಂಟು ಮನುಜ.
ಇತರರರಿಯದಿರಲು, ಈಶ್ವರನರಿಯನೇ ?
ವಿಶ್ವದಾಭಿರಾಮ ಕೇಳು ವೇಮ.

ಅಂತರಂಗದಲ್ಲಿ ಗೆಯ್ಯುವ ಅಪರಾಧ ಎಂಥದು? ನಾವು ಬಾಹ್ಯದಲ್ಲಿ ಯಾವ ಯಾವ ಅಪರಾಧಗಳನ್ನು ಗೆಯ್ಯುವೆವೋ, ಅವನ್ನೆಲ್ಲ ಅಂತರಂಗದಲ್ಲಿಯೂ ಗೆಯ್ಯಬಹುದು. ಪರರ ವಸ್ತುವನ್ನು ಕೈಯಿಂದ ದೋಚಿದರೆ, ' ಕಳವು' ಆದಂತೆ, ಪರರ ವಸ್ತುವನ್ನು ಕುರಿತು, ನುನದಲ್ಲೆ ಆಸೆ ಹೊಂದುವುದೂ ಸಹ ಕಳವು. ಇದೇ ರೀತಿ ಪರ ಸ್ತ್ರೀಯರನ್ನು ಕಾಮುಕ ದೃಷ್ಟಿಯಿಂದ ನೋಡುವುದು ಸಹ ಮಹಾಪರಾಧ. ಇಂಥ ಅಸಂಖ್ಯ ಅಪರಾಧಗಳನ್ನು ಮನಸ್ಸಿನಲ್ಲಿ ಗೆಯ್ದು, ಮೇಲು ನೋಟಕ್ಕೆ ನೀತಿವಂತನಾಗಿ ತೋರಿಸಿಕೊಳ್ಳುತ್ತಾನೆ. ಇಂದ್ರಿಯ ನಿಗ್ರಹಾದಿಗಳನ್ನು ಮಾಡಲು ಶಕ್ತಿ ಇಲ್ಲದವರು, ಅದನ್ನು ಸಾಧಿಸಬಲ್ಲ ಯೋಗಿಗಳಂತೆ ನಟಿಸುತ್ತ, ಗುಪ್ತವಾಗಿ ಸುಖಭೋಗಗಳಲ್ಲಿ ನಿರತರಾದವರು ಅನೇಕರುಂಟು. ಈ ರೀತಿಯ ಕಪಟ ನಡೆಯನ್ನು ಜನರು ತಿಳಿಯದಿರಬಹುದು. ಆದರೆ ಸರ್ವಜ್ಞನೂ, ಸರ್ವ ವ್ಯಾಪ್ತನೂ ಆದ ಈಶ್ವರನು ತಿಳಿಯದಿರಲು ಸಾಧ್ಯವೇ? ಇಂಥ ಮನದವರು ಪಡುವ ಮನೋಕ್ಲೇಶಾದಿಗಳೇ ಇವರ ಅಂತರಂಗದ ಅಪರಾಧಿ ಕರ್ಮಗಳ ಫಲವಾಗುವುದು.

(ಹೋಲಿಸಿ ನೋಡಿರಿ:-

'ಮುಗಿಲು ಮುಟ್ಟುವ ತೋರ್ಕೆ ತಾನೇನ ಮಾಡುವುದು ?
ತನ್ನ ಮನ ತಾನರಿತ ದೋಷದಲಿ ಬೇಳ್ವುದಾಗೆ '
'ತಪವ ಮರೆಗೊಂಡು ಅಲ್ಲದುವ ಮಾಡುವುದು,
ಪೊದರ ಮರೆಗೊಂಡು ಬೇಡ ಹಕ್ಕಿ ಹಿಡಿದಂತೆ '

ಕುರುಳ್-ತಿರುವಳ್ಳುವರು.)

೭೫೨

ನಿಜಮುವರುಸನೆರಿಗಿ ನಿರ್ಮಲತ್ವಂಬಂದಿ, ಪಲುಕುಲೋನಿಯರ್ದ ಮುಲರದೆಲಿಸಿ,
ಪಲುಕ ಕುಂಡುವಾಡೆ ಪರಮಾತ್ಮಯಗುನುರಾ, ವಿಶ್ವದಾಭಿರಾಮ ವಿನುರ ವೇಮು.

ನಿಜದ ರೀತಿಯರಿತು, ನಿರ್ಗುಣತ್ವ ಹೊಂದಿ,
ನುಡಿಯೊಳಿರುವ ಅರ್ಥ ನೇರ ತಿಳಿದು;
ಹೇಳದಿರುವವನೇ ಪರಮಾತ್ಮನಾಗುವ,
ವಿಶ್ವದಾಭಿರಾಮ ಕೇಳು ವೇಮ.

ಆತ್ಮವೊಂದೇ ಸತ್ಯ. 'ಸತ್ಯಂ ಜ್ಞಾನಮ್ ಅನಂತಂ ಬ್ರಹ್ಮ' (ತೈ. ಉ. ೨–೧) ಸತ್ಯವೇ ಬ್ರಹ್ಮ. ಸರ್ವಶಕ್ತ, ಸರ್ವಜ್ಞ, ಜ್ಯೋತಿರ್ಮಯ, ಆನಂದಮಯವಾದುದೇ ಬ್ರಹ್ಮ. ಬ್ರಹ್ಮಕಾರ್ಯವಾದ ಜಗತ್ತು ಬ್ರಹ್ಮಕ್ಕಿಂತ ಬೇರೆಯಲ್ಲ. ಕಾರಣನಾದ ಪರಬ್ರಹ್ಮನೂ, ಕಾರ್ಯವಾದ ಜಗತ್ತೂ ಅಭಿನ್ನವು. ಮಣ್ಣನ್ನು ಗಡಿಗೆಯ ಆಕಾರಕ್ಕೆ ತಂದಾಗಲೂ ಮಣ್ಣಾಗಿಯೇ ಇರುತ್ತದೆ. ಕಾರ್ಯ ಕಾರಣಗಳಲ್ಲಿ ಭೇದವು ಕಂಡುಬರುವುದು, ಅವಸ್ಥೆಯಿಂದ. ಸ್ವಪ್ನದ ಹಾಗೆ ಜಗತ್ತು ಮಾಯಾಮಯವಲ್ಲ. ಬ್ರಹ್ಮದ ಸೃಷ್ಟಿಯು ಲೀಲೆಯ ಹಾಗೆ. ಇದು ಸತ್ಯದ ರೀತಿ. ಇದನ್ನು ತಿಳಿದವನು ಸತ್ವ, ರಜಸ್ಸು ಮತ್ತು ತಮಸ್ಸು ಎಂಬ ತ್ರಿಗುಣಗಳಿಂದ ಅತೀತನಾಗಬೇಕು. ಏಕೆಂದರೆ, ತಾಮಸ ಗುಣವು ಅಜ್ಞಾನದಿಂದ ಹುಟ್ಟಿದೆ. ಸಮಸ್ತ ಪ್ರಾಣಿಗಳನ್ನು ಮೋಹಪಡಿಸುವುದು. ಅದು ಆಲಸ್ಯ, ನಿದ್ರೆ, ಕರ್ತವ್ಯಚ್ಯುತಿಗಳಿಂದ ಆತ್ಮನನ್ನು ಬಂಧಿಸುತ್ತದೆ. ರಜೋಗುಣವು ರಾಗಾತ್ಮಕವಾದುದು. ಅದು ಕರ್ಮಸಂಗದಿಂದ ಆತ್ಮನನ್ನು ಬಂಧಿಸುತ್ತದೆ. ಸತ್ತ್ವಗುಣವು ನಿರ್ಮಲವೂ, ಪ್ರಕಾಶವೂ, ನಿರುಪದ್ರವವೂ, ಆದುದು. ಅದು ಸುಖಸಂಗದಿಂದ ಮತ್ತು ಜ್ಞಾನಸಂಗದಿಂದ ಆತ್ಮನನ್ನು ಬಂಧಿಸುತ್ತದೆ. ಕಾರಣ ಎಲ್ಲ ಬಂಧನಗಳಿಂದ ಮುಕ್ತರಾಗಲು ನಿರ್ಗುಣತ್ವ ಹೊಂದಬೇಕು.

ಅನಂತರ ನುಡಿಯೊಳಿರುವ ಅರ್ಥ ನೇರವಾಗಿ ತಿಳಿಯಬೇಕು. ನಾವು 'ಆಕಳು' ಎಂಬ ಶಬ್ದ ಕೇಳಿದೆವು. ಅದರ ಅರ್ಥ ಅಂದರೆ ಆಕಾರಾದಿ ವಿಚಾರಿಸುತ್ತೇವೆ. ಮುಂದೆ ಇದರ ಪರಿಣಾಮ ಮನಸ್ಸಿನಲ್ಲಿ ಉಳಿಯುವುದು. ಇದುವೇ ಜ್ಞಾನ. ಎಲ್ಲ ಶಬ್ದಗಳ ಅರ್ಥ ಅರಿತು, ಜ್ಞಾನ ಪಡೆಯಬೇಕು. ಅಂಥ ನಿರ್ವಿಕಲ್ಪ ಸಮಾಧಿಯಲ್ಲಿ ತೋರುವುದು. ಬಣ್ಣನೆಗೆ ಶಬ್ದ ಸಾಲವು. ಅದನ್ನು ಹೇಳದಿರುವವನೇ ಪರಮಾತ್ಮನೆನಿಸುವನು.

೭೫೪

ನಿಜಮುದೆಲಿಸಿಯುನ್ನ ಸುಜನುಡಾನಿಜಮುನೆ, ಪಲುಕವಲಯುಗಾನಿ ಪರುಲಕೊರಕು.
ದಾಪಗೂಡದಿಂಕ ನೋಪ ದನ್ಯಮುಬಲ್ಕ, ವಿಶ್ವದಾಭಿರಾಮ ಕೇಳು ವೇಮ.

ನಿಜವು ತಿಳಿದ ಬಳಿಕ, ಸುಜನರಾನಿಜವನೆ,
ಪೇಳುತಿರುವರಷ್ಟೆ; ಪರರಿಗಾಗಿ.
ಬಚ್ಚಿಡುವುದು ಬೇಡ; ಬೇರೆ ಹೇಳೆ, ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸತ್ಯವನ್ನು ಋಷಿ–ಮುನಿಗಳು ತಿಳಿದುಕೊಳ್ಳುತ್ತಾರೆ. ಎಲ್ಲರೂ ಇದನ್ನು ತಿಳಿಯುವುದು ಸಾಧ್ಯವಿಲ್ಲ. 'ನ ಬಲಹೀನೇನ ಲಭ್ಯಃ' ಯಾವ ಸರ್ವಜ್ಞತೆಯು ಉಳಿಸವರಲ್ಲಿ, ಬೀಜ

ರೂಪವಾಗಿದೆಯೋ, ಅದು ಜ್ಞಾನಿಗಳಲ್ಲಿ ಪೂರ್ಣ ವಿಕಾಸಕ್ಕೆ ಬಂದಿರುವುದು. " ತತ್ರ ನಿರತಿಶಯಂ ಸರ್ವಜ್ಞತ್ವಂ ಬೀಜಂ" [ಪತಂಜಲಿ ಸೂತ್ರ. ೧-೨೫]

ಇಂಥ ತಿಳಿದವರು ಉಳಿದವರಿಗೆ ಹೇಳುತ್ತಾರೆ:
" ತದೇತದಿತಿ ಮನ್ಯಂತೇ ಽನಿರ್ದೇಶ್ಯಂ ಪರಮಂ ಸುಖಮ್ |
ಕಥಂ ನು ತದ್ವಿಜಾನೀಯಾಂ ಕಿಮು ಭಾತಿ ವಿಭಾತಿ ವಾ ||

(ಕಠ ಉ. ೫—೧೪) 'ಅಪರಿಮಿತ, ಪರಮ ಸುಖವಾದ 'ಅದೇ ಇದು' ಎಂದು ತಿಳಿಸುತ್ತಾರೆ. (ಒಳಗಿರುವ ಆತ್ಮವು) ಇದು ತಾನಾಗಿಯೇ ಹೊಳೆಯುವುದೋ ಇಲ್ಲವೆ ಹೊಳೆಯುವಂತೆ ಮಾಡಲ್ಪಡುವುದೋ ನಾನು ತಿಳಿಯುವದೆಂತು? ಉತ್ತರ ಹೀಗೆ; ಅಲ್ಲಿ ಸೂರ್ಯನ ಬೆಳಕು ಬೀಳದು. ಚಂದ್ರ ತಾರೆ, ಮಿಂಚುಗಳಿಲ್ಲ. ಈ ಯಜ್ಞದ ಅಗ್ನಿಯಂತೂ ಮೊದಲೇ ಇಲ್ಲ. ಅದು ತಾನೇ ಹೊಳೆಯುವದು. ತತ್‌ಕ್ಷಣವೇ ಸಕಲವೂ ಹೊಳೆಯುವದು. ಇದೇ ರೀತಿ ಜ್ಞಾನಾನುಭವದ ಇತರ ಹೇಳಿಕೆಗಳು. ಹಲವರು ಸತ್ಯದ ಮೇಲೆ ಮುಸುಕು ಹಾಕುತ್ತಾರೆ. ಅದು ಬೇಡ. ಸತ್ಯವನ್ನು ಬಿಟ್ಟು ಅನ್ಯಥಾ ಹೇಳುವದೂ ಬೇಡ.

ಹೋಲಿಸಿ ನೋಡಿರಿ:–

"ಯಾವನು ಈ ಪರಮ ರಹಸ್ಯವನ್ನು (ನಿಃಶ್ರೇಯಸ್ಸಿಗೆ ಕಾರಣವಾದ ಬ್ರಹ್ಮವಿದ್ಯೆಯನ್ನು ನನ್ನ ಭಕ್ತರಲ್ಲಿ ಹೇಳುತ್ತಾನೆಯೋ ಅವನು ನನ್ನಲ್ಲಿ ಪರಮ ಭಕ್ತಿಯನ್ನು ಮಾಡಿ, ನನ್ನನ್ನೇ ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ.

" ಮನುಷ್ಯರಲ್ಲಿ ಅವನಿಗಿಂತಲೂ ನನಗೆ ಪ್ರಿಯವನ್ನುಂಟು ಮಾಡುವವನು ಯಾವನೂ ಇಲ್ಲ. ಭೂಮಿಯಲ್ಲಿ ಅವನಿಗಿಂತ ನನಗೆ ಪ್ರಿಯತರನಾದ ಬೇರೆ ಯಾವನೂ ಹುಟ್ಟುವುದಿಲ್ಲ. "

–ಭಗವದ್ಗೀತಾ. ೧೮-೬೮, ೬೯,

೭೫೫

ತಲ್ಲಿ ಪಾರ್ವತಿಯಗು ದಂಡ್ರಿಯೇ ಶಂಭುಂಡು, ಪ್ರಮಥಗಣಮು ಲಖಿಲ ಬಂಧು ವಿತತಿ,
ತನಕು ಬುಟ್ಟನಿಲ್ಲು ತನರ ಗೈಲಾಸಂಬೆ, ವಿಶ್ವದಾಭಿರಾಮ ವಿನುರ ವೇಮ.

ತಾಯಿಯೆ ಪಾರ್ವತಿಯು, ತಂದೆಯೇ ಶಂಭುವು;
ಪ್ರಮಥಗಣವು, ಅಖಿಲ ಬಂಧುಬಳಗ.
ತಾನು ಹುಟ್ಟಿದ ಮನೆ, ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ಪಾರ್ವತಿ, ಶಂಭು, ಪ್ರಮಥ ಗಣ, ಕೈಲಾಸ ಎಂಬ ಶಬ್ದಗಳೆಗೇನು ಅರ್ಥ?. ದಾರ್ಶನಿಕ ಸಾಹಿತ್ಯವನ್ನು ವಿವರಿಸುವ ಪುರಾಣ-ಸಾಹಿತ್ಯದಲ್ಲಿ ಶಬ್ದಗಳ ಬಳಕೆ, ಅವುಗಳಿಗೆ ನೀಡಿದ ಅರ್ಥ, ಅವುಗಳ ಸುತ್ತು ಹೆಣೆದ ಕತೆಮೂಲ ಕಲ್ಪನೆಯನ್ನೇ ಮರೆಸುವಂತಿವೆ. ಇಲ್ಲಿ

ನೋಡಿರಿ. ಸಾಂಖ್ಯರ ಪುರುಷ-ಪ್ರಕೃತಿ, ಶಿವ-ಶಕ್ತಿ ಎಂದುಮಾರ್ಪಟ್ಟವು. 'ಶಂಭು' 'ಪಾರ್ವತಿ'ಯಾದವು. ಪರ್ವತದಲ್ಲಿ ಹುಟ್ಟಿದುದು ಪ್ರಕೃತಿಯಷ್ಟೇ. ಅಂದರೆಪಾರ್ವತಿಯಿಂದೇ ಅನ್ನ ಒದಗಿಸುತ್ತದೆ. ಅನ್ನಾಹಾರ ನೀಡುವವಳೇ ತಾಯಿ; ಪಾರ್ವತಿಯೇ ತಾಯಿ. ಕಲ್ಯಾಣ ನಿರ್ಮಾಣ ಮಾಡುವವನೇ ಶಂಭು. ಅಂದರೆ ತಂದೆ. ತಂದೆಗಿಂತ ಹೆಚ್ಚು ಹಿತ ಕೋರುವ ವರಾರು? ಪ್ರಕೃತಿ ಪುರುಷರ ಸಂಬಂಧ ಪಡೆದ ಜೀವರಾಶಿಯೆಲ್ಲ ಪ್ರಮಥ ಗಣವಷ್ಟೇ. ಅಖಿಲ ಬಂದು ಬಳಗವೇ ಪ್ರಮಥ ಗಣವು.

ಕೈಲಾಸವೆಂದರೇನು? ಆನಂದದ ಸ್ಥಿತಿಯಷ್ಟೇ. ಆನಂದ ಇರುವ ನೆಲೆಯೇ ಅದು. ಅನ್ನ ನೀಡುವ ತಾಯಿ, ಕಲ್ಯಾಣ ಕೋರುವ ತಂದೆ, ಸದ್ಭಾವದ ಬಂಧು ಬಳಗ ಇರುವಾಗ ಮನೆಯಲ್ಲಿ ಆನಂದವಿಲ್ಲದೆ ಇನ್ನೇನು ಇದ್ದೀತು? ಕೈಲಾಸವೆಂದರೆ, ಆನಂದಮಯವಾದ ಹುಟ್ಟಿದ ಮನೆಯೇ ಆಗಿದೆ.

೭೫೬

ತನುವುನಸ್ಥಿರಮನಿ ಧನವುನಸ್ಥಿರನುನಿ, ತಿಲುಪನೇರ್ಚಿ ತಾನು ದಿಲಿಯನೇರ್ಚಿ
ಪಾತ್ರುಡೈನಯೋಗಿ ಪರಮಾತ್ಮಯೇ ಸುಮೀ, ವಿಶ್ವದಾಭಿರಾಮ ವಿನುರ ವೇಮ

ತನು ಅಸ್ಥಿರನೆಂದು, ಧನವಸ್ಥಿರನೆಂದು,
ತಿಳಿಯು ಹೇಳಿ, ತಾನು ತಿಳಿದು ಕಲಿತು,
ಪಾತ್ರನಾದಯೋಗಿ ಪರಮಾತ್ಮನು ಕಣಾ
ವಿಶ್ವದಾಭಿರಾಮ ಕೇಳು ವೇಮ.

ದೇಹವು ನಶ್ವರ; ಆತ್ಮವೊಂದೇ ನಿತ್ಯ. 'ನಿತ್ಯನೂ ಅವಿನಾಶಿಯೂ, ಅಪ್ರಮೇಯನೂ (ಪ್ರತ್ಯಕ್ಷಾದಿ—ಪ್ರಮಾಣಗಳ ಮೂಲಕ ಗ್ರಹಿಸಲು ಸಾಧ್ಯವಲ್ಲದವನು) ಆದ ಈ ಆತ್ಮನ ದೇಹಗಳು ನಶ್ವರವಾದುವೆಂದು ಜ್ಞಾನಿಗಳು ಹೇಳುತ್ತಾರೆ. ಮನುಷ್ಯನು ಹೇಗೆ ಹಳೆಯ ಬಟ್ಟೆಗಳನ್ನು ಬಿಟ್ಟು ಬೇರೆ ಹೊಸ ಬಟ್ಟೆಗಳನ್ನು ತೆಗೆದುಕೊಳ್ಳುತ್ತಾನೋ, ಹಾಗೆಯೇ ದೇಹವನ್ನು ಹೊಂದಿರುವ ಆತ್ಮನು, ಜೀರ್ಣವಾದ ಶರೀರಗಳನ್ನು ಬಿಟ್ಟು ಬೇರೆ ಹೊಸ ಶರೀರಗಳನ್ನು ಹೊಂದುತ್ತಾನೆ'' ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ.

ಧನವು ಸಹ ಸ್ಥಿರವಾದುದಲ್ಲ. ಸಿರಿತನ ಒದಗಿಸುವ ವಿಧಿಯಿಂದ ಉದ್ಯೋಗ ಶೀಲತೆಯುಂಟಾಗುವದು. ಧನವು ನಿಷ್ಪ್ರಯೋಜಕವೂ ಕೂಡ. "ನಾನು ಹಣವಂತನು. ಮತ್ತು ಕುಲೀನನು. ನನಗೆ ಸಮನಾದವನು ಬೇರೆ ಯಾವನಿದ್ದಾನೆ? ನಾನು ಯಾಗ ಮಾಡುವೆನು, ದಾನ ಮಾಡುವೆನು, ಮೋದ ಪಡುವೆನು—ಎಂದು ಅಜ್ಞಾನದಿಂದ ಮೋಹಿತರಾಗಿ, ಅನೇಕ ಚಿಂತೆಗಳಿಂದ ಭ್ರಾಂತರಾಗಿ ಮೋಹಜಾಲದಿಂದ ಆವರಿಸಲ್ಪಟ್ಟವರಾಗಿ, ಕಾಮ ಭೋಗಗಳಲ್ಲಿ ಆಸಕ್ತರಾಗಿ ಅಶುಚಿಯಾದ ನರಕದಲ್ಲಿ ಬೀಳುತ್ತಾರೆ'' (ಭಗವದ್ಗೀತೆ ೧೬-೧೫, ೧೬.)

ತನು— ಧನಗಳ ಅಸ್ಥಿರತೆಯನ್ನು ಮನಗಂಡು, ಯಾವನು ಅದನ್ನೇ ಇತರರಿಗೂ ತಿಳಿಸುವಂಥ ಮನೋಶುದ್ಧಿಯನ್ನು ಪಡೆದಿರುವನೋ, ಪರಮಾತ್ಮನೊಂದಿಗೆ ಸೇರಿಕೊಳ್ಳಲು ಪಾತ್ರನಾದವನು. ಹೀಗೆ ಪಾತ್ರನಾದ ಯೋಗಿಯು ಪರಮಾತ್ಮನಾಗುವನು.

೭೫೭

ಬ್ರಹ್ಮನುದಲಗೊಟ್ಟ ಪಾರವೈಚಿನಯಪ್ಪು, ದಡ್ಡು ಪಡುಗ ನೋಪರ್ಕೆರಿ ಸುರಲು,
ಶಿವುನಿಕರುಣಲೇಮಿ ಜಿಡಿಪೋಕ ಪೋದುರಾ, ವಿಶ್ವದಾಭಿರಾಮ ವಿನುರ ವೇಮ.

ಬ್ರಹ್ಮನ ತಲೆ ಕಡಿದು ಪಾರುಗಾಣಿಸಿದೊಡೆ,
ತಡೆದು ರಕ್ಷಿಸಲಿಲ್ಲ; ತಾವು ಸುರರು.
ಶಿವನ ಕರುಣೆಯಿರದೆ ಕೆಟ್ಟು ಹೋಗದಿಹರೆ?
ವಿಶ್ವದಾಭಿರಾಮ ಕೇಳು ವೇಮ.

ಸೃಷ್ಟಿಕರ್ತನಾದ ಬ್ರಹ್ಮನಿಗೆ ಮೊದಲು ಐದು ತಲೆಗಳಿದ್ದವು. ಒಮ್ಮೆ ಇಶ್ವರನು. ಕೋಪದಿಂದ ಅಹಂಕರಿಸಿದ ಈತನ ಒಂದು ತಲೆಯನ್ನು ಕತ್ತರಿಸಿದುದರಿಂದ ಬ್ರಹ್ಮನು ಚತುರ್ಮುಖವಾದನೆಂದು ಪುರಾಣಕತೆ ಇದೆ ಬ್ರಹ್ಮನ ಶಿರವನ್ನು ಕಡಿದು ಎಲ್ಲಿಯೋ ದೂರು ಬಿಸುಟುವ ವರೆಗೆ ದೇವತೆಗಳೆಲ್ಲ ನಿಃಸಹಾಯಕರಾಗಿ ನೋಡುತ್ತ ಕುಳಿತರು ಅವರಾರಿಗೂ ಅದನ್ನು ತಡೆಯುವುದಾಗಲಿಲ್ಲ. ಎಂದರೇನು? ಅಹಂಕಾರ ಅಹಮಹಮಿಕೆ ಎಂಥವನಿಗಾದರೂ ಸಲ್ಲದು. ಕೆಲವೊಮ್ಮೆ ಅದು ನೆತ್ತಿಗೇರಿ ಬುದ್ಧಿಗೇಡಿಗಳಾಗುವುದುಂಟು. 'ತಲೆ ಕಳೆದುಕೊಳ್ಳುತ್ತಾರೆ. ಸಮಚಿತ್ತತೆಬೇಕು. ಸಮಚಿತ್ತತೆಯೇ ಶಿವಸ್ಥಿತಿ. ಶಿವನ ಕರುಣೆ ಇಲ್ಲದಿದ್ದರೆ ಕೆಟ್ಟು ಹೋಗುವರಷ್ಟೇ.

(ಹೋಲಿಸಿ ನೋಡಿರಿ.

ದಂಡಧರನುಪಟಳದಿ ಮಿಗೆ ಮುಂ | ಕೊಂಡು ಮೊರೆ ಹೋಗುವವರ ಕಾಣೆನು |
ಪುಂಡರೀಕೋದ್ಭವನ ಶಿರವನು ಕಡಿದು ತುಂಡಿಸಿದ ||
ಖಂಡ ಪರಶುವು ರುದ್ರ ಭೂಮಿಯೊ | ಳಂಡಲೆದು ತಿರುಗುವನು ನೀನು |
ದ್ದಂಡ ದೇವರ ದೇವ ರಕ್ಷಿಸು ನಮ್ಮನನವರತ ||

ಕನಕದಾಸರು— ಹರಿಭಕ್ತಸಾರ— ೭೨)

೭೫೮

ಬಿಡಿಯ ಮಿಂತಲೇಕ ಪೆದ್ದನುನೇನಂಚು, ಬೊಂಕಮುಲನು ಬಲ್ಕು ಸಂಕರುನಕು,
ಹೆಚ್ಚು ಕಲುಗ ದಿಚಟ ಚಚ್ಚಿನರಾದಟ, ವಿಶ್ವದಾಭಿರಾಮ ವಿನುರ ವೇಮ.

ನಾಚುಗೆಯಿನಿತಿರದೆ ನಾನೆ ದೊಡ್ಡವನೆನೆ,
ಸುಳ್ಳು ನುಡಿಯ ಹೇಳಿ, ಶಂಕರನಿಗೆ
ಮೇಲುದೊರೆಯದಿಲ್ಲಿ; ಮುರಣಿಸಿದರು ಬರದು.
ವಿಶ್ವದಾಭಿರಾಮ ಕೇಳು ವೇಮ.

ನಾಚುಗೆಯೆಂದರೆ ಏನು ? ಅಧರ್ಮ ಮಾಡದಿರುವುದು, ಅಲ್ಲದುದನ್ನು ಮಾಡದಿರುವುದು ನಾಚುಗೆ. ಸ್ತ್ರೀ ತನ್ನ ಮುಖವನ್ನು ಪರಪುರುಷರಿಗೆ ತೋರಬಾರದು ಎಂಬುದು ಧರ್ಮ. ಸ್ತ್ರೀ ತನ್ನ ಮುಖದ ಮೇಲೆ ಮುಸುಕು ಎಳೆಯುವುದು ನಾಚುಗೆ. ಇದು ಬಹಿರಂಗ ವ್ಯವಹಾರ. ಸ್ತ್ರೀ ಪರಪುರುಷರನ್ನು ಕೇಳು ಭಾವನೆಯಿಂದ ನೋಡು

ವುದನ್ನು ಬಿಡುವುದೇ ನಾಚುಗೆ. ಇದು ಅಂತರಂಗದ ನಾಚುಗೆ. ಇದನ್ನು ಸಾಧಿಸಿದರೆ, ಮುಸುಕು ಇದ್ದರೂ ಅಷ್ಟೇ; ಇರದಿದ್ದರೂ ಅಷ್ಟೇ.

ಇದೇ ರೀತಿ ಪರಮಾತ್ಮನೇ ಸರ್ವಶಕ್ತ; ಸರ್ವಂತರ್ಯಾಮಿ. ಸರ್ವನಿಯಾಮಕ. ಸರ್ವಕರ್ತ. ಹೀಗಿದ್ದರೂ, ಯಾವನೊಬ್ಬನು ನಾನು ದೊಡ್ಡವನು. ನಾನು ರಾಜ; ನಾನು ಪ್ರಧಾನಿ; ನಾನು ಸರ್ವಾಧಿಕಾರಿ ಎನ್ನುವುದು ನಾಚುಗೆಗೇಡಿತನ. ಅಂಥ ಬಾಯಿ ಬಡಕನ ಶಕ್ತಿ ಎಷ್ಟು ಎಂಬುದನು ಜನ ಆರಿಯದಿರಬಹುದು. ಶಂಕರನು ಅರಿಯದಿಹನೇ? ಸುಳ್ಳು ಹೇಳಿ ಮೋಸಗೆಯ್ದರೆ, ಲೋಕದ ಜನರೂ ಮೆಚ್ಚರು; ಮರಣಾನಂತರವೂ ಉತ್ತಮ ಗತಿ ಇಲ್ಲ.

(ಹೋಲಿಸಿ ನೋಡಿರಿ :

' ಮುಗಿಲು ಮುಟ್ಟುವ ತೋರ್ಕೆ ತಾನೇನ ಮಾಡುವುದು;
ತನ್ನ ಮನ ತಾನರಿತ ದೋಷದಲಿ ಬೀಳ್ವುದಾಗೆ '
' ವಂಚನೆಯ ಮನದವನ ಮರೆ ನಡೆವಳಿಯ ಕಂಡು
ಪಂಚಭೂತಂಗಳೂ ನಗುವುವೊಳಗೊಳಗೇ. '

— ಕುರಿಳ್ ೨ ತಿರುವಳ್ಳುವರ್

೭೫೯

ನೀವು ಪಲುಕು ಚುನ್ನ ನಿತ್ಯಪೂಜಿತುಡೌನು, ನೀವು ಪಲುಕಕುನ್ನ ನಿದ್ರ ಪೋವು
ನೀವು ಪಲುಕು ಪಲುಕು ನಿರ್ಮಲುಂಡೆರುಗುರಾ ವಿಶ್ವದಾಭಿರಾಮ ವಿನುರ ವೇಮು.

ನೀನು ನುಡಿಯುತಿರಲು ನಿತ್ಯಪೂಜಿ ತನಿಹೆ.
ನೀನು ನುಡಿಯದಿರಲು ನಿದ್ರೆ ಹೋಹೆ.
ನೀನು ನುಡಿವ ನುಡಿಯು, ನಿರ್ಮಲವೆಂದು ತಿಳಿ.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಯ ನುಡಿಯು ಆತ್ಮವಾಣಿ; ಅಂತರ್ವಾಣಿ. ಹಾಗೆಂದರೇನು? ಯೋಗಿ ಸಕಲ ಪ್ರಾಣಿಗಳಲ್ಲಿರುವ ಆತ್ಮವೇ ತನ್ನ ಆತ್ಮವೆಂಬ ಜ್ಞಾನ ಹೊಂದಿದವನು. ಈವನು ನುಡಿದಾಗ ಪ್ರತಿಯೊಬ್ಬರೂ ತಮ್ಮ ಹೃದಯದ ಭಾವನೆಯೇ ಅದರಲ್ಲಿ ವ್ಯಕ್ತವಾದಂತೆ ಅನುಭವ ಹೊಂದುತ್ತಾರೆ. ಅಂಥ ನುಡಿಯು ಭಕ್ತಿಪುರಸ್ಸರವಾದುದು. ನುಡಿಯುವವನು ಪೂಜಾರ್ಹನೆನಿಸುವನು. ಪೂಜೆಯೆಂದರೆ ಫಲಪುಷ್ಪ ಪತ್ರಿತೋಯಗಳ ಅರ್ಪಣೆ ಅರ್ಚನೆಯಲ್ಲ. ಅದು ಗೌಣವಾದುದು. ಶ್ರವಣ, ಮುನನ, ನಿಧಿಧ್ಯಾಸನ ಪೂಜೆಯೆನಿಸಬಹುದು.

ಯೋಗಿ ಯಾವಾಗ ಮೌನ ತಾಳುವನೋ ಅವನು ನಿದ್ರೆಹೋಗಿರುವನು.ಅದುಸ್ವಪ್ನದ ಆಚೆ.ಏಕೆಂದರೆ ಸ್ವಪ್ನದಲ್ಲಿ ಸಂಸ್ಕಾರದಿಂದ ಶಬ್ದ ಅರ್ಥ ಜ್ಞಾನಗಳು ಅನುಭವವೇದ್ಯವಾಗುತ್ತವೆ. ಅಷ್ಟೇಕೆ ಅದು ಸುಷುಪ್ತಿಯ ಆಚೆಗಿನ ಸ್ಥಿತಿಯನ್ನಬಹುದು. ಏಕೆಂದರೆ ಸುಷುಪ್ತಿಯಲ್ಲಿಯೂ ಶಬ್ದದ ಪರಿಣಾಮವಾದ ಜ್ಞಾನವುಂಟು. ಸುಷುಪ್ತಿಯಾಚೆಯ ತುರೀಯಾವಸ್ಥೆಯು

ಆಳ ನಿದ್ರೆಯ ಹೋಲಿಕೆಯುಳ್ಳದ್ದು. ಅದು ಜ್ಞಾನಾತೀತವಾದದ್ದು.

ನಿರ್ಮಲವೆಂದರೆ ಮಲವಿಲ್ಲದ್ದು. ಅರ್ಥಾತ್, ಆಸೆ, ಕೋಪ ಲೋಭ, ಮೋಹ, ಮದ, ಮತ್ಸರಾದಿಗಳಿಂದ ಅಬಾಧಿತವಾದುದು. ಯೋಗಿಯ ನುಡಿಯು ಈ ಪರಿ ನಿರ್ಮಲವಾದುದು.

೭೬೦

ಕೊಂಪಲೋನ ಮುರುಗು ಕೋಕಲೋನ ಮುರುಗು, ಕನ್ನ ತಲ್ಲಿಮುರುಗು ಕಡುಪು ಮುರುಗ್,
ಇನ್ನಿ ಮುರುಗುಲಂದು ನೀಶುಂಡು ಮುರುಗಯಾ, ವಿಶ್ವದಾಭಿರಾಮ ವಿನುರ ವೇಮು.

ಭವನದಲ್ಲಿ ಅಡಗಿ, ಬಟ್ಟೆಯಲ್ಲಿ ಅಡಗಿ,
ಹಡೆದ ತಾಯೊಳಡಗಿ, ಒಡಲೊಳಡಗಿ,
ಇಷ್ಟರೊಳು ಅಡಗಲು ಈಶನಡಗದಿಹನೆ ?
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಭೌತಿಕ ದೇಹವು ದೃಗ್ಗೋಚರವಾದುದು. ಪ್ರಪಂಚದ ವಸ್ತುಗಳೂ ದೃಗ್ಗೋಚರವಾದವುಗಳು. ಆದರೂ ಇವು ಒಂದರೊಳಗೊಂದು ಅಡಗಿ ಮರೆಯಾದಂತಿವೆ. ಇದೋ ನೋಡಿರಿ. ನಿಮ್ಮ ಹೃದಯಾಕಾಶದಲ್ಲಿ ಬ್ರಹ್ಮಉಂಟು. ಅದರ ಮೇಲೆ ಧ್ಯಾನ ಮಾಡಿರಿ ಎನ್ನುವುದನ್ನು ಉಪನಿಷತ್ತುಗಳೆಲ್ಲ ಬೋಧಿಸುತ್ತಿವೆಯೆಂಬುದನ್ನು ತಿಳಿದಿದ್ದೀರಿ. ಈ ಹೃದಯವು ನಿಮ್ಮ ಒಡಲೊಳಗೆ ಅಡಗಿದೆಯಷ್ಟೇ. ನಿಮ್ಮ ದೇಹ ತಾಯಿಗರ್ಭದಲ್ಲಿ ಅಡಗಿದ್ದ ಸ್ಥಿತಿ ನೆನೆಯಿರಿ. ನಿಮ್ಮ ತಾಯಿಯ ಅಂಗ ಬಟ್ಟೆಯಲ್ಲಿ ಅಡಗಿದುದನ್ನೂ ಜ್ಞಾಪಿಸಿಕೊಳ್ಳಿ. ಬಟ್ಟೆಯುಟ್ಟ ತಾಯಿ ಮನೆಯಲ್ಲಿ ಅಡಗಿರುವಳಲ್ಲವೇ? ಭವನದಾಚೆಯಿಂದ ನಾವು ನೋಡಬಲ್ಲೆವಾದರೆ, ಈಯೆಲ್ಲ ಮರೆ ಇಲ್ಲವಾಗಬಹುದು. ಇದು ಕಣ್ಣಿನಿಂದ ಅಸಾಧ್ಯ. ಹೃದಯಾಕಾಶದಲ್ಲಿರುವ ಸದ್ವಸ್ತುವಿನ ಮೇಲೆ ಧ್ಯಾನ ಮಾಡುವುದರಿಂದ, ಇದು ಎಲ್ಲಿ ಎಲ್ಲಿ ಉಂಟು? ಎಂಬುದನ್ನು ಅರಿಯಬಹುದು.

ಇಷ್ಟೊಂದು ಭೌತಿಕ ಅವರಣಗಳು ಧ್ಯೇಯ ಸದ್ವಸ್ತುವನ್ನು ಮರೆ ಮಾಡಿರುವಾಗ, ಅತಿಸೂಕ್ಷ್ಮವಾದ ಈಶನು ಅಡಗಿರುವುದೆಲ್ಲಿ? ಅವನನ್ನು ನೋಡುವುದು ಸಾಧ್ಯವೆಂತು?

೭೬೧

ಕಾವಿಬಟ್ಟ ಗಟ್ಟ ಘನಯೋಗಿವಲೆನುಂಡಿ, ವೆಲಯ ರಾತ್ರಿಗಾಗ ವಿಡಿಚಿಪೆಟ್ಟ,
ತೊಡರಿ ತಿರುಗುವಾಡು ದೊಂಗಸನ್ಯಾಸಯಾ, ವಿಶ್ವದಾಭಿರಾಮ ವಿನುರ ವೇಮು.

ಕಾವಿ ಬಟ್ಟೆಯುಟ್ಟು ಘನಯೋಗಿಯು ರೀತಿ;
ಅಲೆದು ಸಂಜೆಯಾಗೆ, ಅರಿವು ಬಿಟ್ಟು,
ಬೆನ್ನು ಹತ್ತಿ ತಿರುಗೆ, ಭಂಡ ಸಂನ್ಯಾಸಿಯು.
ವಿಶ್ವದಾಭಿರಾಮ ಕೇಳು ವೇಮ.

ದೇಹಕ್ಕೆ ಇಲ್ಲವೆ ಬಟ್ಟೆಗೆ ಯಾವುದೋ ಬಣ್ಣ ಕೊಟ್ಟುಕೊಳ್ಳುವುದ ಧಾರ್ಮಿಕ ಸಾಧನೆಯ ಅಂಗವೆಂದು ಹಲವಾರು ಮತ-ಶಾಖೆಗಳಲ್ಲಿ ತಿಳಿಯುವರು. ಆದರೆ ಅದರಲ್ಲಿ ಯಾವ ಹುರುಳೂ ಇಲ್ಲ. ಮಹಾತ್ಮಾ ಕಬೀರ ಹೇಳುವಂತೆ: "ಕಾವಿ ಕೆಂಪು ಬಟ್ಟೆಯಿಂದ ಯೋಗಿಯಲ್ಲ| ಬಣ್ಣವಿರದ ಮನಸು ಇದ್ದರಾಯಿತಲ್ಲ||" ಕಪ್ಪು ಬಟ್ಟೆಯನ್ನು ತೊಡುವವರು ಶೂದ್ರರು; ಬಿಳಿ ಬಟ್ಟೆ ತೊಡುವವರು ಬ್ರಾಹ್ಮಣರೆನಿಸರು. ಕಾವಿ ಬಟ್ಟೆ ತೊಡುವುದು, 'ಸಕಲವನ್ನೂ ಒಂದೇ ಸದ್ವಸ್ತುವಿನ ಬಣ್ಣದಿಂದ ನೋಡುವುದರ ಬಾಹ್ಯ ಸಂಕೇತ' ವೆಂದು ಜನ ತಿಳಿದುದರ ದುರುಪಯೋಗ ಪಡೆದು, ತನಗೆ ಇಂದ್ರಿಯ ನಿಗ್ರಹ ಸಾಧ್ಯವಲ್ಲ ವೆನಿಸಿದ್ದರೂ, ಅದನ್ನು ಸಾಧಿಸಿದವರಂತೆ ವೇಷ ಹಾಕುವವನು, ಭಂಡ ಸಂನ್ಯಾಸಿಯು. ಇಂಥವರು ಜನವಂಚಕರಾಗಿ ಪರಿಣಮಿಸುತ್ತಾರೆ. ಜನರು ಇಂಥವರಲ್ಲಿ ವಿಶ್ವಾಸವಿಡುತ್ತಾರೆ.

ಇವರಾದರೋ ಸಂಜೆಯಾದೊಡನೆ ಹೆಣ್ಣಿನ ಬೆನ್ನು ಹತ್ತಿ ಹೋಗುವರು. ಹಲವಾರು ಮತೀಯ ಗುರುಗಳಲ್ಲಿ, ಆಚಾರ್ಯರಲ್ಲಿ ಇಂಥವರು ವಿಪುಲವಾಗಿರುವ ಬಗ್ಗೆ ಆಗೀಗ ಕೇಳಿ ಬರುತ್ತಲೇ ಇದೆ.

(ಪೋಲಿಸಿ ನೋಡಿರಿ:

'ಜಟಿಲೋ ಮುಂಡೀ ಲುಂಛಿತ ಕೇಶಃ ಕಾಷಾಯಾಂಬರ ಬಹುಕೃತ ವೇಷಃ |
ಪಶ್ಯನ್ನಪಿ ಚ ನ ಪಶ್ಯತಿ ಮೂಢ ಉದರನಿಮಿತ್ತೋ ಬಹುಕೃತ ವೇಷಃ ||.'
''ನಾರೀ ಸ್ತನಭರ ನಾಭೀದೇಶಂ ದೃಷ್ಟ್ವಾ ಮಾಯಾ ಮೋಹಾವೇಶಮ್ |
ಏತನ್ಮಾಂಸವಸಾದಿ ವಿಕಾರಂ ಮನಸಿ ವಿಚಿಂತಯ ವಾರಂ ವಾರಮ್ ||''

ಬೋಳುತಲೆ, ಕಟ್ಟಿದ ಜಡೆ, ಕಾವಿ ಬಟ್ಟೆ ಇತ್ಯಾದಿ ವೇಷ ಬಹಳ. ಇದೆಲ್ಲ ಕಣ್ಣುಕಟ್ಟುವಷ್ಟು ನಿಚ್ಚಳವಾಗಿದ್ದರೂ, ಮನುಷ್ಯ ಕಾಣದಂತೆ ನಟಿಸುತ್ತಾನೆ. ಬಹು ವೇಷಗಳೆಲ್ಲ ಕೂಳಿಗಾಗಿಯಷ್ಟೇ. ಸ್ತ್ರೀಯ ಸ್ಫುಟಗೊಂಡ ಸ್ತನಗಳು, ನಾಭಿ ಪ್ರದೇಶಗಳನ್ನು ನೋಡಿ, ಮೋಹಾವೇಶದಲ್ಲಿ ಸಿಲುಕುವನು. ಇದೆಲ್ಲ ಬರಿ ಮಾಂಸ ಮಜ್ಜ, ರಕ್ತಗಳಿಂದ ಆದುದೆಂದು ಮನದಲ್ಲಿ ಬಾರಿಬಾರಿಗೆ ಚಿಂತಿಸು. -ಆಚಾರ್ಯ ಶಕಂರ

೭೬೨

ವಿದ್ಯ ಕಲಿಗಿಯುಂಡಿ ವಿನಯಂಬುಲೇ ಕುನ್ನ, ನ್ಯೆದುವಲಕು ಮೇಲಿ ಮ್ಯೆನ ಮಣುಲು
ಸೊಮ್ಮುಲುಂಡಿ ಕಂಠ ಸೂತ್ರಮುಲೇ ನಟ್ಲಿ, ವಿಶ್ವದಾಭಿರಾಮ ವಿನುರ ವೇಮ.

ವಿದ್ಯೆ ಹೊಂದಿದರೂ ವಿನಯ ವಿಲ್ಲದಿರಲು,
ಮುತ್ತೈದೆಯ ಮೇಲೆ ಮಣ ಭಾರದ,
ಸ್ವರ್ಣವಿದ್ದು ಕಂಠ ಸೂತ್ರವಿಲ್ಲದಂತೆ.
ವಿಶ್ವದಾಭಿರಾಮ ಕೇಳು ವೇಮ.

'ವಿದ್ಯೆಯು ವಿನಯದಿಂದ ಶೋಭಿಸುವುದು', ಎಂದು ಸುಭಾಷಿತ ಹೇಳುತ್ತಿದೆಯಷ್ಟೇ. ವೇದ, ಶಾಸ್ತ್ರ, ಇತಿಹಾಸ-ಪುರಾಣ, ಭೂಗೋಳ, ವಿಜ್ಞಾನಾದಿಗಳನ್ನೆಲ್ಲ ತಿಳಿಯುವುದು ವಿದ್ಯೆ. ಒಬ್ಬನಿಗೆ ವಿದ್ಯೆ ಪಡೆಯುವಲ್ಲಿ ಹೆಚ್ಚು ಅನುಕೂಲಗಳಿರಬಹುದು. ಹೆಚ್ಚು ಸಾಮರ್ಥ್ಯವೂ ಇರಬಹುದು, ಆದರೆ ತಾನು ವಿದ್ಯಾವಂತ; ಮಹಾಪಂಡಿತ; ತನ್ನ ಸಮನಾರು ಎಂದು ಗರ್ವಪಡಕೂಡದು. ''ವಿದ್ಯೆ ಇಲ್ಲದಾಗ ತನ್ನ ತೋಳುಬಲ, ಧನ ಬಲ ಇವುಗಳಿಂದ ಯಾರನ್ನೂ ಮಣಿಸಬಹುದೆಂದು ತಿಳಿದಿದ್ದೆನಲ್ಲಾ! ಎಂಥ ತಪ್ಪು ಮಾಡಿದ್ದೆ. ವಿದ್ಯೆಯಿಂದ ನಾನು ಉಳಿದವರಿಗಿಂತ ಎಷ್ಟೋ ವಿಷಯಗಳಲ್ಲಿ ಹಿಂದೆ ಬಿದ್ದಿರುವೆನೆಂಬುದು ತಿಳಿಯಿತು. ಓದಲೂ ಸಹ ಬಾರದ, ಶ್ರವಣದಿಂದ ಸಹ ಕಲಿಯದ ಅನೇಕ ಜನರ ಮನಸ್ಸು ಎಷ್ಟು ಉದಾರವಾಗಿದೆ?'' ಎಂಬ ಅರಿವು ಮೂಡಿದಾಗ ವಿನಯ ಬರುವದು. ವಿನಯಿಯಾದ ವಿದ್ಯಾವಂತನಿಗೆ, ಸಕಲರೂ ಕಾಯಾ, ವಾಚಾ, ಮನಸಾ ಗೌರವ ನೀಡುತ್ತಾರೆ. ವಿನಯ ವಿಲ್ಲದವನ ವಿದ್ಯೆ ಎಷ್ಟಿದ್ದರೇನು? ಮುತ್ತೈದೆಗೆ ಮಂಗಳ ಸೂತ್ರವೇ ಇಲ್ಲದೆ, ಮಣಗಟ್ಟಳಿ ಉಳಿದ ಹೊನ್ನಿನ ಆಭರಣವಿದ್ದಂತೆ. ಅದರಿಂದ ಶೋಭೆ ಬಂದೀತೇ?

೭೬೩

ದಾನಮುಲನು ನನ್ನದಾನಮೇ ದೊಡ್ಡದಿ, ಗಾನಮುಲನು ಸಾಮಗಾನ ಮೆಚ್ಚು,
ಧ್ಯಾನಮುಲನು ಶಿವುನಿ ಧ್ಯಾನಮೇ ಶ್ರೇಷ್ಠಂಬು, ವಿಶ್ವದಾಭಿರಾಮ ವಿನುರ ವೇಮ.

ದಾನದಲ್ಲಿ ಅನ್ನ ದಾನವತಿ ದೊಡ್ಡದು,
ಗಾನದಲ್ಲಿ ಸಾಮ ಗಾನ ಹೆಚ್ಚು.
ಧ್ಯಾನದಲ್ಲಿ ಶಿವ ಧ್ಯಾನವೇ ಶ್ರೇಷ್ಠವು.
ವಿಶ್ವದಾಭಿರಾಮ ಕೇಳು ವೇಮ.

ದಾನವು ಅನೇಕ ವಿಧವಾಗಿರಬಹುದು. ಧನ ದಾನ, ಗೋದಾನ, ಭೂದಾನ, ಬಲ ದಾನ ಎಂಬಿತ್ಯಾದಿ ವಿಧಗಳುಂಟು. ಇಂಥ ದಾನ ಪ್ರಕಾರ ಹಸಿದವರ ಹಸಿವನ್ನು ಹಿಂಗಿಸುವ ಅನ್ನದಾನವು ಎಲ್ಲ ದಾನಗಳಿಗಿಂತ ಶ್ರೇಷ್ಠವಾದುದಾಗಿದೆ. ಏಕೆಂದರೆ, 'ಹಂಚಿಕೊಂಡು ಉಣ್ಣುವುದನ್ನು ಕಲಿತವನಿಗೆ ಹಸಿವೆಂಬ ಕೆಟ್ಟ ರೋಗವೇ ತಟ್ಟುವುದಿಲ್ಲ. ಹಸಿವು ಸಹಿಸುವ ತಪಸ್ಸಿನ ಸಾಧನೆಗಿಂತ, ಹಸಿದವರ ಹಸಿವನ್ನು ಹಿಂಗಿಸುವ ಶಕ್ತಿಯೇ ಮೇಲಾದುದು. 'ವೇದಾನಾಂ ಸಾಮವೇದೋಽಸ್ಮಿ; ('ವೇದಗಳಲ್ಲಿ ನಾನು ಸಾಮವೇದ;) ಎಂದು ಶ್ರೀ ಕೃಷ್ಣ ಹೇಳಿದ್ದಾನೆ. ಸಾಮ ವೇದ ಮಂತ್ರಗಳ ಗಾನವೇ ಸಾಮಗಾನ. ಸಾಮಗಾನವೇ ಗಾನಗಳಲ್ಲಿ ಮೇಲು. 'ರುದ್ರಾಣಾಂ ಶಂಕರಶ್ಚಾಸ್ಮಿ.' ('ನಾನು ಏಕಾದಶ ರುದ್ರರಲ್ಲಿ ಶಂಕರ) ಎಂದೂ ಶ್ರೀ ಕೃಷ್ಣನು ಗೀತೆಯಲ್ಲಿ ಹೇಳಿದ್ದುಂಟು. ಶಿವಧ್ಯಾನವೇ ಮೇಲು. ಶಿವ ಎಂದರೆ ನಿರ್ಗುಣ ಬ್ರಹ್ಮ. ಅಂಥ ನಿರ್ಗುಣ ಬ್ರಹ್ಮ ಧ್ಯಾನವು ಮೇಲಾದುದಷ್ಟೇ.

[ಪೋಲಿಸಿ ನೋಡಿರಿ :

ಅನ್ನವನು ನೀಡುವುದು, ನನ್ನಿಯನು ನುಡಿಯುವುದು,
ತನ್ನಂತೆ ಪರರ ಬಗೆದೊಡೆ ಕೈಲಾಸ
ಬಿನ್ನಾಣವಕ್ಕು ಪದವಕ್ಕು ಸರ್ವಜ್ಞ. -ಸರ್ವಜ್ಞ ಮೂರ್ತಿ.)

೭೬೪

ಊಕಯಂದು ಬುಟ್ಟಯುನ್ನದಿ ಯನ್ನಂಬು, ವ್ಯಾಕುನಂದು ಫಲವು ಮಾನಿತ ಮಗು,
ಸೋಕುಗಾಲಿ ಬಟ್ಟ ಶೋಧಿಪ ಮರಿ ಮುಕ್ತಿ. ವಿಶ್ವದಾಭಿರಾಮ ವಿನುರ ವೇಮ.

ಧಾನ್ಯದಲ್ಲಿ ಹುಟ್ಟುತಿಹುದು ಅನ್ನವೆಲ್ಲ.
ಮರದಲ್ಲಿಯೆ ಫಲವು ಮಡಗಿರುವುದು.
ಸೊಡರು ಗಾಳಿ ಹಿಡಿದು, ಶೋಧಿಸಲು ಮುಕ್ತಿಯು.
ವಿಶ್ವದಾಭಿರಾಮ ಕೇಳು ವೇಮ.

ಐತರೇಯ ಉಪನಿಷತ್ತಿನ ಮೂರನೆಯ ಖಂಡದ ಸಾರಾಂಶ ಹೀಗಿವೆಃ "ಈಶ್ವರನು ಆಲೋಚಿಸಿದನು: 'ಇವೇ ಲೋಕಗಳು ಮತ್ತು ಲೋಕ ಪಾಲಕರು. ಇವರಿಗೆ ಅನ್ನವನ್ನು ಸೃಷ್ಟಿಸುವೆನು' ಈಶ್ವರನು ಪಂಚ ಮಹಾಭೂತಗಳನ್ನು ಕುರಿತು ಧ್ಯಾನಿಸಿದನು. ಹಾಗೆ ಧ್ಯಾನಿಸಲ್ಪಟ್ಟ ಆವುಗಳಿಂದ ಯಾವ ಒಂದು ಮೂರ್ತಿಯು (ವ್ರೀಹ್ಯ ಇತ್ಯಾದಿ ಧಾನ್ಯಗಳು) ಉತ್ಪನ್ನವಾಯಿತೋ ಅದೇ ಅನ್ನವು. ಸೃಷ್ಟಿಸಿದ ಅನ್ನವನ್ನು ವಾಕ್ಕಿನಿಂದ, ಮೂಗಿನಿಂದ, ಕಣ್ಣಿನಿಂದ, ಕಿವಿಯಿಂದ, ತ್ವಚೆಯಿಂದ ಮತ್ತು ಶಿಶ್ನದಿಂದ ಹಿಡಿದು ಕೊಳ್ಳಲು ಶಕ್ತನಾಗಲಿಲ್ಲ ಹಾಗೆ ಆಗಿದ್ದರೆ, ಅನ್ನ ಉಚ್ಚರಿಸುವದರಿಂದ, ಮೂಸುವದರಿಂದ, ನೋಡುವದರಿಂದ, ಕೇಳುವುದರಿಂದ, ಮುಟ್ಟುವುದರಿಂದ ವಿಸರ್ಜಿಸುವುದರಿಂದ ತೃಪ್ತಿಪಡಬಹುದಾಗಿತ್ತು. ವಿರಾಟ್ ಪುರುಷನು ಅದನ್ನು ಅಪಾನ ವಾಯುವಿನ ಮೂಲಕ ಹಿಡಿದುಕೊಳ್ಳಲು ಯತ್ನಿಸಿದನು. ಹಿಡಿದನು. ಈ ವಾಯುವೆಂಬುದು ಅನ್ನದ ಗ್ರಾಹಕವು. ಈ ವಾಯುವೆಂಬುದು ಅದನ್ನು ಹಿಡಿದು ಅನ್ನದಿಂದಲೇ ಬದುಕಿರತಕ್ಕದ್ದು."

ಭೂ, ಅಪ್, ತೇಜ, ವಾಯು ಆಕಾಶಗಳಿಂದ ಸಕಲ ಸೃಷ್ಟಿ. ಧಾನ್ಯವೂ ಅದರಿಂದ. ಧಾನ್ಯದಿಂದ ಕಂದ–ಮೂಲ, ಗಿಡ ಮರಗಳು ಗಿಡದಲ್ಲಿಯೇ ಫಲವೂ ಉಂಟು. ಬೇರು-ಬೊಡ್ಡೆಗಳಲ್ಲಿಯ ರಸವೇ ಹಣ್ಣಿನಲ್ಲುಂಟು ತಾನೇ. ಆದದ್ದು ಕೇವಲ ರೂಪಾಂತರ. ಈ ಅನ್ನವು ಅಪಾನ ವಾಯುವಿನ ಮೂಲಕ ಶರೀರ ಸೇರುವುದು. ಅಪಾನವಾಯುವೇ ಅನ್ನ ಗ್ರಾಹಕವು. ಸೇವಿಸಿದ ಅನ್ನದಿಂದ ರೇತಸ್ಸು. ರೇತಸ್ಸುಗರ್ಭ ರೂಪವಾಗುವುದು. ಅದನ್ನು ಸ್ತ್ರೀ ಯೋನಿಯಲ್ಲಿ ಸೇಚನ ಮಾಡಿದ ಮೇಲೆ, ಪಾಲನೆಗೊಂಡು ಹೊರಬರುತ್ತದೆ. ಹೀಗೆ ಸರ್ವವೂ ಬ್ರಹ್ಮಮಯವಾಗಿ, ಬ್ರಹ್ಮವಾಗಿ ಉಂಟು. ಇದರ ಪ್ರಜ್ಞಾನವೇ ಬ್ರಹ್ಮ-ಸಾಕ್ಷಾತ್ಕಾರ. ಪ್ರಜ್ಞಾನಂ ಬ್ರಹ್ಮ; ಸೊಡರುಗಾಳಿ ಎಂದರೆ ಅಪಾನವಾಯು. ಇತ್ಯಾದಿಯಿಂದ ಪ್ರಾರಂಭಿಸಿ ಶೋಧಿಸಿದರೆ, ಬ್ರಹ್ಮ ಗುರುತಿಸಬಹುದಷ್ಟೇ.

೭೬೫

ಪರುಲವಿತ್ತ ಮುಂದು ಭ್ರಾಂತಿ ಮಾನಿನಯಟ್ಟ, ಪುರುಷು ಡವನಿಲೋನ ಬುಣ್ಯ ಮೂರ್ತಿ.
ಪರುಲವಿತ್ತ ಮರಯ ಬಾಪಸಂಚಿತಮಗು, ವಿಶ್ವದಾಭಿರಾಮ ವಿನುರ ವೇಮ.

ಪರರ ಆಸ್ತಿಯಲಿ ಭ್ರಾಂತಿಯಿಲ್ಲದಂಥ,
ಪುರುಷನವನಿಯಲ್ಲಿ ಪುಣ್ಯ ಮೂರ್ತಿ.
ಪರರ ಆಸ್ತಿಯಾಶೆ ಪಾಪ ಚಿಂತೆಯಹುದು.
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆಯ ಜೀವನ ನಡೆಸುವವರೆಲ್ಲ ಸಾಧಕರಷ್ಟೇ. ಒಳ್ಳೆಯ ಜೀವನವನ್ನೇ ಯಮ-ನಿಯಮಾದಿ ಅಷ್ಟಾಂಗಯೋಗ ಮಾರ್ಗವೆನ್ನಬಹುದು. ಯಮ ಸಾಧನೆಯೆಂದರೆ, ಬಾಹ್ಯಕಾರ್ಯಗಳನ್ನೆಲ್ಲ ನಿಯಂತ್ರಿಸುವದು. ಇದರಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಐದು ಮುಖ್ಯ ತತ್ತ್ವಗಳು ಅಡಕವಾಗಿವೆ.

ಅಸ್ತೇಯ ಎಂದರೇನು? "ಪರದ್ರವ್ಯಾಪಹರಣೋ ತ್ಯಾಗೋಽ ಸ್ತೇಯಂ" "ಪರರ ವಸ್ತು-ಒಡವೆಗಳನ್ನು ದೈಹಿಕವಾಗಿಯಾಗಲಿ, ಮಾನಸಿಕವಾಗಿಯಾಗಲಿ, ತೆಗೆದುಕೊಳ್ಳದೆ ಇರುವದು. ಮತ್ತು ಪರರಿಗೆ ಯಾವದು ಸಲ್ಲತಕ್ಕದ್ದೋ, ಅದನ್ನು ಅವರಿಂದ ದೋಚದಿರುವದು.

ಪರರ ಆಸ್ತಿಯು ತನ್ನದಾಗಬೇಕೆಂಬುದು ಭ್ರಮೆ. ಇಂಥ ಭ್ರಾಂತಿ ಇರಕೂಡದು. ಯಾವನಿಗೆ ಇಂಥ ಭ್ರಾಂತಿ ಇಲ್ಲವೋ, ಅವನೇಪುಣ್ಯ ಪುರುಷ. ಪಾಪ ಎಂದರೆ ಬೇರೆ ಮತ್ತೇನೂ ಅಲ್ಲ. ಧರ್ಮವಿರೋಧಿ ವಿಚಾರ–ಆಚಾರಗಳಷ್ಟೇ. ಪರರ ಆಸ್ತಿಗೆ ಆಸೆ-ಬಡುವದು ಅಧರ್ಮ. ಅದು ಪಾಪ ಚಿಂತನೆಯಷ್ಟೇ. ?

೭೬೬

ಪತ್ತನಂಬುಲಗಲ ಪ್ರೌಢಾಂಗ ನಲುಮರಿ, ಪಲ್ಲಿಲಂದು ನಿಲ್ಚಿ ಬ್ರತುಕ ಗಲರೆ?
ಸುಖುಲು ಪರಮು ದಾರಿ ಶೋಭಿಪಂಜಾಲರು, ವಿಶ್ವದಾಭಿರಾಮ ವಿನುರ ವೇಮ.

ಪಟ್ಟಣದೊಳಿರುವ ಪ್ರೌಢಾಂಗನೆ ಕುಲವು.
ಬಡ ಗ್ರಾಮದಲ್ಲಿ ಬಾಳುನಿಹರೆ?
ಸುಖಿಗೆ ಪರದ ದಾರಿ ಶೋಭಿಸಲಾರದದು.
ವಿಶ್ವದಾಭಿರಾಮ ಕೇಳು ವೇಮ.

ಆನಂದ ಒಂದು; ಸುಖವು ಇನ್ನೊಂದು. "ಶ್ರೇಯಸ್ಸು ಒಂದು; ಪ್ರೇಯಸ್ಸು ಇನ್ನೊಂದು. ಇವೆರಡೂ ಮನುಷ್ಯನನ್ನು ತೀರ ಭಿನ್ನ ಭಿನ್ನ ಗುರಿಯತ್ತ ಸೆಳೆದೊಯ್ಯುವವು. ಶ್ರೇಯಸ್ಸು ಆರಿಸಿಕೊಂಡವನು ಆನಂದ ಪಡೆಯುವನು. ಕೇವಲ ತನ್ನ ಸುಖವನ್ನೇ ನೋಡುವವನು ಗುರಿಯಿಂದ ಸರಿಯುತ್ತಾನೆ. ಧೀರರು ಅಂದರೆ ಬುದ್ಧಿವಂತರು, ಸುಖದ ಆಕರ್ಷಣೆಯಿಂದ ವಂಚಿತರಾಗುವುದಿಲ್ಲ. ಅವರು ಶ್ರೇಯಸ್ಸನ್ನೇ ಒಪ್ಪಿಕೊಳ್ಳುತ್ತಾರೆ' ಮಂದ ಮತಿಗಳು ಹೆಚ್ಚು ಹೆಚ್ಚು ಸುಖ ಕೋರಿ ಹಾಳಾಗುತ್ತಾರೆ" (ಕಠೋಪನಿಷತ್ತು ೨–೧, ೨.)

ಸುಖಿಗೆ ಪರದ ದಾರಿ ಶೋಭೆಯೆನ್ನಿಸದು. ಅವನು ಸದಾ ದೊರೆಯುವ ಆನಂದಕ್ಕಿಂತ, ಈ ಕ್ಷಣ ಸಿಕ್ಕು, ಮತ್ತೆ ತಾನೆ ಆಸೆಗೆ ಬೀಜವಾಗಿ, ಇನ್ನೊಂದು ಕ್ಷಣಕ್ಕೆ ಇನ್ನಷ್ಟು ಇಲ್ಲವಲ್ಲಾ, ಎನ್ನುವ ಕಷ್ಟ ತಂದೊಡ್ಡುವುದನ್ನೇ ಅವನು ಮೆಚ್ಚುತ್ತಾನೆ.

ಪಟ್ಟಣದ ನಾಟ್ಯ ಶಾಲೆ, ನೃತ್ಯ ಸಂಗೀತಕೂಟಗಳ, ವಿನೋದ–ವಿಹಾರಗಳ ಮೆರುಗಿನ ಜೀವನಕ್ಕೆ ಮಾರು ಹೋದ ಅಂಗನೆಯರು ಶುದ್ಧ, ನಿರ್ಮಲ ಮತ್ತು ಪವಿತ್ರವಾದ

ಗ್ರಾಮದ ಸರಳ ಜೀವನ ಕುರಿತು ತಾತ್ಸಾರ ಮಾಡುತ್ತಾರಲ್ಲವೆ? ಅವರು ಪ್ರೇಯಸ್ಸಿಗಾಗಿ ಮಿಡುಕುವವರು. ಶ್ರೇಯಸ್ಸಿಗಾಗಿ ಸಾಧನೆಯಲ್ಲಿ ತೊಡಗುವವರಲ್ಲ.

೭೬೭

ತಲ್ಲಿದುಡ್ರುಲಂದು ದಾರಿದ್ರ್ಯಯುತುಲಂದು, ನಮ್ಮಿನ ನಿರು ಪೇದ ನರುಲುಯಂದು,
ಬ್ರಭುಲಯಂದು ಜಾಲ ಭಯ ಭಕ್ತುಲುಂಚುನು, ವಿಶ್ವದಾಭಿರಾಮ ವಿನುರ ವೇಮು.

ತಾಯಿ ತಂದೆಗಳಲಿ, ದಾರಿದ್ರ್ಯಯುತರಲಿ,
ನಂಬಿಕೊಂಡ ಬಡವ ನರರಲ್ಲಿಯು,
ಪ್ರಭುಗಳಲಿ, ಬಹಳ ಭಯೆಭಕ್ತಿಯಿರಿಸು.
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನನ್ನು ಎಲ್ಲಿ ಕಾಣಬೇಕು? ಹೇಗೆ ಕಾಣಬೇಕು? ಎಂಬುದು ಆದಿಯಿಂದ ಉಂಟಾದಪ್ರಶ್ನೆ. ಅವನನ್ನು 'ನೀನೇ ತಾಯಿ' ‹ಮಾತಾ ತ್ವಂ' ಧಾರಕಳಾದ ತಾಯಿಯಂತೆ ಕಾಣಬೇಕು. 'ನೀನೇ ತಂದೆ 'ಪಿತಾ ತ್ವಂ'ಪಾಲಕನಾದ ತಂದೆಯಂತೆ ಕಾಣಬೇಕು. ದ್ರವಿಣಂ ತ್ವಂ.' ಸಕಲ ದ್ರವ್ಯಾದಿ ಸಂಪತ್ತು ಅವನೇ ಆಗಿದ್ದಾನೆ. ಶ್ರದ್ಧೆಯಿರಿಸಿ ಬಾಳುವ ಬಡವರಲ್ಲಿ ಪರಮಾತ್ಮನನ್ನು ಕಾಣಬೇಕು. ಪರಮಾತ್ಮನು ಈಶ್ವರ; ಪ್ರಭು. ಪ್ರಭುಗಳಲ್ಲಿ ಪರಮಾತ್ಮನನ್ನು ಕಾಣಬೇಕು. ಪ್ರಭುಗಳೂ ಪರಮಾತ್ಮನ ಸಮತೆಯ ದೃಷ್ಟಿಯುಳ್ಳವರಿರಬೇಕು.

ಹೀಗೆ ಸರ್ವರಲ್ಲಿ ದೈವ ಭಾವನೆ ಇರಿಸಿಕೊಂಡವನಿಗೆ ಅವರಲ್ಲಿ ಭಯ ಭಕ್ತಿ ಹುಟ್ಟುತ್ತವೆ. ಅವರ ಕುರಿತು ಅನ್ಯಾಯ ಅಸಡ್ಡೆ ಗೆಯ್ಯಲು ಭಯ; ಮತ್ತು ಅವರತ್ತ ಪ್ರೇಮಾಕರ್ಷಣೆಯಿಂದ ಎಳೆಯಲ್ಪಟ್ಟು, ಮನಸ್ಸಿನಲ್ಲಿ ಭಕ್ತಿ ಭಾವ ಉಂಟಾಗುತ್ತವೆ.

(ಹೋಲಿಸಿ ನೋಡಿರಿ:

ತ್ವಮೇವ ಮಾತಾ ಚ ಪಿತಾ ತ್ವಮೇವ.
ತ್ವಮೇವ ಬಂಧುಶ್ಚ ಗುರುಸ್ತ್ವಮೇವ |
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ
ತ್ವಮೇವ ಸರ್ವಂ ಮಮ ದೇವ ದೇವ ||

"ತಾಯೆ ನೀನು; ತಂದೆ ನೀನು
ಬಂಧು ನೀನು; ಗುರುವು ನೀನು
ವಿದ್ಯೆ ನೀನು; ದ್ರವ್ಯ ನೀನು
ಎಲ್ಲ ನೀನೆ; ದೇವ ದೇವ. "

೭೬೮

ಜಂತ್ರಮುಂತ್ರ ಮಹಿಮು ಜಾತವೇದುಡೆರುಗು, ಮುಂತ್ರವಾದಿಯೆರುಗು ದಂತ್ರ ಮಹಿಮ,
ತಿಂತ್ರಿಣೇಕ ಮಹಿಮು ದಿನುವಾಡೆರುಂಗುನು, ವಿಶ್ವದಾಭಿರಾಮ ವಿನುರ ವೇಮು.

ಅಂತ್ರ ಮುಂತ್ರ ಮಹಿಮೆ ಅಗ್ನಿಹೋತ್ರಿಯರಿವ,
ಮುಂತ್ರವಾದಿಯರಿವ ತಂತ್ರಮಹಿಮೆ.
ಹುಣಸೆ ಹಣ್ಣ ಮಹಿಮೆ, ತಿನಸುಗಾರನರಿವ.
ವಿಶ್ವದಾಭಿರಾಮ ಕೇಳು ವೇಮ

ಅಗ್ನಿ ವೈದಿಕ ಕಾಲದ ಪವಿತ್ರ ದೇವತೆ. ಅದೇಕೆ? ಇಂದಿಗೂ ಕೂಡ ವೈದಿಕ ಬ್ರಾಹ್ಮಣರಿಗೆ ಮತ್ತು ಪಾರ್ಸಿಗಳಿಗೆ ಅಗ್ನಿಯೇ ಅಧಿ ದೈವ- ಅಗ್ನಿ, ಸೋಮಾದಿ ದೇವತೆಗಳಿಗೆ ಹವಿಸ್ಸು ಅರ್ಪಿಸುವುದು; ಇಚ್ಛಿತ ಫಲ ನೀಡುವಂತೆ ಬೇಡಿಕೊಳ್ಳುವುದು; ವೇದ ಮಂತ್ರಗಳ ಸಾರ. ವಿಧಿವತ್ತಾಗಿ ಛಂದಸ್ಸಿಗೆ ಹೊಂದಿಸಿ, ವೇದ ಮಂತ್ರಗಳನ್ನು ಪಠಿಸುವವರೂ, ವೇದ ವಿಧಿಯಂತೆ ಸಕಲ ಯಜ್ಞಕ್ರಮಗಳನ್ನು ನಡೆಯಿಸುವವರೂ, ಜಾತ ವೇದರೂ, ಅಗ್ನಿಹೊತ್ರಿಗಳು. ಯಜ್ಞಕ್ಕೆ ಬಲಿಕೊಟ್ಟ ಪಶುವನ್ನು ಮೂವತ್ತಾರು ಭಾಗಗಳಾಗಿ ಮಾಡಿ, ತಮ್ಮ ತಮ್ಮಲ್ಲಿ ಹಂಚಿಕೊಳ್ಳುವ ಅಧಿಕಾರಿಗಳೂ ಇವರೇ. ಯಜ್ಞ ಮಾಡಿಸುವವನ ಅಂದರೆ ಯಜಮಾನನು ಬ್ರಾಹ್ಮಣನಾಗಿರದಿದ್ದರೆ, ಅವನ ಮೂರು ಭಾಗಗಳನ್ನೂ ಬ್ರಾಹ್ಮಣರಿಗೇ ಹಂಚುತ್ತಿದ್ದರು. (ಶತಪಥ ಬ್ರಾಹ್ಮಣ ನೋಡಿರಿ.) ಮಂತ್ರದ ಮಹಿಮೆ ಅಗ್ನಿಹೊತ್ರಿಗೇ ಏಕೆ ಗೊತ್ತು ? ತಿಳಿಯಿತಲ್ಲವೇ.

ತಾಂತ್ರಿಕ ಗ್ರಂಥಗಳು ಶಾಕ್ತ ಮತದ ತತ್ತ್ವ ಗ್ರಂಥಗಳು. ತಂತ್ರಗಳಲ್ಲಿ ೬೪ ತಂತ್ರ ಗ್ರಂಥಗಳು ಲಭ್ಯವಿವೆ. ವಾಮಾಚಾರ, ಕೌಲ ಇತ್ಯಾದಿ ತಂತ್ರಬೇಧಗಳುಂಟು. ತಂತ್ರ ಹೀನ ಅರ್ಥ ಕಲ್ಪಿಸಿದ ವಾಮಾಚಾರ ದಕ್ಷಿಣಾಚಾರ ಪಂಥವನ್ನು ಆಧರಿಸಿ ತಂತ್ರ ಸಾಧನೆ ಮಾಡಿದವರು, ಮೋಡಿ–ಮಾಟ ವಿದ್ಯೆಯಿಂದ ಬದುಕು ಸಾಗಿಸುವುದು ನಡೆದಿದೆ. ಮಂತ್ರ ಶ್ರೇಷ್ಠವೆಂದು ವಾದಿಸುವವನು, ತಂತ್ರದ ಮಹಿಮೆಯನ್ನು ಅರಿತಿರುವನಲ್ಲವೇ ?. ಇದೆಲ್ಲ ಹೇಗೆ ? ಹುಣಸೆ ಹಣ್ಣು, ಹುಳಿ–ಹುಳಿ; ಆದರೂ ತಿನಸುಗಾರನು ಅದನ್ನೇ ಉಪ್ಪುಕಾರ ಬಳಿದು, ಉಂಡೆ ಮಾಡಿ, ಚೀಪಿ, ಸುಖಪಡುತ್ತಾನೆ. ಅವನದೂ ಒಂದು ಬಗೆಯ ಸುಖ. ಅಂಥ ಒಂದು ಬಗೆಯ ಸುಖ, ಅಗ್ನಿಹೋತ್ರಿಗೂ ಉಂಟು. ಮಂತ್ರವಾದಿಗೂ ಉಂಟು.

೭೬೯

ಅಯಿನವಾರಲಂಚು ನಾಪ್ತುಲಟಂಚುನು, ಬಂದುಗುಲನು ನಮ್ಮಬಾಡಿಗಾದು,
ತನಕುನೇನವಾಡು ತಾನೊಕಡೇಯಗು, ವಿಶ್ವದಾಭಿರಾಮ ವಿನುರ ವೇಮು.

ಬೇಕಾದವರೆಂದು, ಬಳಗ ಆಪ್ತರೆಂದು,
ಬಂಧುವೆಂದು ನಂಬೆ, ' ಬೇಶಿ ' ಯಲ್ಲ.
ತನಗೆ ಬೇಕಾದವ ತಾನೊಬ್ಬನಷ್ಟೇ.
ವಿಶ್ವದಾಭಿರಾಮ ಕೇಳು ವೇಮ.

ಇವನು ಬೇಕಾದವನು, ಇವನು ಬೇಡವಾದವನು, ಎಂದು ತಿಳಿಯುವುದು ಭೇದ–ಬುದ್ಧಿಯಷ್ಟೇ. ಹಲವರು ತನ್ನ ಸಂಬಂಧಿಗಳೆಂದೂ, ಉಳಿದವರು ದೂರವೆಂದೂ, ತಿಳಿಯುವುದು ಸಹ, ಭೇದ ಬುದ್ಧಿಯೇ. ಇವನು ತನ್ನ ಬಂಧು. ಇವನನ್ನೂ ನಂಬಿದರೆ ತೀರಿತು.

ಅವನೇ ಎಲ್ಲವನ್ನು ತೂಗಿಸುವನು; ಎಂದು ನಂಬಿ ಕುಳಿತುಕೊಳ್ಳುವುದು ಒಳ್ಳೆಯದಲ್ಲ. "ಮನಸ್ಸಿನಿಂದಲೇ ತನ್ನನ್ನು (ಸಂಸಾರ ಸಮುದ್ರದಿಂದ) ಉದ್ಧಾರ ಮಾಡಿಕೊಳ್ಳಬೇಕು. ತನ್ನನ್ನು ಕುಗ್ಗಿಸಿಕೊಳ್ಳಬಾರದು. ಏಕೆಂದರೆ, ಮನಸ್ಸೇ ತನ್ನ ಬಂಧು ಮನಸ್ಸೇ ತನ್ನ ಶತ್ರು." (ಭಗವದ್ಗೀತೆ – ೬-೫) ತನ್ನ ಮನಸ್ಸನ್ನು ತಾನು ತಿಳಿಯಬೇಕು. ತನಗೆ ತಾನು ಬೇಕಾದವನು. ಅದುವೇ ಅಂತರ್ದೃಷ್ಟಿ; ಒಳ ನೋಟ. ತನ್ನ ಸತ್ಯಸ್ವರೂಪ ತಿಳಿದುಕೊಂಡರೆ, ತೀರಿತು. ಅದರಲ್ಲಿ ಸರ್ವವೂ ಅಡಕವಾಗಿರುವುದು ಗೊತ್ತಾಗುತ್ತದೆ. ಎಲ್ಲವೂ ಪರವಸ್ತುವೇ. 'ಸರ್ವಂ ಖಲ್ವಿದಂ ಬ್ರಹ್ಮ.' ಬಂಧು, ಬಳಗ, ಶತ್ರು, ಮಿತ್ರ, ಎಲ್ಲವೂ ಒಂದೇ. ಭೇದವೆಲ್ಲ ಮನಸ್ಸಿನಲ್ಲಿ ಮಾತ್ರ.

(ಹೋಗಿಸಿ ನೋಡಿರಿ'

'ಪರಚಿಂತೆ ಎನಗೇಕಯ್ಯ ? ಎಮ್ಮ ಚಿಂತೆ ಎಮಗೆ ಸಾಲಿದೆ? ಕೂಡಲ ಸಂಗಯ್ಯ ಒಲಿದಾನೋ ಒಲಿಯನೋ ಎಂಬ ಚಿಂತೆ ಹಾಸಲುಂಟು; ಹೊದೆಯಲುಂಟು.

– ಬಸವಣ್ಣ.

"ನಿನ್ನ ಕಣ್ಣಿನಲ್ಲಿರುವ ರವದೆಯನು ನಿವಾರಿಸು. ಬೇರೆಯವರ ಕಣ್ಣಿನಲ್ಲಿ ಬಿದ್ದಿರುವ ತೊಲೆಯ ಚಿಂತೆ ನಿನಗೇಕೆ? "

– ಯೇಸು ಕ್ರಿಸ್ತ.)

೭೭೦

ಸಿಗ್ಗುವಿಡುವಕುನ್ನ ಶಿವಸೌಖ್ಯಮೇಲೇದು, ತಗ್ಗಿಮೊಗ್ಗಕುನ್ನ ಸಿಗ್ಗುವಿಡದು,
ಸಿಗ್ಗುವಿಡಚುವಾಡೆ ಚಿರಕಾಲ ಜೀವಿರಾ, ವಿಶ್ವದಾಭಿರಾಮ ವಿನುರ ವೇಮ.

ಲಜ್ಜೆ ತೊರೆಯದನಕ ಲಭಿಸದು ಶಿವಸೌಖ್ಯ.
ಬಗ್ಗಿ ನಡೆಯದನಕ ಎಗ್ಗು ಬಿಡದು.
ಲಜ್ಜೆ ತೊರೆಯುವವನೆ, ಲಯವಿಲ್ಲದ ಜೀವಿ.
ವಿಶ್ವದಾಭಿರಾಮ ಕೇಳು ವೇಮ.

ಲಜ್ಜೆ ಯಾವುದು ? ಮುಸುಕು ಹಾಕುವುದು, ಬೆರಳಿನಿಂದ ನೆಲ ಕೆದರುವುದು, ಕೆನ್ನೆ ಮೂಗುಗಳನ್ನು ಕೆಂಪಗೆ ಮಾಡುವುದು ಲಜ್ಜೆಯೇ ? ಹೌದು. ಅದೂ ಲಜ್ಜೆ. 'ಲೌಕಿಕ, ವೈದಿಕ ವಿರುದ್ಧವಾದ ಮಾರ್ಗದತ್ತ (ಅಂದರೆ ಅಧ್ಯಾತ್ಮಿಕ ಮಾರ್ಗದತ್ತ) ಚಿತ್ತ ಸಾಗದಂತೆ ಮಾಡುವುದೇ 'ಲಜ್ಜೆ'. ಲೌಕಿಕ ಸಂಬಂಧ, ಲೌಕಿಕ ಆಚಾರ, ಲೌಕಿಕ ಫಲಾಪೇಕ್ಷೆಯ ವೈದಿಕಾದಿ ಕರ್ಮ ಇತ್ಯಾದಿಗಳನ್ನು ತೊರೆಯುವ ತನಕ, ಶಿವ ಸೌಖ್ಯ ದೊರೆಯುವುದೆಂತು? ಶಿವ ಎಂದರೆ ನಿರ್ಗುಣ ಬ್ರಹ್ಮ.ಎಲ್ಲಿ ಪ್ರಕೃತಿವ್ಯಕ್ತವಾಗಿಲ್ಲವೋ, ಅಂಥ ಸ್ಥಿತಿಯಲ್ಲಿಯ ಪುರುಷ. ಪ್ರಕೃತಿಯೇ ಪುರುಷನ ಗುಣಗಳಾಗಿ ವ್ಯಕ್ತವಾಗುವುದು. ಪ್ರಕೃತಿ ವ್ಯಕ್ತವಾದಾಗ, ಪುರುಷ ಸಗುಣನಾಗಿ ಪುರುಷೋತ್ತಮನೆನಿಸುವನು.

ಶಿವ ಸ್ಥಿತಿಯೇ ನಿರ್ಗುಣ ಬ್ರಹ್ಮಸ್ಥಿತಿ. ಆ 'ಬ್ರಹ್ಮವು ಆನಂದಮಯ'. 'ಅನಂತಂ ಜ್ಞಾನಂ, ಆನಂದಂ ಬ್ರಹ್ಮ'. ಬ್ರಹ್ಮಾನಂದವೇ ಶಿವ ಸೌಖ್ಯ. ಶಿವಸೌಖ್ಯ ಪಡೆಯ

ಬೇಕಾದರೆ, ಲೌಕಿಕ ಚಿಂತೆ ಬಿಡಬೇಕು, ರಕ್ತ ಸಂಬಂಧದ ಆಸಕ್ತಿ-ಆಕರ್ಷಣೆಯಿಂದ ದೂರವಾಗಬೇಕು. 'ಗುಬ್ಬಿಯ ಸಂಸಾರ' ಸಾಗಿಸಬೇಕು. ಇದು ಲೋಕ ಪದ್ಧತಿಗೆ ವಿರೋಧವಾದುದಷ್ಟೇ. ಅಂದರೆ ಲಜ್ಜೆಗೆ ವಿರೋಧವಾದುದು. ಲಜ್ಜೆ ತೊರೆದಾಗ, ಮಾತ್ರ ಶಿವಸೌಖ್ಯವು ದೊರೆಯುವುದು.

ನಮ್ಮ ನಡೆಯಲ್ಲಿ ವಿನಯ ಬೇಕು. ಬಾಗಿ ನಡೆಯುವವನಲ್ಲಿ, ಹೇವ ಪಂಥದ ಭಾವವೂ ಇರುವುದಿಲ್ಲ. ಏಕೆಂದರೆ, ಅವನ ಮನಸ್ಸು ಮೃದುವಾಗಿರುತ್ತದೆ. ಇಂಥ ನಡೆಯಿದ್ದರೆ, ಲೋಕದ ಲಜ್ಜೆಯ ಪ್ರಶ್ನೆಯೇ ಏಳದು.

ಲಜ್ಜೆ ತೊರೆಯುವವನು ಪರವನ್ನು ನಂಬುತ್ತಾನೆ. ಪರವಸ್ತುವೇ ಆಗುತ್ತಾನೆ. ಅವನೇ ಜೀವನ್ಮುಕ್ತ. ಅವನು ಅವ್ಯಯವಾದ ಆತ್ಮವೇ ತಾನಾಗುತ್ತಾನೆ. ಅವಿನಾಶಿಯೂ ಆದ ಅವನಿಗೆ ಲಯ ಎಂಬುದೇ ಇಲ್ಲ,

೭೭೧

ಸಿಗ್ಗುದಾಗುನೆಚಟ ಜೀಕಟ ಯೆಟದಾಗು, ನಾಕಲೇಡದಾಗು ನಾತ್ಮಲೋನ,
ದಾಗಿಯುನ್ನನಿದ್ರ ದಾಗುಟ ದೆಲಿಯುಡೀ, ವಿಶ್ವದಾಭಿರಾಮ ವಿನುರ ವೇಮ.

ನಾಚುಗೆಯನು ಎಲ್ಲಿ, ನಿಶೆ ಬಚ್ಚಿಡಲೆಲ್ಲಿ ?
ಹಸಿವೆಯೆಲ್ಲಿಡುವುದು? ಹೃದಯದೊಳಗೆ,
ಬಚ್ಚಿಟ್ಟ ನಿದ್ರೆಯು ಬಚ್ಚಿಟ್ಟಹುದ ತಿಳಿ.
ವಿಶ್ವದಾಭಿರಾಮ ಕೇಳು ವೇಮ.

ನಾಚುಗೆಯೆಂದರೆ ಲೌಕಿಕ ಪದ್ಧತಿಗೆ ವಿರೋಧವಾಗಿ, ಚಿತ್ತ ಹೋಗದಂತೆ ಇರಿಸುವುದು. ಸ್ತ್ರೀ ಪರ ಪುರುಷರತ್ತ ಆಕರ್ಷಣೆಗೊಳ್ಳಬಾರದು. ಆದರೆ ಪುರುಷರತ್ತ ದೃಷ್ಟಿ ಹರಿಯದಂತೆ ಮುಸುಕು ಎಳೆದರೇನು? ಮನಸ್ಸು ಅತ್ತ ಸುಳಿದು ಮೋಹಗೊಳ್ಳಬಾರದು. ಇದು ಮುಸುಕು ಎಳೆದು ಮುಚ್ಚಲಾರದ್ದು. ಇದನ್ನು ಬಚ್ಚಿಡುವದೆಲ್ಲಿ? ನಿಶೆಯು ಎಲ್ಲೆಡೆ ಉಂಟು. ಅದು ಹಗಲಿನಲ್ಲಿಯೂ ಉಂಟು. ರಾತ್ರಿಯಲ್ಲಿಯೂ ಉಂಟು. ಪ್ರಕಾಶದಲ್ಲಿ ಸೇರಿಕೊಂಡು, ಹಗಲಿನಲ್ಲಿ ಅಡಗಿದಂತಾಗಿದೆಯಷ್ಟೇ. 'ನಿರಾಹಾರಿಯಾದ ದೇಹಿಗೆ ವಿಷಯವಾಸನೆಗಳು ಅಂಟದಂತೆ ಪ್ರಯತ್ನಿಸಬಹುದು. ಆದರೆ, ತೃಷೆ ಇನ್ನೂ ಉಂಟು. ಇದುವೇ ಜ್ಞಾನ ತೃಷೆ. ಇದರೊಂದಿಗೆ ಹೊಟ್ಟೆಯ ಹಸಿವೂ ಉಂಟು. ಹೊರಗಿನ ವಸ್ತುಗಳನ್ನು ಕುರಿತು ಹರಿಯುವ ಮನಸ್ಸು ನಿಗ್ರಹಿಸಿದರೂ, ಹಸಿವು ಹಿಂಗದು. ಹಸಿವು ವ್ಯಕ್ತವಾಗುವದು. ಹಸಿವೆಯನ್ನು ಎಲ್ಲಿ ಬಚ್ಚಿಡುವುದು?

ಹೃದಯದಲ್ಲಿ ಯೋಗನಿದ್ರೆಯುಂಟು, ಎಂದು ಯೋಗಿಗಳು ಹೇಳುತ್ತಾರೆ. ಹೃದಯಾಕಾಶದಲ್ಲಿ ಬ್ರಹ್ಮವುಂಟೆಂದು ಧ್ಯಾನಿಸುವ ಯೋಗಿ ಜಾಗೃತ, ಸ್ವಪ್ನ, ಸ್ಥಿತಿ ದಾಟಿದ 'ಆಳ ನಿದ್ರೆ' ಅನುಭವಿಸುತ್ತಾನೆ. ಇದುವೇ ಯೋಗನಿದ್ರೆ. ಹೃದಯದಲ್ಲಿ ಬಚ್ಚಿಟ್ಟ ನಿದ್ರೆ. ಈ ನಿದ್ರೆಯಲ್ಲಿ ಬಚ್ಚಿಟ್ಟಿರುವುದು ಏನನ್ನು? ಅದೇ ಬ್ರಹ್ಮ. ಇಂಥ ಬ್ರಹ್ಮವನ್ನು ಅನುಭವಿಸಿ

ಅರಿಯಬೇಕು. ಅದರಲ್ಲಿಯೇ ನಾಚುಗೆಯೂ ಅಡುಗುತ್ತದೆ. ನಿಶೆ-ತೃಷೆಗಳೂ ಅಡಗುತ್ತವೆ.

೭೭೨

ವೆತಲದೀರ್ಚುವಾಡು ವೇದಾಂತವೇದ್ಯುಂಡು, ರತುಲನೇಲುವಾಡು ರಮಣುಡಗುನು,
ಸತಿನಿ ಬೆನಗುವಾಡು ಸಂಸಾರಯೋಗಿರಾ, ವಿಶ್ವದಾಭಿರಾಮ ವಿನುರ ವೇಮ.

ವ್ಯಥೆಯು ತೀರಿದವನು, ವೇದಾಂತ ವೇದ್ಯನು.
ರತಿಯನಾಳುವವನು ರಮಣನೆನಿಪ.
ಸತಿಯನಾಳುವವನು ಸಂಸಾರ ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

ವೆಂದಾಂತ ಅಂದರೆ ಉಪನಿಷತ್ತುಗಳಿಂದ ಯಾರನ್ನು ತಿಳಿಯಬಹುದೋ, ಅವನು ವೇದಾಂತವೇದ್ಯನು. ಅವ'ನ್ನು ತಿಳಿಯುವ ಕ್ರಮವೂ ಸಹ, ವೇದಾಂತದಲ್ಲಿಯೇ ವಿವರಿಸಲಾಗಿದೆ. ಅವನು ನಾಲ್ಕು ವೇದಗಳು, ಛಂದಸ್ಸು, ವ್ಯಾಕರಣ, ನಿರುಕ್ತ, ಕಲ್ಪಗಳಲ್ಲಿ ಇಲ್ಲ. ಅವನು ಪ್ರವಚನದಿಂದ ಲಭ್ಯವಾಗನು; ಅವನು ಬಹುಶ್ರವಣದಿಂದಲೂ ಲಭ್ಯವಾಗನು ಯಾರು ಒಳಿತು. ಕೆಡುಕು ಅರಿಯುವ ವಿವೇಕ ಜ್ಞಾನವು ಬರುವ ಮೊದಲೇ ಫಲವನ್ನು ತ್ಯಜಿಸಿರುತ್ತಾರೊ, ಅವರಿಗೆ "ಅದರಿಂದ ಕ್ಲೇಶ ಮತ್ತು ಕರ್ಮ ನಿವೃತ್ತಿಯಾಗುವುವು." (ತತಃ ಕ್ಲೇಶಕರ್ಮ ನಿವೃತ್ತಿಃ). ಆಗ ಜ್ಞಾನವು ಆವರಣ ಮತ್ತು ಮಲಿನತೆಯಿಂದ ಮುಕ್ತವಾಗುವುದು. ಮುಂದೆ ಗುಣವಿಕಾರವೂ ಕೊನೆಗೊಂಡು, ಕೈವಲ್ಯ ಸ್ಥಿತಿ ಉಂಟಾಗುವುದು. ಅರ್ಥಾತ್ ಚಿತ್ ಶಕ್ತಿ ಸ್ವಸ್ಥಾನದಲ್ಲಿ ಪ್ರತಿಷ್ಠಿತವಾಗುವುದು. ಇದನ್ನೇ ವ್ಯಥೆಯು ತೀರಿದವನು ವೇದಾಂತ ವೇದ್ಯನು ಎಂದು ಸಂಕ್ಷೇಪಿಸಲಾಗಿದೆ. ರತ ಎಂದರೆ ಭೋಗವಸ್ತುವಿನೊಂದಿಗೆ ಕೂಡಿರುವುದು. ರತಿ ಎಂದರೆ ಭೋಗ ವಸ್ತು. ಕಾವ್ಯಗಳಲ್ಲಿ ದೇವಲೋಕದ ಅಪ್ಸರೆಯೆಂದು ಅಲಂಕಾರಿಕವಾಗಿ ವರ್ಣಿಸಲಾಗಿದೆ. ಭೋಗವಸ್ತುವನ್ನು ಅನುಭೋಗಿಸುವವನು ಅಂದರೆ ರತಿಯನಾಳುವವನು ರಮಣ-ನೆನಿಸುವನು. ಭೋಗವಿಲಾಸಿಯೆನಿಸುವನು. ಉಮಾರಮಣ. ರಾಧಾರಮಣ, ರಮಾ ರಮಣ. ಸ್ವರ್ಗ ಸುಖಭೋಗ ಕೋರಿ, ಯಜ್ಞಾದಿ ಕರ್ಮ ಮಾಡುವವರು ಇಂಥ ರಮಣರೆನಿಸಬಹುದು.

ಇನ್ನು ಸತಿಯನ್ನು ಕೂಡಿಕೊಂಡು ಗೃಹಕೃತ್ಯದಲ್ಲಿಯೇ ನಿರತರಾದವರು, ಸಂಸಾರವಂದಿಗರಷ್ಟೇ. 'ಸಂಸಾರ ಕೂಡಿದ' ಇವರನ್ನು 'ಸಂಸಾರಯೋಗಿ' ಎನ್ನಬಹುದು, ವೇದಾಂತವೇದ್ಯ, ರಮಣ, ಸಂಸಾರ ಯೋಗಿ ಎಂಬುವುಗಳು ಆಯಾ ಸಾಧಕರ, ಸಿದ್ಧಪುರುಷರ ಮನಸ್ಸಿನ ಸ್ಥಿತಿ ಸೂಚಿಸುವುದೇ ಹೊರತು, ಅನರ ಬಾಹ್ಯಚರ್ಯೆಯನ್ನಲ್ಲ.

೭೭೩

ಭಾರ್ಯ ತನುದುಪಾಲಿ ಭಾರ ಪುಸಂಕೇಲ, ಚಿನ್ನ ಚಿನ್ನ ಶಿಶುವು ಲೆನ್ನೆಚೀಲ,
ಲರಯಗ ಜೆರಸಾಲ ಯಗುನು ಸಂಸಾರಂಬು, ವಿಶ್ವದಾಭಿರಾಮ ವಿನುರ ವೇಮ.

ಭಾರ್ಯೆ ತನ್ನ ಬಗ್ಗೆ ಭಾರದ ಸಂಕೋಲೆ.
ಚಿಕ್ಕ ಚಿಕ್ಕ ಶಿಶುವು ಚುಚ್ಚು-ಮೊಳೆಯು.
ಸೆರೆಮನೆಯಾಗುವುದು ಸಂಸಾರ ಅರಿತೊಡೆ.
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಸಾಧನವು ಯಾವುದೋ, ಅದೂ ಜ್ಞಾನವೇ. ಏಕೆಂದರೆ, ಪ್ರತಿಕ್ಷಣ ಆಗುವ ಬದಲಾವಣೆಯ ಪರಿಣಾಮವು ಕೊನೆಗೊಮ್ಮೆ ವ್ಯಕ್ತವಾಗುವುದು. "ಇಂದ್ರಿಯ ವಿಷಯಗಳಲ್ಲಿ ವೈರಾಗ್ಯ, ಅಹಂಕಾರ ವಿಹೀನತೆ ಮತ್ತು ಜನ್ಮ, ಮೃತ್ಯು, ಮುಪ್ಪುವ್ಯಾಧಿ, ದುಃಖ-ಇವುಗಳಲ್ಲಿ ದೋಷವನ್ನು ನೋಡುವುದು. ", ಇತ್ಯಾದಿ ಜ್ಞಾನವೂ ಅಹುದು, ಜ್ಞಾನಸಾಧನವೂ ಅಹುದು.

ಅದೇ ರೀತಿ, ಸತ್ಯವನ್ನು ಅರಿತ ಮನುಷ್ಯನಿಗೆ ತಾನು ಬಹುವಾಗಿ ಮೆಚ್ಚಿ ಮುತ್ತಿಡುತ್ತಿದ್ದ ತನ್ನ ಹೆಂಡತಿಯೇ ತನ್ನ ಪಾಲಿನ ಭಾರವಾದ ಬೇಡಿಯಂತಾಗುತ್ತಾಳೆ. ಅಂದರೆ ಹೆಂಡತಿಯ ಮೇಲಿನ ಮೋಹದಿಂದ ಕಾಮದಿಂದ ಕೂಡಿದ ಮನಸ್ಸು ಅಲ್ಲಿಂದ ತಿರುಗುವುದು ಕಷ್ಟಸಾಧ್ಯ. ಇನ್ನು ಸಣ್ಣ ಸಣ್ಣ ಮಕ್ಕಳಿದ್ದರಂತೂ ತೀರಿತು ! 'ನಾನು, ನನ್ನದು,' ಎಂಬ ಭಾವ ಬಿಡುವುದೆಂತು ? ಈ ಎಳೆ ಹಸುಗಳೆಗಳನ್ನು ನೋಡುವವರಾರು? ಇವರು ಉಳಿದ ಅಸಂಖ್ಯ ಪ್ರಜೆಗಳಸಾಗರದಲ್ಲಿ ಒಂದು ಹನಿ ಎಂದು ತಿಳಿಯುವುದು, ಆಡಿದಷ್ಟುಸುಲಭವಲ್ಲ, ಎಂದೆನಿಸಿ, ಅವರು ದೊಡ್ಡವರಾಗಿ ತಮ್ಮ ಕಾಲ ಮೇಲೆ ನಿಂತೊಡನೆ, ನಾನು, ಅಧ್ಯಾತ್ಮದಲ್ಲಿಯೇ ನಿರತನಾಗಬಹುದು ಎನ್ನುತ್ತಾನೆ, ಮನುಷ್ಯ. ಹೀಗೆ ಮನಸ್ಸು ಗುರಿಯಿಂದ ಸರಿಯುತ್ತದೆ. ಜ್ಞಾನಸಾಧನೆಯ ಹಾದಿಯಲ್ಲಿ ಚಿಕ್ಕ ಚಿಕ್ಕ ಮಕ್ಕಳು ಚುಚ್ಚು ಮೊಳೆಯೆನ್ನಿಸುತ್ತಾರೆ.

ಹೆಂಡಿರು ಮಕ್ಕಳು, ಸಕೋಲೆ, ಚುಚ್ಚು ಮೊಳೆಯಂತಾಗಿ ಸಂಸಾರದಿಂದ ಮನಸ್ಸು ಸರಿಯದಂತೆ ಆಗುವುದು. ಸಂಸಾರವೇ ಸೆರೆಮನೆಯಾಗುವುದು.

ಹೋಲಿಸಿ ನೋಡಿರಿ: "ಹೆಂಡತಿ, ಮಕ್ಕಳು, ಮೊದಲಾದವುಗಳಲ್ಲಿ ಆಸಕ್ತಿ ಮತ್ತು ತನ್ಮಯತೆ ಇಲ್ಲದಿರುವುದು; ಇಷ್ಟಾನಿಷ್ಟಗಳು ಪ್ರಾಪ್ತವಾದಾಗ, ಯಾವಾಗಲೂ ಸಮಚಿತ್ತತೆ ಅಧ್ಯಾತ್ಮಜ್ಞಾನದಲ್ಲಿ ನಿಷ್ಠೆ, ತತ್ತ್ವಜಾನಾರ್ಥದ ಆಲೋಚನೆ, ಇವು ಜ್ಞಾನವೆಂದು ಹೇಳಲ್ಪಟ್ಟಿದೆ. ಯಾವುದು ಇದಕ್ಕಿಂತ ಭಿನ್ನವಾಗಿರುವುದೋ ಅದು ಅಜ್ಞಾನ."

(ಭಗವದ್ಗೀತೆ. ೧೦-೯, ೧೧)

೭೭೪

ವಾತಿಪ್ಯೆನಪ್ರೇಮು ನಾನಾಟಕಿನಿರೋತ, ಜ್ಯೋತಿಷ್ಮೆನ ಪ್ರೇಮು ಜೂಡಗಾನು,
ಮಾತೃಪ್ರೇಮುಯೊಕಟಿ ಮರ್ಯಾದದಾಲ್ಚುನು, ವಿಶ್ವದಾಭಿರಾಮ ವಿನುರ ವೇಮ.

ಪ್ರತಿ ದಿನವು ಸತಿಯ ಪ್ರೇಮಿಸೆ ಬೇಜಾರು.
ಜ್ಯೋತಿಯ ಪ್ರೇಮುವನೆ ನೋಡಿ ಕಾಣು.
ಮಾತೃ ಪ್ರೇಮುನೇ ಮರ್ಯಾದೆ, ಶುಭಕರ.
ವಿಶ್ವದಾಭಿರಾಮ ಕೇಳು ವೇಮ.

ಸಂಸಾರದಿಂದ ನಿವೃತ್ತಿ ಪಡೆಯಬೇಕು. ಹೆಂಡತಿಯ ಮೋಹದಿಂದ ದೂರಾಗ ಬೇಕು. ಕಾಮಾಸಕ್ತಿಯಿಂದ ವಿಮುಖರಾಗಬೇಕು. ಎಂದು ಹೇಳುತ್ತಾರೆ. ಆದರೆ ಇದೆಲ್ಲ ಹೇಗೆ ಸಾಧ್ಯ? ಇದನ್ನು ಸಾಧಿಸುವ ಕ್ರಮವೆಂತು? ಎಂಬ ಪ್ರಶ್ನೆ ಎಲ್ಲ ಸಂಸಾರವಂದಿಗರೆದುರು ನಿಂತಿದೆ. ಕೇವಲ ತಾರತಮ್ಯದ ತಿಳಿವಳಿಕೆಯಿಂದ ಇದೆಲ್ಲ ಸಾಧ್ಯ.

ದಿನ ದಿನವೂ ಹೆಂಡತಿಯನ್ನು ಪ್ರೀತಿಸಿ ಮುದ್ದಾಡುವದರಿಂದ ಬೇಜಾರು ಹುಟ್ಟುವ ದಲ್ಲವೇ? ಹಾಗಾದರೆ, ಪ್ರೇಮ ಹೇಗಿರಬೇಕು? ಹೇಗಿರಬಾರದು? ಪ್ರೇಮವೆಂದರೆ ಆಕ ರ್ಷಣೆಯಷ್ಟೇ. ದೀಪದ ಹುಳು ದೀಪದಿಂದ ಆಕರ್ಷಿತವಾಗುತ್ತದೆ. ಅದು ದೀಪವನ್ನು ನೋಡಿ ಆನಂದಿಸಿದರೇ ಚೆನ್ನು. ದೀಪ ಸ್ಪರ್ಶಿಸಹೋದರೆ, ಸುಟ್ಟು ಹೋಗುವದು. ಆ ರೀತಿ ಹೆಂಡತಿಯನ್ನು ನೋಡುವದರಲ್ಲಿ ಮಾತ್ರ ಪ್ರೇಮ ವ್ಯಕ್ತಪಡಿಸಬೇಕು. ಇದು ಸಾಧ ನೆಯ ಮುಂದಿನ ಹಂತ.

ಹೆಂಡತಿಯನ್ನು ಪ್ರೀತಿಸುವಾಗ ಭೋಗ ಪ್ರಿಯತೆಯಿರಬಹುದು; ಸಖ್ಯ ಪ್ರಿಯತೆ ಯಿರಬಹುದು; ಮಾತೃ ಪ್ರಿಯತೆಯಿರಬಹುದು. ಮಾತೃ ವಾತ್ಸಲ್ಯಕ್ಕಾಗಿ ಎಲ್ಲರೂ ಉತ್ಸುಕರಾಗಿರುವರು. ಅದೇ ಶುದ್ಧವಾದ ಪ್ರೇಮ. ಅದರಿಂದ ಮರ್ಯಾದೆ ಉಂಟು. ಶೋಭೆಯುಂಟು. ಲಿಂಗ ಭೇದವನ್ನು ತೊರೆದು ಸರ್ವರನ್ನು ಒಂದಾಗಿ ನೋಡುವ ಭಾವ ಹೊಂದಿದಾಗ ಹೆಂಡತಿಯೇ ದೇವರಾಗಿ ಕಾಣುವಳು.

(ಹೋಲಿಸಿ ನೋಡಿರಿ :

" ದೇವರೇ, ನೀನು ಸ್ತ್ರೀ; ನೀನು ಗಂಡು; ನೀನು ಹುಡುಗ; ನೀನು ಹುಡುಗಿ; ನೀನು ಕೋಲೂರುವ ಮುದುಕನೂ ಆಹುದು. ನೀನು ಈ ವಿಶ್ವವನ್ನು ಅದರ ನಾನಾ ರೂಪಗಳಲ್ಲಿ ವ್ಯಾಪಿಸಿರುವೆ. "
— ಉಪನಿಷತ್ ಮಂತ್ರ)

೭೭೫

ಜ್ಞಾತಯೈನವಾನಿ ನೇತಗಾಭಾವಿಂಚಿ, ನೀತು ಲೆರುಗವಲಯು ನಿಯತಿಗಲಿಗಿ,
ಜ್ಞಾನುಲುನ್ನ ಲಾಭ ಮೂನುನೇ ? ತೆಲಿಯಮಿ, ವಿಶ್ವದಾಭಿರಾಮ ವಿನುರ ವೇಮ.

ಜ್ಞಾತನಾದವನನು ನೇತೃವೆಂದು ತಿಳಿದು,
ನೀತಿಯರಿಯಬೇಕು ನಿಷ್ಠೆ ತಿಳಿದು;
ಜ್ಞಾನಿಯಿರಲು ಮತ್ತೆ ಲಾಭವೇನಿಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನ ಸಂಪಾದನೆಯನ್ನು ಸಾಧಿಸುವುದು ಹೇಗೆ ? ಯಾರು ಸಾಧಿಸಿರುವರೋ ಅವರನ್ನು ಅನುಸರಿಸುವುದು, ತುಂಬಾ ಸರಳವಾದ ಹಾದಿ. ಜ್ಞಾನ ಸಂಪಾದಿಸಿದವನು, ಜ್ಞಾತ. ಜ್ಞಾತನನ್ನೇ ಅನುಸರಿಸಬೇಕು. ಇವನೇ ಮಾರ್ಗದರ್ಶಕ; ನೇತೃ; ಮುಂದಾಳು.

ಜ್ಞಾನ ಸಾಧನೆಯ ಮಾರ್ಗದಲ್ಲಿ ನಿಷ್ಠೆ ತೋರಬೇಕು. ಸಾಧನೆಯ ಮಾರ್ಗದಲ್ಲಿ ಸಾಗುವ ನಡೆವಳಿಯೇ ನೀತಿ. ಜ್ಞಾನನಿಷ್ಠರು ಮಾತ್ರ, ನೀತಿಯರಿಯಬಹುದು.

ಈ ಕ್ರಮದಿಂದ ಜ್ಞಾನ ಸಾಧನ ಮಾರ್ಗವನ್ನು ಕ್ರಮಿಸಿದರೆ ಮಾತ್ರ ಅಪಾರ ಲಾಭ ವುಂಟು. ಈ ಲಾಭ ಎಂಥದು ? ಎಷ್ಟು ? ಎಂಬುದು ಸಾಧಕರಿಗೆ ಮಾತ್ರ ಅನುಭವ ವೇದ್ಯವಾಗುತ್ತದೆ.

೭೭೬

ಸಿದ್ಧುಲ್ಮಿನವಾರಿ ಚಿತ್ತಂಬು ರಂಜಿಲ್ಲು, ನೊಡಲಿಮೆರುಗು ಲೆಕ್ಕಕಿಡರು ಗಾನ,
ಪನಸಪಂಡ ಘನತ ಪೈನೇಮಿಕಲದಯಾ, ವಿಶ್ವದಾಭಿರಾಮ ವಿನುರ ವೇಮ

ಸಿದ್ಧರಾದ ಜನರ ಚಿತ್ತ ರಂಜಿಸುವುದು.
ಒಡಲ ಮೆರುಗು ಲೆಕ್ಕ-ಕಿಡರು ಅವರು.
ಹಲಸಿನ ಫಲ-ಹಿರಿಮೆ ಹೊರಗೆ ಏನಿರುವುದು ?
ವಿಶ್ವದಾಭಿರಾಮ ಕೇಳು ವೇಮ.

' ರಂಜ ' ಎಂದರೆ ಬಣ್ಣ ಕೊಡು, ಎಂದು ಅರ್ಥ. ಸಿದ್ಧರು ಎಂದರೆ ಬ್ರಹ್ಮಸಾಕ್ಷಾ ತ್ಕಾರ ಹೊಂದಿದವರು. ಇಂಥವರು ಯಾವುದಾದರೂ ವಿಷಯ ವಸ್ತುಗಳನ್ನು ನೋಡಿದ ರೆಂದು ತಿಳಿಯಿರಿ. ಆ ವಿಷಯ ವಸ್ತುವಿಗೆ ಆಕರ್ಷಕ ವರ್ಣ (ಬಣ್ಣ) ವೊಂದು ಉಂಟು. ಆ ವರ್ಣವನ್ನು ಪರಮಾತ್ಮನಿಗೆ ಆರೋಪಿಸುತ್ತಾರೆ. ಹಾಗೆ ಮಾಡುತ್ತ ಹೋದರೆ, ಎಲ್ಲ ವರ್ಣಗಳಲ್ಲಿ ಪರಮಾತ್ಮ ಕಾಣುತ್ತಾನೆ. ಮುಂದೆ ಪರಮಾತ್ಮನ ವರ್ಣವನ್ನೇ ಚಿತ್ತಕ್ಕೆ ಒಳಿದಂತಾಗಿ, ಅವನು ಏನನ್ನು ನೋಡಿದರೂ, ಪರಮಾತ್ಮನೇ ಕಾಣುವನು. ಇಂಥವನೇ ಜೀವನ್ಮುಕ್ತನು.

ಇಂಥ ಜೀವನ್ಮುಕ್ತನಿಗೆ ಶರೀರದ ಲೆಕ್ಕವೇ ಇಲ್ಲ. ಅವನು ದೇಹ ಪ್ರಜ್ಞೆಯ ಸ್ಥಿತಿ ಯಾಚೆ ಹೋದವನು. ಜಾತಿಮತಗಳ ಕಟ್ಟುಪಾಡಿನಿಂದ ಅವನಿಗೇನಾಗಬೇಕಾಗಿದೆ ? ಇಂದ್ರಿಯ ವಿಷಯಗಳಲ್ಲಿ ಅವನಿಗೆ ಪೂರ್ಣ ನಿರಾಸಕ್ತಿ. ಆದರೂ ಅವನು ಸದಾ ತೃಪ್ತ. ಅವನು ಕರ್ಮಗಳನ್ನು ಮಾಡುತ್ತಿದ್ದರೂ ಅಕರ್ಮಿಯಿದ್ದಂತೆ. ಏಕೆಂದರೆ, ಕರ್ಮಗಳು ಅವನನ್ನು ಬಾಧಿಸುವುದಿಲ್ಲ. ಫಲಾಪೇಕ್ಷೆಯೇ ಇಲ್ಲದೆ ಮಾಡಿದ ಕರ್ಮ ಫಲದಿಂದ ಬಾಧೆ ಬರುವುದೆಂತು ? ಅವನು ಹೊರಗೆ ನೋಡಲು ಒಮ್ಮೆ ಹುಚ್ಚನಂತೆ ಕಾಣಬಹುದು. ಒಮ್ಮೆ ಮುಂಕನಂತೆ ಏನೋ ಧ್ಯಾನಿಸುತ್ತ ಬಿದ್ದುಕೊಂಡಿರಬಹುದು. ಅವನ ಬಾಹ್ಯ ನೋಟದಿಂದ ಅವನ ಅಂತಃಸತ್ವವನ್ನಾಗಲೀ ಮನಸ್ಸಿನ ಶುದ್ಧಿಯನ್ನಾಗಲೀ ಗುರುತಿ ಸಲು ಸಾಧ್ಯವಿಲ್ಲ. ನಮ್ಮ ಕಲ್ಪನೆಗೆ ಮೀರಿದ ಮಹಾ ಸತ್ಯ ಕಂಡವನಾತ. ದೇಹಪ್ರಜ್ಞೆ ತೊರೆದಾಗ ಮಾತ್ರ, ಸತ್ಯಧರ್ಮದ ಪ್ರಾರಂಭ. ಹಲಸಿನ ಹಣ್ಣು ಹೊರಗೆ ಏನು ಚೆಂದ ? ಎಲ್ಲ ಹುರುಕು ಬರಕು. ಏನೋ ಅಸಡ್ಡಾಳ ರೂಪ ! ಒಳಗೆ ಹಲಸಿನ ತೊಳೆಗಳು ನೋಡಲೂ ಚೆನ್ನ. ತಿನ್ನಲೂ ರುಚಿಕರ. ಅದರ ಹಿರಿಮೆ ಒಳಗುಂಟು.

೭೭೭

ಸಾಧುಜನುಲ ಚೆಲಿಮಿ ಚಾಲಿಂಪಗಾರಾದು, ಪ್ರಕೃತಿವಿಡಕಯುನ್ನ ಫಲಮುಲೇದು.
ಪಿಂದೆ ಗೋಸಿಚೂಡ ಬೀಜಂಬು ಗಲ್ಗುನಾ ? ವಿಶ್ವದಾಭಿರಾಮ ವಿನುರ ವೇಮ.

ಸಾಧು ಜನ ಸ್ನೇಹ ಸಾಕೆನದಿರಬೇಕು.
ಪ್ರಕೃತಿ ಬಿಡುವತನಕ ಫಲವು ಇಲ್ಲ.
ಹೀಚು ಕೊಯ್ದು ನೋಡೆ, ಬೀಜವಿರಲಪ್ಪುದೆ ?
ವಿಶ್ವದಾಭಿರಾಮ ಕೇಳು ವೇಮ.

ಸಾಧು ಜನರು ಯಾರು ? ಯಾರು ಇಂದ್ರಿಯಗಳನ್ನು ಸಾಧಿಸಿರುವರೋ (ನಿಯಂತ್ರಿಸಿರುವುರೋ) ಅವರು. ಸಾಧಕರು ಸಾಧು ಜನರೊಂದಿಗೆ ಹೆಚ್ಚಾಗಿ ಬೆರೆಯಬೇಕು. ಕಾವಿ ಬಟ್ಟೆ, ಜಡೆಗಟ್ಟಿದ ಕೂದಲು ಇಲ್ಲವೆ ಬೋಳುದಲೆ, ದಂಡ-ಕಮಂಡಲುಗಳ ವೇಷದಿಂದ ಯಾರೂ 'ಸಾಧು' ಎನಿಸರು. ಬಾಹ್ಯ ನೋಟದಿಂದ ಯಾರನ್ನೂ 'ಸಾಧು' ಎಂದು ಎಂದು ನಿರ್ಣಯಿಸಕೂಡದು. ಅವನ ಮನಸ್ಸಿನ ಶುದ್ಧಿ, ಅವನ ನಡೆನುಡಿಯ ಪಾವಿತ್ರ್ಯಗಳೇ ಅವನನ್ನು ಸಾಧುವನ್ನಾಗಿ ಮಾಡಬಲ್ಲವು. ಸಾಧು ಸಂಗದಿಂದ ವೈರಾಗ್ಯ ಕುದುರುತ್ತದೆ. ಅವಿದ್ಯೆ ಕ್ರಮೇಣ ಹಿಂಗಿ, ವಿದ್ಯೆ ಮೂಡುತ್ತದೆ. ಎಷ್ಟು ಹೆಚ್ಚಾಗಿ ಸಾಧು ಸಂಗದಲ್ಲಿ ಇರುವರೋ, ಅಷ್ಟು ಹೆಚ್ಚಾಗಿ ಸಾಧಕ ತನ್ನ ಮಾರ್ಗದಲ್ಲಿ ಪ್ರಗತಿ ಸಾಧಿಸುವನು.

ಸಾಧನೆಯ ಫಲ ಯಾವಾಗ ದೊರೆಯುವುದು ? ಸಾಧನೆಯ ಫಲವೇ ಪುರುಷ ದರ್ಶನ. ಪುರುಷೋತ್ತಮನೇ ಸಗುಣ ಬ್ರಹ್ಮ. ಪ್ರಕೃತಿಯೇ ಪುರುಷನ ಗುಣಗಳಾಗಿದೆ. ಪ್ರಕೃತಿಯನ್ನು ಬಿಟ್ಟರೆ, ನಿರ್ಗುಣ ಬ್ರಹ್ಮ ಗೋಚರಿಸುವುದು. ಇದುವೇ ಸಾಧನೆಯ ಗುರಿ.

ಆದರೆ ಅರ್ಧಮರ್ಧ ಸಾಧನೆಯಿಂದ ಏನೊಂದೂ ತಿಳಿಯದು. ಏಕೆಂದರೆ ಪ್ರತಿ ಕ್ಷಣವೂ ಬದಲಾವಣೆ ನಡೆದೇ ಇರುತ್ತದೆ. ಕ್ಷಣ ಕ್ಷಣದ ಬದಲಾವಣೆಯು ವ್ಯಕ್ತವಾಗದು. ಅಂತ್ಯದಲ್ಲಿ ಒಟ್ಟು ಬದಲಾವಣೆಯು ವ್ಯಕ್ತವಾಗುವುದು. ಇದು ಹೇಗೆ ? ಇದೋ ಕೇಳಿರಿ. ಹಣ್ಣಿನಲ್ಲಿ ಬೀಜವುಂಟಷ್ಟೇ. ಆದರೆ ಮಿಡಿಗಾಯಿಯನ್ನು ಒಡೆದು ನೋಡಿದರೆ, ಬೀಜ ಕಾಣುವುದಿಲ್ಲ. ಬೀಜವು ಯಾವುದರಿಂದ ತಯಾರಾಗುವುದೋ ಅದು ಇದ್ದರೂ, ವ್ಯಕ್ತವಾಗಿರುವುದಿಲ್ಲ.

೭೭೮

ವೆನ್ನಜೇತಬಟ್ಟ ವಿವರಂಬು ದೆಲಿಯಕ, ಘೃತಮು ಗೋರುನಟ್ಟ ಯತನಿಭಂಗಿ.
ದಾನ ದೈವಮುಯ್ಯು ದೈವಮುನ್ ದಲಚುನು, ವಿಶ್ವದಾಭಿರಾಮ ವಿನುರ ವೇಮ.

ಬೆಣ್ಣೆ ಕೈಯೊಳಿದ್ದು, ಬಣ್ಣವಿವರ ತಿಳಿಯ ;
ತುಪ್ಪವನ್ನು ಕೋರುತಿಹನೆ ಭಂಗಿ.
ತಾನು ದೈವವಾಗಿ ದೈವವನೆ ನೆನೆವುದು.
ವಿಶ್ವದಾಭಿರಾಮ ಕೇಳು ವೇಮ.

ಓರ್ವನ ಕೈಯಲ್ಲಿ ಬೆಣ್ಣೆ ಇದೆಯೆಂದು ತಿಳಿಯಿರಿ. ಅವನು 'ತುಪ್ಪ' ಎಂಬುದರ ಗುಣಧರ್ಮ ಕೇಳಿರಬಹುದು. ಅದು ಉರುಟಾಗಿ ಉಂಟು. ಬೆಣ್ಣೆಯಾದರೋ ಮೆದುವಾಗಿ ನಯವಾಗಿ ಉಂಟು. ತುಪ್ಪ ಬೇರೊಂದು ವಸ್ತುವೆಂದು ಬಗೆದು, ಅದನ್ನು ಹುಡುಕುತ್ತ ಸಾಗಿದರೆ, ಅದು ಅಜ್ಞಾನವನ್ನೇ ತೋರುತ್ತದೆ. ನಿಜವಾಗಿ ಬೆಣ್ಣೆಯ ಗುಣಧರ್ಮಗಳನ್ನೂ ಅದರ ರೂಪಾಂತರಗಳನ್ನೂ ಮತ್ತಿತರ ವಿವರಗಳನ್ನೂ ತಿಳಿದಿದ್ದರೆ ಬೆಣ್ಣೆಯನ್ನು ಉಪೇಕ್ಷಿಸಿ, ಯಾರೂ ತುಪ್ಪಕ್ಕಾಗಿ ಅಂಡಲೆಯುವುದಿಲ್ಲ. ಬೆಣ್ಣೆಯನ್ನು ಕಾಯಿಸಿ, ಸೋಸಿದರೆ, ತೀರಿತು ; ತುಪ್ಪ ತಯ್ಯಾರಾಯಿತು. ಇದೇ ಜ್ಞಾನ.

'ತತ್ ತ್ವಮ್ ಅಸಿ.' ಆ ಬ್ರಹ್ಮನೇ ನೀನಾಗಿರುವೆ. 'ಅಯಮಾತ್ಮಾ ಬ್ರಹ್ಮ.', ಈ ಆತ್ಮವೇ ಬ್ರಹ್ಮವಾಗಿದೆ. 'ತತ್ ಏತದ್.' 'ಅದೇ ಇದು.' ತಾನು ದೈವವಾಗಬೇಕು. ತನ್ನಲ್ಲಿಯೇ ಬ್ರಹ್ಮವುಂಟು. ತಾನೇ ಬ್ರಹ್ಮ. ತನ್ನಂತೆ ಪರರು. ತನ್ನಂತೆ ಸರ್ವವು. ಸರ್ವವೂ ಬ್ರಹ್ಮಮಯ. 'ಸರ್ವಂ ಖಲ್ವಿದಂ ಬ್ರಹ್ಮ'(ಈ ಎಲ್ಲವೂ ನಿಜವಾಗಿ ಬ್ರಹ್ಮವೇ ಆಗಿದೆ.) ಹೀಗೆ ತಾನು ದೈವವಾಗಿ, ದೈವವನ್ನು ನೆನೆಯಬೇಕು.

೭೭೯

ವಿಶ್ವಸಿಂಪದಗಿನ ವೇಷಂಬು ಮರಿಲೇದು, ಕುಡುವ ಗೂಡು ಗಟ್ಟಗೋಕ ಲೇದು,
ವಿಶ್ವಮಯುಡು ನೈನ ವಿಭುನೇಲ ದೆಲಿಯಡೋ ವಿಶ್ವದಾಭಿರಾಮ ವಿನುರ ವೇಮ

ವಿಶ್ವಾಸಕ್ಕೆ ತಕ್ಕ ವೇಷವಾವುದಿಲ್ಲ;
ಉಣುವ ತಿಂಡಿ, ಉಡುವ ವಸ್ತ್ರವಿಲ್ಲ.
ವಿಶ್ವಮಯನಾಗಿಯು, ವಿಭುವು ಹೊಳೆಯನೆಂತು ?
ವಿಶ್ವದಾಭಿರಾಮ ಕೇಳು ವೇಮ.

ಸಾಧು ಜನರ ಸ್ನೇಹ ಮಾಡಬೇಕು ; ನಿಜ. ಆದರೆ ಯಾರು ಸಾಧುಗಳು ? ಎಂಥವರು ಸಾಧುಗಳು ? ಕಾವಿ ಬಟ್ಟೆ ಉಟ್ಟವನು ಸಾಧುವೇ ? ಭಿಕ್ಷಾಪಾತ್ರೆ ಹಿಡಿದವನು ಸಾಧುವೇ ? ಬೂದಿ ಬಳಿದುಕೊಂಡವನು ಸಾಧುವೇ ? ರುದ್ರಾಕ್ಷಿ ಕಟ್ಟಿದವನೋ ? ದಂಡಧಾರಿಯೋ, ಮುಂಡ ಬೋಳಿಸಿದವನೋ ? ಇವುಗಳಲ್ಲಿ ಯಾವುದೊಂದು ಬಾಹ್ಯ ಲಕ್ಷಣ ಹೊಂದಿರಬಹುದು. ಆದರೆ ಬಾಹ್ಯ ವೇಷವೆನಿಸುವ ಇವುಗಳಿಂದ, ಅವನ ಮನಸ್ಸಿನ ಶುದ್ಧಿ, ಇಂದ್ರಿಯ ನಿಗ್ರಹ ಸಾಧನ ಅಳೆಯುವುದೆಂತು ? ಅರಿಯುವುದೆಂತು ? ವೇಷವು ವಿಶ್ವಾಸಕ್ಕೆ ತಕ್ಕುದಲ್ಲವೆಂದು ಅನುಭವವೂ ತಿಳಿಸುತ್ತದೆ.

ಇನ್ನೇನು ? ಹಣ್ಣು–ಬೆಣ್ಣೆ ತಿನ್ನುವವನು ಸಾತ್ವಿಕ ; ಉಷ್ಣ, ಉಪ್ಪು ಹುಳಿ ಖಾರ ತಿನ್ನುವವನು ರಾಜಸಿಕ ; ಒಣದು, ಹಳಸಿದುದನ್ನು ತಿನ್ನುವವನು ತಾಮಸಿಕ; ಎಂದು ಬಗೆದು, ರಸಭರಿತ ಹಣ್ಣು–ಹಂಪಲ ತಿನ್ನುವವನನ್ನೂ, ಹಾಲು ಬೆಣ್ಣೆ ಸೇವಿಸುವವನನ್ನೂ ಸಾಧು ಎಂದು ನಿರ್ಧರಿಸಬಹುದೇ ? ಅವನ ಮನಸ್ಸಿನ ಶುದ್ಧಿ ಎಷ್ಟು ? ಎಂಬುದರ ನಿರ್ಣಯವು ಮೊದಲು ಆಗಬೇಕು. ' ಉಳ್ಳೇಗಡ್ಡಿ, ಬೆಳ್ಳುಳ್ಳಿ ತಿನ್ನುವವರು, ಇಂದ್ರಿಯ ನಿಗ್ರಹ ಸಾಧಿಸಬಲ್ಲರು. ಸಾಧುವಾಗಬಲ್ಲರು. ಅದೇಕೆ ? ಅಪವಾದಾತ್ಮಕವಾಗಿ ಗುಡಿಗುಡಿ ಸೇದುವವರೂ, ಮಾಂಸಾಹಾರ ತಿನ್ನುವವರೂ ಸಹ, ಇಂದ್ರಿಯನಿಗ್ರಹ ಸಾಧಿಸಿ ತೋರಿದ್ದಾರೆ. ತಾವು ಸ್ವೀಕರಿಸಿದ ಎಲ್ಲ ಆಹಾರದಿಂದ ಸಾತ್ವಿಕ ಗುಣ ಹೊಂದುವ ಮನಸ್ಸಿನ ಶಕ್ತಿ ಹೊಂದಿದವರು ಸಾಧುಗಳಾಗಿ ಕಂಗೊಳಿಸುವಲ್ಲಿ ಅಚ್ಚರಿಯೇನು ?

೭೮೦

ವಿನ್ನವಾನಿಕನ್ನ ಕನ್ನವಾಡಧಿಕುಂಡು, ಕನ್ನವಾನಿಕನ್ನ ಗಲಿಯುವಾಡು,
ನುನ್ನತೋನ್ನತುಡಯಿ ಯುರ್ವಿಲೋಪಲನುಂಡು ವಿಶ್ವದಾಭಿರಾಮ ವಿನುರ ವೇಮ.

ಕೇಳಿದವನಿಗಿಂತ ಕಾಣುವವನು ಅಧಿಕ.
ಕಾಣುವವನಿಗಿಂತ ಕೂಡಿರುವವ.
ಉನ್ನತೋನ್ನತಾಗಿ ಉರ್ವಿಯಲ್ಲಿ ಬಾಳು.
ವಿಶ್ವದಾಭಿರಾಮ ಕೇಳು ವೇಮ.

ನಾವು ಬ್ರಹ್ಮತ್ವ ಕುರಿತು ಅಂದರೆ ತತ್ತ್ವ ಕುರಿತು ಬಹುವಾಗಿ ಕೇಳುತ್ತೇವೆ. ಉಪನಿಷತ್ತು, ಗೀತೆ ಸತ್ಪುರುಷರ ವಚನಗಳು, ಭಕ್ತಿಗೀತೆಗಳು, ಹೀಗೆ ವಿಪುಲ ಸಾಹಿತ್ಯ ಗ್ರಂಥ ಪಠಣದಲ್ಲಿ ನಿರತರಾಗುತ್ತೇವೆ. ಇದುವೇ ಶ್ರವಣ. ಇತ್ತೀಚಿನ ವರೆಗೆ ಪರಮಾತ್ಮ ವಿಷಯಕ ಸಾಹಿತ್ಯವೆಲ್ಲ ಕಿವಿಯಿಂದ ಕೇಳಬಹುದಾದದ್ದು ಮಾತ್ರ ಆಗಿತ್ತು. ಕಾರಣ ವೇದ ಉಪನಿಷತ್ತುಗಳು ಶ್ರುತಿ ಎನಿಸಿದ್ದವು. ಉಪನಿಷತ್ತುಗಳು ತತ್ತ್ವ ಸಂಗ್ರಹದ ಗ್ರಂಥಗಳು. ಇಂದು ಪುಸ್ತಿಕೆಗಳಾಗಿ ಎಲ್ಲೆಡೆಗೂ ಲಭ್ಯವಾಗಿವೆ. ಕೇಳುವುದಷ್ಟೇ ಜ್ಞಾನ ಸಾಧನವಾಗಿಲ್ಲ. ಕೇಳುವುದು, ಓದುವುದು, ಬರೆಯುವುದು ಎಲ್ಲವೂ ಜ್ಞಾನಸಾಧನವಾಗಿದೆ. ಶ್ರವಣದಲ್ಲಿ ಇಂದು ಶ್ರವಣ, ಪಠಣ, ಲೇಖನಗಳು ಅಂತರ್ಗತವಾಗಿವೆ.

ತತ್ತ್ವಗಳನ್ನು ಶ್ರವಣಾದಿಗಳಿಂದ ತಿಳಿದುಕೊಂಡ ಮೇಲೆ ಅವುಗಳ ಮನನ ಮಾಡಬೇಕು. ಏಕೆಂದರೆ, ತತ್ತ್ವ ಬೋಧಿಸುವ ಪದ–ಪದ್ಯಗಳೆಲ್ಲ 'ಮನ್‌ತ್ರ'ಗಳಷ್ಟೇ. ಮಂತ್ರಗಳು ಕೆಲವೊಮ್ಮೆ ಅಧಿದೇವತಾಪರವಾಗಿರಬಹುದು. ಆಗ ತತ್‌ತ್ವ ಕೇಳಿ, ಮನನ, ಧ್ಯಾನಾದಿ ಮಾಡಿದವನಿಗೆ ತಾನು ಪೂರ್ವದಲ್ಲಿ ಕಂಡ, ಕಲ್ಪಿಸಿಕೊಂಡ ಮೂರ್ತಿಯು (ಇಷ್ಟದೇವತೆ) ಮನಸ್ಸಿನೆದುರು ಕಂಡಂತೆ ಎನ್ನಿಸಬಹುದು. ಮೊದಲು ಅಂಥ ಮೂರ್ತಿಯನ್ನು ನೋಡಿದ ಕರ್ಮದಿಂದ ಪರಿಣಾಮವು ಮನಸ್ಸಿನಲ್ಲಿ ಉಂಟಾಗುತ್ತದೆ. ವೃತ್ತಿ ಸಂಚಯವಾಯಿತು. ಇದೇ ಪರಿಣಾಮದಲ್ಲಿ ವ್ಯಕ್ತವಾದರೆ, ಮೂರ್ತಿ ಕಂಡ ಅನುಭವವಾಗುವುದು. ಈ ಸ್ಥಿತಿಯ ಮನಸ್ಸು ಕೇವಲ ಶ್ರವಣ ಮಾಡುವವನ ಮನಸ್ಸಿಗಿಂತಮೇಲಾದದ್ದು.

ಇನ್ನು ಹಲವರು ಯೋಗಿಗಳುಂಟು. ಯೋಗಿಗಳೆಂದರೆ ಪರಮಾತ್ಮನೊಂದಿಗೆ ಸೇರಿರುವವರು. (ಯುಜ್ ಅಂದರೆ ಸೇರು ಎಂದರ್ಥ) ತತ್ತ್ವಗಳನ್ನು ಅರಿತು ಅನುಭವಿಸಿ ಅವುಗಳೊಡನೆ ಒಂದಾಗಿ ಹೋಗುವವನು ಎಲ್ಲರಿಗಿಂತ ಮೇಲು. ಹೀಗೆ ಉನ್ನತವಾದುದಕ್ಕಿಂತ ಉನ್ನತವಾದ ಯೋಗಿಯಾಗಿ ಬಾಳಬೇಕು.

೭೮೧

ರೂಪುವಂಕಪೇರು ರೂಢಿಗಾ ನಿಲ್ಚುನು, ಪೇರುವಂಕಕ್ರಿಯಲು ವೆನಗುಚುಂಡು
ನಾಶಮೌನುದುದಕು ನಾಮರೂಪಕ್ರಿಯಲ್ ವಿಶ್ವದಾಭಿರಾಮ ವಿನುರ ವೇಮ.

ರೂಪದಿಂದ ನಾಮ ರೂಢಿಯಾಗುತಿಹುದು.
ಹೆಸರಿನಿಂದ ಕ್ರಿಯೆ ಹತ್ತುತಿಹುದು
ನಶಿಸುತಿಹವು ಕೊನೆಗೆ ನಾಮರೂಪಕ್ರಿಯೆ.
ವಿಶ್ವದಾಭಿರಾಮ ಕೇಳು ವೇಮ.

ಈ ಪ್ರಪಂಚವು ವ್ಯಕ್ತವಾಗಿ ತೋರುವುದು ಯಾವುದರಿಂದ ? ಚಿತ್ತವೃತ್ತಿಯ ತರಂಗಗಳಿಂದ ತಾನೇ ? ಅನೇಕ ತರಂಗಗಳಿದ್ದರೂ, ಬಣ್ಣ ಮತ್ತು ಶಬ್ದ ತರಂಗಗಳು ಹೆಚ್ಚಾಗಿ ಪ್ರಭಾವ ಪೂರ್ಣವಾಗಿ ಉಂಟು. ಈ ಪ್ರಪಂಚದ ಸಕಲ ವಸ್ತುಗಳಿಗೂ ಬಣ್ಣ ಉಂಟು. ಯಾವುದಕ್ಕೆ ರೂಪವುಂಟೋ, ಅದಕ್ಕೆ ಬಣ್ಣ ಉಂಟು. ಶಬ್ದವೂ ಉಂಟು. ಸತ್ತ್ವ ರಜಸ್ ಮತ್ತು ತಮಸ್ ಗುಣಗಳನ್ನು ಬಿಳಿ, ಕೆಂಪು, ಕಪ್ಪು ಬಣ್ಣಗಳಿಂದ ಪ್ರತಿನಿಧಿಸುತ್ತೇವೆ. ಎಲ್ಲ ಬಣ್ಣಗಳು ಕೂಡಿರುವುದೇ ಬಿಳಿಬಣ್ಣ. ಯಾವ ಬಣ್ಣವಿಲ್ಲದಿರುವದೇ ಕಪ್ಪು; ಕತ್ತಲೆ. ಗುಣಗಳಿಂದ ಯುಕ್ತವಾದ ಸದ್ವಸ್ತುವನ್ನು ಉಪಾಸಿಸುವದು ಸಗುಣ ಬ್ರಹ್ಮೋಪಾಸನೆ. ಪರಿಮಿತವಾದ ಜ್ಞಾನಸಾಧನ ಶಕ್ತಿಯಿಂದ, ಅಪರಿಮಿತವಾದ ಬ್ರಹ್ಮವನ್ನು ಅರಿಯುವದು ಕಠಿಣ. ಅದರೊಡನೆ ಒಂದಾಗಿ ಹೋಗುವದೇ ಅದನ್ನರಿಯುವ ಮಾರ್ಗ.

ಪ್ರತಿಮೆ ಇಲ್ಲವೆ ಮೂರ್ತಿಪೂಜೆಯೂ ರೂಪಗ್ರಹಣದ ವಿಧ. ಅನಂತ ಬ್ರಹ್ಮವನ್ನು ಕಲ್ಪನೆಯ ಸ್ಥೂಲವಸ್ತುವಿಗೆ ಪರಿಮಿತಗೊಳಿಸುವದೆಂತು ಸಾಧ್ಯ ? ಒಂದು ಆಕಾರದ ಮೂರ್ತಿಯನ್ನು ಇನ್ನೊಂದು ಆಕಾರದ ಮೂರ್ತಿಯಿಂದ ಪ್ರತ್ಯೇಕಿಸಲು ' ನಾಮ ' ಕ್ಕೆ ಮೊರೆಹೋಗಬೇಕು. ನಾಮ ಪಠಣ ಬೇರೆ ಬೇರೆಯಾಯ್ತು. ಬಾಹ್ಯ ಪೂಜಾಕ್ರಿಯೆಯೂ ಬೇರೆ ಬೇರೆಯಾಯ್ತು. ರೂಪ ನಾಮ ಕ್ರಿಯೆಗಳು ಒಂದರ ಹಿಂದೆ ಒಂದಾಗಿ ಬೆಂಬತ್ತಿದವು. ಸತ್ಯ ತಿಳಿದ ಮೇಲೆ ಇವೆಲ್ಲ ಇಲ್ಲವಾಗುವವು.

(ಹೋಲಿಸಿ ನೋಡಿರಿ :

" ನಾಮರೂಪಗಳೆಲ್ಲವುಂ ಮಿಥ್ಯೆಯೆಂದು ತಿಳಿ |
ಯಾ ಮಹಾ ಸಂವಿತ್ತಿನಲ್ಲಿ ತೋರ್ಪ || "
' ಅನುಭವಸಾರ' - ಶ್ರೀ ನಿಜಗುಣಯೋಗಿ – ಳ ಸಂಧಿ ಸೂತ್ರ

" ಜ್ಞಾನದೇವ ಹೇಳುವನು : ನಾಮರೂಪಗಳನ್ನು ತೊರೆದರೆ ತೀರಿತು. ನಿಜವಾಗಿ ನಾವೆಲ್ಲರೂ ಒಂದೇ ಆಗಿ ಇದ್ದೇವೆ. ಅಂಥ ಸ್ವಾನಂದ ಜೀವನದಲ್ಲಿ ಸುಖಿಯಾಗು "

ಪಸಷ್ಟಿ : — ಸಂತ ಜ್ಞಾನದೇವ.)

೭೮೨

ರಾಜಸಂಬುಗೋರಿ ರಾಜ್ಯಭಾರಮುನಂದು, ನೋರ್ಪುಲೇನಿ ಯಾತ ಡುಭಯಂತಜೇಡು
ನೀಟವೈನ ಗುಂಡು ನಿಲುಚುನಾ ? ಮುನುಗಕ, ವಿಶ್ವದಾಭಿರಾಮು ವಿನುರ ವೇಮು.

ರಾಜ ಪದವಿ ಕೋರಿ, ರಾಜ್ಯಭಾರದಲ್ಲಿ
ಕೆಡುವನು ಇಹ ಪರದಿ; ಕೆಚ್ಚು ಇರದೆ;
ನೀರ ಮೇಲೆ ಗುಂಡು ನಿಲ್ಲುವುದೆ ? ಮುಳುಗದೆ.
ವಿಶ್ವದಾಭಿರಾಮ ಕೇಳು ವೇಮ.

ಹಲವರು ರಾಜಪದವಿ ಕೋರುತ್ತಾರೆ. ರಾಜಪದವಿ ಸುಖಭೋಗದ ಕೇಂದ್ರವೆಂದು ಅವರ ಭಾವನೆ. ರಾಜರಾಗಲು ಅಲ್ಲ ಸಲ್ಲದ ತಂತ್ರಹೂಡಿ, ಕೊನೆಗೆ ರಾಜಪದವಿ ಗಿಟ್ಟಿಸುವರು. ರಾಜಪದವಿಯೊಂದಿಗೆ ರಾಜ್ಯಭಾರವೂ ಮೈಮೇಲೆ ಬೀಳುತ್ತದೆ. ರಾಜ್ಯಭಾರ ನಿರ್ವಹಿಸುವಾಗ, ಸರ್ವಸಮತಾ ಭಾವ ಇರಬೇಕು. ಸಮತಾಭಾವ ಇಲ್ಲದಾಗ, ವಿಷಮತೆ ಹಬ್ಬುವುದು. ದ್ವೇಷಾಸೂಯೆ ಹುಟ್ಟುವವು. "ಈ ಶತ್ರುವು ನನ್ನಿಂದ ಕೊಲ್ಲಲ್ಪಟ್ಟನು, ನಾನು ಈಶ್ವರ, (ರಾಜಾ ಪ್ರತ್ಯಕ್ಷ ದೇವತಾ) ಭೋಗಿ, ಸಿದ್ಧ, ಬಲವಂತ ಮತ್ತು ಸುಖಿ.

"ನಾನು ಹಣವಂತನು ಮತ್ತು ಕುಲೀನನು; ನನಗೆ ಸಮನಾದವನು ಬೇರೆ ಯಾವನಿದ್ದಾನೆ? ನಾನು ಯಾಗ ಮಾಡುವೆನು, ದಾನ ಮಾಡುವೆನು, ಮೋದ ಪಡುವೆನು-ಎಂದು ಅಜ್ಞಾನದಿಂದ ಮೋಹಿತರಾಗಿ, ಅನೇಕ ಚಿಂತೆಗಳಿಂದ ಭ್ರಾಂತರಾಗಿ, ಮೋಹಜಾಲದಿಂದ ಆವರಿಸಲ್ಪಟ್ಟವರಾಗಿ, ಕಾಮ ಭೋಗಗಳಲ್ಲಿ ಆಸಕ್ತರಾಗಿ, ಅಶುಚಿಯಾದ ನರಕದಲ್ಲಿ ಬೀಳುತ್ತಾರೆ" (ಶ್ರೀ ಕೃಷ್ಣ—ಭಗವದ್ಗೀತೆ ೧೬—೧೪ ರಿಂದ ೧೭) ಎಂದು ಅಸುರವೃತ್ತಿಯಿಂದಾಗುವ ಪರಿಣಾಮವನ್ನು ಹೇಳಲಾಗಿದೆ.

ನಿರ್ಭಯನಲ್ಲದವನು, ಸತ್ಯವನ್ನೇ ಪರಿಪಾಲಿಸುವ ಧೀರತನ, ಕೆಚ್ಚು ಇಲ್ಲದವನು, ಇಹದಲ್ಲಿಯೂ ಕೆಡುವ; ಪರದಲ್ಲಿಯೂ ಕೆಡುವ. ಅವನಿಗೆ ವ್ಯವಸಾಯದಲ್ಲಿ ದುಷ್ಫಲ. ಸೇವೆಯಂತೂ ಇಲ್ಲವೇ ಇಲ್ಲ. ಜಡ ಮನಸ್ಸಿನ, ಅಸುರೀ ಸ್ವಭಾವದ ರಾಜನು, ಗುಂಡು ನೀರಿನಲ್ಲಿ ಮುಳುಗುವಂತೆ, ಸಂಸಾರ ವ್ಯವಹಾರದಲ್ಲಿ ಮುಳುಗಿ ಹೋಗುವನು.

೭೮೩

ಭವಮುಸಾಗರಂಬು ಭಾರ್ಯಯೌ ಮಕರಂಬು, ಚೇಪಜಲಗಲಗುನು ಶಿಶುವುಲೆಲ್ಲ.
ಭವಹರುಂ ದಲುಪಕ ಪಾರಮುಂದಗಲೇಡು, ವಿಶ್ವದಾಭಿರಾಮ ವಿನುರ ವೇಮು.

ಭವ-ಸಾಗರದಂತೆ, ಭಾರ್ಯೆ ಮೊಸಳೆಯಂತೆ,
ಮೀನು ನೀರುಜಂತು; ಮಕ್ಕಳಿಲ್ಲ.
ಭವಹರನ ನೆನೆಯದೆ, ಪಾರುಗಾಣರಾರು.
ವಿಶ್ವದಾಭಿರಾಮ ಕೇಳು ವೇಮ.

'ಭವ'ಎಂದರೆ ಸೃಷ್ಟಿ;ಪ್ರಕೃತಿ.ಪ್ರಕೃತಿಗೆ ಸಾಕ್ಷಿಯಾಗಿ ಪುರುಷನುಂಟು. ವ್ಯಕ್ತ ಪ್ರಕೃತಿ ಅಂದರೆ ಭವವು ಸಾಗರದಂತೆ ಅಗಾಧ ಮತ್ತು ಅಪಾರ. ಇದುವೇ ಸಂಸಾರ. ಭವಸಾಗರದಲ್ಲಿ ಮೊಸಳೆ, ಮೀನು, ಜಲಕೀಟಗಳುಂಟು. ಭಾರ್ಯೆಯೇ ಮೊಸಳೆಯಂತೆ. ಸಾಗರದಲ್ಲಿ ಕಾಲು ಇಳಿಬಿಟ್ಟವನನ್ನು ಮೊಸಳೆ ನುಂಗಬಯಸುತ್ತದೆ. ನುಂಗುವ ಮೊದಲು ಮೊಸಳೆಯ ಕಣ್ಣಲ್ಲಿ ನೀರು ಬರುವುದುಂಟು. ಸಂಸಾರದಲ್ಲಿ ಧುಮುಕಿದವನಿಗೆ ಅದರಿಂದ ಹೊರಬರಬೇಕಾದರೆ, ಹೆಂಡತಿ ಮೊಸಳೆ ಕಾಲುಹಿಡಿದಂತೆ ಭಾಸವಾಗುತ್ತದೆ. ಮಕ್ಕಳು ಮೀನು, ನೀರು ಕೀಟಗಳಂತೆ ತೊಂದರೆಯೀಯುವವು. ಅಂದರೆ, ಹೆಂಡತಿಯ ಮೋಹ. ಮಕ್ಕಳ ಮೇಲಿನ ವಾತ್ಸಲ್ಯದಿಂದ ಸೆಳೆಯಲ್ಪಟ್ಟವನ ಮನಸ್ಸು, ಅಲ್ಲಿಂದ ದೂರವಾಗಲು ಬಯಸದೆ, ಕಷ್ಟ ಪಡುವನು.

ಹಾಗಾದರೆ ಇದಕ್ಕೆ ಉಪಾಯವೇನು? ಭವಹರನನ್ನು ನೆನೆವುದೊಂದೇ ಉಪಾಯ. ಹರಃ ಎಂದರೆ ತೆಗೆದುಕೊಂಡೊಯ್ಯುವವ. ಯಾವನು ಪಾಪ ಚಿಂತೆಗಳನ್ನು ನಿವಾರಿಸುವನೋ, ಅವನೇ ಭವಹರನು, ಪರಶಿವ. ಇಂಥ ಭವಹರನನ್ನು ಧ್ಯಾನಿಸಬೇಕು.

(ಹೋಲಿಸಿ ನೋಡಿರಿ:

"ಕಾ ತೇ ಕಾಂತಾ ಕಸ್ತೇ ಪುತ್ರ್ರಸ್ಸಂಸಾರೋಽಯಮತೀವ ವಿಚಿತ್ರ; |
ಕಸ್ಯ ತ್ವಂ ಕ: ಕುತ ಆಯಾತ: ತತ್ತ್ವಂ ಚಿಂತಯ ತದಿಹ ಭ್ರಾತ: || "

ನಿನ್ನ ಹೆಂಡತಿ ಯಾರು? ನಿನ್ನ ಮಕ್ಕಳಾರು? ಇದೆಲ್ಲ ಸಂಸಾರವೆಲ್ಲವೂ ಅತಿ ವಿಚಿತ್ರವಾಗಿದೆ. ನೀನಾರು?ನಿನ್ನದೆಂಬುದೇನು? ಎಲ್ಲಿಂದ ಬಂದೆ?ಬಂದುದೇಕೆ? ಇದೆಲ್ಲ ತತ್ತ್ವವನ್ನು ಚಿಂತಿಸು.

ಆಚಾರ್ಯ ಶಂಕರ ದ್ವಾದಶ ಪಂಜರಿಕ ಸ್ತೋತ್ರಂ.]

೭೮೪

ಪಾಶಬಂಧಮುಲನು ಬಂಧುವರ್ಗಂಬೆಲ್ಲ, ಜಿಕ್ಕಜೂತುರರಯ ಜೀವಮುಚನ,
ನೊಕ್ಕಡೈನ ನೇಗ ಡುಸುರುಮಾತ್ರಮೆಕಾನಿ ವಿಶ್ವದಾಭಿರಾಮ ವಿನುರ ವೇಮು.

ಪಾಶ ಬಂಧದಿಂದ ಬಂಧುವರ್ಗವೆಲ್ಲ
ಕಟ್ಟಲೆಳಸುವರರಿ; ಜೀವ ತೊಲಗೆ.
ಒಬ್ಬ ಕೂಡ ಹೋಹ; ಉಸಿರು ಹೊರೆತು ಮತ್ತೆ.
ವಿಶ್ವದಾಭಿರಾಮ ಕೇಳು ವೇಮ.

ಹೆಂಡಿರು-ಮಕ್ಕಳು, ಬಂಧು-ಬಳಗ. ಶಕ್ತ ಸಂಬಂಧಿಗಳು, ಮೋಹ ಹುಟ್ಟಿಸಿ ಕಟ್ಟುತ್ತಾರೆ. ಈ ಮೋಹವೇ ಹಗ್ಗವೆಂದು ತಿಳಿಯಬಹುದು. ಕಟ್ಟುವ ಇಲ್ಲವೆ ಬಂಧಿ

ಸುವ ಸಾಧನ. ಮನುಷ್ಯ ಸತಿಯನ್ನು ಕೋರುತ್ತಾನೆ, ಮದುವೆಯಾಗುತ್ತಾನೆ. ಸಂಭೋಗ ಸುಖ ಕೋರುತ್ತಾನೆ. ಮಕ್ಕಳಾಗುತ್ತವೆ. ಮಕ್ಕಳ ಮದುವೆ ತನ್ನ ಹೊಣೆಗಾರಿಕೆಯಷ್ಟೇ. ಸತಿಯ ಪೋಷಣೆಯೂ ಅಷ್ಟೇ. ಮಕ್ಕಳ ಮದುವೆಯಿಂದ ಬೀಗತನ ಉಂಟಾಗುವದು. ಇಂಥ ಬಂಧುಗಳೂ ಬೆಳೆಯುವರು. ಪ್ರತಿಯೊಬ್ಬರೂ ತಮ್ಮ ಕುರಿತು ಇತರರಿಗಿರುವ ಹೊಣೆಗಾರಿಕೆಯನ್ನು ಎತ್ತಿ ತೋರಿಸುತ್ತಾರೆ. ತಮಗೆ ನೆರವಾಗುವದೇ ಬಂಧುಪ್ರೇಮವೆಂದು ಬಿಂಬಿಸುವರು. ಲೋಕದ ವಿಶಾಲಚಿಂತನೆಯತ್ತ ಲಕ್ಷ್ಯ ಹರಿಸಗೊಡುವದಿಲ್ಲ. 'ಪ್ರಸಂಗ ಬಿದ್ದರೆ, ಪ್ರಾಣವನ್ನಾದರೂ ಕೊಟ್ಟೀವು' ಎನ್ನುವ ವರೆಗೆ ಎಲ್ಲರೂ ಮಾತನಾಡಿ ಮೋಹ ಹುಟ್ಟಿಸುತ್ತಾರೆ. ಮೋಹಬಂಧನದಿಂದ ಬಿಡುಗಡೆ ಹೊಂದದ ಮನುಷ್ಯನು ಮನಸ್ಸಿನ ಶುದ್ಧಿ ಸಂಪಾದಿಸಲಾರನು. ಮನಸ್ಸು ಶುದ್ಧವಾಗದೆ, ಪೂರ್ಣತತ್ತ್ವ ಜ್ಞಾನವಾಗದು. ಜ್ಞಾನವಾಗದಿದ್ದರೆ ಜನನ-ಮರಣ ಚಕ್ರ ತಪ್ಪಿದ್ದಲ್ಲ. ಅದೇ ರೀತಿ ಸಂಸಾರ ಬಂಧನ ಸಹ.

ಈ ಮೋಹ ಕಳೆಯುವದು ಹೇಗೆ ? ಮರಣ ಕಾಲವನ್ನು ಸ್ವಲ್ಪು ನೆನೆಯಬೇಕು. ಜೀವ ಹೋಗುವಾಗ ಬಂಧುವರ್ಗ ಪಾಶಬಂಧದಿಂದ ಕಟ್ಟಲ್ಪಟ್ಟಿದ್ದರೆ, ಯಾರಾದರೂ ಜೊತೆಗೆ ಸಾಯುವರೇ? ಇಲ್ಲ. ಆಗ ಅಪಾನ ಸಮಾನ ವಾಯುಗಳು ಹೋರಾಡಿ ಒಂದಾಗಿ, ವ್ಯಾನದೊಂದಿಗೆ ಕೂಡಿ, ಉದಾನದೊಡನೆ ಸೇರಿ, ಪ್ರಾಣ ನಿಷ್ಕ್ರಮಿಸುವುದು. ಇದನ್ನೇ 'ಉಸಿರು ಹೋಯಿತು' ಎನ್ನುವುದು. ಉಸಿರು ಹೋಗುವಾಗ ಉಸಿರೊಂದೇ ಹೊರತು ಬೇರಾವುದೂ ಹೋಗುವದಿಲ್ಲ. ಉಳಿಯುವದು ದೇಹ. ದೇಹವನ್ನು ಹೂಳುತ್ತಾರೆ. ಇಲ್ಲವೆ ದಹಿಸುತ್ತಾರೆ. ಇದರೊಂದಿಗೆ ಬಂಧಪಾಶವಿಲ್ಲ. ಹೋದ ಉಸಿರಿನೊಂದಿಗೂ ಬಂಧ ಪಾಶವಿಲ್ಲ. ಬಂಧಪಾಶವಿರುವದು, ಮನಕ್ಕಂಟಿದ ಮೋಹದಲ್ಲಿ ಮಾತ್ರ.

೭೮೫

ಪತ್ತನಂಬುಲಂದು ಬತುಲಕು ಸತುಲಕು, ನೋಹಮೆಚ್ಚುದಾನ ನೂಹಲೆಚ್ಚು,
ಮುಕ್ತಿಮಾರ್ಗಮುನಕು ಯುಕ್ತಿಯ್ಯೆ ತೆಲಿಯದು, ವಿಶ್ವದಾಭಿರಾಮ ವಿನುರ ವೇಮ.

ಪಟ್ಟಣವಾಸಿಯಿಹ ಪತಿಗೆ ಮತ್ತೆ ಸತಿಗೆ,
ಮೋಹ ಹೆಚ್ಚು; ಅದರ ಊಹೆ ಹೆಚ್ಚು;
ಮುಕ್ತಿಮಾರ್ಗ ಪಡೆವ, ಯುಕ್ತಿ ತಿಳಿಯರವರು.
ವಿಶ್ವದಾಭಿರಾಮ ಕೇಳು ವೇಮ.

ಪಟ್ಟಣಗಳೆಲ್ಲ ಮೊದಲು ರಾಜರ ಇಲ್ಲವೆ ರಾಜ ಮಂಡಲದವರ ಬಿಡಾರಗಳಾಗಿರುತ್ತಿದ್ದವು. ಇಲ್ಲಿ ರಾಜವಾಡೆ, ಮನೋರಂಜನೆಯ ಸ್ತ್ರೀ-ಪುರುಷ ಮೇಳಗಳು, ಮೋಹಕವಾದ ನೃತ್ಯ ಸಂಗೀತಗಳು ನಡೆಯುತ್ತಿದ್ದವು. ಇಂಥ ಪರಿಸರದಲ್ಲಿರುವ ಸ್ತ್ರೀ ಪುರುಷರಿಗೆ ಮೋಹ ಉಂಟಾಗುವುದು ಸಹಜ. ಏಕೆಂದರೆ, ಸಂಗದಿಂದ ಚಿತ್ತವೃತ್ತಿಗಳು ಉಂಟಾಗುತ್ತವೆ. ಈ ಚಿತ್ತವೃತ್ತಿಗಳು ಸಂಚಯವಾಗಿ ಸಂಸ್ಕಾರವಾಗಿ, ಬೆಳೆಯುತ್ತವೆ. ಒಮ್ಮೆ ನೋಡಿದ ಸ್ತ್ರೀ

ಮೇಳವನ್ನು ಇನ್ನೊಮ್ಮೆ ನೋಡುವ ಸ್ವಭಾವ ಉಂಟಾಗುತ್ತದೆ. ಆಕರ್ಷಕ ವಸ್ತುವಿನ್ಯಾಸ ಕಂಡು ಗಂಡು-ಹೆಣ್ಣು ಮೋಹ ತಾಳುತ್ತಾರೆ. ಮೋಹಗೊಳಿಸುವ ವಸ್ತುಗಳನ್ನು ಕುರಿತು ಊಹೆ ಮಾಡಿದಷ್ಟೂ, ಮೋಹ ಹೆಚ್ಚಾಗುತ್ತದೆ.

ಇಂಥ ಮೋಹಪಾಶದಿಂದ ಬಿಡಿಸಿಕೊಳ್ಳುವುದೇ ಮುಕ್ತಿ. ಮನಸ್ಸು ಮುತ್ತಿದ ಈ ಕೋರಿಕೆಗಳ ಗುಂಪವು ಚದುರಿ, ಮನಸ್ಸು ನಿರ್ಮಲವಾದಾಗ ಮಾತ್ರ ಮೋಕ್ಷ. ಇಂಥ ಮುಕ್ತ ಸ್ಥಿತಿಯಲ್ಲಿರುವ ಮನಸ್ಸು ನಿತ್ಯಾನಂದ ಹೊಂದುವುದು. ಇಹದ ಸುಖವೆಲ್ಲ ಆದರೆದುರು ಕೀಳಾಗಿ ತೋರುವುದು. ಆದರೆ ಗುಟ್ಟಿಂದರೆ, ಇಹದ ಸುಖವನ್ನು ಮೀರದೆ ನಿತ್ಯಾನಂದ ಪ್ರಾಪ್ತಿಯಿಲ್ಲ. ಸುಖವು ಮೋಹ ಹುಟ್ಟಿಸುತ್ತದೆ. ಮೋಹದಿಂದ ಪಟ್ಟಣ ಜೀವನಕ್ಕೆ ಸ್ತ್ರೀ ಪುರುಷರು ಮಾರು ಹೋಗಿ, ಸತ್ಪಥವನ್ನು ಮರೆಯುತ್ತಾರೆ.

೭೮೬

ಪಂಚಮುನಿಗಮುಂಬು ಭಾರತಂಬಗುನನಿ, ಪೊಗಡಿರೇಲ ಜೆನುಲು ಬುದ್ಧಿ ಮಾಲಿ ?
ಹಿಂಸನೆಂಚಿ ಚೂಡ ನಿಷ್ಪವೆಟ್ಲಯ್ಯೆನೋ, ವಿಶ್ವದಾಭಿರಾಮ ವಿನುರ ವೇಮ.

ಪಂಚಮವೇದವೆನೆ, ಭಾರತವೆ ಎನ್ನುತ?
ಸ್ತುತಿಪರೇಕೆ ಜನ, ಮತಿಯ ತೊರೆದು.
ಹಿಂಸೆಯರಿತು ನೋಡೆ, ಇಷ್ಟವೆಂತೆನಿಪುದು ?
ವಿಶ್ವದಾಭಿರಾಮ ಕೇಳು ವೇಮ.

'ಭಾರತವೆಂದರೆ ಭರತರ ಯುದ್ಧವನ್ನೇ ಸೂಚಿಸುವುದು, ಎಂದು ಪಾಣಿನಿಯ ವಾಖ್ಯೆ. ಮಹಾ ಭಾರತವೆಂದರೆ, ಭರತರ ಯುದ್ಧದ ದೀರ್ಘ ಕಥೆ. ಮಹಾಭಾರತ ಕಥಾವಸ್ತುವಾಗಿರುವ ಈ ಭರತರು ಯಾರು? ಋಗ್ವೇದದ ಪ್ರಾಮಾಣ್ಯದಂತೆ ಈ ಭರತರು ಯುದ್ಧಪಿಪಾಸುಗಳಾದ ಕ್ಷತ್ರಿಯ ಕುಲದವರು. ಇವರ ವಾಸಸ್ಥಾನವು ಗಂಗಾ-ಯಮುನೆಯರ ನಡುನಣ ಪ್ರದೇಶ. ಸೋದರರ ತಂಟೆಯಿಂದ ಉದ್ಭೂತವಾದ, ರಕ್ತರಂಜಿತವಾದ, ಈ ದಾರುಣ ಕಥೆಯಲ್ಲಿ ಪಾಂಡವರು ತಮ್ಮ ದಾಯಾದಿ ಬಂಧುಗಳಾದ ಕೌರವರನ್ನು ಮಣ್ಣು ಮುಕ್ಕಿಸಿನ ವಿಷಯವೇ ಜೀವ ಜೀವಾಳವಾಗಿ ನಿಂತಿದೆ.

ಈ ಮೂಲ ಕಥೆಗೆ ಅನೇಕ ದಂತ ಕಥೆಗಳು, ಬ್ರಾಹ್ಮಣರ ಮೇಲ್ಮೆ ಸೂಚಿಸುವ ಕಲ್ಪಿತ ಜೋಡಣೆಗಳು, ವಿಶ್ವಸೃಷ್ಟಿ, ಭೂಗೋಲ, ವಿಷ್ಣು-ಶಿವರನ್ನು ಕುರಿತು ಕಲ್ಪನಾವಿಲಾಸದ ಚಿತ್ರಣ, ನೀತಿ ಕಥೆಗಳೇ ಆದಿಯಾಗಿ ಕೂಡಿಕೆಗಳು ಕಾಲಕ್ರಮೇಣ ಆಗಿ, ಇಂದಿನ ಮಹಾಭಾರತ ಮಹಾಕಾವ್ಯವಾಗಿದೆಯೆಂದು ಸಂಶೋಧಕರ ಮತ.

ಅದೇನೇ ಇರಲಿ. ಮಹಾಭಾರತ ಯುದ್ಧದ ಕಥೆ. ಹಿಂಸೆಯೇ ಅದರ ಜೀವ-ಜೀವಾಳ. ವೇದವೆಂದರೆ ಜ್ಞಾನ. (ವಿದ್ ಅಂದರೆ ತಿಳಿ) ಈ ಜ್ಞಾನ ಪರಮಾತ್ಮತ್ವದ ಜ್ಞಾನ; ತತ್ತ್ವ ಜ್ಞಾನ. ಹಾಗಾದರೆ ಹಿಂಸೆಯ ಕಥೆಯಾದ ಮಹಾ ಭಾರತವನ್ನು 'ಪಂಚಮ ವೇದ'ವೆಂದು ಬುದ್ಧಿಗೇಡಿಗಳಾಗಿ ಜನರೇಕೆ ತಿಳಿಯುವರೋ ? ಹಿಂಸೆಯು ಯಾರಿಗೇನು ಇಷ್ಟವೇ?

೭೮೭

ನೀರುವೈನಬಡಿನ ನಿಪ್ಪುಲು ಬೊಗ್ಗುಲೌ, ನಿಪ್ಪುಮೀದ ಕುಂಡ ನೀರು ಬೆಟ್ಟ.
ಕಶವೇಳನುಚುಗ್ರಾಗು ಗಡುಚೋದ್ಮ ಮಿದಿಕದಾ ? ವಿಶ್ವದಾಭಿರಾಮ ವಿನುರ ವೇಮ.

ನೀರಮೇಲೆ ಬಿದ್ದ ನಿಗಿಗೆಂಡ-ವಿದ್ದಲು;
ಕೆಂಡದಮೇಲೆ ಜಲ ಕಾಯಲಿಡಲು,
ಕಾಯ್ದು ಸುಡುತಲಿಹುದು ; ಕಡುಚೋದ್ಯವಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ನೀರಿನ ಮೇಲೆ ಕಾಯ್ದು ಧಗಧಗಿಸುವ ಕೆಂಡವನ್ನು ಇಟ್ಟರೆ, ಅದು ಆರಿ ತಣ್ಣಗಾಗಿ ಇದ್ದಲಾಗುವುದು. ಆದರೆ ಅದೇ ನೀರನ್ನು ಒಂದು ಪಾತ್ರೆಯಲ್ಲಿ ತುಂಬಿ ಆ ಪಾತ್ರೆಯನ್ನು ಧಗಧಗಿಸುವ ಕೆಂಡದ ಮೇಲೆ ಇಟ್ಟರೆ, ನೀರು ಕಾಯ್ದು ಸುಡುವಷ್ಟು ಉಷ್ಣವಾಗುವುದು. ಇದೊಂದು ರಹಸ್ಯವಾಗಿ ಕಾಣುವದಲ್ಲವೆ ? ಈ ರಹಸ್ಯ ಭೇದ ಮಾಡಿದರೆ, ಪಾತ್ರೆಯ ಪಾತ್ರದ ಅವಶ್ಯಕತೆ ಮನಸ್ಸಿಗೆ ಗೋಚರವಾಗುವುದು. ಅದೇ ರೀತಿ, ಜೀವನಿಗೆ ಅಂಟಿದ ಸಂಚಿತ, ಆರಬ್ಧ ಪಾಪ ಪುಣ್ಯ ಫಲಗಳು ಕ್ಷಯಿಸಬೇಕಾದರೆ, ಶರೀರ ಸಂಬಂಧ ಬೇಕು. ಶರೀರ ಸಂಬಂಧ ನೀರಿಗೆ ಪಾತ್ರೆಯ ಸಂಬಂಧದಂತೆ. ಬ್ರಹ್ಮ–ಕೆಂಡದ ಉಷ್ಣತೆ. ನೀರು ಜೀವದಂತೆ. ಜೀವ–ಬ್ರಹ್ಮರೊಂದಾಗಲು ಪಾತ್ರೆಯ ಮಾಧ್ಯಮ ಬೇಕಷ್ಟೇ.

೭೮೮

ದೇಹಮನೆಡಿಯಿಲ್ಲು ದಿನದಿನಂಬುನು, ನೂಡ್ಪಿ ಯಲಿಕಿ ಪೂಸಿ ಮೆತ್ತಿಯನುವು ಬರಜಿ,
ಕಾಪು ವಿಡಿಚಿ ಪೋವು ಗಡಪಟ ನೀಜೀವಿ, ವಿಶ್ವದಾಭಿರಾಮ ವಿನುರ ವೇಮ.

ದೇಹವೆಂಬ ಮನೆಯ ದಿನ ದಿನ ಕಸಗುಡಿಸಿ,
ಸಾರಿಸಿ ಸಲೆ ಮೆತ್ತಿ ಸರಿಯ ಮಾಡಿ,
ಫಲವ ಬಿಟ್ಟು ಹೋಹ, ಪಟಪಟವೀಜೀವಿ.
ವಿಶ್ವದಾಭಿರಾಮ ಕೇಳು ವೇಮ

ದೇಹವೇ ಗೇಹ; ಅಂದರೆ ಗೃಹ. ದೇಹದೊಂದಿಗೆ ಶೌಚ ಕರ್ಮಗಳುಂಟು ತಾನೇ. ಸ್ನಾನ ಮಾಡುವುದಾಗಲಿ, ಮೈಗೆ ಮಣ್ಣು ಮೆದ್ದಿ ಆನಂತರ ತೊಳೆಯುವುದಾಗಲಿ, ಬಾಹ್ಯ ಶೌಚವಷ್ಟೇ. ಮಲ ವಿಸರ್ಜನೆ, ಮೂತ್ರ-ಬೆವರಿನ ವಿಸರ್ಜನೆಗಳಿಲ್ಲ ದೇಹವೆಂಬ ಮನೆಯಲ್ಲಿಯ ಕಸಗೂಡಿಸಿ ಜಿಲ್ಲಿ, ಹಸನು ಮಾಡಿದಂತೆ. ಅಷ್ಟೇಕೆ? ದೇಹವು ನುಣ್ಣಗಾಗಿ ಕಾಣಲೆಂದು ಎಣ್ಣೆ ಬಳಿಯುವುದುಂಟು. ದೇಹಕಾಂತಿ ಉಳಿಯಲೆಂದು ವ್ಯಾಯಾಮ ಮಾಡುವುದು ಎಡೆಬಿಡದೆ ನಡೆಯುವುದಷ್ಟೇ. ಹೌದು. ಇದೆಲ್ಲ ಮನೆಯನ್ನು ಸಾರಿಸಿದಂತೆ. ಗೋಡೆಗಳನ್ನು ಮೆತ್ತಿದಂತೆ. ಮನೆಯನ್ನು ಸಾರಿಸಿ ಮೆತ್ತಿದವನು, ಕೊನಗೊಮ್ಮೆ ಮನೆಯನ್ನು ಇಲ್ಲಿಯೇ ಬಿಟ್ಟು ಸತ್ತು ಹೋಗುವನು. ದೇಹವನ್ನು ಪೋಷಿಸುವವನೂ ಕೊನೆಗೆ. ಪಟಪಟನೆ ಬಿದ್ದು ಹೋಗುವನು. ದೇಹವಾಸಿಯಾದ ಆತ್ಮ ನಿತ್ಯ, ಅದನ್ನರಿಯಬೇಕು.

೭೮೯

ವಿಶ್ವನಾಥುನಂದು ವಿಪ್ರುಲಯಂದುನು, ವಿಭುನಿಯಂದು ವೇದ ವಿಧಲಯಂದು
ಭಕ್ತಿ ಲೇನಿವಾಡು ಪಾಪಾತ್ಮುಡಿಲಲೋನ, ವಿಶ್ವದಾಭಿರಾಮ ವಿನುರ ವೇಮ.

ವಿಶ್ವನಾಥನಲ್ಲಿ, ವಿಪ್ರ ಜನತೆಯಲ್ಲಿ,
ವಿಭುವಿನಲ್ಲಿ, ವೇದ ವಿಧಗಳಲ್ಲಿ,
ಭಕ್ತಿಯಿಲ್ಲದವನು ಪಾಪಾತ್ಮ ಜಗದೊಳು.
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿಯೆಂದರೆ ಪ್ರೇಮಾಕರ್ಷಣೆಯ ಅವಧಿಯಲ್ಲಿರುವ ಮನಸ್ಸಿನ ಸ್ಥಿತಿಯೆಂದು ಹೇಳಲಾಗಿದೆಯಷ್ಟೇ. ಇಂಥ ಭಕ್ತಿ ಪ್ರಪ್ರಥಮವಾಗಿ, ವಿಶ್ವದೊಡೆಯನಾದ ವಿಶ್ವನಾಥನಲ್ಲಿ ಬೇಕು. ವಿಶ್ವನಾಥನೇ ವಿಶ್ವಕರ್ಮ; ವಿಶ್ವಾತ್ಮ, ವಿಶ್ವೇಶ.

ವಿಶ್ವನಾಥನೇ 'ತತ್' ಎಂದೂ ಸಂಬೋಧಿಸಲ್ಪಡುವನು. ವಿಶ್ವನಾಥನ ಗುಣ ವಿಶೇಷಣಗಳೇ ತತ್ತ್ವಗಳು. ತತ್ತ್ವಗಳನ್ನು ತಿಳಿದು ಇತರರಿಗೆ ತಿಳಿಸಬಲ್ಲವರು ಪ್ರಾಜ್ಞರು. ಇವರು ಹಾದಿತೋರುವರು. ಗುರುಸಮಾನರು. "ಗುರುಬ್ರಹ್ಮ, ಗುರುರ್ವಿಷ್ಣು...." ಇಂಥ ವಿಪ್ರಜನತೆಯಲ್ಲಿ ಭಕ್ತಿ ಇರಿಸಬೇಕು.

ವಿಭು ಎಂದರೆ ಸರ್ವವ್ಯಾಪ್ತನು; ಇವನೇ ವಿಷ್ಣು. ಅವನಲ್ಲಿ ಭಕ್ತಿ ಇರಿಸಬೇಕು. ವೇದವೆಂದರೆ ಜ್ಞಾನ ಸಂಗ್ರಹ. ವೇವೇಗಳು ಜ್ಞಾನೋಪದೇಶಗಳು. ಉಪನಿಷತ್ತುಗಳು ವೇದವಾಙ್ಮಯದ ಜ್ಞಾನಕಾಂಡವಷ್ಟೇ. ಉಪನಿಷದಾದಿ ವೇದೋಕ್ತಿಗಳಲ್ಲಿ ಭಕ್ತಿ ಇರಿಸಬೇಕು.

ಯಾರಿಗೆ ವಿಶ್ವನಾಥನಲ್ಲಿ, ವಿಪ್ರನಲ್ಲಿ, ವೇದೋಕ್ತಿಗಳಲ್ಲಿ ಭಕ್ತಿ ಇಲ್ಲವೋ ಅವರು ವಿಷಯಾಸಕ್ತರು. ಅವರು ದುಷ್ಕರ್ಮನಿರತರಾಗುವರು. ಅವರ ಕರ್ಮಫಲವು ಪಾಪವಲ್ಲದೆ, ಬೇರಿನ್ನೇನು? ಅವರು ಪಾಪಾತ್ಮರು.

೭೯೦

ಖಗಮುಲಂದನು ಗನಗಾಮುಚ್ಚಟಗನುಂಡು, ದೆಗಲ ಗಾಂಚಿನಂತ ದೇಟ ಪಡದೆ ?
ದೇವುಡೀನಿಸೆ ಗಸು ದೇಬೆನೀಕೇಲರಾ, ವಿಶ್ವದಾಭಿರಾಮ ವಿನುರ ವೇಮ.

ಖಗಗಳಿರವು ಚೆಂದ ಕಾಣಲಂದನಹುದು;
ಗುಂಪು ನೋಡಿದೊಡನೆ ಗೊತ್ತಾಗದೆ ?
ದೇವ ಕೊಡದ ಸೊಗಸು ತಾನು ಬಯಸಲೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಖಗ ಎಂದರೆ ಪಕ್ಷಿ. 'ಖ' ಎಂದರೆ ಆಕಾಶ. 'ಗ' 'ಗಮನ' ಉಳ್ಳದ್ದು, ಎನ್ನುವುದನ್ನು ಸೂಚಿಸುತ್ತದೆ. ಆಕಾಶದ ನೋಟವೇ ಮೊದಲು ಜೆಲುವಾಗಿರುತ್ತದೆ. ಅದರಲ್ಲಿ

ಹಾರಾಡುವ ಪಕ್ಷಿಗಳ ಇರುವಿಕೆ ಇನ್ನೂ ಚೆಂದವಾಗಿರುತ್ತದೆ. ಸ್ವತಂತ್ರ ಮನಸ್ಸನ್ನು ಹಾರಾಡುವ ಪಕ್ಷಿಗೆ ಹೋಲಿಸುತ್ತಾರೆ. ಸ್ವಚ್ಛಂದವಾದ ನಿಶ್ಚಿಂತೆಯ ಮನಸ್ಸಿಗೆ ಸಹ ಹಾರಾಡುವ ಹಕ್ಕಿಯನ್ನೇ ಹೋಲಿಸುವುದುಂಟು. ಹಕ್ಕಿಗಳು ಒಂಟಿಯಾಗಿರುವುದು ಕಡಿಮೆ. ತಂಡೋಪತಂಡವಾಗಿರುವುದುಂಟು. ಕೂಡಿ ಬಾಳುವ ದಿವ್ಯ ತತ್ತ್ವವನ್ನು ಹಕ್ಕಿಯ ಬಳಗ ನೋಡಿ ಕಲಿಯಬಹುದೇನೋ !

ಹಾರಾಡಿ ಆನಂದಿಸುವ ಹಕ್ಕಿಗೆ ದೇವರು ಏನನ್ನೂ ಕಡಿಮೆ ಮಾಡಿಲ್ಲ. ಅಕ್ಕೋ! ಅಲ್ಲಿ ಹಣ್ಣು ಉಂಟು; ತಿನ್ನು ಎನ್ನುವನು. ಇಕ್ಕೋ ! ಇಲ್ಲಿ ಸರೋವರವುಂಟು; ನೀರು ಕುಡಿ, ಎನ್ನುವನು. ಇಲ್ಲಿ ನೋಡು ! ದೊಡ್ಡ ಮರ ; ಅಲ್ಲಿ ಆಶ್ರಯಿಸು, ಎನ್ನುವನು. ಛಳಿಯಾಗುವುದೇ ? ಅಲ್ಲಿಯೇ ರೆಂಬೆಯಲ್ಲಿ ಹೊದರು ಇದೆ; ಒಳಸೇರು; ಎಂದೂ ಹೇಳುವನು. ದೇವರು ಏನು ಕೊಟ್ಟಿರುವನೋ, ಅದನ್ನು ಮಾತ್ರ ಅನುಭವಿಸುವ ಹಕ್ಕಿಯ ಆನಂದವನ್ನು ನೋಡಬೇಕಾದರೆ, ಹಾರುವ ಹಕ್ಕಿಯತ್ತ ನೋಡಿರಿ. ನಿಮಗೂ ಮನಸ್ಸಿಗೆ ಹೊಳೆಯಬಹುದು; ದೇವರು ಕೊಡದ ವಸ್ತುಗಳಿಗಾಗಿ ಪರಿತಪಿಸಿ ಆನಂದ ಹುಡುಕುವುದು ಹುಚ್ಚು ಎಂದು. ಅಲ್ಲವೇ ?

೭೯೦

ಕಡುಪುಲೋನ ಮಲಮು ಕಡಮನಿ ಯೆಮುಕಲು, ಕಲದ ಮಾಂಸ ಮಿಂತಕಪ್ಪುತೋಲು,
ಮಲಪುದಿತ್ತಿ ಮೀದ ಮನಸೆಟ್ಲು ಬಾರುರಾ ? ವಿಶ್ವದಾಭಿರಾಮ ವಿನುರ ವೇಮ.

ಉದರದಲ್ಲಿ ಮಲವು. ಉಂಟು ಎಲುಬು–ಗೂಡು
ಮೇಲೆ ಚರ್ಮ ಹೊದೆದ ಮಾಂಸವಿಹುದು.
ಮಲದ ತಿದಿಯ ಮೇಲೆ ಮನವೆಂತು ಹರಿವುದು ?
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ದೇಹದ ರಚನೆಯಾಗಿರುವುದು ಹೇಗೆ? ಹಲವಾರು ಎಲುಬುಗಳನ್ನು ಕೀಲಗಳಿಂದ ಜೋಡಿಸಿದಿರೆಂದು ತಿಳಿಯಿರಿ. ಅಸ್ಥಿ ಪಂಜರ ಸಿದ್ಧವಾಯಿತು. ಅದರ ಸುತ್ತ, ಮಾಂಸದ ಮುದ್ದೆ ಮೆತ್ತಿದಂತೆ ತಿಳಿಯಿರಿ. ಇದೆಲ್ಲವನ್ನು ಆವರಿಸುವಂತೆ ತೊಗಲಿನಿಂದ ಹೊದೆದು ಬಿಟ್ಟರೆ ತೀರಿತು. ದೇಹ. ಇದರಲ್ಲಿ ಇರುವ ಹೆಚ್ಚಿನದು ಯಾವುದು? ಪ್ರಾಣವಷ್ಟೇ. ಪ್ರಾಣಕ್ರಿಯೆ ನಡೆದಾಗ, ಅಪಾನದೊಡನೆ ಅನ್ನ ತೆಗೆದುಕೊಳ್ಳುತ್ತೇವೆ. ಅನ್ನದ ಅನುಪಯುಕ್ತ ಭಾಗವು ಜಠರದಲ್ಲಿ ನಡೆಯುವ ಪಚನ ಕ್ರಿಯೆಯ ನಂತರ ಮಲವಾಗುತ್ತದೆ. ಇದೇ ತೀರ ಹೊಲಸು ಪದಾರ್ಥ. ದೇಹವು ಇದನ್ನು ಅಡಗಿಸಿ, ಒಳಗಿಟ್ಟುಕೊಂಡಿರುವ ಅಸ್ಥಿ ಪಂಜರವಾಗಿದೆ.

ನೀವು ತಿದಿ ನೋಡಿರುವಿರಷ್ಟೇ. ತಿದಿಯೆಂದರೆ ಕರ್ಮಾರನು ಬೆಂಕಿ ಮಾಡಲು ಉಪಯೋಗಿಸುವ ಗಾಳಿ ಹಾಕುವ ಉಪಕರಣ. ಅದು ತೊಗಲಿನ ಚೀಲ ಮಾತ್ರ. ಗಾಳಿ ಹೀರಿ, ಗಾಳಿ ಬಿಡುವುದೇ ಅದರ ಕಾರ್ಯ. ಶರೀರದ ಶ್ವಾಸ ಉಚ್ಛ್ವಾಸದಂತೆ. ತಿದಿಯ ಒಳಗೆ

ಕೇವಲ ವಾಯು ಉಂಟು. ದೇಹದೊಳಗೆ ಪ್ರಾಣವಾಯುವಿನ ಜೊತೆಗೆ ಮಲವುಂಟು ಕಾರಣ, ದೇಹವು ಮಲದ ತಿದಿಯಾಗಿದೆ. ಇದರ ಮೇಲೆ ಮನಸ್ಸು ಹರಿಯುವುದು ಹೇಗೋ? ವಿಚಿತ್ರ! ಇದೆಲ್ಲ ತಿಳಿದ ಮೇಲೂ ಮನಸ್ಸು ಹರಿದರೆ, ವಿಚಿತ್ರವಲ್ಲದೆ ಇನ್ನೇನು?

೭೯೨

ಆಸಲನೆಡಿಲತಲ ಗೋಸಿವೇಯಗಲೇಕ, ಮೋಹಜಲಧಿಲೋನ ಮುನುಗುವಾರು,
ಕಾಶಿವಾಸುಲ್ಕೆನ ಗನಬೋರು ಮೋಕ್ಷಂಬು, ವಿಶ್ವದಾಭಿರಾಮ ವಿನುರ ವೇಮ.

ಆಶೆಯೆಂಬ ಲತೆಯ ನಾಶಗೊಳಿಸದನಕ,
ಮೋಹ ಜಲಧಿಯಲ್ಲಿ ಮುಳುಗುತಿಹರು.
ಕಾಶಿವಾಸಿಯೇನು ? ಕಾಣರೆಂದು ಮೋಕ್ಷ.
ವಿಶ್ವದಾಭಿರಾಮ ಕೇಳು ವೇಮ.

ನೀರಿನ ಹೊಂಡಗಳಲ್ಲಿ, ಕ್ರೀಡಾ ಸರೋವರಗಳಲ್ಲಿ ಅಂತರ ಗಂಗೆಯೆಂಬ ಬಳ್ಳಿ ಹಬ್ಬಿಕೊಂಡಿರುವುದನ್ನು ಕಂಡು ಕೇಳಿ ಎಲ್ಲರೂ ಬಲ್ಲರಷ್ಟೇ. ಈಜು ಬಂದವರಿರಲಿ, ಈಜು ಬಾರದವರಿರಲಿ ಈ ಅಂತರಗಂಗೆಯ ತೊಡಕಿನ ಜಾಲದಲ್ಲಿ ದೇಹದ ಯಾವುದೊಂದು ಭಾಗವು ಸಿಲುಕಿದರೆ ಮುಗಿದೇ ಹೋಯ್ತು. ಅಂಥ ಮನುಷ್ಯ ನೀರಿನಲ್ಲಿಯೇ ಸತ್ತು ಹೋಗುವನು.

ಮೋಹವೂ ಜಲಧಿಯಂತೆ. ಇಲ್ಲಿಯ ಆಶೆಯೇ ಅಂತರಗಂಗೆಯ ಬಳ್ಳಿಯಂತೆ. ಸಂಸಾರಿ ಈಜುವವನು. ಆಶೆಯ ಪ್ರಾಬಲ್ಯದಿಂದ ಅನಿಷ್ಟವನ್ನು ಇಚ್ಛಿಸುವನು. ದುಷ್ಕರ್ಮಕ್ಕೆಳೆಯುವನು ಅದರ ಫಲ ಪಾಪ. ಪಾಪಿಗೆ ಆರೋಹವೆಲ್ಲಿ? ಅವರೋಹವೇ ಗತಿ. ಆಶೆಯು ಳ್ಳವನು ಕಾಶಿಯಲ್ಲಿದ್ದರೇನು? ಅವನಿಗೆ ಮೋಕ್ಷವಾಗದು. ಆಶೆಯನ್ನು ತೊಡೆದು ಮನಸ್ಸು ಮುಕ್ತವಾಗಬೇಕಷ್ಟೇ. ಮನಸ್ಸು ಮುತ್ತಿದ ಆ ಚಿತ್ತವೃತ್ತಿಗಳು ಇಲ್ಲವಾದರೆ, ಆತ್ಮ ಪ್ರತಿಬಿಂಬಿಸುವುದು. ಇಲ್ಲಿ ಯಾವ ಬಂಧವೂ ಇಲ್ಲ.

ಆಶೆಯನ್ನು ತೊಡೆದು ಕಾಶಿಯಲ್ಲಿ ಸತ್ತರೇನು? ಸ್ಕಂದ ಪುರಾಣೋಕ್ತಿಯಂತೆ, ವಿಶ್ವೇಶ್ವರನೇನೂ ಬಂದು ಬಲಗವಿಯಲ್ಲಿ ತಾರಕೋಪದೇಶವನ್ನು ಊದಿ ಮುಕ್ತನನ್ನಾಗಿ ಮಾಡಲಾರ. ವಿಶ್ವೇಶ್ವರನು ವಿಶ್ವಕ್ಕೆ ಈಶ್ವರ. ಕಾಶೀಶ್ವರನಲ್ಲ. ಯಾರ ಪುಣ್ಯ—ಪಾಪ ಫಲದ ಉಪಭೋಗದಲ್ಲಿ ಕೈಹಾಕಲಾರೆ. ದೇವರು ನಿಮಿತ್ತ ಮಾತ್ರನು. ಕರ್ಮಿ ತನ್ನ ಕರ್ಮಫಲ ಭೋಗಿಸಬೇಕಾದವನು ತಾನು ಮಾತ್ರ.

(ಹೋಲಿಸಿ ನೋಡಿರಿ :
"ಹೊಲೆಗೇರಿಯೊಳು ಕಾಶಿಯೊಳು ಮರವೆಯರಿವಿನೊಳು |
ತಿಳಿ ದೇಹವಳಿಯಲುಚ್ಚನೀಚತೆಗಳಂ |
ಡಲೆಯಿಲ್ಲವಾತ್ಮಾ ವಿದನಲ್ಲಿ || "

ನಿಜಗುಣಯೋಗಿ–ಅನುಭವಸಾರ ೭–೯

ಆತ್ಮವನ್ನು ಅರಿತವನು ಹೊಲಿಗೇರಿಯಲ್ಲಿ ವಾಸವಾಗಿರಲಿ, ಕಾಶೀವಾಸಿಯಾಗಿರಲಿ, ಮರವೆಯಲ್ಲಿರಲಿ, ಅರಿವಿನ ಸ್ಥಿತಿಯಲ್ಲಿರಲಿ, ಅವನಲ್ಲಿ ದೇಹ ಭಾವವು ಆಳಿದ ಕಾರಣ. ಉಚ್ಚ, ನೀಚ ಎಂಬ ಭಾವನೆಗಳ ಸುಳಿವು ಸಹ ಇರಲಾರದು.)

೭೯೩

ಈ ಕೆಲಂಟಜೇಸಿ ತೋಕಲಂಟಗ ಜೇಸಿ, ಕೋಕಲಂಟಜೇಸಿ ಲೋಕಮುನಕು.
ಮಾನರಕ್ಷಣಂಬೆ ಮರ್ಯಾದಯನಿ ತೆಲ್ಪಿ ವಿಶ್ವದಾಭಿರಾಮ ವಿನುರ ವೇಮ.

ಪ್ರಾಣಿಗುಂಟು ಬಾಲ; ಪಕ್ಷಿಗುಂಟು ರೆಕ್ಕೆ;
ಉಡುಗೆ ಅಂತೆ ಉಂಟು ಉರ್ವಿ ಜನಕೆ.
ಮಾನರಕ್ಷಣೆಯೇ ಮರ್ಯಾದೆಯೆನಿಪುದು.
ವಿಶ್ವದಾಭಿರಾಮ ಕೇಳು ವೇಮ.

ಗುದ ಜನನೇಂದ್ರಿಯಗಳು ಪ್ರಾಣಿಗಳಲ್ಲುಂಟು. ಪಕ್ಷಿಗಳುಲ್ಲುಂಟು. ಸ್ತ್ರೀ ಪುರುಷರಲ್ಲುಂಟು. ಇಂದ್ರಿಯಗಳ ನಿಗ್ರಹ ಮಾಡುವ ಬುದ್ಧಿ–ವಿವೇಕ ಕೇವಲ ಮನುಷ್ಯನಲ್ಲಿ ಉಂಟು. ಆದರೂ ಸಾಧನೆಯಿಲ್ಲದೆ, ನಿಗ್ರಹ ಸಾಧ್ಯವಲ್ಲ. ಪ್ರಾಣಿ-ಪಕ್ಷಿಗಳಿಗಂತೂ ನಿಗ್ರಹ ಮಾಡಬೇಕೆಂಬ 'ಬುದ್ಧಿಯೇ' ಇಲ್ಲ. ಅವುಗಳ ಚಿತ್ತ ಸ್ಥೂಲವಾದುದು ಹಾಗಾದರೆ, ಕಾಮಾಕರ್ಷಣೆಯ ನಿಯಂತ್ರಣ ಸಾಧಿಸುವುದು ಹೇಗೆ? ಪ್ರಾಣಿಗೆ ಗುದ ಜನನೇಂದ್ರಿಯಗಳನ್ನು ಮುಚ್ಚಿಕೊಳ್ಳಲು ಬಾಲವಿದೆ. ಪಕ್ಷಿಗಳಲ್ಲಿ ಇದೇ ಉದ್ದೇಶಕ್ಕಾಗಿ ರೆಕ್ಕೆಗಳುಂಟು. ಮನಷ್ಯ ವಿವೇಕಿಯಾಗಿ ಜ್ಞಾನಿಯಾಗುವ ವರೆಗೆ ಒಂದು ರೀತಿ. ಜ್ಞಾನಿಯಾಗಿ ತನುವಿನ ಭಾವ ತೊರೆದ ಮೇಲೆ ಇನ್ನೊಂದು ರೀತಿ. ಅದರಿಂದಾಗಿ ಅವನಿಗೆ ಬದಲು ಮಾಡಬಹುದಾದ ಹೊದಿಕೆ ಅಂದರೆ ಉಡುಗೆ ಮಾತ್ರ ಉಂಟು. ಮಾನ ರಕ್ಷಣೆಯು ಲೋಕಭಾವನೆ ಇರುವವರೆಗೆ ಮಾತ್ರ. ಲೋಕಭಾವನೆ ಪಶುವೃತ್ತಿಯದಿರಲಿ, ಮನುಷ್ಯವೃತ್ತಿಯದಿರಲಿ, ಬಾಲವಾಗಲಿ, ಬಟ್ಟೆಯಾಗಲಿ ಬೇಕು. ಮಾನ ರಕ್ಷಣೆಯೇ ಲೌಕಿಕ ಭಾವನೆಗೆ 'ಮಿತಿ' ಅರ್ಥಾತ್ 'ಮರ್ಯಾದೆ' ಎನ್ನಿಸುವುದು. ಲೋಕಭಾವನೆ ಮೀರಿದ ಅಲೌಕಿಕ ಮನಸ್ಸು ಹೊಂದಿದವರಿಗೆ ದೇಹಭಾವವೂ ಇಲ್ಲ. ಮಾನ ಅವಮಾನಗಳ ತೊಡಕೂ ಇಲ್ಲ. ಲಜ್ಜೆ ಮೀರಿದ ಸ್ಥಿತಿ ಅದು. ಆಗ ನಗ್ನತೆಯೇ ಪರಿಶುದ್ಧತೆ ಎನ್ನಿಸುವುದು. ಭಾವ ದಿಗಂಬರವಾಗಿ ದೇಹವೂ ದಿಗಂಬರವಾಗುವುದು. ನಗ್ನತೆಯಲ್ಲಿರುವಾಗ ಸಹ, ಮನಸ್ಸಿನಲ್ಲಿ ಯಾವ ಪ್ರಕಾರವಾಗಿಯೂ ವಿಕಾರ ಸಂಕೋಚಗಳಿಲ್ಲದಿರುವಿಕೆಯನ್ನು ಸಾಧಿಸುವುದು ಜೈನ ಧರ್ಮದಲ್ಲಿಯೂ ಆಚರಣೆಯಲ್ಲುಂಟು.

೭೯೪

ವಕ್ಷಮುಂದುಗುರುನಿ ಪರ್ಣಿಂಚಿಚೂಡರಾ, ರಕ್ಷಕತ್ನಮುನಕು ರಾಜಬಾಟಿ,
ಅಕ್ಷಮಾಲ ಜಪಮೆ ಯವನಿದೊಂಗಲ ರೀತಿ ವಿಶ್ವದಾಭಿರಾಮ ವಿನುರ ವೇಮ

ವಕ್ಷದೊಳಗೆ ಗುರುವ ವೀಕ್ಷಿಸು ಸರಿಯಾಗಿ,
ರಕ್ಷಕನವನೆನುವುದೆ, ರಾಜ ಮಾರ್ಗ
ಅಕ್ಷಮೂಲ ಜಪವು ಅವನಿಗಳ್ಳರ ಪರಿ
ವಿಶ್ವದಾಭಿರಾಮ ಕೇಳು ವೇಮ.

ಗುರು ಯಾರು? ಮುಕ್ತಿ ತೋರುವವನೇ ಗುರು. 'ಗುರು ರ್ಬ್ರಹ್ಮ, ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ | ಗುರುದೇವ ಪರಂ ಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ || ಪರಬ್ರಹ್ಮವನ್ನು ಹೃದಯದಲ್ಲಿ ನೋಡಬೇಕು. ಹೌದು. ಸರಿಯಾಗಿ, ನಯನೇಂದ್ರಿಯವನ್ನು ಅಂತರ್ಮುಖಗೊಳಿಸಿ ಮನಃಶ್ಚಕ್ಷುವಿನಿಂದ ನೋಡಬೇಕು. ಆ ಗುರುವೇ ರಕ್ಷಕನು. ಅಂತರ್ಯಾಮಿ, ಗುರುವಲ್ಲದೆ ಇನ್ನಾರು ರಕ್ಷಿಸಬಲ್ಲರು? ಆಶ್ರಯ ನೀಡಬಲ್ಲರು? ಆಶ್ರಯ ನೀಡುವವನಿಗೆ ಶರಣು ಎನ್ನಬೇಕು. ಅವನೊಬ್ಬನನ್ನು ಮಾತ್ರ 'ಸರ್ವಾನ್ ಧರ್ಮಾನ್ ಪರಿತ್ಯಜ್ಯ, (ಎಲ್ಲ ನಿಯಮ ನಿಷ್ಠೆಗಳನ್ನುಳಿದು) ಎಂದು ಶರಣು ಹೋಗಬೇಕು. ಇದುವೇ ಭಕ್ತನ ಮಾರ್ಗ. ಇದು ಎಲ್ಲರೂ ಹೋಗಬಹುದಾದ ರಾಜಮಾರ್ಗ. ರಾಜಮಾರ್ಗ ಗಮ್ಯಸ್ಥಾನಕ್ಕೆ ನಿಶ್ಚಿತವಾಗಿ ಕರೆದೊಯ್ಯುವುದು.

ಇನ್ನು ಅಕ್ಷಮೂಲ ಜಪದ ರೀತಿಯೂ ಉಂಟು. ಮಣಿಯನೆಣಿಸಿ. ಮಂತ್ರ ಜಪಿಸುವ ಇವರೂ ಭಕ್ತರ ಸೋಗು ಹಾಕುತ್ತಾರೆ. ಸಾವಿರ ಜಪ, ಲಕ್ಷ ಜಪ ಕೋಟಿ ಜಪವೆನ್ನುತ್ತಾರೆ. ಲೋಕದ ಜನರ ಕಣ್ಣು ತಪ್ಪಿಸಿ ಕಳ್ಳ ಕಳವು ಮಾಡಲು ಹಾತೊರೆಯುವಂತೆ, ಈ ಜಪಮಣಿಯನೆಣಿಸುವವರು. ಲೋಕದ ಕಣ್ಣಲ್ಲಿ ಮಾತ್ರ ತಮ್ಮ ಮನದಲ್ಲಿರುವ ಕಲುಷಿತ ವಿಚಾರಗಳನ್ನು ಮುಚ್ಚುವರಷ್ಟೇ. ಈ ದೃಷ್ಟಿಯಲ್ಲಿ ಇವರದು ಅವನಿಗಳ್ಳರ ರೀತಿಯೂಗುವುದು. ದೈಹಿಕ ಜಪ ಬೇಡ. ವಾಚಿಕ ಜಪದ ಸ್ಥಿತಿಯನ್ನೂ ಬೇಗ ದಾಟಿ ಮಾನಸಿಕ ಜಪದ ಸ್ಥಿತಿಗೆ ಹೋಗಬೇಕು. ಆಗ ಮನದಲ್ಲಿ ಬೇರೆ ವಿಚಾರ ಬಾರದೆ, ಶಾಂತಿ ಲಭಿಸುವುದು. ಪ್ರಾಥಮಿಕ ಹಂತಗಳನ್ನು ಕೇಳು ಎಂದು ತಿಳಿಯದಿದ್ದರೆ, ಮೇಲಿನ ಹಂತ ಮುಟ್ಟಲು ಯಾರೂ ಪ್ರಯತ್ನಿಸರು.

೭೯೫

ಲಜ್ಜ ಲಜ್ಜಯನುಚು ಲಲನಲಮೀದಿಕ, ಲಜ್ಜವಿಡಿಚಿ ತಿರುಗು ಲಾವರಿಯಯಿ
ಲಜ್ಜದೆಲಿಸೆನೇನಿ ಲಲನಲದಾಕುನಾ? ವಿಶ್ವದಾಭಿರಾಮ ವಿನುರ ವೇಮ.

ಲಜ್ಜೆ ಲಜ್ಜೆ ಯೆನುವ; ಲಲನೆ ಮೇಲಾಶಿಸಿ,
ಲಜ್ಜೆಗೆಟ್ಟು ತಿರುಗ-ಲೇಕೆ ಮದದಿ,
ಲಜ್ಜೆ ತಿಳಿದೊಡೇನು ಲಲನೆಯ ಮುಟ್ಟುವನೆ?
ವಿಶ್ವದಾಭಿರಾಮ ಕೇಳು ವೇಮ.

ಲಜ್ಜೆ, ಲಜ್ಜೆ ಎನ್ನುತ್ತಿರುವರಲ್ಲನೇ? ಲಜ್ಜೆ ಎಂದರೇನು? ಲೌಕಿಕ ವಿರುದ್ಧವಾದ ಮಾರ್ಗ-ದತ್ತ ಚಿತ್ತವನ್ನು ಹೋಗಗೊಡದೆ ಇರುವುದೇ ಲಜ್ಜೆ. ಪರಪುರುಷರಿಗೆ ಮುಖ

ತೋರಬಾರದು, ಎಂಬುದು ಲೌಕಿಕ ಮಾರ್ಗ. ಅದರಿಂದಾಗಿ 'ಮುಸುಕು' ಎಳೆಯುವುದು ಲಜ್ಜೆ ಎನಿಸುವುದು. ಪರಸ್ತ್ರೀಯರನ್ನು ಕಲುಷಿತ ದೃಷ್ಟಿಯಿಂದ ಕಾಣಬಾರದು, ತಿಳಿಯಬಾರದು, ಎಂಬುದು ಲೌಕಿಕ ರೀತಿನೀತಿ. ಹೀಗಿರುವಾಗ ಲುಂಗಿ–ಪಂಜೆ ಉಟ್ಟು, ಬಿಗಿಯಾದ ಕಚ್ಚೆ ಹಾಕಿದ್ದರೂ, ಮನದಲ್ಲಿ ಕಾಮುಮದ ತಾಳಿ ಪರಸ್ತ್ರೀಯ ಮೇಲೆ ಆಶೆ ತಾಳಿ, ಲಜ್ಜೆಗೇಡಿಗಳಾಗಿ, ತಿರುಗುವರೇಕೆ? ಯಾವುದು ಲೌಕಿಕ ಮಾರ್ಗಕ್ಕೆ ವಿರೋಧವೋ ಅದನ್ನು ತಿಳಿದುಕೊಳ್ಳಬೇಕು. ಅದರ ಅರ್ಥವನ್ನು ಮನಸ್ಸಿನಲ್ಲಿ ಗ್ರಹಿಸಬೇಕು. ಆಗ ಆಚಾರರ ಲೋಕಧರ್ಮಕ್ಕನುಸಾರವಾಗಿರುತ್ತದೆ. ಲಜ್ಜೆ ತಿಳಿದವರು, ಪರಸ್ತ್ರೀಯನ್ನು ಮುಟ್ಟಲಾರರು. ಯಾರು ಪರಸ್ತ್ರೀಯರ ಸಂಗ ಬಯಸುವರೋ, ಮಾಡುವರೋ ಅವರು ಲಜ್ಜೆಗೇಡಿಗಳು; ಲೋಕ ಧರ್ಮ ವಿರೋಧಿಗಳು.

ಲುಂಗಿ–ಚಡ್ಡಿ ತೊಡುವುದು ಲಜ್ಜೆಯಲ್ಲ. ಪರ–ಪುರುಷ–ಪರ–ಸ್ತ್ರೀಯಲ್ಲಿ ಮೋಹ ತಾಳದಿರುವುದು ಮಾತ್ರ ಲಜ್ಜೆ. ಇದನ್ನು ಸರಿಯಾಗಿ ತಿಳಿದರೆ, ತನುವನ್ನೇ ಮರೆತ, ಪುಃಸ್ತ್ರೀಲಿಂಗಭೇದರಹಿತ ಮನಸ್ಸು ಹೊಂದಿದ ಜೀವನ್ಮುಕ್ತರ ರೀತಿಯ ಬಗ್ಗೆ ಸರಿಯಾದ ಕಲ್ಪನೆ ಬಲಬಹುದು.

೭೯೬

ರಾಜಸಂಬು ಜೆಂದಿ ರಮಣುಲಪೊಂದಾಸ, ಪಡಿಪುವಾಡುಗುರುನಿ ಪ್ರಾವೆರುಗುನೆ?
ವಿಟುಲಮರಗುಯುವತಿ ವಿಭುಭಕ್ತಿಯೆರುಗುನಾ. ವಿಶ್ವದಾಭಿರಾಮ ವಿನುರ ವೇಮ.

ರಾಜಪದವಿ ಹೊಂದಿ ರಮಣಿ ಹೊಂದಲಾಶೆ,
ಪಡುತಿಹಗೆ ಗುರುವಿನುಪದೇಶವೇ?
ವಿಟರ ನಾಶಿಸುವಳು, ವಿಭು ಭಕ್ತಿಯರಿವಳೆ?
ವಿಶ್ವದಾಭಿರಾಮ ಕೇಳು ವೇಮ.

ಯಾವನು ಭಕ್ತನೋ ಅವನು ಗುರುವಿನ ಉಪದೇಶಕ್ಕೆ ಪಾತ್ರನು. ಭಕ್ತಿ ಉಳ್ಳವನು, ಭಕ್ತನು. ಪ್ರಪಂಚದ ವಿಷಯ ವಸ್ತುಗಳ ಆಕರ್ಷಣೆ ಇರುವಾಗಿನ ಮನಸ್ಸಿನ ಸ್ಥಿತಿ ಆಸಕ್ತಿ; ಕೇವಲ ಸದ್ವಸ್ತುವಿನ ಆಕರ್ಷಣೆ ಇರುವಾಗಿನ ಮನಸ್ಸಿನ ಸ್ಥಿತಿಯೇ ಭಕ್ತಿ.

ರಾಜ ಪದವಿಯ ಭೋಗ ಸುಖಗಳಲ್ಲಿ ನಿರತನಾದುದು, ಸಾಲದೆ ತನ್ನ ಕಾಮ ದಿಚ್ಛೆಗೆ ಎಷ್ಟೋ ಸುಂದರ ರಮಣಿಯರನ್ನು ಹೊಂದಲು ಆಶಿಸುವ ಲಂಪಟನು, ವಿಷಯಾಸಕ್ತನೇ ಹೊರತು ವಿಭುವಿನ ಭಕ್ತನಲ್ಲ. ವಿಷಯ ಲಂಪಟರಾದ ರಾಜರು ಗುರೂಪದೇಶ ಹೊಂದಿ ದೇವತಾಸಮಾನರೆಂದು ಪೂಜೆಗೊಳ್ಳುವುದೆಂದರೇನು? ಗುರುವಿನುಪದೇಶ ಅಪಾತ್ರನಿಗೆಂದೂ ಆಗದು.

ಗೆಣೆಯರನ್ನು ಆಶಿಸುವ ಸ್ತ್ರೀಯ ಮನಸ್ಸು ಅತಿ ಚಂಚಲ. ಅವಳಿಗೆ ಭೋಗ ದಾಸ್ಯಯೊಂದೇ ಗುರಿ. ಸತಿಧರ್ಮ, ವಿಭುವಿನ ಮೇಲಿನ ಭಕ್ತಿಯನ್ನು ಅವಳು ಅರಿಯಳು.

'ಗೆಣೆಯರ ನಾಶಿಪಳು, ಗಂಡನನರಿವುದೆಂತು? ರಮಣಿಯರನ್ನು ಹೊಂದಲಾಸೆ ಪಡುವ ರಾಜನು ಗುರುವಿನುಪದೇಶ ಅರಿಯುವುದೂ ಅದೇ ರೀತಿ ಅಸಂಭವ. ಅದರಿಂದಾಗಿ ಅವನು ಅಪಾತ್ರನು.'

೭೯೭

ಮದಿಕಲಿಗಿನ ಪೂಜ ಮದನಾರಿಮೆಚ್ಚುನು, ಮನಸು ನಿಲ್ಪಿನಂತ ಮಹಿತುಡಗುನು,
ಮನಸು ಲೇನಿ ಪೂಜ ಮಟ್ಟಸಮಾನಮೌ ವಿಶ್ವದಾಭಿರಾಮ ವಿನುರ ವೇಮ.

ಮನವು ಒಲಿದ ಪೂಜೆ ಮದನಾರಿ ಮೆಚ್ಚುವ,
ಮನಸು ನಿಲಿಸಿದವನು ಮಹಿಮನಹನು.
ಮನಸು ಇರದ ಪೂಜೆ ಮಣ್ಣಿಗೆ ಸಮವಿಹುದು.
ವಿಶ್ವದಾಭಿರಾಮ ಕೇಳು ವೇಮ.

ಮದನನೆಂದರೆ ಕಾಮ. ಯಾವನು ಕಾಮನನ್ನು ನಾಶ ಮಾಡುವನೋ, ಅವನು ಮದನಾರಿ. (ಶಿವನು ಕಾಮನನ್ನು ಸುಟ್ಟನೆಂಬ ಪುರಾಣ ಕಥೆಯ ಗೂಡಾರ್ಥವೇ ಇದು.) ಮದನಾರಿಯೇ ಶಿವ; ಬ್ರಹ್ಮ. ಉಪಾಸ್ಯ ದೇವತೆ. ದೇವ ಪೂಜೆಗೆ ಭಕ್ತಿ ಮೂಲ. ಭಕ್ತಿ ಉಂಟಾಗಬೇಕಾದರೆ ಮನಸ್ಸು ಶುದ್ಧವಾಗಬೇಕು. ಮನಸ್ಸನ್ನು ಮುತ್ತಿದ ಪ್ರಪಂಚದ ವಿಷಯಗಳ ಕುರಿತು ಏಳುವ ಚಿತ್ತವೃತ್ತಿಗಳು ಇಲ್ಲವಾಗಬೇಕು. ಹೀಗೆ ಮನಸ್ಸು ಪ್ರಪಂಚದ ಗೊಡವೆ ಬಿಟ್ಟು, ಪರಮಾತ್ಮನತ್ತ ಒಲಿಯಬೇಕು. ಮನಸ್ಸು ಹೀಗೆ ಒಲಿದಾಗ ಮಾಡುವ ಪೂಜೆಯನ್ನು ಮಾತ್ರ, ಮದನಾರಿ ಮೆಚ್ಚುವನು.

ಮನಸ್ಸು ನಿಲ್ಲಿಸಬೇಕು. ಅಂದರೆ ಮನಸ್ಸಿನಲ್ಲಿ ಏಳುವ ವಿಷಯ–ಗ್ರಾಹಕ ಚಿತ್ತವೃತ್ತಿಗಳು ಇಲ್ಲವಾಗಬೇಕು. ಇದುವೇ ಪತ್ಯಹಾರ–ಧಾರಣ–ಧ್ಯಾನ ಸ್ಥಿತಿ.

ಮನಸ್ಸು ಇಲ್ಲದ ಪೂಜೆ ಅಂದರೆ, ಪೂಜೆಯಲ್ಲಿ ಮನಸ್ಸು ತೊಡಗಿದ್ದರೆ, ಅಂಥ ಪೂಜೆ ಭೂತಪೂಜೆ' ಎನಿಸುವುದು. ಏಕೆಂದರೆ ಆಗ ಮನಸ್ಸು ಪರವಸ್ತುವನ್ನು ತೊರೆದು ಜಡವಸ್ತುವಿನತ್ತ ಆಕರ್ಷಿತವಾಗಿರುವುದರಿಂದ, ಮಣ್ಣಿನಂತೆ ಜಡವಾಗಿರುವುದು. ಮನಸ್ಸು, ಮಣ್ಣು ಎರಡೂ ಒಂದೇ.

೭೯೮

ಭಕ್ತಿಯುನ್ನಚೋಟಬರಮೇಶ್ವರುಡುನುಂಡು, ಭಕ್ತಿಲೇನಿಚೋಟ ಬಾಪಮುಂಡು
ಭಕ್ತಿಕಲುಗುವಾಡು ಪರಮಾತ್ಮುಡಗುನಯಾ ವಿಶ್ವದಾಭಿರಾಮ ವಿನುರ ವೇಮ.

ಭಕ್ತಿಯುಳ್ಳ ಎಡೆಗೆ ಪರಮೇಶ್ವರನಿಹನು;
ಭಕ್ತಿಯಿಲ್ಲದೆಡೆಗೆ ಪಾಪವುಂಟು.
ಭಕ್ತಿ ಹೊಂದಿದವನು ಪರಮಾತ್ಮನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿ ಎಲ್ಲಿ ಇರುವುದೋ, ಅಲ್ಲಿ ಪರಮೇಶ್ವರನುಂಟು. ಎಲ್ಲಿ ಭಕ್ತಿ ಇಲ್ಲವೋ ಅಲ್ಲಿ ಪಾಪ ಉಂಟು. ಭಕ್ತಿ ಹೊಂದಿದವನು ಪರಮಾತ್ಮನೇ ಆಗುವನು. ಅಬ್ಬಾ ಭಕ್ತಿಯ ಮಹಿಮೆ ಎಷ್ಟು !

ಹಾಗಾದರೆ ಭಕ್ತಿಯ ನಿಜವಾದ ಅರ್ಥವೇನು ? ಸಾಧನೆಯಿಂದರೇನು ? ಭಯ ಯುಕ್ತ ಪ್ರೇಮವು ನಿರ್ಭಯ ಪ್ರೇಮವಾಗಿ ಮಾರ್ಪಡುವ ಕ್ರಮವೇ ಸಾಧನ. ಭಯ ಭಕ್ತಿಯೇ ನಿರ್ಭಯ. ಪರಮಾತ್ಮನಲ್ಲಿ ಕೂಡಿಹೋಗುವುದು ಯೋಗ. ಹಳ್ಳ ಹೊಳೆಗಳು ನಾಮ ರೂಪ ಕಳೆದುಕೊಂಡು ಅನಂತ ಸಾಗರ ಸೇರಿದಂತೆ.

ಇಂಥ ಯೋಗ ಇಲ್ಲವೆ ಕೂಡುವಿಕೆಗೆ, ಆಕರ್ಷಣೆಯೇ ಮೂಲ ಕಾರಣ. ಒಂದು ವಸ್ತು ಇನ್ನೊಂದನ್ನು ಆಕರ್ಷಿಸುವುದು ನಿಯಮವಷ್ಟೇ. ಯಾವಾಗ ಈ ಆಕರ್ಷಣೆಯು ಅಪೂರ್ಣ ಸದ್ವಸ್ತು ಇಲ್ಲವೆ ಕ್ಷುಲ್ಲಕ ಸದ್ವಸ್ತುವನ್ನು ಕುರಿತು ಇರುವುದೋ, ಆಗ ಅದಕ್ಕೆ ' ಕಾಮ' ವೆನ್ನುವರು. ಪರಿಪೂರ್ಣ ಸದ್ವಸ್ತು (ಪರಿಪೂರ್ಣವಾದುದು ' ಪರಮ ಪುರುಷ ' ಮಾತ್ರ.) ಕುರಿತು ಇರುವ ಆಕರ್ಷಣೆ ' ಪ್ರೇಮ ' ವೆನ್ನಿಸುವುದು. ಕಾಮವಿರುವಾಗಿನ ಮಾನಸಿಕ ಸ್ಥಿತಿಯೇ ಆಸಕ್ತಿ. ಪ್ರೇಮವಿರುವಾಗಿನ ಮಾನಸಿಕ ಸ್ಥಿತಿಯೇ ಭಕ್ತಿ. ಕಾಮ ವಿರುವಾಗಿನ ವ್ಯವಹಾರ ಸಂಬಂಧವೇ ವ್ಯವಸಾಯ.(ಕೊಡುಕೊಳ್ಳುವಿಕೆ.) ಪ್ರೇಮವಿರು ವಾಗಿನ ವ್ಯವಹಾರ ಸಂಬಂಧವು ಸೇವೆ. ಸೇವಾಭಾವವೆಂದರೇನು ? ಎಲ್ಲವನ್ನೂ ಕೊಡು ವುದು. ಏನನ್ನೂ ಬೇಡದಿರುವುದು. " ಕರ್ಮಣ್ಯೇವಾಧಿಕಾರಸ್ತೇ ಮಾ ಕರ್ಮಫಲೇಷು ಕದಾಚನ | " ಕರ್ಮದಲ್ಲಿಯೇ ನಿನಗೆ ಅಧಿಕಾರವು ಕರ್ಮಫಲದಲ್ಲಿ ಎಂದಿಗೂ ಆಸಕ್ತಿ ಯಾಗದಿರಲಿ " ಇವನೇ ನಿಜವಾದ ಭಕ್ತ. ಅಂಥವನು ಮಾತ್ರ " ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ " ಎಲ್ಲ ಧರ್ಮಾಧರ್ಮಗಳನ್ನು ಬಿಟ್ಟು ನನ್ನಲ್ಲಿ ಆಶ್ರಯ ಹೊಂದು," ಎನ್ನುವ ಪರಮಾತ್ಮನ ನುಡಿಗೆ ಓಗೊಡಬಲ್ಲನು. ಪರಮಾತ್ಮನಾಗ ಬಲ್ಲನು. ಭಕ್ತಿಯಿಂದಲೇ ಮುಕ್ತಿ.

೭೯

ಮನ್ನು ಪಾರಬಿಟ್ಟ ಮನಕೇಮಿಲಾಭಂಬು, ಧಾನ್ಯಮಟ್ಲು ಜೀಯ ದಗುನುಕಾನಿ,
ಘನಲುಲೋಪ ಮೆನ್ನಗಾರಾದು ವಿಡುವುಮು, ವಿಶ್ವದಾಭಿರಾಮ ವಿನುರ ವೇಮ

ಉಸುಗು ಬಿತ್ತಲೇನು, ಉಂಟು ಲಾಭವೆಮಗೆ ?
ಅಂತೆ ಧಾನ್ಯ ಬಿತ್ತೆ, ಅದುವೆ ಯುಕ್ತ.
ಘನರ ಲೋಪಗಳನು ಗಣನೆ ಮಾಡಬೇಡ.
ವಿಶ್ವದಾಭಿರಾಮ ಕೇಳು ವೇಮ.

ಘನವಂತ ಮಹಿಮರಲ್ಲಿ ಹಲವಾರು ಲೋಪದೋಷಗಳಿರಬಹುದು. ಯೇಸು ಕ್ರಿಸ್ತ, ಅನಾಗರಿಕ ಯಹೂದ್ಯರ ಮಧ್ಯೆಯಲ್ಲಿ ಪವಾಡ ತೋರಿಸದೆ ಇರಲಾಗಲಿಲ್ಲ. ಆದರೆ, ಅವನ ಪವಾಡಗಳನ್ನು ಕಂಡ ಯಹೂದ್ಯರು ಅವನನ್ನು ತಿರಸ್ಕರಿಸಿದರು. ಐರೋಪ್ಯ

ಪ್ರದೇಶದಲ್ಲಿ ಯೇಸುಕ್ರಿಸ್ತನು ಪವಾಡ ತೋರಲಿಲ್ಲ. ಆದರೆ ಅವರಿಗೆ ಬೆಟ್ಟದ ಸಂದೇಶ ನೀಡಿದನು. ಬೆಟ್ಟದ ಸಂದೇಶದಿಂದ ಐರೋಪ್ಯರು ಪ್ರಭಾವಿತರಾದರು. ಯೇಸು ಕ್ರಿಸ್ತ ನನ್ನು ಅನುಸರಿಸಿದರು. ಪವಾಡದ ಅಭಿವ್ಯಕ್ತಿಯ ದೋಷವನ್ನು ಐರೋಪ್ಯರು ಲೆಕ್ಕಿ ಸಲಿಲ್ಲ. ಹಲವಾರು ಸಾಧು-ಸಜ್ಜನರು ಮಾದಕ ದ್ರವ್ಯ ಸೇವನೆ, ಮಾಂಸ ಭಕ್ಷಣ ಮಾಡು ತ್ತಾರೆ. ಇದು ಅವರಲ್ಲಿಯ ಲೋಪ. ಇಂಥ ಲೋಪಗಳ ಗಣನೆಯಿಂದ ನಮಗಾಗ ಬೇಕಾದುದೇನೂ ಇಲ್ಲ. ಅವರ ಉದಾರ ಹೃದಯ, ಸದ್ಭಾವೆಗಳಿಂದ ನಾವು ಮಾರ್ಗ ದರ್ಶನ ಪಡೆಯಬೇಕು.

ಹದವಾದ ಭೂಮಿಯಲ್ಲಿ ಸಜೀವವಾದ ಬೀಜವನ್ನು ಬಿತ್ತಬೇಕಷ್ಟೇ. ಧಾನ್ಯದ ಬೀಜ ಬಿತ್ತಿದರೆ; ಪೈರು ಬೆಳೆಯುತ್ತದೆ. ಆದರೆ ಧಾನ್ಯಕ್ಕೆ ಬದಲಾಗಿ ಮಳಲಿನ ಕಣಗ ಳನ್ನು ಬಿತ್ತಿದರೆ, ಅದರಿಂದ ಯಾರಿಗೆ ಪ್ರಯೋಜನವಾದೀತು ! ಮಾಡಿದ ಶ್ರಮ ವ್ಯರ್ಥ ವಾಗುವುದಷ್ಟೇ. ಘನರ ಕುಂದುಗಳು ಮಳಲಿನ ಕಣದಂತೆ; ಅವರ ಗುಣಗಳು ಧಾನ್ಯ ವಿದ್ದಂತೆ. ಗುಣಗಳನ್ನು ಆಳವಡಿಸಿಕೊಳ್ಳುವುದರಿಂದ ನಮಗೆ ಲಾಭವುಂಟು.

೮೦

ಕಲ್ಮವಾರಗಿಂಚಿ ಕನ್ನುಲುಮುಕುಳಿಂಚಿ, ಬಿರ್ರಬಿಗಿಸಿಯುಂಡು ಬೀದಯೋಗಿ,
ಮೇಕಪೋತುವಲೆನು ಮೆರ ಮೆಚ್ಚುಲಕೆಯಗು, ವಿಶ್ವದಾಭಿರಾಮ ವಿನುರ ವೇಮ.

ಅನ್ನ ಊಟಮಾಡಿ ಆಗ ಕಣ್ಣು ಮುಚ್ಚಿ,
ಬಿರ್ರನೆ ಬಿಗಿವವನು ಭಂಡಯೋಗಿ.
ಹಿಂಡಿನಲ್ಲಿ ಹೋತು ಹೊರಮೆಚ್ಚು ಕೆಗಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಧ್ಯಾನ ಮಾಡುವವನು ದೇಹ, ಶಿರಸ್ಸು ಮತ್ತು ತಲೆ, ಈ ಮೂರನ್ನೂ ನೇರವಾಗಿ ರಿಸಿಕೊಂಡು, ಕಣ್ಣು ಮುಚ್ಚಿ, ಮೂಗಿನ ಮೇಲೆ ನೀಟ ದೃಷ್ಟಿಯಿರಿಸಿ ಧ್ಯಾನಿಸಬೇಕು, ಎಂದು ಪತಂಜಲಿ ಸೂತ್ರದಲ್ಲಿ, ಮತ್ತು ಭಗವದ್ಗೀತೆಯಲ್ಲಿ ಹೇಳಲಾಗಿದೆಯಷ್ಟೇ.

ಧ್ಯಾನ ಅಂದರೇನು ? ಚೈತನ್ಯಾತ್ಮಕವಾದ ಸದ್ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದೇ ಧ್ಯಾನವಾಗಿದೆ. ಆಗ ಮನಸ್ಸಿನಲ್ಲಿ ಬೇರಾವ ಚಿತ್ತವೃತ್ತಿಗಳೂ ಪ್ರವೇ ಶಿಸಲಾರವು. ಇದುವೇ ನಿರ್ಮಲವಾದ ಮನಸ್ಸು. ಇಂಥ ಸ್ಥಿತಿ ಹೊಂದಿದ ನಂತರ ಸಾಧಕನು ಆತ್ಮ ಪರಮಾತ್ಮಗಳ ಒಂದಾಗುವಿಕೆಯನ್ನು ಅಂದರೆ ಯೋಗವನ್ನು ಅನು ಭವಿಸುತ್ತಾನೆ. ಇಂಥ ಯೋಗಿಯ ಮನಸ್ಸಿಗೆ ಉಪಮೆಯಾಗಿ, ಗಾಳಿಯಿಲ್ಲದ ಜಾಗದಲ್ಲಿ ಅಲುಗದೆ ಇರುವ ದೀಪದ ಉದಾಹರಣೆ ನೀಡುತ್ತಾರೆ.

ಇನ್ನು ನಿಜವಾದ ಈ ಸ್ಥಿತಿಯನ್ನು ಹೊಂದದ, ಹೊಂದಲಾರದ, ಹೊಂದುವು ದಕ್ಕೆ ತಕ್ಕ ಶೀಲ ಕಾಪಾಡಿಕೊಳ್ಳದ, ಹಲವರು ನಟನೆಗೆ ಇಳಿಯುತ್ತಾರೆ. ಮನಸ್ಸಿನಲ್ಲಿ ವೈರಾಗ್ಯ ಉದಿಸದೆ, ವಿರಾಗಿಗಳ ವೇಷ ತಾಳಿದವರು. ಇವರು ತಮ್ಮ ವೇಷ; ಕಪಟ ನಡಿ

ಗಳಿಂದ ಜನ ವಂಚನೆಗಿಳಿಯುವ ಕ್ರೂರಿಗಳು. ಇವರು ಸಮೀಚೀನ ಭೋಜನ ಮಾಡಿ, ಯೋಗಿಯ ರೀತಿ, ಕಣ್ಣುಮುಚ್ಚಿ, ದೇಹವನ್ನು ಬಿಗಿಯಾಗಿಸಿಕೊಂಡು ಕುಳಿತುಕೊಳ್ಳುತ್ತಾರೆ. ಇಷ್ಟೇ. ಇವರಿಗೆ ಮುಖದ ಮೇಲೆ ಗಡ್ಡವಿರಲೂಬಹುದು. ಹೋತಿಗೂ ಗಡ್ಡವಿರುವುದಿಲ್ಲವೇ ? ಹಾಗೆ. ಕುರಿಮಂದೆಯಲ್ಲಿ ಹೋತು ಒಡೆದುಕಾಣುವಂತೆ ತೋರಿಕೆಗೆ, ಜನರ ಗುಂಪಿನಲ್ಲಿ ಭಂಡ ಯೋಗಿಯೂ ಒಡೆದು ಕಾಣುತ್ತಾನೆ. ಅವರ ಬಗ್ಗೆ ಎಚ್ಚರ ವಹಿಸಬೇಕು.

೬೦೧

ಕಲಿಗಿನಟ್ಟುಲುಂಡು ಗಲುಗಕಯುಂಡುನು, ಮರಿಯುಲೇಕಯುಂಡು ಮರಿಯುಗಲ್ಲು
ನಾಶಕೋಲದಿನಿ ಶಿವುಡಂದಿಂಚು ಚುಂಡುನು, ವಿಶ್ವದಾಭಿರಾಮ ವಿನುರ ವೇಮ.

ಇದ್ದವನಂತೆ ಇರು; ಇಲ್ಲದವನಂತಿರು;
ಮತ್ತೆ ಇಲ್ಲದಿಹುದು; ಮರಳಿ ಉಂಟು.
ಆಶೆ ಕೋರಿದಷ್ಟು ಅನುಗ್ರಹಿಸುವ ಶಿವ.
ವಿಶ್ವದಾಭಿರಾಮ ಕೇಳು ವೇಮ.

ಯಾವನೊಬ್ಬನಿಗೆ ಧನ-ಕನಕಾದಿ ಸಂಪದ ಇರಲಿ; ಇಲ್ಲದಿರಲಿ; ಅವನು ಸಮಚಿತ್ತನಾಗಿ, ನಿಸ್ಸಂಗಿಯಾಗಿ ಇರಬೇಕು. ಅದು ಹೇಗೆ ? ನಮ್ಮಲ್ಲಿ ಇರುವ ಧನ-ಕನಕಗಳು ಕೇವಲ ಕ್ಷಣಿಕ ಬೆಲೆಯುಳ್ಳವುಗಳೆಂದು ಯೋಗಿಗಳು ಭಾವಿಸುತ್ತಾರೆ. ಯಾವುದನ್ನು ಅವರು ತೊರೆಯಬೇಕೆಂದು ಬಯಸುತ್ತಾರೋ, ಅದುವೇ ಅವರಲ್ಲಿ ಇಲ್ಲದೆ ಹೋದರೆ, ಅವರಿಗೆ ಇನ್ನೂ ಹೆಚ್ಚಿನ ಸುಖ ಎನಿಸುವುದು. ಆಗ ಅವರು ಲೋಕದ ದೃಷ್ಟಿಯಿಂದ ಇಲ್ಲದಿದ್ದರೂ ಇದ್ದವರಂತೆ ಸುಖದಿಂದ ಇರುತ್ತಾರೆ. ಇನ್ನು ಯಾರಿಗೆ ಯಾವುದೇ ಲೌಕಿಕ ಸಂಪತ್ತು ಹೇರಳವಾಗಿ ಇರುವುದೋ, ಅವರು ಅದೆಲ್ಲ ದೈವದ್ದು ಎಂದು ತಿಳಿದು, ಸಂಗದಲ್ಲಿದ್ದರೂ ನಿಸ್ಸಂಗಿಗಳಾಗಿ ಬಾಳುತ್ತಾರೆ. ಅದರ ಮೋಹವೇ ಅವರಿಗಿಲ್ಲ. ಹೌದು; ಅವರು ಲೋಕದ ದೃಷ್ಟಿಯಲ್ಲಿ ಇದ್ದೂ ಇಲ್ಲದವರಂತೆ. ಇಲ್ಲದಾಗ ಇದ್ದವರಂತೆ, ಇರುವಾಗ ಇಲ್ಲದವರಂತೆ, ಇರುವ ಮನಸ್ಸಿನ ಸ್ಥಿತಿ ಹೊಂದಬೇಕಾದರೆ, ಆಶೆಗಳ ನಿಯಂತ್ರಣಶಕ್ತಿ ಸಾಧಿಸಬೇಕು. ನಮ್ಮ ಕೋರಿಕೆಗಳಿಷ್ಟೇ, ಶಿವನು ನೀಡುವುದೂ ಅಷ್ಟು. ವಿಧಿಯ ಹಂಚಿಕೆ ನಡೆಯುವುದೇ ಈ ರೀತಿ. ನಾವೇ ಕರ್ತೃಗಳು, ನಾವೇ ಭೋಕ್ತೃಗಳು. ವಿಧಿಯ ಕಾರ್ಯವೆಂದರೆ, ನಮ್ಮ ಕರ್ಮದ ಫಲ-ಕೋರಿಕೆಗನುಸರಿಸಿ ನಮಗೆ ತಲುಪುವಂತೆ ಮಾಡುವುದೇ ಆಗಿದೆ.

೬೦೨

ತನದು ಕರ್ಮಚೇತ ದಾನುಲೋಕಮುಲೋನ, ದನದು ತೆಲ್ಲಿಗರ್ಭಮುನನು ಬುಟ್ಟ,
ತನ್ನು ಮರಚಿ ತಾನು ದನುವನಿಚೆಡುನಯಾ, ವಿಶ್ವದಾಭಿರಾಮ ವಿನುರ ವೇಮ.

ತನ್ನ ಕರ್ಮದಿಂದ ತಾನು ಲೋಕದೊಳಗೆ,
ತಾಯಿ ಗರ್ಭದಲ್ಲಿ ತಾನು ಹುಟ್ಟಿ,
ತನ್ನ ಮರೆತು ತಾನು ತನುವ ಕೆಡಿಸುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಕರ್ಮ ಶಬ್ದ ಹುಟ್ಟಿರುವುದು 'ಕೃ' ಎಂಬ ಧಾತುವಿನಿಂದ. 'ಕೃ' ಎಂದರೆ ಮಾಡು ಎಂದರ್ಥ. ಸಕಲ ಕ್ರಿಯೆಯೂ ಕರ್ಮವೇ. ತತ್ತ್ವಶಾಸ್ತ್ರದಲ್ಲಿ ಕರ್ಮವೆಂದರೆ, ಕ್ರಿಯೆ ಎಂಬ ಸಾಮಾನ್ಯ ಅರ್ಥದೊಡನೆ, ಕ್ರಿಯೆಯು ಬಾಹ್ಯದಲ್ಲಿ ಪೂರ್ಣವಾದ ಮೇಲೆ ಸಹ, ಮಾಡುವವನಿಗೆ ಫಲ ನೀಡುವ ಸೂಕ್ಷ್ಮ ಸಂಸ್ಕಾರಗಳೆಂದೂ ಅರ್ಥವಾಗುತ್ತದೆ. ಈ ಎರಡನೆಯ ಅರ್ಥದಲ್ಲಿ ಕರ್ಮವು ಕರ್ತೃವಿನ ಭವಿಷ್ಯ ನಿರ್ಮಾಣದಲ್ಲಿ ಮಹತ್ವದ ಅಂಶವಾಗಿದೆ. ಇದು ಕೇವಲ ಈ ಜನ್ಮದಲ್ಲಿಯಷ್ಟೇ ಅಲ್ಲ. ಮರಣಾನಂತರ ಸಹ ಕರ್ಮ ಸಂಬಂಧ ಉಂಟು. ಕರ್ಮಸಿದ್ಧಾಂತವೆಂದರೆ, ಕಾರ್ಯ ಕಾರಣ ಸಿದ್ಧಾಂತವೇ ಆಗಿದೆ. ಯಾವ ಕ್ರಿಯೆಯೂ ತಜ್ಜನ್ಯ ಪರಿಣಾಮ ಉಂಟುಮಾಡದೆ ನಾಶಗೊಳ್ಳದು. ಮರಣ ಕಾಲಕ್ಕೆ ಮಾನವನ ಕ್ರಿಯೆಗಳು ಬೀಜ ರೂಪದಲ್ಲಿ ಉಳಿದು, ಪುನರ್ಜನ್ಮದ ವೇಳೆಗೆ ಅಳವೃದ್ಧಿಹೊಂದುವುವು. ಫಲಕರ್ಮಿಗೆ ಸಂಸಾರ ಉಂಟಾಗುವುದು ಹೀಗೆ: 'ಆಸಕ್ತನಾಗಿ ಎಲ್ಲಿ ಇವನ ಮನಸ್ಸು ಆಸಕ್ತವಾಗಿದೆಯೋ, ಅದನ್ನೇ ಕರ್ಮದೊಂದಿಗೆ ಸೇರುತ್ತಾನೆ. ಇಹಲೋಕದಲ್ಲಿ ಯಾವ ಯಾವ ಕರ್ಮವನ್ನು ಮಾಡುವನೋ, ಅದರ ಅಂತವನ್ನು ಅನುಭವಿಸಿಕೊಂಡು, ಅಲ್ಲಿಂದ ಪುನಃ ಈ ಲೋಕಕ್ಕೆ ಕರ್ಮಕ್ಕಾಗಿ ಹಿಂತಿರುಗುತ್ತಾನೆ.' (ಬೃ. ಉ. ೪-೪-೬) ಹೀಗೆ ಮರಳಿ ಮರಳಿ ತಾಯಿ ಗರ್ಭದಿಂದ ಹುಟ್ಟಿ ಬರುವುದಕ್ಕೆ ಫಲಾಪೇಕ್ಷೆಯೇ ಕಾರಣವೆಂದು ತಿಳಿದು, ತಾನು ಹುಟ್ಟು ಸಾವುಗಳಿಲ್ಲದ 'ಆತ್ಮ' ನೆಂದು ಅರಿಯದೆ ನಿಷ್ಕಾಮಕರ್ಮ ಗೆಯ್ದು ಬ್ರಹ್ಮದಲ್ಲಿ ಬ್ರಹ್ಮವೇ ಆಗಿ ಲೀನವಾಗದೆ, ತಾನು ಪಡೆದ ತನುವನ್ನು ವ್ಯರ್ಥ ಹಾಳುಮಾಡುತ್ತಾನೆ.

೬೦೩

ಜನ್ಮವದಲಿ ವೇರು ಜನ್ಮಂಬುಲೆತ್ತಂಗ, ಗರ್ಮಧರ್ಮಮುಲಕು ಗಣನಕಲದೆ ?
ಕರ್ಮಧರ್ಮಮುಲನು ಗಡತೇರವಚ್ಚುನಾ ? ವಿಶ್ವದಾಭಿರಾಮ ವಿನುರ ವೇಮ.

ಜನ್ಮ ಕಳೆದು ಬೇರೆ ಜನ್ಮವೆತ್ತಿ ಬರಲು,
ಕರ್ಮ ಧರ್ಮಗಳದು ಗಣನೆಯುಂಟೆ ?
ಕರ್ಮ ಧರ್ಮಗಳನು ಕಡೆಗಣಿಸಬಹುದೇ ?
ವಿಶ್ವದಾಭಿರಾಮ ಕೇಳು ವೇಮ.

ಕರ್ಮ ಎಂದರೆ ಕ್ರಿಯೆಯನ್ನು ಮಾಡಿ ಮುಗಿಸಿದ ಮೇಲೂ ಸಹ ಕರ್ತೃವಿಗೆ ಫಲನೀಡುವ ಯಾವ ಸಂಸ್ಕಾರಗಳು ಅವನ ಮನಸ್ಸಿನಲ್ಲಿ ಉಳಿಯುವುವೋ, ಅವುಗಳಾಗಿವೆ. ಧರ್ಮ ಎಂದರೆ ಜ್ಞಾನಪ್ರಧಾನವಾದ ಈ ಮನುಷ್ಯ ಜನ್ಮದಲ್ಲಿ ನಾವು ಪಡೆಯ

ಬೇಕಾದ ಫಲವನ್ನು ವಿಚಾರಮಾಡಿ ತಿಳಿದು, ನಮ್ಮ ಕಾಲ ಪ್ರಯತ್ನಗಳು ವ್ಯರ್ಥವಾಗದಂತೆಯೂ ಅಪವ್ಯಯವಾಗದಂತೆಯೂ ಆ ಫಲಗಳ ತಿಳಿವಳಿಕೆ. ಅವನ್ನು ಪಡೆಯಲು ಆವಶ್ಯಕವಾದ ನಡೆವಳಿಕೆ, ಮತ್ತು ಮನಃಪೂರ್ವಕವಾದ ಚಟುವಟಿಕೆಯೇ ಆಗಿದೆ.

ಒಂದು ಜನ್ಮ ಕಳೆದು ಇನ್ನೊಂದು ಜನ್ಮವೆತ್ತಿ ಬಂದಾಗ, ಈ ಕರ್ಮ ಮತ್ತು ಧರ್ಮಗಳ ಗಣನೆಯುಂಟೀ? ಹೌದು. ಈ ಬಗ್ಗೆ ಬೃಹದಾರಣ್ಯಕ ಉಪನಿಷತ್ತು (೪-೪-೫) ಹೀಗೆ ಪಠಿಸುತ್ತದೆ. "ಇವನು ಹೇಗೆ ಮಾಡುವನೋ, ಹೇಗೆ ಆಚರಿಸುವನೋ ಹಾಗೆ ಆಗುವನು. ಸಾಧುಕಾರಿಯಾದವನು ಸಾಧುವಾಗುತ್ತಾನೆ. ಪಾಪಕಾರಿಯಾದವನು ಪಾಪಿಯಾಗುತ್ತಾನೆ. ಪುಣ್ಯಕರ್ಮದಿಂದ ಪುಣ್ಯವಂತನಾಗುವನು. ಪಾಪಕರ್ಮದಿಂದ ಪಾಪಿಯಾಗುವನು. ಏನೇ ಆಗಲಿ; ಇನ್ನು ಕೆಲವರು ಹೀಗೆ ಹೇಳುತ್ತಾರೆ. "ಈ ಪುರುಷನು ಕಾಮಮಯನೇ. ಅವನು ಎಂಥ ಕಾಮದವನೋ ಅಂಥ ಕೃತಸಂಕಲ್ಪನಾಗುವನು. ಎಂಥ ಕೃತ-ಸಂಕಲ್ಪನೋ ಅಂಥ ಕರ್ಮವನ್ನು ಮಾಡುವನು. ಎಂಥ ಕರ್ಮವನ್ನು ಮಾಡುವನೋ, ಅದನ್ನೇ ಪಡೆಯುತ್ತಾನೆ." ಕಠ ಉಪನಿಷತ್ತು ಹೀಗೆ ಪಠಿಸುತ್ತದೆ.: "ಕರ್ಮಕ್ಕನುಸಾರವಾಗಿಯೂ ಜ್ಞಾನಕ್ಕನುಸಾರವಾಗಿಯೂ ಕೆಲವರು ದೇಹಿಗಳು ಶರೀರ ಗ್ರಹಣಕ್ಕಾಗಿ ಯೋನಿಯನ್ನೂ ಇನ್ನು ಕೆಲವರು ಸ್ಥಾವರ ಜನ್ಮವನ್ನೂ ಹೊಂದುತ್ತಾರೆ." ಅಂದ ಮೇಲೆ, ಕರ್ಮಧರ್ಮಗಳನ್ನು ಕಡೆಗಣಿಸಿ ಸಾಗುವುದು ಸಾಧ್ಯವೆಂತು ?

೬೦೪

ನಿಜಮುಲಾಡುನತಡು ನಿರ್ಮಲುಡೈಯುಂಡು, ನಿಜಮುಲಾಡುವಾಡು ನೀತಿಪರುಡು,
ನಿಜಮು ಬಲ್ಕಕುನ್ನ ನೀಚಚಂಡಾಲುಂಡು, ವಿಶ್ವದಾಭಿರಾಮ ವಿನುರ ವೇಮ.

ನಿಜವನಾಡುವವನು ನಿರ್ಮಲನಾಗಿಹನು;
ನಿಜವನಾಡುವವನು ನೀತಿಪರನು;
ನಿಜವನಾಡದವನು ನೀಚ ಚಂಡಾಲನು.
ವಿಶ್ವದಾಭಿರಾಮ ಕೇಳು ವೇಮ.

ಮುಂಡಕೋಪನಿಷತ್ತಿನ ಮಂತ್ರ ಹೀಗೆ ಪಠಿಸುತ್ತದೆ. "ಸತ್ಯಮೇವ ಜಯತೇ ನಾನೃತಂ | ಸತ್ಯೇನ ಪಂಥಾ ವಿತತೇ ದೇವಯಾನಃ ||" ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ | ಯತ್ರ ತತ್ ಸತ್ಯಸ್ಯ ಪರಮಂ ನಿಧಾನಮ್ ||" 'ಸತ್ಯವೇ ಜಯಿಸುತ್ತದೆ ಅನೃತವಲ್ಲ. ಸತ್ಯದ ಪರಮನಿಧಾನವು ಇರುವಲ್ಲಿಗೆ ಆಸೆಯನ್ನು ಉಡುಗಿಸಿಕೊಂಡ ಋಷಿಗಳು ಯಾವ ಮಾರ್ಗದಿಂದ ಹೋಗುತ್ತಾರೆಯೋ, ಅಂತಹ ದೇವಯಾನವೆಂಬ ಪಥವು ಸತ್ಯದಿಂದ ಹರಡಿರುತ್ತದೆ.'

'ಸತ್ಯಂ ವದ, ಧರ್ಮಂ ಚರ' ಅಂದರೆ 'ಸತ್ಯವನ್ನು ಹೇಳು; ಧರ್ಮವನ್ನು ಆಚರಿಸು.' ಎಂದು ತೈತ್ತರೀಯ ಉಪನಿಷತ್ತು ಸತ್ಯದ ಮಹಿಮೆಯನ್ನು ಹೇಳುತ್ತಿದೆ.

ಅಷ್ಟಾಂಗಯೋಗದಲ್ಲಿ ಯಮ ಅಂಗದಲ್ಲಿ ಸತ್ಯಕ್ಕೆ ಮುಖ್ಯಸ್ಥಾನ. "ಅಹಿಂಸಾ ಸತ್ಯ ಆಸ್ತೇಯ ಬ್ರಹ್ಮಚರ್ಯಾಪರಿಗ್ರಹಾಃ ಯಮಾಃ" 'ಅಹಿಂಸೆ, ಸತ್ಯ, ಕಳವು ಮಾಡದಿರುವಿಕೆ, ಬ್ರಹ್ಮಚರ್ಯೆ ಮತ್ತು ದಾನಾದಿ ಸ್ವೀಕರಿಸದಿರುವುದು. ಇತ್ಯಾದಿ ಯಮಗಳೆನಿಸುತ್ತವೆ' ಎಂದು ಯೋಗ ಸೂತ್ರಕಾರ ಪತಂಜಲಿ ಹೇಳುತ್ತಾರೆ. ಮಾನವನು ಸತ್ಯವನ್ನೇ ಆಡಬೇಕು. ಅವನಿಗೆ ಸತ್ಯ ಬೇಕಾಗಿದೆ. ಸತ್ಯ ಸಾಕ್ಷಾತ್ಕಾರವಾದ ಮೇಲೆ ಆರ್ಥಾತ್ ತನ್ನ ಹೃದಯಾಂತರಾಳದಲ್ಲಿ ಅದನ್ನು ತಿಳಿದ ಮೇಲೆ ಮಾತ್ರ ಅವನ ಸಂಶಯಗಳು ನಾಶವಾಗುತ್ತವೆ. ಅವನ ಹೃದಯ ನಿರ್ಮಲವಾಗುವುದು. ಪರ ಸತ್ಯದೆಡೆಗೆ ಒಯ್ಯುವುದೇ ನೀತಿ. ನೀತಿಮಾರ್ಗ ಸತ್ಯದಿಂದ ಹರಡಿದೆ. ಸತ್ಯವನ್ನು ಆಡುವವನೇ ನೀತಿಪರನು. ಯಾವನು ನಿಜವಾಡುವುದಿಲ್ಲವೋ ಅವನು ಧರ್ಮದೂರನು. ಅನೃತವಾಡುವುದು ಪಾಪ. ಅಸತ್ಯವು ಯೋಗಕಂಟಕವಾಗಿದೆ. ಸುಳ್ಳು ಹೇಳುವುದಾಗಲಿ, ಬೇರೆಯವರು ಸುಳ್ಳು ಹೇಳಿದನ್ನು ಒಪ್ಪುವುದಾಗಲಿ ಪಾತಕಗಳು. ಇದರಿಂದ ಪತನ ನಿಶ್ಚಯ. ನೀಚತನವೇ ಇದು. ಚಂಡಾಲರಿಗಿಂತ ಇವರು ಬೇರೆಯಲ್ಲ.

೬೦೫

ಪಾಲಗಲಿಯುನೀರು ಪಾಲೆಯ್ಯೆರಾಜಿಲ್ಲು, ಗೊಪ್ಪ ಗುರುನಿವಲನ ಗೋವಿದುಡಗು
ಸಾಧು ಸಜ್ಜನಮುಲ ಸಂಗತುಲಿಟ್ಲುಂಡು, ವಿಶ್ವದಾಭಿರಾಮ ವಿನುರ ವೇಮ.

ಹಾಲುಗೂಡಿ ನೀರು ಹಾಲಾಗಿ ಬೆಳಗಿತು.
ಮಹಾಗುರುವಿನಿಂದ ಮಹಾಜಾಣ.
ಸಾಧುಸಜ್ಜನಾದಿ ಸಂಗವಿಂತಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಆಧ್ಯಾತ್ಮಿಕ ಬೆಳವಣಿಗೆಯು ಬೌದ್ಧಿಕ ಬೆಳವಣಿಗೆಗಿಂತ ಭಿನ್ನವಾಗಿದೆ. ಬೌದ್ಧಿಕ ಬೆಳವಣಿಗೆಗೆ ಗ್ರಂಥ-ಪಠಣ ಸಹಾಯಕವಾಗಬಹುದು. ಆಧ್ಯಾತ್ಮಿಕ ಬೆಳವಣಿಗೆಯು ಗ್ರಂಥಮೂಲದಿಂದ ದೊರೆಯುವುದಿಲ್ಲ. ಆತ್ಮಾನುಭವವೇ ಸಾಕ್ಷಾತ್ಕಾರ. ಸಾಕ್ಷಾತ್ಕಾರವೇ ಧರ್ಮ. ಬೀಜ ಸಜೀವವಾಗಿರಬೇಕು. ಕ್ಷೇತ್ರ ಉತ್ತು ಹದವಾಗಿರಬೇಕು. ಆಗ 'ಒಬ್ಬನು ಆಶ್ಚರ್ಯದಂತೆ ಅದನ್ನು ಹೇಳುತ್ತಾನೆ. ಇನ್ನೊಬ್ಬನು ಆಶ್ಚರ್ಯದಂತೆ ಅದನ್ನು ಕೇಳುತ್ತಾನೆ." ಮಹಾಗುರುವಿನಿಂದ ಶಿಷ್ಯ ಮಹಾಜಾಣನಾಗಿರುತ್ತಾನೆ. ಹಾಲಿನಿಂದ,ಅದರೊಡನೆ ನೀರೂ ಹಾಲಾಗಿ ಬೆಳಗುವುದಿಲ್ಲವೇ ಹಾಗೆ. ಇದಕ್ಕೆ ಇನ್ನೊಂದು ಹೋಲಿಕೆ ಕೊಡುತ್ತಾರೆ. ಕೀಟವು ಪತಂಗವನ್ನು ನೋಡುತ್ತದೆ. ಭಯ ಪಡುತ್ತದೆ. ಕೊನೆಗೆ ಪತಂಗವೇ ಆಗುತ್ತದೆ. ಶಿಷ್ಯನು ಗುರುವಿನ ಸಂಗದಲ್ಲಿದ್ದು, ಕೊನೆಗೆ ಗುರುವೇ ಆಗುತ್ತಾನೆ. ಸಾಧು ಸಜ್ಜನರ ಸಂಗದ ಮಹಿಮೆಯೇ ಹೀಗೆ. ಸತ್ಸಂಗದಿಂದ ಶಿಷ್ಯನ ಕೀಳು ಪೂರ್ವ ಸಂಸ್ಕಾರಗಳು ನಾಶಹೊಂದುತ್ತವೆ. ಮಹಾತ್ಮರ ಸೇವೆಯಿಂದ ಮನಸ್ಸು ಶುದ್ಧವಾಗುತ್ತದೆ.

ಲಂ೬

ಪರಗನಿಂತ ದನುಕ ಬಡಿನ ಪಾಟಿರುಗಡೋ, ಘನತನೊಪ್ಪು ಮನುಜುಡನಗಬುಟ್ಟ,
ಕೀಡುಮೇಲೆರುಗಕ ಕ್ರಿಂದಗುಜಿತ್ರಂಬು, ವಿಶ್ವದಾಭಿರಾಮು ವಿನುರ ವೇಮು.

ಪರಿಕಿಸಿ ಇದುವರೆಗೆ ಪಟ್ಟಪಾಡನರಿಯ.
ಘನತೆಗೊಪ್ಪುವ ನರನೆನಿಸಿ ಹುಟ್ಟ,
ಕೀಳು ನೀಲರಿಯದೆ ಕುಸಿಯುತಿರುವ ಚಿತ್ರ.!
ವಿಶ್ವದಾಭಿರಾಮ ಕೇಳು ನೇಮ.

ಜೀವಿ ನರನಾಗಿ ಹುಟ್ಟಿ ಘನತೆ ಹೊಂದುವನು. ನರನಾಗಿ ಹುಟ್ಟುವ ಪರೆಗೆ ಅವನು ಪಡುವ ಪಾಡು ಏನು ? ಇದನ್ನೆಲ್ಲ ಪರೀಕ್ಷಿಸಿ ತಿಳಿಯಬೇಕು.

ಪುರುಷ ಎಂದರೆ ಶುದ್ಧವಾದ ಅರಿವು. ಇದರ ಕಾರ್ಯವು ಬೇರೊಂದು ತತ್ತ್ವ ವಿಲ್ಲದೆ ನಡೆಯದು. ಇದೇ ಪ್ರಕೃತಿ. ಪ್ರಕೃತಿ ಸೀಮಾತೀತ ಪುರುಷನ ಆಂತರಿಕ ಪ್ರವೃತ್ತಿ. ಪ್ರಕೃತಿ, ವ್ಯಕ್ತಗೊಳ್ಳುವ ಅವಕಾಶ ಸಿಕ್ಕಾಗಲೆಲ್ಲ ಕಾರ್ಯವು ನೆರವೇರುತ್ತದೆ. ಪ್ರಕೃತಿ ಪುರುಷನ ಗುಣವಾಗಿದೆ. ಸತ್ತ್ವ, ರಜಸ್, ತಮಸ್ ಎಂದು ತ್ರಿಗುಣಾತ್ಮಕ ವಾಗಿದೆ. ಮಹತ್ ತತ್ತ್ವ; 'ಅಹಂ' ತತ್ತ್ವ ಮತ್ತು ಚಿತ್ತ ಎಂದಾಗುವುವು. 'ಮಹತ್' 'ಅಹಂ' 'ಚಿತ್ತ' ಗಳನ್ನು ಸಾಮೂಹಿಕವಾಗಿ 'ಮನಸ್ಸು ಎನ್ನುತ್ತಾರೆ. ಇದು ವಿಶ್ವ ಮನಸ್ಸು. ಇದರ ಅರಿವಿನ ಭಾಗಕ್ಕೆ ವಿಶ್ವ ಪುರುಷ ಎನ್ನುತ್ತಾರೆ. ಚಿತ್ತವು ಸ್ಥೂಲವಾಗು ತ್ತನಡೆದ ಆಕಾಶಾದಿ ಭೂತುಗಳಾಗುತ್ತವೆ. ಪಂಚ ಮಹಾಭೂತಗಳಲ್ಲಿ ಆಂತರಿಕ ಒತ್ತಡವೂ ಉಂಟು; ಬಾಹ್ಯ ಒತ್ತಡಕ್ಕೂ ಅವು ಗುರಿಯಾಗಿರುತ್ತವೆ. ತಾಮಸಿಕ ಮೂಲಿದ ಒತ್ತಡವು ಬಲವೆನಿಸುವದು. ಒಳ-ಹೊರ ಒತ್ತಡಗಳಿಗೆ ಸಾಮೂಹಿಕವಾಗಿ ಪ್ರಾಣಶಕ್ತಿಯೆಂದು ಹೆಸರು. ಪ್ರಾಣಶಕ್ತಿಯು ಅನುಕೂಲ ಅವಕಾಶ ದೊರಕಿದೊಡನೆ, ಜೀವಸೃಷ್ಟಿಯಾಗುವದು. ಜೀವಸೃಷ್ಟಿಯಾಗುವಾಗ, ಚಿತ್ತದ ಅಲೆಗಳು ತನಗೆ ಸರಿ ಹೊಂದುವ ಅಲೆಗಳುಳ್ಳ ಶರೀರದೊಂದಿಗೆ ಸೇರುತ್ತವೆ. ಹೀಗೆ ಜೀವಿ, ಮಾನವ ಶರೀರದ ಅಲೆಗೆ ಹೊಂದುವ ಅಲೆಯುಳ್ಳ ಚಿತ್ತ ಹೊಂದುವ ಮುನ್ನ, ಕಲ್ಲು, ನೀರು, ಸಸ್ಯ. ಕೀಟ, ಪ್ರಾಣಿ, ಇತ್ಯಾದಿ ಅವಸ್ಥೆಗಳನ್ನು ದಾಟಿ, ವಿಕಾಸಹೊಂದಿ, ಘನತೆ ಹೊಂದಿದ ಮಾನವನಾಗಿ, ಜನಿಸಿರುವನು. ಹೀಗೆ ವಿಕಾಸಹೊಂದಿದ ಚಿತ್ತವುಳ್ಳ ಮಾನವಶರೀರದಲ್ಲಿರುವ ಪೂರ್ವ ಸ್ವಭಾವಕ್ಕಂಟಿ ಹಿಂದೆ ಹೋಗಬಹುದು. ಅದು ಕೀಳಾದುದು. ಇಲ್ಲಿಂದ ಸೂಕ್ಷ್ಮವಾಗಿ ಕೇಂದ್ರಸ್ಥಾನವಾದ ಪುರುಷೋತ್ತಮನಲ್ಲಿ ಬೆರೆಯಲು ಸಾಧನ ಗೆಯ್ಯುವುದು ಮೇಲು ಮಾರ್ಗವಾಗಿದೆ.

ಲಂ೭

ಪಡುಚು ಮಾಟಲಾಡಿ ಪರಿತಪಿಪಗನೇಲ ? ವೆಡಗುಚರ್ಮ ಲಣಚಿ ವೇಡಿ ಗುರುನಿ,
ಅಡಗುಲಂಟ ಪ್ರೊಕ್ಕಿ ಯಾಸನು ವಿಡದ್ರೊಕ್ಕು, ವಿಶ್ವದಾಭಿರಾಮ ಕೇಳು ವೇಮ.

ಪುಟ್ಟಮಾತನಾಡಿ ಪರಿತಪಿಪುದೇಕೆ ?
ಕೆಟ್ಟ ಚರ್ಯೆ ತೊಡೆದು, ಗುರುವ ಬೇಡಿ,
ಅಡಿಗೆ ಬಿದ್ದು ಮಣಿಯ; ಆಶೆಯ ತೊರೆದು ಬಿಡು.
ವಿಶ್ವದಾಭಿರಾಮ ಕೇಳು ನೇಮ.

ಮನುಷ್ಯನ ಚಿತ್ತ ಸ್ವತಂತ್ರವಾಗಿ ಕಾರ್ಯ ಮಾಡುವುದು. ಅದರಿಂದಾಗಿ ತನ್ನ ಪುಣ್ಯ ಇಲ್ಲವೆ ಪಾಪಕರ್ಮಗಳಿಗೆ ಮನುಷ್ಯ ಹೊಣೆಯಾಗಿ, ತನ್ನ ಕರ್ಮಫಲ ಅನುಭವಿ ಸಬೇಕಾಗುತ್ತದೆ.

ಮನುಷ್ಯನ ಚಿತ್ತ ಪ್ರಾಣಿ-ಪಕ್ಷಿಗಳ ಚಿತ್ತಕ್ಕಿಂತ ಸೂಕ್ಷ್ಮವಾದುದು. ಪ್ರಾಣಿ ಪಕ್ಷಿ ಗಳ ಚಿತ್ತ ವಿಶ್ವಚಿತ್ತದ ಮಾರ್ಗದರ್ಶನದಲ್ಲಿ ನಡೆಯುವುದರಿಂದ ಅಲ್ಲಿಂದ ಹಿಂದೆ ಹೋಗುವ ಪ್ರಶ್ನೆಯಿಲ್ಲ. ಮನುಷ್ಯನ ಚಿತ್ತ ಸ್ವತಂತ್ರವಾಗಿ ವರ್ತಿಸುವುದರಿಂದ ಸ್ಥೂಲ ವಾಗಬಹುದು. ಇಲ್ಲವೆ ಸೂಕ್ಷ್ಮವಾಗಬಹುದು. ಇದನ್ನು ನಿಯಮಿತಗೊಳಿಸಲು ಸಾಧನೆ ಬೇಕು. ಗುರುವಾಗಿ ಸಾಧಕನಿಗೆ ಮಾರ್ಗದರ್ಶನ ಮಾಡುವವನು ಹಿಂದೆ ಹೋಗುವ ನಮ್ಮ ಮನಸ್ಸಿನ ಸಂಸ್ಕಾರ ಪ್ರವೃತ್ತಿಗೆ ವಿರೋಧವಾಗಿ, ಬೋಧಿಸುವಂತೆ ತೋರ ಬಹುದು. ಆಗ ಮರ್ಮ ತಿಳಿಯದೆ, ಬೋಧೆಯ ರೀತಿಯ ಬಗ್ಗೆ ಚಿಲ್ಲರೆ ಮಾತನಾಡ ಬಾರದು. ಅದರಿಂದ ಇಲ್ಲದ ತೊಂದರೆ ಬರಬಹುದು. ಅದನ್ನು ಬರಮಾಡಿಕೊಳ್ಳುವು ದೇಕೆ ? ನಮ್ಮನ್ನು ಪ್ರಗತಿಗೆ ವಿರೋಧವಾದ ಮಾರ್ಗದತ್ತ ಸೆಳೆಯುವ ಕೆಟ್ಟ ಚರ್ಯೆ ಗಳನ್ನು ಬಿಡಬೇಕು. ಗುರುವನ್ನು ಪ್ರಾರ್ಥಿಸಬೇಕು. ಗುರುವಿನಡಿಗೆ ಬಿದ್ದು ಮಣಿಯ ಬೇಕು. ಎಲ್ಲವನ್ನು ಗುರುವಿಗರ್ಪಿಸಿ, ಆಸೆಯನ್ನು ತೊರೆದು ಬಿಡಬೇಕು. " ತವದ್ರವ್ಯಂ ಜಗದ್ಗುರುಂ ತುಭ್ಯಮೇವ ಸಮರ್ಪಯೇ " ಹೇ ಜಗದ್ಗುರುವೇ ನಿನ್ನ ಸಂಪತ್ತು ನಿನಗೇ ಅರ್ಪಿತವಾಗಲಿ, ಎಂದು ಗುರುಪೂಜೆಯ ನಂತರ ಪಠಿಸುವುದು ಇದಕ್ಕಾಗಿಯೇ.

ಗುರುಚರಣಾಂಬುಜ ನಿರ್ಭರೆ ಭಕ್ತಃ ಸಂಸಾರಾದಚಿರಾದ್ಭವ ಮುಕ್ತಃ |
ಇಂದ್ರಿಯ ಮಾನಸನಿಯಮಾದೇವಂ ದ್ರಕ್ಷ್ಯಸಿ ನಿಜ ಹೃದಯಸ್ಥಂ ದೇವಮ್ ||

ಗುರುವಿನ ಪಾದಪದ್ಮಗಳಲ್ಲಿ ತುಂಬು ಭಕ್ತಿ ಹೊಂದು. ಚಿರವಲ್ಲದ ಸಂಸಾರದಿಂದ ಮುಕ್ತನಾಗು. ಇಂದ್ರಿಯ-ಮನಸ್ಸುಗಳನ್ನು ನಿಯಮಗೊಳಿಸಿ ಹೃದಯದಲ್ಲಿ ಇರುವಂಥ ದೇವನನ್ನು ನೋಡು.

ಲಂ೮

ದೇಹಮಾತ್ಮ ರೂಪು ದೇಟತೆಲ್ಲಮು ಜೇಸಿ, ಅವನಿಜೂಪು ಜೂಪು ನತಡೆ ಗುರುವು.
ಭ್ರಮರಮು ತನ ರೂಪು ಗ್ರಿಮುಲಕಿಚ್ಚೆಡಿ ರೀತಿ, ವಿಶ್ವದಾಭಿರಾಮ ವಿನುರ ವೇಮ.

ದೇಹವಾತ್ಮರೂಪ ತಿಳಿಸಿ ಬಿಚ್ಚಿ ಹೇಳಿ,
ಅವನಿ ನೋಟ ನೋಡಿಸುವವನೆ ಗುರು.
ಭ್ರಮರ ತನ್ನರೂಪ ಕೀಟಕತ್ತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

"ಗುರುವನ್ನು ಪಡೆಯುವುದಕ್ಕೆ ಹಲವು ತೊಂದರೆಗಳಿವೆ. ಹಲವರು ತಾವೇ ಅಜ್ಞಾನದಲ್ಲಿದ್ದರೂ ತಾವು ಸರ್ವಜ್ಞರೆಂದು ಭಾವಿಸುವರು. ಅವರು ಇಷ್ಟರಲ್ಲೆ ತೃಪ್ತರಾಗುವದಿಲ್ಲ. ಉಳಿದವರನ್ನೂ ತಮ್ಮ ಹೆಗಲ ಮೇಲೆ ಕರೆದೊಯ್ಯಲು ಒಪ್ಪಿಕೊಳ್ಳುತ್ತಾರೆ. ಹೀಗೆ ಕುರುಡರು ಕುರುಡರಿಗೆ ಮಾರ್ಗದರ್ಶಕರಾಗಿ ಇಬ್ಬರೂ ಹಳ್ಳಕ್ಕೆ ಬೀಳುತ್ತಾರೆ. ಪ್ರಪಂಚದಲ್ಲಿ ಇಂತಹ ಜನರು ತುಂಬಿರುವರು. ಪ್ರತಿಯೊಬ್ಬನೂ ಗುರುವಾಗಬಯಸುವನು. ಪ್ರತಿಯೊಬ್ಬ ಭಿಕ್ಷುಕನೂ ಕೋಟ್ಯಾಂತರ ರೂಪಾಯಿ ದಾನ ಮಾಡಲು ಬಯಸುವದು ಎಷ್ಟು ಹಾಸ್ಯಾಸ್ಪದವೋ, ಆಧ್ಯಾತ್ಮಿಕ ಜ್ಞಾನವಿಲ್ಲದವರು ಗುರುಗಳೆಂದು ಕರೆದು ಕೊಂಡು ಜ್ಞಾನ ದೀಕ್ಷೆಗೆ ಮುಂದಾಗುವದೂ ಅಷ್ಟೇ ಹಾಸ್ಯಾಸ್ಪದ.

ಗುರು ಯಾರು ? ಯಾರು ದೇಹ ನಶ್ವರ, ವಿನಾಶಿ, ಬದಲಿಸಬಹುದಾದ ಹಳೆಯ ಬಟ್ಟೆಯಂತೆ; ಆತ್ಮವಾದರೋ ಬೇರೆ ಉಂಟು.; "ಈತನು ಯಾವಾಗಲೂ ಹುಟ್ಟುವುದಿಲ್ಲ ಸಾಯುವುದೂ ಇಲ್ಲ. ಈತನು ಉತ್ಪನ್ನನಾಗಿ ಪುನಃ ಇಲ್ಲದಿರುವುದೂ ಇಲ್ಲ. ಈತನು ಜನ್ಮರಹಿತನು; ನಿತ್ಯನು; ಶಾಶ್ವತನು, ಪುರಾಣನು; ಶರೀರವು ನಾಶವಾಗುತ್ತಿದ್ದರೂ, ನಾಶವಾಗುವುದಿಲ್ಲ." ಎಂದು ತಿಳಿದು ನಡೆಯುವನೋ ಅವನೇ ಗುರು.

ಹೋಲಿಸಿ ನೋಡಿರಿ:

ಜೀವನ್ಮುಕ್ತಸ್ತು ತದ್ವಿದ್ವಾನ್ಪೂರ್ವೋಪಾಧಿಗುಣಾನ್ ತ್ಯಜೇತ್ |
ಸಚ್ಚಿದಾನಂದ ರೂಪತ್ವಾತ್ ಭವೇದ್ಭೃಮರಕೀಟವತ್ ||

ಜೀವನ್ಮುಕ್ತನಾದರೋ ಅದನ್ನು (ಆತ್ಮ) ತಿಳಿದವನಾಗಿ ತನ್ನ ಪೂರ್ವದ ಉಪಾಧಿ ಗುಣಗಳನ್ನು ತ್ಯಜಿಸುತ್ತಾನೆ. ಸಚ್ಚಿದಾನಂದ ರೂಪದಿಂದಾಗಿ ಕೀಟವು ಭ್ರಮರವಾದಂತೆ ಆಗಿ ಬಿಡುವನು.

-ಆಚಾರ್ಯ ಶಂಕರ-ಆತ್ಮಬೋಧ. ೪೯

ದೇಹವುಳ್ಳ ಆತ್ಮನಿಗೆ ಈ ದೇಹದಲ್ಲಿ ಬಾಲ್ಯ ಯೌವನ-ಜರಾವಸ್ಥೆಗಳು ಹೇಗೆ ಉಂಟಾಗುವವೊ? ಹಾಗೆಯೇ ಬೇರೆ ದೇಹದ ಪ್ರಾಪ್ತಿಯೂ ಉಂಟಾಗುತ್ತದೆ. ಈ ವಿಷಯದಲ್ಲಿ ಜ್ಞಾನಿಯು ಮರುಳಾಗುವದಿಲ್ಲ. ದೇಹ, ಆತ್ಮ ರೂಪಗಳನ್ನು ತಿಳಿಸಿ ಹೇಳುವವನೇ ನಿಜವಾದ ಗುರು. ಕೀಟವು ಭ್ರಮರವನ್ನು ಕಂಡು ಮೊದಲು ಭಯಪಟ್ಟು ಕೊನೆಗೆ ಭ್ರಮರವೇ ಆಗುವುದು. ಅದೇ ರೀತಿ, ಗುರುವು ಭಯ ಭಕ್ತಿಯ ಜಗದ ನೋಟ ನೋಡಿಸಿ, ಕೊನೆಗೆ ಬ್ರಹ್ಮದೊಂದಿಗೆ ಒಂದಾಗಿಸುವನು. ಶಿಷ್ಯನಿಗೆ ತನ್ನಬ್ರಹ್ಮಸ್ವರೂಪವನ್ನೇ ನೀಡುವನು.

೮೦೯

ತಲ್ಲಿದಂಡ್ರು ಲೆನ್ನ ದಗುತೊಲಿ ಗುರುವುಲು, ಪರ್ವತೀಭವುಲಿಲ ಬರಮು ಗುರುಲು
ಕೂಲಿವಾಂಡ್ರ ಜಗತಿ ಗುರುಲನ ದ್ರೋಹಂಬು ವಿಶ್ವದಾಭಿರಾಮು ವಿನುರ ವೇಮ.

ತಾಯಿ ತಂದೆ ತಿಳಿಯೆ, ತನಗೆ ಮೊದಲು ಗುರುವು.
ಪಾರ್ವತಿ ಭವರೆಲ್ಲ ಪರಮ ಗುರುವು.
ಕೂಲಿ ಕೊಳ್ಳುವವನ, ಗುರುವೆನಲು ದ್ರೋಹ.
ವಿಶ್ವದಾಭಿರಾಮ ಕೇಳು ವೇಮ.

ಋಗ್ವೇದದಲ್ಲಿ ಅಗ್ನಿ ದೇವತೆಯನ್ನು ಕುರಿತಿರುವ ಮಂತ್ರ ಹೀಗಿದೆ : ತ್ವಂ ಹಿ ನಃ ಪಿತಾ ವಸೋ ತ್ವಂ ಮಾತಾ ಶತಕ್ರತೋ ಬಭೂವಿಥ | ಅಥಾ ತೇ ಸುಮ್ನಮೀಮಹೇ ||
' ಪರಮೋಪಕಾರಿಯೇ, ಅಮಿತವಾದ ಶಕ್ತಿಯುಳ್ಳ ದೇವನೇ, ನೀನು ನಮಗೆ ತಂದೆಯಾಗಿ ಪಾಲಕನಾಗಿರುವಿ. ಅದರಿಂದ ನಿನ್ನ ಕರುಣೆಯನ್ನು ಬೇಡುತ್ತೇವೆ. ' ' ಮಾತೃದೇವೋ ಭವ. " ' ತಾಯಿಯೇ ದೇವರು.' ' ಪಿತೃ ದೇವೋಭವ. " ' ತಂದೆಯೇ ದೇವರು. " ಹೌದು. ಕಾಗುಣಿತ ಓದಿಸುವವ ಗುರುವಲ್ಲ. ಪುಸ್ತಕ ಓದಿ ಆಧ್ಯಾತ್ಮಿಕ ಸಾಧನೆ ಮಾಡುತ್ತೇವೆಂಬುದು ಕೇವಲ ಭ್ರಾಂತಿ. ಆತ್ಮ ಪ್ರೇರಣೆಯು ಆತ್ಮದಿಂದ ಮಾತ್ರ ಬರಬಲ್ಲುದು. ಯಾರಿಂದ ಈ ಪ್ರೇರಣೆ ಬರುವುದೋ, ಅವನ್ನು ಕೊಡುವ ಶಕ್ತಿ ಅವನಲ್ಲಿ ಇರಬೇಕು. ಇಂಥ ಶಕ್ತಿ ತಂದೆ-ತಾಯಿಗಳಲ್ಲಿ ಇಲ್ಲದೆ, ಇನ್ನಾರಲ್ಲಿ ಇದ್ದೀತು.? ' ತಾಯಿಯೇ ಪಾರ್ವತಿಯು ; ತಂದೆಯೇ ಶಂಭುವು. ತಾನು ಹುಟ್ಟಿದ ಮನೆಯು ತನಗೆ ಕೈಲಾಸ." ದೇವರು ನಾಮ ರೂಪ ಕ್ರಿಯೆಗಳನ್ನು ಮೀರಿದವನು. ಆದರೆ, ಮಾನವನಂತೆ ಇರುವ ಅವನ ಆವಿರ್ಭಾವವನ್ನು ನಾವು ತಾಯಿ-ತಂದೆಯಂತೆ ಪೂಜಿಸಬಹುದು. ಅವನಿಗೆ ಹೆಸರು ಹಚ್ಚಿ, ' ಪಾರ್ವತಿ ರಮಣ " ಎಂದು ಸಂಬೋಧಿಸಿ ಪ್ರಾರ್ಥಿಸಬಹುದು. ಪಾರ್ವತಿ ಪರಮೇಶ್ವರರು ಪರಮ ಗುರುಗಳಂತೆ. ಆದರೆ ಒಂದು ಮಾತು ನೆನಪಿನಲ್ಲಿರಲಿ. ಯಾರು ದಕ್ಷಿಣೆಗಾಗಿ ಪೂಜೆ ಮಾಡುವರೋ, ಹಣ ಸ್ವೀಕರಿಸಿ, ಪ್ರವಚನ ಉಪದೇಶ ನೀಡುವರೋ, ಅವರು ತಮ್ಮ ಶ್ರವಣಕ್ಕೆ ಹಣ ಪಡೆಯುವ ಕೂಲಿಕಾರರಂತೆ. ಕೂಲಿ ಕೊಳ್ಳುವವನನ್ನು ಗುರುವೆನ್ನಬೇಡಿರಿ. ಕೂಲಿಯ ಗುರುಗಳು ಇರುವರೆಗೆ, ಸಂಕುಚಿತ ಭಾವನೆಗಳು ಬೆಳೆಯುತ್ತ ಹೋಗುವವು.

೮೧೦

ತನದುರಕ್ತಿಯನೆಡಿ ದಾಸಿಚೇತನುಜಿಕ್ಕಿ, ಮಿಗಿಲಿವೆಡಲ ಲೇಕ ವಿಣುಕುಚುನ್ನ,
ನರುನಿದೇಡ ಮುಕ್ತಿ ವರಜೇಡು ಜಿಪ್ಪುಡೀ ? ವಿಶ್ವದಾಭಿರಾಮ ವಿನುರ ವೇಮ.

ತನ್ನ ರಕ್ತಿಯೆನುವ, ದಾಸಿ ಕೈಗೆ ಸಿಕ್ಕು,
ಮಿಕ್ಕಿ ಹೊರಗೆ ಬರದೆ. ಮಿಡುಕುತಿರುವ,
ನರನಿಗೆಲ್ಲಿ ಮುಕ್ತಿ ದೊರೆಯುವುದು ಹೇಳಿರಿ ?
ವಿಶ್ವದಾಭಿರಾಮ ಕೇಳು ವೇಮ.

ಪ್ರಿಯ ವಸ್ತುವಿನಲ್ಲಿ ಉಂಟಾಗುವ ಆಕಸ್ತ್ಯವೇ ರಾಗ. ತನ್ನನ್ನು ಪ್ರೇಮಿಸಿ ಬಂದವಳೆಂದು ತನ್ನ ರಕ್ತಿ ಎಂದು ಯಾವ ದಾಸಿಯೊಬ್ಬಳನ್ನು ಕುರಿತು ಹೇಳುವನೋ,

ಅಂಥವಳ ಕೈಯಲ್ಲಿ ಸಿಕ್ಕು ಅನೇಕರು ಮಿಡುಕುತ್ತಾರೆ. ಹೆಣ್ಣಿನ ಮೋಹ ಬಲೆಯಿಂದ ಪಾರಾಗಲು, ಅವರು ಮಾಡುವ ಪ್ರಯತ್ನವು ಸಫಲವಾಗದೆ ಒದ್ದಾಡುತ್ತಾರೆ.

ಸ್ತ್ರೀ ಮೋಹವನ್ನು ಮೀರಿ, ಹೊರಗೆ ಬರಬೇಕು. ಮೋಹವನ್ನು ದಾಟಿದಾಗ ಭಕ್ತಿ ಕುದುರುವುದು. ಭಕ್ತಿ ಉಂಟಾದ ಮೇಲೆ ಸದ್ವಸ್ತುವಿನೊಂದಿಗೆ ಒಂದಾಗಲು ಸಾಧಕನು ಹೆಣಗುವನು. ಯೋಗ ಸಾಧಿಸಿ ಒಂದಾಗಿ ಇರಬಲ್ಲನು; ಯೋಗಿಯಾಗ ಬಲ್ಲನು.

ಆದರೆ ದಾಸಿಯ ಮೋಹಪಾಶದಲ್ಲಿ ಸಿಲುಕಿ, ತೊಳಲುವವನಿಗೆ ಯಾವ ಗತಿಯೂ ಇಲ್ಲ. ಅವನ ಮನಸ್ಸು ಪ್ರಾಪಂಚಿಕ ಚಿಂತೆಯಿಂದ ಬಿಡುಗಡೆ ಹೊರಿಯದು. ಅಂಥವನಿಗೆಲ್ಲಿಯ ಮುಕ್ತಿ ?

ಹೋಲಿಸಿ ನೋಡಿರಿ :—

' ಬಾಲಸ್ತಾವತ್ಕ್ರೀಡಾಸಕ್ತಃ ತರುಣಸ್ತಾವತ್ತರುಣೀ ಶಕ್ತಃ ।
ವೃದ್ಧಸ್ತಾವಚ್ಚಿಂತಾಮಗ್ನಃ ಪರೇ ಬ್ರಹ್ಮಣಿ ಕೋಽಪಿನ ಲಗ್ನಃ ॥
ಆಚಾರ್ಯ ಶಂಕರ

ಎಳೆಯ ವಯಸ್ಸಿನಲ್ಲಿ ಆಟ-ನೋಟಗಳಲ್ಲಿಯೇ ಆಸಕ್ತನಾಗಿರುವನು. ತಾರುಣ್ಯಾವಸ್ಥೆಯಲ್ಲಿ ತರುಣಿಯಲ್ಲಿ ಅನುರಕ್ತನಾಗಿರುವನು, ಮುಪ್ಪಿನಲ್ಲಿ ಚಿಂತೆಯಲ್ಲಿ ಮಗ್ನನಾಗಿರುವನು. ಪರಬ್ರಹ್ಮನನ್ನು ಕೂಡುವವರಾದರೂ ಯಾರು ? ಯಾವಾಗ ?.

೬೧೧

ತನದು ಮನಸು ಚೇತ, ತರ್ಕಿಂಚಿ ಜ್ಯೋತಿಷ, ಮೆಂತಚೇಸೆ ನನಂಚು ನೆಂಚಿಚೂಚು,
ದನಯದೃಷ್ಟಮೆಂತೊ ದೈವಮೆರುಂಗಡಾ ? ವಿಶ್ವದಾಭಿರಾಮ ವಿನುರ ವೇಮ.

ತನ್ನ ಮನಸಿನಿಂದ ತರ್ಕಿಸಿ ಜ್ಯೋತಿಷ,
ಎಷ್ಟು ಗೆಯ್ದೆನೆಂದು ಯೋಚಿಸುವುದು.
ತನ್ನ ಅದೃಷ್ಟವನು ದೈವ ತಿಳಿಯದೇನು ?
ವಿಶ್ವದಾಭಿರಾಮ ಕೇಳು ವೇಮ.

ಜ್ಯೋತಿಷವೆಂದರೇನು ? ಖಗೋಳದಲ್ಲಿ ಸೂರ್ಯ ಪ್ರಧಾನವಾದ ಗ್ರಹಮಂಡಲದಿಂದ ಒಡಗೂಡಿದುದು ಜ್ಯೋಸಿಶ್ಚಕ್ರ. ಈ ಜ್ಯೋತಿಮಂಡಲದ ಗತಿಯ ಲೆಕ್ಕಕ್ಕೆ ನಮ್ಮ ಅದೃಷ್ಟವನ್ನು ತಗಲಿಸಿ, ತರ್ಕಿಸುವುದೇ ಜ್ಯೋತಿಷ.

ಖಗೋಳದಲ್ಲಿ ಮೇಷ, ವೃಷಭ, ಮಿಥುನ, ಕರ್ಕಟ, ಸಿಂಹ, ಕನ್ನಿ, ತುಲಾ, ವೃಶ್ಚಿಕ ಧನುಸ್ಸು, ಮಕರ, ಕುಂಭ, ಮೀನಗಳೆಂದು ಹನ್ನೆರಡು ಭಾಗ ಮಾಡುತ್ತಾರೆ. ಇವೇ ಹನ್ನೆರಡು ರಾಶಿಗಳು. ಇನ್ನು ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ ಇತ್ಯಾದಿ ಇಪ್ಪತ್ತೇಳು ತಾರೆಗಳು ಅಥವಾ ನಕ್ಷತ್ರಗಳು ಮೇಲೆ ಹೇಳಿದ ಬೇರೆ ಬೇರೆ ರಾಶಿ ಭಾಗಗಳಲ್ಲಿ ಇರುತ್ತವೆ. ಇವುಗಳಲ್ಲಿ ನಾಲ್ಕು ಭಾಗ ಮಾಡಿ, ನಾಲ್ಕು ಪಾದಗಳೆನ್ನುತ್ತಾರೆ. ಅಂದರೆ ಒಂದುನೂರಾ

ಎಂಟು ನಕ್ಷತ್ರ ಪಾದಗಳಾದವು. ಒಂದು ರಾಶಿಗೆ ಒಂಭತ್ತು ಪಾದ ಬರುವಂತೆ ಎಣಿಕೆ ಹಾಕುವರು. ಹೀಗೆ ನಿರ್ಧರಿಸಿದ ಮಾರ್ಗಕ್ಕೆ 'ಜ್ಯೋತಿರ್ಗ್ರಹ ವೀಥಿ' ಎನ್ನುವರು. ಇದರ ಮಧ್ಯದಲ್ಲಿ ಸೂರ್ಯ-ಚಂದ್ರರು ಸಂಚರಿಸುವರೆಂದು ಕಲ್ಪನೆ. ಕುಜ, ಮಂಗಳ, ಬುಧ ಶುಕ್ರ, ಶನಿ, ಎಂಬ ಪಂಚಗ್ರಹಗಳು ಋಜು ವಕ್ರಚಾರಿಗಳಾಗಿ ಉಂಟು. ಈ ಮೇಲಿನ ತರ್ಕದಿಂದ ಖಗೋಳದ ಗತಿ ನಿರ್ಧಾರವಾಗಿದೆ. ಏಳು ವಾರಗಳು, ಇಪ್ಪತ್ತೇಳು ನಕ್ಷತ್ರಗಳೂ, ಹನ್ನೆರಡು ರಾಶಿಗಳು ಮಾನವನ ತರ್ಕದ ಮೇಲೆ ಕಲ್ಪಿತವಾಗಿವೆ. ಜ್ಯೋತಿಷ್ಯ ಶಾಸ್ತ್ರವೇ ಮಾನವನ ಮನಸ್ಸಿನ ತರ್ಕ. ಜ್ಯೋತಿಷದ ಮೇಲೆ ಎಣಿಕೆ ಹಾಕುವುದೆಂದರೆ, ಮಾನವನ ತರ್ಕ ಎಲ್ಲಿಯ ವರೆಗೆ ಮುಟ್ಟಿದೆ. ಎಂಬುದನ್ನು ಎಣಿಕೆ ಹಾಕುತ್ತ ಕುಳಿತಂತೆ.

ನಮ್ಮ ಆಗು ಹೋಗುಗಳು ಎಣಿಕೆಗೆ ಮೀರಿದಾಗ, ನಾವು ಅವನ್ನು 'ಅ-ದೃಷ್ಟ' ಎನ್ನುತ್ತೇವೆ. ಅದೃಷ್ಟವು ಇಂದ್ರಿಯದಿಂದ ತಿಳಿಯಲು ಆಗದೆ ಉಳಿದುದು. ಆದರೆ, ಅದೃಷ್ಟವನ್ನು ನಮ್ಮ ಕರ್ಮಾನುಸಾರ ಪಾಲು ಮಾಡಿ. ನಮ್ಮ ಪ್ರಾರಬ್ಧದ ಪಾಲುಮಾಡುವ 'ವಿಧಿ' ಅದೃಷ್ಟವನ್ನು ತಿಳಿಯದೇ ? ಅದೃಷ್ಟವನ್ನು ತಿಳಿಯಲು ನಿಃಸಹಾಯಕರಾಗಿ ಮೂಢರಂತೆ, ತರ್ಕದಿಂದ ತಿಳಿಯ ಬಯಸುವುದು ವ್ಯರ್ಥ ಪ್ರಯತ್ನವೇ ಸರಿ. ಇದು ಹೇಡಿತನವುಂಟು -ಮಾಡುವ ಸಂಭವವುಂಟು.

೬೧೨

ಜ್ಞಾನಿಯೈನವಾಡು ಘನತೇಘಮಂದುನು, ಬೂನಿಸುಖಮು ಜಿಂದು ಬುಟ್ಟ ಜೋಡು,
ತಾನೆ ತಾನಟಯ್ಯ ದನಲೋನೆ ವೆಲ್ಗುನು ವಿಶ್ವದಾಭಿರಾಮ ವಿನುರ ವೇಮ

ಜ್ಞಾನಿಯಾದ ನರನು ಘನ ತೇಜವಂತನು;
ಪೂರ್ಣ ಸುಖವ ಹೊಂದಿ, ಹುಟ್ಟುತಿಹನು.
ತಾನು ತನ್ನ ರೀತಿ, ತನ್ನೊಳು ಬೆಳಗುವನು.
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಿಯಾದ ನರನು, ಬಹಳ ತೇಜಸ್ವಿಯಾಗಿಯೂ, ಪೂರ್ಣ ಸುಖವನ್ನು ಹೊಂದಿ ಹುಟ್ಟುತ್ತಾನೆ. "ಜನ್ಮೌಷಧಿ-ಮಂತ್ರ-ತಪಃ-ಸಮಾಧಿಜಾಃ ಸಿದ್ಧಯಃ ॥" 'ಸಿದ್ಧಿಗಳು, ಜನ್ಮ, ಔಷಧಿ, ಮಂತ್ರ, ತಪಸ್ಸು ಅಥವಾ ಏಕಾಗ್ರತೆಯಿಂದ ದೊರಕುತ್ತವೆ.' ಎಂದು ಯೋಗ ಸೂತ್ರಕಾರ ಪತಂಜಲಿ ಹೇಳುತ್ತಾನೆ. ಕೆಲವು ವೇಳೆ, ಜನರು ಸಿದ್ಧಿಯೊಂದಿಗೆ ಹುಟ್ಟುತ್ತಾರೆ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು, ಜ್ಞಾನಿಯಾದ ಅಂದರೆ ಶಾಸ್ತ್ರಾರ್ಥವನ್ನು ತಿಳಿದುಕೊಂಡರೂ ಬ್ರಹ್ಮಪ್ರಾಪ್ತಿಯ ಮಾರ್ಗದಲ್ಲಿ ಭ್ರಷ್ಟನಾದವನಿಗೆ ಯಾವಗತಿಯುಂಟೆಂಬುದನ್ನು ಹೀಗೆ ಹೇಳುತ್ತಾನೆ: "ಯೋಗ ಭ್ರಷ್ಟನಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ವಿನಾಶವಿಲ್ಲ. ಏಕೆಂದರೆ ಕಲ್ಯಾಣಕಾರ್ಯವನ್ನು ಮಾಡುವ ಯಾವನೂ ಅಧೋಗತಿಯನ್ನು ಹೊಂದುವದಿಲ್ಲ." "ಯೋಗ ಭ್ರಷ್ಟನು ಪುಣ್ಯಶಾಲಿಗಳ ಲೋಕವನ್ನು ಹೊಂದಿ, ಅಲ್ಲಿ ಅನೇಕ

ವರ್ಷಗಳ ವರೆಗೊ ವಾಸವಾಗಿದ್ದು, ಅನಂತರ ಸದಾಚಾರಶೀಲರೂ ಶ್ರೀಮಂತರೂ ಆಗಿರುವವರ ಮನೆಯಲ್ಲಿ ಹುಟ್ಟುವನು.....ಅಲ್ಲಿ ಪೂರ್ವ ಜನ್ಮಸಂಬಂಧವಾದ ಬುದ್ಧಿ ಸಂಯೋಗವನ್ನು ಹೊಂದುತ್ತಾನೆ. ಆ ಮೇಲೆ ಸಂಸಿದ್ಧಿಗಾಗಿ, ಅಧಿಕ ಪ್ರಯತ್ನ ಮಾಡುತ್ತಾನೆ."

ಇಂಥ ಜ್ಞಾನಿಯು ಪೂರ್ವಾಭ್ಯಾಸದಿಂದ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಸೆಳೆಯಲ್ಪಡುವನು. ಅವನಿಗೆ ತನ್ನ ಅಂತರಾಳದಲ್ಲಿಯೇ ಜ್ಯೋತಿರ್ಮಯವಾದ ಆತ್ಮವು ಬೆಳಗಿದ ಅನುಭವವಾಗುವದು.

ಲಂಡಿ

ಜ್ಞಾನವಂತುನಿ ಗಡುಕರ್ಮ ಸಂಬದ್ಧುಲು, ವೆರ್ರಿಯುಂಡ್ರು ಪ್ರಕೃತಿ ವಿಡುವ ಲೇಕ
ವರ್ರಿ ಕನನಿ ಪ್ರಕೃತಿ ವೆದಕಿನ ಗಲ್ಗುನಾ, ವಿಶ್ವದಾಭಿರಾಮ ವಿನುರ ವೇಮ.

ಕಡು ಜ್ಞಾನವಂತನ, ಕರ್ಮಸಂಬದ್ಧರು,
ಹುಚ್ಚಿನೆನುತಿಹರು ಪ್ರಕೃತಿ ಬಿಡದೆ.
ಹುಚ್ಚರದೆ ಪ್ರಕೃತಿ, ಹುಡುಕಲು ಸಿಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಲೋಕದ ಜನರು ಯಜ್ಞ-ಪೂಜೆ ಇತ್ಯಾದಿ ವ್ರತ-ನೇಮಗಳ ಕರ್ಮಪಾಶದಿಂದ ಅತಿಯಾಗಿ ಬಿಗಿಯಲ್ಪಟ್ಟವರಾಗಿ, ಜ್ಞಾನವಂತನನ್ನೇ 'ಹುಚ್ಚು' ಎನ್ನುವರು. ಜನರಿಗೆ ಧನ-ಕನಕ ಬೇಕು; ಸತಿ-ಸುತರು ಬೇಕು; ಸುಖ-ಭೋಗ ಬೇಕು.

ಇನ್ನು ಹುಚ್ಚನೆಂದರೆ ಯಾರು ? ಲೋಕದ ಕ್ರಮಕ್ಕೆ ವಿರೋಧವಾಗಿ ನಡೆಯುವವನೇ ಹುಚ್ಚನು. ಲೋಕದ ಜನರಲ್ಲಿ ಕಾಮಾಕರ್ಷಣೆಯ ಭಾವವಿರುವುದರಿಂದ, ಅವರು ತಮ್ಮ ಅಂಗಾಗ ಮುಚ್ಚಿಕೊಳ್ಳಲು ಬಟ್ಟೆ ಧರಿಸುವರು. ಹುಚ್ಚನಾದವನು ಬಟ್ಟೆಬರೆ ಧರಿಸದಿರಬಹುದು. ಏಕೆಂದರೆ, ಅವನಿಗೆ ಅಂಗಾಂಗಗಳ ಕಾಮಾಕರ್ಷಣೆಯ ವಿಚಾರ ವಿರದು. ಲೋಕದ ಜನರು ಧನ-ಕನಕ ಸಂಗ್ರಹಿಸುವರು. ಧನಕನಕಗಳಿಗೆ ಬಹಳ ಬೆಲೆಯುಂಟು. ಅವು ಆಪತ್ತಿನ ಕಾಲದಲ್ಲಿ ಪ್ರಯೋಜನಕ್ಕೆ ಬರುವುವು, ಎಂದು ಅವರ ಲೆಕ್ಕಾಚಾರ. ಹುಚ್ಚನೆನಿಸುವವನಿಗೆ ನಾಳೆ, ನಾಳೆಯಾಚಿನ ವಿಚಾರವಿಲ್ಲ. ಕನಕ ಕಬ್ಬಿಣದಂಥ ಧಾತು ಮಾತ್ರ, ಎಂದು ಅವನು ಅದನ್ನು ಕೊಂಡು ಬಚ್ಚಿಡುವುಲ್ಲ. ಲೋಕದ ಜನರಿಗೆ, ಪ್ರಕೃತಿಯಿಂದ ಅಂದರೆ ಸತ್ತ್ವ, ರಜಸ್ಸು ಮತ್ತು ತಮಸ್ಸು ಗುಣಗಳಿಂದ, ಸುಖಸಂಗ, ಕರ್ಮಸಂಗ, ಅಜ್ಞಾನ-ನಿದ್ರಾಸಂಗವಾಗುವವು. ಪ್ರಕೃತಿಯ ವ್ಯಕ್ತರೂಪಗಳಾದ ಗುಣಗಳಿಂದಾಗಿ ಅವನಲ್ಲಿ ಆಶೆ, ರಾಗದ್ವೇಷಗಳುಂಟಾಗುವವು. ಒಂದು ವಸ್ತು ಪ್ರಿಯಕರವಾಗುವುದೇ ರಾಗ. ವಸ್ತು ಅಪ್ರಿಯವೆನಿಸುವುದೇ ದ್ವೇಷ. ಇಂಥ ಪ್ರಕೃತಿಯಿಂದ ಉಂಟಾಗುವ ಸ್ವಭಾವದಿಂದ ಲೋಕಾಚಾರ ನಿರ್ಧರಿಸಲ್ಪಡುತ್ತದೆ. ಪ್ರಕೃತಿಯ ಗೊಡವೆ ಬಿಟ್ಟವನಿಗೆ ಲೋಕಾಚಾರ-ವಿರೋಧಿ ಎನ್ನುವರು. ಇದನ್ನೇ ಸಾಮಾನ್ಯರು 'ಹುಚ್ಚುತನ'

ಎನ್ನುವರು, ಪ್ರಕೃತಿ ಪುರುಷನ ವ್ಯಕ್ತರೂಪ. ಪುರುಷನು ಸಾಕ್ಷಿಯಾಗಿ ಇರುವನು. 'ಹುಚ್ಚು' ಇಲ್ಲದೆ', ಇದು ಪ್ರಕೃತಿ; ಪುರುಷ ಬೇರೆ,' ಎಂದು ಕಂಡು ಹಿಡಿಯಲಾರರು. ಪ್ರಕೃತಿಯ ಮಾಯೆಯನ್ನು ಮೀರಿದಾಗ, ಪ್ರಕೃತಿಯು ಇತಿಮಿತಿ ಗುರುತಿಸಿ, ಅದರಲ್ಲಿ ಸಿಲುಕದೆ ಪಾರುಗಾಣಬಹುದು.

ಲಂಡಿ

ಜನನಮರಣಮುಲನು ಸ್ವಪ್ನಸುಷುಪ್ತುಲು, ಜಗಮುಲುಂಡು ನೆಂಡಜಿಲಮುಲೆವಲೆ,
ನರುಡು ಜಗಮುನನುಟ ನಗುಬಾಟುಕಾದೊಕೋ ! ವಿಶ್ವದಾಭಿರಾಮ ವಿನುರ ವೇಮ.

ಜನನ ಮರಣವೆಲ್ಲ ಸ್ವಪ್ನ ನಿದ್ರೆಯಂತೆ.
ಭೂಮಿ ಮೇಲೆ ತೋರ್ಪ ಬಿಸಿಲು ಗುದುರೆ.
ನರನು ಜಗಕಂಟಲು ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ

ಜನನ-ಮರಣಗಳೆಂದರೆ ಏನು ?. ಜನನ ಮರಣಗಳು ಉಂಟಾಗುವುದು ಯಾರಿಗೆ ಮಾನಸಿಕ ಶರೀರ ಮತ್ತು ಭೌತಿಕ ಶರೀರಗಳ ಸಮನ್ವಯವೇ ಜನನ. ಯಾವಾಗ ಈ ಹೊಂದಾಣಿಕೆ ತಪ್ಪುವುದೋ ಆಗ ಮರಣ. ಮುಪ್ಪು ಅಡರಿದಾಗ ಭೌತಿಕ ಅಂಗಾಂಗಗಳು ಸ್ಥೂಲವಾಗುತ್ತ ಹೋಗುತ್ತವೆ. ಯಾವಾಗ ಮಾನಸಿಕ ಅಲೆಗಳು ಮತ್ತು ಭೌತಿಕ ಶರೀರದ ಅಲೆಗಳಲ್ಲಿ ವಿಷಮತೆಯಾಗುವುದೋ ಅದೇ ಸಾವೆನಿಸುವುದು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ, ಹುಟ್ಟು ಸಾವಿನ ವಿವರ ಕೊಡುವುದು ಹೀಗೆ.: "ಎಲೆ ಅರ್ಜುನ, ಪ್ರಾಣಿಗಳು ಹುಟ್ಟುವದಕ್ಕೆ ಮೊದಲು ವ್ಯಕ್ತವಾಗುವುದಿಲ್ಲ, ಮಧ್ಯದಲ್ಲಿ ಹುಟ್ಟಿದ ಮೇಲೆ ವ್ಯಕ್ತವಾಗುತ್ತವೆ, ನಾಶವಾದ ಮೇಲೆ ಕೂಡ ವ್ಯಕ್ತವಾಗುವುದಿಲ್ಲ; ಈ ವಿಷಯದಲ್ಲಿ ಶೋಕವೇನು ?" "ಮನುಷ್ಯನು ಹೇಗೆ ಹಳೆಯ ಬಟ್ಟೆಗಳನ್ನು ಬಿಟ್ಟು ಬೇರೆ ಹೊಸ ಬಟ್ಟೆಗಳನ್ನು ತೆಗೆದುಕೊಳ್ಳುತ್ತಾನೋ, ಹಾಗೆಯೇ ದೇಹವನ್ನು ಹೊಂದಿರುವ ಆತ್ಮನು ಜೀರ್ಣವಾದ ಶರೀರಗಳನ್ನು ಬಿಟ್ಟು, ಬೇರೆ ಹೊಸ ಶರೀರಗಳನ್ನು ಹೊಂದುತ್ತಾನೆ."

ಈ ರೀತಿ ನೋಡಿದಾಗ, ಜನನವು ಸ್ವಪ್ನದಂತೆ ಎನ್ನಿಸುವದು. ಏಕೆಂದರೆ ಸ್ವಪ್ನದಲ್ಲಿ ಕಾಣಿಸಿದ ವಸ್ತುಗಳು ಸ್ವಪ್ನಚಿತ್ತದಲ್ಲಿ ಉಂಟಾದ ಭಾವಗಳಷ್ಟೇ. "ಅವು ಜಾಗ್ರತದಲ್ಲಿ ಇರುವುದಿಲ್ಲ. ಜನನವು ಸಹ ಅವಿದ್ಯೆಯ ಭಾವವಷ್ಟೇ. ಆತ್ಮನಿಗೆ ಹುಟ್ಟು ಎಂಬುದಿಲ್ಲ. ಅವನು ಅಜ, ನಿತ್ಯ. ಆದರೂ ನಾವು 'ಅವನು' ಹುಟ್ಟುವನು, ಎನ್ನುತ್ತೇವೆ. ಮರಣವು ನಿದ್ರೆಯಂತೆ. ಮರಣಾನಂತರ ಇಲ್ಲಿ ಏನು ನಡೆಯಿತೆಂಬುದು ಗೊತ್ತಾಗುವುದಿಲ್ಲ. ನಿದ್ರೆಯಲ್ಲಿ ಇರುವಾಗ ಸಹ, ಸುತ್ತಲೂ ಏನು ನಡೆಯುವುದೆಂಬುದು ಗೊತ್ತಾಗುವದಿಲ್ಲ. ನಿದ್ರೆ ಸ್ವಪ್ನಗಳು ಭೂಮಿಯ ಮೇಲೆ ಕಾಣುವ ಬಿಸಿಲುಗುದುರೆಯಂತೆ. ಅದು ಹೇಗೆ ಇದೆಯೆಂದು ಕಾಣುವುದೋ, ಹಾಗೆ ಇಲ್ಲ. ಅಂದ ಮೇಲೆ ಮನುಷ್ಯ, ಲೋಕ ಬುದ್ಧಿಯಲ್ಲಿ ಮೈಮರೆತು ಹೋಗುವದು ಹಾಸ್ಯಕರೆ ಪ್ರಸಂಗವಲ್ಲವೇ ?.

ಆ೧೫

ಛಾಯನೊಸಗುಚಿಟ್ಟು ಸಾಧುವು ಬೋಧಟ್ಟು, ಲಡಗಿದರಿನಿಜೇರಿ ಪಡಯುವಚ್ಚು,
ನಟ್ಟುನಿಟ್ಟುದಾಟ ನದಿಪೋವುನಿದಿರಾದು, ವಿಶ್ವದಾಭಿರಾಮ ವಿನುರ ವೇಮ

ಛಾಯೆಯೀವ ಮರವು ಸಾಧುಗಳ ಬೋಧೆತೆರ.
ವಿನಯದಿ ಬಳಿ ಸೇರಿ ವರಿಸಬಹುದು.
ಅತ್ತ ಇತ್ತ ಆಲೆಯೆ, ಅದು ಹೋಗದಿದಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸಾಧುಗಳ ಬೋಧೆಯೂ ಛಾಯೆ ನೀಡುವ ಮರವೂ ಒಂದೇ ರೀತಿಯಾಗಿರುತ್ತವೆ. ಮರದನೆರಳು ಇಂಥವರಿಗೇ ಪ್ರಯೋಜನವಾಗಲಿ, ಎಂಬ ಪರಿಮಿತ ಉದ್ದೇಶದಿಂದ ಉಂಟಾಗುವುದಿಲ್ಲ ಅದು ತನ್ನಷ್ಟಕ್ಕೆತಾನು ಉಂಟಾಗುವುದು. ಸರ್ವಜನರಿಗೂಸಮನಾಗಿ ಅದರಿಂದ ಪ್ರಯೋಜನವುಂಟು. ಪ್ರಯೋಜನ ಪಡೆಯುಚ್ಛಿಸುವವನು. ಅದರ ಬಳಿ-ಹೋಗಬೇಕು. ಅದನ್ನು ಪಡೆಯುವ ಬುದ್ಧಿಯುಳ್ಳವನು ಅದರಡಿ ಹೋಗುವನು. ಹಲವರು ಅಂಥ ಬುದ್ಧಿ ಇಲ್ಲದೆ ಮರದಡಿ ಹಾಯ್ದು ಹೋಗಬಹುದು. ಅವರೆಲ್ಲರಿಗೂ ಮರದ ತಣ್ಣೆಳಲಿನ ತಂಪು ಸವಿಯಲು ದೊರೆಯುವುದು. ಸಾಧುಗಳ ಬೋಧೆಯೂ ಅದೇ ತೆರ. ಅವರು ಬೋಧಿಸುತ್ತಿರುತ್ತಾರೆ. ಬೋಧೆ ತಿಳಿಯುವ ಬುದ್ಧಿಯವರೇ ಹೆಚ್ಚಾಗಿ ಅಲ್ಲಿ ಹೋಗುತ್ತಾರೆ. ಇತರರು ಹೋದರೂ ಆವರಿಗೆ ಬೋಧೆಯ ಪರಿಣಾಮ ಆಗುವುದು. ಸಾಧುಗಳ ಬೋಧೆ ಪಡೆಯಲು ವಿನಯವೊಂದೇ ಬೇಕಾದ ಅರ್ಹತೆ. ವಿನಯವಿದ್ದರೆ, ಸಾಧುಗಳ ಬೋಧೆಯನ್ನು ವರಿಸಬಹುದು.

ಸಾಧುಗಳೇ ಗಿಡ; ಅವರ ಬೋಧೆಯೇ ನೆರಳು. ಗಿಡವು ಇರುವ ಜಾಗದಲ್ಲೇ ಇರುತ್ತದೆ. ನೆರಳು ಅದರ ಸುತ್ತು ಕಾಲಕ್ಕೆ ಸರಿಯಾಗಿ ಸ್ಥಳಾಂತರವಾಗುವುದಾದರೂ, ನಿರ್ದಿಷ್ಟ ಪರಿಮಿತಿಯಲ್ಲಿ ಮಾತ್ರ. ಅತ್ತ ಹೋಗಿ ನೆರಳಿನ ತಂಪು ಸವಿಯಬೇಕು. ಅದನ್ನು ಳಿದು ಬೇರೆಡೆಗೆ ತಿರುಗಿ, ಅಕಾಲಕ್ಕೆ ಗಿಡದಬಳಿ ಬಂದರೆ ಗಿಡವು ಅಲ್ಲಿಯೇ ಇದ್ದರೂ, ನೆರಳು ಇರದೆ ಹೋಗಬಹುದು. ಸಾಧುಗಳ ಬೋಧೆಯೂ ಅದೇ ರೀತಿ. ಬೋಧ ಹೇಳುವಾಗ, ಬೋಧೆ ಸ್ವೀಕರಿಸಬೇಕು. ಸ್ಫುಟಗೊಂಡ ಕಾರಂಜಿಯಂತೆ ಬೋಧೆ ಬರುವದುಂಟು. ಅಕಾಲದಲ್ಲಿಬೋಧೆ ದೊರೆಯದೆ ಹೋಗಬಹುದು.

ಆ೧೬

ಛಾತ್ರಧರ್ಮಮೆರಿಗಿ ಚಕ್ಕನಿ ಭಕ್ತಿತೋ, ಗುರುನಿ ನೇಮ ಜೇಯ ಗುದಿರಿನವುಡೆ,
ಸರ್ವಮರ್ಮಮುಲನು ಜಕ್ಕಗಾವಿಡಿಪೋವು, ವಿಶ್ವದಾಭಿರಾಮ ವಿನುರ ವೇಮ.

ಛಾತ್ರ ಧರ್ಮವರಿತು, ಚೊಕ್ಕಭಕ್ತಿಯಿಂದ,
ಗುರುವ ಸೇವೆ-ಗೆಯ್ದು ಕುದುರಿದೊಡನೆ,
ಎಲ್ಲ ಮರ್ಮಗಳನು ಎಸೆದು ಹೋಗುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಪ್ರತಿಯೊಂದು ಜೀವಿಯೂ ಕೂಡ ಪೂರ್ಣವಾಗಲೇಬೇಕು. ಕೊನೆಗೆ ಎಲ್ಲರೂ ಪೂರ್ಣಾವಸ್ಥೆಯನ್ನು ಪಡೆಯುತ್ತಾರೆ. ನಾವು ಈಗ ಏನಾಗಿರುವೆವೋ ಅದು ನಾವು ಹಿಂದೆ ಇದ್ದುದರ ಮತ್ತು ಆಲೋಚಿಸಿದುದರ ಪರಿಣಾಮ. ನಾವು ಹೊರಗಿನಿಂದ ಸಹಾಯ ಪಡೆಯುವವಕ್ಕೆ ಇದೇನೂ ಅಡ್ಡಬರುವದಿಲ್ಲ. ಬಾಹ್ಯಪ್ರೇರಣೆ ನಮ್ಮಲ್ಲಿ ಹುದುಗಿರುವ ಶಕ್ತಿಯನ್ನು ಪ್ರಚೋದಿಸುವದು. ಹೊರಗಿನಿಂದ ಬೆಳಪಣಿಗೆಯನ್ನು ಪ್ರಚೋದಿಸುವ ಶಕ್ತಿಯು ಗ್ರಂಥಗಳಿಂದ ಬರುವದಿಲ್ಲ. ಆತ್ಮ ಪ್ರೇರಣೆ ಆತ್ಮದಿಂದ ಮಾತ್ರ ಸಾಧ್ಯ. ಈ ಪ್ರೇರಣೆ ಯಾರಿಂದ ಬರುವುದೋ ಅವನೇ ಗುರು. ಯಾರಿಗಾಗಿ ಈ ಉಪದೇಶವು ಕೊಡಲ್ಪಡುವುದೋ ಅವನೇ ಶಿಷ್ಯ.

ನಾವು ಎಲ್ಲಿಯ ವರೆಗೆ ಮಾನವಸ್ವಭಾವ ಹೊಂದಿರುವೆವೋ, ಅಲ್ಲಿಯ ವರೆಗೆ ದೇವರನ್ನು ಮಾನವನಲ್ಲಿ ಪೂಜಿಸಬಹುದೇ. ಗುರು ಪರಮಾತ್ಮನ ಅತ್ಯುತ್ತಮವಾದ ಆವಿರ್ಭಾವವೆಂದು ಆತನ ಮೇಲೆ ಮನಸ್ಸನ್ನು ಕೇಂದ್ರೀಕರಿಸಬೇಕು. ಛಾತ್ರಧರ್ಮ ಅರಿತು, ಯಮ-ನಿಯಮ-ಸ್ವಾಧ್ಯಾಯ ಇತ್ಯಾದಿ ಪಾಲಿಸಬೇಕು. ಚೊಕ್ಕ ಭಕ್ತಿಯಿಂದ ಗುರುವಿನ ಸೇವೆ ಮಾಡಬೇಕು. ಆಗ ಹೃದಯದ ಗಂಟು ಬಿಚ್ಚುತ್ತದೆ. ಮಾನವರೂಪಿ ಗುರುವಿನ ಚಿತ್ರ ಕರಗಿ ಹೋಗುವದು. ಆಕಾರ ಮಾಯವಾಗುವುದು. ನಿಜವಾದ ಪರಮಾತ್ಮ ಅಲ್ಲಿ ಉಳಿಯುವನು. ಎಲ್ಲ ಮರ್ಮಗಳೂ ವಿದಿತವಾಗುತ್ತವೆ. ಅವನು ಸರ್ವಜ್ಞನಾಗುತ್ತಾನೆ.

ಆ೧೭

ಚೆಡುಗುಣಂಬುಲೆಲ್ಲ ಜೇಪಟ್ಟ ಶಿಕ್ಷಿಂಚಿ, ಪರಮ ಪದವಿ ಸಿದ್ಧ ಪಡಗ ಜೂಪು,
ನಟ್ಟಗುರುನಿವೇಡಿ ಯಪರೋಕ್ಷಮುಂದಮು, ವಿಶ್ವದಾಭಿರಾಮ ವಿನುರ ವೇಮ.

ಕೆಡುಕು ಗುಣಗಳೆಲ್ಲ ಕೈಹಿಡಿದು ಶಿಕ್ಷಿಸಿ,
ಪರಮ ಪದವಿಯನ್ನು ಪ್ರತ್ಯಕ್ಷಿಸುವ,
ಅಂಥ ಗುರುವ ಬೇಡಿ, ಅಪರೋಕ್ಷವ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಕಾಗುಣಿತ ಹೇಳುವವನು ಗುರುವಲ್ಲ. ಯಾವನು ಆತ್ಮವನ್ನು ಆಶ್ಚರ್ಯದಂತೆ ಹೇಳುವನೋ ಅವನೇ ಗುರು. ಪರಮಪದವಿಯನ್ನು ಪ್ರತ್ಯಕ್ಷವಾಗಿ ತೋರಿಸಬಲ್ಲವನೇ ಗುರು. ಪರಮ ಪದವಿ ಯಾವುದು? ಪರಮಾತ್ಮನ ಪದವಿಗಿಂತ ಇನ್ನಾವುದು ಶ್ರೇಷ್ಠಪದವಿಯೆನ್ನಿಸೀತು? "ಗುರು ಪರಮಾತ್ಮನ ಅತ್ಯುತ್ತಮ ಆವಿರ್ಭಾವೆಂದು ಅವನ ಮೇಲೆ ಮನಸ್ಸನ್ನು ಕೇಂದ್ರೀಕರಿಸಬೇಕು. ಏಕಾಗ್ರತಾಶಕ್ತಿ ಅಲ್ಲಿ ಕೇಂದ್ರಿಕೃತವಾದರೆ, ಮಾನವ ರೂಪಿನ ಗುರುವಿನ ಚಿತ್ರ ಕರಗಿ ಹೋಗುವುದು. ಆಕಾರ ಮಾಯವಾಗುವುದು. ನಿಜವಾದ ಪರಮಾತ್ಮನು ಅಲ್ಲಿ ಉಳಿಯುವನು.

ಪರಮಪದವಿಯ ಬಗ್ಗೆ "ಒಬ್ಬನು ಇದನ್ನು ಆಶ್ಚರ್ಯದಂತೆ ಹೇಳುತ್ತಾನೆ. ಇನ್ನೊಬ್ಬನು ಇದನ್ನು ಆಶ್ಚರ್ಯದಂತೆ ಕೇಳುತ್ತಾನೆ. ಹೇಳುವವನೆ ಗುರು, ಕೇಳುವವನು

ಶಿಷ್ಯ. ಶಿಷ್ಯ ಶುದ್ಧಮನಸ್ಸುಹೊಂದಿರಬೇಕು. ಸಚ್ಛೀಲನಾಗಿರಬೇಕು. ಇಲ್ಲದೆ ಹೋದರೆ, ಗುರುವು ಅವನ ಕೆಡುಕ ಗುಣಗಳನ್ನೆಲ್ಲ ತ್ಯಜಿಸುವಂತೆ ಮಾಡುತ್ತಾನೆ. ಕೈ ಹಿಡಿದು ಶಿಕ್ಷಿಸುತ್ತಾನೆ. ಅಂಥ ಗುರುವನ್ನು ಹೊಂದಬೇಕು. ಅವರು ಮಾತ್ರ ಆತ್ಮಸಾಕ್ಷಾತ್ಕಾರ ಮಾಡಿಸಬಲ್ಲರು. ಇಂಥ ಗುರುಗಳ ಸಹಾಯದಿಂದ ಅಪರೋಕ್ಷವನ್ನು ಹೊಂದಬೇಕು.

೬೧೪

ಗುರುನಿ ಶಿಕ್ಷಲೇಕ ಗುರುತೆಟ್ಟಿ ಕಲುಗುನೋ, ಯಜುನಿಕ್ಕೈನ ವಾನಿಯಬ್ಬಕ್ಕೈನ,
ತಾಳಪುಜಿವಿಲೇಕ ತಲುಮೆಟ್ಟಿ ಲೂಡುನ, ವಿಶ್ವದಾಭಿರಾಮ ವಿನುರ ವೇಮ

ಗುರುವಿನ ಶಿಕ್ಷೆಯಿರದೆ, ಗುರು ತುದೊರೆವುದೆಂತು. ?
ಅಜನೆ ಇರಲಿ; ಅವನ ಅಪ್ಪನಿರಲಿ;
ಬೀಗದ ಕೈ ಇರದೆ ಬೀಗ ತೆರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಆಧ್ಯಾತ್ಮಿಕ ಸಾಧನೆಯಲ್ಲಿ ಮಾರ್ಗದರ್ಶನ ಮಾಡಲು ಗುರುವೊಬ್ಬ ಬೇಕೇ ಬೇಕು. ಆಧ್ಯಾತ್ಮಿಕ ಜ್ಞಾನವಾಗಬೇಕಾದರೆ, ಹೃದಯ ಗ್ರಂಥಿ ಬಿಚ್ಚಬೇಕು. ಹೃದಯಗ್ರಂಥಿ ಬಿಚ್ಚುವುದೆಂದರೆ ಜ್ಞಾನವು ಅಜ್ಞಾನದಮುಸುಕನ್ನು ಕೆಳೆದುಕೊಂಡು, ಪ್ರಕಾಶಗೊಳ್ಳುವುದೇ ಆಗಿದೆ. ಇದಕ್ಕೆ ಸಾಧನೆ ಬೇಕು. ಆದರೆ, ಸಾಧನೆಯ ಕಾಲದಲ್ಲಿ ಶುದ್ಧಮನಸ್ಸು, ನಿಜವಾದ ಜ್ಞಾನಾಕಾಂಕ್ಷೆ ಮತ್ತು ಸತತ ಪ್ರಯತ್ನಗಳು ತೀರ ಅವಶ್ಯಕ. ಇವೆಲ್ಲ ಸ್ಥಿರವಾಗಿ ಉಳಿಯುವಂತೆ ಸಾಧಕನು ನೋಡಿಕೊಳ್ಳಲು, ಒಳಗಿನ ಪ್ರೇರಣೆಯೊ ಬೇಕು; ಹೊರಗಿನ ಪ್ರೇರಣೆಯೂ ಬೇಕು. ಹೊರಗಿನ ಪ್ರೇರಣೆ ಬರುವದು ಗ್ರಂಥಗಳಿಂದಲ್ಲ. ಆತ್ಮದಿಂದ ಮಾತ್ರ. ಇಂಥ ಪ್ರೇರಣೆ ನೀಡುವವನೇ ನಿಜವಾದ ಗುರು.

ಗುರುವಿನ ಶಿಕ್ಷೆ ಇರದೆ ಜ್ಞಾನ ಲಭಿಸದು. ಹೃದಯ ಗ್ರಂಥಿ ಬೀಗವೆಂದು ತಿಳಿಯಿರಿ. ಆಗ ಗುರುವಿನ ಮಾರ್ಗದರ್ಶನವು ಅದನ್ನು ತೆರೆಯುವ 'ಕೈ' ಆಗುತ್ತದೆ. ಇದು ಸಕಲರ ವಿಷಯದಲ್ಲಿ ಸಮನಾಗಿ ಅನ್ವಯಿಸುತ್ತದೆ. ಸೃಷ್ಟಿಯ ಪಿತಾಮಹನಾದ ಅಜನಿಗೂ ಅಷ್ಟೇ; ಅವನ ಪಿತನಿಗೂ ಕೂಡ ಅಷ್ಟೇ. ಅರ್ಥಾತ್ ಈ ನಿಯಮಕ್ಕೆ ಯಾರೂ ಅಪವಾದವಲ್ಲ.

ಹೊಲಿಸಿ ನೋಡಿರಿ :-

"ಗುರು ಉಪದೇಶ ಇಲ್ಲದ ಮಂತ್ರ,
ಗುರು ಉಪದೇಶ ಇಲ್ಲದ ಕೈಯೆಗಳು।
ಉರಗನ ಉಪವಾಸದಂತೆ ಕಾಣಿರೋ ।"

—ಪುರಂದರದಾಸ

ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ ||ಪ||
ಪರಿ ಪರಿ ಶಾಸ್ತ್ರವನೋದಿದರೇನು? ವ್ಯರ್ಥವಾಯಿತು ಭಕುತಿ ||ಅ||

–ಮೋಹನದಾಸ

೬೧೯

ವೇದಮುಲ್ ಸದಿವಿಯು ವಿಶ್ವವೀಗುಟಕಾನಿ, ಯಧುಮುಗದಿನಿ ಬಡಿರಿ ಯಯ್ಯಾರೆಲ್ಲ.
ಬ್ರಹ್ಮಮಹಿಮದೆಲಿಸಿ ಬ್ರತಿಕಿನ ಬ್ರತುಕಯೂ, ವಿಶ್ವದಾಭಿರಾಮ ವಿನುರ ವೇಮ:

ವೇದಗಳನು ಓದಿ, ಒಣಜಂಭ ಪಡುವರು;
ಅಧೋಗತಿಗಿಳಿದರು, ಅಯ್ಯಾರೆಲ್ಲ.
ಬ್ರಹ್ಮಮಹಿಮೆಯರಿತು, ಬದುಕುತಿಹುದೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ವೇದ–ಮಂತ್ರಗಳು ಆ ಕಾಲದ ಜನರು ತಮಗೆ ಬೇಕಾದ, ಅನ್ನ, ಕುರಿ ದನಗಳ ಹಿಂಡು, ಅಪಾರ ಸಂತತಿ, ದೀರ್ಘ ಜೀವನಕ್ಕಾಗಿ ಅಗ್ನಿ, ಸೂರ್ಯ, ಉಷಾ, ಮರುತ್. (ಬಿರುಗಾಳಿ) ಪೃಥ್ವಿ, ಅಪ್, ನದಿ; ವರುಣ, ಮಿತ್ರ, ಇಂದ್ರ ಇತ್ಯಾದಿ ದೇವತೆಗಳಿಗೆ (ನಿಸರ್ಗ ಶಕ್ತಿಗಳಿಗೆ ದೇವತ್ವಆರೋಪಿಸಿ) ಸಲ್ಲಿಸಿದ ಪ್ರಾರ್ಥನೆಗಳಿವೆ. ಇವುಗಳ ಸಾರವೆಂದರೆ ದೇವರು ಬಾಹ್ಯದಲ್ಲಿ ಅಂಟು. ಅನೇಕ ದೇವರುಂಟು. ಪ್ರತಿಫಲದ ಪಡೆಯುವುದೇ ಪ್ರಾರ್ಥನೆಯ ಗುರಿ; ಎಂಬುದು. ಆರ್ಯರು (ಅಯ್ಯರು) ಕರ್ಮಫಲ ಹಿಂದೆ ಹೋಗ ಹಚ್ಚುವ ವೇದಗಳನ್ನು ಓದಿ ಒಣಜಂಭ ಪಟ್ಟು ಕೆಡುತ್ತಿರುವರು. ನಿಜವಾಗಿ ಯಾವುದನ್ನು ಅರಿತರೆ ನಿತ್ಯ ಆನಂದ ಉಂಟಾಗುವುದೋ ಅದು ಬ್ರಹ್ಮವಿದ್ಯೆ ಬ್ರಹ್ಮವಿದ್ಯೆಯೆಂದರೆ, "ದೇವರು ಹೃದಯದಲ್ಲಿ ಇರುವನು; ಅವನು ಒಬ್ಬನೇ ಒಬ್ಬನು; ಕರ್ಮಫಲ ತೊರೆಯುವುದರಿಂದ ಮಾತ್ರ ಅವನನ್ನು ಪಡೆಯಬಹುದು. ಎಂದು ಬ್ರಹ್ಮಮಹಿಮೆ ಅರಿತು ಬದುಕುವುದು

ಹೋಲಿಸಿ ನೋಡಿರಿ :

"ಈ ಹದಿನೆಂಟು (ಹದಿನಾರು ಋತ್ವಿಕ್ಕುಗಳು, ಯಜಮಾನ ಮತ್ತು ಅವನ ಪತ್ನಿ ಎಂಬ ಹದಿನೆಂಟು ಋಜ್ಞ್ಞರೂಪಗಳು ನಾಶವಾಗುವವುಗಳು. ಮತ್ತು ಅದೃಢವಾದುವು; ಅವುಗಳಲ್ಲಿ ಕೀಳು ತರದ ಕರ್ಮವು ಉಕ್ತವಾಗಿರುತ್ತದೆ. ಇದು ಶ್ರೇಯಸ್ಸೆಂದು ಯಾವ ಮೂಢರುಸಂತೋಷ ಪಡುತ್ತಾರೊ, ಅವರು ಪುನಃ ಜರಾಮೃತ್ಯುಗಳನ್ನುಹೊಂದುತ್ತಾರೆ."

" ಅವಿದ್ಯೆಯ ಮಧ್ಯದಲ್ಲಿ ಇರುವವರಾಗಿ, ತಾವೇ ಧೀರರು ಪಂಡಿತರು ಎಂದು ತಿಳಿದುಕೊಂಡು, ಪೀಡಿಸಲ್ಪಡುತ್ತ, ಕುರುಡನು ಕರೆದುಕೊಂಡು ಹೋಗುತ್ತಿರುವ ಕುರುಡರಂತೆ ಈ ಮೂಢರು ಸುತ್ತುತ್ತಿರುವರು.

" ಅವಿದ್ಯೆಯಲ್ಲಿ ಬಹುಪ್ರಕಾರವಾಗಿ ಇರುವವರಾಗಿ, ನಾವು ಕೃತಾರ್ಥರು ಎಂದು ಈ ಅಜ್ಞಾನಿಗಳು ಅಭಿಮಾನ ಪಡುತ್ತಾರೆ. ಕರ್ಮಿಗಳು ಕರ್ಮಫಲದ ಆಸಕ್ತಿಯಿಂದ ಇದನ್ನು ತಿಳಿಯುವದಿಲ್ಲ; ಆ ಕಾರಣದಿಂದ ದುಃಖಾರ್ತರಾಗಿ ಕರ್ಮಫಲವನ್ನು ಕ್ಷೀಣ ಮಾಡಿಕೊಂಡವರಾಗಿ ಬೀಳುವರು.

"ಪ್ರಮತ್ತರಾದ ಮೂಢರು, ಇಷ್ಟಾಪೂರ್ತಗಳನ್ನು ಪ್ರಧಾನವೆಂದು ತಿಳಿಯುವವರಾಗಿ ಬೇರೆ ಶ್ರೇಯಃ ಸಾಧನವನ್ನು ತಿಳಿಯುವದಿಲ್ಲ. ಸ್ವರ್ಗದ ಮೇಲಿರುವ ಭೋಗ ಸ್ಥಾನದಲ್ಲಿ ಕರ್ಮಫಲ ಅನುಭವಿಸಿ, ಅವರು ಈ ಲೋಕವನ್ನೋ ಅಥವಾ ಇನ್ನೂ ಹೀನತರವಾದುದನ್ನೋ ಪ್ರವೇಶಿಸುತ್ತಾರೆ".

(ಮುಂಡಕ ಉಪನಿಷತ್. ೧-೨-೭ ರಿಂದ ೧೦.)

೮೨೦

ವಿಮಲ ದೃಷ್ಟಿಬೂನಿ ವಿಜ್ಞಾನ ಮಂದಮಿ ದಮಮು ಬಾಯುದಗುನೆ? ತಥ್ಯಮುಗನು ದಮಮು ಮೀರಿನಂತ ದತ್ತ್ವಜ್ಞುಡಗುನಯಾ, ವಿಶ್ವದಾಭಿರಾಮ ವಿನುರ ವೇಮ.

ವಿಮಲ ದೃಷ್ಟಿಯಿಂದ ವಿಜ್ಞಾನ ಹೊಂದದೆ,
ನಿಶೆಯು ಕಳೆಯಲುಂಟೆ ? ನಿಜವಾಗಿಯು.
ತಮುವ ಮೀರಲಾಗಿ, ತತ್ತ್ವಜ್ಞನಾಗುವ.
ವಿಶ್ವದಾಭಿರಾಮ ಕೇಳು ವೇಮ.

ವಿಮಲ ಎಂದರೆ 'ವಿಗತಃ ಮಲಂ ಯಸ್ಮಾತ್ ಸಃ' 'ಯಾವುದರಿಂದ ಮಲ-ಕೊಳೆ-ಹೊಲೆ ಆರ್ಥಾತ್ ಕೇಳು ವಿಚಾರಗಳು ಹೋಗಿವೆಯೋ ಅದು. ವಿಮಲ ದೃಷ್ಟಿಯೇ ಶುದ್ಧ ದೃಷ್ಟಿ. ಹೊಗೆ ಆವರಿಸಿದ ಕೆಂಡ ಅಶುದ್ಧ; ಹೊಗೆ ಕಳೆದ ಕೆಂಡ ಶುದ್ಧ. ಅದೇರೀತಿ, ಚಿತ್ತವೃತ್ತಿಗಳು ಮುತ್ತಿದ ಮನಸ್ಸು ಅಶುದ್ಧ, ಮಲ. ಚಿತ್ತವೃತ್ತಿಗಳು ಇಲ್ಲವಾದ ಮೇಲೆ ಅದೇ ಶುದ್ಧ; ವಿಮಲ.

'ಸತ್ಯ'ದ ಸ್ವರೂಪದ ಅರಿವು ಜ್ಞಾನ. ಈ ಅರಿವು ವಿಶೇಷವಾಗಿ, ಸಾಕಷ್ಟಾಗಿ ಇರುವುದೇ ವಿಜ್ಞಾನ.

'ಸತ್ಯ' ಜ್ಞಾನವು ಜ್ಯೋತಿ ಪ್ರಕಾಶದಂತೆ, ಎಂದು ವೇದಾಂತಿಗಳ ಹೋಲಿಕೆಯ ನುಡಿ. ಬ್ರಹ್ಮ (ಸತ್ಯ) 'ಜ್ಯೋತಿರ್ಮಯ' ಎನ್ನುವ ಶ್ರುತಿವಚನವೇ, ಇದಕ್ಕೆ ಅವರು ನೀಡುವ ಪ್ರಮಾಣ. ಸತ್ಯದ ಬಗೆಗೆ ಅರಿವು ಇಲ್ಲದಿರುವುದು ಅಜ್ಞಾನ; ಅವಿದ್ಯೆ ಅ-ಜ್ಞಾನವನ್ನು ನಿಶೆಗೆ ಹೊಲಿಸುತ್ತಾರೆ. ಅಂದ ಮೇಲೆ ನಿಶೆಯನ್ನು ಕಳೆಯುವ ಜ್ಯೋತಿಗೆ ಜ್ಞಾನವನ್ನು ಹೋಲಿಸುವುದು; ತುಂಬಾ ಅರ್ಥಪೂರ್ಣವಾಗಿದೆ. ತಮೋಗುಣದಿಂದ ಪ್ರಮಾದ, ಮೋಹ, ಅಜ್ಞಾನ ಉಂಟಾಗುತ್ತದೆ. ತಮೋಗುಣವನ್ನು ಮೀರಿದಾಗ ಮಾತ್ರ, ತತ್ ಅಂದರೆ ಬ್ರಹ್ಮಜ್ಞಾನವಾಗುವುದು; ತತ್ವಜ್ಞನಾಗುವನು.

ಹೋಲಿಸಿ ನೋಡಿರಿ.

ಅಸತೋ ಮಾ ಸದ್ಗಮಯ;
ತಮಸೋ ಮಾ ಜ್ಯೋತಿರ್ಗಮಯ.
ಮೃತ್ಯೋರ್ಮಾ ಅಮೃತಂ ಗಮಯ.

" 'ಅಸತ್' ಅಂದರೆ 'ಸತ್' ಅಲ್ಲದ ಪ್ರಪಂಚವು 'ಸತ್' ದಲ್ಲಿ ಏಕವಾಗಲಿ. ಅಜ್ಞಾನಾಂಧಕಾರವು ನೀಗಿ, ಜ್ಯೋತಿಯೇ ಎಲ್ಲೆಡೆ ಉಂಟಾಗಲಿ, ಮತ್ಯುವು ಇಲ್ಲವಾಗಿ, ಎಲ್ಲವೂ ಅಮೃತವೇ ಆಗಲಿ. "

೮೨೧

ಮುಗುರಿಲೋನ ನೆನ್ನ ಮುಂದು ಗಾನಗಲೇಕ, ನರಕಮುನಕ ಬೋವು ನರುಲುಕಲರು, ಮುಗುರು ಕಂದನಟ್ಟ ಮೂಲಮೂರ್ತಿಯೊಕಂಡೆ, ವಿಶ್ವದಾಭಿರಾಮ ವಿನುರ ವೇಮ.

ಮೂವರೊಳಗೆ ಹಿಂದು ಮುಂದು ಗಾಣದಿದ್ದು,
ನರಕಕ್ಕೆ ಹೋಹರು ನರಮನುಜರು.
ಮೂವರಿಗೂ ಸಿಗದ ಮೂಲಮೂರ್ತಿಯೊಬ್ಬ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ, ವಿಷ್ಣು, ಮಹೇಶ್ವರ (ಶಿವ) ಎಂಬ ಮೂವರೂ ಒಬ್ಬನೇ ಪುರುಷನ, ವ್ಯಕ್ತರೂಪಗಳು. ಇವೆಲ್ಲ ಕೇವಲ ಪ್ರಕೃತಿಯಿಂದ ಉಂಟಾಗಿವೆಯಷ್ಟೇ. ವಿಶಿಷ್ಟವಾದ (ಸತ್ತ್ವ, ರಜಸ್ಸು, ತಮಸ್ಸು,) ಗುಣಾತ್ಮಕವಾದ ಪ್ರಕೃತಿಯ ಅಭಿವ್ಯಕ್ತಿಗೆ ಸಾಕ್ಷಿಯಾಗಿ ಇರುವುದರಿಂದ, ಪುರುಷನಿಗೆ ಈ ರೀತಿಯ ವಿಶೇಷಗುಣಗಳು ಉಂಟಾಗಿವೆ. ಸತ್ತ್ವಗುಣವು ಪ್ರಭಾವಯುತವಾದ ಪ್ರಕೃತಿಯ ಅಭಿವ್ಯಕ್ತಿಗೆ ಸಾಕ್ಷಿಯಾದ ಪುರುಷನಿಗೆ ,ಬ್ರಹ್ಮ' ಎನ್ನುತ್ತಾರೆ. 'ರೆಜಸ್' ಗುಣ ಪ್ರಾಬಲ್ಯದ ಪ್ರಕೃತಿಯ ಅಭಿವ್ಯಕ್ತಿಗೆ ಸಾಕ್ಷಿಯಾದ ಪುರುಷನಿಗೆ ವಿಷ್ಣು ಎನ್ನುತ್ತಾರೆ. ತಮಸ್ ಗುಣಪ್ರಾಬಲ್ಯದ ಪ್ರಕೃತಿಯ ಅಭಿವ್ಯಕ್ತಿಗೆ ಸಾಕ್ಷಿಯಾದ ಪುರುಷನಿಗೆ ಮಹೇಶ್ವರ (ಶಿವ) ಎನ್ನುತ್ತಾರೆ ಬ್ರಹ್ಮ, ವಿಷ್ಣು, ಮಹೇಶರು ಬೇರೆ ಬೇರೆಯವರಲ್ಲ. ಏಕಮೇವ ಸದ್ವಸ್ತುವಿನ ಭಿನ್ನ ಭಿನ್ನ ಸ್ಥಿತಿಯ ಅಭಿವ್ಯಕ್ತಿಗಳಷ್ಟೇ. ಈ ಮೂರು ಸ್ಥಿತಿಗಳಲ್ಲಿಯೂ ಸಾಕ್ಷಿಯಾಗಿರುವ ಮೂಲ ಪುರುಷನೊಬ್ಬನೇ.'

ನಾವು 'ಸಗುಣ ಬ್ರಹ್ಮ'. ಎನ್ನುವುದು, ಈ ಮೂರು ಸ್ಥಿತಿಗಳಲ್ಲಿಯ ಅಭಿವ್ಯಕ್ತಿಗಳಿಗೆ. ಪ್ರಪಂಚದ ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳು ಕ್ರಮವಾಗಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಈ ನಾಮಗಳಿಂದ ನಡೆಯುತ್ತಿದೆ. ಅದಕ್ಕಾಗಿಯೇ ಪ್ರಪಂಚವನ್ನು ಹರಿಹರಾತ್ಮಕವೆನ್ನುತ್ತಾರೆ. ವಿಷ್ಣು-ಶಿವರ ಸಂಯುಕ್ತ ರೂಪದಲ್ಲಿ ಪ್ರಪಂಚವನ್ನು ಕಾಣುತ್ತಾರೆ. ಹರಿ, ಹರ ಆರ್ಥಾತ್ ವಿಷ್ಣು, ಶಿವರ ಲೀಲೆಯು 'ಕೃತ ವಸ್ತು'ಗಳೆಲ್ಲದರಲ್ಲಿಯೂ ಸಾಗಿರುವುದು. ಸಮತೆಯ ಸ್ಥಿತಿಯಲ್ಲಿ ಕಾರ್ಯವಿಲ್ಲ. ಸಮತೆ ಮುರಿದಾಗ ಕಾರ್ಯ ವ್ಯಕ್ತವಾಗುವುದಷ್ಟೇ. ನಮ್ಮ ಜೀವನದಲ್ಲಿಯೂ ಅದೇ ರೀತಿ. ಹರಿ-ಹರರ ಕಾಳಗ ನಡೆದಿರುತ್ತದೆ. ಎಲ್ಲಿಯ ವರೆಗೆ ಹರಿ ವಿಜಯಿಯೋ, ಅಲ್ಲಿಯ ವರೆಗೆ ಮನದಲ್ಲಿ ಆಕಾಂಕ್ಷೆ ಕುತೂಹಲಗಳು ಹೆಚ್ಚು. ಜೀವನ ಕಾರ್ಯವೆಲ್ಲ ವ್ಯಕ್ತವಾಗುವವು. ಹರನ ಗೆಲವು ಪ್ರಾರಂಭವಾಯಿತೋ, ಜೀವನದ ತಾಳ ಲಯವಾಗುತ್ತದೆ. ಹರ ಪ್ರತಿಷ್ಠಿತನಾದರೆ, ಚತುರತೆ, ಸೆಣಸಾಟ, ಪಾಂಡಿತ್ಯ, ನಾಮರೂಪ, ಕೀರ್ತಿ, ಹೆಮ್ಮೆ, ವಂಶ, ಸಂತತಿ, ಜ್ವರೋನ್ಮಾದಗಳಿಲ್ಲ, 'ಪೂರ್ಣವಿರಾಮ' ಹೊಂದಿ, ಮರಣದಲ್ಲಿ ಹೆಪ್ಪು ಗಟ್ಟಿ, ತಣ್ಣಗಾಗುವವು. ಇದೆಲ್ಲವನ್ನು ಗುರುತಿಸದವರು, ನರಕಯಾತನೆಯ ಮನ ಹೊಂದುವರು.

೮೨೨

ಭಾರ್ಯಮೀದನಾಶ ಪರಗ ಬುರುಷುನಕು, ವಂಗನಿಮೀದನಾಶ ಮುಗುವಕುಂಡು,
ಶಿವುನಿಮೀದನಾಶ ಸಿದ್ದುನಕುಂಡುರಾ, ವಿಶ್ವದಾಭಿರಾಮ ವಿನುರ ವೇಮು.

ಭಾರ್ಯೆ ಮೇಲೆ ಆಶೆ ಪಡುವ ಪುರುಷ ಮತ್ತೆ.
ಗಂಡನ ಮೇಲಾಶೆ ಹೆಂಡತಿಗಿದೆ.
ಶಿವನ ಮೇಲಿನಾಶೆ ಸಿದ್ಧ ಜನರಿಗುಂಟು.
ವಿಶ್ವದಾಭಿರಾಮ ಕೇಳು ವೇಮು.

ಗಂಡನಿಗೆ ಹೆಂಡತಿಯ ಮೇಲೆ ಆಸೆಯುಂಟು. ಏತಕ್ಕಾಗಿ? ಗಂಡನಾದವನು ತನ್ನ ಹೃದಯದ ಹಸಿವು ಹಿಂಗಿಸುವನೆಂದು. ಹಾಗಿಲ್ಲದೆ ಹೋದರೆ ಹೆಣ್ಣಿಗೆ ಗಂಡಿನ ಮೇಲಿನ ಆಸೆಯೇ ಇರುವುದಿಲ್ಲ. ಅದೇ ರೀತಿ, ಗಂಡನು ಹೆಂಡತಿಯ ಮೇಲೆ ಆಸೆ ಪಡುವುದು, ಅವಳು ತನ್ನ ಹೃದಯದ ಹಸಿವು ಹಿಂಗಿಸುವುಳೆಂದೇ. ಹೃದಯವೆಂದರೆ ಮನಸ್ಸು ತಾನೇ. ಗಂಡು ಹೆಣ್ಣು ಪರಸ್ಪರ ಆಸೆಬಡುವುದು, ಹೇಗೆ ಅವರವರ ಮನಸ್ಸಿನ ಸ್ಥಿತಿಯೋ, ಅದೇ ರೀತಿ, ದೇಹಾಕರ್ಷಣೆಯ 'ಕಾಮ', 'ಆಸಕ್ತಿ'ಯ ಸ್ಥಿತಿ ಮೀರಿದ ಸಿದ್ಧ ಪುರುಷರು 'ಪ್ರೇಮ' 'ಭಕ್ತಿ' ಯ ಸ್ಥಿತಿಗೇರಿರುತ್ತಾರೆ. ಅವರ ಮನಸ್ಸು ಸರ್ವಸಮತೆಯನ್ನು ಇಚ್ಛಿಸುವುದು. ಸಮತೆಯಲ್ಲಿ ಕಾರ್ಯವಿಲ್ಲ. ಎಲ್ಲ ಲಯವಾಗಿ ಉಂಟು. ಇದುವೇ ಶಿವ ಸ್ಥಿತಿ. ಸಿದ್ಧಪುರುಷರಿಗೆ ಶಿವನ ಮೇಲಿನಾಶೆ ಉಂಟಾಗುವುದು ಸಹಜ. ಶಿವನೇ ಭವ ಹರ ತಾನೇ.

(ಹೋಲಿಸಿ ನೋಡಿರಿ :

" ನ ವಾ ಅರೆ ಪತ್ಯುಃ ಕಾಮಾಯಾ ಪತಿ ಪ್ರಿಯೋ ಭವತಿ ಆತ್ಮನಸ್ತು ।
ಕಾಮಾಯಾ ಪತಿ ಪ್ರಿಯೋ ಭವತಿ. ನ ವಾ ಅರೆ ಪುತ್ರಸ್ಯ ಕಾಮಾಯಾ |
ಪುತ್ರೋ ಪ್ರಿಯೋ ಭವತಿ ಆತ್ಮನಸ್ತು ಕಾಮಾಯಾ ಪುತ್ರೋ ಪ್ರಿಯೋ |
ಭವತಿ ನ ವಾ ಅರೆ ಸರ್ವಸ್ಯ ಕಾಮಾಯಾ ಸರ್ವಂ ಪ್ರಿಯಮ್ |
ಭವತಿ ಆತ್ಮನಸ್ತು ಕಾಮಾಯಾ ಸರ್ವಮ್ ಪ್ರಿಯಮ್ ಭವತಿ ||

ಪತಿಯ ಆಶೆಯಿಂದ ಪತಿಯು ಪ್ರಿಯಕರನಾಗುವದಿಲ್ಲ. ಪತಿಯು ಹೃದಯದ ತೃಷೆ ತಣಿಸುವುದರಿಂದ ಪ್ರಿಯಕರನೆನಿಸುವನು. ಪುತ್ರನ ಆಶೆಯಿಂದ ಪುತ್ರನು ಪ್ರಿಯಕರನೆನಿಸುವುದಿಲ್ಲ. ಪುತ್ರನು ಹೃದಯ ತೃಷೆ ತಣಿಸುವುದ ರಿಂದ ಪ್ರಿಯಕರನೆನಿಸುವನು. ಅದೇ ರೀತಿ, ಎಲ್ಲವನ್ನೂ ಬಯಸುವುದರಿಂದ, ಎಲ್ಲವೂ ಪ್ರೀಯಕರವಾಗುವುದಿಲ್ಲ. ಆದರೆ, ಹೃದಯ ತೃಷೆಯನ್ನು ತಣಿಸುವುದರಿಂದ. ಎಲ್ಲವೂ ಪ್ರಿಯಕರವಾಗುತ್ತದೆ."

೮೨೩

ನೇಯಿವೆನ್ನಗಾಚಿ ನೀಡನೇಯುಂಚಿನ, ಪೇರಿಗಟ್ಟಪಡುನು ಪೆರಗು ರೀತಿ.
ಪೋರಿ, ಪೋರಿ ಮದಿನಿ ಬೋನಿಕಪಟ್ಟುಮು, ವಿಶ್ವದಾಭಿರಾಮ ವಿನುರ ವೇಮ.

ನವನೀತ ಕಾಯಿಸಿ ನೆರಳಿನಲ್ಲಿರಿಸಲು;
ಮುತ್ತೆ ಗಟ್ಟಿಯಾಯ್ತು; ನೊಸರಿನಂತೆ,
ಹೋರಿ, ಹೋರಿ ಮನಸು ಹೋಗದಂತೆ ಕಟ್ಟು,
ವಿಶ್ವದಾಭಿರಾಮ ಕೇಳು ವೇಮು.

ಮಾನುಷ ಎಂದು ನರಜೀವಿಯನ್ನು ಕರೆಯುವುದೇಕೆ? ಮಾನುಷ ಎಂದರೆ ಮಾನಸಿಕ ಬೆಳವಣಿಗೆ ಹೊಂದಿದವನು ಎಂದರ್ಥ. ಈ ಸ್ಥಿತಿಯಲ್ಲಿ, ಘಟಶರೀರವು ತನಗೊಂದು ಮನಸ್ಸು ಇದೆ; ಮಾನಸಿಕ ಶಕ್ತಿ ಇದೆ; ತನ್ನ ಗುರಿ ಉದ್ದೇಶ ಸಾಧನೆಗಳಿಗಾಗಿ, ಅದರ ಪ್ರಯೋಜನ ಪಡೆಯಬಹುದು; ಎಂದು ತಿಳಿದಿರುವುದು. ಇದಕ್ಕೂ ಕೆಳಗಿನ ಅವಸ್ಥೆಯಲ್ಲಿ ಮನಸ್ಸು ಪರಮ ಅಹಂ ತತ್ತ್ವದ ಮಾರ್ಗದರ್ಶನದಂತೆ ನಡೆದಿರುವುದು. ಆದರೆ ಚಿತ್ತವು ವಿಕಾಸದ ಒಂದು ಸ್ಥಿತಿ ತಲುಪುವುದು. ಆಗ ಘಟ ಮನಸ್ಸು ತನ್ನ ಇಚ್ಛೆಗೆ ಅನುಸಾರವಾಗಿ ಮಾರ್ಗ ಕಂಡುಕೊಳ್ಳುತ್ತದೆ. ಈ ಘಟ ಮನಸ್ಸು ಸೂಕ್ಷ್ಮದ ಕಡೆಗೆ ಹೋಗಬಹುದು. ಅಭಿವೃದ್ಧಿ ಹೊಂದಿದ ಮನಸ್ಸು ಉಳ್ಳವನೇ ಮಾನುಷ.

ಮನುಷ್ಯನ ಚಿತ್ತ ಸ್ಥೂಲ ಪಂಚಮಹಾಭೂತಗಳ ಸ್ಥಿತಿಯನ್ನು ದಾಟಿ ಬಂದಿದೆಯಷ್ಟೇ. ಈ ಗತಿಯಲ್ಲಿ ಅದಕ್ಕೆ ಸಂಸ್ಕಾರಗಳು ಅಂಟಿಕೊಂಡಿರುತ್ತವೆ. ಅದರಿಂದ ಮನಸ್ಸಿನ ಸ್ವಭಾವವು ಹೊರಗೆ ಇಂದ್ರಿಯಗಳ ಮೂಲಕ ವಿಷಯಗಳತ್ತ ಹರಿಯುವುದೇ ಆಗಿದೆ. ಹರಿಯುವ ಮನಸ್ಸು ಶಾಂತವಾಗಿರುವುದಿಲ್ಲ. ಬೆಣ್ಣೆಯನ್ನು ಕಾಯಿಸಿ, ದ್ರವರೂಪಕ್ಕೆ ತಂದಾಗ, ಅದು ಕಾಯ್ದು ಹೊಯ್ದಾಡುತ್ತಿರುತ್ತದೆ. ಅದು ಉಷ್ಣತೆಯ ಸಂಗದಿಂದ ಹೊಯ್ದಾಟದ ಸ್ಥಿತಿ ಹೊಂದಿರುತ್ತದೆ; ಹರಿಯುವ ಅವಸ್ಥೆಯಲ್ಲಿ ಇರುತ್ತದೆ. ಉಷ್ಣತೆಯ ಸಂಗ, ಕ್ರಮೇಣ ಇಲ್ಲವಾಗಬೇಕಾದರೆ, ಅದನ್ನು ನೆರಳನಲ್ಲಿರಿಸಬೇಕು. ಆಗ ಅದು ಮತ್ತೆ ಗಟ್ಟಿಯಾಗುವುದು. ಅದೇ ರೀತಿ, ಬಾಹ್ಯ ವಿಷಯಸಂಗದಿಂದ ಮನಸ್ಸು ಹೊಯ್ದಾಡುತ್ತಿರುತ್ತದೆ; ಹರಿಯುತ್ತಿರುತ್ತದೆ. ಅದನ್ನು ಶಾಂತಗೊಳಿಸಿದರೆ, ನಿಶ್ಚಲವಾಗುವುದು. ಇದಕ್ಕಾಗಿ ಹೋರಾಟ ಬೇಕು. ವಿಕ್ಷೇಪಕಾರಕ ವೃತ್ತಿಗಳ ವಿರುದ್ಧ ಹೋರಾಟ ಸಾಗಿಸಬೇಕು. ಮನಸ್ಸು ವಿಷಯಗಳತ್ತ ಹೋಗದಂತೆ ದೃಢಪಡಿಸಬೇಕು. ಆಗ ಅದು ತನ್ನ ನಿಶ್ಚಲ ಸ್ಥಿತಿಗೆ ಬರುವುದು. ಇದು ಕರಗಿದ ಬೆಣ್ಣೆ ಹೆಪ್ಪುಗಟ್ಟಿದಂತೆ; ಹಾಲು ಮೊಸರಾಗಿ ಗಟ್ಟಿಯಾದಂತೆ.

೮೨೪

ಧಾತ್ರಿಜನುಲಕೆಲ್ಲ ದಗನೆರಿಗಿಂಚಿದ, ನೊನರ ಹರುನಿನೆರುಗು ನುಪಮುಯೊಕಟಿ,
ಮನಸುಜಿದರನೀಕ ಮಹಿಮುತೋಜೂಚುಟೀ ವಿಶ್ವದಾಭಿರಾಮ ವಿನುರ ವೇಮು.

ಧರೆಯ ಜನರಿಗೆಲ್ಲ ಸರಿಯೊಗಿ ತಿಳಿಸುವೆ
ಒಪ್ಪುವ ಹರನರಿಯುವ ಉಪಾಯವನು;
ಮನಸು ಜೆದರದಂತೆ ಮಹಿಮೆಯಿಂದ ಕಾಣು,
ವಿಶ್ವದಾಭಿರಾಮ ಕೇಳು ವೇಮು.

'ಹರಃ' ಎಂದರೆ ಏನು? ಸಂಸ್ಕೃತದಲ್ಲಿ 'ಹರಃ' ಎಂದರೆ 'ಕದಿ' ಇಲ್ಲವೆ 'ತೆಗೆದುಕೊಂಡೊಯ್ಯು' ಎಂದು ಶಬ್ದಾರ್ಥ. ಯಾವನು ನಿಮ್ಮ ಎಲ್ಲ ಪಾಪಗಳನ್ನು ಮತ್ತು ನಿಮ್ಮ ಅಳಿದುಳಿದ ವಸ್ತು-ಒಡವೆಗಳನ್ನು ತೆಗೆದುಕೊಂಡೊಯ್ಯುವನೋ, ಅವನೇ 'ಹರಃ' ಈ ಹರನ ಸಾನ್ನಿಧ್ಯ ಹೊಂದದೆ, ಯಾವನೂ ಮುಕ್ತಿ ಪಡೆಯಲಾರ. ಅವನು ಹರನ ಸೀಮೆಯನ್ನು ತಲುಪಿ ಮುಂದೆ ಹೋಗಬೇಕಾಗುವುದು. ಏಕೆಂದರೆ ವಿಶ್ವಾತ್ಮನ ಪರಮ ಪದವಿಯೇ 'ಹರ' ನಾಗಿದೆ. ಇದಕ್ಕಾಗಿಯೇ ಹಿಂದಿನ ಕಾಲದಲ್ಲಿ "ಹರ ಹರ ವ್ಯೋಮ್, ವ್ಯೋಮ್" ಎಂಬ ಮಂತ್ರವನ್ನೇ ಸಾಧಕರು ಪಠಿಸುವುದು, ಕ್ರಮವಾಗಿತ್ತು. ಇಂಥ ಹರನನ್ನು ಧ್ಯಾನಿಸಬೇಕು. ವ್ಯೋಮವು ಪಂಚಭೂತಗಳಲ್ಲಿ ಸೂಕ್ಷ್ಮತಮವಾದುದು. ಭೌತಿಕ ಪ್ರಪಂಚದಲ್ಲಿ ಅದಕ್ಕಿಂತ ಸೂಕ್ಷ್ಮವಾದುದಿಲ್ಲ. ಅಧ್ಯಾತ್ಮಿಕ ಲೋಕದಲ್ಲಿ ಹರನ ಧ್ಯಾನವೇ ಶ್ರೇಷ್ಠ. ಹರನನ್ನು ಅರಿಯುವ ಉಪಾಯವೆಂದರೆ, ಹರನೊಂದಿಗೆ ಒಂದಾಗುವುದು.

ಹರನು ಭೀಷಣನು. ಅದರಿಂದಾಗಿ ಭಯಂಕರನು. ಅವನು ಮರಣದ ಮರಣ ವಿದ್ದಂತೆ ಪ್ರತಿಯೊಬ್ಬರೂ ಸಾಧನೆಯನ್ನು ಭಯದಿಂದ ಕೂಡಿ ಪ್ರಾರಂಭಿಸಿ ನಿರ್ಭಯತೆ ಪಡೆಯುತ್ತಾರೆ. ನಿರ್ಭಯರಾಗದೆ ಅವನೊಂದಿಗೆ ಕೂಡುವುದು ಹೇಗೆ? ಹಗ್ಗಕ್ಕೆ ಹಾವು, ಎಂದು ತಿಳಿದರೆ ಭಯವೆನಿಸುವುದು. ಅದು ಹಗ್ಗವೇ ಎಂದು ತಿಳಿದರೆ ಭಯವೆಲ್ಲಿ? ಧರೆಯ ಜನರಿಗೆಲ್ಲ ಒಪ್ಪಲು ಯೋಗ್ಯವಾದ, ಮತ್ತು ಹರನನ್ನು ಅರಿಯುವಂಥ ಉಪಾಯವನ್ನು ತಿಳಿಸುತ್ತೇನೆ. ಅದನ್ನು ತಿಳಿಯಬೇಕಾದರೆ, ಅಚಲ ಮನಸ್ಸು ಬೇಕು. ಮನಸ್ಸು ಚದುರಬಾರದು. ಮತ್ತು ಹರನನ್ನು ಕಾಣುವ ಬಗೆಯೆಂದರೆ, ಅವನ ಮಹಿಮೆಗಳ ಮೂಲಕ ಮಾತ್ರ.

೮೨೫

ತ್ರಾಡು ಬಾಮುಟಂಚು ದಾಜೂಚಿ ಭಯಪಡು, ದೆಲಿಸಿತ್ರಾಡಟನ್ನ ದೀರು ಭಯಮು
ಭಯಮುದೀರುನಪುಡೆ ಬಹ್ಮಂಬುದಾನಗು, ವಿಶ್ವದಾಭಿರಾಮ ವಿನುರ ವೇಮ.

ಹಗ್ಗ ಹಾವು ಎಂದು ಹೆದರುತಿಹನು ಕಂಡು;
ತಿಳಿಯೆ ಹಗ್ಗವೆಂದು, ತೀರಿತು ಭಯ.
ಭಯವು ತೀರಿದೊಡನೆ, ಬ್ರಹ್ಮ ತಾನಾಗುವ.
ವಿಶ್ವದಾಭಿರಾಮ ಕೇಳು ವೇಮ.

ನಾವು ಈ ಪ್ರಪಂಚದಲ್ಲಿ ಏನೇ ನೋಡುತ್ತಿರುವೆವೋ, ಅದೆಲ್ಲ ನಮ್ಮ ಚಿತ್ತವೇ. ನಾವು ಸ್ವಪ್ನದಲ್ಲಿಯೂ ಗುಡ್ಡ-ಸಮುದ್ರ, ನದಿ-ಕಾಲುವೆ, ರಥ-ಕುದುರೆಗಳನ್ನು ನೋಡುತ್ತೇವೆ. ಸ್ವಪ್ನದರ್ಶಿಯು ಸ್ವಪ್ನದಲ್ಲಿ ನೋಡುವುದೆಲ್ಲ ಅವನ ಚಿತ್ತಕ್ಕಿಂತ ಬೇರೆಯಲ್ಲ. ಎಚ್ಚತ್ತಿರುವವನಿಗೆ ಕಾಣುವ ವಸ್ತುಗಳೂ ಅವನ ಚಿತ್ತಕ್ಕಿಂತ ಬೇರೆಯಲ್ಲ. ವೀಕ್ಷಿಸುವ ಇಂದ್ರಿಯ ಹೊರಗಿನ ಕಣ್ಣಲ್ಲ; ಮೆದುಳಿನಲ್ಲಿಯ ಗ್ರಂಥಿ ಎಂದು ಶರೀರ ಶಾಸ್ತ್ರವೂ ಹೇಳುತ್ತಿದೆ. ಅಂದ ಮೇಲೆ, ನಮಗೆ ಕಾಣುವುದು ನಮ್ಮ ಚಿತ್ತದ ಮೇಲೆ ಆದ ಪರಿಣಾಮ ಮಾತ್ರ. ನಮಗೆ ಕಂಡಂತೆ ಎಲ್ಲವೂ ಇಲ್ಲ. ರಜ್ಜು-ಸರ್ಪದ ದೃಷ್ಟಾಂತ ವೇದಾಂತದಲ್ಲಿ

ಪ್ರಸಿದ್ಧವಾಗಿದೆ. ಕತ್ತಲಿನಲ್ಲಿ ಹಗ್ಗವು ಹಾವಿನಂತೆಯೇ ಕಾಣುವುದು. ಮೊದಲೇ ಹಗ್ಗದ ಸ್ವರೂಪವು ತಿಳಿದಿದ್ದರೆ, ಅದು ಹಾವೆಂಬ ಭ್ರಾಂತಿಯು ಉಂಟಾಗುತ್ತಿರಲಿಲ್ಲ. ಅದೇ ರೀತಿ 'ಆತ್ಮಸ್ವರೂಪವನ್ನು ಸರಿಯಾಗಿ ನಿಶ್ಚಯಿಸದಿದ್ದರೆ, ಆತ್ಮನಲ್ಲಿ ಜೀವ, ಪ್ರಾಣ ಮೊದಲಾದ ಅನಂತ ವಿಕಲ್ಪಗಳು ಮಾಯೆಯಿಂದ ತೋರುತ್ತವೆ. ಅಜ್ಞರು ತಾವು ನೋಡುವುದೆಲ್ಲ, ಆತ್ಮನಿಗಿಂತ ಭಿನ್ನವಾದುದೆಂದು ತಿಳಿದುಕೊಂಡಿರುತ್ತಾರೆ. ಆತ್ಮನಿಗಿಂತ ಭಿನ್ನವಾದುದು ಯಾವುದೂ ಇಲ್ಲ. ಹಗ್ಗವನ್ನು ಹಾವು ಎಂದು ಭಾವಿಸಿದರೆ, ಭೀತಿಯುಂಟಾಗಿ, ಮನುಷ್ಯನು ಹಿಂಜರಿಯುವಂತೆ, ಬ್ರಹ್ಮ ಅದು ಇರುವುದಕ್ಕಿಂತ ಬೇರೆ ಏನೋ ಎಂದು ತಿಳಿದು, ಅದನ್ನು ಸೇರಲು ಮನುಷ್ಯ ಭಯಪಡುವನು. ಸತ್ಯ ತಿಳಿದರೆ, ತೀರಿತು. ತಾನೇ ಬ್ರಹ್ಮವಾಗುವನು. ಸರ್ವವೂ ಬ್ರಹ್ಮವೇ ಆಗುವುದು.

ಹೋಲಿಸಿ ನೋಡಿರಿ :-

ಅನಿಶ್ಚಿತಾ ಯದಾ ರಜ್ಜುರಂಧಕಾರೇ ವಿಕಲ್ಪಿತಾ |
ಸರ್ಪಧಾರಾದಿಭಿರ್ಭಾವೈಸ್ತದ್ವದಾತ್ಮಾ ವಿಕಲ್ಪಿತಃ ||
ನಿಶ್ಚಿತಾಯಾಂ ಯಥಾ ರಜ್ಜ್ವಾಂ ವಿಕಲ್ಪೋ ವಿನಿವರ್ತತೇ |
ರಜ್ಜುರೇವೇತಿ ಚಾದ್ವೈತಂ ತದ್ವದಾತ್ಮವಿನಿಶ್ಚಯಃ ||

'ಮೊದಲೇ ನಿಶ್ಚಯಿಸಲ್ಪಡದ ಹಗ್ಗವು ಕತ್ತಲಲ್ಲಿ ಹಾವು, ನೀರಗೆರೆ ಮೊದಲಾದುವೆಂದು ಹೇಗೆ ಕಲ್ಪಿಸಲ್ಪಡುವುದೋ, ಹಾಗೆಯೇ ಆತ್ಮನು ಕಲ್ಪಿತನಾಗಿರುತ್ತಾನೆ'

'ಹಗ್ಗದ ಸ್ವರೂಪವು ನಿಶ್ಚಯವಾದರೆ- ಹೇಗೆ ವಿಕಲ್ಪವು ಹೋಗಿಬಿಡುವುದೋ, ಮತ್ತು ಇದು ಹಗ್ಗವೇ ಎಂದು ಅದ್ವೈತವಾಗುವದೋ, ಹಾಗೆಯೇ ಆತ್ಮನ ವಿಷಯವಾಗಿ ನಿಶ್ಚಯವುಂಟಾಗುವದು'. — ಗೌಡಪಾದಸಾರಿಕಾ ೨-೧೭-೧೮

೮೨೬

ಜನನ ಮರಣವೇಳ ಸ್ವಾತಂತ್ರ್ಯ ಮುನ್ನದೇ ತೇನು ಲೇದು ಮುನ್ನ ಪೋನು ಲೇಡು
ನಡುವಗರ್ತೆ ನನುಟ ನಗುಪಾಟುಕಾದೊಕೋ! ವಿಶ್ವದಾಭಿರಾಮ ವಿನುರ ವೇಮ.

ಜನನ-ಮರಣ ಕಾಲಿ ಸ್ವಾತಂತ್ರ್ಯವಿಹುದೇ?
ತಂದು ಕೊಡನು, ಮುಂದೆ ತೆಗೆದು ಕೊಂಡೊಯ್ಯನು.
ನಡುವೆ ಕರ್ತನೆನಲು ನಗುಪಾಟಲಲ್ಲವೆ?
ವಿಶ್ವದಾಭಿರಾಮ ಕೇಳು ವೇಮ.

ಜನನ-ಮರಣಗಳು ಅವರವರ ಕರ್ಮಾನುಸಾರವಾಗಿ ವಿಧಿ-ನಿಯಮದಂತೆ ನಡೆಯುತ್ತಿವೆ. ಜನನ ಕಾಲದಲ್ಲಿ ಇಲ್ಲವೆ ಮರಣ ಕಾಲದಲ್ಲಿ ಹುಟ್ಟದಿರುವ ಇಲ್ಲವೆ ಸಾಯದಿರುವ ಸ್ವಾತಂತ್ರ್ಯ ಯಾರಿಗೂ ಇಲ್ಲ. ಹುಟ್ಟಿದವನು ಸಾಯಲೇ ಬೇಕು. ಕರ್ಮಕ್ಷಯವಾಗಿರದಿದ್ದರೆ, ಸತ್ತವನು ಹುಟ್ಟಲೇ ಬೇಕು. "ಕರ್ಮಕ್ಕನುಸಾರವಾಗಿಯೂ

ಜ್ಞಾನಕ್ಕನುಸಾರವಾಗಿಯೂ ಕೆಲವರು ದೇಹಿಗಳು, ಶರೀರ ಗ್ರಹಣಕ್ಕಾಗಿ ಯೋನಿಯನ್ನೂ, ಇನ್ನು ಕೆಲವರು ಸ್ಥಾವರ ಜನ್ಮವನ್ನೂ ಹೊಂದುತ್ತಾರೆ. (ಕಠ ಉ. ೨-೫-೭)

ದೇಹೋತ್ಪತ್ತಿಗೆ ಪ್ರಕೃತಿಯ ತ್ರಿಗುಣಗಳಾದ ಸತ್ತ್ವ, ರಜಸ್ ಮತ್ತು ತಮಸ್ಸು ಗಳೇ ಕಾರಣ. " ನೋಡುವವನು ಯಾವಾಗ ಗುಣಗಳಿಗಿಂತ ಬೇರೊಬ್ಬ ಕರ್ತೃವನ್ನು ನೋಡುವುದಿಲ್ಲವೋ, ಮತ್ತು ಗುಣಗಳಿಗಿಂತಲೂ ವ್ಯತಿರಿಕ್ತನಾದವನನ್ನು (ಅಂದರೆ ಗುಣವ್ಯಾಪಾರಗಳಿಗೆ ಸಾಕ್ಷಿಯಾಗಿರುವ ಆತ್ಮನನ್ನು) ತಿಳಿಯುವನೋ, ಆಗ ಅವನು ಬ್ರಹ್ಮಭಾವ ಹೊಂದುವನು. " ಈ ದೇಹದ ಸೃಷ್ಟಿಯಾಗುವುದೂ ಆತ್ಮ ಸಂಕಲ್ಪದಿಂದ. ಈ ದೇಹವನ್ನು ತೊರೆದು ಪ್ರಾಣಾದಿಗಳನ್ನು ತೆಗೆದುಕೊಂಡೊಯ್ಯುವವನೂ ಸರ್ವಹರನು. ಅಂದ ಮೇಲೆ ಏತನ್ಮಧ್ಯೆ ' ನಾನು ಇದನ್ನು ಮಾಡುವೆ. ಇದು ನನ್ನಿಂದ ಆಗಿದೆ ' ಎಂದರೆ, ನಗೆಪಾಟಲು ಎನ್ನಿಸದೇ ?

(ಹೋಲಿಸಿ ನೋಡಿರಿ :
ಜಾತಸ್ಯ ಹಿ ಧ್ರುವೋ ಮೃತ್ಯು ಧ್ರುವಂ ಜನ್ಮ ಮೃತಸ್ಯ ಚ |
ತಸ್ಮಾದಪರಿಹಾರ್ಯಾರ್ಥೇ ನ ತ್ವಂ ಶೋಚಿತುಮರ್ಹಸಿ ||

ಏಕೆಂದರೆ, ಹುಟ್ಟಿದವನಿಗೆ ಮರಣವು ನಿಶ್ಚಯವು. ಮತ್ತು ಸತ್ತವನಿಗೆ ಜನ್ಮವು ನಿಶ್ಚಯವು. ಆದುದರಿಂದ ಪರಿಹರಿಸಲಾಗದ ಈ ವಿಷಯದಲ್ಲಿ ನೀನು ಶೋಕಿಸಬಾರದು.

೮೨೭

ಬಾಟ ತೆಲಿಯಕುನ್ನ ಬಹುದೂರ ಮೈ ತೊಚು, ಜೋಟು ತೆಲಿಯಕುನ್ನ ಜುಪೊನರದು,
ಕೋಟಕೊಮ್ಮು ಮೀದ ಗುದುರು ಗಾಜೂಡುಮು, ವಿಶ್ವದಾಭಿರಾಮ ವಿನುರ ವೇಮ.

ದಾರಿ ತಿಳಿಯದಿರಲು ದೂರವೆನಿಸುತಿಹುದು.
ತಾಣ ತಿಳಿಯದಿರಲು ಕಾಣಲಾರ.
ಕೋಟಿ ತುದಿಯ ಮೇಲೆ ನೀಟ ದೃಷ್ಟಿಯಿರಿಸು.
ವಿಶ್ವದಾಭಿರಾಮ ಕೇಳು ವೇಮ

ಬ್ರಹ್ಮವರಿಯುವ ಪಥ ಯಾವುದು ? ' ಯಾವ ಪಥದಿಂದ ಆಪ್ತಕಾಮರಾದ ಋಷಿಗಳು ಹೋಗುತ್ತಾರೆಯೋ, ಮತ್ತು ಯಾವ ಪಥವು ಸತ್ಯದಿಂದ ಹರಡಿರುತ್ತದೆಯೋ, ಅಂಥ ದೇವಯಾನವೆಂಬ ಪಥವೇ ಸತ್ಯದ ಪರಮ ನಿಧಾನವು ' (ಮುಂಡಕ ಉಪ ೩-೧-೬) ಈ ಪಥವು ತಿಳಿದ ಋಷಿಗಳಿಗೆ ' ಇಲ್ಲಿಯೇ ಸಮೀಪದಲ್ಲಿಯೇ ಇರುವುದು. ಅದು ಚೇತನವಂತರಿಗೆ ಗುಹೆಯಲ್ಲಿಯೇ ಇಡಲ್ಪಟ್ಟಿರುವುದು ' (ತತ್ ಇಹ ಅಂತಿಕೇ ಚ ಪಶ್ಯತ್ಸ್ವಿಹೈವ ನಿಹಿತಂ ಗುಹಾಯಾಮ್ ' (ಮುಂಡಕ ಉಪ ೩-೧-೭)

' ಯಜ್ಞಕರ್ಮಿಗಳು ಕರ್ಮಫಲದ ಆಸಕ್ತಿಯಿಂದ ಇದನ್ನು ತಿಳಿಯುವದಿಲ್ಲ; ಆ ಕಾರಣದಿಂದ ದುಃಖಾರ್ತರಾಗಿ ಕರ್ಮಫಲವನ್ನು ಕ್ಷೀಣ ಮಾಡಿಕೊಂಡು ಕೆಳಗೆ ಬೀಳು

ತ್ತಾರೆ ' (ಮುಂ. ಉ. ೧-೨-೯) ಯಾರಿಗೆ ಗಮ್ಯಸ್ಥಾನವು ತಿಳಿದಿಲ್ಲವೋ, ಅವರು ಅದನ್ನು ಕಾಣಲಾರರು. " ಅವಿದ್ಯೆಯ ಮಧ್ಯದಲ್ಲಿ ಇರುವವರಾಗಿ, ತಾವೇ ಧೀರರು, ಪಂಡಿತರು ಎಂದು ತಿಳಿದುಕೊಂಡು; ಪೀಡಿಸಲ್ಪಡುತ್ತ, ಕುರುಡನು ಕರೆದುಕೊಂಡು ಹೋಗುತ್ತಿರುವ ಕುರುಡರಂತೆ ಈ ಮೂಢರು ಸುತ್ತುತ್ತಿರುವರು. ' (ಮುಂಡಕ ಉ. ೧-೨-೮)

ಹಾಗಾದರೆ ದಾರಿಯನ್ನು ನೋಡುವುದು ಹೇಗೆ ? ಇದಕ್ಕೆ ಸಾಧನೆ ಬೇಕು. ನಮ್ಮ ಭ್ರೂಮಧ್ಯೆಯಲ್ಲಿ ಆಜ್ಞಾಚಕ್ರ ಉಂಟು, ಎಂದು ಯೋಗಿ ಹೇಳುತ್ತಾನೆ. ಇದು ಒಂದು ಕೋಟೆಯೆಂದು ಕಲ್ಪಿಸಬೇಕು. ಶರೀರದ ಮಧ್ಯಭಾಗದಲ್ಲಿ ರೇಖೆಯಿಳಿದರೆ ಮೂಗು ಸೀಳಿಕೊಂಡು ಹೋಗುವುದು. ಮೂಗು ಕೋಟೆಯ ತುದಿಯೆನಿಸುವುದು. ಕೋಟೆಯ ತುದಿಯ ಮೇಲೆ ನೇರವಾಗಿ ದೃಷ್ಟಿ ಇರಿಸಿ ಧ್ಯಾನ ಮಾಡಬೇಕು. ಇದು ಧ್ಯಾನಕ್ಕೆ ಅನುಕೂಲ ಮನಸ್ಥಿತಿ ಒದಗಿಸುತ್ತದೆ.

೮೨೮

ಬಾಲಪ್ರಾಯ ಮುಂದೆ ಭ್ರಮಲನಡಂಪಕ, ಮೇಲು ಪೊಂದರಿಪೂಡು ಮೇದಿನಂದು,
ಗೀಲುದೆಲಿಸಿ ಮದಿನಿಗಿಡ್ಪಡ ಕುಂಡುಮು, ವಿಶ್ವದಾಭಿರಾಮ ವಿನುರ ವೇಮ.

ಬಾಲಪ್ರಾಯದೊಳು ಭ್ರಮೆಯನಡಗಿಸದೆ.
ಮೇಲು ಹೊಂದರೆಂದು, ಮುಂದೆ ಮತ್ತೆ.
ಕೇಳು ತಿಳಿದು ಮನಸು ಎಳೆಯದಂತೆ ಬಾಳು.
ವಿಶ್ವದಾಭಿರಾಮ ಕೇಳು ವೇಮ.

' ಮೂರು ವರುಷದ ಬುದ್ಧಿ, ನೂರು ವರುಷದ ವರೆಗೆ ' ಎನ್ನುವುದು, ಲೋಕದ ಗಾದೆಮಾತು. ಇದು ಮನೋವಿಶ್ಲೇಷಣೆಯನ್ನು ಮಾಡುವ ನುಡಿ. ನಾವು ನೋಡುವ, ಮೂಸುವ, ಮುಟ್ಟುವ, ರುಚಿಸುವ, ಕೇಳುವ ಕರ್ಮದಿಂದ, ನಮ್ಮಲ್ಲಿ ನಿತ್ಯ ಬದಲಾವಣೆಗಳಾಗುತ್ತಿರುತ್ತವೆ. ಪ್ರತಿಕ್ಷಣವೂ ಆಗುತ್ತಿರುವ ಈ ಬದಲಾವಣೆಗಳು ಕೂಡಲೇ ಗೋಚರವಾಗುವುದಿಲ್ಲ. ಅವು ನಮ್ಮ ಮನಸ್ಸಿನಲ್ಲಿ ಸಂಸ್ಕಾರಗಳಾಗಿ ಉಳಿದು, ಅನುಕೂಲ ಕಾಲ ಬಂದಾಗ, ಬದಲಾವಣೆಯು ಅಂತ್ಯದಲ್ಲಿ ಗೋಚರಿಸುವುದು. ಪ್ರತಿ ಬದಲಾವಣೆಗೂ ಪೂರ್ವ ಸಂಸ್ಕಾರ ಉಂಟು. ನಾವು ವಯಸ್ಸಿಗೆ ಬಂದ ಮೇಲೆ ಇಲ್ಲವೆ ಇಳಿವಯಸ್ಸಿನಲ್ಲಿರುವಾಗ, ನಮ್ಮ ಸ್ವಭಾವವು ವ್ಯಕ್ತವಾಗುವುದೇನೋ ಸರಿ. ಆದರೆ ಈ ಸ್ವಭಾವದ ಬೀಜವನ್ನು ಪೂರ್ವದಲ್ಲಿನ ಸಂಸ್ಕಾರಗಳಲ್ಲಿ ಗುರುತಿಸಬಹುದು.

ಕಾರಣ, ಚಿಕ್ಕ ವಯಸ್ಸಿನಲ್ಲಿ ನಮಗೆ ನಿತ್ಯ ಆನಂದ ನೀಡುವ ವಸ್ತು ಧನ ಕನಕವೇ ಅಲ್ಲ; ಧನ ಕನಕಗಳಿಂದ ದೊರೆಯುವುದೂ ಅಲ್ಲ. ಆದರೆ, ನಮ್ಮ ಮನಸ್ಸಿನಲ್ಲಿ ಭೋಗ ವಸ್ತುಗಳ ಚಿಂತೆ ಬಲಿಯದಂತೆ ನೋಡಿಕೊಳ್ಳುವುದೇ ಆಗಿದೆ. ಬಾಲ್ಯದಲ್ಲಿ ಭೋಗ ವಸ್ತುಗಳೇ ನಿತ್ಯ ಆನಂದ ನೀಡುವವೆಂಬ ಭ್ರಮೆಯನ್ನು ಅಡಗಿಸದಿದ್ದರೆ, ಮುಂದೆ

ಮೇಲಾದುದನ್ನು, 'ಪರಾ' ಯಾವುದೋ ಅದನ್ನು, ಹೊಂದುವುದು ಸಾಧ್ಯವಾಗದು. ಕಾರಣ ಯಾವುದು ಕೀಳಾದುದೋ, ಯಾವುದು 'ಅಪರಾ' ಎನ್ನಿಸುವುದೋ ಅಂಥ ದನ್ನು ತಿಳಿದು, ಅದರತ್ತ ಮನಸ್ಸು ಎಳೆಯದಂತೆ ಮಾಡು.

ಲ೨೯

ಬಾಲ್ಯಮಂದು ಸ್ವಾಮಿಭಕ್ತಿ ಲೇಕುಂಡುನು, ಯೌವನಮುನ ಹರುನಿತೇವ ಗನರು,
ವಾರ್ಧಕಂಬುನಂದು ವರ್ಣಿಂಪಲೇಕುಂಡ್ರು, ವಿಶ್ವದಾಭಿರಾಮ ವಿನುರ ವೇಮ.

ಬಾಲ್ಯದೊಳು ಸ್ವಾಮಿ ಭಕ್ತಿಯಿಲ್ಲದಿರಲು,
ಯೌವನದೊಳು ಹರನ ಯೋಚಿಸರಲ!
ವಾರ್ಧಿಕ್ಯ ಹೊಂದಲು, ವರ್ಣಿಸದೆ ಇರುವರು.
ವಿಶ್ವದಾಭಿರಾಮ ಕೇಳು ವೇಮ.

ಆತ್ಮನು ಸರ್ವಾಂತರ್ಯಾಮಿ. 'ಸರ್ವಾನ್ ಅಂತರ್ ಸ್ಥಿತ್ವಾ ಯಮಯತೇ ಇತಿ.' ಎಲ್ಲರೊಳಗೆ ಇದ್ದುಕೊಂಡು ಯಾವನು ನಿಯಂತ್ರಿಸುತ್ತಿರುವನೋ, ಅವನು ಸರ್ವಾಂತರ್ಯಾಮಿ. ಅವನೇ ಸರ್ವೇಶ. ಸರ್ವದ ಮೇಲೆ ಸ್ವಾಮ್ಯ ಪಡೆದ ಅವನೇ ಸ್ವಾಮಿ. ಆ ಸ್ವಾಮಿಯನ್ನು ಕುರಿತು ಪ್ರೇಮಾಕರ್ಷಣೆಯೂ ಮತ್ತು ಭಕ್ತಿಯೂ ಇರ ಬೇಕು. ಸ್ವಾಮಿಯೇ ಪುರುಷೋತ್ತಮ ಸಗುಣ ಬ್ರಹ್ಮ. ಇದು ಮನಸ್ಸಿನ ಸೂಕ್ಷ್ಮ ಸ್ಥಿತಿ. ಮನುಷ್ಯನ ಮನಸ್ಸು ಕನ್ನಡಿಯಂತೆ. ಅದರಲ್ಲಿ ಸ್ವಾಮಿಯಾದ ಪುರುಷೋತ್ತಮ ಬಿಂಬಿಸಬೇಕಾದರೆ, ಭಕ್ತಿಸಾಧನ ಬೇಕು. ಇದೇ ಭಕ್ತಿಯೋಗ.

ಯೌವನದಲ್ಲಿಯೂ ಭಕ್ತಿ ಇಲ್ಲ! ಭವದ ಆವರಣ ಹೆಚ್ಚಾಗಿ, ಮನಸ್ಸು ಅದರಲ್ಲಿ ಅನುರಕ್ತವಾಗುವುದು. ಸಂಸಾರ ಸುಖದಲ್ಲಿಯೇ ಆಸಕ್ತರಾಗಿ ಭೋಗವಿಷಯಗಳಲ್ಲಿ ಅನುರಕ್ತರಾಗುವರು. ಭವಹರನ ವಿಚಾರ ಅವರಿಗಾಗದು. ಭವದಿಂದ ಅಂದರೆ, ಸಂಸಾರ ದಿಂದ ಯಾವನು ಎತ್ತಿಕೊಂಡೊಯ್ಯುವನೋ ಅವನು ಭವಹರನು, ಹರಃ. ಬಾಲ್ಯ ಯೌವನಗಳನ್ನು ಈ ಬಗೆಯಾಗಿ ಕಳೆದವರಿಗೆ ಪರಮಾತ್ಮನ ಅರಿವು ಆಗದು. ತತ್ತ್ವ ತಿಳಿಯದು. ಅದರಿಂದ ಸತ್ಯವಾವುದು? ಸತ್ಯವೆಂದರೇನು? ಎಂಬುದನ್ನು ವಾರ್ಧಿಕ್ಯದಲ್ಲಿ ಸಹ ವರ್ಣಿಸಲು ಅಸಮರ್ಥರಾಗುವರು.

(ಹೋಲಿಸಿ ನೋಡಿರಿ :

'ಬಾಲಸ್ತಾವತ್ಕ್ರೀಡಾಸಕ್ತಃ ತರುಣಸ್ತಾವತ್ತರುಣೀ ರಕ್ತಃ |
ವೃದ್ಧಸ್ತಾವಚ್ಚಿಂತಾಮಗ್ನಃ ಪರೇಬ್ರಹ್ಮಣಿ ಕೋ ಽ ಪಿ ನ ಲಗ್ನಃ |
ಭಜ ಗೋವಿಂದಂ ಭಜ ಗೋವಿಂದಂ ಭಜ ಗೋವಿಂದಂ ಮೂಢಮತೇ |
ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನ ಹಿ ನ ಹಿ ರಕ್ಷತಿ ಡುಕ್ಞಂಕರಣೇ ||

ಬಾಲ್ಯನು ಆಟ ಪಾಟಗಳಲ್ಲಿಯೂ ಕಳೆದು ಹೋಯಿತು. ತಾರುಣ್ಯವು ತರುಣಿ ಯರಲ್ಲಿ ಅನುರಕ್ತರಾಗಿ ಕಳೆದುಹೋಯಿತು. ವೃದ್ಧಾಪ್ಯವು ಕೇವಲ ಚಿಂತೆಯಲ್ಲಿಯೇ

ಮಗ್ನವಾಗಿ ಕಳೆಯಿತು. ಅಯ್ಯೋ ಪರೆಬ್ರಹ್ಮದಲ್ಲಿ ಮನಸ್ಸು ಹೊಂದಿಸುವವರಾರು? ಮುಂದ ಮತಿಯೇ ವ್ಯಾಕರಣ ನಿಯಮಾದಿಗಳು ಮರಣ ಕಾಲದಲ್ಲಿ ಉಪಯೋಗಕ್ಕೆ ಬಾರವು. ಗೋವಿಂದನನ್ನು ನೆನೆ. ನೆನೆ ಗೋವಿಂದನ. ನೆನೆ ಗೋವಿಂದನ.

— ಶಂಕರಾಚಾರ್ಯರು

ಲ೩೦

ಬ್ರಹ್ಮಮೆತ್ತಲಮನಿ ಪಗ್ಗೆಲಾಡುಚುನಂದ್ರು, ಬ್ರಹ್ಮಮೇಮುದಾನಿ ಭಾವಮೇಮು,
ತೆಲುಪೊ! ನಲುಪೊ! ಯೆರುಪೊ! ತೆಲಿಸಿನ ಬಲ್ಮುಡಿ, ವಿಶ್ವದಾಭಿರಾಮ ವಿನುರ ವೇಮ.

ಬ್ರಹ್ಮವೇತ್ತರೆಂದು ಬಿಮ್ಮಿದಿಂದಿಪ್ಪರು;
ಬ್ರಹ್ಮವೇನೊ? ಅದರ ಭಾವವೇನೊ.?
ಬಿಳಿಪೊ? ಕೆಂಪೊ? ಕಪ್ಪೊ? ತಿಳಿದಿದ್ದರೆ ಹೇಳು.
ವಿಶ್ವದಾಭಿರಾಮ ಕೇಳು ವೇಮ

ವಿದ್ ಅಂದರೆ ತಿಳಿ. 'ವೇತ್ತ' ಎಂದರೆ ಯಾವನು ತಿಳಿದಿರುವನೋ ಅವನು. ಬ್ರಹ್ಮವನ್ನು ತಿಳಿದವನು ಬ್ರಹ್ಮವೇತ್ತನು. ಹಮ್ಮು-ಬಿಮ್ಮುಗಳನ್ನು ನೀಗಿದ ಮೇಲೆ ತಾನೇ ಬ್ರಹ್ಮ ತಿಳಿಯುವುದು! ಅಂದ ಮೇಲೆ 'ಬ್ರಹ್ಮವೇತ್ತರೆಂದು ಬಿಮ್ಮಿದಿಂದ' ಬಿಗಿ ದುಕೊಂಡಿರುವವರಿಗೆ ಬ್ರಹ್ಮಜ್ಞಾನವಾಗುವುದೆಂತು? ಅವರೇನೋ ವೇದ ಪುರಾಣ ಓದಿ ಕೊಂಡಿರಬಹುದು; ಕಂಠಪಾಠ ಮಾಡಿರಬಹುದು. ಆದರೆ ವೇದಗಳೆಲ್ಲ ಅಪರಾ ವಿದ್ಯೆ. ಕೇವಲ ಲೌಕಿಕಕ್ಕೆ ಸಂಬಂಧವಾದವುಗಳಷ್ಟೇ. ಬ್ರಹ್ಮ ಜ್ಯೋತಿರ್ಮಯ; ಆನಂದಮಯ; ಸರ್ವಭೂತಾತ್ಮ. ಸರ್ವಪರಿಪಾಲಕ. ಬ್ರಹ್ಮದೊಡನೆ ಒಂದಾಗಿ ಹೋಗುವುದೇ, ಬ್ರಹ್ಮವರಿ ಯುವುದು ತಾನೇ? ಸರ್ವರಲ್ಲಿಯೂ ತನ್ನನ್ನೇ ಕಾಣುವುದೇ ಬ್ರಹ್ಮಭಾವ. ಹೀಗೆ ತಿಳಿ ದವರಿಗೆ ಬಿಮ್ಮು ಇರಬಹುದೇ? ಬಿಮ್ಮು ಇರುವವರಿಗೆ ಇದೆಲ್ಲ ತಿಳಿದಿಲ್ಲ, ಎಂದೂ ಹೇಳ ಬಹುದು.

ಸಗುಣ ಬ್ರಹ್ಮವೆಂದರೆ ಪ್ರಕೃತಿಯು ವ್ಯಕ್ತವಾಗಿರುವ ಪುರುಷನ ಸ್ಥಿತಿ. ಗುಣಗಳೇ ಪ್ರಕೃತಿ. ಸತ್ತ್ವ, ರಜಸ್ಸು, ತಮಸ್ಸು. ಸತ್ತ್ವಗುಣವು ಪ್ರಾಮುಖ್ಯವಾಗಿರುವಾಗ, ಚಿತ್ತದಲ್ಲಿ 'ಬಿಳಿ' ವರ್ಣದ ಅಲೆಗಳು ಏಳುತ್ತವೆ. ರಜೋಗುಣದ ಪ್ರಾಬಲ್ಯವಿರುವಾಗ, ಕೆಂಪು ವರ್ಣದಲೆಗಳೂ, ತಮೋಗುಣದ ಪ್ರಾಬಲ್ಯವಿರುವಾಗ ಕಪ್ಪು, ವರ್ಣದಲೆಗಳೂ ಏಳುವವು. ಬಿಳುಪು ವಿಪ್ರವರ್ಣ ಇಲ್ಲವೆ ಬ್ರಾಹ್ಮಣವರ್ಣ; ಕೆಂಪು ಕ್ಷತ್ರಿಯ ವರ್ಣ; ಕಪ್ಪು-ಕೆಂಪು ಮಿಶ್ರವಾದ ಹಳದಿ ವೈಶ್ಯವರ್ಣ; ಕಪ್ಪು-ಶೂದ್ರವರ್ಣ, ಇತ್ಯಾದಿ ಸೂಚಿ ಸುತ್ತವೆ. ಇವೆಲ್ಲ ಮನುಷ್ಯನ ಮನಸ್ಸಿನ ಸ್ಥಿತಿ ಸೂಚಕಗಳಷ್ಟೇ. ಸಾಧನೆಯಿಂದ ಒಬ್ಬನು ಒಂದು ವರ್ಣದಿಂದ ಬೇರೊಂದು ವರ್ಣಕ್ಕೇರಬಹುದು. ಕ್ಷತ್ರಿಯ ವಿಶ್ವಾಮಿತ್ರ ಬ್ರಾಹ್ಮಣ ನಾದಂತೆ. ಸಗುಣ ಬ್ರಹ್ಮ ವಿಶುಭ್ರ ಎಂದಾಗ ಸರ್ವಗುಣಗಳ ಕೂಡಿಕೆಯೇ ಶುಭ್ರವ

ರ್ಣವೆಂಬ ಭಾವ. ಸಗುಣ ಬ್ರಹ್ಮದಲ್ಲಿ ಸಾಕ್ಷಿಯಾದ ಪುರುಷನಿಗೆ ಯಾವ ಬಣ್ಣವೂ ಇಲ್ಲ. ಅವನು ಗುಣಾತೀತ; ಅಂತೆಯೇ ವರ್ಣಾತೀತ. ಇದನ್ನು ತಿಳಿದವರು ಬ್ರಹ್ಮವೇತ್ತರು.

ಲಹರಿ ೧

ಬ್ರಹ್ಮಪುರುವು ಜೇಡನು ಬ್ರಾಹ್ಮಣುಲಾದೊಡ್ಡ, ಬ್ರಹ್ಮವಲನೆಬುಟ್ಟ ಪರಗಿರನಗ,
ಬ್ರಹ್ಮವೇತ್ತಯಗುನು ಬ್ರಾಹ್ಮಣುಡೇಯ್ಮೆನ, ವಿಶ್ವದಾಭಿರಾಮ ವಿನುರ ವೇಮ.

ಬ್ರಹ್ಮಘನತೆಕೇಡು; ಬ್ರಾಹ್ಮಣರಾ ದೊಡ್ಡ,
ಬ್ರಹ್ಮನಿಂದ ಹುಟ್ಟಿ ಬೆಳೆದರೆನಲು;
ಬ್ರಹ್ಮವೇತ್ತ ಬೇಕು; ಬ್ರಾಹ್ಮಣನೆನಿಸುವೊಡೆ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ಎಂದರೆ ಆನಂದಮಯ; ಜ್ಯೋತಿರ್ಮಯ; ಸರ್ವಾಂತರ್ಯಾಮಿ; ಸರ್ವ ಭೂತಾತ್ಮ; ಅವನೇ ವಿಶ್ವಕರ್ಮ; ಸೃಷ್ಟಿಕರ್ತ. ಲೀಲೆಯಂತೆ ಇದೆಲ್ಲವನ್ನು ಉಂಟು ಮಾಡಿದ್ದಾನೆ. ಅವನೇ ಇದೆಲ್ಲವೂ ಆಗಿದ್ದಾನೆ. ಈ ಅರ್ಥದಲ್ಲಿ " ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮಣ, ಆಕಳು, ಆನೆ, ನಾಯಿ, ನಾಯಿಯ ಮಾಂಸ ತಿನ್ನುವವರೆಲ್ಲರೂ ಜ್ಞಾನಿಯ ದೃಷ್ಟಿಯಲ್ಲಿ ಸಮಾನರು " ಎಂದು ಗೀತೆಯಲ್ಲಿ ಕೃಷ್ಣ ಹೇಳುತ್ತಾನೆ.

ಹೀಗೆಲ್ಲ ಇರುವಾಗ, ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದವರೆಲ್ಲ ಸಾಕ್ಷಾತ್ ಪರಬ್ರಹ್ಮನ ವಂಶದ ಮಕ್ಕಳೆಂದು ಹಲವರು ವಾದಿಸುತ್ತಾರೆ. ಹಾಗಾದರೆ, ಬ್ರಹ್ಮನ ಘನತೆಯೇ ಹಾಳಾದಂತೆ. ' ಬ್ರಾಹ್ಮಣ ಇಲ್ಲವೆ ಕ್ಷತ್ರಿಯ ಶಬ್ದಗಳು ಅಲ್ಲೊಮ್ಮೆ, ಇಲ್ಲೊಮ್ಮೆ ಋಗ್ವೇದದಲ್ಲಿ ಕಾಣಿಸುತ್ತಿವೆ. ಆದರೆ ಯಾವ ಸಂದರ್ಭದಲ್ಲಿಯೂ ಆ ಶಬ್ದಗಳಿಂದ ಜನ್ಮ ಇಲ್ಲವೆ ವಂಶ ಸಂಬಂಧ ಸೂಚಿತವಾಗಿಲ್ಲ. ಅವು ಕೇವಲ ಗುಣಗಳನ್ನು ಮಾತ್ರ ಸೂಚಿಸುತ್ತವೆ. ಬ್ರಾಹ್ಮಣ ಎಂದರೆ ಜಾಣ, ಜ್ಞಾನಿ ಎಂದು ಮಾತ್ರ ಋಗ್ವೇದದ ಅರ್ಥ. ಅದೂ ವಿಪ್ರ ಶಬ್ದಪ್ರಯೋಗ ಮಾತ್ರ ವೇದದಲ್ಲಿ ಜಾಣ ಎಂಬ ಅರ್ಥದಲ್ಲುಂಟು.

ಬ್ರಾಹ್ಮಣ ಎನ್ನಿಸಬೇಕಾದರೆ, ಬ್ರಹ್ಮವೇತ್ತನಾಗಿರಬೇಕು. ಹುಟ್ಟಿನಿಂದ ಎಲ್ಲರೂ ಶೂದ್ರರೇ. ಬ್ರಹ್ಮ ತಿಳಿದ ಮೇಲೆ ಬ್ರಾಹ್ಮಣನೆನಿಸಬಹುದು. ಶ್ರುತಿಗಳಲ್ಲಿ ಬ್ರಾಹ್ಮಣ ಶಬ್ದ ಪ್ರಯೋಗ ಈ ಅರ್ಥದಲ್ಲಷ್ಟೇ ಉಂಟು.

(ಹೋಲಿಸಿ ನೋಡಿರಿ :

" ಬ್ರಾಹ್ಮಣನ ಕುಟುಂಬದಲ್ಲಿ ಇಲ್ಲವೆ ಬ್ರಾಹ್ಮಣನ ಜಾತಿಯಲ್ಲಿ ಹುಟ್ಟಿದವನನ್ನು ನಾನು ಬ್ರಾಹ್ಮಣನೆನ್ನಲಾರೆ. ಯಾವನು ಕಲಂಕಿತನೋ, ಅವನು ಕೇವಲ 'ಹಾರುವ,' ನಷ್ಟೇ. ಯಾವನು ನಿಷ್ಕಲಂಕನೋ ನಿರಾಸಕ್ತನೋ, ಅವನನ್ನು ಮಾತ್ರ ನಾನು ಬ್ರಾಹ್ಮಣನೆಂದು ಕರೆಯುವೆ. "

" ಸಕಲ ಜೀವಿಗಳ ಜನನ-ಮರಣದ ಪೂರ್ಣ ಜ್ಞಾನವುಳ್ಳ, ನಿರಾಸಕ್ತನಾದ' ಜತೇಂದ್ರಿಯನಾದ ಆ ಧೀರನನ್ನು ಮಾತ್ರ ನಾನು ಬ್ರಾಹ್ಮಣನೆನ್ನುವೆ "

" ಆ ಘನವಂತನಾದ, ಪರಮ, ಧೀರ, ಮಹರ್ಷಿ. ವಿಜಯಿ, ನಿರ್ವಿಕಾರಿ, ಪರಿಶುದ್ಧ, ಜ್ಞಾನಿಯನ್ನು ಮಾತ್ರ ನಾನು ಬ್ರಾಹ್ಮಣನೆಂದು ಕರೆಯುವೆ.

— ಗೌತಮ ಬುದ್ಧ

ಲಹರಿ ೨

ಆಕಸಂಬು ಶೂನ್ಯ ಮುಂದುಶಬ್ದ ಮುಪುಟ್ಟಿ, ಶಬ್ದ ಮಧ್ಯನುನನು ಸರಗಜೂಡು,
ಶಬ್ದ ರಹಿತಮಗುಚು ಜಿಲಗುನು ಬ್ರಹ್ಮಂಡು, ವಿಶ್ವದಾಭಿರಾಮ ವಿನುರ ವೇಮ.

ಆಕಾಶದಿ ಶೂನ್ಯ; ಅಲ್ಲಿಶಬ್ದ ಜನನ;
ಶಬ್ದ ಮಧ್ಯೆ. ನೋಡು ಸರಿಯಾಗಿಯೆ,
ಶಬ್ದರಹಿತವಾಯ್ತು; ಶೋಭಿಸಿತು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಉಪಾಸಕನ ಉಪಾಸನೆಗೋಸ್ಕರ, ' ಅಂಗುಷ್ಠ ಪರಿಮಾಣವುಳ್ಳವನೂ, ಅಂತರಾತ್ಮನೂ ಆದ ಪುರುಷನು ಜನರ ಹೃದಯದಲ್ಲಿ ಯಾವಾಗಲೂ ಇರುತ್ತಾನೆ. ' (ಕಠ ಉ. ೨-೬-೧೭) ಎಂದು ಹೇಳಲಾಗಿದೆ. ಭ್ರೂಮಧ್ಯವೇ ಕೋಟಿ. ಆ ಕೋಟಿಯಿಂದ ಮೂಗಿನ ನೇರದ ಮೇಲೆ ನೀಟ ದೃಷ್ಟಿ ಇರಿಸಬೇಕು. ದೃಷ್ಟಿಯನ್ನು ಒಳಕ್ಕೆ ತಿರುಗಿಸಬೇಕು. ಬೆನ್ನು, ಕತ್ತು ಮತ್ತು ತಲೆಗಳನ್ನು ನೇರವಾಗಿರಿಸಿ, ಬೆನ್ನುಲುಬಿನ ಮೇಲೆ ಭಾರ ಬೀಳದಂತೆ ಪ್ರಶಾಂತಸ್ಥಾನದಲ್ಲಿ ಕುಳಿತು ಉಪಾಸನೆ ಮಾಡಬೇಕು. ಉಪಾಸಕರೇ, ಯೋಗಿವರ್ಯರ ನುಡಿ ಆಲಿಸಿರಿ: ' ಕವಿಯೊಳಗೆ ಜನಿಸುವ ರವವೆ ಆಕಾಶವು | ಕಣ್ಣಿಗೆ ಕಾಣುವುದೆ ಕಳೆಯ ಜ್ವಾಲೆ | ಮೂಗಿನೊಳಿಹ ಗಾಳಿ ಮುಕ್ತಿ ಪಥದ ದಾರಿ | ವಿಶ್ವದಾಭಿರಾಮ ಕೇಳು ವೇಮ ||' ಪ್ರಣವ ಉಚ್ಚರಿಸುತ್ತ ಉಸಿರಾಡಿಸಿರಿ. ಪೂರಕ, ರೇಚಕ ಸಾಧನೆಯಾಯ್ತು. ಮಧ್ಯೆ ನಿಲ್ಲಿಸಿರಿ. ಇದೇ ಕುಂಭಕ. ಬ್ರಹ್ಮರಂಧ್ರದಿಂದ ಓಂಕಾರ ಶಬ್ದ ಹೊರಡುವುದು. ಆಕಾಶದ ತನ್ಮಾತ್ರೆ ಶಬ್ದ. ಎಲ್ಲಿ ಶಬ್ದವುಂಟೋ, ಅಲ್ಲಿ ಆಕಾಶವುಂಟು. ಈ ಶಬ್ದ ಜನನವಾಗುವ ಆಕಾಶದಲ್ಲಿ, ಎಲ್ಲವೂ ಶೂನ್ಯವಾಗಿ ತೋರುವುದು. ಅದು ಶೂನ್ಯವಲ್ಲ. ಆ ಶಬ್ದ ಮಧ್ಯೆ ಧ್ಯಾನಿಸು. " ಇದೆಲ್ಲವೂ ಓಂ ಎಂಬ ಅಕ್ಷರವು. ಅದರ ಉಪವ್ಯಾಖ್ಯಾನವು ಹೀಗಿದೆ: ಹಿಂದೆ ಆಗಿ ಹೋದದ್ದು, ಈಗ ಇರುವುದು, ಮುಂದಿನದು, ಇದೆಲ್ಲವೂ ಓಂಕಾರವೇ. ತ್ರಿಕಾಲಾತೀತವಾದುದು ಇನ್ನೂ ಯಾವುದಿದೆಯೋ, ಅದೂ ಓಂಕಾರವೇ. ಇದೆಲ್ಲವೂ ಬ್ರಹ್ಮ. ಈ ಆತ್ಮನು ಬ್ರಹ್ಮ. " ಈ ಆತ್ಮನು ನಾಲ್ಕು ಪಾದವುಳ್ಳವನು. 'ಅ', 'ಉ', 'ಮ' ಮೂರು ಪಾದಗಳು; ತುರೀಯ ನಾಲ್ಕನೆಯ ಪಾದ. ಜಾಗ್ರದಾವಸ್ಥೆ, ಸ್ವಪ್ನಾವಸ್ಥೆ, ಸುಷುಪ್ತಿಯನ್ನು ದಾಟಿದ ಅವಸ್ಥೆಯೇ ತುರೀಯಾವಸ್ಥೆ. ಈ ಅವಸ್ಥೆಯಲ್ಲಿ

ಪುರುಷನು ‘ಶಬ್ದದಿಂದ ನಿರ್ದೇಶಿಸಲ್ಪಡದವನೂ, ಶಾಂತನೂ, ಅದ್ವೈತನೂ, ಶಿವನೂ, ಶಾಂತನೂ’ ಆದ ತುರೀಯನಾಗಿದ್ದಾನೆ. ಈ ಅವಸ್ಥೆಯು ಶಬ್ದರಹಿತವಾಗಿರುತ್ತದೆ. ಆಗ ಬ್ರಹ್ಮ ಶೋಭಿಸುವನು.

ಲಹಿಳಿ

ಆಲುಮಗಡುಸುತುಡು ನಂದರಿಲೋನಾತ್ಮ, ಮೇಲುಗಾನೆಯುಂಡಿ ಮೆರಯುಚುಂಡು,
ವೇರುವೇರುಗಾನು ವೆಲಯುರೂಪಂಬುಲ್ಕೆ, ಶ್ವದಾಭಿರಾಮ ವಿನುರ ವೇಮ

ಸುತ-ಸತಿಪತಿಗಳಲಿ, ಸಕಲರಲ್ಲಿ ಆತ್ಮ,
ಮೇಲಾಗಿಯೆ ಇದ್ದು, ಮೆರೆಯುತಿಹುದು.
ಬೇರೆ ಬೇರೆಯಾಗಿ ಬೆಳಗುವುದು ರೂಪದಿ;
ವಿಶ್ವದಾಭಿರಾಮ ಕೇಳು ವೇಮ.

ಈ ಜಗತ್ತು ಬ್ರಹ್ಮದ ಪ್ರತಿರೂಪವೆನ್ನುವರು. ಬ್ರಹ್ಮವೇ ಜಗತ್ಕಾರಣವೆಂದು ಉಪನಿಷತ್ತುಗಳು ಸಾರುತ್ತವೆ. “ ಹೇ ಸೊಮ್ಯ, ಸೃಷ್ಟಿಗೆ ಮೊದಲು ಇದು ಏಕವೂ ಅದ್ವಿತೀಯವೂ ಆದ ಸದ್ವಸ್ತುವಾಗಿತ್ತು..... ಅದು ‘ಬಹುವಾಗುವೆನು, ಹುಟ್ಟುವೆನು’ ಎಂದು ಆಲೋಚಿಸಿತು. ಅದು ತೇಜಸ್ಸನ್ನು ಸೃಷ್ಟಿಸಿತು. (ಬೃಹದಾರಣ್ಯಕ ಉಪನಿಷತ್ತು) ‘ಆಕಾಶವೆಂಬ ಹೆಸರಿನಿಂದ ಪ್ರಸಿದ್ಧವಾದ ಬ್ರಹ್ಮವು ನಾಮರೂಪಗಳನ್ನು ವಿಂಗಡಿಸುತ್ತದೆ. ಯಾವುದರಲ್ಲಿ ನಾಮರೂಪಗಳಿವೆಯೋ ಅದೂ ಬ್ರಹ್ಮ’ (ಛಾಂದೋಗ್ಯ ಉ. ೮-೧೪-೧).

ಆತ್ಮವು ಆಕಾಶದಂತೆ ಅನಂತವಾಗಿದೆ. ಆದರೆ ಚಿತ್ತದ ಉಪಾಧಿಯಿಂದ, ಆತ್ಮ ಬೇರೆ ಬೇರೆ ಎನ್ನಿಸುವುದು. ಹೇಗೆಂದರೆ, ಆಕಾಶವೆಲ್ಲ ಒಂದೇ ಆಗಿದ್ದರೂ, ಗಡಿಗೆ–ಮಡಿಕೆಗಳೊಳಗಿನ ಆಕಾಶವನ್ನು ಬೇರೆಯೆಂದು ಹೆಸರಿಸುವಂತೆ, ಆತ್ಮವೂ ಸಹ ಬೇರೆ ಬೇರೆ ರೂಪಗಳಿಂದಾಗಿ ಬೇರೆ ಎನ್ನಿಸುವುದು. ಮಗನ ಆತ್ಮ, ಹೆಂಡತಿಯ ಆತ್ಮ, ಗಂಡನ ಆತ್ಮ ಎಂಬ ಯಾವ ಭೇದವೂ ಇಲ್ಲ. ಇರುವುದೊಂದೇ ಆತ್ಮ.

ಸರ್ವ ಜೀವಿಗಳಲ್ಲಿಯೂ, ಸರ್ವ ಭೂತಗಳಲ್ಲಿಯೂ ಇರುವ ಆತ್ಮವು ಒಡೆಯನಾಗಿಯೇ ಇರುವುದು. ಅದು ಮೇಲಾಗಿ ಮೆರೆಯುವುದು.

ಲಹಿಳ

ಕನುಲ ಜೂಡಬಡಿನಿ ಕಲರಿಷವಿದೂರಿನಿ, ಮನಮುನಂಡ ಜೂರ್ಚಿ ಮರುಲುಗೊನಕ,
ತನುಕು ಮುಕ್ತಿ ಲೇದು ತಲಪುಲುವೆಂಡ್ಕೆನ, ವಿಶ್ವದಾಭಿರಾಮ ವಿನುರ ವೇಮ.

ಕಣ್ಣು ಕಾಣದಂಥ, ಕಲುಷದೂರನನ್ನು
ಮನದೊಳು ಗ್ರಹಿಸಿ, ಭ್ರಮೆಯ ಬಿಡದೆ,
ತನಗೆ ಮುಕ್ತಿಯಿಲ್ಲ, ತಾನೆ ಚಿಂತೆಯೊಳಿರೆ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮನು ನಾಮರೂಪಗಳನ್ನು ಹೊಂದಿದ ಎಲ್ಲ ವಸ್ತುವೂ ಆಗಿದ್ದಾನೆ, ಎನ್ನುತ್ತಾರೆ. ಅಂದ ಮೇಲೆ ಬ್ರಹ್ಮ ಕಣ್ಣಿಗೆ ಕಾಣುವುದಿಲ್ಲವೆಂದರೆ ಹೇಗೆ? ಇದಕ್ಕೆ ವೇದಾಂತಿಗಳ ಉತ್ತರ ಹೀಗೆ: ಯಾವುದರಿಂದ ನಾಮರೂಪಗಳು ಉಂಟಾಗಿವೆಯೋ, ಅದು ಕಣ್ಣಿಗೆ ಕಾಣದ ವಸ್ತು. ಸಮುದ್ರದ ಅಲೆಗಳನ್ನು ನಾಮರೂಪಗಳಿಂದ ವಿಂಗಡಿಸುತ್ತೇವೆ. ಈ ‘ಅಲೆ’ ಆ ‘ಅಲೆ’ ಎನ್ನುತ್ತೇವೆ. ಆದರೆ ಈ ಅಲೆಗಳ ಸಮೂಹಕ್ಕೆ ಜನ್ಮ ಕೊಡುವ ಸಾಗರದ ಕೆಳಗಿನ ಜಲ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಅಲ್ಲಿ ವಿಂಗಡಣೆಗೆ ಅವಕಾಶವೂ ಇಲ್ಲ.

ಬ್ರಹ್ಮ ಕಣ್ಣಿಗೆ ಕಾಣದ ಸದ್ವಸ್ತು. ‘ನ ಚಕ್ಷುಷಾ ಗೃಹ್ಯತೇ’. ಅವನು ಕಲುಷದೂರನು. ‘ನಿಷ್ಕಲಂ’. ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹಾದಿ ಸಾಧನಗಳಿಂದ ಕೂಡಿದವನಾಗಿ, ಇಂದ್ರಿಯಗಳನ್ನು ಒಳಕ್ಕೆ ಸೆಳೆದುಕೊಂಡು, ಏಕಾಗ್ರವಾದ ಮನಸ್ಸಿನಿಂದ ಧ್ಯಾನ ಮಾಡುವವನು ಮಾತ್ರ ಅವನನ್ನು ಗ್ರಹಿಸಬಹುದು.

ಮನಸ್ಸು ಏಕಾಗ್ರಗೊಳ್ಳುವದೆಂದರೆ, ಮನಸ್ಸು ಲೋಕದ ವಿಷಯವಸ್ತುಗಳೇ ಸತ್ಯ ಎನ್ನುವ ಭ್ರಮೆಯನ್ನು ತೊರೆಯಬೇಕು. ಮನಸ್ಸು ಮುತ್ತಿದ ಹಲವಾರು ಚಿತ್ತವೃತ್ತಿಗಳನ್ನು ಇಲ್ಲವಾಗಿಸಬೇಕು. ಅಂದರೆ ಚಿಂತೆ ಮಾಡುವದನ್ನೇ ಬಿಡಬೇಕು. ಆಗ ಮನಸ್ಸಿನ ಕನ್ನಡಿಯನ್ನು ಮುತ್ತಿದ ಧೂಳು ದೂರವಾಗುತ್ತದೆ. ಕೆಂಡವನ್ನು ಮುತ್ತಿದ ಹೊಗೆ ಇಲ್ಲವಾಗುತ್ತದೆ. ಮನಸ್ಸು ಬ್ರಹ್ಮ ಗ್ರಹಿಸುತ್ತದೆ; ಪ್ರತಿಬಿಂಬದಂತೆ. ಇದೇ ಮುಕ್ತಿ.

ಹೋಲಿಸಿ ನೋಡಿರಿ:

“ ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ
ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ |
ಜ್ಞಾನ ಪ್ರಸಾದೇನ ವಿಶುದ್ಧಸತ್ತ್ವ
ಸ್ತತಸ್ತು ತಂ ಪಶ್ಯತೇ ನಿಷ್ಕಲಂ ಧಾಯಮಾನಃ ||”

‘ಅವನನ್ನು ಕಣ್ಣಿನಿಂದಾಗಲಿ, ಮಾತಿನಿಂದಾಗಲಿ, ಇತರ ಇಂದ್ರಿಯಗಳಿಂದಾಗಲಿ ಗ್ರಹಿಸಲು ಆಗುವದಿಲ್ಲ; ತಪಸ್ಸಿನಿಂದಾಗಲಿ ಅಥವಾ ಕರ್ಮದಿಂದಾಗಲಿ (ಯಜ್ಞ ಬಾಹ್ಯ ಪೂಜಾದಿ) ಗ್ರಹಿಸಲಾಗುವದಿಲ್ಲ. ಆದರೆ ಜ್ಞಾನಪ್ರಸಾದದಿಂದ ಶುದ್ಧವಾದ ಅಂತಃಕರಣವುಳ್ಳವನುಗಿ ಧ್ಯಾನಮಾಡುವವನು, ಅದರಿಂದ ನಿಷ್ಕಲನಾದ ಆ ಆತ್ಮನನ್ನು ನೋಡುತ್ತಾನೆ. — ಮುಂಡಕ ಉ. ೩-೧-೮

ಲಹಿಜ

ಪಾಶಮುಲನುಗೂಡ ಬರಗದೇಹ ಮುನಕು, ಹಾನಿವಚ್ಚು ಗಾನ ನದಿಯುದೆಲಿಸಿ,
ಜ್ಞಾನ ದೀಪ ಕಳಿಕ ಗಡಕೂತ್ತವಲೆನನಿ, ವಿಶ್ವದಾಭಿರಾಮ ವಿನುರ ವೇಮ.

ಪಾಶಗಳಲಿ ಸೇರಿ ಪಾಪ!ದೇಹಕೆಲ್ಲ,
ಹಾನಿ ಬರುತಲಿಹುದು; ಹೊಳೆಯಲದುವೆ,
ಜ್ಞಾನ ದೀಪದಿಂದ ಸಾಗು ಹಾಕಬೇಕು.
ವಿಶ್ವದಾಭಿರಾಮ ಕೇಳು ವೇಮ.

ಮನುಜರಲ್ಲಿ ಹೆಚ್ಚಾಗಿ ಅಸುರೀ ಸ್ವಭಾವದವರಿರುತ್ತಾರೆ. ಈ ಜನರು ತಮ್ಮ ಹೊಟ್ಟೆಪಾಡಿಗಾಗಿ ಪವಿತ್ರ ಮಂತ್ರಗಳಿಗೆ ತಪ್ಪು ಅರ್ಥ ಹೇಳುವವರೆಗೂ ಹೋಗುತ್ತಾರೆ. ಜನರ ಮನಸ್ಸನ್ನು ಸೂಕ್ಷ್ಮದಿಂದ ಜಡದ ದಾಸ್ಯಕ್ಕೆ ನೂಕುತ್ತಾರೆ. ಮನುಷ್ಯನ ಮನಸ್ಸು ಸೂಕ್ಷ್ಮವಾದುದು. ಜಡದ ಅವಸ್ಥೆಗಳನ್ನು ದಾಟಿ ಈ ಸ್ಥಿತಿಯನ್ನು ಮುಟ್ಟಿದೆ. ಪ್ರಪಂಚದ ವಸ್ತುಗಳು ಜಡವಷ್ಟೇ. ಜಡವಸ್ತುವಿನ ಆಸೆಯೇ ಮನಸ್ಸಿಗೆ ಹೆಚ್ಚಾಗಿದ್ದರೆ, ಮನಸ್ಸೂ ಜಡವಾಗುವದು. ಏಕೆಂದರೆ ಮನಸ್ಸು ಮತ್ತು ಪ್ರಪಂಚದ ವಸ್ತುಗಳೆಲ್ಲ ಚಿತ್ತದಿಂದ ಆಗಿವೆ. ಸಾಗರದ ಪ್ರಶಾಂತ ನೀರು ಮತ್ತು ಚಲಿಸುವ ಅಲೆಗಳಂತೆ ಪ್ರಪಂಚದ ವಸ್ತುಗಳು ಮನಸ್ಸಿಗೆ ಗೋಚರಿಸುವವು, ಚಿತ್ತವೃತ್ತಿಗಳೆಂಬ ಅಲೆಗಳ ಮೂಲಕ ಈ ಅಲೆಗಳು ಹಗ್ಗದಂತೆ ವಿಷಯ ವಸ್ತುಗಳನ್ನು ಮನಸ್ಸಿನೊಂದಿಗೆ ಬಿಗಿಯುತ್ತವೆ. ಮನಸ್ಸು ಹೀಗೆ ಆಶೆಯೆಂಬ ನೂರಾರು ಹಗ್ಗಗಳಿಂದ ಕಟ್ಟಲ್ಪಡುವದು. ವಿಷಯ ವಸ್ತುಗಳ ಭೋಗಕ್ಕೆ ಸಾಧನವು ದೇಹ ತಾನೇ. ಈ ದೇಹವು ಸತ್ಯವೆಂಬ ಭ್ರಮೆಯಿಂದ, ಮನುಷ್ಯನು ಇಂದ್ರಿಯಗಳ ದಾಸನಾಗುತ್ತಾನೆ. ಆದರೆ 'ಸತ್ಯ' ಯಾವುದು ಎಂದು ತಿಳಿದರೆ, ಭ್ರಮನಿರಸನವಾಗುವದು. ಇದೋ ಗೀತೆಯಲ್ಲಿ ಶ್ರೀ ಕೃಷ್ಣ ಹೇಳುವದನ್ನು ಕೇಳಿರಿ: 'ದೇಹವುಳ್ಳ ಆತ್ಮನಿಗೆ ಈ ದೇಹದಲ್ಲಿ ಬಾಲ್ಯ, ಯೌವನ, ಜರಾವಸ್ಥೆಗಳು ಹೇಗೆ ಉಂಟಾಗುವುವೋ, ಹಾಗೆಯೇ ಬೇರೆ ದೇಹದ ಪ್ರಾಪ್ತಿಯೂ ಆಗುವುದು. ಈ ವಿಷಯದಲ್ಲಿ ಜ್ಞಾನಿಯು ಮರುಳಾಗುವದಿಲ್ಲ.' ನಿತ್ಯನೂ ಅವಿನಾಶಿಯೂ, ಪ್ರತ್ಯಕ್ಷ ಪ್ರಮಾಣಗಳಿಂದ ಗ್ರಹಿಸಲಸಾಧ್ಯನಾದ ಅಪ್ರಮೇಯನೂ ಆದ, ಆತ್ಮನ ಈ ದೇಹಗಳು ನಶ್ವರವೆಂದು ಜ್ಞಾನಿಗಳು ಹೇಳುತ್ತಾರೆ.' 'ಹಳೆಯ ಬಟ್ಟೆ ಬಿಟ್ಟು ಹೊಸ ಬಟ್ಟೆ ಉಡುವಂತೆ, ಆತ್ಮನು ಜೀರ್ಣದೇಹ ಬಿಟ್ಟು, ಹೇರೆ ಹೊಸ ಶರೀರ ಹೊಂದುತ್ತಾನೆ'. ಆತ್ಮಜ್ಞಾನವಾದಿತೆ, ದೇಹ ಭಾವ ನಾಶವಾಗುವದು. ಆಗ ಮನಸ್ಸನ್ನು ಮುತ್ತಿದ ಅವಿದ್ಯೆಯ ಕತ್ತಲೆಯು ಜ್ಞಾನ ದೀಪದಿಂದ ಇಲ್ಲವಾಗುವದು.

ಲಹರಿ ೬

ದೂರಯೋಚನಲಕು ದೂರಮೌ ದೈವಮುನ್, ದನುವುದೂರಮೈನ ದಗುಲುನಶ್ಯಡೆ,
ಜೀವಿದವ್ವುಜೀಯ ದೇವು ಡೈನಿಲುಚುನು, ವಿಶ್ವದಾಭಿರಾಮ ವಿನುರ ವೇಮ.

ದೂರ ಯೋಚನೆಗೂ ದೂರವಿಹುದು ದೈವ.
ತನುವು ದೂರವಾಗೆ, ತಗುಲಿತಾಗ.
ಜೀವಿದೂರಗೆಯ್ಯೆ, ದೇವ ತಾನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಜಲ-ಜೀವಿಗಳು, ಪ್ರಾಣಿಗಳು, ಬೆನ್ನೆಲುಬಿನ ಪ್ರಾಣಿಗಳು, ಸಸ್ತನ ಪ್ರಾಣಿಗಳು ಎಂದು ವಿಕಾಸವಾದವು, ಜೀವಿಗಳ ಕ್ರಮವನ್ನು ತಿಳಿಸುತ್ತದೆ. ಅಂಗಾಂಗಗಳು ಪ್ರತ್ಯೇಕವಾದಂತೆ, ಪ್ರಾಣಿಗಳಲ್ಲಿ ಕ್ರಮವಾಗಿ ಚಿತ್ತವೂ ಬದಲಾಗುತ್ತದೆ. ಮೊದಲು ಸ್ಥೂಲ ಚಿತ್ತ, ಸೂಕ್ಷ್ಮಚಿತ್ತ, ಮನಸ್ಸು ಅನಂತರ ಬುದ್ಧಿ ಇತ್ಯಾದಿಯಾಗಿ ಚಿತ್ತವಿಕಾಸ ಹೊಂದಿ

ಮಾನವ ಚಿತ್ತ, ಮನಸ್ಸು ಬುದ್ಧಿಗಳನ್ನೊಳಗೊಂಡಿರುತ್ತದೆ, ಚಿತ್ತ ಬುದ್ಧಿ-ಮನಸ್ಸುಗಳು ಕೆಳಗಿನ ಸ್ತರವಷ್ಟೇ. ಅವುಗಳಿಂದ ಬೇರೆಯಲ್ಲ. ಬುದ್ಧಿ ಚಿತ್ತದ ಸೂಕ್ಷ್ಮ ಅವಸ್ಥೆ. ಬುದ್ಧಿ ಇರುವದರಿಂದ ಮನುಷ್ಯ ತನ್ನ ಮೂಲವನ್ನು ತಿಳಿಯಬಲ್ಲವನಾಗಿದ್ದಾನೆ. ಇದಕ್ಕೆ ಕೇವಲ ಸಾಧನೆ ಬೇಕು. ಯಾವನು ಅಜ್ಞಾನಿಯೋ ಅವನಿಗೆ ಗವ್ಯಸ್ಥಾನ ದೂರವೆನಿಸುವದು. 'ದೂರಾತ್ ಸುದೂರೇ. ತತ್' ಅವನಿಗೆ 'ತತ್' ತನ್ನ ಹೃದಯದಲ್ಲಿಯೇ ಉಂಟು ಎಂಬುದು ತಿಳಿಯದು. ಆದರೆ ಜ್ಞಾನಿಯು ಮಾತು ಬೇರೆ. ಅವನು ದೇಹವು ನಶ್ವರ; ಆತ್ಮವೊಂದೇ ಸತ್ಯ; ಎಂದು ತಿಳಿದಿರುತ್ತಾನೆ. ಅವನಿಗೆ ದೇಹಭಾವವಿಲ್ಲ. ಈ ತನುವಿನ ಭಾವ ದೂರವಾದಾಗ, ದೈವ ಮನಸ್ಸಿಗೆ ತಗಲುವದು. ಇದನ್ನೇ ಬೇರೊಂದು ರೀತಿಯಿಂದ ತಿಳಿಯಬಹುದು. ಜೀವಾತ್ಮ ಪರಮಾತ್ಮ ಒಂದೇ. ದೇಹದ ಉಪಾಧಿಯಿಂದ ಜೀವಾತ್ಮನಾಗಿ ತೋರುವದು. ಘಟದ ಆಕಾಶದಂತೆ, ದೇಹಭಾವವೇ ಇಲ್ಲವಾದರೆ, ಜೀವಿಯೇ ದೇವನಾಗುವನು. ಆಗ ಮನಸ್ಥಿತಿಯು ಸರ್ವವೂ ಬ್ರಹ್ಮವೇ, ಎಂದು ತಿಳಿಯುವಷ್ಟು ಸೂಕ್ಷ್ಮತಮವಾಗುವದು.

ಹೋಲಿಸಿ ನೋಡಿರಿ:

ಬೃಹಚ್ಚ ತದ್ದಿವ್ಯಮಚಿಂತ್ಯರೂಪಂ
ಸೂಕ್ಷ್ಮಾಚ್ಚ ತತ್ ಸೂಕ್ಷ್ಮತರಂ ವಿಭಾತಿ ।
ದೂರಾತ್ ಸುದೂರೇ ತದಿಹಾಂತಿಕೇ ಚ
ಪಶ್ಯತ್ಸ್ವಿಹೈವ ನಿಹಿತಂ ಗುಹಾಯಾಮ್ ॥

— ಮುಂಡಕ ಉ. ೩-೧-೭

'ಅದು ಬೃಹತ್ತಾಗಿಯೂ, ದಿವ್ಯವಾಗಿಯೂ, ಅಚಿಂತ್ಯರೂಪವುಳ್ಳದ್ದಾಗಿಯೂ ಇದೆ; ಅದು ಸೂಕ್ಷ್ಮವಾದುದಕ್ಕಿಂತಲೂ ಸೂಕ್ಷ್ಮತರವಾಗಿ ಪ್ರಕಾಶಿಸುತ್ತಿರುವದು.

ಅದು ದೂರವಾಗಿರುವದಕ್ಕಿಂತಲೂ ಅತ್ಯಂತ ದೂರದಲ್ಲಿಯೂ, ಇಲ್ಲಿಯೇ ಸಮೀಪದಲ್ಲಿಯೂ ಇರುವದು. ಅದು ಇಲ್ಲಿ ನೋಡುವವರಿಗೆ ಗುಹೆಯಲ್ಲಿಯೇ ಇಡಲ್ಪಟ್ಟಿರುವದು.

ಲಹರಿ ೭

ಜ್ಞಾನನಿಷ್ಠೆ ಹೊಂದಿ ತನುವ ಮರೆಯುವವನು, ಕಾಮಿಕಾಡು ಮೋಕ್ಷಕಾಮಿಯವನು,
ನಿಯಮನಿಷ್ಠಲುಡುಗಿ ನಿರ್ಗುಣಮುಂದುಮು, ವಿಶ್ವದಾಭಿರಾಮ ವಿನುರ ವೇಮ.

ಜ್ಞಾನ ನಿಷ್ಠೆ ಹೊಂದಿ; ತನುವ ಮರೆಯುವವನು,
ಕಾಮಿಯಲ್ಲ, ನೋಕ್ಷ ಕಾಮಿಯವನು.
ನಿಯಮ ನಿಷ್ಠೆ ಉಡುಗಿ ನಿರ್ಗುಣತ್ವ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಕೆಲ ಅಸುರೀ ಪ್ರವೃತ್ತಿಯ ಜನರು ಉಂಟು. 'ಕಾಮದಿಂದ ಇದೆಲ್ಲ ಸೃಷ್ಟಿಯಾಗಿದೆ' ಎನ್ನುತ್ತಾರೆ. ಭೋಗದಾಸೆಗೆ ಬಿದ್ದು ಉದ್ರೇಕಗೊಳ್ಳುತ್ತಾರೆ; ಉನ್ಮತ್ತರಾಗುತ್ತಾರೆ. ಈ ಅವಸ್ಥೆಯಲ್ಲಿ ನೀತಿನಿಯಮಗಳ ಪರಿವೆಯೇ ಅವರಿಗಿರುವದಿಲ್ಲ. ಇವರನ್ನು 'ಕಾಮಿ' ಎಂದು ಕರೆಯುವದುಂಟು.

ಆದರೆ ಮನಸ್ಸಿನ ಇನ್ನೊಂದು ಅವಸ್ಥೆ ಇದೆ. ಇಲ್ಲಿ ಸತ್ಯವೆಂದರೇನು? ಎಂದು ಮನಸ್ಸು ಅರಿತುಕೊಳ್ಳುವದು. ಸತ್ವ, ರಜಸ್ಸು, ತಮಸ್ಸು ಕೇವಲ ಪ್ರಕೃತಿಯಿಂದ ಹುಟ್ಟಿದ ಗುಣಗಳು. ಇವು ದೇಹದಲ್ಲಿ ಆತ್ಮನನ್ನು ಬಂಧಿಸಿವೆ. ಸತ್ತ್ವ ಜ್ಞಾನ-ಸುಖ ಸಂಗದಿಂದ ಬಂಧಿಸುವದು; ರಜಸ್ ಕರ್ಮಸಂಗದಿಂದ ಬಂಧಿಸುವದು; ತಮಸ್ ಪ್ರಮಾದದಲ್ಲಿ ತಮೆಸೀಗುಣದಿಂದ ನಿದ್ರೆ-ಆಲಸ್ಯ; ಸಂಗವುಂಟು ಮಾಡಿ ಬಂಧಿಸುವದು. ಸತ್ತ್ವದಿಂದ ಸುಖ, ಜ್ಞಾನ, ರಜೋಗುಣದಿಂದ ಲೋಭ-ದುಃಖ ಮತ್ತು ಮೂರೂ ಗುಣಗಳಿಂದ ಬೇರೊಬ್ಬ ಕರ್ತೃವನ್ನು ನೋಡದವನೇ ಜ್ಞಾನಿ. ಇಂಥ ಜ್ಞಾನನಿಷ್ಠನು 'ದೇಹೋತ್ಪತ್ತಿಗೆ ಕಾರಣವಾಗಿರುವ ಈ ಮೂರೂ ಗುಣಗಳನ್ನು ದಾಟಿ, ಜನ್ಮ, ಮೃತ್ಯು, ಮುಪ್ಪು ಇವುಗಳ ದುಃಖದಿಂದ ಬಿಡಲ್ಪಟ್ಟವನಾಗಿ, ಅಮೃತತ್ವವನ್ನು ಹೊಂದುತ್ತಾನೆ.' ಮೋಕ್ಷ ಹೊಂದುವನು. ಕಾರಣ ಜ್ಞಾನನಿಷ್ಠೆ ಹೊಂದಿ. ತನುವ ಮರೆಯುವವನು ಕಾಮಿಯಲ್ಲ; ಮೋಕ್ಷಕಾಮಿಯವನು. ಇಂಥ ಜೀವನ್ಮುಕ್ತನಿಗೆ, ಧ್ಯೇಯವಾದ ಜ್ಞಾನದಲ್ಲಿ ನಿಷ್ಠೆಯುಂಟು. ಸಾಧನವಾದ ನಿಯಮದಲ್ಲಿ ನಿಷ್ಠೆ ಹೊಂದುವ ಅಗತ್ಯ ಉಳಿಯುವದಿಲ್ಲ. ಅವನು ನಿರ್ಗುಣನು. ಅವನು ಲೋಕ ವ್ಯವಹಾರದ ಮಧ್ಯೆ ಇದ್ದರೂ, ಅವನೊಳಗೆ ಲೋಕವ್ಯವಹಾರೆ ಭಾವವಿಲ್ಲ. ಮರದೊಳಗೆ ಅಗ್ನಿಯುಂಟು; ಅಗ್ನಿಯಲ್ಲಿ ಮರವಿರುವದಿಲ್ಲವೆಂಬಂತೆ.

೬೩೪

ಜಗಮುನಂದು ಲೇದು ಜಲಮುಲಂದುನು ಲೇದು, ನಿಗಮವೇದ್ಯಮೈನ ನಿಜಪದಂಬು,
ಸಗುಣ ನಿರ್ಗುಣಮುಲ ಸಾಧಿಂಚಿಚೂಡುಮು, ವಿಶ್ವದಾಭಿರಾಮ ವಿನುರ ವೇಮ.

ಜಗದಲ್ಲಿಯು ಇಲ್ಲ; ಜಲದಲ್ಲಿಯು ಇಲ್ಲ.
ನಿಗಮ ವೇದ್ಯವಾದ ನಿಜ ಪದವಿಯು.
ಸಗುಣ ನಿರ್ಗುಣದೊಳು ಸಾಧಿಸಿ ಸಲೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

'ಬ್ರಹ್ಮ', 'ಬ್ರಹ್ಮಪದವಿ' ಎಂದು ಉಪನಿಷತ್ತುಗಳು ಬಾರಿ ಬಾರಿಗೂ ಸಾರುತ್ತಿವೆ. ಆ ಬ್ರಹ್ಮ ಹೇಗಿದೆ? ಅದು ಇರುವದೆಲ್ಲಿ? ಎಂಬ ಪ್ರಶ್ನೆ ಇದ್ದೇ ಇದೆ. ಕೆಲವು ಪವಿತ್ರ ಸ್ಥಾನಗಳಲ್ಲಿ ಮಹಿಮೆಯುಂಟು. ಅಲ್ಲಿಗೆ ಹೋಗಿ ಬಂದರೆ, ಬ್ರಹ್ಮಪದವಿ ದೊರೆಯುವದು, ಎಂದು ಪುರಾಣ ಪಂಡಿತರು ಹೇಳುತ್ತಾರೆ. ಇಂಥ ಸ್ಥಳಗಳೇ ಕ್ಷೇತ್ರಗಳು. ಆದರೆ ಭೂಭಾಗದ ಯಾವುದೊಂದು ಪ್ರದೇಶ ಇನ್ನೊಂದಕ್ಕಿಂತ ಹೆಚ್ಚು ಕಡಿಮೆಯಲ್ಲ.

ಕೆಲ ನದೀ ತೀರಗಳು ಜಲಕುಂಡಗಳು ಪವಿತ್ರವೆಂದೂ ಅವೇ ಪುರಾಣಗಳು ಸಾರುತ್ತಿವೆ. ಕಾಶಿ-ರಾಮೇಶ್ವರಾದಿಗಳು ತೀರ್ಥಗಳೆನಿಸುತ್ತವೆ. ಗಂಗೆ-ಗೋದಾವರಿ ಕಾವೇರಿ ನದಿಗಳ ದಂಡೆಯ ಅನೇಕ ಸ್ಥಳಗಳು ಇಂಥ ತೀರ್ಥಗಳೆಂದು ಹೆಸರಾಗಿವೆ. ಬ್ರಹ್ಮಪದವು ಇಂಥ ಕ್ಷೇತ್ರದಲ್ಲಿಯೂ ಇಲ್ಲ; ತೀರ್ಥದಲ್ಲಿಯೂ ಇಲ್ಲ. ಜಗದಲ್ಲಿಯೂ ಇಲ್ಲ; ಜಲದಲ್ಲಿಯೂ ಇಲ್ಲ.

ಹಾಗಾದರೆ, ನಿಜ ಪದವಿ ಅಂದರೆ 'ಸತ್ಯ' ಇರುವುದೆಲ್ಲಿ? ಅದನ್ನು ಸಾಧಿಸುವುದೆಂತು? "ಅದು ಬೃಹತ್ತಾಗಿಯೂ, ದಿವ್ಯವಾಗಿಯೂ, ಅಚಿಂತ್ಯರೂಪವುಳ್ಳದ್ದಾಗಿಯೂ ಇದೆ. ಅದು ಸೂಕ್ಷ್ಮವಾದುದಕ್ಕಿಂತ ಸೂಕ್ಷ್ಮತರವಾಗಿ ಪ್ರಕಾಶಿಸುತ್ತಿರುವದು. ಅದು ಇಲ್ಲಿ ನೋಡುವವರಿಗೆ ಗುಹೆಯಲ್ಲಿಯೇ ಇಡಲ್ಪಟ್ಟಿರುವದು." ಎಂದು ಮುಂಡಕೋಪನಿಷತ್ತು ಬ್ರಹ್ಮನನ್ನು ಕುರಿತು ಹೇಳುತ್ತಿದೆ. ಬ್ರಹ್ಮ ಸಗುಣವಾಗಿರಬಹುದು; ನಿರ್ಗುಣವಾಗಿರಬಹುದು. ಹಾಗೆಂದರೇನು? ಬ್ರಹ್ಮ ಪುರುಷ-ಪ್ರಕೃತಿ ಎಂದು ತಿಳಿವಳಿಕೆಗಾಗಿ ವಿಂಗಡಿಸಲ್ಪಡುವದಷ್ಟೇ. ಪುರುಷ ಸಾಕ್ಷಿ; ಪ್ರಕೃತಿ ಸತ್ವ, ರಜಸ್ಸು, ತಮಸ್ಸು ಗುಣಗಳಿಂದ ವ್ಯಕ್ತವಾಗುವದು. ಬ್ರಹ್ಮ ವಿಷ್ಣು ಮಹೇಶ್ವರ ಎನ್ನುವ ಸಗುಣಬ್ರಹ್ಮ ಸ್ಥಿತಿಗಳು, ಅದೇ ಸಾಕ್ಷಿಪುರುಷನ ಮೂರು ಅವಸ್ಥೆಗಳು. ಸತ್ತ್ವ, ರಜಸ್ಸು ತಮಸ್ಸುಗಳು ಪ್ರಭಾವಿಯಾದಾಗ, ಕ್ರಮವಾಗಿ ಬ್ರಹ್ಮ, ವಿಷ್ಣು, ಮಹೇಶ್ವರ ಎಂದು ಪುರುಷನನ್ನು ಕರೆಯುವರು. ಸಾಧಕನು ಈ ಮೂರು ಅವಸ್ಥೆಗಳನ್ನು ಏಕ ಕಾಲಕ್ಕೆ ಅನುಭವಿಸಿ, ಅದನ್ನು ದಾಟಿ, ನಿರ್ಗುಣ ಸ್ಥಿತಿಗೇರಬೇಕು.

೬೩೯

ಚದುವುಲನ್ನಿ ಚದಿವಿ ಚಾಲವಿವೇಕಿಯೈ, ಮಗಿಡಿ ತನ್ನೆರುಗಕ ಮುಂದ ಜನುಡು,
ವಿಸುಗುಚದುವಟಂಚು ವೆರ್ರಿಯ್ಯ ಚೆಡಿಪೋವು. ವಿಶ್ವದಾಭಿರಾಮ ವಿನುರ ವೇಮ.

ಓದನೆಲ್ಲ ಓದಿ, ಅತಿ ವಿವೇಕಿಯಾಗಿ,
ಮತ್ತೆ ತನ್ನ ತಿಳಿಯೆ ಮುಂದ ಮನುಜ.
ಬೇಸರದೋದೆಂದು ಬೆಪ್ಪನಾಗಿ ಕೆಡುವ.
ವಿಶ್ವದಾಭಿರಾಮ ಕೇಳು ವೇಮ.

"ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷಾದಿ ಶಾಸ್ತ್ರ ಇವು ಅಪರಾ ವಿದ್ಯೆ. ಯಾವುದರಿಂದ ಅಕ್ಷರವು ಹೊಂದಲ್ಪಡುವದೋ ಅದು ಪರಾ ವಿದ್ಯೆ" (ಮುಂಡಕ ಉ. ೧-೧-೫) ವೇದಾದಿಗಳನ್ನು ಓದಿರಬಹುದು, ಒಳಿತು ಕೆಡುಕು ಏನೆಂಬುದನ್ನು ತಿಳಿಯಬಲ್ಲ ವಿವೇಕ ಬುದ್ಧಿ ಹೊಂದಿರಬಹುದು. ಯಾವದು ಒಳಿತು, ಯಾವದು ಕೆಡುಕು ಎಂಬುದನ್ನು ತಿಳಿಸಿ ಹೇಳಬಲ್ಲವನಾಗಿರಬಹುದು. 'ಆದರೆ ಈ ಆತ್ಮ, ಪ್ರವಚನದಿಂದ ಲಭ್ಯವಲ್ಲ ಗ್ರಂಥಧಾರಣ ಶಕ್ತಿಯಿಂದಲೂ ಬಹು ಶ್ರವಣದಿಂದಲೂ ಲಭ್ಯವಲ್ಲ. (ಮುಂಡಕ ಉ. ೩-೨-೩)" ಇದನ್ನು ಬ್ರಹ್ಮನಿಷ್ಠನಾದ ಗುರುವು ಮಾತ್ರ ತೋರಬಲ್ಲನು. ಹೀಗೆ ಮಾಡಲು ತಪ್ಪಿ,

ಏನೆಲ್ಲ ಓದಿಕೊಂಡು, ಕೊನೆಗೆ ಓದಿನಲ್ಲಿಯೂ ಏನುಂಟು ? ಎಂದು ತನ್ನಲ್ಲಿ ತಾನೇ ಬೇಸರಪಟ್ಟುಕೊಂಡು ಅನೇಕರು ಹುಚ್ಚರಾಗಿ ಹೋಗುವರು.

[ಹೋಲಿಸಿ ನೋಡಿರಿ:—

ಅವಿದ್ಯಾಯಾಮಂತರೇ ವರ್ತಮಾನಾಃ | ಸ್ವಯಂ ಧೀರಾಃ ಪಂಡಿತಂ
ಮನ್ಯಮಾನಾಃ |
ಜಂಘನ್ಯಮಾನಾಃ ಪರಿಯಂತಿ ಮೂಢಾ | ಅಂಧೇನೈವ ನೀಯಮಾನಾ
ಯಥಾಂಧಾಃ ||

" ಅವಿದ್ಯೆಯ ಮಧ್ಯೆಯಲ್ಲಿ ಇರುವವರಾಗಿ, ತಾವೇ ಧೀರರು, ಪಂಡಿತರು ಎಂದು ತಿಳಿದುಕೊಂಡು ಪೀಡಿಸಲ್ಪಡುತ್ತ ಕುರುಡನು ಕರೆದುಕೊಂಡು ಹೋಗುತ್ತಿರುವ ಕುರುಡರಂತೆ ಈ ಮೂಢರು ಸುತ್ತುತ್ತಿರುವರು. "

ಮುಂಡಕೋಪನಿಷತ್ ೧-೨-೮]

೬೪೦

ಕಾಂತವ್ಮೆನಪ್ರೇಮ ಸ್ವಾಂತಮು ರಂಜಿಂಚು, ಜಿಂತ ತೀರುದರುಣಿ ಚಿಕ್ಕುನಪುಡೆ,
ಶಿವುನಿಯಂದು ಭಕ್ತಿ ಚಿಂತಯಮರ ಬೋದು, ವಿಶ್ವದಾಭಿರಾಮ ವಿನುರ ವೇಮ.

ಕಾಂತೆಯಲಿ ಪ್ರೇಮ ಸ್ವಂತ ರಂಜನೆಯದು.
ಚಿಂತೆ ತೀರುತಿಹುದು ಸಿಗಲು ತರುಣಿ.
ಶಿವನೊಳಿರುವ ಭಕ್ತಿ ಚಿಂತೆಯೊಳಗೆ ಇರದು.
ವಿಶ್ವದಾಭಿರಾಮ ಕೇಳು ವೇಮ.

ಪ್ರಪಂಚದಲ್ಲಿರುವ ವಸ್ತುಗಳಲ್ಲಿ ಪರಸ್ಪರ ಆಕರ್ಷಣೆ ಇರುತ್ತದೆ. ಪ್ರಪಂಚದಲ್ಲಿರುವ ವಸ್ತುವಿನತ್ತ ಅವುಗಳ ಸೂಕ್ಷ್ಮರೂಪವಾದ ಚಿತ್ತದ ಆಕರ್ಷಣೆಯು ಕಾಮವೆನಿಸುತ್ತದೆ. ರುಚಿ ರುಚಿಯ ತಿಂಡಿ-ತಿನಿಸುಗಳತ್ತ ಮನಸ್ಸು ಆಕರ್ಷಿತವಾಗುವುದೂ, ಕಾಮ; ಸುವಾಸನೆ ಆಘ್ರಾಣಿಸಲು ತವಕ ಬಟ್ಟು, ಗಂಧ ದ್ರವ್ಯದತ್ತ ಆಕರ್ಷಿತವಾಗುವುದಾಗಲಿ, ಸ್ತ್ರೀ ಭೋಗಾದಿಗಳನ್ನು ಬಯಸಿ, ಸ್ತ್ರೀಯರತ್ತ ಆಕರ್ಷಿತರಾಗುವುದಾಗಲಿ, ಕಾಮವೇ ಆಗಿದೆ. ಕಾಮ ಇರುವಾಗಿನ ಮನಸ್ಸಿನ ಸ್ಥಿತಿಯೇ ಆಸಕ್ತಿ ಎನಿಸುವುದು. ಇನ್ನು ಅಲೌಕಿಕ ವಸ್ತು ಎಂದರೆ ಪರವಸ್ತು, ಸದ್ವಸ್ತು ಯಾವುದೋ, ಅಂಥ ಆತ್ಮದತ್ತ ಆಕರ್ಷಿತವಾಗುವುದು ಪ್ರೇಮ. ಪ್ರೇಮ ಇರುವಾಗಿನ ಮನಸ್ಸಿನ ಸ್ಥಿತಿಯೇ ಭಕ್ತಿ.

ಕಾಂತೆಯರನ್ನು ಕುರಿತು ಇರುವ ಆಕರ್ಷಣೆಯೇ ಕಾಮ. ಅದನ್ನು ಪ್ರೇಮವೆಂದು ಕರೆಯುವುದು, ತಮ್ಮ ಮನಸ್ಸಿಗೆ ಬಳಿದ ಬಣ್ಣವಷ್ಟೇ. ಅದು ಸ್ವಂತ ರಂಜನೆ. (ರಂಜ ಅಂದರೆ ಬಣ್ಣ ಬಳಿ). ತರುಣಿ ಸಿಕ್ಕಾಗ, ನಮ್ಮ ಮನಸ್ಸಿನ ಚಿಂತೆ ತೀರುವುದು. ಇದು ಆ ಕ್ಷಣದ ಮಟ್ಟಿಗೆ ಮಾತ್ರ. ಮೇಲಾಗಿ ತರುಣಿಯ ಪ್ರಾಪ್ತಿ ಅವಳನ್ನು ಪಡೆಯುವ

ಚಿಂತೆಯಿಂದ ಪೂರೈಸಬಹುದು. ಆದರೆ ಶಿವನ ಪ್ರಾಪ್ತಿ, ಚಿಂತೆ ಮಾಡುವುದರಿಂದ ದೊರೆಯದು. ಮನಸ್ಸಿನಲ್ಲಿ ಚಿಂತೆ ಹೆಚ್ಚಾದಷ್ಟೂ, ಶಿವನು ದೂರಾಗುವನು. ನಿಶ್ಚಿಂತವಾದ ಮನಸ್ಥಿತಿಯೇ ಶಿವಸ್ಥಿತಿ. ಇಲ್ಲಿ ನಿತ್ಯಾನಂದ ಉಂಟು. ಇದು ಒಮ್ಮೆ ಲಭ್ಯವಾದ ನಂತರ, ಮರಳಿ ಬೇರಾವುದೂ ಬೇಡವೆನ್ನಿಸುವುದು. ಇಂಥ ಶಿವನಲ್ಲಿ ಭಕ್ತಿ ಉಂಟಾಗಬೇಕು. ಮನಸ್ಸಿನ ಶುದ್ಧಿಯೇ ಭಕ್ತಿ.

೬೪೧

ಪೂಜ ಜೇಯ ಜೇಯ ಬೂಜಾರಿ ತಾನೌನು, ಪೂಜ್ಯವಸ್ತುವೆನ್ನ ಭವಿನಿ ತಾನೆ.
ಏಡಬೂಜಜೇಯು ನೆಲ್ಲದಿಕ್ಕುಲುದಾನೆ, ವಿಶ್ವದಾಭಿರಾಮ ವಿನುರ ವೇಮ.

ಪೂಜೆ ಮಾಡಿ ಮಾಡಿ, ಪೂಜಾರಿ-ಯಾಗುವ
ಪೂಜ್ಯವಸ್ತುವೆಂದು ಭೂಮಿಯಲ್ಲಿ,
ಎಲ್ಲಿ ಪೂಜಿಸುವುದು ? ಎಲ್ಲ ದಿಶೆಯೆಲಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸಿನಲ್ಲಿರುವ ಎಲ್ಲ ಚಿಂತೆಗಳನ್ನು ಇಲ್ಲವಾಗಿಸುವುದೇ ಪೂಜೆ. ಪೂಜಿಯಾಗಿಸುವುದೇ ಪೂಜೆ. ವಿಷಯ-ವಸ್ತುಗಳತ್ತ ಮನಸ್ಸು ಇಂದ್ರಿಯಗಳ ಮುಖಾಂತರ ಹರಿಯದಂತೆ ಇಂದ್ರಿಯ ನಿಗ್ರಹ ಸಾಧಿಸಿ, ಚಿತ್ತವೃತ್ತಿಗಳು ಒಂದೇ ಬಗೆಯವಾಗುವಂತೆ ಧ್ಯಾನಿಸಿ, ಚಿತ್ತವೃತ್ತಿಗಳನ್ನು ನಿಲ್ಲಿಸುವುದೇ ಪೂಜೆ. ಆದರೆ ಪೂಜೆಯೆಂದರೆ, ಯಾವುದೋ ಜಡ ವಸ್ತುವಿನ ಬಗೆಗೆ ಚಿಂತಿಸುವುದಲ್ಲ. ಮೂರ್ತಿ, ಚಿತ್ರಪಟಗಳನ್ನು ಧ್ಯಾನಗೆಯ್ದರೆ, ಅವುಗಳನ್ನು ನೋಡಿದ ಕರ್ಮಫಲವಾಗಿ, ನಿದ್ರೆಯಲ್ಲಿಯೂ ಮನಸ್ಸಿಗೆ ಗೋಚರಿಸುವವು. ಸುಜ್ಞಾನಿಗಳವರು ಯಾವುದು ಸತ್ಯವೋ, ಅದನ್ನೇ ಪೂಜಿಸುವುದು. ಪೂಜೆಗೆ ಪ್ರತೀಕೋಪಾಸನೆ ಸಾಧುವಲ್ಲ. ಇಂಥ ದಿಕ್ಕು ಹೆಚ್ಚು ಒಳ್ಳೆಯದು, ಇನ್ನೊಂದು ದಿಕ್ಕು ಸ್ವಲ್ಪು ಕೆಡುಕು, ಎಂದೂ ಅಲ್ಲ. ಬ್ರಹ್ಮ ಎಲ್ಲ ದಿಕ್ಕುಗಳಲ್ಲಿಯೂ ವ್ಯಾಪ್ತನಾಗಿ ಉಂಟು. "ಈ ಅದ್ಭುತವಾದ ಬ್ರಹ್ಮವೇ ಮುಂದೆ, ಹಿಂದೆ ದಕ್ಷಿಣದಲ್ಲಿ ಮತ್ತು ಉತ್ತರದಲ್ಲಿ, ಕೆಳಗೆ ಮತ್ತು ಮೇಲೆ ಬ್ರಹ್ಮವೇ ಪ್ರಸಾರವಾಗಿರುವುದು. ಈ ವರಣೀಯತಮವಾದ ಬ್ರಹ್ಮವೇ ಈ ಸರ್ವವು" (ಮುಂಡಕ ಉಪ. ೨-೨-೧೨.) ಎಲ್ಲಿ ಪೂಜಿಸುವುದು ? ಎಂದು ಯಾರೂ ಪ್ರಶ್ನಿಸಬೇಕಾಗಿಲ್ಲ. ಸರ್ವದಿಶೆಗಳಲ್ಲಿಯೂ ಬ್ರಹ್ಮನುಂಟು. ಅವನು ಸರ್ವವ್ಯಾಪ್ತನು, ವಿಷ್ಣುವು. (ವ್ಯಾಪ್ತ) ಅವನು ಎಲ್ಲೆಡೆ ಇರುವನೆಂದು ಅರಿತು, ಭಕ್ತಿ ಹೊಂದುವುದೇ ಪರಮಪೂಜೆ.

೬೪೨

ಪುರಹರುನಕು ನೇತ ಬುರುವು ತಾನೇಸಿನೆ, ಸ್ಥಿರಮುಗ್ದಲ್ಲು ಜ್ಞಾನಜೀವಮಯ್ಯೆ.
ನೇತಕೇಮಿವಚ್ಚೆ ನಿಜಭಕ್ತಿಹೀತುವು ವಿಶ್ವದಾಭಿರಾಮ ವಿನುರ ವೇಮ

ಪುರಹರನಿಗೆ ಜೇಡ ಹುಳುವು ತಾನು ನೆಯ್ಯೆ,
ಸ್ಥಿರವಾಯಿತು, ಜ್ಞಾನಜೀವಿಯೊಗಿ;
ನೆಯ್ಗೆಯಿಂದ ಎನು ? ನಿಜ ಭಕ್ತಿಯೆ ಮುಖ್ಯ.
ವಿಶ್ವದಾಭಿರಾಮ ಕೇಳು ವೇಮ.

ಜೇಡರ ಹುಳುವು ನೂಲುಗಳನ್ನು ಹೊರಕ್ಕೆ ತಂದು ಪುನಃ ಒಳಕ್ಕೆ ತೆಗೆದು ಕೊಳ್ಳುತ್ತದೆ. ಅದು ನೆಯ್ಗೆಯ ಕಾರ್ಯ ಮಾಡುತ್ತದೆ. ಬೇರಾವ ಕಾರಣವಿಲ್ಲದೆ, ನೂಲು ಹೊರಕ್ಕೆ ತಂದು ಎಳೆದುಕೊಳ್ಳುವಂತೆ, ಬ್ರಹ್ಮನಿಂದ ಈ ಬಾಹ್ಯ ಪ್ರಪಂಚದ ಚರಾಚರ ವಸ್ತುಗಳೆಲ್ಲ ಸೃಷ್ಟಿಯಾಗಿ ಮತ್ತೆ ಲಯವಾಗುತ್ತವೆ, ಎಂಬ ಭಾವವೂ ಜೇಡರ ಹುಳುವಿನ ದೃಷ್ಟಾಂತದಿಂದ ವ್ಯಕ್ತವಾಗುವುದು. ಇದಲ್ಲದೆ, ದೇವನು ಜಗತ್ತಿನ ಸರ್ವ ಪ್ರಾಣಿಗಳನ್ನು ಮಗ್ಗದಲ್ಲಿ ಹೀಚಿ ಹಿಡಿದ ದಾರದ ಮಧ್ಯೆ, ಲಗಳಿ ಒಗೆದು ಒಂದುಗೂಡಿಸಿದಂತೆ, ಎಸಗಿದ್ದಾನೆ. ಅಂದ ಮೇಲೆ, ನೇಯ್ಗೆಯ ಕಾರ್ಯವೇ ವಿಶ್ವಕರ್ಮನ ಕಾರ್ಯ. ಜೇಡರ ಹುಳುವಿನ ಕಾರ್ಯ ಪವಿತ್ರ ನೇಯ್ಗೆಯ ಕಾರ್ಯವಾಯಿತು; ಎಂದು ಭಾವಿಸಿ ಜೇಡರ ಹುಳುವಿಗೆ ಜ್ಞಾನಿಯನ್ನು ಹೋಲಿಸುವವರೂ ಉಂಟು.

ಆದರೆ ನೇಯ್ಗೆಯಿಂದ ಏನು ? ನೆಯ್ಯುವಿಕೆ ಕಾರ್ಯದ ಮಹತಿ ಹೆಚ್ಚಿಸುವದಾದರೆ, ಬೇರೆ ವಿಧಗಳುಂಟು. ಅದೇ ನೋಡಿರಿ. ಜೇಡರ ಹುಳು ದಾರಗಳನ್ನು ಬಿಟ್ಟು, ಜಾಲ ಹೆಣೆಯುವಾಗ, ಎಷ್ಟೊಂದು ತಲ್ಲೀನವಾಗಿ ಕಾರ್ಯ ಮಾಡುತ್ತದೆ. ತದೇಕಮಗ್ನವಾಗಿ ಕೆಲಸದಲ್ಲಿ ನಿರತವಾಗಿರುತ್ತದೆ. ಪರಮಾತ್ಮನ ಕಾರ್ಯದಲ್ಲಿ ನಾವು ಆ ರೀತಿ ಭಕ್ತಿಯಿಂದ ನಿರತರಾದರೆ, ಪ್ರಯೋಜನವುಂಟು. ಜೇಡರ ಹುಳುವಿನ ಹೋಲಿಕೆ ಸಾರ್ಥಕವಾದೀತು !

೮೪೩

ಪಂಚಭೂತಮುಲನು ಬರಗನಿಂದ್ರಿಯಮುಲು, ಸುಚರಿಂಚಿನಪುಡೆ ಜಗಮುಗಲುಗು.
ಸಂಚರಿಂಪಕುನ್ನ ಜಗಮೆಟ್ಲು ಕಲುಗುರಾ ? ವಿಶ್ವದಾಭಿರಾಮ ವಿನುರ ವೇಮ.

ಪಂಚಭೂತ ಮತ್ತೆ ಪರಮ ಇಂದ್ರಿಯಗಳು,
ಸಂಚರಿಸುತ ಇರಲು ಜಗತ್ ಉಂಟು.
ಸಂಚರಿಸದೆ ಇರಲು, ಜಗವೆಂತಾಗುವುದು. ?
ವಿಶ್ವದಾಭಿರಾಮ ಕೇಳು ವೇಮ.

'ಗಚ್ಛತಿ ಇತಿ ಜಗತ್.' ಗಮನವುಳ್ಳದ್ದು; ಆದುದರಿಂದ ಜಗತ್ ಎನ್ನಿಸಿದೆ. ಇಲ್ಲಿ ಗಮನ ಇಲ್ಲವೆ ಸಂಚಾರ ಉಳ್ಳದ್ದು ಯಾವುದು ? ಪ್ರಪಂಚದ ಸಕಲ ವಸ್ತುಗಳು ಯಾವುದರಿಂದ ಉಂಟಾಗಿವೆಯೋ, ಆ ಮಹಾಭೂತಗಳು. ಇವುಗಳಾವುವೆಂದರೆ, ಆಕಾಶ, ವಾಯು, ತೇಜಸ್, ಅಪ್, ಪೃಥಿವಿ. (ಚಿತ್ತವು ಸೂಕ್ಷ್ಮವಾದುದು; ಆಕಾಶವು ಚಿತ್ತಕ್ಕಿಂತ ಸ್ಥೂಲವಾದುದು. ವಾಯು ಆಕಾಶಕ್ಕಿಂತರೂ ಸ್ಥೂಲವಾದುದು. ಎಲ್ಲಕ್ಕಿಂತ ಹೆಚ್ಚು ಸ್ಥೂಲವಾದುದೇ ಘನ ಪದಾರ್ಥ; ಅಂದರೆ ಪೃಥಿವಿ.) ಆಕಾಶದಿಂದ ಪೃಥಿವಿಯು ವರೆಗಿನ ಭೂತ

ಗಳಿಲ್ಲ ನಿತ್ಯಪ್ರವಾಹಗಳು. ಈ ಭೂತಗಳ ಅಸ್ತಿತ್ವ ನಮಗೆ ವಿದಿತವಾಗುವದು, ಹೇಗೆಂದರೆ, ಅವುಗಳಿಂದ ಹೊರಟ ಅನೇಕ ಅಲೆಗಳ ಅಣ್ವಂಶಗಳ ಸಮೂಹದ ಹೊಂದಿಕೆಯಾದ ಚಿತ್ರವೇ, ನಮ್ಮ ಇಂದ್ರಿಯ ವೃತ್ತಿಗಳಿಂದ ಗ್ರಹಿಸಲ್ಪಡುವದು. ಈ ಅಣ್ವಂಶಗಳಿಗೆ ತನ್ಮಾತ್ರೆಗಳೆನ್ನುವರು. ಆಕಾಶ, ವಾಯು, ತೇಜಸ್, ಅಪ್, ಪೃಥಿವಿ ಭೂತಗಳಿಗೆ ಅನುಕ್ರಮವಾಗಿ, ಶಬ್ದ, ಶಬ್ದ-ಸ್ಪರ್ಶ, ಶಬ್ದ-ಸ್ಪರ್ಶ-ರೂಪ-ರಸ-ಗಂಧ ಹೀಗೆ ತನ್ಮಾತ್ರೆಗಳುಂಟು.

ಜಗತ್ತಿನ ವಸ್ತುವು ಇದೆಯೆಂದು ಗೊತ್ತಾಗುವದು, ಈ ತನ್ಮಾತ್ರೆಗಳನ್ನು ಇಂದ್ರಿಯ ಮೂಲಕ ಚಿತ್ರಗ್ರಹಿಸುವದರಿಂದ. ದರ್ಶನ ಕಾರ್ಯಗೈವ ಚಕ್ಷು, ಶ್ರವಣದ ಕರ್ಣ, ಆಘ್ರಾಣದ ನಾಸಿಕ, ಆಸ್ವಾದನದ ಜಿಹ್ವೆ ಮತ್ತು ಸ್ಪರ್ಶನದ ತ್ವಕ್ ಇವು ಜ್ಞಾನೇಂದ್ರಿಯಗಳು. ಗ್ರಹಣೆಯ ವಿಧಾನಕ್ಕನುಸರಿಸಿ, ಇವು ತನ್ಮಾತ್ರೆಗಳನ್ನು ಗ್ರಹಿಸಲು, ಮನಸ್ಸಿಗೆ ಸಹಾಯಕವಾಗಿವೆ. ಕರ್ಮೇಂದ್ರಿಯಗಳು ತನ್ಮಾತ್ರೆಗಳನ್ನು ಉಂಟು ಮಾಡುತ್ತವೆ. ಕಥನ ಗೈವ ವಾಕ್, ಶಿಲ್ಪನ ಗೈವ ಪಾಣಿ, ಚರಣ ಗೈವ ಪಾದ, ವರ್ಜನ ಗೈವ ಪಾಯು (ಗುದ), ಜನನ ಗೈವ ಉಪಸ್ಥ ಇವೇ ಐದು ಕರ್ಮೇಂದ್ರಿಗಳು. ನಾವು ಯಾವದನ್ನು ಜಗತ್ ಎಂದು ಕರೆಯುತ್ತೇವೆಯೋ, ಅದು ಪಂಚಭೂತಗಳ ಮತ್ತು ಪರಮ ಇಂದ್ರಿಯಗಳ ಸಂಚಾರದಿಂದ ಮಾತ್ರ ಆದದ್ದು. ಸಂಚಾರವೇ ಇಲ್ಲವಾದರೆ ಜಗತ್ ಇಲ್ಲ. ಮನಸ್ಸನ್ನು ನಿಲ್ಲಿಸಿದಾಗ, ಸಂಚಾರವಿಲ್ಲ. ಅಂದ ಮೇಲೆ ಜಗತ್ ಇಲ್ಲ,

೮೪೪

ನಿಯತವೃತ್ತಿಮೀರಿ ನಿಟಲದುರ್ಗಮು ಜೇರಿ, ಭಯಮುಲೇಕಯುಂಡು ಬ್ರಹ್ಮವೇತ್ತ,
ಜಯಮುಗಲುಗಮುಕ್ತಿ ಜವಿಜೂಚು ಚುಂಡುನು, ವಿಶ್ವದಾಭಿರಾಮ ವಿನುರ ವೇಮ.

ನಿಯತ ವೃತ್ತಿಮೀರಿ ಹಣೆಯ ಕೋಟೆ ಸೇರಿ.
ಭಯವಿಲ್ಲದಿರುವವ ಬ್ರಹ್ಮ-ವೇತ್ತ.
ಜಯವು ದೊರೆಯೆ, ಮುಕ್ತಿ ಸವಿ ನೋಡುತಿರುವನು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮವೇತ್ತ ಇಲ್ಲವೆ ಬ್ರಾಹ್ಮಣ ಎಂದು ಯಾರನ್ನು ಕರೆಯಬಹುದು ? ನಿಯತ ವೃತ್ತಿಮೀರಿ, ಹಣೆಯ ಕೋಟೆ ಸೇರಿ, ನಿರ್ಭಯನಾಗಿರುವವನು, ಬ್ರಹ್ಮವೇತ್ತನು.

ವೃತ್ತಿಯೆಂದರೆ ಮನಸ್ಸು ವ್ಯಕ್ತವಾಗುವ ವಿಧಾನ. ಬ್ರಹ್ಮಚಕ್ರದಲ್ಲಿ ಮನಸ್ಸಿಗೂ ಗತಿಯುಂಟು. ಗತಿಯ ಶಕ್ತಿ ಪ್ರಕಟಗೊಳ್ಳುವದಕ್ಕೆ ಮನಸ್ಸು ರಾಗ, ದ್ವೇಷ, ಭಯ ಇತ್ಯಾದಿ ಉದ್ಯೋಗದಲ್ಲಿ ನಿರತವಾಗುವದು; ಇದೇ ವೃತ್ತಿ. ಮಾನಸಿಕವಾಗಿ ಹೇಳುವದಾದರೆ, ಇದಕ್ಕೆ ವ್ಯಕ್ತ-ಭಾವವೆನ್ನುವರು. ಹೀಗೆ ವೃತ್ತಿಗಳು ಗುಣ-ಕರ್ಮದಿಂವ ಉಂಟಾಗುವವು. ಗುಣ-ಕರ್ಮಗಳ ಹೊಂದಾಣಿಕೆಯು ವೃತ್ತಿಗಳನ್ನು ಒಂದು ನಿಯತಿಗೊಳಪಡಿಸುವವು. ಇಂಥ ನಿಯತ ವೃತ್ತಿಯು ಕೇವಲ ಲೌಕಿಕವಾದುದು. ಈ ಸ್ಥಿತಿಯನ್ನು ಮನಸ್ಸು ದಾಟಿ, ಹಣೆಯ ಕೋಣೆಯನ್ನು ಸೇರಬೇಕು. ಭ್ರೂ ಮಧ್ಯೆ (ಹುಬ್ಬುಗಳ

ನಡುವೆ) ಅಜ್ಞಾಚಕ್ರವುಂಟು; ಅದು ದ್ವಿದಳ ಕಮಲ; ಎಂದು ಯೋಗಿಯು ವರ್ಣಿಸುತ್ತಾನೆ. ಅದು ಕೋಟೆಯಂತೆ ಭದ್ರವಾದ ಸ್ಥಳ ಎಂದೂ ಯೋಗಿಗಳ ಲಾಕ್ಷಣಿಕ ಅರ್ಥ. ಸರಳ ಭಾಷೆಯಲ್ಲಿ ಹೇಳುವುದಾದರೆ, ಹೊರಗಿನ ವಿಷಯಗಳತ್ತ ಮನಸ್ಸು ಹರಿಯದಂತೆ, ಚಿತ್ತವೃತ್ತಿಗಳನ್ನು ನಿಲ್ಲಿಸಿ, ಧ್ಯಾನಮಗ್ನನಾಗಬೇಕು. ಧ್ಯಾನದಿಂದ ಸಮಾಧಿ ಸ್ಥಿತಿಯವರೆಗಿನ ಸಾಧನೆಯಲ್ಲಿ ಕುಂಡಲಿನಿ ಶಕ್ತಿ ಏಳುವದು. ಅನೇಕ ಆಶೆಗಳೂ ತತ್ಕಾಲ ಉಂಟಾಗುತ್ತವೆ. ಭಯಂಕರ ಅನುಭವವಾಗುವದು. ಆಗಲೂ ಭಯವಿಲ್ಲದವನಾಗಬೇಕು. ಅಂಥವನು ಮಾತ್ರ ಬ್ರಹ್ಮವೇತ್ತ. ಅವನಿಗೆ ಅಲ್ಲಿ ಜಯ ದೊರೆಯಿತೆಂದರೆ ತೀರಿತು. ಅವನ ಮಾನಸಿಕ [ಸೂಕ್ಷ್ಮ] ಶರೀರವು ಅವಿದ್ಯಾಮಯ ಶಕ್ತಿಯನ್ನು ವಿರೋಧಿಸಿ, ವಿದ್ಯಾಮಯ ಶಕ್ತಿಯ ಪ್ರಭಾವದಲ್ಲಿ ಬರುವದು; ಇದುವೇ ದೈವೀ ಆಕರ್ಷಣೆ. ಈ ಸ್ಥಿತಿಯಲ್ಲಿ, ಮನಸ್ಸು ದೇಹದಿಂದ ಬಿಡುಗಡೆ ಹೊಂದುವದು. ಇದು ಮುಕ್ತಿ ಎನ್ನಿಸುವದು.

ಲಳಜ

ದಾನಮುಮರಜೀಯ ದರಿಜೇರ್ಚುನಯ್ಯದಿ, ಮನಮುನಮ್ಮೆನೇನಿ ಮಾಯಮುಂಚು,
ಜ್ಞಾನಕಳಿಕನಮ್ಮ ಜಂಪುನು ವೈರುಲ, ವಿಶ್ವದಾಭಿರಾಮ ವಿನುರ ವೇಮ.

ದಾನ ಧರ್ಮ ಗೆಯ್ಯೆ ದಾರಿ ಸೇರಬಹುದು.
ಮನಸು ನಂಬಿದೊಡನೆ ಮಾಯೆ ಮುಸುಕು.
ಜ್ಞಾನ ಕಾಂತಿ ನಂಬೆ, ಜಡಿಯೆಬಹುದು ವೈರಿ.
ವಿಶ್ವದಾಭಿರಾಮ ಕೇಳು ವೇಮ.

ಏನೂ ಇಲ್ಲದವರಿಗೆ ಅವರು ಬಯಸಿದ್ದನ್ನು ಕೊಡುವದು ದಾನ. ದಾನ ನೀಡುವಾಗ ಪ್ರತಿಫಲಾಪೇಕ್ಷೆ ಇರಕೂಡದು. ಇನ್ನು 'ಧಾರೆಣಾತ್ ಧರ್ಮ ಇತ್ಯಾಹುಃ ಧರ್ಮೋ ಧಾರಯತಿ ಪ್ರಜಾನಾಮ್.' 'ಒಂದಾಗಿಸಿ ಹಿಡಿಯುವದರಿಂದ ಧರ್ಮವೆನಿಸುವದು. ಧರ್ಮವು ಪ್ರಜೆಗಳನ್ನು ಒಂದಾಗಿಸಿ ಹಿಡಿಯುತ್ತದೆ.' ಹೀಗೆ ದಾನ-ಧರ್ಮ ಮಾಡುವದರಿಂದ ಮನಸ್ಸು ವಿಶಾಲವಾಗುತ್ತದೆ. ಅನ್ಯರಲ್ಲಿ ತನ್ನನ್ನು ಕಾಣಬಲ್ಲವನಾಗುತ್ತಾನೆ. ಸಾಧನೆಯು ಮುಂದುವರಿದಾಗ, ಸರ್ವಭೂತಾಂತರಾತ್ಮನಾದ ಬ್ರಹ್ಮವೇ ಇದೆಲ್ಲ ಎಂಬ ಅನುಭವವಾಗಬೇಕಾದರೆ, ದಾನ-ಧರ್ಮಗಳು ಪ್ರಾರಂಭಿಕ ಸಾಧನೆಗಳೆಂದು ಹೊಳೆಯಬಹುದು. ಹೀಗೆ ದಾನ ಧರ್ಮದಿಂದ ಯುಕ್ತದಾರಿ ಸೇರಬಹುದು.

ಆದರೆ ಯಾರು ಮನಸ್ಸು ನಂಬುವರೋ, ಅವರಿಗೆ ದಾರಿ ಸಿಗುವದು ಕಷ್ಟಸಾಧ್ಯ. ಮನಸ್ಸು ಚಿತ್ತವೃತ್ತಿಗಳಿಂದ ಮುತ್ತಿರುತ್ತದೆ. ವಿಷಯ ವಸ್ತುಗಳನ್ನು ಕುರಿತು ಉಂಟಾದ ಚಿತ್ತವೃತ್ತಿಗಳಿಂದ ಸತ್ಯವು ಮುತ್ತಲ್ಪಟ್ಟಿರುವದು. ಅಗ್ನಿಯು ಹೊಗೆಯಿಂದ ಮುಚ್ಚಲ್ಪಟ್ಟ ಹಾಗೆ. ಯಾವುದು 'ಸತ್', ಅದು ಅಗ್ನಿ. 'ಸತ್' ಗೋಚರಿಸಬೇಕಾದರೆ, ಮಾಯೆಯ ಮುಸುಕು ತೊಲಗಬೇಕು. ನಮ್ಮ ಮನಸ್ಸು ಯಾವದರತ್ತ ನಿತ್ಯ ಜೀವನದಲ್ಲಿ ಎಳೆಯುವದೋ, ಅದು ಒಳ್ಳೆಯದೇ ಆಗಿರುವದಿಲ್ಲ. ಏಕೆಂದರೆ ಮನಸ್ಸು ಅವಿದ್ಯೆಯ ಮುಸುಕಿನಿಂದ ಮುತ್ತಿ ಹೊರಗಿನ ವೃತ್ತಿಗಳು, ತಮ್ಮ ವಸ್ತುಗಳತ್ತ ಆಕರ್ಷಿತ

ವಾಗುತ್ತವೆ. ಹಾಗಾದರೆ ಮುಂದಿನ ಮಾರ್ಗವೇನು? ಜ್ಞಾನಕಾಂತಿಯನ್ನು ನಂಬಬೇಕು. ಅಂದರೆ, ಸತ್ಯಜ್ಞಾನದ ಪ್ರಕಾಶವು. ಯಾವದರಲ್ಲಿ ಹೊಳೆಯುವದೋ, ಅದನ್ನನುಸರಿಸಿ ನಡೆಯಬೇಕು. ಆಗ ಮಾತ್ರ ಅಜ್ಞಾನವೆಂಬ ವೈರಿಯನ್ನು ನಿಗ್ರಹಿಸಬಹುದು.

ಲಳಟ

ತಥ್ಯಮ್ಮೆನ ಪೂರ್ಣ ತತ್ತ್ವಮುನೀಲೋನ, ಮಿಥ್ಯನರಯಗಾನೆ ಮಿತ್ರಮಗುನು,
ಸತ್ಯನಿತ್ಯ ಕರ್ಮ ಸಾಕ್ಷಿ ಬ್ರಹ್ಮಂಬಯಾ, ವಿಶ್ವದಾಭಿರಾಮ ವಿನುರ ವೇಮ.

ತಥ್ಯವಿಷ್ಟೆ: ಪೂರ್ಣತತ್ತ್ವನಿನ್ನೊಳಿಹುದು
ಮಿಥ್ಯವರಿಯಲಾಗ ಮಿತ್ರನಹುದು.
ಸತ್ಯ ನಿತ್ಯ ಕರ್ಮ ಸಾಕ್ಷಿ ಬ್ರಹ್ಮನೊಬ್ಬ.
ವಿಶ್ವದಾಭಿರಾಮ ಕೇಳು ವೇಮ.

ಉಪಾಸಕ, ಉಪಾಸ್ಯಗಳು ಯಾವವು? ಉಪಾಸ್ಯವು ಉಪಾಸಕನಿಂದ ಬೇರಾದುದೋ ಹೇಗೆ? ಉಪಾಸ್ಯವನ್ನು ಹೊಂದುವ ದಾರಿ ಯಾವದು? ಇಂಥ ಚರ್ಚೆ ವಿವೇಚನೆಗಳಲ್ಲಿ ತಥ್ಯವಿರುವದು ಇಷ್ಟು ಮಾತ್ರ. 'ತತ್ ತ್ವಮ್ ಅಸಿ' 'ಅದೇ ನೀನಾಗಿರುವಿ'. ಅರ್ಥಾತ್ ತತ್ತ್ವವು ನಿನ್ನೊಳಗೇ ಇರುವದು. ಮುಂಡಕೋಪನಿಷತ್ತಿನ ಮಂತ್ರದ ಅರ್ಥ ಹೀಗೆ: "ಕರ್ಮ ತಪಸ್ಸು ಇವೆಲ್ಲವೂ ಪುರುಷನೇ. ಪರಮಾಮೃತವಾದ ಬ್ರಹ್ಮ. ಹೃದಯದಲ್ಲಿರುವ ಇದನ್ನು ಹೇ ಸೋಮ್ಯ, ಯಾವನು ಅರಿತುಕೊಳ್ಳುವನೋ, ಅವನು ಅವಿದ್ಯಾ ಗ್ರಂಥಿಯನ್ನು ಇಲ್ಲಿಯೇ ನಾಶಮಾಡುತ್ತಾನೆ." [೨-೧-೧೦] ಮಿಥ್ಯವಾವುದೋ ಅದನ್ನು ತಿಳಿದರೆ, ಆಗ ಸತ್ಯವು ಮಿತ್ರನಂತಾಗುವದು. ಸತ್ಯ ಮಿಥ್ಯೆ ಹೇಗಿವೆ? "ಸರ್ವದಾ ಜೊತೆಯಲ್ಲಿರುವ ಸುಖರಾದ ಎರಡು ಪಕ್ಷಿಗಳು ಒಂದೇ ವೃಕ್ಷವನ್ನು ಆಲಿಂಗಿಸಿಕೊಂಡಿವೆ. ಅವೆರಡರಲ್ಲಿ ಒಂದು ಸವಿಯಾದ ಹಣ್ಣನ್ನು ತಿನ್ನುತ್ತಿದೆ. ಇನ್ನೊಂದು ತಿನ್ನದೇ ನೋಡುತ್ತಿದೆ. ಪುರುಷನು ಆ ಒಂದೇ ವೃಕ್ಷದಲ್ಲಿ ಮಗ್ನನಾಗಿ, ಮೋಹಗೊಂಡು, ದೈನ್ಯದಿಂದ ಶೋಕಿಸುತ್ತಿರುವನು; ಸೇವಿಸಲ್ಪಟ್ಟವನೂ, ತನಗಿಂತ ವಿಲಕ್ಷಣನೂ ಆದ ಈತನನ್ನು ಮತ್ತು ಇವನ ಮಹಿಮೆಯನ್ನು ಹೀಗೆಂದು ಯಾವಾಗ ನೋಡುತ್ತಾನೆಯೋ, ಆಗ ಶೋಕವಿಲ್ಲದವನಾಗುತ್ತಾನೆ" [ಮುಂಡಕ ಉಪ ೩-೧-೧೨] ತಿನ್ನದೇ ನೋಡುವ ದೆಂದರೇನು? ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡುವದೇ ಆಗಿದೆ. ನಿತ್ಯ ಕರ್ಮಗಳು ಅಂಟದ ಬೇರಾವ ಉಪಾಯವೂ ಇಲ್ಲ. ಸತ್ಸೋಪಾಸನೆಯೇ ಇರಲಿ; ನಿತ್ಯಕರ್ಮವೇ ಇರಲಿ; ಇದೆಲ್ಲದಕ್ಕೂ ಸಾಕ್ಷಿಯಾದವನು ಒಬ್ಬನೇ ಒಬ್ಬ. ಅವನೇ ಬ್ರಹ್ಮ.

ಲಳಠ

ಟಕ್ಕಮೆತ್ತಿ ಚಿಪ್ಪು ಮೊಕ್ಕಡೇ ದೇವುಡು, ನಿಕ್ಕಮುಗನುಲೋನ ನಿಲ್ಚಿಯುಂಡು,
ಜಕ್ಕಜೂಚುನತನಿ ಸಂತೋಷಮುನ, ಮುಂಚು, ವಿಶ್ವದಾಭಿರಾಮ ವಿನುರು ವೇಮ.

ಧ್ವಜವನೆತ್ತಿ ಸಾರು, ದೇವನೊಬ್ಬನೆಂದು.
ನಿಜವಿದಿಹುದು ಒಳಗೆ, ನಿಂತಿರುವನು.
ಜೊಕ್ಕನೋಡಲವನ ಸಂತಸದಿ ಮುಳುಗುವೆ.
ವಿಶ್ವದಾಭಿರಾಮ ಕೇಳು ವೇಮ.

ದೇವನೊಬ್ಬನೇ. ಒಬ್ಬನಲ್ಲದೆ ಜಗಕೆ ಇಬ್ಬರು ಕರ್ತರಿಲ್ಲ. 'ಏಕಂ ಸದ್ವಿಪ್ರಾ ಬಹುಧಾ ವದಂತಿ, ಅಗ್ನಿಂ, ಯಮಂ ಮಾತರಿಶ್ವಾನಮಾಹುಃ' (ಋಗ್ವೇದ ೧-೧೬೪-೪೬) ಸತ್ ಒಂದೇ. ಪಂಡಿತರು ಅದನ್ನೇ ಅಗ್ನಿಯೆಂದೂ, ಯಮನೆಂದೂ, ಮಾತರಿಶ್ವನೆಂದೂ ಕರೆಯುವರು. ಹೀಗೆ ವೇದಕಾಲವಲ್ಲಿ ಸಹ ಒಂದೇ ದೇವನ ವಿವಿಧ ವ್ಯಕ್ತ ರೂಪಗಳಿಂದು ಇಂದ್ರ, ಅಗ್ನಿ, ವರುಣ ಇತ್ಯಾದಿ ದೇವತೆಗಳನ್ನು ಆರ್ಯರು ಪೂಜಿಸುತ್ತಿದ್ದರು. ಬ್ರಾಹ್ಮಣದಲ್ಲಿ ಈ ದೇವತೆಗಳ ಪೂಜಾವಿಧಿಯನ್ನು ನಿರ್ದೇಶಿಸಲಾಯಿತು. ಮುಂದೆ ವೇದಾಂತವೆಂದು ಪ್ರತೀತಿಗೊಂಡ ಉಪನಿಷತ್ತುಗಳಲ್ಲಿ, ವೇದ ಸಂಸ್ಕೃತಿಯನ್ನು ವಿರೋಧಿಸಿ, ಬಾಹ್ಯ ಪೂಜೆ; ಅನೇಕ ದೇವತೆಗಳ ಪೂಜೆಗೆ ಪ್ರತಿಯಾಗಿ, ಹೃದಯದೊಳಗೆ ದೇವನನ್ನು ಮನಶ್ಶಕ್ತಿಯಿಂದ ನೋಡುವ ಪ್ರಯತ್ನ ಮೊದಲಾಯಿತು. ದೇವನೊಬ್ಬ; ಅವನೇ ಸರ್ವಭೂತಾಂತರಾತ್ಮನಾದ ಬ್ರಹ್ಮ, ಎಂಬ ಕಲ್ಪನೆಯೂ ಮೂಡಿಬಂದಿತು.

ಸರ್ವಾಂತರ್ಯಾಮಿಯಾದ ಬ್ರಹ್ಮ ಒಳಗೆ ನಿಂತಿರುವನು. ಅವನು ಆನಂದಮಯನು. ಅವನನ್ನು ನೋಡಿದಾಗ, ಅಂದರೆ, ಸಾಧನೆಗೆಯ್ದು ಮನ ಶುದ್ಧಿಗೊಳಿಸಿ ಅನುಭವಿಸಿದಾಗ, ಶೋಕವು ಉಳಿಯುವುದಿಲ್ಲ. ಎಲ್ಲವೂ ಆನಂದಮಯವಾಗಿರುತ್ತದೆ.

(ಹೋಲಿಸಿ ನೋಡಿರಿ :—

ಒಬ್ಬನಲ್ಲದೆ ಜಗಕೆ, ಇಬ್ಬರುಂಟೇ ಮತ್ತೆ ।
ಒಬ್ಬ ಸರ್ವಜ್ಞಕರ್ತನು ಜಗಕೆಲ್ಲ
ಒಬ್ಬನೇ ದೈವ ಸರ್ವಜ್ಞ ॥)

೪೪೮

ಜೀವುಡನಗಮೀರು ಚಿಕ್ಕುಲುಪಡನೇಲ ? ವಾಯುವಾಕಸಂಬು ವಹ್ನಿಗೂಡಿ,
ದೇಹಿಯನಗನೊಪ್ಪೆ ದೇಹಪಂಬುಲಂಪ್ಪಿ, ವಿಶ್ವದಾಭಿರಾಮು ವಿನುರ ವೇಮು.

ಜೀವನೆಂದು ನೀವು ಸಿಕ್ಕು ತೊಳಲುತಿಹಿರಿ.
ವಾಯುವಾಗಸಗಳು ವಹ್ನಿಕೂಡಿ,
ದೇಹಿ ಎಂದುಕೊಳುತ ದೇಹ ಸೇರಿ ಇಹವು.
ವಿಶ್ವದಾಭಿರಾಮು ಕೇಳು ವೇಮು.

ಮೊದಲು ಇದ್ದದು ಒಂದೇ ಸದ್ವಸ್ತು. ಅದುವೇ ಬ್ರಹ್ಮ. ಬ್ರಹ್ಮ ಶುಭ್ರ ಸ್ಫಟಿಕದಂತೆ ಎಂದು ಭಾವಿಸಿರಿ. ಸಂಸಾರವೆಂದರೆ ದಾಸವಾಳ ಹೂವೆಂದು ಭಾವಿಸಿರಿ. ಸಂಸಾರ ಸಂಬಂಧದಿಂದ ಬ್ರಹ್ಮ ಬೇರೆ ಆಗಿ, ತೋರುವುದು; ಅದು ಸಂಸಾರಿಯ ಗುಣಗಳನ್ನೇ ಹೊಂದಿದಂತೆ ಕಾಣುವುದು. ಸ್ಫಟಿಕವು ಶುಭ್ರವಿತ್ತು. ದಾಸಾಳ ಹೂವಿನ ಸಂಬಂಧವಿರುವಷ್ಟು ಕಾಲ ಕೆಂಪಾಗಿ ಕಾಣುವುದಾದರೂ, ತನ್ನ ಆಂತರಿಕ ಶುಭ್ರತೆಯನ್ನೇನೂ ಕಳೆದುಕೊಂಡಿಲ್ಲ. ಬ್ರಹ್ಮವೂ ಜನನ-ಮರಣ ಸಂಸಾರ ಸಂಬಂಧವಿರುವಷ್ಟು ಕಾಲ ಬೇರೆಯಾಗಿ ತೋರುವುದು. ಈ ಸ್ಥಿತಿಯಲ್ಲಿ ಮಾತ್ರ ಬಂಧನವೆನಿಸುವುದು. ಆಗ ಜೀವವೆನಿಸುವುದು; ಪ್ರತ್ಯಗಾತ್ಮವೆನಿಸುವುದು.

ಬ್ರಹ್ಮನು ಜೀವನೆನಿಸುವುದು ದೇಹಸಂಬಂಧದಿಂದ ತಾನೇ ? ಈ ದೇಹ ರಚನೆಯಾದರೂ ಎಂತು ? ಅದರಲ್ಲಿ ವಾಯು ಉಂಟು; ಆಕಾಶ ಉಂಟು; ಅಗ್ನಿ ಉಂಟು. ಇವೆಲ್ಲ ಒಳಗೆ ಕುಳಿತು, 'ನೀಡಿರಿ ನೀಡಿರಿ'; 'ದೇಹಿ ದೇಹಿ' ಎಂದು ಅನ್ನುತ್ತ ದೇಹ ಸೇರಿವೆಯಷ್ಟೇ. ವಾಯುವೆಂದರೆ, ಪ್ರಾಣವಾಯುಗಳು : ಪ್ರಾಣ, ಅಪಾನ, ಸಮಾನ, ವ್ಯಾನ ಉದಾನಗಳು ಅಂತರ್ವಾಯುಗಳು; ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯಗಳು ಬಹಿರ್ವಾಯುಗಳು. ನಾವು ಸೇವಿಸುವ ಅನ್ನವೆಲ್ಲ ಅಗ್ನಿಗೆ ಆಹುತಿಯಾಗುವುದಷ್ಟೇ. ಜಠರಾಗ್ನಿಯಲ್ಲಿ ಎಲ್ಲವೂ ಪಚನವಾಗಿ ಶರೀರಕ್ಕೆ ಬೇಕಾದ ಉಷ್ಣತೆಯು ದೊರೆಯುತ್ತದೆ. ಜೀವ ಎಂದರೆ 'ಜ್ಞ' ಅರ್ಥಾತ್ 'ಚೈತನ್ಯಮಯ' ಎನ್ನುತ್ತಾರೆ. ಆ ಚೈತನ್ಯದಾಯಕವಾದುದೇ ಶರೀರದ ಉಷ್ಣತೆ; ಅಗ್ನಿ. ಸೂಕ್ಷ್ಮವಾದುದರಲ್ಲಿ ಸ್ಥೂಲವಾದುದು ಸೇರಬಲ್ಲದು. ನಾವು ವಾಯುವನ್ನು ತೆಗೆದುಕೊಳ್ಳುತ್ತೇವೆ. ಅಂದ ಮೇಲೆ ವಾಯುವಿಗಿಂತ ಸೂಕ್ಷ್ಮವಾದ ಆಕಾಶ ಶರೀರದಲ್ಲಿ ಉಂಟು. ಶಬ್ದ ಕೇಳುತ್ತೇವೆ. ಶಬ್ದ ತನ್ಮಾತ್ರೆ ಇರುವಲ್ಲೆಲ್ಲ ಆಕಾಶವುಂಟು. ಅಂದ ಮೇಲೆ ದೇಹವೆಂದರೆ, ವಾಯು ಆಗಸ-ಅಗ್ನಿಯಷ್ಟೇ.

೪೪೯

ಜೀವಗುಣಮುಗಲ್ಲು ಜೀವಂಬು ಬ್ರಹ್ಮಂಬು, ಸಾಟವಚ್ಚು ಟಿಟ್ಲು ಸರವಿದೆಲಿಯ,
ನೂರಿಕುಕ್ಕಸಿಂಗ ನೊಕ್ಕಟಯಗುನೊಕ್ಕೊ, ವಿಶ್ವದಾಭಿರಾಮು ವಿನುರ ವೇಮು.

ಜೀವ ಗುಣವು ಇಹುದು; ಜೀವ, ಬ್ರಹ್ಮ, ಎಂದು.
ಸಾಟಿಯೆಂತು ಇಹುದು ? ಸರಿಯು ತಿಳಿಯೆ.
ಊರ ನಾಯಿ ಸಿಂಹ ಒಂದೆ ಎನಿಸಬಹುದೆ ?
ವಿಶ್ವದಾಭಿರಾಮು ಕೇಳು ವೇಮು

ಜೀವಗುಣವು ಇರುವಾಗ, ಜೀವನೂ, ಬ್ರಹ್ಮನೂ, ಇರುವರೆಂಬ ಭಾವವಿರುವುದು. ಜೀವನು ಜ್ಞಾತೃ; ಜೀವಾತ್ಮನು ಕರ್ತೃ; ಜೀವನಿಗೆ ಜನನ-ಮರಣಗಳಿಲ್ಲ. ಜನನ ಮರಣಗಳಿರುವುದು, ಶರೀರಕ್ಕೆ ಮಾತ್ರ. ಇದೇನೋ ನಿಜ. ಆದರೆ ದೇಹ ಸಂಬಂಧವಿರುವಾಗ, ಮಾನಸಿಕವಾಗಿ ಆ ರೀತಿ ತಿಳಿದುಕೊಂಡಾಗ, ಜೀವವನ್ನು ಬ್ರಹ್ಮವೆನ್ನುವುದೆಂತು. ? ದಾಸವಾಳದ ಹೂವು ಶುಭ್ರ ಸ್ಫಟಿಕದ ಬಳಿ ಇರುವಾಗ, ಕೆಂಪಾಗಿ ಕಾಣುವ ಸ್ಫಟಿಕವನ್ನು ಶುಭ್ರವಾಗಿ ಕಾಣುವುದೆಂದು ಹೇಳಲಾದೀತೇ ? ಕೆಂಪು ಶುಭ್ರ ವರ್ಣಕ್ಕೆ ಸಮವಾಗಲಾರದು. ಸಂಸಾರ ಸಂಬಂಧದಿಂದ ದೂರವಾದ ಜೀವ, ಬ್ರಹ್ಮವೇ ಆಗಿರುವುದು. ದಾಸವಾಳ ಹೂವಿನಿಂದ ರಂಜಿತವಾಗದ ಸ್ಫಟಿಕ ಶುಭ್ರವಾಗಿಯೇ ತೋರುವಂತೆ.

ಊರ ನಾಯಿ ಸಿಂಹಗಳು ಒಂದೇ ಜಾತಿಯ ಪ್ರಾಣಿಗಳು. ಊರಿನ ಪರಿಸ್ಥಿತಿಯ ಪ್ರಭಾವದಿಂದ ಊರ ನಾಯಿ ಸಾಧು-ಪ್ರಾಣಿಯಾಗಿರುತ್ತದೆ. ಅಡವಿಯ ಸಿಂಹ, ಸ್ವಚ್ಛಂದ ವಿಹಾರಿಯಾಗಿರುತ್ತದೆ. ಒಂದೇ ಪ್ರಾಣಿವರ್ಗಕ್ಕೆ ಸೇರಿದ ಸಿಂಹ-ನಾಯಿಗಳಲ್ಲಿ ಸಂಬಂಧದಿಂದಾಗಿ ಇಷ್ಟೊಂದು ಬದಲಾವಣೆ ತೋರುವುದು. ಜೀವ ಗುಣವು ಇರುವವರೆಗೆ ಜೀವ ಬ್ರಹ್ಮಕ್ಕಲ್ಲಿ ಭೇದವುಂಟು.

(ಹೋಲಿಸಿ ನೋಡಿರಿ :

ಜೀವ ಪರಮಾತ್ಮ ಲೋಕಂಗಳಂದವನು |
ಭಾವಿಸುವರೊಳು ಭೇದಮುಂಟು ನೋಡು ||
— ನಿಜಗುಣಯೋಗಿ ಅನುಭವಸಾರ (ಸಂಧಿ ೨–ಸೂತ್ರ ೯)

ಪಜಂ

ಪರಮುಗೋರನಟ್ಟ ಪಾಮರ ಜನುಲಕು, ಸ್ಥಿರಮುಕಾದು ಬುದ್ಧಿ ಚಿಕ್ಕಬೋದು,
ತರಮುಗಾನಿ ಪರಮು ದಲಪೋತಯಗು ರೋತ, ವಿಶ್ವದಾಭಿರಾಮ ವಿನುರ ವೇಮ.

ಪರವ ಕೋರದಂಥ ಪಾಮರ ಜನಗಳಿಗೆ
ಸ್ಥಿರವಿಲ್ಲ ಬುದ್ಧಿ; ಸಿಕ್ಕು ಸಾಯ್ವು.
ತನಗೆಟುಕದ ಪರವ, ತಾ ನೆನೆಯೆ ಬೇಸರು.
ವಿಶ್ವದಾಭಿರಾಮ ಕೇಳು ವೇಮ.

ವಿದ್ಯೆಗಳಲ್ಲಿ ಎರಡು ವಿಧ. ಒಂದನೆಯದು ಅಪರಾ ವಿದ್ಯೆ, ಎರಡನೆಯದು ಪರಾ ವಿದ್ಯೆ. ಯಾವುದರಿಂದ ಅಕ್ಷರ ಅಂದರೆ ಬ್ರಹ್ಮ ಹೊಂದಲ್ಪಡುತ್ತದೆಯೋ, ಅದು ಪರಾವಿದ್ಯೆ. ವೇದ–ಯಜ್ಞ ಕರ್ಮ ಇತ್ಯಾದಿ ಎಲ್ಲವೂ ಅಪರಾ ವಿದ್ಯೆ. 'ಈ ಹದಿನೆಂಟು ಯಜ್ಞರೂಪಗಳು ನಾಶವಾಗುವವುಗಳು ಮತ್ತು ಅದೃಢವಾದುವು. ಅವುಗಳಲ್ಲಿ ಕೀಳು ತೆರದ ಕರ್ಮವು ಉಕ್ತವಾಗಿರುತ್ತದೆ. ಇದು ಶ್ರೇಯಸ್ಸೆಂದು ಯಾವ ಮೂಢರು ಸತೋಷಪಡುತ್ತಾರೆಯೋ, ಅವರು ಪುನಃ ಜರಾಮೃತ್ಯುಗಳನ್ನು ಹೊಂದುತ್ತಾರೆ. (ಮುಂಡಕ ಉಪ. ೧–೨–೭) ಪರವನ್ನು ಕೋರದ ಮೂಢ ಜನರಿಗೆ ಸ್ಥಿರಬುದ್ಧಿ ಇರುವುದಿಲ್ಲ. 'ಅಸಂಶಯಂ ಮಹಾ ಬಾಹೋ ಮನೋ ದುರ್ನಿಗ್ರಹಂ ಚಲವತ್' 'ಎಲೈ ಮಹಾಬಾಹುವೇ, ಮನಸ್ಸು ದುರ್ನಿಗ್ರಹವಾದದ್ದು ಮತ್ತು ಚಂಚಲವಾದದ್ದು, ಎಂಬುದು ನಿಸ್ಸಂಶಯವು' ಎಂದು ಶ್ರೀಕೃಷ್ಣ ತಿಳಿಸುತ್ತಾನೆ. ಆದರೆ "ಮನಸ್ಸನ್ನು ನಿಗ್ರಹಿಸದವನಿಗೆ ಯೋಗವು ದುಷ್ಪ್ರಾಪ್ಯವೆಂದು, ನನ್ನ ಅಭಿಪ್ರಾಯವು; ಆದರೆ ಯತ್ನಶೀಲನಾದ ಜಿತೇಂದ್ರಿಯನಿಗೆ ಉಪಾಯದಿಂದ ಇದನ್ನು (ಸಮತ್ವರೂಪವಾದ ಯೋಗವನ್ನು) ಹೊಂದಲು ಸಾಧ್ಯವು "(ಭಗವದ್ಗೀತಾ ೬-೩೬) ಪರವನ್ನು ಹೊಂದುವದು ಕಷ್ಟ ಸಾಧ್ಯವಾದುದು. ಅದರಲ್ಲಿಯೂ, ಮೂಢನಾದ ಪಾಮರನಂತೂ ಇದು ತನ್ನ ಶಕ್ತಿಗೆ ಎಟುಕದ್ದು; ಎಂದು ಭಾವಿಸುತ್ತಾನೆ. ನಮಗೆ ಯಾವುದು ದುರ್ಲಭವೋ, ಅದನ್ನು ಕುರಿತು ನಾವು ಯೋಚಿಸುವುದಾದರೂ ಏಕೆಂದು ಪರದ ವಿಚಾರವಾಗಿ ನೆನೆಯುವುದಕ್ಕೂ ಪಾಮರನಿಗೆ ಬೇಸರವಾಗುತ್ತದೆ. ಹೀಗೆ ಪರದಿಂದ ದೂರ, ದೂರವಾಗುತ್ತ, ಲೌಕಿಕ ಜಂಜಾಟದಲ್ಲಿ ಸಿಕ್ಕು, ಸಂಸಾರದಲ್ಲಿಯೇ ಮುಳುಗಿ ಏಳುವನು, ಹುಟ್ಟಿ-ಸಾಯುವನು.

ಪಜಂ

ಪದನುಗಲುಗ ವ್ರೂನು ಪಚ್ಚನ್ಯೆಯುಂಡುನು, ಈವಿಕಲುಗಲಂಜಿ ಯಿಂಟನುಂಡು,
ತಲಪುಗಲುಗ ಹರಿಯು ದನಯೊದ್ದನೇಯುಂಡು ವಿಶ್ವದಾಭಿರಾಮ ವಿನುರ ವೇಮ.

ಹಸಿಯು ಇರಲು ಮರವು, ಹಚ್ಚಗಾಗಿರುವುದು.
ನೀಡುತಿರಲು ನೇಶ್ಯ, ನೆರೆಯೊಳಿಹಳು.
ಹಲುಬುತಿರಲು ಮತ್ತೆ ಹರಿಯು ತನ್ನೊಳಿಹನು.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲಿಯ ವರೆಗೆ ಮರದ ಬೇರುಗಳು ವ್ಯಾಪಿಸಿರುವ ಭೂಮಿ ಹಸಿಯಾಗಿರುವುದೋ, ಅಲ್ಲಿಯ ವರೆಗೆ ಮರವು ಹಚ್ಚ–ಹಸಿರಾಗಿರುವುದು. ಬೇರುಗಳು ಆಹಾರ ಸೆಳೆದುಕೊಂಡು ಮೇಲೆ ಕಳಿಸುತ್ತವೆ. ಎಲೆಗಳಲ್ಲಿ ಸೂರ್ಯರಶ್ಮಿಗಳಿಂದಾಗಿ ಕ್ಲೋರೋಫಿಲ್ ತಯ್ಯಾರಾಗುವುದು. ಇದುವೇ ಮರದೆಲೆಯ ಹಸಿರು ಬಣ್ಣ. ಮಣ್ಣಿನ ಹಸಿಗೂ, ಮರದ ಹಸಿರು ಬಣ್ಣಕ್ಕೂ ಸಂಬಂಧವಿಲ್ಲದಂತೆ ಕಂಡರೂ, ವಿಚಾರಣೆಯ ನಂತರ ನೇರ ಸಂಬಂಧವಿರುವುದು ಗೊತ್ತಾಗುವುದು.

ಸತಿಗೂ–ಸೂಳೆಗೂ ಇರುವ ಅಂತರವೇನು? ಸತಿಯು ಪತಿಯ ತೃಪ್ತಿಯಲ್ಲಿಯೇ ತನ್ನ ತೃಪ್ತಿಯನ್ನು ಕಾಣುತ್ತಾಳೆ. ಸೂಳೆಯು ಹಣಕ್ಕಾಗಿ ಆಶಿಸಿ, ಪರಪುರುಷನ ತೃಪ್ತಿಗೆ ಈಡಾಗುತ್ತಾಳೆ. ಹಣ ನೀಡುವವರೆಗೆ ಸೂಳೆಯ ಪ್ರೇಮ. ನೀಡುತ್ತ ಇರುವವರೆಗೆ ಸೂಳೆ ನೆರೆಯಲ್ಲಿ ಇರುವಳು.

ಯಾರಲ್ಲಿ ಭಕ್ತಿ ಉಂಟೋ ಅವರು ಪರಮಾತ್ಮ ಹೊಂದಲು ತವಕ ಪಡುವರು. ಭಕ್ತಿ ಭೂಮಿಯಲ್ಲಿ ಹಸಿ ಇದ್ದಂತೆ. ಪರಮಾತ್ಮನನ್ನು ನೋಡಲು ಹಲುಬುವವರಿಗೆ ಹರಿಯು ತಮ್ಮಲ್ಲಿಯೇ ಇರುವನೆಂದು ಗೊತ್ತಾಗುವುದು.

" ಎಲೈ ಗುಡಾಕೇಶ. (ನಿದ್ರೆಯನ್ನು ಗೆದ್ದವನು) ನಾನು ಸಮಸ್ತ ಪ್ರಾಣಿಗಳ ಹೃದಯದಲ್ಲಿರುವ ಆತ್ಮ. ನಾನೇ ಸಮಸ್ತ ಭೂತಗಳ ಆದಿ, ಮಧ್ಯ ಮತ್ತು ಅಂತ್ಯ. (ಭಗವದ್ಗೀತೆ ೧೦-೨೦) ಶ್ರೀ ಹರಿಯೇ ಆತ್ಮ. ಹಸಿ ಇದ್ದರೆ ಹಚ್ಚಗಿರುವುದು; ಹಣ ವಿದ್ದರೆ, ಸೂಳೆ ಬಳಿ ಇರುವಳು; ಪರಮಾತ್ಮನಿಗಾಗಿ ಹಲುಬುತ್ತಿದ್ದರೆ, ಶ್ರೀ ಹರಿಯು ಆತ್ಮದಲ್ಲಿಯೇ ಇರುವನೆಂಬುದು ಗೋಚರಿಸುವುದು.

ಪಜಂ

ಜೀವುಲೆಲ್ಲ ಮುಂದು ಜೀವಾತ್ಮ ಪರಮಾತ್ಮ, ಜತನೆರುಂಗ ಬಾಪಜಲಧಿಬಡರು,
ನಾವನಡುಪುವಾಡು ನೆಟ್ಟೇಟಮುನುಗುನಾ ? ವಿಶ್ವದಾಭಿರಾಮ ಕೇಳು ವೇಮ.

ಜೀವಿಗಳೊಳು ಮುನ್ನ ಜೀವಾತ್ಮ ಪರಮಾತ್ಮ,
ಜೋಡು ತಿಳಿಯೆ, ಪಾಪ! ಜಲಧಿ ಮುಳುಗ.
ನಾವು ನಡೆಸುವನವನು ನೀರೊಳು ಮುಳುಗುವನೆ?
ವಿಶ್ವದಾಭಿರಾಮ ಕೇಳು ವೇಮ.

ಸಂಸಾರವನ್ನು ಸಮುದ್ರಕ್ಕೆ ಹೋಲಿಸುತ್ತಾರೆ. ಸಮುದ್ರವು ಜಲ ಸಮೂಹ; ಜಲಧಿ. ಕರ್ಮಕ್ಕನುಸಾರವಾಗಿ ದೇಹಿಗಳು ಅನೇಕ ಯೋನಿಗಳಲ್ಲಿ, ಇಲ್ಲವೆ ಸ್ಥಾವರ ಜನ್ಮ ಹೊಂದುವರು. ಅಜ್ಞಾನಿಗಳಿಗೆ ಮಾತ್ರ ಸಂಸಾರ. ಅಜ್ಞಾನಿಯಾದವನು ದೇಹಕ್ಕೆ ಕಾರಣವಾಗಿರುವ ಸೂಕ್ಷ್ಮ ಭೂತಗಳನ್ನು ಆಶ್ರಯಿಸಿಕೊಂಡು, ಕರ್ಮಪ್ರಯುಕ್ತನಾಗಿ ದೇಹವನ್ನು ಪಡೆಯಲು ಸಂಸರಿಸುತ್ತಾರೆ. 'ಮರಣ ಕಾಲದಲ್ಲಿ ಯಾವ ಯಾವ ಭಾವವನ್ನಾದರೂ ಸ್ಮರಿಸುತ್ತ, ದೇಹವನ್ನು ಬಿಡುವನೋ, ಯಾವಾಗಲೂ ಆ ಭಾವವನ್ನೇ ಭಾವಿಸುತ್ತಿರುವ ಅವನು ಅದನ್ನೇ ಹೊಂದುವನು.' (ಭಗವದ್ಗೀತಾ ೮-೬)

ಜನನ ಮರಣ ಚಕ್ರವು ಮನಸ್ಸಿನ ಶುದ್ಧಿಯ ಮೇಲೆ ಅವಲಂಬಿಸಿದೆ. ಸಾಗರವನ್ನು ದಾಟುವವನು ಸಾಗರದಲ್ಲಿ ಮುಳುಗುವುದಿಲ್ಲ. ಅವನು ನಾವಿನಲ್ಲಿ ಕುಳಿತು ನಾವು ನಡೆಸಿ ಪಾರಾಗುವವನು, ಜನನ-ಮರಣದಲ್ಲಿ ಸಿಲುಕಿಕೊಳ್ಳಬಯಸನು.

ಜೀವಿಗಳಲ್ಲಿ ಜೀವಾತ್ಮ, ಪರಮಾತ್ಮ ಇವುಗಳ ಜೊತೆಯೆಂದರೇನೆಂದು ಅರ್ಥವಾದರೆ ತೀರಿತು. ಇವೆರಡೂ ಒಂದೇ ವೃಕ್ಷವನ್ನು ಆಲಿಂಗಿಸಿಕೊಂಡ ಎರಡು ಪಕ್ಷಿಗಳಂತೆ. ಒಂದು, ಸವಿ ಹಣ್ಣು ತಿನ್ನುತ್ತದೆ; ಆದರೂ ಮೋಹಗೊಂಡು ದೈನ್ಯದಿಂದ ಶೋಕಿಸುತ್ತದೆ. ಇದುವೇ ಸಂಸಾರದಲ್ಲಿ ಸುಖ ಅರಸಿ ಶೋಕಿಸುವ ಜೀವಾತ್ಮ. ಇನ್ನೊಂದು ಪಕ್ಷಿ ತಿನ್ನದೆ ನೋಡುವುದು. ಇದಕ್ಕೆ ಶೋಕವಿಲ್ಲ. ವಿಲಕ್ಷಣವಾದ ಇದನ್ನು ಕಂಡು ಮೊದನೇ ಪಕ್ಷಿಯೂ ಶೋಕರಹಿತವಾಗವುದು. ಹಣ್ಣು ತಿನ್ನದೆ, ಶೋಕಿಸದೆ, ಮಹಿಮಾವಂತವಾದ ಪಕ್ಷಿಯೇ ಪರಮಾತ್ಮ. ಜೀವ-ಬ್ರಹ್ಮ ಜೋಡಿಯನ್ನು ಮುಂಡಕೋಪನಿಷತ್ತು ಇನ್ನೂ ಹೀಗೆ ತಿಳಿಸುವುದು. ಓಂಕಾರವು ಧನುಸ್ಸು, ಆತ್ಮನೇ ಬಾಣ, ಬ್ರಹ್ಮವು ಅದರ ಲಕ್ಷ್ಯ ವೆಂದು ಹೇಳಲ್ಪಡುತ್ತದೆ. ಪ್ರಮತ್ತನಾಗದೆ ಹೊಡೆಯಬೇಕು. ಬಾಣದಂತೆ ತನ್ಮಯನಾಗಬೇಕು. ಇದನ್ನು ಸಾಧಿಸಿದರೆ, ಇದು ಅಮೃತಕ್ಕೆ ಸೇತುವಾಗುವದು. ಹಾಗಾದರೆ ಸಂಸಾರದ ಜಲಧಿಯಲ್ಲಿ ಜೀವನು ಮುಳುಗಲಾರನು. ಪ್ರತಿಯಾಗಿ ಜೀವನ ನೌಕೆಯನ್ನು ಸಂಸಾರ ಸಾಗರದಲ್ಲಿ ನಡೆಸಿ ಪಾರುಗಾಣುವನು.

ಲಾವಣಿ

ಕಾಲಧರ್ಮಮೆರಿಗಿ ಕಪಟವೃತ್ತುಲಮಾನಿ, ಯಾಲುಪಿಲ್ಲಲಂದು ನಾಶವದಲಿ,
ಮೇಲುಗಾನು ಶಿವುನಿ ಮೇಲ್ಕನಿ ಚೂಡುಮು, ವಿಶ್ವದಾಭಿರಾಮು ವಿನುರ ವೇಮು.

ಕಾಲಧರ್ಮವರಿತು ಕಪಟ ವೃತ್ತಿ ತೊರೆದು,
ಅಂಗನೆ ಮಕ್ಕಳಲಿ ಆಶೆ ಬಿಟ್ಟು,
ಮೆಲ್ಮೆಯುಳ್ಳ ಶಿವನ ಮೇಲೆ ಎದ್ದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಕಾಲಧರ್ಮವೆಂದರೇನು ? ಜನರನ್ನು ಎತ್ತಿಹಿಡಿಯುವುದೇ (ಧಾರಣ) ಧರ್ಮ. ಕಾಲ-ಕಾಲಕ್ಕೆ ಧರ್ಮ ಬದಲಾಗುವುದೇ ? ಅಹುದು. ತತ್ತ್ವವು ಸರ್ವ ಕಾಲದಲ್ಲಿ

ಬದಲಾಗದೆ ಇರುವುದು. ಧರ್ಮವು ಕಾಲ, ಸ್ಥಾನ ಮತ್ತು ವ್ಯಕ್ತಿಗಳಿಗನುಗುಣವಾಗಿ ಬರಡಾಗುವುದು. ರೋಗಕ್ಕೆ ಔಷಧಿ ಒಂದೇ. ರೋಗಿಯ ಬಯಕೆಗೆ ತಕ್ಕಂತೆ ಔಷಧಿಯನ್ನೇ ಬದಲಿಸುವುದಿಲ್ಲ. ಆದರೆ ಔಷಧಿ ಸೇವನೆಯ ವಿಧಾನ ಬದಲಿಸಬಹುದು. ನೀರಲ್ಲಿ ಹಾಕಿ ತೆಗೆದುಕೊಳ್ಳುವ ಬದಲು ಬಾಳೆ ಹಣ್ಣಿನಲ್ಲಿಟ್ಟು ನುಂಗಬಹುದು. ಜನಾಂಗವು ಮಧ್ಯ-ಮಾಂಸಗಳನ್ನು ನಿರಾತಂಕವಾಗಿ ಬಳಸುತ್ತಿದ್ದ. ವೇದ ಕಾಲದ ಆರ್ಯರ ದೇವ ಸ್ತುತಿಗಳು ಸಸ್ಯಾಹಾರಿಗಳೂ, ಪಾನ-ನಿರೋಧಕರೂ ಹೆಚ್ಚಾಗಿರುವ ಇಂದಿನ ಕಾಲದಲ್ಲಿ ದೇವರ ಸ್ತುತಿಪರ ಮಂತ್ರಗಳಾಗವು. ಇದರಿಂದಾಗಿ ಬ್ರಾಹ್ಮಣಗಳಲ್ಲಿ ಉಕ್ತವಾದ ಮಂತ್ರಗಳು ಅರ್ಥಹೀನವಾಗುತ್ತವೆ. ಹೀಗಿದ್ದರೂ, ಯಜ್ಞ ಪ್ರಾಣಿಯ ಮೂವತ್ತಾರು ಭಾಗಗಳನ್ನು ಋತ್ವಿಕ್ಕುಗಳೂ,ಯಜಮಾನನೂ ಹಂಚಿಕೊಳ್ಳುವ ಮಂತ್ರಗಳನ್ನು ಇಂದು ಮಾಂಸವನ್ನೇ ಮುಟ್ಟದ, ಬ್ರಾಹ್ಮಣಾದಿ ಜಾತಿಯವರು ನಡೆಸುವ ಯಜ್ಞದ-ಕಾಲಕ್ಕೆ ಪಠಿಸುವುದು ಕಪಟ ವೃತ್ತಿ ಎನಿಸುವುದು. ಶಿಲಾ ಪೂಜೆಯ ವಿಧಾನವನ್ನು ಮುಂದುವರೆಸುವುದೂ ದಕ್ಷಿಣೆಯ ನಾಟಕದ ಕಪಟ ವೃತ್ತಿಯೇ ಸರಿ. ಹೆಂಡಿರು-ಮಕ್ಕಳಲ್ಲಿ ಆಸೆ ಹೆಚ್ಚಾದರೆ, ಶಿವನಲ್ಲಿ ಭಕ್ತಿ ಕುದುರದು. ಹೆಂಡಿರು-ಮಕ್ಕಳನ್ನು ಬಿಟ್ಟು ಹೋಗಬೇಕೆಂದೇನೂ ಅಲ್ಲ. ಮನಸ್ಸು ಹೆಂಡಿರು ಮಕ್ಕಳನ್ನು ಕುರಿತು ಮಾತ್ರ ಚಿಂತಿಸದೆ, ಸರ್ವವೂ ಒಂದೇ. ತಾನು, ಹೆಂಡಿರು, ಮಕ್ಕಳು, ಉಳಿದ ಜೀವಿಗಳು, ಎಲ್ಲರೂ ಒಂದೇ. ಸರ್ವ ಜೀವಿಗಳು ಯಂತ್ರಗಳಾದರೆ, ಯಾವನು ಯಂತ್ರಾರೂಢನಾಗಿ ಒಳಗೆ ಇರುವನೋ ಅಂಥ ಮಹಿಮೆಯುಳ್ಳ ಶಿವನನ್ನು ಕಾಣಬೇಕಾದರೆ, ಮನಸ್ಸು ಮೇಲಿನ ಸ್ಥಿತಿಗೆ ಬರೆಬೇಕು. ಮೇಲು ಸ್ಥಿತಿಯೆಂದರೆ ಸೂಕ್ಷ್ಮ ಸ್ಥಿತಿ. ಮನಸ್ಸು ಶುದ್ಧವಾದಂತೆ, ಅದರ ಗ್ರಹಣಶಕ್ತಿ ಹೆಚ್ಚುವುದು. ಹೆಚ್ಚು ಹೆಚ್ಚು ಸೂಕ್ಷ್ಮವನ್ನು ಗ್ರಹಿಸಲು ಶಕ್ತವಾಗುವುದು.

ಲಾವಣಿ

ಆಕುವಕ್ಕಸುನ್ನ ಮವಿಮೂಡುವನ್ನೆಲು, ನೇಕಮ್ಮೆನಚೋಟ ದಾಕು ನೆರುಪು,
ಸೋಕಿ ತ್ರಿಗುಣಮುಟ್ಲು ಶೋಭಿಂಚು ಬರಮಾತ್ಮ ವಿಶ್ವದಾಭಿರಾಮು ವಿನುರ ವೇಮು.

ಆಡಿಕೆ ಎಲೆಯು ಸುಣ್ಣ ಅವು ಮೂರು ಬಣ್ಣವು,
ಕೂಡಿರುವ ಸ್ಥಾನವು ಕೆಂಪು ಆಯ್ತು.
ಸೋಕಿ ತ್ರಿಗುಣಗಳು ಶೋಭಿಪ ಪರಮಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಬಣ್ಣ ಹಾಕದ ಅಡಿಕೆ ಹಳದಿ-ಕವ್ವು ಮಿಶ್ರ ಬಣ್ಣದ್ದಾಗಿರುವುದು. ವಿಳ್ಳೆದೆಲೆಯು ಹಸಿರು ಬಣ್ಣದ್ದಾಗಿರುವುದು. ಸುಣ್ಣವಾದರೋ, ಬಿಳಿ ಬಣ್ಣದ್ದಾಗಿರುವುದು. ಎಲೆ-ಅಡಿಕೆ ಸುಣ್ಣವನ್ನು ಜಗಿದಾಗ, ತಿನ್ನುವವನ ಬಾಯಿಯಾದರೋ, ಕೆಂಪು ಬಣ್ಣ ಬಳಿದಂತೆ ಆಗುವುದು. ದಿನ ನಿತ್ಯ ನಾವು ನೋಡುವ ಅನೇಕ ಸಾಮಾನ್ಯ ಘಟನೆಗಳು ದಿವ್ಯ ತತ್ತ್ವಗಳಿಗೆ ಉತ್ತಮ ಹೋಲಿಕೆಗಳಾಗಿ ನಿಲ್ಲುವವು. ಮನಸ್ಸಿನ ಮೇಲೆ ದಿವ್ಯ ತತ್ತ್ವವು ಅಚ್ಚೊತ್ತಿದಂತೆ ಉಳಿಯಲು ಇಂಥ ಹೋಲಿಕೆಗಳ ಮಹತ್ತ್ವ ಎಷ್ಟೆಂದು ಹೇಳಲಾಗದು !

ತಾಂಬೂಲ ಸುಣ್ಣ, ಅಡಿಕೆ, ಎಲೆ ಮೂರೂ ಇರುವಂತೆ, ಪ್ರಕೃತಿಯಿಂದ ಸತ್ತ್ವ ರಜಸ್ಸು ಮತ್ತು ತಮಸ್ಸು ಎಂಬ ಮೂರು ಗುಣಗಳುಂಟಾಗುತ್ತವೆ. ಸತ್ತ್ವ ಗುಣವು ಪ್ರಕಾಶಕ; ನಿರುಪದ್ರವ. ರಜೋ ಗುಣವು ತೃಷ್ಣೆ ಮತ್ತು ಅಪ್ರಾಪ್ತ ವಸ್ತುವಿನಲ್ಲಿ ಅಭಿಲಾಷೆ ಉಂಟು ಮಾಡುವುದು. ತಮೋಗುಣ ಅಜ್ಞಾನದಿಂದ ಹುಟ್ಟಿದ್ದು ; ಮೋಹ ಗೊಳಿಸುವಂಥಹದ್ದು. ಕಾಣುವ ಪ್ರಪಂಚವೆಲ್ಲ ಪ್ರಕೃತಿಯಿಂದ ಆದದ್ದು. ಪ್ರಪಂಚದ ದೃಶ್ಯವೆಲ್ಲ ಶಬ್ದವರ್ಣದ ಅಲೆಗಳಿಂದ ಗೋಚರವಾಗುತ್ತದೆ. ವರ್ಣವು ವಸ್ತುಗಳ ಭಿನ್ನತೆಯನ್ನು ತೋರುವುದು. ಸಗುಣ ಬ್ರಹ್ಮವೂ ವರ್ಣಮಯ. ಹೆಚ್ಚಾಗಿ ಸತ್ತ್ವವೇ ಆಗಿದ್ದರೂ, ಸತ್ತ್ವ, ರಜಸ್ಸು, ತಮಸ್ಸುಗಳ ಸಂಯುಕ್ತ ರೂಪನಾಗಿದ್ದಾನೆ. ಸಾತ್ತ್ವಿಕ ಅಲೆಗಳನ್ನು ಕಣ್ಣಿನಿಂದ ಇಲ್ಲವೆ ಬೇರೆ ಸಾಧನದಿಂದ ಸ್ವೀಕರಿಸಿದಾಗ ಮನಸ್ಸಿನ ಪರದೆಯಲ್ಲಿ ಕಾಣುವುದು ಕೇವಲ ಬಿಳಿ ವರ್ಣ ಮಾತ್ರ. ಇದನ್ನೇ ಇನ್ನೊಂದು ರೀತಿ ಹೇಳುವುದಾದರೆ, ವರ್ಣ ತರಂಗವು ಗುಣ–ಸೂಚಕವಾಗಿದೆಯೆನ್ನಬಹುದು. ಹೀಗೆ ಸತ್ತ್ವ, ಬಿಳಿ, ರಜಸ್ಸು ಕೆಂಪು, ತಮಸ್ಸು ಕಪ್ಪು ಆಗಿ ಉಂಟು. ಹೆಚ್ಚು ಶುದ್ಧಿ ಎಂದರೆ, ಹೆಚ್ಚು ಸತ್ತ್ವ ಗುಣ. ಬಿಳಿ ಎಂದರೆ ವರ್ಣವೇನೂ ಅಲ್ಲ. ಸಕಲ ವರ್ಣಕೂಡಿದರೆ ಬಿಳಿ ಎನಿಸುವುದು. ಯಾವ ವರ್ಣವೂ ಇಲ್ಲದಿದ್ದರೆ ಅದು ಕಪ್ಪು ಎನಿಸುವುದು. ಸಗುಣ ಬ್ರಹ್ಮ ತ್ರಿಗುಣಾತ್ಮಕ. ಆದರೂ ಸತ್ತ್ವ ಹೆಚ್ಚಾಗಿರುದವುಶುಭ್ರವಾಗಿ ತೋರುವುದು. ತ್ರಿಗುಣಗಳಿಂದಲೂ ಪರಮಾತ್ಮ ಶೋಭಿಸುವನು.

ಲಜಜ

ಬ್ರಹ್ಮಘಟವು ಮೇನು ಪ್ರಾಣಂಬು ದಗಗಾಲಿ, ವಿತ್ರ ಚಂದ್ರ ಶಿಖಿಲು ನೇತ್ರ ಚಯಮು ಮರಿಯು ಬ್ರಹ್ಮನಗ ಮಹಿವೀದಲೇದಯಾ ? ವಿಶ್ವದಾಭಿರಾಮ ವಿನುರ ವೇಮ.

ಬ್ರಹ್ಮ ಘಟವು ದೇಹ, ಪ್ರಾಣ, ತಕ್ಕ ಗಾಳಿ,
ನೇಸರಾಗ್ನಿ ಚಂದ್ರ ನೇತ್ರತ್ರಯ.
ಮುತ್ತೆ ಬ್ರಹ್ಮನೆನಲು, ಮಹಿಯ ಮೇಲಿಹುದೇ ?
ವಿಶ್ವದಾಭಿರಾಮ ಕೇಳು ವೇಮ.

ಜೀವಾತ್ಮ ಪರಮಾತ್ಮ ಇಲ್ಲವೆ ವಿಶ್ವಾತ್ಮ ಇವುಗಳ ಜೊತೆಯನ್ನು ಅರಿಯವುದೇ ಜ್ಞಾನ; ಅಮೃತಕ್ಕೆ ಸೇತು. ಎಂದು ಶ್ರುತಿಗಳು ಹೇಳುತ್ತಿವೆ.

ಜೀವಾತ್ಮ ದೇಹದಲ್ಲಿ ಉಂಟು. "ಜೀವನೆಂದು ನೀವು ಸಿಕ್ಕು ತೊಳಲುತಿಹಿರಿ | ವಾಯುವಾಗಸಗಳು ವಹ್ನಿಕೂಡಿ | ದೇಹಿ ಎಂದು ಕೊಳುತ ದೇಹ ಸೇರಿ ಇಹವು | ವಿಶ್ವ....." ಜೀವನಿಗೆ ಶರೀರವು ಹೇಗೋ, ಹಾಗೆ ಬ್ರಹ್ಮನಿಗೆ ಬ್ರಹ್ಮಘಟ. ಅಂದರೆ ಬ್ರಹ್ಮಾಂಡವೇ ದೇಹ. ಜೀವನಿಗೆ ಗಾಳಿಯೇ ಪ್ರಾಣ. ಬ್ರಹ್ಮಘಟದಲ್ಲಿಯೂ ವಾಯು ವುಂಟು; ಅದೇ ಪ್ರಾಣ. ಈಶ್ವರನು ಮುಕ್ಕಣ್ಣನೆನ್ನುವರಷ್ಟೇ. ಹಾಗಾದರೆ ಅವನ ಮೂರು ಕಣ್ಣುಗಳು ಯಾವವು ? ಸೂರ್ಯನೊಂದು ಕಣ್ಣು. ಚಂದ್ರ ಇನ್ನೊಂದು.

ತ್ತಿಯಲ್ಲಿ ಇರುವ ಮೂರನೆ ಕಣ್ಣು ಅಗ್ನಿ. ಇದು ಐಶ್ವರ ರೂಪ. ಇದುವೇ ಬ್ರಹ್ಮನೆ ನಮ್ಮ ದೇಹದಲ್ಲಿಯೂ ವಾಯು, ಅಗ್ನಿ, ಉಂಟು. ದೇಹದ ಉಪಾಧಿಯಿಂದ ಅವ್ಯಯವು ಪರಿಮಿತಗೊಂಡಿದೆ. 'ಇದನ್ನು ಅರಿತರೆ, ಅದು ತಿಳಿಯುತ್ತದೆ. ಇದುವೇ ಆ ಬ್ರಹ್ಮ. ಒಳಗೂ, ಹೊರಗೂ ಇರುವುದೆಲ್ಲಾ ಆ ಬ್ರಹ್ಮವೇ' ಎನ್ನುವುದು, ಸಾರ್ಥಕ ವೆನಿಸುವುದು.

(ಹೋಲಿಸಿ ನೋಡಿರಿ :—

'ಇವನಿಗೆ ಅಗ್ನಿಯು ತಲೆ, ಚಂದ್ರಸೂರ್ಯರು ಕಣ್ಣುಗಳು,ದಿಕ್ಕುಗಳು ಕಿವಿಗಳು, ಪ್ರಕಟವಾದ ವೇದಗಳು ವಾಕ್ಕು, ವಿಶ್ವವು ಹೃದಯ, ಇವನ ಪಾದಗಳಿಂದ ಪೃಥ್ವಿಯು ಹುಟ್ಟಿರುವುದು; ಇವನು ಸರ್ವಭೂತಗಳ ಅಂತರಾತ್ಮನು'

— ಮುಂಡಕ ಉಪ. ೨–೧–೪)

ಶ್ರೀಕೃಷ್ಣ ಅರ್ಜುನನಿಗೆ ಐಶ್ವರ ರೂಪ ತೋರಿಸಿದಾಗ,ಅರ್ಜುನ ಹೀಗೆ ನುಡಿಯುತ್ತಾನೆ. "……ಆದಿ ಮಧ್ಯಾಂತರಹಿತನೂ ಅನಂತವೀರ್ಯನೂ, ಅನಂತ ಬಾಹುಗಳುಳ್ಳವನೂ, ಸೂರ್ಯ ಚಂದ್ರರೇ ನೇತ್ರಗಳಾಗಿ ಉಳ್ಳವನೂ, ಪ್ರದೀಪ್ತವಾದ ಅಗ್ನಿಯಂತೆ ಬಾಯಿಯುಳ್ಳವನೂ ತನ್ನ ತೇಜಸ್ಸಿನಿಂದ ಈ ವಿಶ್ವವನ್ನು ತಪಿಸುತ್ತಿರುವವನೂ ಆದ ನಿನ್ನನ್ನು ನೋಡುತ್ತಿದ್ದೇನೆ……"

— ಭಗವದ್ಗೀತಾ ೧೧–೧೯)

ಲಜಟ

ಭೂಮಿಯುಪ್ಪರಂಬು ಬುರಿಕೊನೆ ಜಗಮುಲ, ರಕ್ಷಸೇಯಗಲ್ಲು ರಾಜಲೆವರು ? ಮಹಿಪತಿ ಯೆನು ಪೇರು ಮನುಜುನಕೆಟ್ಲಗು ? ವಿಶ್ವದಾಭಿರಾಮ ವಿನುರ ವೇಮ

ಭೂಮಿಯಾಗಸ ಮುಧ್ಯೆ. ಪಸರಿಸಿದ ಜಗದಲಿ,
ರಕ್ಷಿಸುತ್ತಿರುವಂಥ ರಾಜನಾರು ?
ಮಹಿಪತಿಯೆನೆ ಹೆಸರು, ಮನುಜಗೆಂತು ಬಂತು ?
ವಿಶ್ವದಾಭಿರಾಮ ಕೇಳು ವೇಮ

ಪತಿ ಎಂದರೆ ಯಾವನು ಹೊಂದಬಲ್ಲನೋ ಪಾಲಿಸಬಲ್ಲನೋ ಅವನು. 'ಪಿಪ್ತಿ, ಪಾತಿ ಇತಿ ಪತಿಃ' ವ ಹಿಪತಿಯೆಂದರೆ ಭೂಮಿಯನ್ನು ಯಾವನು ಹೊಂದಿರುವನೋ, ಪಾಲಿಸುತ್ತಿರುವನೋ ಅವನು. ಭೂಮ ಅಂದರೆ ಅನಂತ. ಭೂಮಿಯು ಅನಂತವಾದುದು. ಭೂಪತಿ ಇಲ್ಲವೆ ಮಹಿಪತಿಯಾಗಬಲ್ಲವನು ಪಶು–ಪಕ್ಷಿ, ಜಲ–ನೆಲ, ಸಸ್ಯ–ಸ್ಥಾವರಾದಿಗಳನ್ನು ಹೊಂದಿ, ಪಾಲಿಸುತ್ತಿರಬೇಕು. ಈ ಮಹಾಕಾರ್ಯ ಈಶ್ವರನೊಬ್ಬನಿಗೆ ಮಾತ್ರ ಸಾಧ್ಯ. ಅಸಂಖ್ಯ ಜೀವಜಂತುಗಳಲ್ಲಿ ಮನುಜನೂ ಒಂದು ಜೀವಜಂತು. ತಾನೇ ಹುಟ್ಟಿ-ಸಾಯುವವ. ತನ್ನ ರಕ್ಷಣೆಗೆ ಅನ್ಯರಲ್ಲಿ ಶರಣು ಯಾಚಿಸುವವ. ಇಂಥ ಮನುಜನಿಗೆ ಮಹಿಪತಿ ಎನ್ನುವ ಹೆಸರು ಸಲ್ಲುವುದೇ ? ಅಂದ ಮೇಲೆ, ಅವರಿವರು ರಾಜರೆಂದ

ಗರ್ವ ಪಡುವದೇಕೆ? ಪೃಥ್ವಿ, ಜಲ, ತೇಜಸ್ಸು,ವಾಯು ಮತ್ತು ಆಕಾಶಗಳು ಪಂಚ ಮಹಾ ಭೂತಗಳು. ಇವುಗಳಿಂದ ಸ್ಥೂಲ ಜಗತ್ತೆಲ್ಲ ಉಂಟಾಗಿದೆ. ಇಂದ್ರಿಯಗೋಚರವಾದು ದೆಲ್ಲ ಸ್ಥೂಲ ಜಗತ್ ಮಾತ್ರ ಭೂವಿ--ಆಕಾಶಗಳ ಮಧ್ಯೆ ಜಗತ್ ಪಸರಿಸಿದೆ. ಚಲಿಸುತ್ತಿರುವ ಜಗದಲ್ಲಿ ಉಂಟಾಗುತ್ತಿರುವ ವಿವಿಧ ವಸ್ತುಗಳನ್ನು ಹೊಂದುವವನಾರು ? ರಕ್ಷಿಸುವವನಾರು ? ಸೃಷ್ಟಿ--ಲಯಗಳಿಗೆ ಕರ್ತನಾರು ? ಸ್ಥಿತಿಯ ರಕ್ಷಕನಾರು ? ಅವನು ಮಾತ್ರ ರಾಜ.

ಲಜ್ಜೆ

ಪತನನವೊಂದುನಟ್ಟ ಪಕ್ವಫಲಂಬುಡೆನು, ಬಟ್ಟತಿನಗಲಾಡು ಹಚ್ಚಿಕಾಯ,
ಕಾಸಪಡಿನಿ ರೀತಿ ನೈಹಿಕಮುಂಡುನು, ವಿಶ್ವದಾಭಿರಾಮ ವಿನುರ ವೇಮ

ಪತನ ಹೊಂದುವಂಥ ಪಕ್ವ ಫಲಗಳನ್ನು,
ಹರಿದು ತಿನ್ನುವವನು, ಹಸಿರುಗಾಯಿ,
ಆಶಿಸುತಿಹ ರೀತಿ, ಐಹಿಕಾದಿಯುಂಟು.
ವಿಶ್ವದಾಭಿರಾಮ ಕೇಳು ವೇಮ

ಇಹ--ಪರ ಎಂಬ ಶಬ್ದಗಳನ್ನು ವೇದಾಂತ ವಿವೇಚನೆಯಲ್ಲಿ ಹೆಚ್ಚಾಗಿ ಬಳಸುತ್ತಾರೆ. ಇಹ ಎಂದರೆ ಇಲ್ಲಿಯೇ. ಅರ್ಥಾತ್ ಈ ಲೋಕದಲ್ಲಿಯೇ. ಇಂದ್ರಿಯಗೋಚರವಾದ ಈ ಪ್ರಪಂಚವೇ ಈ ಲೋಕ. ಇದನ್ನು ಕಣ್ಣಿನಿಂದ ಕಂಡಾಗಲಿ, ಕಿವಿಯಿಂದ ಕೇಳಿಯಾಗಲಿ, ಮೂಗಿನಿಂದ ಮೂಸಿಯಾಗಲಿ, ತ್ವಚೆಯಿಂದ ಸ್ಪರ್ಶಿಸಿಯಾಗಲಿ, ನಾಲಗೆಯಿಂದ ಆಸ್ವಾದಿಸಿಯಾಗಲಿ, ಅನುಭವಿಸಬಹುದು. ಇದರಲ್ಲಿ ಸುಖಿಸಲು ಆತುರನಾಗಿರುತ್ತಾನೆ. ಇದೆಲ್ಲ ಐಹಿಕಾದಿ ಎನಿಸುತ್ತದೆ. ಐಹಿಕಾದಿ ನಶ್ವರವೆನ್ನುತ್ತಾರೆ. ಶ್ವಃ ಅಂದರೆ ನಾಳೆ. ನಶ್ವರ ಅಂದರೆ ನಾಳಿನ ವರೆಗೆ ಸಹ ಬಾಳದಂಥಹದು. ಐಹಿಕ ಭೋಗ ವಸ್ತುಗಳು ನಿತ್ಯ ಸುಖ ನೀಡುವುದಿಲ್ಲವೆಂಬುದು ತಿಳಿದರೂ ಸಹ,ಮನುಜ ಅವುಗಳಿಗಾಗಿ ಆಸೆ ಬಡುತ್ತಾನೆ. ಪರ ಅಂದರೆ ಮೇಲು; ಶ್ರೇಷ್ಠ. ಪರವಸ್ತುವೇ ಸದ್ವಸ್ತು. ಅದು ನಿತ್ಯವಾದುದು. ಶ್ರೇಷ್ಠವಾದುದು. ಅದು ಪಕ್ವವಾದ ಹಣ್ಣಿನಂತೆ.

ಪಕ್ವ ಹಣ್ಣುಗಳನ್ನು ಹರಿದು ತಿನ್ನುವವನಿಗೂ ಕಸುಗಾಯಿ ಆಸೆ ಹುಟ್ಟಿಸುತ್ತದೆ. ಕಸುಗಾಯಿ ಹುಳಿ ಹುಳಿ; ದೇಹಕ್ಕೂ ಒಳ್ಳೆಯದಲ್ಲ. ಆದರೂ ಅದನ್ನು ತಿನ್ನಲು ಆಸೆ. ಅದೇ ರೀತಿ. ಸಾಧಕನು ಪರವಸ್ತುವಿನ ಮೇಲ್ಮೈಯನ್ನು ತಿಳಿದಿದ್ದರೂ, ಆದನ್ನು ಹೊಂದುವುದರಿಂದಾಗುವ ನಿತ್ಯಾನಂದದ ಅನುಭವ ತಿಳಿದಿದ್ದರೂ, ಐಹಿಕಾದಿಗಳ ಆಶೆಯ ಪಾಶಕ್ಕೆ ಸಿಲುಕುವ ಸಂಭವವುಂಟು. ಆದ-ದರಿಂದ ಸಾಧನೆಯ ಕೊನೆಯ ವರೆಗೆ ಎಚ್ಚರ ವಹಿಸಬೇಕು.

ಲಜ್ಜೆ

ಪತಗ ಮಿತರ ಜಂತು ವಿತತಿ ಕಂತಕುಮೇಟ, ಯಗುನೆ ? ರೆಕ್ಕಲುಂಡಿ ಯೆಗುರಕುನ್ನ
ವಟ್ಟಯೋಗಿ ಯಿಟ್ಟವೈಖರಿವಾಡಯಾ; ವಿಶ್ವದಾಭಿರಾಮ ವಿನುರ ವೇಮ

ಪಕ್ಷಿ, ಇತರ ಪಶು-ಪ್ರಾಣಿಗಿಂತ ಕೀಳು.
ಎನಿಸದೆ ? ರೆಕ್ಕೆಯಿರೆ, ಎರುಗದಿರಲು;
ವ್ಯರ್ಥಯೋಗಿ ಇಂಥ ವೈಖರಿಯವನಪ್ಪೆ.
ವಿಶ್ವದಾಭಿರಾಮ ಕೇಳು ವೇಮ

ಸಾಧಕನ ಅಂತಿಮ ಗುರಿಯೆಂದರೆ, ಪರಮನೊಂದಿಗೆ ಒಂದಾಗುವುದು. ಯೋಗ ಎಂದರೆ ಸೇರಿಕೊಳ್ಳುವಿಕೆ. ಈ ರೀತಿ ಒಂದಾಗುವ ಸಾಧಕನು ಯೋಗಿ ಎನಿಸುತ್ತಾನೆ. ಯೋಗಿ ಎನ್ನುವನಾಮೆ ಸಾರ್ಥಕವಾಗಬೇಕಾದರೆ, ಸಾಧಕನು ಅಹಂಕಾರ ತೊರೆಯಬೇಕು. ಅಹಂಕಾರ ವಿರುವವರೆಗೆ ಯೋಗವು ಸಾಧ್ಯವೆಂತು ? ಪರಮಾತ್ಮನನ್ನು ಕೂಡುವುದು ಭಯಭಕ್ತಿಯಿಂದ ಪ್ರಾರಂಭವಾಗುತ್ತದೆ. ಭಯವು ನಿರ್ಭಯದಲ್ಲಿ ಪರ್ಯವಸಾನವಾಗವುದು. ಭಕ್ತಿಯು ಮನಸ್ಸಿನ ಭಾವವಿರುವಾಗ, ನಡೆಯುವ ವ್ಯವಹಾರವು ಸೇವೆ ಎನಿಸುವುದು. ಸೇವೆಯೆಂದರೆ. ನೀಡುವದಷ್ಟೇ, ತೆಗೆದುಕೊಳ್ಳುವುದಲ್ಲ. ಸೇವೆಯು ತತ್ತ್ವ ಭಾವದಿಂದ ನಡೆಯಬೇಕು. ಅಂದರೆ ಬ್ರಹ್ಮಭಾವದಿಂದ ನಡೆಯಬೇಕು. ಅಂದರೆ ನೀನು ಲೌಕಿಕವಾದುದೇನನ್ನಾದರೂ ಮಾಡಬೇಕಾದರೆ, ಲೌಕಿಕ ವಸ್ತುವಿನಲ್ಲಿ ಬ್ರಹ್ಮಭಾವ ಹೊಂದಬೇಕು. ಲೌಕಿಕ ವಿಚಾರ ಮಾಡುವಾಗ, ಮಾನಸಿಕ ವಸ್ತುವಿನ ಬ್ರಹ್ಮಭಾವ ಇರಿಸಬೇಕು. ಇದು ಯೋಗಿಗೆ ಮಾತ್ರ ಸಾಧ್ಯ. ಹೀಗಿರುವವನೇ ಸಾರ್ಥಕ ಯೋಗಿ. ವ್ಯರ್ಥಯೋಗಿ ತನ್ನ ಶಕ್ತಿಯೆನ್ನು ಹ್ರಾಸಮಾಡಿಕೊಳ್ಳುವನು. ಇಲ್ಲವೆ, ಉಪಯೋಗಿಸದೆ ಇರುವನು.

ಹಕ್ಕಿಗೆ ರೆಕ್ಕೆಯುಂಟು. ಅದರಿಂದಾಗಿ ಅದು ಆಕಾಶದಲ್ಲಿ ಹಾರುವುದು. ಖಗವೆನಿಸುವುದು. ಇತರ ಪಶುಪ್ರಾಣಿಗಿಂತ ಮೇಲು ಎನ್ನಿಸುವದು. ರೆಕ್ಕೆ ಇದ್ದರೂ, ಹಾರದಿರುವ ಪಕ್ಷಿಯು ಇತರ ಪಶುಪ್ರಾಣಿಗಳಿಗಿಂತ, ಕೀಳು ಎನ್ನಿಸುವುದು. ವ್ಯರ್ಥ ಯೋಗಿಯೂ ಇದೇ ಪರಿಯಾಗಿರುವನು.

ಲಜ್ಜೆ

ನಿವುರುಗಪ್ಪಿನಟ್ಲು ನಿಶ್ಚಲಭಕ್ತಿತೋ ದಗಿಲಿಯುಂಡ ಮುಕ್ತಿ ತಾನೆವಚ್ಚು
ಜಗತಿನೊಪ್ಪು ಜೆಪ್ಪು ಜಾಣಯುಮುರಿಲೀಡು, ವಿಶ್ವದಾಭಿರಾಮ ವಿನುರ ವೇಮ

ಬೂದಿ ಮುಚ್ಚಿದಂತೆ, ಭಕ್ತಿನಿಶ್ಚಲಾಗಿ,
ತಗಲಿಕೊಳಲು, ಮುಕ್ತಿ ತಾನೆ ಬಹುದು.
ಜಗಕುಪದೇಶಿಸಲು, ಜಾಣನಲ್ಲ ಮತ್ತೆ
ವಿಶ್ವದಾಭಿರಾಮ ಕೇಳು ವೇಮ

ಪ್ರಜ್ವಲಿಸುವ ಅಗ್ನಿಯು ಅಗ್ನಿ ಶಿಖೆಗಳನ್ನು ಸುತ್ತಲೂ ಬೀರುತ್ತದೆ. ಧಗಧಗಿಸುತ್ತದೆ. ಕಟ್ಟಿಗೆಯ ಕೊರತೆಯನ್ನು ಸುಡುತ್ತದೆ. ಮರಳಿ ಬಾಡಿನುಚ್ಚಿ ಒಳಗೆ ಚಲಿಸಿದೆ ಉಳಿಯುತ್ತದೆ. ನಿಶ್ಚಲವಾಗಿ ಉಳಿಯುವದು.

ಆಸಕ್ತಿಯು ಉತ್ಕಟವಾಗಿರುವಾಗ, ವಿಷಯ ವಸ್ತುಗಳ ಬಗೆಗಿನ ಕಾಮಾಕರ್ಷಣೆ, ಆಸಕ್ತಿ ಹೆಚ್ಚಾಗಿರುತ್ತದೆ. ಉತ್ಕಟ ಭಕ್ತಿ ವಿಷಯಾಸಕ್ತಿಯನ್ನು ನಾಶ ಮಾಡಿ ಮುಂದಾಗುವುದು. ಈ ಸ್ಥಿತಿಯಲ್ಲಿ ಮನಸ್ಸಿನಲ್ಲಿ ತುಮುಲ ನಡೆಯುವದು. ಐಹಿಕಾದಿ ವಸ್ತುಗಳ ಮೇಲಿನ ಆಶೆಯೆಲ್ಲ ತ್ಯಾಜ್ಯ, ಬೂದಿಯಂತೆ, ಎನ್ನಿಸುವದು. ಮನಸ್ಸು ನಿಶ್ಚಲವಾಗುವುದು. ನಿಶ್ಚಲವಾದ ಮನಸ್ಸಿನಲ್ಲಿ, ಚಲಿಸುವುದರಿಂದ ಮಾತ್ರ ತೋರುವ, ಜಗತ್ ಇರುವದಿಲ್ಲ. ಅಲ್ಲಿ ಅಚಲವಾದದು ಮಾತ್ರ ತೋರುವುದು. ಮನಸ್ಸು ದೇಹಭಾವ ಮೀರಿ ಹೋಗುವುದು. ಬಂಧನ ಕಳಚುವದು, ಇದುವೇ ಮುಕ್ತಿ, ದೇಹವ ಉಪಾಧಿ ಹೋದ ಮೇಲೆ ಒಳಗಿನ ಆತ್ಮವೇ ಸರ್ವಾತ್ಮವೆಂಬ ಭಾವ ಉಂಟಾಗುವದು.

ಮುಕ್ತಿಯ ಅನುಭವವನ್ನಾಗಲಿ (ಅಥಾತ್ ಆತ್ಮಸಾಕ್ಷಾತ್ಕಾರವನ್ನು) ಜಗತ್ತಿಗೆ ನಿರ್ದೇಶಿಸುವುದು. ಸರಿಯಲ್ಲ. ಹಾಗೆ ಯಾರಾದರೂ ಮಾಡಹೋದರೆ, ಅದು ಜಾಣತನವಾಗಲಾರದು. ಏಕೆಂದರೆ, "ಅವನನ್ನು ಕಣ್ಣಿನಿಂದಾಗಲಿ, ಮಾತಿನಿಂದಾಗಲಿ. ಇತರ ಇಂದ್ರಿಯಗಳಿಂದಾಗಲಿ ಗ್ರಹಿಸಲು ಆಗುವದಿಲ್ಲ. ತಪಸ್ಸಿನಿಂದಾಗಲಿ ಅಥವಾ ಕರ್ಮದಿಂದಾಗಲಿ ಗ್ರಹಿಸಲಾಗುವುದಿಲ್ಲ. ಅದರ ಜ್ಞಾನಪ್ರಸಾದದಿಂದ ಶುದ್ಧವಾದ ಅಂತಃಕರಣವುಳ್ಳವನಾಗಿ ಧ್ಯಾನ ಮಾಡುವವನು ಅದರಿಂದ ನಿಷ್ಕಲನಾದ ಆ ಆತ್ಮನನ್ನು ನೋಡುತ್ತಾನೆ." (ಮುಂಡಕ ಉ ಪ. ೩-೧-೮) ಇಂಥ ಆದರ್ಶವನ್ನು ಜಗದ ಜನರು ಗ್ರಹಿಸುವ ಬಗೆಯೆಂತು? ಲೋಕ ಜ್ಞಾನಸಾಧನದಿಂದ ತಿಳಿಸುವುದಾದರೂ ?.

ಲಓ

ನರುಡೆಯ್ಮನ ಲೇಕ ನಾರಾಯಣುಂ ಡ್ಮೆನ, ದತ್ತ್ವಬದ್ದುಡ್ಮೆನ ಧರಣಿನರಯ
ಮರಣವುನ್ನದನುಚು ಮದಿನಿ ನಮ್ಮುಗವಲೆ, ವಿಶ್ವದಾಭಿರಾಮ ವಿನುರ ವೇಮ

ನರನೆ ಇರಲಿ ಮತ್ತೆ; ನಾರಾಯಣನಿರಲಿ,
ತತ್ತ್ವಬದ್ಧನಿರಲಿ ಧರಣಿಯೊಳಗರಿ;
ಮರಣವುಂಟು ಎಂದು, ಮನದಿ ನಂಬಬೇಕು.
ವಿಶ್ವದಾಭಿರಾಮ ವಿನುರ ವೇಮ.

ನರ ಎಂದರೆ ಭಕ್ತ: ಮನುಷ್ಯ. ನರ ಶಬ್ದಕ್ಕೆ ಅಯನ ಸೇರಿ ನಾರಾಯಣ ಶಬ್ದವುಂಟಾಗಿದೆ. ನಾರಾಯಣ ಎಂದರೆ ಭಕ್ತಿಗೆ ಆಶ್ರಯ ನೀಡುವನು.

ಇನ್ನೊಂದು ಆಧಾರದ ಮೇರೆಗೆ, ಅಂದರೆ ಉಪನಿಷತ್ತು ಮತ್ತು ಮಹಾಭಾರತಗಳ ಮೇರೆಗೆ, ನಾರಾಯಣನೆಂಬ ಋಷಿಯು ಸಾಂಖ್ಯಯೋಗ ತತ್ತ್ವವನ್ನೊಳಗೊಂಡ

ಪಂಚಾತ್ರ ಮತವನ್ನು ನರ, ಚಿತ್ರಶಿಖಂಡಿ ಎಂಬವರಿಗೆ ಬೋಧಿಸಿದನೆಂದು ಕಂಡುಬರುವುದು.

ನಾರಾಯಣ ಋಷಿಯೇ ಇರಲಿ; ನರಮನುಷ್ಯನೇ ಇರಲಿ; ತತ್ತ್ವಬದ್ಧನಾಗಿ ಬ್ರಹ್ಮಪರಾಯಣನಾದವನಿರಲಿ; ಯಾರಿಗಾದರೂ, ಹುಟ್ಟಿದ ಮೇಲೆ ಮರಣವುಂಟು. 'ಜಾತಸ್ಯ ಹಿ ಧ್ರುವೋ ಮೃತ್ಯುಧ್ರುವಂ ಜನ್ಮ ಮೃತಸ್ಯ ಚ' ಏಕೆಂದರೆ, ಹುಟ್ಟಿದವನಿಗೆ ಮರಣವು ನಿಶ್ಚಯವು ಮತ್ತು ಸತ್ತವನಿಗೆ ಜನ್ಮವು ನಿಶ್ಚಯವು' (ಭಗವದ್ಗೀತೆ ೨-೨೭) ಭೂಮಿಯ ಮೇಲೆ ಇರುವ ಜೀವಿಗಳಿಗೆಲ್ಲ ಮರಣವುಂಟು. ಎಂದು ವೃಥಪಡಿಸಿಕೊಳ್ಳಬೇಕು. ಆಗ ವಿಧಿನಿಯಮದಂತೆ ಮರಣಕ್ಕಾಗಿ ಭಯಪಡುವ ಕಾರಣವಿರುವದಿಲ್ಲ. ಇಲ್ಲವೆ ದೀರ್ಘ ಬದುಕಿನ ಆಶೆ ಹೊಂದಿ, ವ್ಯೋಹಿತರಾಗುವ ಸಂಭವವೂ ತಪ್ಪುವುದು.

ಲಓ

ಕರುಣಿಯುಂಗಮೆಲ್ಲ ಬುರುಷುಡಿರುಂಗುನು, ಬುರುಷುನಂಗಮೆಲ್ಲ ಜೊಲತಿಯೆರುಗು,
ಜೀರಕಟ್ಟಕುನ್ನ ಸಿಗ್ಗಾನೊ ಯೆಗ್ಗಾನೊ, ವಿಶ್ವದಾಭಿರಾಮ ವಿನುರ ವೇಮ.

ತರುಣಿಯಂಗವೆಲ್ಲ ಪುರುಷನರಿತಿರುವನು;
ಪುರುಷನಂಗದರಿವು ವನಿತೆಗುಂಟು.
ಲುಂಗಿ ಚಡ್ಡಿ ಬಿಡಲು, ಲಜ್ಜೆಯೇನಡ್ಡಿಯೆ ?
ವಿಶ್ವದಾಭಿರಾಮ ಕೇಳು ವೇಮ

ಲೌಕಿಕ ಆಚಾರ-ವಿಚಾರ ಒಂದು ರೀತಿ. ಪಾರಲೌಕಿಕ ಆಚಾರ-ವಿಚಾರ ವಿಲಕ್ಷಣವೆನಿಸುವಂತೆ ಲೌಕಿಕ ದೃಷ್ಟಿಯುಳ್ಳವರಿಗೆ ತೋರುತ್ತವೆ. ನಾವು ವಸ್ತುವನ್ನು ಕಣ್ಣಿನಿಂದ ನೋಡಿ ಗ್ರಹಿಸುತ್ತೇವೆ. ಕಣ್ಣು ಮುಚ್ಚಿಕೊಂಡಿರುವಾಗ ಸಹ ನಾವು ಅದೇ ವಸ್ತುವಿನ ಅದೇ ಚಿತ್ರವನ್ನು ಗ್ರಹಿಸಬಲ್ಲೆವು. ಇದು ಹೇಗೆ? ಜೆಲುವೆಯೊಬ್ಬಳನ್ನು ನೋಡಿದಾಗ ಅವಳ ರೂಪ ತನ್ಮಾತ್ರೆಗಳು ಬಾಹ್ಯ ಚಕ್ಷುವಿನ ದ್ವಾರಾ ಮನಸ್ಸಿನಲ್ಲಿರುವ ನಯನೇಂದ್ರಿಯವನ್ನು ತಲುಪಿ, ಅಲ್ಲಿ ಪರಿಣಾಮವುಂಟುಮಾಡುವುವು. ನಾವು ನಿದ್ರಿಸುವಾಗ ಸಹ ತತ್ಸಮವಾದ ಪರಿಣಾಮ ಉಂಟಾಗಬಹುದು. ಆಗ ಜೆಲುವೆಯ ರೂಪ ವಿರದಿದ್ದರೂ ಮನಸ್ಸಿನಲ್ಲಿ ಮೊದಲೇ ಸಂಚಿತವಾದ ವೃತ್ತಿಗಳಿಂದ ಪರಿಣಾಮವು ನಿದ್ರಾವಸ್ಥೆಯಲ್ಲಿ ವೇದ್ಯವಾಗಬಹುದು. ಅಂದ ಮೇಲೆ, ದೃಶ್ಯಗಳೆಲ್ಲ ಮನಸ್ಸಿನ ಮೇಲಿನ ಪರಿಣಾಮಗಳಷ್ಟೇ ವಸ್ತುವು ಎದುರಿಗಿದ್ದರೂ ಅಷ್ಟೇ ; ಇರದಿದ್ದರೂ ಅಷ್ಟೇ.

ತರುಣಿಯ ಅಂಗಾಂಗಳನ್ನು ಪುರುಷನು ಅರಿತಿರುವನು ಪುರುಷನ ಅಂಗಾಂಗಗಳನ್ನು ಸ್ತ್ರೀ ಅರಿತಿರುವಳು. ಅವರು ವಸ್ತ್ರಗಳಿಂದ ಅಂಗಾಂಗ ಮುಚ್ಚಿಕೊಳ್ಳಬಹುದು. ಆದರೂ ಮನಸ್ಸಿನೆದುರು ಸರ್ವಾಂಗಗಳ ಚಿತ್ರ ಎದುರು ನಿಲ್ಲುವುದು ಇಂಥವರಿಗೆ ವಸ್ತ್ರದಿಂದ ಏನೂ ಮರೆಮಾಡಿದಂತಾಗಲಿಲ್ಲ. ಇನ್ನು ಮನಸ್ಸನ್ನು ನಿಗ್ರಹಿಸಿದ ಯೋಗಿಗಳಿಗೆ, ಎದುರಿಗಿದ್ದ ವಸ್ತುವೇ ಅವರಿಗೆ ಬ್ರಹ್ಮವಾಗಿ ತೋರುವುದು. ಅವರಿಗಂತೂ ವಸ್ತ್ರಗಳ ಹೊದಿಕೆಯ ಅವಶ್ಯಕತೆಯೇ ಇಲ್ಲ. ಆದರೂ 'ಲೋಕ

ವಿರುದ್ಧವಾದ ಮಾರ್ಗದಲ್ಲಿ ಮನ ಹೋಗದಂತೆ ಮಾಡುವುದು ಲಜ್ಜೆ ತಾನೇ ? ಲುಂಗಿ
ಚಡ್ಡಿ ಬಿಡದಿರಲು, ಲೋಕದ ರೂಢಿಯೇ ಆತಂಕವಾಗಿದೆಯೆಚ್ಚೇ.

೬೬

ಡಾಗುಪಡಿನಪಂಡು ಬಾಗುಲೇದಂದುರು, ಅಟ್ಟಡಾಗು ತವುದಿ ಯರಯುಲೇನು
ತಮ್ಮುನೆಂಚುವಾರು ತವುಡಾಗುಕಾನ ವಿಶ್ವದಾಭಿರಾಮ ವಿನುರ ವೇಮ

ಕೆ ಳೆತು ಇರುವ ಹಣ್ಣು ಒಳಿತಲ್ಲವೆನುವರು;
ತಮ್ಮೊಳಿರುವ ಕೊಳೆಯು ತಿಳಿಯದಿಹರು.
ಆತ್ಮಸ್ತುತಿಯವನು ಅರಿಯ, ತನ್ನ ಕೊಳೆಯ.
ವಿಶ್ವದಾಭಿರಾಮ ಕೇಳು ವೇಮ.

'ತನ್ನ ಎಡೆಯಲ್ಲಿ ಕತ್ತಿ ಬಿದ್ದಿರುವಾಗ, ಅನ್ಯರೆಡೆಯಲ್ಲಿ ನೊಣ ಅರಿಸಹೋಗುವುದು ಜಾಣತನವಲ್ಲ' ಇದು ಗಾದೆ ಮಾತು. ಇದು ಲೋಕಾಚಾರದ ಮಾತು ಇದರಲ್ಲಿ ಮುಖ್ಯವಾದ ಅಂಶಗಳಿವು. ಮನುಷ್ಯನಿಗೆ ಒಳಿತು ಕೆಡುಕುಗಳನ್ನು ವಿಂಗಡಿಸಿ ತಿಳಿಯುವ ವಿವೇಕ ಬುದ್ಧಿ ಉಂಟು. ಮತ್ತು ಅವನು ವಿವೇಕ ಬುದ್ಧಿಯನ್ನು ಮನಸ್ಸಿನ ವಿಕ್ಷೇಪ ಸ್ವಭಾವದ ಮೂಲಕ, ತನಗೆ ಸಂಬಂಧಿಸದ ಪ್ರಸಂಗಗಳಲ್ಲಿಯೇ ಹೆಚ್ಚಾಗಿ ಬಳಸುತ್ತಾನೆ.

ಕೊಳೆತ ಹಣ್ಣಿನ ಉದಾಹರಣೆಯನ್ನೇ ತೆಗೆದುಕೊಳ್ಳಿರಿ. ಮನುಷ್ಯ ಹಣ್ಣು ಕೊಳೆತುಹೋದರೆ, ಒಳಿತಲ್ಲ ಎಂದು ತಿಳಿದಿರುತ್ತಾನೆ. ಹಣ್ಣು ಕೊಳೆಯಲು ಏನೆಂದರೇನು ? ಎಂಬುದನ್ನೂ ತಿಳಿದಿರುವನು. ಆದರೆ ತಮ್ಮ ಮನಸ್ಸಿನಲ್ಲಿ ಕೊಳೆಯುಂಟು. ಆ ಕೊಳೆಯಿಂದಾಗಿ ನಮಗೆ ಯಾವುದು ಒಳ್ಳೆಯದೋ, ಅದು ಮನಶ್ಚಕ್ಷುವಿಗೆ ಕಾಣುತ್ತಿಲ್ಲ. ಆ ಕೊಳೆಯನ್ನು ಇಲ್ಲದಂತೆ ಮಾಡಿದರೆ, ಕೊಳೆ ಉಂಟಾಗದಂತೆ ನೋಡಿಕೊಂಡರೆ, ಒಳಿತಾದುದು ಯಾವುದೋ, ಅದು ಗೊತ್ತಾಗುವುದು.

ಯಾರು ಆತ್ಮಸ್ತುತಿಯಲ್ಲಿ ಆನಂದಪಡುವರೋ, ಅವರು ತಮ್ಮ ಕೊಳೆಯ ಅರಿವು ಹೊಂದರು. ಆತ್ಮವಿಮರ್ಶೆ ಬೇಕು. ಬುದ್ಧಿ ಮಾತು ಕೇಳುವ ಸಹೃದಯತೆ ಬೇಕು. ಆಗ ಮನುಷ್ಯನಿಗೆ ತನ್ನಕುಂದು-ಕೊಳೆಯ ಅರಿವಾಗುವುದು.

೬೭

ಟಕ್ಕು ಯೋಗಿಯಂತ ಟಾಟೋಟು ಜೇಸಿನ, ವಿವರ ಮುರಸಿನಂತ ವೆಗಟುಗಲ್ದು,
ಪರಮುಸುನ್ನ ನರಕ ಬಾಧಯು ಸಿದ್ಧಂಬು ವಿಶ್ವದಾಭಿರಾಮ ವಿನುರ ವೇಮ

ಠಕ್ಕ ಯೋಗಿಯೆಷ್ಟು, 'ಠಬರು' ಮಾಡಿದರೂ,
ಬಣ್ಣ ತಿಳಿದ ಬಳಿಕ ಬೇಸರಷ್ಟೆ.
ಪರವು ಸೊನ್ನೆ; ನರಕ ಬಾಧೆ ಮಾತ್ರ ಸಿದ್ಧ.
ವಿಶ್ವದಾಭಿರಾಮ ಕೇಳು ವೇಮ

ಮನಸ್ಸನ್ನು ಶುದ್ಧಗೊಳಿಸಿ, ಪರಮಾತ್ಮನನ್ನು ಹೊಂದಿದವನು ಯೋಗಿ. ಯೋಗಿಯಾದವನಿಗೆ ಧನ-ಕನಕದ ಗೊಡವೆ ಇಲ್ಲ. ಉಡುಗೆ-ತೊಡುಗೆಗಳ ಪರಿವೆ ಇಲ್ಲ. ಊಟ ತಿಂಡಿಗಳ ಚಿಂತೆ ಇಲ್ಲ. ವ್ರತ-ನೇಮಗಳ ತೊಂದರೆ ಇಲ್ಲ. ಆದರೆ, ಹಲವರು ಠಕ್ಕಯೋಗಿಗಳುಂಟು. ಅವರು ಸನ್ಯಾಸಿಗಳೆಂದುಕೊಂಡು ತಿರುಗುತ್ತಾರೆ. ಅವರು ಹಣ ಮುಟ್ಟುವದಿಲ್ಲ, ಎನ್ನುತ್ತಾರೆ. ಆದರೆ ಅವನ ಪರಿವಾರದಲ್ಲಿ ಖಜಾಂಚಿ ಉಂಟು. ಅವನು ಹಣದ ಚೀಲ ತುಂಬಿಕೊಳ್ಳುವನು ಲೆಖ್ಖಪತ್ರದ ಹೊರೆ ಒಟ್ಟುವನು. ಇನ್ನು ಹಲವರು ಅವಧೂತರೆಂದು ಹೇಳಿಕೊಂಡು ಬಟ್ಟೆಯುಡುವುದಿಲ್ಲವೆಂದು ಹೇಳುತ್ತಿರುತ್ತಾರೆ. ಆದರೆ ಅವರ ಬಿಡಾರಕ್ಕೆ ಹೋಗಿ ನೋಡಿದರೆ, ಹೊದೆಯಲು ಕಂಬಳಿ ಒಟ್ಟಿರುತ್ತವೆ. ಇಂಥ ಅವಧೂತರೆಲ್ಲ ನಗ್ನರಾಗಿದ್ದಂತೆ ತೋರಿದರೂ, ಮನಸ್ಸಿನಲ್ಲಿ ಕಲುಷಿತರಾಗಿರಬಹುದು. ಇಂಥ ಠಕ್ಕ ಯೋಗಿಗಳು ಹಲವಾರು ದಿನ ಠಬರು ಮಾಡಬಹುದು. ಆದರೆ, ಅವರ ಬಣ್ಣ ಬಯಲಿಗೆ ಬಿದ್ದೇ ಬೀಳುವುದು. ಆಗ ಇಂಥವರ ಬಗ್ಗೆ ಗೌರವ ತಾಳಿದ್ದೆವಲ್ಲಾ ಎಂದು ಬೇಸರವೆನಿಸುತ್ತದೆ.

ಠಕ್ಕ ಯೋಗಿಗಳಿಗೆ ಪರವು ದೊರೆಯುವ ಮಾತು ದೂರ ಉಳಿಯಿತು. ಅವರ ಮನಸ್ಸು ಲೋಭ-ಮೋಹಗಳಿಂದ ನರಕ ದ್ವಾರವಾಗುವುದು.

೬೮

ಚನಗ ಜನಗದಾಕು ಜನುತ್ಕೋವಲೋಗಾಶಿ, ವಿನಗ ವಿನಗ ಬ್ರಮವ ವಿಭವರವಳಿ,
ಕನಕ ಗನಗ ಬುಟ್ಟು ಕಾರಣ ಮಗಪಡು, ವಿಶ್ವದಾಭಿರಾಮ ವಿನುರ ವೇಮ

ತುಳಿದು ತುಳಿದು ನೇವ ತಲುಪುತಿಹರು ಕಾಶಿ.
ಕೇಳಿ ಕೇಳಿ ಪ್ರಣವ ನಾದದುದಯ.
ಒಂಡು ಕಂಡು ಹುಟ್ಟು, ಕಾರಣ ಕಾಣುವುದು.
ವಿಶ್ವದಾಭಿರಾಮ ಕೇಳು ವೇಮ

ಕಾಶಿ ಅತಿ ಪುರಾತನ ಪಟ್ಟಣ. ವಾರಣಾಸಿ ಎಂದೂ ಇದಕ್ಕೆ ಹೆಸರು. ಗಂಗಾ ನದಿ ತತ್ಪೂರ್ವದಲ್ಲಿ ಬೆಟ್ಟದ ಪ್ರದೇಶದಲ್ಲಿ ಇನ್ನೂರು ಮೈಲು ಹರಿದು ಕಾಶಿಯ ಹತ್ತಿರ ಮೊಟ್ಟ ಮೊದಲು ಬಯಲು ಪ್ರದೇಶ ಸೇರುತ್ತದೆ. ಬೆಟ್ಟಗಳನ್ನು ಶಿವನಿಗೆ ಹೋಲಿಸುವುದರಿಂದ ಗಂಗೆ ಶಿವನ ಜಡೆಯಿಂದ ಕೆಳಗಿಳಿದಳು, ಎನ್ನುತ್ತಾರೆ. ಭಗೀರಥನ ಕಥೆಯೂ ಇದರೊಂದಿಗೆ ಹೆಣೆಯಲ್ಪಟ್ಟಿದೆ. ಕಪಿಲಮಹರ್ಷಿಯು ಇಲ್ಲಿಯೇ ಇದ್ದನಂತೆ. ಋಷಿ ಮುನಿಗಳಿರುವ ಸ್ಥಾನ ಜಲದ ಬಳಿ ಇದ್ದರೆ, 'ತೀರ್ಥ' ವೆನಿಸುತ್ತದೆ. ಗಂಗೆಯ ದಡದಲ್ಲಿರುವ ಕಾಶಿ ಅಂಥ ತೀರ್ಥವೆನಿಸಿದೆ. ಇಲ್ಲಿ ಶಿವನೇ ಪಾರ್ವತಿಯೊಂದಿಗೆ ವಾಸವಾಗಿರುವನೆಂದೂ ನಂಬುಗೆಯುಂಟು. ಕಾಶಿಗೆ ಹೋಗಿ ಸತ್ತರೆ, ವಿಶ್ವೇಶ್ವರನು ಬಲಗಿವಿಯಲ್ಲಿ ತಾರಕಮಂತ್ರ ಊದುವನಾದ್ದರಿಂದ ಮೋಕ್ಷವಾಗುವದು, ಎಂದು ಸ್ಥಳ ಮಹಿಮೆಯ ಬಗ್ಗೆ ಹೇಳುತ್ತಾರೆ.

ಆದರೆ ಯಾತ್ರಿಕನಿಗೆ ಉಳಿದುದೆಲ್ಲ ಸವ್ಯಪ್ರತವಿರಲಿ, ಇರದಿರಲಿ, ನೂರಾರು ಮೈಲ ದಾರಿ ತುಳಿದು ಕೊನೆಗೊಮ್ಮೆ, ನೋಡಬೇಕೆಂದು ಹಂಬಲಿಸುತ್ತಿರುವ, ಕಾಶಿಯನು

ನೋಡುತ್ತಾನೆ. ಗಂಗೆಯಲ್ಲಿ ಮುಳುಗಿ, ವಿಶ್ವೇಶ್ವರೆ ವಿಗ್ರಹದ ಬಳಿ ಸೇರುತ್ತಾನೆ. ಇದೇ ರೀತಿ, ದಿನಂಪ್ರತಿ ಶ್ರವಣ ಮಾಡುವದರಿಂದ ಪ್ರಣವ ಅಂದರೆ ಓಂಕಾರ ನಾದವು ಹೃದಯದಲ್ಲಿ ಮಿಡಿಯತೊಡಗುವದು. ಅದನ್ನು ಕೇಳಬೇಕು ಇದರ ಅರ್ಥದ ಮೇಲೆ ಧ್ಯಾನ ಮಾಡಬೇಕು' ವಾಚಕ ಜಸವಾಗಿ ಓಂಕಾರವಿಲ್ಲ. ಸತತಸಾಧನೆಯಿಂದ ಎಂಥ ಅಸಾಧ್ಯವಾದುದೂ ಸಾಧ್ಯವೆನಿಸುತ್ತದೆ ಹುಟ್ಟುತಿರುವ ಅಸಂಖ್ಯಾತ ಜೀವರಾಶಿಯನ್ನು ನೋಡಿ ಕಾರಣವಾವುದು? ಹುಟ್ಟು ಕಾರ್ಯವಾದರೆ ಅದಕ್ಕೆ ಕಾರಣವಾವುದು? ಎಂತು ವಿಚಾರೆ ಮಾಡಬೇಕು. ಬ್ರಹ್ಮವೇ ಕಾರಣ ಎಂದು ವಿದಿತವಾಗುವದು.

ಲಕ್ಷ

ಘಟಮು ಜಲಮುಲಂದು ಗಗನಂಬುಗಾಪ್ಪಿಂಚು, ಘಟಪು ಜಲಮು ಲೇವಿ ಗಗನ ವೇದಿ?
ಘಟಮುಲೋನಿಜ್ಯೋತಿ ಕ್ರಮಮುನ ಜೂಡುಮು, ವಿಶ್ವದಾಭಿರಾಮು ವಿನುರ ವೇಮು

ಘಟದ ನೀರಿನೊಳಗೆ ಗಗನ ಕಾಣುತಿಹುದು
ಘಟದಿ ಜಲವಿರದಿರೆ ಗಗನವೆಲ್ಲಿ?
ಘಟದೊಳಿಹ ಜ್ಯೋತಿ ಕ್ರಮದಿಂದ ನೋಡು.
ವಿಶ್ವದಾಭಿರಾಮ ಕೇಳು ವೇಮ

ಘಟದ ನೀರಿನಲ್ಲಿ ಗಗನದ ಪ್ರತಿಬಿಂಬ ಕಾಣುವುದು. ಘಟದ ಅಳತೆ ಅತಿ ಅಲ್ಪ. ಆದರೂ ಅನಂತವಾವ ಗಗನ ಅಲ್ಲಿ ಕಾಣುವುದು. ಆದರೆ ಈ ನೋಟ ಪ್ರತಿಬಿಂಬವಾಗಿ ಮಾತ್ರ. ಅದೂ ಸಹ, ಯಾವಾಗ ಘಟದಲ್ಲಿ ನೀರು ತುಂಬುವುದೋ ಆವಾಗ ಮಾತ್ರ ಗಗನ ಕಾಣುವುದು. ನೀರು ಇಲ್ಲವಾದರೆ, ಗಗನ ಮತ್ತು ಅವರ ಪ್ರತಿಬಿಂಬ ಒಂದೇ ಆಗುವವು. ಅದೇ ರೀತಿ, ಪರಮಾತ್ಮ ಗಗನವೆಂದು ತಿಳಿದರೆ, ಮನಸ್ಸು ಘಟದಲ್ಲಿಯ ನೀರಿನಂತೆ. ಮನಸ್ಸು ಇರುವವರೆಗೆ, ಪರಮಾತ್ಮನು ಪ್ರತಿಬಿಂಬರೂಪವಾಗಿ ಕಾಣುವನು. ಮನಸ್ಸು ನಿಲ್ಲಿಸಿದ ಮೇಲೆ ಇದು, ಅದು, ಮೇಲೆ, ಕೆಳಗೆ, ಅಲ್ಲಿ, ಇಲ್ಲಿ, ಎಲ್ಲವೂ ಪರಮಾತ್ಮನೇ ಕಾಣುವನು.

ಘಟದೊಳಿರುವ ಜ್ಯೋತಿ ಎಂದರೆ, ಹೃದಯದಲ್ಲಿರುವ ಜ್ಯೋತಿಯು ಪರಮಾತ್ಮನೇ. 'ವಿಜ್ಞಾನಮಯನೂ, ಇಂದ್ರಿಯಗಳ ಮಧ್ಯದಲ್ಲಿರುವವನೂ, ಬುದ್ಧಿಯಲ್ಲಿರುವ ಜ್ಯೋತಿಯೂ ಆವ ಪುರುಷನು ...." (ಬೃಹದಾರಣ್ಯಕ ಉಪ. ೪-೩-೭.) ಅಂಥ ಜ್ಯೋತಿಯನ್ನು ನೋಡುವುದಕ್ಕೆಂದು ಕ್ರಮವುಂಟು. 'ಪ್ರಕಾಶಿಸುತ್ತಿರುವ ಅವನನ್ನೇ ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತಿರುವುವು. ಅವನ ಪ್ರಕಾಶದಿಂದಲೇ ಇದೆಲ್ಲವೂ ಪ್ರಕಾಶಿಸುತ್ತಿರುವುದು'

(ಕಠ ಉಪ. ೨ ೫-೧೫)

ಲಕ್ಷ

ಗೊರ್ರೆಲುಪದಿವೇಲು ಕೂಡಿಯುಂಡಿನ ಚೋಟ, ದಲ್ಲಿನೆರಿಗಿವಚ್ಚು ದಾನಿಕೊದನು,
ಪರಮಯೋಗಿನೆರಿಗಿ ಭಕ್ತುಡುನೇವಚ್ಚುನು, ವಿಶ್ವದಾಭಿರಾಮ ವಿನುರ ವೇಮು.

ಕುರಿ ಹತ್ತು ಸಾವಿರ ಕೂಡಿರುವ ಸ್ಥಳದಿ,
ಅದರ ಮರಿ ತಾಯಿಯ ಅರಿಯುತಿಹುದು.
ಪರಮಯೋಗಿಯರಿತು ಭಕ್ತ ತಾನೆ ಬರುವ.
ವಿಶ್ವದಾಭಿರಾಮ ಕೇಳು ವೇಮು.

ಕುರಿಗೆ ತನ್ನ ಮರಿಯ ಗುರುತೇ ಗೊತ್ತು. ಸಾವಿರಾರು ಕುರಿಗಳ ಮಧ್ಯೆ ಬೆರೆತು ಕಾಣದಾದ ಮರಿಯನ್ನು ಸಹ ಅದು ಜೆನ್ನಾಗಿ, ಅನಾಯಾಸವಾಗಿ ಗುರುತಿಸಬಲ್ಲದು. ಎಲ್ಲ ಕುರಿಮರಿಗಳು ನಮಗೇನೋ ಒಂದೇ ಬಗೆಯಾಗಿ ಕಾಣುತ್ತವೆ. ಆದರೆ ತಾಯಿಗೆ ತನ್ನ ಮರಿಯು ಒಡೆದು ಕಾಣುವುದು. ವಾತ್ಸಲ್ಯದಿಂದ ಆಕರ್ಷಣೆ ಸಹಜವಾಗಿ ಉಂಟಾಗುವುದು.

ಪರಮಭಕ್ತನು, ಸಹ ಅಸಂಖ್ಯ ಜನ ಕೋಟಿಯಲ್ಲಿ ತನ್ನ ಗುರುವಾರು? ಎಂಬುದನ್ನು ಗುರುತಿಸಬಲ್ಲನು. ಗುರುವನ್ನು ಹುಡುಕಿಕೊಂಡು ಊರೂರು ಅಲೆಯಬಹುದು. ಶಿಷ್ಯ ಗುರುವಿಗಾಗಿ ಹಂಬಲಿಸಿ, ಗುರುಸನ್ನಿಧಿಗೆ ಸಹಜವಾಗಿ ಬರುತ್ತಾನೆ. ಕುರಿ-ಮರಿ ತನ್ನ ತಾಯಿಯನ್ನು ಸಾವಿರಾರು ಕುರಿ ಹಿಂಡಿನಲ್ಲಿ ಗುರುತಿಸುವಂತೆ ಗುರು ತನ್ನ ಶಿಷ್ಯನನ್ನು ಅಸಂಖ್ಯ ಜನ ಮಧ್ಯದಿಂದ ಕಂಡು ಹಿಡಿಯುತ್ತಾನೆ.

(ಹೋಲಿಸಿ ನೋಡಿರಿ :

ಬ್ರಾಹ್ಮಣನು ಕರ್ಮಕೃತವಾದ ಲೋಕಗಳನ್ನು ಪರೀಕ್ಷಿಸಿ, 'ಅಕೃತವು ಕೃತದಿಂದ ಆಗುವದಿಲ್ಲ' ಎಂದು ವೈರಾಗ್ಯವನ್ನು ತಾಳಬೇಕು. ಅದನ್ನು ತಿಳಿಯುವುದಕ್ಕಾಗಿ ಅವನು ಸಮಿತ್ತುಗಳ ಕಂತೆಯನ್ನು ಕೈಯಲ್ಲಿ ಹಿಡಿದುಕೊಂಡು, ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವನ್ನೇ ಹೊಂದಬೇಕು.

— ಮುಂಡಕ ಉಪ. ೧-೨-೧೨)

ಲಕ್ಷ

ಗುಹಲಲೋನ ಜೊಚ್ಚಿ ಗುರುವುನು ವೆದಕಂಗ, ಗ್ರೂರಮೃಗಮು ಕಂಡು ತಾರಸಿಲಿನ,
ಮುಕ್ತಿದಾರಿಯುದಿಯೆ ಮುಂದುಗಾಜೂಪುನು. ವಿಶ್ವದಾಭಿರಾಮ ವಿನುರ ವೇಮ

ಗುಹೆಗಳೊಳಗೆ ಸೇರಿ ಗುರುವನರಸುವಾಗ,
ಕ್ರೂರ ಮೃಗವದೊಂದು ಕೊಸರಿ ಬರಲು,
ಮುಕ್ತಿದಾರಿ ತಾನೆ ಮುಂದಾಗಿ ತೋರಿತು.
ವಿಶ್ವದಾಭಿರಾಮ ಕೇಳು ವೇಮ.

ಉಪಾಸನೆಯನ್ನು ಎಲ್ಲಿ ಮಾಡಬೇಕು ? ಯಾವಾಗ ಮಾಡಬೇಕು ? ಎಂಬ ಬಗ್ಗೆ ಯಾವ ನಿರ್ದಿಷ್ಟ ನಿಯಮಗಳಿಲ್ಲ. ಎಲ್ಲಿ ಮನಸ್ಸಿನ ಏಕಾಗ್ರತೆಗೆ ಅನುಕೂಲವೋ, ಅಲ್ಲಿ ಉಪಾಸನೆ ಮಾಡಬಹುದು. ಆದರೆ ಶ್ವೇತಾಶ್ವೇತರ ಉಪನಿಷತ್ತಿನಲ್ಲಿ ಮಾತ್ರ ಹೀಗೆ ಹೇಳಲಾಗಿದೆ : " ಸಮವಾದ, ಶುಚಿಯಾದ, ಸಣ್ಣ ಕಲ್ಲುಗಳು, ಬೆಂಕಿ, ಧೂಳು ಶಬ್ದ, ನೀರು, ಜನರ ವಾಸಸ್ಥಾನ ಇವುಗಳಿಲ್ಲದ, ಮನಸ್ಸಿಗೆ ಅನುಕೂಲವಾದ, ಕಣ್ಣಿಗೆ ಪೀಡೆಯನ್ನುಂಟುಮಾಡದ, ಗುಹೆಯೇ ಮೊದಲಾದ ವಾಯು ಪ್ರವಾಹವಿಲ್ಲದ ಸ್ಥಾನದಲ್ಲಿ ಮನಸ್ಸನ್ನು ನಿಯೋಜಿಸಬೇಕು " ನೀರು, ಸಣ್ಣ ಕಲ್ಲು ಇತ್ಯಾದಿ ಇಲ್ಲದ ಪ್ರದೇಶದಲ್ಲಿ ಕ್ರೂರ ಮೃಗಗಳು ಸುಳಿಯುವುದು ಕಡಿಮೆ. ಆದರೆ ಇಲ್ಲಿ ಗುಹೆಯನ್ನು ಹೇಳಿರುವುದರಿಂದ ಕ್ರೂರ ಮೃಗಗಳೂ ಗುಹೆಗಳಲ್ಲಿ ವಾಸಿಸಲು ಬಯಸುತ್ತವೆ. ಯಾವನೊಬ್ಬನು ಧ್ಯಾನಕ್ಕೆ ಕುಳಿತಾಗ ಕ್ರೂರ ಮೃಗ ಗುಹೆ ಸೇರಿದರೆ, ತೀರಿತು. ಶಿವ ಧ್ಯಾನ ಮಾಡುವವನು ಹುಲಿಯ ಬಾಯಿಗೆ ತುತ್ತಾಗುವನು. ' ಸಾಯುವವನು ಯಾವ ಭಾವದಿಂದ ಸಾಯುವನೋ ಅದೇ ಭಾವ ಹೊಂದುವನು ' ಶಿವಧ್ಯಾನ ಮಾಡುತ್ತ ಸಾಯುವವನು ಶಿವನನ್ನೇ ಹೊಂದುವನು ! ಹೀಗೆ ಕ್ರೂರ ಮೃಗವು ಮುಂದಾಗಿ ತಾನೇ ಮುಕ್ತಿ ತೋರಿತು ! ಎಂದು ಯಾರಾದರೂ ವ್ಯಂಗ್ಯವಾಗಿ ನುಡಿಯಬಹುದು. ಗುರುವನ್ನು ಅರಸಲು ಶಿಷ್ಯ ಗುಹೆಗಳಲ್ಲಿ ತಿರುಗಬೇಕೆಲ್ಲ. ಆತ್ಮದಲ್ಲಿ ಗುರುವನ್ನು ಗುರುತಿಸಬೇಕು. ಗುಹೆಯ ವಾಸ ಬೇಕಾಗಿಲ್ಲ.

[ಹೋಲಿಸಿ ನೋಡಿರಿ :

" ಮನದಲ್ಲಿ ನೆನೆವವಗೆ | ಮನೆಯೇನು ? ಮಠವೇನು ? ಮನದಲ್ಲಿ ಶಿವನ ನೆನೆಯದವ, ಪರ್ವತದ ಕೊನೆಯೆಲಿರ್ದೇನು ? ಸರ್ವಜ್ಞ. "]

ಅಓ

ಕಸ್ತುರಿವಲವೇಲ ಗಜರಾಜ ಮುನಕೆನ್ನ ? ದನದುಮದಪುಧಾರ ತಾವಿಕಾಕ,
ಯೋಗಿಕೇಲ ರಂಭ ಯೋಗಹರ್ಷಂಬುಂಡ ? ವಿಶ್ವದಾಭಿರಾಮ ವಿನುರ ವೇಮ

ಕಸ್ತುರಿಯ ಪ್ರೀತಿ ಗಜರಾಜನಿಗೇಕೆ ?
ಮದದ ಧಾರೆ ತನಗೆ ಮಧುರವಿಂದೆ ?
ಯೋಗಿಗೇಕೆ ರಂಭೆ ಯೋಗ ಹರ್ಷವೆಲ್ಲ?
ವಿಶ್ವದಾಭಿರಾಮ ಕೇಳು ವೇಮ

ಯಾರಿಗೆ ಯಾವುದು ಸಹಜ ಸ್ವಭಾವವೋ, ಅಷ್ಟರ ಮಟ್ಟಿಗೆ ಇದ್ದರಾಯಿತು. ಕಸ್ತೂರಿಯು ಒಳ್ಳೆ ಅಮೂಲ್ಯ ವಸ್ತು. ವಿಪುಲ ಸೌರಭಯುತವಾದುದು. ಅದು ಎಲ್ಲಿ ಉತ್ಪತ್ತಿಯಾಗುವುದು ಗೊತ್ತೇ ? ಚಿಗರೆಯ ಜಾತಿಯ ಕಸ್ತೂರಿ ಮೃಗದ ನಾಭಿಯಲ್ಲಿ. ಮೃಗನಾಭಿಯಂಥ ಕೀಳುಸ್ಥಾನದಲ್ಲಿ ಹುಟ್ಟುವ ಕಸ್ತೂರಿ ಸರ್ವರಿಂದಲೂ ಅಭಿಮಾನಸ್ಪದನೆನಿಸಿದ ಆನೆಯಲ್ಲಿ ಏಕೆ ಹುಟ್ಟುವದಿಲ್ಲವೊ? ದೈವಲೀಲೆಯಷ್ಟೇ. ಗಜ, ಪ್ರಾಣಿಗಳಲ್ಲಿ ರಾಜ. ಗಜರಾಜನಿಗೆ ಕಸ್ತೂರಿಯ ಮೇಲೆ ಆಸೆಯೇಕೆ ? ಆನೆಯಲ್ಲಿ ವಿಶಿಷ್ಟವಾದ ಗುಣ

ವೇನು.? ಮದದ ಧಾರೆ ತಾನೇ. ಮದವೇರಿದ ಆನೆಯನ್ನು ಮಣಿಸಲು ಸರ್ವರೂ ಭಯಪಡುವರು. ಆನೆಗೆ ಸಹಜವಾದ ಮದದ ಧಾರೆಯು ಮಧುರವಾಗದೇಕೆ ?.

ಯೋಗಿ, ಪರಮಾತ್ಮನಲ್ಲಿ ಪ್ರೇಮಭರಿತನಾಗಿ ಭಕ್ತಿಹೊಂದಿ ಒಂದಾದವನು. ಅವನು ವಿಷಯಾಸಕ್ತಿಯಿಂದ ದೂರವಾದವನು. ಇಂದ್ರಿಯಗಳನ್ನು ನಿಗ್ರಹಿಸಿದವನು. ಅಂಥವನಿಗೆ ರಂಭೆಯೊಂದಿಗೆ ಸೇರುವುದರಿಂದಾಗುವ ಹರ್ಷದ ಗೊಡವೆಯೇಕೆ ? ಯೋಗಿಗೆ ನಿತ್ಯಾನಂದವು, ಇರುವಾಗ ಕ್ಷಣಿಕ ಸುಖಭೋಗದ ಗೊಡವೆ ಬೇಕಾಗಿಲ್ಲ.

ಅಓಕ

ಕಲುಷುದೀಸಿ ನರುಲು ಕಾಪಾಡಿವ್ಯರುಲ, ಬೆಂಚುಸ್ಪೇಮುವಲೆನು ಬಿನಿಚಿಮುದಿನಿ,
ದೃಶ್ಯಮುಲನುದ್ರುಂಚಿ ತೆಂಪುಗಾನುಂಡುಮು, ವಿಶ್ವದಾಭಿರಾಮ ವಿನುರ ವೇಮ

ಕಳೆಯ ತೆಗೆದು ರೈತ, ಬೆಳೆಯ ರಕ್ಷಿಸುವಂತೆ,
ಬೆಳೆದ ಹದುಳದಂತೆ ಬೆಳೆಸು ಮನಸು.
ದೃಶ್ಯ ತೊಡೆದು ಹಾಕೆ, ತಂಪೆನಿಪುದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಹೊಲ-ಗದ್ದೆಗಳಲ್ಲಿ ಉತ್ತಿ ಬಿತ್ತಿದ ಬೀಜ ಮೊಳಕೆಯೊಡೆದು, ಸಸಿಗಳು ಮೇಲೇಳುವ ಮೊದಲು, ಗಾಳಿಯಿಂದ ತೂರಿ ಬಂದ ಕಾಡು ಕಂಟೆ ಹುಲ್ಲು ಬೀಜಗಳು ಮೊಳಕೆಯೊಡೆಯುತ್ತವೆ. ಬೆಳೆಯನ್ನೇ ನಾಶಮಾಡುವಷ್ಟು ಈ ಅನಿಷ್ಟ ಸಸ್ಯಾದಿಗಳು ಹುಟ್ಟಿ ಬೆಳೆಯುತ್ತವೆ. ಇದು ಕೊಳೆ ಇದ್ದಂತೆ. 'ಕಳೆ' ಎಂದು ಆಡುಮಾತಿನಲ್ಲಿ ಕರೆಯುವರು. ಒಕ್ಕಲಿಗ ಕಳೆತೆಗೆದು ಬೆಳೆಯನ್ನು ರಕ್ಷಿಸುತ್ತಾನೆ. ಸಾಧಕನು ಸಹ, ಅದೇ ರೀತಿ, ಪರಮಾತ್ಮನಲ್ಲಿ ಹುಟ್ಟಿದ ಪ್ರೇಮವನ್ನು, ವಿಷಯ ವಸ್ತುಗಳಲ್ಲಿ ಉಂಟಾದ ಕಾಮುದಿಂದ ರಕ್ಷಿಸಿ, ಮನಸ್ಸನ್ನು ಶುದ್ಧಗೊಳಿಸಬೇಕು. ವಿಕಾಸಗೊಳಿಸಬೇಕು. ಆಸಕ್ತಿಯೆಂಬ 'ಕಳೆ' ತೆಗೆದು, ಭಕ್ತಿ ಎಂಬ ಬೆಳೆ ಬೆಳೆಸಬೇಕು. ಇದುವೇ ಮನಸ್ಸು ಬೆಳೆಸುವ ವಿಧಾನ.

ಇದನ್ನೇ ಯೋಗಭಾಷೆಯಲ್ಲಿ ಹೀಗೆ ವಿವರಿಸಬಹುದು. ಆಸಕ್ತಿ ಕಡಿಮೆಯಾದರೆ ಚಿತ್ತ ಜ್ಯೋತಿಯನ್ನು ಮುಸುಕಿದ ತೆರೆ ಇಲ್ಲವಾಗುವದು. ಚಿತ್ತಕ್ಕೆ ಸ್ವಭಾವತಃ ಎಲ್ಲ ಜ್ಞಾನವಿರುವದು. ಇದು ಸತ್ವ ಕಣಗಳಿಂದ ಆಗಿದೆ. ಆದರೆ ಇದಕ ಮೇಲೆ ರಾಜಸಿಕ ತಾಮಸಿಕ ಕಣಗಳು (ಕಳೆ) ಕುಳಿತಿರುವವು. ಈ ಆವಕಣವು ಜಾರಬೇಕು. ಇದಕ್ಕೆ ಪ್ರಾಣಾಯಾಮವೆನ್ನುವರು. ಈಗ ಮನಸ್ಸು ಧಾರಣಕ್ಕೆ ಯೋಗ್ಯವಾಗುವದು.

ಮುಂದಿನ ಮೆಟ್ಟಲು ಪ್ರತ್ಯಾಹಾರ. ಅಂದರೆ ಇಂದ್ರಿಯಗಳನ್ನು ಬಾಹ್ಯವಸ್ತುಗಳಿಂದ ಒಳಗೆ ಸೆಳೆಯಬೇಕು. ಮತ್ತು ಚಿತ್ತಸ್ವರೂಪ ಹೊಂದುವಂತೆ ಮಾಡಬೇಕು ಇಂದ್ರಿಯಗಳು ಚಿತ್ತದ ಬೇರೆ ಬೇರೆ ಅವಸ್ಥೆಗಳು. ನೀವು ದುಂಡುಕಲ್ಲು ನೋಡುತ್ತೀರಿ. ಕಲ್ಲಿನ ದುಂಡನೆಯ ಆಕಾರ ಕಲ್ಲಿನಲ್ಲಿರದೆ, ಮನಸ್ಸಿನಲ್ಲಿ ಉಂಟು. ಈ ಆಕಾರವನ್ನು, ಮನಸ್ಸಿಗೆ ತರುವ ವಸ್ತು ಬಾಹ್ಯದಲ್ಲಿದೆ. ನಿಜವಾದ ಆಕಾರ ಚಿತ್ತದಲ್ಲಿದೆ. ಇಂದ್ರಿಯಗಳು

ತಥೈಕ್ಯ ಭಾವ ತಾಳಿ. ತಮಗೆ ಯಾವ ವಸ್ತು ಬಂದರೂ, ಅದರ ಆಕಾರ ತಾಳುತ್ತವೆ. ಇಂಥ ಆಕಾರ ತಾಳದಂತೆ ಇಂದ್ರಿಯ ನಿಗ್ರಹಿಸಬೇಕು. ಅಂದರೆ ದೃಶ್ಯವನ್ನು ತೊಡೆದು ಹಾಕಬೇಕು. ಆಗ ಶಾಂತವಾಗಿ ತುಂಬಾ ತಂಪೆನಿಸುವುದು.

ಆ೭೦

ಕಲುಮುಸುಖವುಲೆಲ್ಲ ಗಲ್ಲಗಾರೋಯುಚು, ಮೆಲಗುಚುಂಡವಲಯು ವಿಹಿರುಪಗಿದಿ,
ದಿರುಗುನೇರ್ಪುಜೂಡ ಧೀರಡೆಯಗುನಯಾ, ವಿಶ್ವದಾಭಿರಾಮ ವಿನುರ ವೇಮ.

ಕಂಡ ಸುಖವನೆಲ್ಲ ಕನಸೆಂದು ಭಾವಿಸಿ,
ಮೆರೆಯುತ ಇರಬೇಕು; ರವಿಯ ರೀತಿ.
ತಿರುಗಲರಿವು ನೋಡು; ಧೀರ ಸಂಚಾರಿಯು.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ಸುಖದ ಹಿಂದೆ ಹೋಗುವುದು, ಎರಡು ಅವಸ್ಥೆಗಳಲ್ಲಿ. ಜಾಗ್ರದವಸ್ಥೆಯಲ್ಲಿ ಮನಸ್ಸು ವಿಕ್ಷಿಪ್ತ (ವಿಕ್ಷೇಪ ಎಂದರೆ ಬಾಹ್ಯವಸ್ತುಗಳ ಮೇಲೆ ಹರಿಯುವುದು) ವಾಗಿರುವುದು. ಸಮಾಧಿಯಲ್ಲಿ ಉಂಟಾಗುವ ಸುಖದಲ್ಲಿ ಆಸಕ್ತನಾಗದೆ, ಆ ಸುಖವು ಮಿಥ್ಯೆಯೆಂದು ತಿಳಿಯಬೇಕೆಂದು ಯೋಗಿ ಹೇಳುತ್ತಾನೆ. ಅದು ಹೇಗೆ ? ಸ್ವಪ್ನದಲ್ಲಿ ಸವಿಯಾದ ಹಣ್ಣು ತಿಂದಂತೆ ಭಾವಿಸಿರಿ. ಆ ಬಳಿಕ ಜಾಗ್ರತಾವಸ್ಥೆಯಲ್ಲಿರುವಾಗ ಆ ಹಣ್ಣೂ ಇರುವದಿಲ್ಲ. ಆ ಸವಿಯ ಸುಖವೂ ಇರುವುದಿಲ್ಲ. ಅದು ಯಾವಾಗಲೂ ಇದ್ದಿಲ್ಲ. ಅದು ಇದ್ದುದು ನಮ್ಮ ಸ್ವಪ್ನಾವಸ್ಥೆಯ ಚಿತ್ತದಲ್ಲಿ ಮಾತ್ರ. ಸ್ವಪ್ನದರ್ಶಿಯ ಚಿತ್ತದಲ್ಲಿರುವ ಭೋಗ ವಸ್ತುವೇ ಎಚ್ಚತ್ತವನ ಚಿತ್ತದಲ್ಲಿ ಹೇಗೆ ಇರುವುದಿಲ್ಲವೋ ಅದೇ ರೀತಿ, ಸುಷುಪ್ತಿಯಲ್ಲಿ ಇರುವವನ ಚಿತ್ತದಲ್ಲಿಯೂ ಇರುವುದಿಲ್ಲ. ಆದರೆ ಎಚ್ಚತ್ತಿರುವವನ ಚಿತ್ತದಲ್ಲಿ ಬೇರೆ ಭೋಗವಸ್ತುಗಳು ಇರಬಹುದು; ಅದೇ ರೀತಿ, ಸುಷುಪ್ತಿಸ್ಥಿತಿಯಲ್ಲಿ ಇರುವವನ ಚಿತ್ತದಲ್ಲಿಯೂ ಬೇರೆ ಭೋಗವಸ್ತುಗಳು ಇರಬಹುದು. ಅವೆಲ್ಲ ಸ್ವಪ್ನದಂತೆ ಎಂದು ಬಿಡಬೇಕು. ಯಾವ ಆಶೆ ಇಲ್ಲದವನೇ ಮೆರೆಯುವವನು. ಮೆರೆಯುವವನಂತೆ ಇರಬೇಕು.

'ಸೂರ್ಯನ ತಿರುಗಾಟ' ಎಂದರೇನು, ಎಂಬುದು ಗೊತ್ತಿರಬೇಕು. ಸೂರ್ಯ ಚಲಿಸುವುದೇ ಇಲ್ಲ. ಆದರೂ ಚಲಿಸಿದಂತೆ ಕಾಣುವುದು. ಪೃಥಿವಿ, ಚಂದ್ರ ಇವೆಲ್ಲ ಚಲಿಸಿ ಸಂಚಾರವೆನಿಸುವುದು. ಯೋಗಿಯ ಮನದ ತಿರುಗಾಟವೂ ಈ ತೆರನಾದ ಧೀರ ಸಂಚಾರ ಅವನ ಮನಸ್ಸು ನಿಶ್ಚಲವಾಗಿದ್ದು ದಶದಿಕ್ಕುಗಳಲ್ಲಿರುವ ಸರ್ವ ಭೂತಗಳನ್ನು ಗ್ರಹಿಸಬಲ್ಲದು. ಸೂರ್ಯ ಚಂದ್ರಮಂಡಲ ಗ್ರಹಿಸಬಲ್ಲದು. ಸೂರ್ಯನಂತೆ ತಿರುಗಬಲ್ಲದು. ಆಗ ಜ್ಞಾನವಾಗುವುದು.

ಆ೭೧

ಈನಿನಿಟ್ಟಪುಲಿನಿ ಬೂನಿಚಂಪಗವಚ್ಚು, ಮನಸು ಮರ್ಮ ಮುರಸಿ ಕನಗವಚ್ಚು
ತಾರಕಂಬು ಮರಗಿ ತಗುಲಟಸಾಧ್ಯಮಾ ? ವಿಶ್ವದಾಭಿರಾಮ ವಿನುರ ವೇಮ.

ಈದ ವ್ಯಾಘ್ರವನು ಇರಿಯಬಹುದು ಹಿಡಿದು,
ಮನಗಾಣಲು ಬಹುದು, ಮರ್ಮವಂಸಿ.
ತಾರಕವನು ಮತ್ತೆ ತಗಲಲೆಂತು ಸಾಧ್ಯ ?
ವಿಶ್ವದಾಭಿರಾಮ ಕೇಳು ವೇಮ.

ಜನರಿಗೆ ಗೊತ್ತಿಲ್ಲದ ವಿಷಯಗಳ ಮಹತಿಯನ್ನು ತಿಳಿಸಬೇಕಾದರೆ, ಅವರಿಗೆ ಗೊತ್ತಿರುವ ವಿಷಯದ ಹೋಲಿಕೆಯಿಂದ ಮಾತ್ರ ಸಾಧ್ಯ. ವ್ಯಾಘ್ರ ಭೀಕರ ಪ್ರಾಣಿ. ಅದನ್ನು ಹಿಡಿದುಕೊಲ್ಲುವದು ತುಂಬಾ ಸಾಹಸದ ಕಾರ್ಯ. ಇನ್ನು ಈದ ಹುಲಿಯನ್ನು ಹಿಡಿಯುವದಂತೂ ತೀರೆ ಸಾಹಸದ ಮಾತು. ಇದಕ್ಕೂ ಹೆಚ್ಚಿನ ಸಾಹಸ ಯಾವುದಾದರೂ ಇರಬಹುದೇ, ?ಎನ್ನಿಸುವುದು. ಯೋಗಿ 'ಇದೆ' ಎನ್ನುತ್ತಾನೆ.

ಮನಸ್ಸು ಸಂಶಯದ ಮುದ್ದೆ. 'ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮಣ, ಗೋವು ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವರೆಲ್ಲ ಸಮನಾಗಿರುವರು. ಹಾಗೆ ತಿಳಿಯುವವನೇ ಜ್ಞಾನಿ' (ಭಗವದ್ಗೀತೆ ೫-೧೮) ಹೀಗೆ ಹೇಳಿದರೆ ನಾವು ನಂಬುವದಿಲ್ಲ. ಇದೆಲ್ಲ 'ನಾಮ–ರೂಪ ಜಗತ್ತು' ಒಂದೇ ಬ್ರಹ್ಮ ಕೊಟ್ಟ ಬೇರೆ ಬೇರೆ ಹೆಸರು. ಆಕಾರ ಎಂದು ತಿಳಿದಾಗ, ಮನಸ್ಸು ಸಾಮ್ಯ (ಬ್ರಹ್ಮ)ವನ್ನು ತಿಳಿಯುತ್ತದೆ. ಬ್ರಾಹ್ಮಣನನ್ನೂ, ನಾಯಿಯ ಮಾಂಸ ತಿನ್ನುವವನನ್ನೂ ಸಮನಾಗಿ ಭಾವಿಸುತ್ತದೆ. ಮರ್ಮವನ್ನು ಹೀಗೆ ಹುಡುಕಿ ನೋಡಿ ಸತ್ಯದ ಬಗ್ಗೆ ಮನಗಾಣಬಹುದು. ಇದು ತುಂಬಾ ಕಷ್ಟದ ಕಾರ್ಯ. ಇದಕ್ಕಿಂತಲೂ ಕಷ್ಟದ ಕಾರ್ಯ ಇದೆಯೇ ? ಯೋಗಿ,ಇದೆ ಎನ್ನುತ್ತಾನೆ.

ಸಕಲ ಸೃಷ್ಟಿಯ ಮೂಲ ಕೇಂದ್ರವಾದವನೆ ಪುರುಷೋತ್ತಮ. ಪುರುಷೋತ್ತಮನ ಕರುಣೆಯಿಂದ ಜೀವನು ಸೆಳೆಯಲ್ಪಡುವನು. ಪುರುಷೋತ್ತಮನನ್ನು ಹೊಂದಬಯಸುವವನು ಅವನಲ್ಲಿ ಶರಣು ಹೊಂದುತ್ತಾನೆ. ಯಾವನು ಮೋಕ್ಷ ಸಾಧಿಸಲು ಹೆಣಗುವನೋ,ಅವನು ತನ್ನ 'ಅಹಂಕಾರ'ವನ್ನು ಪೂರ್ಣವಾಗಿ ನಿರ್ಗುಣ ಬ್ರಹ್ಮದಲ್ಲಿ ಆಶ್ರಯಹೊಂದಬೇಕು. ಇದು ಮಹಾಸಾಹಸದ ಕೆಲಸ. ಸಗುಣಬ್ರಹ್ಮ ಮೀರಿ ನಿರ್ಗುಣ ಬ್ರಹ್ಮ ಸೇರುವ ಮಧ್ಯಸ್ಥಿತಿಯೇ ತಾರಕಬ್ರಹ್ಮ. ತಾರಕಬ್ರಹ್ಮವೆಂದರೆ, ಭಕ್ತಿಭಾವವಷ್ಟೇ, ಮನಸ್ಸು ಶುದ್ಧಿಯಾಗಿ ಧ್ಯಾನಧಾರಣ ಸ್ಥಿತಿಯನ್ನು ದಾಟುವ ಮನಸ್ಥಿತಿಗೂ ದಾರಕಯೋಗವೆನ್ನುವುದುಂಟು. ತಾರಕವನ್ನು ತಗಲುವದು ತುಂಬಾ ಕಷ್ಟಸಾಧ್ಯ ! ಅದ್ವಿತೀಯ ಸಾಹಸ !

ಆ೭೨

ತೋಲುಘಟಮುಲೋನ ದೊಲಗಕಯಂನ್ನಪ್ಪು, ಡಾಲು ಮುಗಲು ಪ್ರೀತಿ ನಲರು ಚುಂಡ್ರು
ಜೀವಿಘಟಮುವಿಡುವ ಜಿಕ್ಕು ಡಿಪೋವುರಾ ? ವಿಶ್ವದಾಭಿರಾಮ ವಿನುರ ವೇಮ

ತ್ವಚೆಯು ದೇಹದಿಂದ ತೊಲಗದಿರುವ ತನಕ,
ಗಂಡ ಹೆಂಡಿರೊಲುಮೆ ಕುದುರುತಿಹುದು.
ಘಟವ ಬಿಡಲು ಜೀವಿ ಗಂಟು ಬಿಚ್ಚುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಪ್ರಪಂಚದ ವಸ್ತುಗಳಲ್ಲಿ ಆಕರ್ಷಣೆಯುಂಟು. ಈ ಆಕರ್ಷಣೆಯೇ ಕಾಮ. ಗಂಡ-ಹೆಂಡಿರಲ್ಲಿ ಕಾಮ ಸುಳಿಯುವುದು ಸ್ವಾಭಾವಿಕ. ಮಾಂಸ-ಖಂಡ ತುಂಬಿದ ತ್ವಚೆಯ ಚೀಲವೇ ದೇಹವಷ್ಟೇ. ಪ್ರಪಂಚದ ಇತರೆಲ್ಲ ವಸ್ತುಗಳಂತೆ ಈ ದೇಹವೂ ಪಂಚಭೂತಗಳಿಂದಾಗಿದೆ. ದೇಹ ಇಲ್ಲವಾದರೆ, ಪ್ರಪಂಚದ ಆಕರ್ಷಣೆಯಿಲ್ಲ; ಕಾಮವೂ ಇಲ್ಲ. ಗಂಡ-ಹೆಂಡಿರೆಂಬ ಒಲಿಮೆಯೂ ಇಲ್ಲ, "ಇವನ ಹೃದಯದಲ್ಲಿರುವ ಕಾಮಗಳೆಲ್ಲ ಯಾವಾಗ ಬಿಟ್ಟು ಹೋಗುವವೋ, ಆಗ ಮನುಷ್ಯನು ಅಮೃತನಾಗುತ್ತಾನೆ. ಮತ್ತು ಈ ಶರೀರದಲ್ಲಿಯೇ ಬ್ರಹ್ಮವನ್ನು ಹೊಂದುತ್ತಾನೆ" [ಬೃಹದಾರಣ್ಯಕ ಉಪ ೪-೪-೭] ಆದರೆ ಛಾಂದೋಗ್ಯ ಉಪನಿಷತ್ತು ಹೀಗೆ ಪರಿಸುತ್ತದೆ. 'ಅವನಿಗೆ ಎಲ್ಲಿಯ ವರೆಗೆ ಶರೀರ ಸಂಬಂಧವು ಹೋಗುವುದಿಲ್ಲವೋ, ಅಲ್ಲಿಯ ವರೆಗೇ ತಡ; ಅನಂತರ ಪರಬ್ರಹ್ಮವನ್ನು ಹೊಂದುತ್ತಾನೆ.' ಅಂದರೆ ಬ್ರಹ್ಮಪ್ರಾಪ್ತಿ ಇರುವ ವರೆಗೂ ಸಂಸಾರ ಇರುವುದು. 'ಸಂಸಾರ' ವನ್ನು ಗಂಡ-ಹೆಂಡಿರೊಲಿಮೆಯೆಂದು ವ್ಯಾವಹಾರಿಕ ಭಾಷೆಯಲ್ಲಿ ಹೇಳುವರಷ್ಟೇ. ಇಲ್ಲಿಗೆ ಲಿಂಗಬೇಧ ಇತ್ಯಾದಿ ಇರುವುದು ತ್ವಚೆಯ ರೂಪದಿಂದ. ತ್ವಚೆಯ ರೂಪ ಹೊಳಗೆ ಮನಸ್ಸು ನೆಟ್ಟರೆ, ಗಂಡು-ಹೆಣ್ಣು ಎರಡು ಘಟಗಳಂತೆ ಅವುಗಳೊಳಗಿರುವ ಆಕಾಶ ಹೊರಗಿನ ಆಕಾಶವೇ ಆಗಿದೆ. ಇನ್ನಿತರ ಚರಾಚರ ಪ್ರಪಂಚಕ್ಕೂ ಗಂಡ-ಹೆಂಡಿರಾಗಿರುವವರಿಗೂ ಯಾವ ಭೇದವಿಲ್ಲವೆನಿಸುವುದು. ಅದುವರೆಗೆ ಭೇದವೆಂದು ತೋರಿದ್ದು ಅ-ಜ್ಞಾನದಿಂದ. ಇದುವೇ ಹೃದಯದಲ್ಲಿರುವ ಗಂಟು. ಹೃದಯ-ಗ್ರಂಥಿ. ಈ ಗಂಟು ಬಿಚ್ಚಿದಾಗ ಜ್ಞಾನ ವಾಗುವುದು.

ಆಟ೩

ಚಮುರುರಾಚುಕೊನ್ನ ಜಠ್ಠಂಬುಮೆರುಗೆಕ್ಕ ಸಾಮುಜೇಯಮೇನು ಸತ್ತು ವೆಕ್ಕ,
ಜ್ಞಾನಮಾರ್ಗಮಿ ಎಗ ಗಡತೇರು ಜನ್ಮಂಬು, ವಿಶ್ವದಾಭಿರಾಮ ವಿನುರ ವೇಮ.

ತ್ವೆಲ ಬಳಿದುಕೊಳಲು ತ್ವಚೆಗುಂಟು ಮೆರುಗು.
ಸಾಮುಗೆಯ್ಕೆ ದೇಹ ಶಕ್ತಿ ಹೆಚ್ಚು
ಜ್ಞಾನ ಮಾರ್ಗವರಿಯೆ, ಜನ್ಮ ದಡ ತಲುಪಿತು.
ವಿಶ್ವದಾಭಿರಾಮ ಕೇಳು ವೇಮ.

ತ್ವಚೆಯ ಮೆರುಗು ಕಂಡು ಯೋಗಿಯನ್ನು ಗುರುತಿಸುವ ಸಂಪ್ರದಾಯವೂ ಹಲವು ಜನರಲ್ಲಿ ಬೆಳೆದುಬಂದಿದೆ. ಯೋಗಿಯ ದೇಹವು, ಕಾಂತಿಯುತವಾಗಿರಬೇಕೆಂಬ ಅಭಿಪ್ರಾಯ ಬೆಳೆದುಬಂದು, ಯೋಗವೆಂದರೆ ಮನಸ್ಸಿನ ಶುದ್ಧಿ ಹಾಗೂ ಜೀವ-ಪರಮರ ಒಂದಾಗುವಿಕೆಗಿಂತ ದೇಹದ ತ್ವಚೆಯ ಮೆರಗೇ ಗುರಿಯಾಗಿ, ಯೋಗವು ಹೆಚ್ಚಾಗಿ ಶಾರೀರಿಕವಾಗಿ ಉಳಿಯಿತು. ಇದನ್ನೇ 'ಶಾರೀರಿಕ ಯೋಗ', 'ಘಟಸ್ಥ ಯೋಗ', ಹಠಯೋಗ ಎಂದು ಹೆಸರಿಸಲಾಯಿತು. ಆಲದ ಮರದಂತೆ ಸಾವಿರ ವರುಷ ಬದುಕುವದನ್ನು ದೈವಿಕ ಶಕ್ತಿ ಎಂದು ಭಾವಿಸಲಾಯಿತು. ಶರೀರದ ನಾಡಿಗಳ ನಿಯಂತ್ರಣದಿಂದ ಹಗುರಾಗುವದನ್ನೂ, ಭಾರವಾಗುವದನ್ನೂ ಸಾಧಿಸಿದ, ಶಾರೀರಿಕ ಬಲ ಪ್ರದರ್ಶನವನ್ನು ಅದ್ಭುತ ದೈವಿ ಪವಾಡ ಎಂದು ಗಣಿಸಿದರು. ತ್ವಚೆಯ ಮೆರುಗು ಹೆಚ್ಚಾಗಬೇಕಾದರೆ, ತೈಲಬಳಿದು ಉಜ್ಜುತ್ತ ಹೋದರೆ ಸಾಕು. ಸಾಮು ಮಾಡುತ್ತ ಹೋದರೆ ದೇಹಶಕ್ತಿ ಹೆಚ್ಚಾಗುವದು. ಹಠಯೋಗದಲ್ಲಿ ಬರುವ ಹಲವಾರು ಆಸನಗಳು ದೇಹದ ವಿವಿಧ ಅಂಗಗಳಿಗೆ ವ್ಯಾಯಾಮ. ಮಾಡಿಸಿ ಶಕ್ತಿಯೀಯುತ್ತವೆ. ದೇಹದ ವ್ಯಾಯಾಮದಲ್ಲಿ ಹೆಚ್ಚಾಗಿ ನಿರತನಾದವನು. ಮುಖ್ಯಗುರಿಯಾದ ಜ್ಞಾನವನ್ನೇ ಕಡೆಗಣಿಸುವ ಸಂಭವ ಹೆಚ್ಚು.

ಜ್ಞಾನ-ಸಂಪಾದನೆ ರಾಜಯೋಗದ ಮುಖ್ಯ ಧ್ಯೇಯ. ಜ್ಞಾನಸಾಧನೆಗೆ 'ಸ್ಥಿರ ಸುಖಾಸನಮ್'! ಸ್ಥಿರತೆ ನೀಡುವ, ಮತ್ತು ಸುಖಕರವಾದ ದೇಹಾವಸ್ಥೆಯಷ್ಟೇ. ಜ್ಞಾನ ಮಾರ್ಗ ಮನಸ್ಸಿನ ಶುದ್ಧೀಕಾರಕವಾಗಿದೆ. ಶರೀರವ್ಯಾಯಾಮಕ್ಕೂ ಇದಕ್ಕೂ ಸಂಬಂಧವಿಲ್ಲ. ತತ್ವಗಳನ್ನು ತಿಳಿದುಕೊಂಡು, ಜೀವನದಲ್ಲಿ ಅನುಭವಿಸುವುದು ಜ್ಞಾನ ಮಾರ್ಗ. ಶರೀರ ಸಂಬಂಧ ಇಲ್ಲವಾದಾಗ, ಜ್ಞಾನ (ಬ್ರಹ್ಮ ಪ್ರಾಪ್ತಿ). "ಅವನಿಗೆ ಎಲ್ಲಿಯವರೆಗೆ ಶರೀರ ಸಂಬಂಧವು ಹೋಗುವುದಿಲ್ಲವೋ, ಅಲ್ಲಿಯ ವರೆಗೇ ತಡ, ಅನಂತರ ಪರಬ್ರಹ್ಮನನ್ನು ಹೊಂದುತ್ತಾನೆ."
(ಛಾಂದೋಗ್ಯ ಉಪ. ೬-೪-೨).

ಆಟ೪

ಖಚರಪರುಲು ಭುವಿನಿ ಗನಪಡರಂದುರು, ಕಾನವಚ್ಚಿನಂತ ಗೌರವಿಂತ್ರೊ ?
ತಲ್ಲಿದಂಡ್ರಿಗುರುಲು ದತ್ಸಮುಲ್ ಗಾರೊಕೋ ! ವಿಶ್ವದಾಭಿರಾಮ ವಿನುರ ವೇಮ.

ಖೇಚರರು ಭುವಿಯಲಿ ಕಾಣದಿಹರೆನುವರು.
ಕಂಡುಬಂದರೇನು ಗೌರವಿಪರೆ ?
ತಾಯಿ ತಂದೆ ಗುರುವು ತತ್ಸಮವಾಗರೇ ?
ವಿಶ್ವದಾಭಿರಾಮ ಕೇಳು ವೇಮ.

ಖೇಚರರು ಅಂದರೆ ಆಕಾಶದಲ್ಲಿ ಸಂಚರಿಸುವವರು. ಮೃತನಾದವನು ಎಲ್ಲಿಗೆ ಹೋಗುತ್ತಾನೆ ? ಯಾವ ಮಾರ್ಗದಿಂದ ಹೋಗುತ್ತಾನೆ ? ಎಂಬುದರ ಬಗ್ಗೆ ಹಲ ಉಪನಿಷತ್ತುಗಳು ವಿವರಿಸಿವೆ. ಮರಣಾನಂತರ "ಅವನು ದೇವಯಾನವನ್ನು ಹೊಂದಿ ಅಗ್ನಿಲೋಕಕ್ಕೆ ಬರುತ್ತಾನೆ. ಅನಂತರ ವಾಯುಲೋಕಕ್ಕೂ ಬ್ರಹ್ಮಲೋಕಕ್ಕೂ ಬರುತ್ತಾನೆ" (ಕೌಷೀತಕೀ ಉಪ ೧-೩) ಪಿತೃಯಾನವನ್ನೂ ತಿಳಿಸುವ ವಾಕ್ಯಗಳುಂಟು. "ದಕ್ಷಿಣಾಯನದಲ್ಲಿ ಮೃತನಾಗುವವನು ಪಿತೃಗಳ ಮಹಿಮೆಯನ್ನು ಹೊಂದಿ ಚಂದ್ರನೊಂದಿಗೆ ಸಾಯುಜ್ಯ ಪಡೆಯುವನು (ಮಹಾನಾರಾಯಣ ಉಪ ೨೫) ಇಲ್ಲಿ ಉಕ್ತವಾದ ಅಗ್ನಿ, ವಾಯು, ಚಂದ್ರ ಇತ್ಯಾದಿಗಳೆಲ್ಲ ಪ್ರಕಾಶತ್ವ ಸೂಚಕಗಳಾಗಿವೆ. ಅಂದರೆ ದಿವ-ಸೂಚಕಗಳಾಗಿವೆ. ದಿವ ಇದು ಆಕಾಶ-ವಸ್ತುಗಳಲ್ಲಿ ಸಾಮಾನ್ಯ ಗುಣ. 'ಸತ್ತು ಹೋದ

ಪಿತಾಮಹರು, ಪಿತೃಗಳು, ಪೀಚರರಾಗಿ ಉಂಟು ಎಂದು ನಂಬುಗೆಯುಂಟು. ಅವರು ಸೂಕ್ಷ್ಮದೇಹಿಗಳಾಗಿ ಕಾಣದ ರೀತಿಯಲ್ಲಿ' ಇರುವರೆಂದೂ ನಂಬುಗೆ. ಕಾಣದಿರುವ ಅವರಿಗೆ ಶ್ರದ್ಧೆ ತೋರಿಸಲು 'ಶ್ರಾದ್ಧಕರ್ಮ' ನಡೆಸುತ್ತಾರೆ. 'ಪಿತೃಯಜ್ಞ'ವು ದಿನಾಲು ದ್ವಿಜನು ಮಾಡಬೇಕಾದ ಪಂಚ ಮಹಾಯಜ್ಞಗಳಲ್ಲಿ ಒಂದು. ಉಳಿದ ನಾಲ್ಕು ಇವು: ದೇವಯಜ್ಞ; ಭೂತಯಜ್ಞ; ಬ್ರಹ್ಮಯಜ್ಞ; ಮನುಷ್ಯಯಜ್ಞ. ಊಟ ಮಾಡುವ ಮೊದಲು ಇವೆಲ್ಲ ನಡೆಸಬೇಕೆಂದು ದ್ವಿಜರ ಧರ್ಮಸೂತ್ರಗಳು ತಿಳಿಸುತ್ತವೆ. ಸಾಲದೆ, 'ಕಾಣದ ಪಿತೃಗಳಿಗೆ' ಮಾಸಕ್ಕೊಮ್ಮೆ ಪೂರ್ಣಿಮೆಯ ದಿನವೂ ಯಜ್ಞವುಂಟು. ವಿಶೇಷ ಪ್ರಸಂಗಗಳಲ್ಲಿಯೂ, ಉಂಟು. ಅವರನ್ನು ಆಹ್ವಾನಿಸಿ, ಮಂತ್ರ ಪಠಿಸುತ್ತಾರೆ. ಅವರು ಬಂದು ಬಿಟ್ಟರೇನು? ಗೌರವ ಸಲ್ಲಿಸುವರೇನು? ಹಾಗಿದ್ದರೆ, ಹಿರಿಯರಾದ ತಾಯಿ, ತಂದೆ, ಗುರುಗಳು ಇಲ್ಲಿ ಇರುವರಲ್ಲಾ. ಸತ್ತ ಹಿರಿಯರಿಗೆ ಸನ್ಮಾನ-ಗೌರವ ಸಲ್ಲಿಸುವ ಇಚ್ಛೆ ಇದ್ದರೆ, ಇದ್ದವರಿಗೆ ಸಲ್ಲಿಸುತ್ತಿಲ್ಲವೇಕೆ? ಜೀವಂತವಿದ್ದ ಹಿರಿಯರು ಸತ್ತ ಹಿರಿಯರಿಗೆ ಸಮನಲ್ಲ ಎಂಬ ಅಭಿಪ್ರಾಯವೋ? ಅಲ್ಲವಾದರೆ, ಹೀಗೇಕೆ?

೮೭

ಕಾಯಮುನ್ನಿಯಪುಡಿ ಕಾಮಾದುಲನು ಕೋಸಿ, ಜ್ಞಾನಮಾರ್ಗಮುನಕು ಗಡಗವಲಯು ಜಾಗುಜೇಯು ಗಾಯಮೇಗಿನ ನೇಮುಗು? ವಿಶ್ವದಾಭಿರಾಮ ವಿನುರ ವೇಮ.

ಕಾಯವಿಪ್ಪ ಕಾಲ ಕಾಮಾದಿ ಮೆಟ್ಟುತ,
ಹಿಡಿಯೆ ಜ್ಞಾನಮಾರ್ಗ, ಹೆಣಗಬೇಕು.
ಬಿಟ್ಟು ನಡೆಯೆ ದೇಹ ಬಿದ್ದ ಬಳಿಕವೇನು?
ವಿಶ್ವದಾಭಿರಾಮ ಕೇಳು ವೇಮ.

ಶರೀರವು ಜ್ಞಾನಸಾಧನೆಗೆ ಉಪಕರಣವಿದ್ದಂತೆ ಎಂದು ಯೋಗಿ ನಂಬುತ್ತಾನೆ. "ಇವನ ಹೃದಯದಲ್ಲಿರುವ ಕಾಮಗಳೆಲ್ಲ ಯಾವಾಗ ಬಿಟ್ಟು ಹೋಗುವವೋ ಆಗ, ಮನುಷ್ಯನು ಅಮೃತನಾಗುತ್ತಾನೆ. ಮತ್ತು ಈ ಶರೀರದಲ್ಲಿಯೇ ಬ್ರಹ್ಮವನ್ನು ಹೊಂದುತ್ತಾನೆ. (ಬೃಹದಾರಣ್ಯಕ ಉಪನಿಷತ್ ೪-೪-೭)

ಶರೀರವು ತೊಲಗಿದ ಮೇಲೆ ಬಂಧನ ಕಳಚುವುದು. 'ಅವನಿಗೆ ಎಲ್ಲಿಯ ವರೆಗೆ ಶರೀರ ಸಂಬಂಧವು ಹೋಗುವದಿಲ್ಲವೋ ಅಲ್ಲಿಯ ವರೆಗೇ ತಡ, ಅನಂತರ ಪರಬ್ರಹ್ಮವನ್ನು ಹೊಂದುತ್ತಾನೆ. (ಛಾಂದೋಗ್ಯ ಉಪ. ೬-೧೪-೨) ಹಾಗಾದರೆ, ಶರೀರವು ಜ್ಞಾನಕ್ಕೆ ಸಹಾಯವಾಗುವದೆಂತು? ಜೀವನಿಗೆ ಕರ್ಮಫಲ ಉಂಟಷ್ಟೇ. ಕರ್ಮವು ಸಂಚಿತ, ಆರಬ್ಧ, ಆಗಮಿ ಎಂದು ಮೂರು ತೆರನಾಗಿ ಉಂಟು. ಪ್ರವೃತ್ತವಾದ ಕರ್ಮವು ಫಲ ನೀಡದೆ ಹೋಗದು, ಎಂದು ಉಪನಿಷತ್ಕಾರರ ಮತ. ಪ್ರಾರಬ್ಧವಾದ ಕಾರ್ಯಗಳುಳ್ಳ ಕರ್ಮವೇ ಆರಬ್ಧ ಕರ್ಮ. ಆರಬ್ಧ ಕರ್ಮವು ನಾಶವಾಗುವವರೆಗೆ, ಶರೀರ ಸಂಬಂಧವುಂಟು ಎಂದು ಹೇಳುತ್ತಾರೆ. ಕರ್ಮಕ್ಷಯವಾಗುವವರೆಗೆ ಸಂಸಾರ ಉಂಟು. ಕರ್ಮಕ್ಷಯವಾಗುವುದು, ಶರೀರವಿರುವಾಗ ಮಾತ್ರ. ಕರ್ಮಫಲ ಅನುಭವಿಸಲು ಶರೀರವು ಬೇಕೇ ಬೇಕು.

೮೭

ಎಟ್ಟಯೋಗಿಯೈನ ನಿಲ ಮನ್ಮಥಾವಸ್ಥ, ತೆಲಿಯವಚ್ಚಿನೇನಿ ದೇಟಗಾನು. ಯೋಗಮೆಲ್ಲಮಂಡಿ, ಜೋಗಿಯೈಪಾಡಗು. ವಿಶ್ವದಾಭಿರಾಮ ವಿನುರ ವೇಮ.

ಎಂಥ ಯೋಗಿಯೇನು? ಎಳಸಿ ಮನ್ಮಥ ಸ್ಥಿತಿ,
ಸವಿಯಬಲ್ಲೆನೆಂದು, ಸ್ಪಷ್ಟ ಕಾಣೆ.
ಯೋಗವೆಲ್ಲ ಮರೆತು ಜೋಗಿ ಪಾಡು ಪಡುವ.
ವಿಶ್ವದಾಭಿರಾಮ ಕೇಳು ವೇಮ.

ಮುಕ್ತಿ ಹೊಂದುವುದೇ ಜೀವನ ಧ್ಯೇಯ. ಮುಕ್ತನಿಗೆ ದಿವ್ಯ ಆನಂದ ಉಂಟು; ಮುಕ್ತನು ಶರೀರ, ಭಾವದಿಂದ ಬೇರೆಯಾಗಿ, ಆ ಆನಂದ ಅನುಭವಿಸುವನು. ಎಂದು ಹೇಳುತ್ತಾರೆ. "ಅಲ್ಲಿ ಅವನು ನಗುತ್ತ; ಕ್ರೀಡಿಸುತ್ತ, ಸ್ತ್ರೀಯರೊಂದಿಗೆ, ಜ್ಞಾತಿಗಳೊಂದಿಗೆ ಅಥವಾ ವಾಹನಗಳಿಂದ ರಮಿಸುತ್ತ ಸಂಚರಿಸುತ್ತಾನೆ. (ಛಾಂದೋಗ್ಯ ಉಪ ೮-೧೨-೩) ಮುಕ್ತರು ಸ್ವಸಂಕಲ್ಪದಿಂದ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವರೆಂದು ಉಪನಿಷತ್ತು ಹೇಳುವುದರಿಂದ ಅವರು ಅನನ್ಯಧಿಪತಿ, ಸ್ವರಾಟ್ ಆಗಿರುತ್ತಾರೆ. ಇದರಿಂದಾಗಿ ಅವರಿಗೆ ವಿಧಿನಿಷೇಧವಿಲ್ಲ. ಪ್ರಸ್ತುತ ಶರೀರದಲ್ಲಿಯೇ ಜ್ಞಾನಸಂಪಾದಿಸಿಕೊಂಡವರಿಗೆ ಜೀವನ್ಮುಕ್ತರೆನ್ನುತ್ತಾರೆ. ಯೋಗ ಸಾಧಕರಲ್ಲಿ ಹಲವರು ಇಂಥ ಪ್ರಮಾಣಗಳನ್ನು ತಪ್ಪಾಗಿ ಭಾವಿಸುವುದುಂಟು. ಅನೇಕರು ಮುಟ್ಟಿರುವರು. ಇವರಿಗೆ ಸಿದ್ಧರೆಂದೂ, ಸಿದ್ಧಾರೂಢರೆಂದೂ, ಪ್ರಣವಸ್ವರೂಪರೆಂದೂ ಕರೆಯುವರು. (ಹಲವರು ಇಂಥ ಬಿರುದು-ಗಳನ್ನು ಹಚ್ಚಿಕೊಂಡಿರುತ್ತಾರೆ.) ಆದರೆ ಮೇಲುಸ್ಥಿತಿ ಹೊಂದಿದ ಯೋಗಾಧಿಕರು ಇಂದ್ರಿಯ ನಿಗ್ರಹ ಸಾಧಿಸಿರಬಹುದು. ವಿಷಯವೃತ್ತಿಗಳು ಅವರ ಮನಸ್ಸಿನಿಂದ ವಿರಳವಾಗಿರಬಹುದು. ಆದರೆ ತೃಷೆ ಒಳಗೆ ಉಂಟು. ನಮಗೆ ಸಂತೋಷ ಉಂಟುಮಾಡುವದಕ್ಕಾಗಿ ಕೆಲವು ಬಾಹ್ಯ-ವಸ್ತುಗಳು ಬೇಕು, ಎನ್ನುವ ನಂಬಿಕೆಯುಂಟು. ಮಾಡುವ ಎಲ್ಲ ಭಾವನೆಯೂ ಮೋಕ್ಷ ಹೊಂದುವುದಕ್ಕೆ ಆತಂಕವಾಗಿದೆ. ಇಂದ್ರಿಯನಿಗ್ರಹವಾದ ಆಸೆ ಇರುವದೆಂತು? ಇದು ಪೂರ್ವ ಸಂಸ್ಕಾರದ ಪರಿಣಾಮ. ಈ ಸಂಸ್ಕಾರವನ್ನು ಅದರಿಂದಲೇ ಕ್ಷಯಿಸಬೇಕು. ಆದರೆ, ಸಾಧನೆಯ ಮೇಲು ಮಟ್ಟದಲ್ಲಿರುವ ಯೋಗಿಯ ಚಿತ್ತ ಚಲಿಸಲ್ಪಟ್ಟರೆ, ಅವನು ಯೋಗಭ್ರಷ್ಟನಾಗುವನು (ಭಗವದ್ಗೀತೆ ೬-೩೭,೪೦.)

ಸಾಧನೆಯ ಕಾಲದಲ್ಲಿ ಕೆಲವು ಶಾರೀರಿಕ, ಮಾನಸಿಕ ಶಕ್ತಿ ಉಂಟಾಗುವದು. ಇದರ ಪ್ರದರ್ಶನವನ್ನೇ ಜನರು ಅಚ್ಚರಿಯಿಂದ ಸಿದ್ಧಿಯೆನ್ನುತ್ತಾರೆ. ಇಂಥ ಸಿದ್ಧಿಗೂ ಆತ್ಮಜ್ಞಾನಕ್ಕೂ ಯಾವ ಸಂಬಂಧವೂ ಇಲ್ಲ. ಹಲ ಮಹಾತ್ಮರು ಲೋಕ ಕಲ್ಯಾಣಕ್ಕಾಗಿ ಆಗಾಗ್ಗೆ ಸಿದ್ಧಿ ವ್ಯಕ್ತಪಡಿಸುವದೂ ಉಂಟು. ರಾಮಕೃಷ್ಣ ಪರಮಹಂಸರಲ್ಲಿ ಬಂದ ಸಾಧುವೊಬ್ಬ ಎರಡು ಸಿದ್ಧಿ ಪ್ರದರ್ಶಿಸಿದ; ಅದೃಶನಾಗಿ ತಿರುಗುವದೊಂದು; ತನ್ನ ಗುದದ್ವಾರದಿಂದ ಪ್ರಕಾಶ ಬೀರುವದು ಇನ್ನೊಂದು. ಈ ಸಾಧು ಕೆಲದಿನಗಳ ನಂತರ ಹೆಣ್ಣುಮಗಳ ಕೋಣೆಯನ್ನು ಅದೃಶ್ಯನಾಗಿ ಪ್ರವೇಶಿಸಿದ. ಅವಳೊಂದಿಗೆ ಪ್ರೀತಿ ಬೆಳೆಸಿದ. ತನ್ನ ಶಕ್ತಿಯನ್ನೂ ಕಳೆದುಕೊಂಡ; ಎಂದು ಋಷಿಕೇಶದ ಸ್ವಾಮಿ ಶಿವಾನಂದರು ಬರೆಯುತ್ತಾರೆ. ಎಂಥ ಯೋಗಿಯಾದರೂ ಮನ್ಮಥಸ್ಥಿತಿ ಸವಿಯ ಬಲ್ಲೆನೆಂದರೆ, ಯೋಗವನ್ನು ಮರೆತು ಜೋಗಿಯ ಪಾಡು ಪಡುವನು.

ಲಽಽ

ಈಷಣತ್ರಯಂಬು ನೆಡಪಂಗನೇರಕ, ಮೋಹರಾಶಿಲೋನ ಮುನಿಗಿಯುಂಡು.
ಜನುಲಕೆಟ್ಲು ಮೋಕ್ಷ ಸೌಖ್ಯಂಬು ಗಲ್ಗುನು ? ವಿಶ್ವದಾಭಿರಾಮ ವಿನುರ ವೇಮ.

ಪತ್ನಿ ಪುತ್ರ ಧನವ ಪಡೆದು ತೊರೆಯದವನು,
ಮೋಹರಾಶಿಯೊಳಗೆ ಮುಳುಗುತಿಪ್ಪ;
ಮೋಕ್ಷ ಸೌಖ್ಯವೆಂತು ಮಹಿಯ ಜನತೆಗುಂಟು ?
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನ ಯಾವುದು ? " ಇಂದ್ರಿಯಗಳ ವಿಷಯಗಳಲ್ಲಿ ವೈರಾಗ್ಯ, ಅಹಂಕಾರ ವಿಲ್ಲದಿರುವುದು ಮತ್ತು ಜನ್ಮಮೃತ್ಯು, ಜರೆ, ವ್ಯಾಧಿ, ದುಃಖ ಇವುಗಳಲ್ಲಿ ದೋಷ ನೋಡುವುದು, ಹೆಂಡತಿ, ಮನೆ ಮಕ್ಕಳು ಮೊದಲಾದವುಗಳಲ್ಲಿ ಆಸಕ್ತಿ ಮತ್ತು ತನ್ಮಯತೆ ಇಲ್ಲದಿರುವದು; ಇಷ್ಟ-ಅನಿಷ್ಟಗಳು ಪ್ರಾಪ್ತವಾದಾಗ, ಯಾವಾಗಲೂ ಸಮಚಿತ್ತತೆ.....ಅಧ್ಯಾತ್ಮಜ್ಞಾನದಲ್ಲಿ ನಿಷ್ಠೆ, ತತ್ತ್ವ ಜ್ಞಾನಾರ್ಥದ ಆಲೋಚನೆ ಇದು ಜ್ಞಾನವೆಂದು ಹೇಳಲ್ಪಟ್ಟಿದೆ. ಯಾವುದು ಇದಕ್ಕಿಂತ ಭಿನ್ನವಾಗಿರುವದೋ ಅದು ಅಜ್ಞಾನ " (ಭಗವದ್ಗೀತಾ ೧೩-ಎ, ೯ ಮತ್ತು ೧೧) ಪತ್ನಿ, ಪುತ್ರ, ಧನ ಈ ಮೂರನ್ನೂ ಪಡೆದು ಅವುಗಳನ್ನು ಎಷ್ಟೋ ಅಷ್ಟು ಅನುಭವಿಸಿ, ನಂತರ ಅವುಗಳಲ್ಲಿ ಆಸಕ್ತವಾಗಿರುವವನು) ಮೋಹರಾಶಿಯಲ್ಲಿ ಮುಳುಗುವನು. ಪತ್ನಿ ಪುತ್ರಾದಿಗಳಲ್ಲಿ ಆಸಕ್ತಿ, ತನ್ಮಯತೆ ಹೊಂದದಿರುವದು ಜ್ಞಾನ; ಹೊಂದುವದು ಅಜ್ಞಾನ. ಅಜ್ಞಾನ ತಾಮಸಿಕ ಗುಣದಿಂದಾಗುವದು. ತಮೋಗುಣವಿರುವಾಗ ಅಜ್ಞಾನ, ಪ್ರಮೋದ, ಮೋಹಗಳೂ ಉಂಟಾಗುವವು. ಮೋಹರಾಶಿಯಲ್ಲಿ ಮುಳುಗುತ್ತಿರುವ ಜನರಿಗೆ ಮೋಕ್ಷಸೌಖ್ಯ ದೊರೆಯುವದು ಹೇಗೆ?

ಮೋಕ್ಷಸೌಖ್ಯವೆಂದರೇನು ? ನಮ್ಮ ಶಾಸ್ತ್ರದಲ್ಲಿ ಇರುವ ದೇವರ ಭಾವನೆಗಳಲ್ಲಿ ಒಂದು ಹೀಗಿದೆ: ಅವನು ವಿಶ್ವಕ್ಕೆ ತಾಯಿ ತಂದೆ. ಸರ್ವವ್ಯಾಪಿಯಾದ ಸೃಷ್ಟಿಕರ್ತ; ರಕ್ಷಕ, ಸಂಹಾರಕ. ಆದರೆ ಅವನು ಪ್ರಕೃತಿಗಿಂತ, ಜೀವಿಗಳಿಗಿಂತ ಪ್ರತ್ಯೇಕನಾಗಿರುವನು. ಅವನ ಹತ್ತಿರ ಬರುವದು ಅವನಲ್ಲಿ ಬಾಳುವದು ಮೋಕ್ಷ. ಇಲ್ಲಿ ಅಲೌಕಿಕ ಆನಂದ ಅನುಭವವೇದ್ಯವಾಗುವದು. ಅದುವೇ ಮೋಕ್ಷಸೌಖ್ಯ.

ಲಽಽ

ಈಶುವೀಡ ಭಕ್ತಿ ಯಿಕುಮಂತಲೇಕನು ಬಾಶಮುಲನು ಜಿಕ್ಕಿ ಫಲಮುಗನಕ
ಕಾಶಿಯಾತ್ರಬೋವ ಗಾಲುಡಿರುಂಗಡಾ ? ವಿಶ್ವದಾಭಿರಾಮ ವಿನುರ ವೇಮ.

ಈಶನಲ್ಲಿ ಭಕ್ತಿ ಇಷ್ಟಾದರು ಇರದೆ,
ಪಾಶದಲ್ಲಿ ಸಿಕ್ಕು ಫಲಗಾಣದೆ,
ಕಾಶಿಯಾತ್ರೆಗೆಯ್ಯೆ, ಕಾಲನರಿಯದಿಹನೆ ?
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿ ಈಶನಲ್ಲಿ ಇಲ್ಲದಿದ್ದರೆ, ಮುಕ್ತಿಯಿಲ್ಲ. ಈಶನತ್ತ ಪ್ರೇಮಾಕರ್ಷಣೆ ಇರುವಾಗಿನ ಮನಸ್ಸಿನ ಸ್ಥಿತಿಯೇ ಭಕ್ತಿ. ಭಕ್ತಿ ಇರುವಾಗಿನ ವ್ಯವಹಾರವು ಸೇವೆ. ಸೇವೆಯಲ್ಲಿ ಪ್ರತಿಫಲದ ಅಪೇಕ್ಷೆ ಇರಬಾರದು; ಇರಲಾರದು.

ಭಕ್ತಿ ಇಲ್ಲದಿದ್ದರೆ, ಆಸಕ್ತಿ ಇರುವದು. ಪ್ರಪಂಚದ ವಸ್ತುಗಳ ಆಕರ್ಷಣೆಯ ಕಾಲದ ಮನಸ್ಥಿತಿಯೇ ಆಸಕ್ತಿ. ಆಸಕ್ತಿಯಿಂದ ಸುಖದಲ್ಲಿ, ಕರ್ಮದಲ್ಲಿ, ಪ್ರಮಾದದಲ್ಲಿ ಸಂಗ ಉಂಟಾಗುವದು. ಜ್ಞಾನದಿಂದ, ಕರ್ಮದಿಂದ, ಪ್ರಮಾದ, ಆಲಸ್ಯ ನಿದ್ರೆಗಳಿಂದ ಬಂಧನವಾಗುವದು. ಪಾಶನಾತ್ ಇತಿ ಪಶವಃ. ಆಸಕ್ತಿಯುಳ್ಳವನು ಲೌಕಿಕ ವಿಷಯಗಳ ಪಾಶದಿಂದ ಬಂಧಿತನಾಗುವನು. ಅವನಿಗೆ ಜೀವನದ ಫಲವಾದ ಮೋಕ್ಷ ದೊರೆಯದು.

ಕೊನೆಗೆ ಅವನು ಇಳಿವಯದಲ್ಲಿ ಕಾಶಿಯಾತ್ರೆಗೆ ಹೋಗಬಯಸುತ್ತಾನೆ. ಕಾಶಿ ಗಂಗೆಯ ದಡದಲ್ಲಿರುವ ತೀರ್ಥ. ಅಲ್ಲಿ ವಿಶ್ವೇಶ್ವರನ ದೇವಾಲಯವುಂಟು. ಸ್ಕಂದ ಪುರಾಣದಲ್ಲಿ " ಕಾಶಿಯಲ್ಲಿ ಸತ್ತವನ ಬಲಗಿವಿಯಲ್ಲಿ ವಿಶ್ವೇಶ್ವರನು ತಾರಕ ಮಂತ್ರ ಊದುವನು. ಅದರಿಂದಾಗಿ ಕಾಶಿಗೆ ಹೋಗಿ ಸತ್ತರೆ, ಮೋಕ್ಷವಾಗುವದು ಎಂದು ಹೇಳಲಾಗಿದೆ. ಕಾಶಿಗೆ ಹೋದವನ ವಯಸ್ಸು ಇಳವಯಸ್ಸು. ಕಾಲರಾಯ ಅವನ ವಯಸ್ಸಿನ ಲೆಕ್ಖು ಹಾಕದೆ ಇರನು. ಕೊನೆಯ ಕಾಲ ಬಂದಾಗ, ಹಾದಿಯಲ್ಲಿಯೋ ಕಾಶಿಯಲ್ಲಿಯೋ ದೇಹಯಾತ್ರೆ ಮುಗಿಯುವದಷ್ಟೇ.

(ಹೋಲಿಸಿ ನೋಡಿರಿ :

ಕಳ್ಳಗಂಜಿ ಕಾಡಹೊಕ್ಕರೆ, ಹುಲಿ ತಿಂಬುದ ಮಾಬುದೇ ?
ಹುಲಿಗಂಜಿ ಹುತ್ತವ ಹೊಕ್ಕರೆ, ಸರ್ಪ ತಿಂಬುದ ಮಾಬುದೇ ?
ಕಾಲಗಂಜಿ ಭಕ್ತನಾದರೆ, ಕರ್ಮ ತಿಂಬುದ ಮಾಬುದೇ ?
ಮೃತ್ಯುವಿನ ಬಾಯ ತುತ್ತಾದ ವೇಷ ಡಂಭಕರನೇನೆಂಬೆ ಗುಹೇಶ್ವರಾ ||
-ಅಲ್ಲಮ ಪ್ರಭು

ಲಽಽ

ಈತರಾನಿ ಮನುಜು ಡಿಗರೋಜಿ ದಿಗರೋಜಿ, ಯೀರುದಾಟಗಲಡೇ ? ಯೀ ದಬೋಯಿ.
ಪ್ರಜ್ಞೆಲೇನಿವಾಡು ಹರಲೋಕಮುಂದುನಾ ? ವಿಶ್ವದಾಭಿರಾಮ ವಿನುರ ವೇಮ.

ಈಜರಿಯದ ಮನುಜ ಏಳುವ ಮುಳುಗುತಿಹ;
ಈಜೆದಡನೆಟುಕನು ಈಜ ಹೋಗಿ;
ಪ್ರಜ್ಞೆಯಿಲ್ಲದಾತ ಪರಲೋಕ ಮುಟ್ಟನು.
ವಿಶ್ವದಾಭಿರಾಮ ಕೇಳು ವೇಮ.

ಸಂಸಾರವೆಂದರೆ ಸಾಗರ ಎಂದು ಹೋಲಿಕೆ ಕೊಡುತ್ತಾರೆ. ಜೀವಿಯು ಅದರಲ್ಲಿ ಈಜಬೇಕಾದವನು. ಈಜೆಯ ದಡದಿಂದ ಸಾಗರ ದಾಟ ಆಚೆಯ ದಡ ಮುಟ್ಟಬೇಕಾದವನು, ಎಂದೂ ಉಪಮೆ ನೀಡುತ್ತಾರೆ. ಸಂಸಾರದಲ್ಲಿ ಮುಳುಗದಂತೆ ಬಾಳುವು

ದೆಂದರೆ ವಿಷಯಗಳಲ್ಲಿ ಆಸಕ್ತಿ ಇಲ್ಲದಂತೆ ಇರುವುದು. ಯಾರಿಗೆ ವಿಷಯಗಳಲ್ಲಿ ವಿಶೇಷ ಆಸಕ್ತಿ ಉಂಟೋ, ಅವರು ಸಂಸಾರದಲ್ಲಿಯೇ ಮುಳುಗುವರು, ಏಳುವರು.

ಈಜೆಯ ದಡವೇ ಇಹಲೋಕ. ಇಹಲೋಕದಲ್ಲಿ ಚಿತ್ತವೃತ್ತಿಗಳು ಕೇವಲ ಜಡ ವಸ್ತುಗಳನ್ನು ಕುರಿತು ಇರುವವು. ಅಂದರೆ ಇಂದ್ರಿಯ ಮೂಲಕ ಏನನ್ನು ಗ್ರಹಿಸಬ ಹುದೋ, ಅಷ್ಟು ಮಾತ್ರ ತಿಳಿಯುವ ಮನಸ್ಸು ಉಳ್ಳವನು ಇಹಲೋಕ ದವನು. ಸಂಸಾರದಲ್ಲಿ ಆರಬ್ದ ಕರ್ಮ ಫಲಾಶಯದಲ್ಲಿ ಜ್ಞಾನ ಉಂಟಾಗುವುದು. ಆದರೆ, ಜ್ಞಾನ ಹೊಂದಲು ಸಾಧನೆ ಬೇಕು. ಮನಃಶುದ್ಧಿ ಬೇಕು. ಜ್ಞಾನ ಹೊಂದಿದವನು ಮಳುಗದೆ ಈಜಿ ಆಜೆಯ ದಂಡೆ ತಲುಪುವನು. ಆಜೆಯ ದಂಡೆಯೆಂದರೆ, ಪರಲೋಕ. 'ಪರಾ' ಎಂದರೆ ಬ್ರಹ್ಮ. ಪರಲೋಕವೆಂದರೆ ಬ್ರಹ್ಮಲೋಕ. ತಾತ್ಪರ್ಯ ವೇನೆಂದರೆ, ಪ್ರಜ್ಞೆಯುಂಟಾದ ಬಳಿಕ ಮನಸ್ಸು ಬ್ರಹ್ಮಭಾವ ಹೊಂದುವದು. ಪ್ರಜ್ಞೆ ಇಲ್ಲದವನು ಪರಲೋಕ ಮುಟ್ಟನು.

ಲಲಂ

ಇಹಮುನಂದು ಸುಖಮು ಲೀಡೇರಗಾಲೇದು, ಪರಮು ನಮ್ಮೆನೇನಿ ಬ್ರಕುಕುಗಲದೆ ?
ಮೊದಟಲೇನಿ ಸುಖಮು ತುದಿನೆಟ್ಲು ಕಲುಗುನು ? ವಿಶ್ವದಾಭಿರಾಮ ವಿನುರ ವೇಮು.

ಇಹದಲ್ಲಿ ಸೌಖ್ಯವು ಈಡೇರುತಲಿಲ್ಲ.
ಪರವ ನಂಬಿ ತಾನು ಬದುಕಬಹುದೆ ?
ಮೊದಲು ಇಲ್ಲದ ಸುಖ ತುದಿಗೆ ಬರುವುದೆಂತು ?
ವಿಶ್ವದಾಭಿರಾಮ ಕೇಳು ವೇಮು.

ಇಹವೆಂದರೆ ಈ ಲೋಕ. 'ಪೃಥ್ವಿ ನೀರು, ಅಗ್ನಿ, ವಾಯು, ಆಕಾಶ ಎಂಬ ಪಂಚಮಹಾಭೂತಗಳು, ಕ್ಷುದ್ರಮಿಶ್ರವಾದ ಈ ಬೇರೆ ಬೇರೆ ಕಾರಣಗಳು, ಅಂಡಜಗಳು, ಜರಾಯುಜಗಳು, ಸ್ವೇದಜಗಳು, ವೃಕ್ಷಾದಿಗಳು, ಕುದುರೆಗಳು, ಗೋವುಗಳು, ಮನುಷ್ಯರು, ಆನೆಗಳು, ಮತ್ತು ನಡೆಯುವದೂ, ಹಾರಾಡುವದೂ ಆದ ಇನ್ನು ಯಾವ ಪ್ರಾಣಿವರ್ಗವಿದೆಯೋ, ಯಾವದು ಸ್ಥಾವರವೋ ಅವೆಲ್ಲ ಈ ಲೋಕ. ಈ ಲೋಕದಲ್ಲಿ ಸುಖಸಂಗವಾಗುವದು ಸಾತ್ವಿಕಗುಣದಿಂದ. ಇಹದಲ್ಲಿ ಸೌಖ್ಯವುಂಟಾಗಬೇಕಾದರೆ, ಸತ್ತ್ವ ಗುಣವು ರಜಸ್ಸು–ತಮಸ್ಸುಗಳಿಗಿಂತ ಪ್ರಬಲವಾಗಬೇಕು. ಸತ್ತ್ವವು ಪ್ರಬಲವಾಗದಿದ್ದರೆ, ಪರದಲ್ಲಿ ಸೌಖ್ಯ ಸಿಗುವದೆಂದು ನಂಬಿ ಬದುಕುವದೆಂತು ? ಏನೂ ಇಲ್ಲದಾಗ, ಯಾವ ದನ್ನು ಅಸತ್ಯವೆಂದು ತೊರೆಯಬೇಕಾಗಿತ್ತೋ, ಅದು ಮಾತ್ರ ಇಲ್ಲ ಎಂದು ಯಾರು ಮನ ಸ್ಸಿನಲ್ಲಿ ಸಂತೋಷಪಡುವರೋ, ಅವರು ಮಾತ್ರ ಶುದ್ಧಮನಸ್ಸಿನವರು. ಅಂಥ ಮನಸ್ಸು ಪರದಲ್ಲಿ ಸುಖ ಪಡೆಯಬಹುದು. ಮೊದಲು ಇಹದಲ್ಲಿ ಮನಸ್ಸು ಸುಖ ಹೊಂದದ ಸ್ಥಿತಿ ಯಲ್ಲಿದ್ದರೆ, ಅದೇ ಸ್ಥಿತಿಯೇ ಅಂತ್ಯದಲ್ಲಿ ಉಳಯುವದು.

ಲಲಗ

ಇಂದ್ರಲೋಕಮನಗ ನಿಂದ್ರಜಾಲಮುನಗ, ನಿಂದ್ರಪದವಿಯನಗ ನಿನ್ನಿಯೊಕಟಿ
ಕಲಿಯುಗಮುನ ನರುಲು ಕಾನರು ಭ್ರಮಜೇತ, ವಿಶ್ವದಾಭಿರಾಮ ವಿನುರ ವೇಮು.

ಇಂದ್ರಲೋಕವೆನಲು, ಇಂದ್ರ ಜಾಲವೆನಲು,
ಇಂದ್ರ ಪದವಿಯೆನಲು ಇಷ್ಟು ಒಂದೆ.
ಕಲಿಯುಗದೊಳು ಜನರು ಕಾಣರು ಭ್ರಮೆಯೊಳು.
ವಿಶ್ವದಾಭಿರಾಮ ಕೇಳು ವೇಮ.

ಇಂದ್ರ ಎಂದರೆ ಒಂದು ಪದವಿಯೆಂದು ಕಲ್ಪನೆ. ಇಹಲೋಕದಲ್ಲಿ ಯಜ್ಞಕರ್ಮಾ ದಿಗಳನ್ನು ಮಾಡಿ ಫಲ ಅಪೇಕ್ಷಿಸಿ ಫಲಭೋಗ ಪಡೆಯುವ ಪದವಿ-ಪೀಠಕ್ಕೆ ಇಂದ್ರಪದವಿ ಯೆನ್ನುತ್ತಾರೆ. ಹಿಂದಕ್ಕೆ ನಹುಷನೆಂಬ ರಾಜ ಯಜ್ಞಮಾಡಿದ. ಅವನನ್ನು ಇಂದ್ರ ಪದವಿಗೆ ಆಯ್ಕೆ ಮಾಡಲಾಯಿತು, ಎಂದು ವೇದಕತೆ ಹೇಳುವುದು. ಇಂದ್ರ ಪದವಿಯಿಂದ ಅಧೋಗತಿಗಿಳಿದಾಗ, ಆ ಪದವಿ ಖಾಲಿಯಾಗುವದೆಂದೂ ಬೇರೊಬ್ಬ ಪುಣ್ಯ ಮಾಡಿ ಆದರ ಫಲ ಪಡೆಯಲು ಇಂದ್ರಲೋಕವನ್ನೇ 'ಸ್ವರ್ಗಲೋಕ'ವೆಂದೂ ಕರೆಯುವರು. "ಬಾ, ಬಾ ಎಂದು ಆಹ್ವಾನಿಸುತ್ತ 'ಇದು ನಿಮಗೆ ಪುಣ್ಯವೂ ಸುಕೃತವೂ ಆದ ಬ್ರಹ್ಮ ಲೋಕ' (ಸ್ವರ್ಗಲೋಕ) ಎಂದು ಪ್ರಿಯವಾದ ಮಾತನ್ನು ಆಡುತ್ತ, ಅರ್ಚಿಸುತ್ತ, ದೀಪ್ಯ ಮಾನವಾದ ಆಹುತಿಗಳು ಸೂರ್ಯರಶ್ಮಿಗಳ ದ್ವಾರಾ ಆ ಯಜಮಾನನನ್ನು ಒಯ್ಯು ತ್ತವೆ." (ಮುಂಡಕ ಉಪ. ೧–೨–೬) ಯಜ್ಞಕರ್ಮ ಜನರಿಗೆ ಭ್ರಮೆ ಹಿಡಿಸುವದು. ಕಲಿಯುಗದಲ್ಲಿ ಜನರಿಗೆ ಭೂಲೋಕ, ಸ್ವರ್ಗಲೋಕ. ಬ್ರಹ್ಮಲೋಕ ಎಂದರೆ ಬೇರೆ ಬೇರೆ ಪ್ರದೇಶಗಳೆಂಬ ಭಾವನೆ ಉಂಟು. ಆದರೆ ಇವೆಲ್ಲ ಒಂದೇ ಮನಸ್ಸಿನ ಭಿನ್ನ ಭಿನ್ನ ಅವಸ್ಥೆ ಗಳು. ಸ್ಥೂಲವನ್ನು ಗ್ರಹಿಸುವ ಶರೀರವಿರುವಾಗಿನ ಜೀವಾತ್ಮ ಭೂಲೋಕ ಅನುಭವಿಸು ವನು. ಫಲಾಪೇಕ್ಷೆಯು ಇರುವವರೆಗೆ ಸೂಕ್ಷ್ಮಶರೀರದಲ್ಲಿದ್ದು ಪುಣ್ಯಕರ್ಮಕ್ಷಯವಾದ ಮೇಲೆ, ಸ್ಥೂಲಶರೀರ. ಹೊಂದುವರೆಗೆ ಜೀವಾತ್ಮ ಸ್ವರ್ಗಲೋಕ ಅನುಭವಿಸುವನು ಯಾವಾಗ ನಿಷ್ಕಾಮನಾಗುವನೋ, ಆಪ್ತಕಾಮನಾಗುವನೋ ಆಗ ಜೀವಾತ್ಮ ಬ್ರಹ್ಮಲೋಕ ಅನುಭವಿಸಿ ಬ್ರಹ್ಮವೇ ಆಗುವನು. ಆದರೆ ಭ್ರಮೆಯಲ್ಲಿರುವ ಕಲಿಯುಗದ ಜನರಿಗೆ ಏಕೋ ಸತ್ಯ ಕಾಣದಾಗಿದೆ.

ಲಲಖ

ಅಸ್ಥಿರಮುಗುಮೇನಿ ಕದರುಪಾಟುಲನೊಂದಿ, ಪೆಕ್ಕು ವಿಧುಲಚೇತ ಪೆಂಚಿಪೆಂಚಿ,
ಅಗ್ನಿಕಿಚ್ಚುಲೇಕ ಯಡವಿನಕ್ಕಲಕಿಚ್ಚು, ವಿಶ್ವದಾಭಿರಾಮ ವಿನುರ ವೇಮು.

ಅಸ್ಥಿರ ದೇಹವನು ಆರ್ಭಟಿಸುತ ಹೊಂದಿ,
ಸಕಲ ವಿಧಗಳಿಂದ ಸಾಕಿ ಸಲಹಿ,
ಅಗ್ನಿಗಿಡುವರಿಲ್ಲ–ವಡವಿ ನರಿಗೀವರು
ವಿಶ್ವದಾಭಿರಾಮ ಕೇಳು ವೇಮು.

ದೇಹವು ಅಸ್ಥಿರ; ಆತ್ಮವು ಸ್ಥಿರ. ದೇಹವು ಪಂಚಭೂತಗಳಾದ ಆಕಾಶ, ವಾಯು, ತೇಜಸ್ಸು, ಜಲ, ಪೃಥಿವಿಗಳಿಂದಾಗಿದೆ. ಇವು ಸಂಚರಿಸುವಂಥವು. ಇವು ಸಂಚಾರವುಳ್ಳವು ಅಂದರೆ ಗಮನ ಉಳ್ಳವಾದ್ದರಿಂದ ಇವುಗಳಿಂದಾದುದೆಲ್ಲ ' ಜಗತ್ ' ಎನಿಸಿದೆ. ಇಂಥ ಅಸ್ಥಿರ ದೇಹವನ್ನು ಪಡೆಯಲು ಎಂಥ ಪಾಡು ಪಡುವರೋ ಏನೋ! " ಇದು ಋಷಿಗಳಿಂದ ಹೇಳಲ್ಪಟ್ಟಿದೆ. ಗರ್ಭದಲ್ಲಿರುವಾಗಲೇ ಈ ದೇವತೆಗಳ (ವಾಕ್, ಅಗ್ನಿ ಇತ್ಯಾದಿ) ಜನ್ಮಗಳಿಲ್ಲವನ್ನೂ ಅರಿತುಕೊಂಡೆನು. ನೂರಾರು ಕಬ್ಬಿಣದ ಪುರಗಳು ನನ್ನನ್ನು ಅಧೋಲೋಕದಲ್ಲಿ ರಕ್ಷಿಸಿಕೊಂಡಿದ್ದವು. ಅನಂತರ ಗಿಡುಗನಂತೆ ವೇಗದಿಂದ ಹೊರಕ್ಕೆ ಬಂದಿದ್ದೇನೆ.' ಹೀಗೆ ವಾಮದೇವನು ಗರ್ಭದಲ್ಲಿ ಮಲಗಿಕೊಂಡಿರುವಾಗಲೇ ಹೇಳಿದನು " [ಐತರೇಯೋಪನಿಷತ್ ೨-೧-೫] ಚಿತ್ತವು ಯಾವ ಭಾವವನ್ನು ಹೊಂದುವದೋ ಅದಕ್ಕೆ ತಕ್ಕ ಶರೀರ ಪಡೆಯುವದು. ಎಂದು ಭಗವದ್ಗೀತೆಯೂ ಹೇಳುತ್ತಿದೆ. ಚಿತ್ತದ ಉತ್ತುಂಗ ಸ್ಥಿತಿಯೇ ಬುದ್ಧಿ ಹೊಂದಿರುವದು. ಈ ಸ್ಥಿತಿಯಲ್ಲಿ ಇರುವ ಚಿತ್ತ ಯಾವ ಆತ್ಮದ ಸೂಕ್ಷ್ಮಶರೀರದಲ್ಲಿ ಉಂಟೋ, ಆ ಜೀವಾತ್ಮನೇ ಮಾನವ ಶರೀರವನ್ನು ವಿಧಿನಿಯಮದಂತೆ ತಾನೇ ಪಡೆಯುವನು. ಮಾನವ ದೇಹವನ್ನು ಅರ್ಭಟಿಸಿ ಪಡೆಯಲು ಮಾತ್ರ ಸಾಧ್ಯ. ' ವಾಮದೇವನು ' ಹಾಗೇ ಪಡೆದನು. ಈ ದೇಹ ಪೋಷಣೆಯೂ ಅನೇಕ ಕಷ್ಟ-ಕಾರ್ಪಣ್ಯಗಳನ್ನು ತಂದೊಡ್ಡುವದು. ಅದನ್ನೆಲ್ಲ ಎದುರಿಸಿ, ಅದನ್ನು ಪೋಷಿಸುತ್ತಾರೆ. ಕೊನೆಗೆ ಅದರ ಮೂಲಕ ಕರ್ಮಕ್ಷಯಿಸಿ ಮುಕ್ತಿ ಹೊಂದಿದರೆ, ಅದನ್ನು ಪಡೆಯುವಲ್ಲಿ ತೋರಿದ ಅರ್ಭಟಿ ಮತ್ತು ಪೋಷಿಸುವಲ್ಲಿ ಅನುಭವಿಸಿದ ಕಷ್ಟ ಸಾರ್ಥಕವಾದೀತು! ಇಲ್ಲದೆ ಹೋದರೆ, ಅದನ್ನು ದಹನ ಪದ್ಧತಿಯ ವೈಷ್ಣವರು, ಉಪಯೋಗಕ್ಕೆ ಬಾರದ ಕಟ್ಟಿಗೆ ಸುಡುವಂತೆ, ದೇಹವನ್ನು ಸುಟ್ಟುಹಾಕುತ್ತಾರೆ. ದಫನ ಪದ್ಧತಿಯ ಶೈವರು, ಭೂಮಿಯಲ್ಲಿ ಹುಗಿದು ಅಡವಿಯ ನರಿಗಳಿಗೆ ಊಟ ಮಾಡುವರು. ' ಮಾನವ ದೇಹ ದೊಡ್ಡದು, ಹಾನಿಮಾಡಲು ಬೇಡ ಹುಚ್ಚಪ್ಪಗಳಿರಾ! ಎಂದು ದಾಸರು ಮಾರ್ಮಿಕವಾಗಿ ಹಾಡಿದ್ದಾರೆ.

ಲಲಿ

ಕ್ಷಮಗಲಟ್ಟಯತಡು ಸಾಧುವೈಶೋಭಿಲ್ಲು, ನೋರ್ಪು ಬೋಲುನಟ್ಟ ದುರ್ಮಿಗಲದೆ ?
ವನ್ನೆವಚ್ಚು ಮೇಲು ಲೈನ್ನೆನನೊನಗೂಡು. ವಿಶ್ವದಾಭಿಮ ವಿನುರ ವೇಮ.

ಕ್ಷಮಿಸುವಂಥ ಮನುಜ ಸಾಧುವಾಗಿ ಮೆರೆವ.
ಕ್ಷಮೆಗೆ ಸರಿಯೆನುಪುದು ಕ್ಷಿತಿಯೊಳಿಹುದೆ ?
ಮೇಲ್ಮೆಯೊಂದುಗೂಡೆ, ಮೇಲ್ಮೆ ಬರುವುದಾಗ.
ವಿಶ್ವದಾಭಿರಾಮ ಕೇಳು ವೇಮ.

ಸಾಧು ಎಂದರೆ ಯಾರು? ಯಾರು ಇಂದ್ರಿಯ ನಿಗ್ರಹ ಸಾಧಿಸಿರುವರೋ ಅವರು. ಅವರೇ ಕ್ಷಮಿಸುವಂಥ ಮನುಜರು. 'ವೈರಿಯಿದ್ದರೂ ಕ್ಷಮಿಸು.' ಕ್ಷಮಿಸಿ ಹೋಗೆನ್ನುವದೇ ಸಾವಿನ ಶಿಕ್ಷೆ ನೀಡಿದಂತೆ.' ಕ್ಷಮಿಸಿ ಬಿಟ್ಟರೆ, ಆ ಮನುಷ್ಯ ಪಶ್ಚಾತ್ತಾಪ ಪಟ್ಟು ಹೊಸ ಮನುಷ್ಯನಾಗುವನು.

"ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥

"ಸ್ಥೈರ್ಯ, ಕ್ಷಮೆ, ಅನಿಯಂತ್ರಣ, ಕದಿಯದಿರುವಿಕೆ, ಶೌಚ, ಇಂದ್ರಿಯ ನಿಗ್ರಹ ಬುದ್ಧಿ, ವಿದ್ಯೆ, ಸತ್ಯ, ಕೋಪಗೊಳ್ಳದಿರುವಿಕೆ ಇವು ಹತ್ತು ಧರ್ಮಲಕ್ಷಣಗಳಾಗಿವೆ." (ಮನ್ಮೃಸ್ಮೃತಿ ೬-೯೨). ಧರ್ಮ ನಿಂತಿರುವದು, ಕ್ಷಮೆಯ ಮೇಲೆ. ಧೀರನು ಮಾತ್ರ ಕ್ಷಮಿಸಬಲ್ಲನು, ಇಂದ್ರಿಯ ನಿಗ್ರಹಸಾಧಿಸಿದ, ರಾಗದ್ವೇಷಗಳಿಲ್ಲದ, ಅಂತರಂಗ, ಬಹಿರಂಗ ಶುದ್ಧಿಯುಳ್ಳ ಮನುಷ್ಯನು ಮಾತ್ರ ಕ್ಷಮಿಸಬಲ್ಲನು. ಕ್ಷಮೆಗೆ ಸಮನಾದುದು ಜಗತ್ತಿನಲ್ಲಿ ಬೇರಾವುದೂ ಇಲ್ಲ. ಎನ್ನುವಷ್ಟು ಕ್ಷಮೆ ಮೇಲಾಗಿದೆ. ಕ್ಷಮೆಯೂ ಮೇಲ್ಮೆ. ಇಂದ್ರಿಯ ನಿಗ್ರಹವೂ ಮೇಲ್ಮೆ. ವಿದ್ಯಾ ಬುದ್ಧಿ ಸಹ ಮೇಲ್ಮೆಯೇ. ಈ ಮೇಲ್ಮೆಗಳೆಲ್ಲ ಒಂದಾಗಿ ಇದ್ದರೆ, ಧರ್ಮವೆನಿಸುವದು, ಎಲ್ಲರನ್ನು ಒಟ್ಟಿಗೆ ಹಿಡಿದು ನಿಲ್ಲಿಸುವದು. ಇದುವೆ ಎಲ್ಲಕ್ಕಿಂತ ಶ್ರೇಷ್ಠವಾದುದು, ಮೇಲ್ಮೆ. ಮೇಲ್ಮೆ ಒಟ್ಟುಗೂಡಿದರೆ, ಮೇಲ್ಮೆ ಬರುವದು.

ಲಲಳ

ಹೇಮನಗಮು ಚೀತ ನೆಪ್ಪುಡುಗಲವಾಡು, ವೆಂಡಿಕೊಂಡಮೀದ ವೆಲಯುವಾಡು,
ಎತ್ತವಲಸೆಬಚ್ಚ ನೇಮನವಚ್ಚುರಾ, ವಿಶ್ವದಾಭಿರಾಮ ವಿನುರ ವೇಮ.

ಕನಕ ಗಿರಿಯು ತನ್ನ ಕೈಯೊಳಿಪ್ಪ ಅವನು
ಬೆಳ್ಳಿ ಬೆಟ್ಟದಲ್ಲಿ ಬಾಳುವವನು,
ಎತ್ತು ತಿಹನು ಭಿಕ್ಷೆ; ವಿನೆನ್ನಬಹುದಿದನು.
ವಿಶ್ವದಾಭಿರಾಮ ಕೇಳು ವೇಮ.

' ಶಿವ ' ನ ಬಗೆಗೆ ಇತಿಹಾಸ, ಪುರಾಣಗಳಲ್ಲಿ, ಆಗಮ-ತಂತ್ರಗಳಲ್ಲಿ ಹಲವಾರು ಕಥೆ, ಉಪಕಥೆಗಳುಂಟು. ತತ್ತ್ವಗಳನ್ನು ವಿವರಿಸಿ ತಿಳಿಸುವ ಮುಖ್ಯ ಗುರಿಯಿಂದ ಪುರಾಣಾದಿಗಳು ಬಳಕೆಯಲ್ಲಿ ಬಂದಿದ್ದರೂ, ಕಥೆಗಳನ್ನು ಹೇಳುವ ಭಾಷಾಶೈಲಿ ಜನರಿಗೆ ಅರಿವಾಗದೆ, ಕೆಲವೊಮ್ಮೆಯಂತೂ ವಿವರಿಸುವವರ ದೋಷಪೂರ್ಣ ಮನಸ್ಸಿನಿಂದಾಗಿ, ' ತತ್ತ್ವ ' ಅಪ್ರಕಾಶಿತವಾಗದೆ, ಜೊಳ್ಳು ಕಥೆಯೇ ತೂರಿ ಬಂದಿರುವದುಂಟು.

ನೀಲಾಚಲ ಪರ್ವತವೇ ಶಿವ. [ಪಾರ್ವತಿ ಸತಿಯಾಗಿ ಇಲ್ಲಿ ಕಾಮತೃಪ್ತಿಗೆ ಬಂದು ತನ್ನ ಮಹಾಯೋನಿಯನ್ನು ಪರ್ವತದ ಮೇಲೆ ಚೆಲ್ಲಿದಾಗ, ಪರ್ವತವು ನೀಲವರ್ಣ ತಳೆಯಿತೆಂದು ಕಾಲಿಕಾ ಪುರಾಣ ತಿಳಿಸುವದು.]

ಶಿವನ ಕೈಯಲ್ಲಿ ಧನುಸ್ಸು ಬೇಡವೇ ? ಹೇಮಾದ್ರಿ ಶಿವಧನುಸ್ಸು ಎನಿಸಿತು. ಶಿವನ ವಾಸಕ್ಕೆ ರಜತಾದ್ರಿ ಮೀಸಲಾಯಿತು. ಕೈಯಲ್ಲಿ ಬಂಗಾರ; ಇರುವಲ್ಲೆಲ್ಲಾ ಬೆಳ್ಳಿ. ಇದು ' ಶಿವ ' ಎಂದು ತಿಳಿಸಿದ್ದಾರೆ. ಶಿವ ಇರುವಲ್ಲಿ ಯಾವದಕ್ಕೂ ಕೊರತೆ ಇಲ್ಲ. ಬೆಳ್ಳಿ-ಬಂಗಾರ ಬೆಟ್ಟದಷ್ಟು. ಆದರೆ ಬೆಳ್ಳಿ-ಬಂಗಾರ ಇದ್ದರೆ, ಮಾತ್ರ ' ಶಿವ ' ಸಾಮ್ಯ

ಹೊಂದರು. ಕೈಯೊಳಗಿನ ಬಂಗಾರ, ಹತ್ತಿರದ ಬೆಳ್ಳಿ ತನ್ನದಲ್ಲವೆಂಬ ಭಾವನೆ ಬರಬೇಕು. ಸಂಗದಲ್ಲಿ ನಿಸ್ಸಂಗನಾಗಬೇಕು. ಹೊಂದಿದ ವಸ್ತುಗಳಲ್ಲಿ ಆಸಕ್ತನಾಗಬಾರದು. ಇದು ಶಿವಸ್ಥಿತಿ. ಇದನ್ನು ತಿಳಿಸಲು ಪುರಾಣ ಕಥೆಯಲ್ಲಿ ಶಿವನು ತನ್ನ ಆಹಾರವನ್ನು ಭಿಕ್ಷೆ ಎತ್ತಿ ಪಡೆಯುತ್ತಿದ್ದನೆಂದು ಹೇಳಲಾಗಿದೆ. ಹೌದು. ಯಾವ ಮಹಾತ್ಮರ ಮನಸ್ಸು ಶಿವ ಸ್ಥಿತಿಯನ್ನು ಹೊಂದಿರುವದೋ, ಬೆಳ್ಳಿ-ಬಂಗಾರ, ಲಕ್ಷಾಂತರ ಆಸ್ತಿ ತೊರೆದು ಭಿಕ್ಷಾಂದೇಹಿ' 'ಭಿಕ್ಷಾಂದೇಹಿ' ಎನ್ನುತ್ತಾರೆ. ಬ್ರಹ್ಮವಿದ್ಯೆ ತಿಳಿಯಲಪೇಕ್ಷಿಸುವ ರಾಜಕುಮಾರರೂ ಸಹ ' ಭಿಕ್ಷಾಂದೇಹಿ ' ಎಂದು ಐದು ಮನೆಯಲ್ಲಿಯಾದರೂ ಭಿಕ್ಷೆ ಎತ್ತಿ ಒಂದು ದಿನವಾದರೂ ತನ್ನ ಆಹಾರ ಪಡೆಯಬೇಕು. ಇದರಿಂದ ನಿಮಿತ್ತ ಮಾತ್ರವಾಗಿರುವ ಉಚ್ಚ ನೀಚ ಭಾವನೆಗಳು ಮಾಯವಾಗುವವು. ಇದು ಒಂದು ತತ್ತ್ವ. ನಮ್ಮ ಕರ್ಮ ಫಲವನ್ನು ನಾವು ಭೋಗಿಸಬೇಕು. ನಿರ್ಭಾಗ್ಯನು ಶಿರಿವಂತನಾಗಿ ಹುಟ್ಟಿದ್ದರೂ, ಅವನ ಪ್ರಾರಬ್ಧ ಅವನನ್ನು ಫಲಭೋಗಿಯಾಗಿಸುವದು. ಇದು ತಿಳಿಯಬೇಕಾದ ಇನ್ನೊಂದು ತತ್ತ್ವ.

ಲಲಜಿ

ಸುಖಮುಲೆಲ್ಲದೆಲಿಸಿ ಚೂಡಂಗ ದುಃಖಮುಲ್, ಪುಣ್ಯಮುಲುನು ಬಾಪಪೂರ್ವಕಮುಲೆ,
ಕೊರತಮೀದಿ ದೊಂಗ ಕೋರ್ಕುಲವಿಧಮಯಾ, ವಿಶ್ವದಾಭಿರಾಮ ವಿನುರ ವೇಮ.

ಸುಖಗಳೆಲ್ಲ ತಿಳಿದು ಸಲೆ ಕಾಣಲು ದುಃಖ;
ಪಾಪ ಪೂರ್ವವಹುದೆ, ಪುಣ್ಯವೆಲ್ಲ?
ಕಳ್ಳ ಕೋರಿಕೆ ವಿಧ ಕೊರತೆಗಳಿರುವವಲ !
ವಿಶ್ವದಾಭಿರಾಮ ಕೇಳು ವೇಮ.

ಸುಖ ಅನುಭವಿಸುವದು ಇಂದ್ರಿಯಗಳ ಮೂಲಕ ತಾನೇ. ಸುಂದರ ನೋಟವನ್ನು ಕಣ್ಣಿನಿಂದ ನೋಡುತ್ತೀರಿ. ನೋಡಿದಂತೆ ಇನ್ನೂ ನೋಡಬೇಕೆನ್ನಿಸುವದು. ಅತೃಪ್ತಿ ಹೆಚ್ಚುವದು. ದುಃಖವೆನಿಸುವದು. ಅದಕ್ಕಾಗಿಯೇ ಹೇಳುವುದು. ಪ್ರೇಯಸಿಯ ಜೊತೆಗೆ ಹೆಚ್ಚು ಸಲುಗೆ ಬೇಡ. ಏಕೆಂದರೆ, ಅವಳನ್ನು ಕಾಣದಾದಾಗ ಹೆಚ್ಚು ದುಃಖವೆನಿಸುವದು. ಪರ ಸ್ತ್ರೀ ಗಮನದ ಉದಾಹರಣೆ ನೋಡಿರಿ: "ಪರಸ್ತ್ರೀ ಭೋಗಕ್ಕಾಗಿ ದುಡುಕುವವನಿಗೆ ನಾಲ್ಕು ರೀತಿಯ ದುಷ್ಫಲ ಕಾಯ್ದಿದೆ: ಪಾಪಸಂಚಯ, ನಿದ್ರಾಭಂಗ, ಅಪಕೀರ್ತಿ: ಮತ್ತು ಕೊನೆಯದಾಗಿ ನರಕ." (ಧರ್ಮಪಾದ –೩೦೯.) ಭಯಭೀತರಾಗಿ ಕಳುವಿನಿಂದ ಕೂಡಿದ ಪ್ರೇಯಸ ಪ್ರೇಯಸಿಯೆರಿಗೆ ದೊರೆವ ಸುಖವೇನೋ ಕ್ಷಣಿಕ. ಆದರೆ ಅದು ಯಾರಿಗಾದರೂ ತಿಳಿದರೆ ತೀರಿತು. ಜೀವಾವಧಿ ಕೊಳೆಯಬೇಕಾಗುವದು. ಸಂಕಟ ಪಡಬೇಕಾಗುವದು. ಇದೇ ರೀತಿ, ಇತರ ವಿಷಯ–ಸುಖಭೋಗಗಳೂ ಇವೆ.

ವೈದಿಕ ಯಜ್ಞ-ಕರ್ಮಗಳು ಸುಕೃತ, ಪುಣ್ಯ. ವೇದದ ಕರ್ಮಕಾಂಡವೆಲ್ಲ ಅಪರಾ ವಿದ್ಯೆಯೆಂದು ಶ್ರುತಿ ಪಠಿಸುವದು. ಅಪರಾ ವಿದ್ಯೆಯಿಂದ ಬ್ರಹ್ಮಜ್ಞಾನವಾಗುವದಿಲ್ಲ. "ಅವಿದ್ಯೆಯಲ್ಲಿ ಬಹು ಪ್ರಕಾರವಾಗಿ ಇರುವವರಾಗಿ 'ನಾವು ಕೃತಾರ್ಥರು' ಎಂದು ಈ

ಅಜ್ಞಾನಿಗಳು ಅಭಿಮಾನಪಡುತ್ತಾರೆ. ಕರ್ಮಿಗಳು ಕರ್ಮಫಲದ ಆಸಕ್ತಿಯಿಂದ ಇದನ್ನು ತಿಳಿಯುವದಿಲ್ಲ. ಆ ಕಾರಣದಿಂದ ದುಃಖಾರ್ತರಾಗಿ ಕರ್ಮಫಲವನ್ನು ಕ್ಷೀಣ ಮಾಡಿಕೊಂಡವರಾಗಿ (ಸ್ವರ್ಗಲೋಕದಿಂದ ಬೀಳುವರು.) "ಪ್ರಮತ್ತರಾದ ಮೂಢರು ಇಷ್ಟಾಪೂರ್ತಗಳನ್ನು ಪ್ರಧಾನವೆಂದು ತಿಳಿಯುವವರಾಗಿ, ಬೇರೆ ಶ್ರೇಯಃಸಾಧನವನ್ನು ತಿಳಿಯುವದಿಲ್ಲ. ಸ್ವರ್ಗದ ಮೇಲಿರುವ ಭೋಗಸ್ಥಾನದಲ್ಲಿ ಕರ್ಮಫಲ ಅನುಭವಿಸಿ, ಅವರು ಈ ಲೋಕವನ್ನೋ ಅಥವಾ ಹೀನತರವಾದುದನ್ನೋ ಪ್ರವೇಶಿಸುತ್ತಾರೆ" (ಮುಂಡಕ ಉಪ. ೧–೨–೯,೧೦) ಪುಣ್ಯವೆಲ್ಲ ಪಾಪದ ಪೂರ್ವದಲ್ಲಿ ಉಂಟೇನೊ, ಎನ್ನಿಸುವದು.

ಅದೇ ರೀತಿ,ನಮಗೆ ಕೊರತೆಗಳೆನ್ನಿಸುವವಾದರೂ ಏನು? ಏನಾದರೂ ಇಲ್ಲದಿರುವದು ಕೊರತೆಯಲ್ಲ. ಆದರೆ ನಮ್ಮ ಮನಸ್ಸಿನಲ್ಲಿ ಹುದುಗಿಟ್ಟ ಕೋರಿಕೆಗಳೇ ನಮಗೆ ಕೊರತೆಯ ಅನುಭವ ನೀಡುವವು. ಕಳ್ಳಕೋರಿಕೆಗಳೇ ಕೊರತೆಗಳಷ್ಟೇ.

ಲಲಟ

ಸಾಹಸಮುನನ್ನೆನ ಸತ್ಯಮುಚೇನ್ನೆನ, ಮೋಹಬುದ್ಧಿವಿಡಿಚಿ ಮುಕ್ತಿನೆರಿಗಿ,
ಚೇರ್ಚಿಮದಿನಿ ಗುರುನಿ ಜೆಲರೇಗಿಯುಂಡುಮು, ವಿಶ್ವದಾಭಿರಾಮ ವಿನುರ ವೇಮ.

ಸಾಹಸದಿಂದಿರಲಿ; ಸತ್ಯದಿಂದಾಗಲಿ;
ಮೋಹ ಬುದ್ಧಿ ತೊರೆದು ಮುಕ್ತಿ ತಿಳಿದು,
ಭಾವಿಸಿ ಮನದಿ ಗುರು; ಬ್ರಹ್ಮನ ಅನುಭವಿಸು.
ವಿಶ್ವದಾಭಿರಾಮ ಕೇಳು ವೇಮ.

ಯೋಗಸಾಧನೆಯ ಮಾರ್ಗ ಎಷ್ಟೊಂದು ನೇರ ಮಾರ್ಗವಾಗಿದೆಯೋ, ಅಷ್ಟೇ ಸಾಹಸಮಯವೂ ಆಗಿದೆ. ಯಮ-ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಯ ಅಷ್ಟಾಂಗ ಯೋಗವನ್ನು ಆಚರಿಸುವಾಗ,ಸಾಧಕನು ಮಹಾ ಸಾಹಸ ಮಾಡಬೇಕಾಗುವದು. ಇಂದ್ರಿಯ ಗ್ರಹಣ ಸ್ಥಿತಿಯಿಂದ ಇಂದ್ರಿಯಾತೀತ ಸ್ಥಿತಿಗೆ ಏರುವಾಗ, ಯೋಗಿಯು ಹೇಳುವಂತೆ, ಅವನಲ್ಲಿ ಮಹಾಶಕ್ತಿಯೊಂದು ಉಂಟಾಗುವದು. ಇದುವೇ ಅದ್ಭುತವಾದ ಕುಂಡಾಲಿನೀ ಶಕ್ತಿ. ಮೂಲಾಧಾರ ಚಕ್ರದಿಂದ ಸಹಸ್ರಾರದ ವರೆಗೆ ಕುಂಡಾಲಿನಿ ಏಳುವಾಗ ಅನೇಕ ಸಿದ್ಧಿಗಳು ಎದುರಾಗುವವು. ಯೋಗಿ ಇವುಗಳಿಂದ ವಿಚಲಿತ ಮನಸ್ಕನಾಗದೆ, ಮುಂದುವರೆಯಬೇಕಾಗುವದು. ಇದೇನೂ ಸಾಮಾನ್ಯ ಸಾಹಸವಲ್ಲ.

ಇಲ್ಲಿ ಇರುವದೆಲ್ಲ ಆತ್ಮನೇ. ಆತ್ಮನೊಬ್ಬನೇ ಸತ್ಯ. ಆತ್ಮನು ನಿತ್ಯ; ಅವಿನಾಶಿ; ಪ್ರತ್ಯಕ್ಷಾದಿ ಪ್ರಮಾಣಗಳ ಮೂಲಕ ಗ್ರಹಿಸಲು ಸಾಧ್ಯವಲ್ಲದ ಅಪ್ರಮೇಯ. ಅಜ, ಅವ್ಯಯ "ಯಾವನಿಗೆ ಅಗ್ನಿಯು ತಲೆಯೋ, ಚಂದ್ರ ಸೂರ್ಯರು ಕಣ್ಣುಗಳೋ, ದಿಕ್ಕುಗಳು ಕಿವಿಗಳೋ, ಪ್ರಕಟವಾದ ವೇದಗಳು ವಾಕ್ಕೋ, ವಿಶ್ವವು ಹೃದಯವೋ, ಯಾವನ ಪಾದಗಳಿಂದ ಪೃಥ್ವಿಯು ಹುಟ್ಟಿರುವದೋ, ಈ ಸರ್ವ ಭೂತಗಳ ಅಂತರಾತ್ಮನು (ಈ ಪುರು

ಪನಿಂದಲೇ ಹುಟ್ಟಿರುತ್ತಾನೆ)" (ಮುಂಡಕ ಉಪ ೨-೧-೪) ಇದನ್ನು ತಿಳಿಯಬೇಕು. ಇದುವೇ ಆತ್ಮಜ್ಞಾನ.

ಆದರೆ ಜ್ಞಾನವು ಅಜ್ಞಾನದಿಂದ ಮುಚ್ಚಲ್ಪಟ್ಟಿದೆ; ಯಜ್ಞಾದಿ ಬಾಹ್ಯಕರ್ಮಗಳಲ್ಲಿ ಆಸಕ್ತರಾಗಿ ಮನುಷ್ಯರು ಮೋಹಗೊಳ್ಳುವರು. ಯಾರು ಜ್ಞಾನದಿಂದ ಸಂಸಾರಕ್ಕೆ ಕಾರಣವಾದ ದೋಷಗಳನ್ನು ತೊಳೆದುಕೊಂಡಿರುವರೋ, ಅವರು ಮೋಕ್ಷವನ್ನು ಹೊಂದುವರು. ಮೋಕ್ಷವನ್ನು ಹೊಂದುವವರು ಬ್ರಹ್ಮನಿಷ್ಠರಾಗಿರುವರು 'ಗುರುಬ್ರಹ್ಮ' ಎಂದು ಬ್ರಹ್ಮನನ್ನೇ ಮನಸ್ಸಿನಲ್ಲಿಟ್ಟುಕೊಂಡು ಬ್ರಹ್ಮನೇ ಗತಿಯೆಂದು ಬ್ರಹ್ಮನನ್ನು ಅನುಭವಿಸುತ್ತಾರೆ.

ಲಲಽ

ಸವತಿತಲ್ಲಿಚೂಡ ಸಾಕುಲನೆರಪುನು, ಸ್ವಂತತಲ್ಲಿವಲೆನು ಸ್ಮೈಪದೆಪುಡು
ವಿಂತಲಣಚಿಲೋನ ವಿಜ್ಞಾನಮಂದುಮು, ವಿಶ್ವದಾಭಿರಾಮ ವಿನುರ ವೇಮ.

ಸವತಿ ತಾಯಿ ನೋಡು, ಸದಾ ದೋಷದೆಣಿಕೆ.
ಸ್ವಂತ ತಾಯಿಯಂತೆ ಸಹಿಸಳೆಂದು.
ವಿಧವನರಿತು ಒಳಗೆ ವಿಜ್ಞಾನ ಹೊಂದಿರಿ.
ವಿಶ್ವದಾಭಿರಾಮ ಕೇಳು ವೇಮ.

ಹಡೆದವಳು ತಾಯಿ, ಜನನಿ. ಆದರೆ ತಂದೆಯ ರೇತಸ್ಸಿನಲ್ಲಿ ಗರ್ಭ ಮೊದಲಾಗಿ, ತಾಯಿಯ ಯೋನಿಯಲ್ಲಿ ವಿಸರ್ಜಿಸಿದ ಮೇಲೆ ಗರ್ಭ ವರ್ಧಿಸುತ್ತದೆ. ಜನನಕ್ಕೆ ತಂದೆಯೂ ಕಾರಣನು. ತಂದೆಯ ಪತ್ನಿ ತಾಯಿ; ಹಡೆದವಳು ಸ್ವಂತ ತಾಯಿ. ತಂದೆ ಮದುವೆಯಾದ ಇತರರು ಸವತಿ-ತಾಯಂದಿರು. (ಬಹು ಪತ್ನಿತ್ವ ಪದ್ಧತಿ)

ಸವತಿ-ತಾಯಿ ತನ್ನ ಸವತಿಯಮಕ್ಕಳಲ್ಲಿ ಯಾವಾಗಲೂ ಕುಂದು ಹುಡುಕುತ್ತಾಳೆ. ತನ್ನ ಔರಸ-ಪುತ್ರರು ಅವರೆಲ್ಲ ಎನ್ನುವ ಬೇಧ-ಭಾವ ಅವಳಲ್ಲಿ ಉಂಟು. ಜೀವ ನಂಬಿರುವ ಬಾಹ್ಯ ಜಗತ್ತು ಸವತಿ ತಾಯಿಯಂತೆ. ಜೀವನ ಸಕಲ ಕಾರ್ಯವೂ ಅಪೂರ್ಣವಾಗಿರುತ್ತವೆ. ಪ್ರಪಂಚದಲ್ಲಿ ಆಸಕ್ತಿ ಹೊಂದಿದ ಜೀವನಿಗೆ ರಾಗ ದ್ವೇಷಾದಿಗಳೇ ಎದುರಾಗಿ ಶೋಕವೇ ಗತಿಯಾಗುವದು.

ಆದರೆ ಜೀವನ. ಸವತಿ ತಾಯಿ ಪ್ರಕೃತಿ, ಮಹಾಯೋನಿ. ಪುರುಷೋತ್ತಮನೇ ಬೀಜಪ್ರದನಾದ ತಂದೆ. ಆದರೆ ಪ್ರಕೃತಿ ಪುರುಷನ ವ್ಯಕ್ತರೂಪ ಎಂದು ತಿಳಿದುಬಂದಾಗ ಪ್ರಕೃತಿ-ಪುರುಷ ಒಂದೇ ಎಂಬುದು ತಿಳಿಯುವದು. ಇದು ಹೊಳೆದಾಗ, ಸವತಿ-ತಾಯಿ ಎಂಬ ಭಾವ ಮರೆಯಾಗುವದು. ಸ್ವಂತ ತಾಯಿ ಎಂಬ ಭಾವ ಮೂಡುವದು. ಇಲ್ಲಿ ಪ್ರೇಮಗಳ ಹೋಲಿಕೆ ಬೇರೆಯೂ ಇಲ್ಲ. ಹೀಗೆ ಎಲ್ಲ ರೀತಿಯಿಂದ ನೋಡಿ ಅಂತರ್ಮುಖಿಗಳಾಗಿ ವಿಜ್ಞಾನವನ್ನು ಹೊಂದಬೇಕು. ಅರ್ಥಾತ್ ಸ್ವಂತ ತಾಯಿಯಂಥ ಬ್ರಹ್ಮನನ್ನು ಆಶ್ರಯಿಸಬೇಕು.

ಲಲಲ

ಸಕ್ತಿಕಲುಗಪನುಲು ಚಕ್ಕಗಾನೆರವೇರು, ಭಕ್ತಿಕಲುಗುಪೂಜ ಫಲಮುನಿಚ್ಚು,
ಯುಕ್ತಿಕಲುಗುಮಾಟ ಯೊಪ್ಪುನು ಭುವಿಲೋನ, ವಿಶ್ವದಾಭಿರಾಮ ವಿನುರ ವೇಮ.

ಸಕ್ತಿಯಿರುವ ಕಾರ್ಯ ಸರಿಯೊಗಿ ನಡೆವುದು.
ಭಕ್ತಿಯಿರುವ ಪೂಜೆ ಫಲವೀವುದು.
ಯುಕ್ತಿಯಿರುವ ಮಾತು ಯುಕ್ತವಹುದು ಜಗದಿ.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ತಗುಲಿಕೊಳ್ಳುವುದೇ ಸಕ್ತಿ. ಮಾಡುವ ಕಾರ್ಯದಲ್ಲಿ ಆಸಕ್ತಿ ವಹಿಸಿದರೆ ಮಾತ್ರ ಆ ಕಾರ್ಯ ಸರಿಯಾಗಿ ನಡೆಯುವುದು.

ಸಕ್ತಿ ಪ್ರಪಂಚದ ಎರಡು ವಸ್ತುಗಳ ನಡುವೆ ಆಕರ್ಷಣೆ ಇರುವಾಗಿನ ಮನಸ್ಸಿನ ಸ್ಥಿತಿ. ಮನಸ್ಸು ಸಹ ಪ್ರಪಂಚದ ಮೂಲಭೂತಗಳಿಂದಾದುದು. ಕಾರಣ, ಮನಸ್ಸು ಬಾಹ್ಯ ವಸ್ತುಗಳತ್ತ ಹರಿದಾಗ ಆಸಕ್ತಿ ಉಂಟಾಗುವುದು. ಆದರೆ ಪ್ರಪಂಚದ ಬದಲಾಗುವ ಪಂಚಭೂತಗಳನ್ನು ಬಿಟ್ಟು ಬೇರೊಂದು ವಸ್ತುವಿದೆ. ಅದು ಸದ್ವಸ್ತು. ಅಂದರೆ, ಯಾವಾಗಲೂ ಇರುವಂಥದು ; ಸತ್. ಅದರತ್ತ ಆಕರ್ಷಣೆ ಇರುವಾಗಿನ ಮನಸ್ಸಿನ ಸ್ಥಿತಿಗೆ ಭಕ್ತಿ ಎನ್ನುತ್ತಾರೆ. ಪೂಜೆಯೆಂದರೆ ಮನಸ್ಸಿನಲ್ಲಿ ಉಂಟಾಗುವ ಅನೇಕ ಸಂಸ್ಕಾರಗಳನ್ನು ನಿಗ್ರಹಿಸಿ, ಸತ್-ವಸ್ತುವಿನ ಕುರಿತು ಇರುವ ಸಂಸ್ಕಾರಗಳನ್ನಷ್ಟೇ ಇರಿಸಿಕೊಳ್ಳುವದಾಗಿದೆ. ಇದನ್ನೇ ಪ್ರತ್ಯಹಾರ, ಧಾರಣ, ಧ್ಯಾನಗಳೆಂದು ಅಷ್ಟಾಂಗ ಯೋಗದಲ್ಲಿ ಹೇಳಲಾಗಿದೆ. ಪೂಜೆ ಫಲ ನೀಡಬೇಕಾದರೆ ಭಕ್ತಿ ಬೇಕು.

ಯುಕ್ತಿಯೆಂದರೆ ಬುದ್ಧಿಯಿಂದ ವಿಮರ್ಶಿಸುವದು. ಆದರೆ ಯುಕ್ತಿಗೆ ಒಂದು ಮರ್ಯಾದೆಯುಂಟು. ಇಂದ್ರಿಯ ನಿಗ್ರಹಣ ಮೇರೆಯೆಲ್ಲಿ ಮಾತ್ರ ಯುಕ್ತಿ ಕೆಲಸ ಮಾಡಬಲ್ಲದು. ಅದರಿಂದ ಯುಕ್ತಿ ಇರುವ ಮಾತು ಜಗತ್ತಿನಲ್ಲಿ ಯುಕ್ತವಾದುದೆನಿಸುತ್ತದೆ. ಇಂದ್ರಿಯ ಗ್ರಹಣ ಮೀರಿ, ಯುಕ್ತಿ ಹೋಗಲಾರದು. ಆದರೆ ಮಾನವನಿಗೆ ಯುಕ್ತಿಯನ್ನು ಮೀರಿ ಹೋಗಬಲ್ಲ ಶಕ್ತಿ ಇದೆಯೆಂದು ಯೋಗಿಗಳು ಹೇಳುತ್ತಾರೆ. ಯೋಗಾಭ್ಯಾಸದಿಂದ ಈ ಶಕ್ತಿ ಜಾಗ್ರತವಾಗುವದು. ಆಗ ಅವನು ಯುಕ್ತಿಯನ್ನು ಮೀರಿರುವ ಪರಮ ವಸ್ತುವನ್ನು ಸಂದರ್ಶಿಸುವನು.

ಲಲಳ

ಶ್ವಾಸಲಾಗಿ ವಿಡಿಚಿ ಸಾಧಿಂಪನೇರ್ಚಿನ, ಮೋಸಪೋಕ ಮುಕ್ತಿ ಮೂಟಗಟ್ಟು
ದೋಸಕಾರಿ ಗುಣಮು ಗಾಸಿಬೆಟ್ಟಕಪೋದು ವಿಶ್ವದಾಭಿರಾಮ ವಿನುರ ವೇಮ.

ಶ್ವಾಸವೆಳೆದು ಬಿಡುವ ಸಾಧನೆಯ ತಿಳಿದರೆ,
ಮೋಸಗೊಳದೆ ಮುಕ್ತಿ ಮುಟ್ಟುತಿಹನು.
ಗುಣದೋಷಗಳಿಂದ ಗಾಸಿಪಡದೆ ಹೋಹ.
ವಿಶ್ವದಾಭಿರಾಮ ಕೇಳು ವೇಮ.

ಸಾಧಕರು ಉಸಿರಾಡುವದನ್ನು ಏತಕ್ಕೆ ಮಾಡುತ್ತಾರೆ ? ನಿಯಮಬದ್ಧವಾದ ಉಸಿರಾಡುವಿಕೆಯಿಂದ ದೇಹದಲ್ಲಿರುವ ಕಣಗಳಿಗೆಲ್ಲ ಒಂದೇ ಕಡೆ ಹರಿಯುವ ಸ್ವಭಾವ ಬರುವದು. ಆಗ ಮನಸ್ಸು ಇಚ್ಛಾಶಕ್ತಿಗೆ ಬದಲಾವಣೆ ಹೊಂದಿ, ವಿದ್ಯುತ್‌ಶಕ್ತಿಗೆ ರೂಪಾಂತರ ಹೊಂದುವದು. ಈ ದೇಹವು ಒಂದು ಪ್ರಚಂಡ ಇಚ್ಛಾಶಕ್ತಿಯ ಯಂತ್ರದಂತೆ ಆಗುವ ಸಾ ಯೋಗಿಗೆ ಬೇಕಾಗುವದೇ ಈ ಪ್ರಚಂಡ ಇಚ್ಛಾಶಕ್ತಿ. ಇದು ನಮ್ಮ ದೇಹಕ್ಕೆ ಪ್ರಾಸಬದ್ಧವಾದ ಚಲನೆಯನ್ನು ತರುವದು. ಮತ್ತು ಶ್ವಾಸೋಚ್ಛ್ವಾಸಗಳ ಕೇಂದ್ರದ ಮೂಲಕ ಉಳಿದ ಕೇಂದ್ರಗಳನ್ನು ಸ್ವಾಧೀನಕ್ಕೆ ತರಲು ನನಗೆ ಸಹಾಯ ಮಾಡುತ್ತವೆ. ನಿಯಮನಗೊಂಡ ಉಸಿರಾಟದಿಂದ ಮೂಲಾಧಾರದಲ್ಲಿ ಸುಪ್ತವಾಗಿರುವ ಕುಂಡಾಲಿನಿ ಶಕ್ತಿಯನ್ನು ಜಾಗೃತಗೊಳಿಸುವದೇ ಪ್ರಾಣಾಯಾಮ.

ಈ ಶಕ್ತಿಯು ಬೆನ್ನುಮೂಳೆಗಳ ಮಧ್ಯದಲ್ಲಿರುವ ಸುಷುಮ್ನಾ ಕಾಲುವೆಯ ಮೂಲಕ ಸಂಚರಿಸುವದೆಂದು ಯೋಗಿಯ ಹೇಳಿಕೆ. ಸಾಮಾನ್ಯ ಸ್ಥಿತಿಯಲ್ಲಿ ಮನಸ್ಸು ಮೂಲಾಧಾರದಲ್ಲಿ ಸಂಚಿತವಾದ ಸ್ಮರಣಶಕ್ತಿಯಿಂದ ವಸ್ತುವನ್ನು ಗ್ರಹಿಸಬಹುದಾಗಿದೆ. ಆದರೆ ಸುಷುಮ್ನಾ ಕಾಲುವೆ ತೆರೆದಾಗ, ಇಂದ್ರಿಯಾತೀತವಾದ ಅವಸ್ಥೆಯನ್ನು ಯೋಗಿ ಮುಟ್ಟುವನು. ಅವನು ಪ್ರಪಂಚದ ವಸ್ತುಗಳ ಮೋಹಕ್ಕೆ ಸಿಲುಕದೆ, ಸದ್ವಸ್ತುವನ್ನೇ ನೋಡುತ್ತಾನೆ. ಅವನು ಯಾವ ಆಸಕ್ತಿ ಇಲ್ಲದೆ ಇರುವದರಿಂದ ಅವನಿಗೆ. ಕರ್ಮ ಬಾಧಿಸಲಾರದು. ಅಂದರೆ ಅವನು ಗುಣ-ದೋಷಗಳಿಂದ ಗಾಸಿ ಪಡದೆ ಮುಕ್ತಿ ಹೊಂದುವನು ಪ್ರಪಂಚದ ಮೋಹಬಂಧನದಿಂದ, ಅವನ ಮನಸ್ಸು ಮುಕ್ತವಾಗುವದು.

೯೯೦

ವೀರಶೈವಧರ್ಮವಿಧಮು ನೆರಿಂಗಿಯು, ಬ್ರಹ್ಮವಿದ್ಯವೀಡ ಬಡಗನೇನಿ
ಜೆಲಗಿ ಪುಲಿಕೆ ಬಂಟು ಸಿಂಗಪುಬಿಲ್ಲಯೌ, ವಿಶ್ವದಾಭಿರಾಮ ವಿನುರ ವೇಮ.

ವೀರಶೈವಧರ್ಮ ವಿಧವನರಿತ ಜನರು,
ಮತ್ತೆ ಬ್ರಹ್ಮವಿದ್ಯೆ ಮನದೊಳಿಡಲು,
ಗುಡುಗುವ ಹುಲಿಗೆ, ಮರಿ ಸಿಂಹ ರಕ್ಷಣೆಯಂತೆ.
ವಿಶ್ವದಾಭಿರಾಮ ಕೇಳು ವೇಮ.

ಕಾಶ್ಮೀರ ಶೈವ, ಕಾಳಾಮುಖ-ಪಾಶುಪತ, ನಾಥ ಪಂಥ ಶ್ರೀಕಂಠಶಿವರ ಶಕ್ತಿ ವಿಶಿಷ್ಟಾದ್ವೈತ ಮುಂತಾದ ಶೈವ ಮತಗಳು ವೀರಶೈವ ಮತಕ್ಕೆ ಪೀಠಿಕೆ ಹಾಕಿದವು. ರಂಭಾಪುರಿಯ ರೇಣುಕಾಚಾರ್ಯ; ಉಜ್ಜಯಿನಿಯ ಮರುಳ ಸಿದ್ಧ, ಕೇದಾರದ ಏಕೋರಾಮ, ಶ್ರೀ ಶೈಲದ ಪಂಡಿತಾರಾಧ್ಯ, ಮತ್ತು ಕಾಶೀಯ ವಿಶ್ವಾರಾಧ್ಯರು ಪಂಚಾಚಾರ್ಯರೆಂದು ಪ್ರಸಿದ್ಧರಾಗಿ ವೀರಶೈವ ಮತವನ್ನು ಪ್ರಾರಂಭಿಸಿದರು. ಇವರೆಲ್ಲ ಬಿಜ್ಜಳರಾಯನ ಸಮಕಾಲೀನರು. ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ಬಸವೇಶ್ವರ ಮುಂತಾದ ಶರಣರು ವೀರ ಶೈವ ಮತದಲ್ಲಿ ಸುಧಾರಣೆ ಮಾಡುವ ಪ್ರಯತ್ನ ಮಾಡಿದರು. ಹೀಗೆ ವೀರ ಶೈವ ಮತದಲ್ಲಿ ಕಂಡು ಬರುವ ವೈಶಿಷ್ಟ್ಯವೆಂದರೆ, ಜಾತಿ ಮತ್ತು ವರ್ಣಾಶ್ರಮ ತಾರತಮ್ಯ

ವ್ಯತ್ಯಾಸಗಳಿಗೆ ಅವಕಾಶವಿಲ್ಲದಿರುವದು. ಬ್ರಾಹ್ಮಣರು ಆಚರಿಸುವ ಧರ್ಮದಲ್ಲಿ ವಿಷಮತೆಗೆ ಅವಕಾಶವಿದೆ) ಭಕ್ತಿ ಪ್ರಾಧಾನ್ಯ ಸ್ತ್ರೀಸ್ವಾತಂತ್ರ್ಯ, ಕಾಯಕದ ಮಹತ್ವ, ಜಾತಾಶೌಚ, ಮೃತಾಶೌಚ, ಸ್ಪೃಷ್ಟಾ-ಸ್ಪೃಷ್ಟ ಪ್ರಭಾವಗಳನ್ನು ನಿರಾಕರಿಸಿ, ಹರಿಜನೋದ್ಧಾರಕ್ಕಾಗಿ ಪ್ರಯತ್ನಿಸಿದದು, ಜನರ ಭಾಷೆಯಲ್ಲಿ ಸಾಮಾನ್ಯರಿಗೆಲ್ಲ ಉಚ್ಚ ವಿಚಾರ ಹೇಳಿದುದು.

ತಾತ್ವಿಕವಾಗಿ ವೀರಶೈವರ ದರ್ಶನ ಹೀಗಿದೆ. 'ಅವ್ಯಕ್ತವಾದ ಪರವಸ್ತು ಸ್ವಲೀಲೆಯಿಂದ ಸೇವ್ಯಸೇವಕ ಭಾವದಿಂದ ಲಿಂಗ ಮತ್ತು ಅಂಗ ಎರಡಾಯಿತು. ಪರವಸ್ತುವಿನಲ್ಲಿ ಅಂತರ್ಗತವಾದ ಶಕ್ತಿಯೂ ಎರಡಾಗಿ ಅಂಗದಲ್ಲಿ ಭಕ್ತಿಯಾಗಿ ಒಂದು ಭಾಗ ಸೇರಿತು. ಇನ್ನೊಂದು ಭಾಗ ಶಕ್ತಿಯಾಗಿ ಲಿಂಗದಲ್ಲಿ ಉಳಿಯಿತು. ಈ ವಿಭಜನೆ ಹೀಗೆ ಸಾಗಿ' ಮಹಾ ಪ್ರಸಾದ, ಜಂಗಮ, ಶಿವ, ಗುರು ಆಚಾರಗಳೆಂಬ ಷಡ್ಲಿಂಗಗಳೂ, ಭಕ್ತ. ಮಹೇಶ, ಪ್ರಸಾದಿ, ಪ್ರಾಣಲಿಂಗ. ಶರಣ, ಐಕ್ಯ ಎಂಬ ಷಡಂಗಗಳಾಗುವವು. ಅಂಗ ಎನ್ನಿಸಿಕೊಂಡ ಜೀವನು ಸಂಸಾರದ ಸಂಬಂಧದಿಂದ ಸಂಚಿತ, ಪ್ರಾರಬ್ಧ, ಆಗಮಿ ಕರ್ಮತ್ರಯದಿಂದ ಬಂಧಿತನಾಗುವನು. ಅವನು ಗುರುವಿನಲ್ಲಿ ದೀಕ್ಷೆ ಪಡೆದರೆ, ಕರ್ಮಕ್ಷವಾಗುವದು. ಮಲಕ್ಷಯವಾಗುವದು. ಭಕ್ತ, ಮಹೇಶ ಮತ್ತು ಪ್ರಸಾದಿ ಸ್ಥಲಗಳಲ್ಲಿ ಭೃತ್ಯರೂಪವಿದ್ದು, ಕರ್ಮಪ್ರಧಾನವಾಗಿರುತ್ತದೆ. ಪ್ರಾಣಲಿಂಗ ಸ್ಥಲದಿಂದ ಕರ್ತೃಸ್ವರೂಪ ಪಡೆದು ಅದ್ವೈತಕ್ಕೆ ಏರುವದಾಗಿದೆ. ಇಲ್ಲಿಂದ ಜ್ಞಾನಪ್ರಧಾನವಾಗಿರುತ್ತದೆ.

ವೀರಶೈವ ಧರ್ಮವು ಕೆಲಸುಧಾರಣೆ ಗೈದು ಹುಲಿಯಂತೆ ಹಳೆಯಜಾಡಿನಿಂದ ಸಾಧನ ಮಾಡಿದರೆ, ಹುಲಿಗೆ ಸಿಂಹದ ರಕ್ಷಣೆ–ಇರುವಂತೆ ಆಗುವುದು. ಬಾಹ್ಯಾಚಾರ ಸುಧಾರಣೆಯ ಗುಡುಗುವ ಹುಲಿ ಮುಪ್ಪಾಗುವ ವೇಳೆಗೆ ಮರಿಸಿಂಹವಾದ ಬ್ರಹ್ಮವಿದ್ಯೆ ವೃದ್ಧಿಗೊಂಡು ಬೆಳಸುವದು.

೯೯೧

ರಾಯಿ ರಾಯಿ ಜೇರ್ಚಿ ರಾಯಗಾರಾಯಗಾ, ನುನ್ನಯ್ಯೆನಯಟ್ಟು ಲನ್ನಿಪಲುನು,
ಬಾಟುಜೇಸಿನಂತ ಪರಿಪಾಟಯಗುನಯಾ, ವಿಶ್ವದಾಭಿರಾಮ ವಿನುರ ವೇಮ.

ಕಲ್ಲುಕಲ್ಲಿನೊಡನೆ ಕೂಡಿ ತಿಕ್ಕಿ ತಿಕ್ಕಿ,
ನುಣ್ಣಗಾದ ರೀತಿ, ನಿಖಿಲ ಕಾರ್ಯ
ಶ್ರಮವ ಮಾಡಿದಷ್ಟು ಸಂಪೂರ್ಣವೆನಿಪವು
ವಿಶ್ವದಾಭಿರಾಮ ಕೇಳು ವೇಮ.

'ಪ್ರಯೋಗವೇ ಪರಿಪೂರ್ಣತೆಗೆ ದಾರಿ' ಎಂದು ಹೇಳುತ್ತಾರೆ. ನಾವು ಕಾರ್ಯಗೈಯ್ಯುತ್ತ ಹೋದಂತೆ, ಕಾರ್ಯಪೂರ್ತಿಯಾಗುವುದು. ಕಲ್ಲೊಂದನ್ನು ಇನ್ನೊಂದರೊಡನೆ ತಿಕ್ಕುತ್ತ ಸಾಗಿದರೆ ನುಣ್ಣಗಾಗಿ ನಾವು ಇಚ್ಛಿಸಿದ ನುಣುಪಾದ ವೈ ಆಗುವುದಷ್ಟೇ. ಆದರೆ ಉರುಟು ವೈ ನುಣುಪಾಗಿ ಬದಲಾವಣೆ ಹೊಂದುವುದು ಒಮ್ಮೆಲೇ ಗೋಚರಿಸುವು

ದಿಲ್ಲ. ಪ್ರತಿ ಕ್ಷಣಕ್ಕೆ ಆಗುತ್ತಿರುವ ಬದಲಾವಣೆ ಅಂತ್ಯದಲ್ಲಿ ಗೋಚರಿಸುವುದು. ಹೌದು; ಇದೇ ನಾವು ಇಚ್ಛಿಸಿದ ನುಣುಪು ಎನ್ನುತ್ತೀವೆ.

ಆತ್ಮ ಜ್ಞಾನದ ಸಾಧನೆಯೂ ಅದೇ ರೀತಿ. ಯಮ ನಿಯಮಾದಿ ಸಾಧನೆಯನ್ನು ಮುಂದುವರೆಸಿದಂತೆಲ್ಲ ನಾವು ಕೊನೆಗೆ ಒಂದು ಹಂತಕ್ಕೆ ಬರುತ್ತೀವೆಂದು ಯೋಗಿ ಹೇಳುತಾನೆ. ಇದುವೇ ಇಂದ್ರಿಯಾತೀತ ಅವಸ್ಥೆ. ಯಾವುದನ್ನು ಕಣ್ಣಿನಿಂದ ನೋಡಲಾರೆವೋ, ಕಿವಿಯಿಂದ ಕೇಳಲಾರೆವೋ ಅಥವಾ ಇತರೆ ಯಾವುದೇ ಇಂದ್ರಿಯಗಳಿಂದ ಗ್ರಹಿಸಲಾರೆವೋ ಅಂಥ ಸದ್ವಸ್ತುವನ್ನು ಸಂದರ್ಶಿಸುವ ಶಕ್ತಿ ಹೊಂದುತ್ತೀವೆ. ಒಂದೊಂದೇ ತತ್ತ್ವಗಳನ್ನು ಆಲೋಚಿಸುತ್ತ, ಅನುಭವಿಸುತ್ತ ಹೋದರೆ 'ತತ್' ಅನುಭವವೇದ್ಯವಾಗುವದು. ಯಾವ ಕಾರ್ಯವೇ ಇರಲಿ; ಶ್ರಮ ಮಾಡಿದಷ್ಟು ಪರಿಪೂರ್ಣವೆನಿಸುವದು.

೯೯

ಬಂಟುತನಮು ಗಾದು ಬಲಮುತೋ ಗಟ್ಟಗಾ, ವೆಂಟನುಂಡಿ ಮನಸು ವೆತಲಬರಚು,
ನಿಂಟಗೆಲ್ಚಿ ರಚ್ಚನಿಲ ಗೆಲ್ವವೆಲನಯಾ, ವಿಶ್ವದಾಭಿರಾಮ ವಿನುರ ವೇಮ

ಬಂಟತನವು ಅಲ್ಲ; ಬಲದಿಂದ ಕಟ್ಟಲು,
ದಾರಿಗುಂಟ ಮನಸು ದುಗುಡಗೊಳಿಸಿ,
ಮನೆಯ ಗೆದ್ದು ಬಳಿಕ ಮಾರು ಗೆದೆಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ಸಮರಾಂಗಣದಲ್ಲಿ ನಿಜವಾದ ಕಲಿಗಳೀರ್ವರು ಪರಸ್ಪರ ಎದುರಾದರೆ, ಏನು ಮಾಡುತ್ತಾರೆ? ಎದುರಾಳಿಯ ಶೌರ್ಯ-ಧೈರ್ಯಗಳನ್ನು ಎಣಿಕೆ ಹಾಕಿ ನೋಡುತ್ತಾರೆ. ಕಾದಾಡುವ ಅಪೇಕ್ಷೆ ಇದ್ದರೆ, ಆಹ್ವಾನ ನೀಡುತ್ತಾರೆ. ಎದುರಾಳಿಯ ಪಕ್ಷ ಸೋತು ಹೋಗಿದ್ದರೂ ಚಿಂತೆಯಿಲ್ಲ. ಅವನಿಗೆ ಆಯುಧ ಪೂರೈಸಿ, ಶೂರ ಮುಖಂಡನೊಬ್ಬನೇ ಅವನೊಡನೆ ಕಾದುತ್ತಾನೆ; ಅಂತಿಮವಾಗಿ ಸೋಲಿಸುತ್ತಾನೆ. ಸೋಲು. ಸೋಲಿಸಿದವನ ಅಭಿಪ್ರಾಯವಲ್ಲ. ಸೋತವನು ಶರಣಾದಾಗ ಸೋಲು ಎಂದು ತಿಳಿಯಬೇಕು. ಇದನು ಬಿಟ್ಟು ತನ್ನ ಹಿಂಬಾಲಕರಿಂದ ಯಾರನ್ನೋ ಹಿಡಿಸಿ ಕಟ್ಟಿಹಾಕುವದು ಬಂಟತನವಲ್ಲ. ರಣಹೇಡಿಯೂ ಇದನ್ನು ಮಾಡಬಹುದು. ಬಲದಿಂದ ಕಟ್ಟುವದು ಬಂಟತನವಲ್ಲ.

ಅದೇ ರೀತಿ, ಆತ್ಮಸಾಕ್ಷಾತ್ಕಾರದ ಸಾಧನೆ ಧೀರನ ಸಾಹಸ ಕಾರ್ಯ. ಇಲ್ಲಿ ಮನಸ್ಸಿನ ನಿಗ್ರಹ ಸಾಧಿಸಬೇಕು. ವಿಷಯ ವಸ್ತುಗಳಿಂದ ಇಂದ್ರಿಯಗಳನ್ನು ಪರಾವೃತ್ತಗೊಳಿಸಬೇಕು. ಇದನ್ನು ಬಿಟ್ಟು ಸಾಧನೆಯ ಮಾರ್ಗದಲ್ಲಿ ಮನಸ್ಸಿನ ಮೇಲೆ ಕ್ರಮವಾಗಿ ನಿಗ್ರಹ ಸಾಧಿಸದೆ, ತೀರ್ಥಕ್ಷೇತ್ರ ಗಿರಿ-ಗುಹೆಗೆ ಹೋಗಿ ಸಾಧನೆಗೈಯ್ಯುವೆವೆಂದರೆ ಕೇವಲ ಮನಸ್ಸಿನ ದುಗುಡ ಹೆಚ್ಚಾಗುವದು.

ಮಾತೆ-ಪಿತ, ಹೆಂಡಿರು-ಮಕ್ಕಳು, ಆಸ್ತಿ-ಪಾಸ್ತಿ ಇತ್ಯಾದಿಗಳಲ್ಲಿ ಸಿಲುಕಿದವನು, ಅವುಗಳಿಂದ ಮಾನಸಿಕವಾಗಿ ದೂರಾಗುವಂತೆ ಯತ್ನಿಸಬೇಕು. ಸಂಸಾರದಲ್ಲಿ ಆಸಕ್ತಿ

ಕಡಿಮೆ ಮಾಡಿ ಭಕ್ತಿ ಉಂಟಾಗಬೇಕು. ಆಗ ಮಾತ್ರ ಧ್ಯಾನಾದಿ ಕೈಗೂಡುವುದು. ಪ್ರಶಾಂತ ಸ್ಥಳ ಹುಡುಕಿ ಕುಳಿತು ಅಭ್ಯಾಸ ಮುಂದುವರೆಸಬಹುದು. ಮನೆಗೆದ್ದು, ಬಳಿಕ, ಮಾರು ಗೆದೆಯಬೇಕು.

೯೯

ಅರುಣುನುದಯಸಂಖ್ಯ ಯಸ್ತಮಾನಪುಸಂಖ್ಯ, ಜನನ ಮರಣ ಸಂಖ್ಯ ಜಾತಿಸ್ಯಂಖ್ಯ,
ದೀನಿನೆರಿಗಿ ಯೋಗಿ ಧೀರುಡ್ಯೆಯುಂಡುನು, ವಿಶ್ವದಾಭಿರಾಮ ವಿನುರ ವೇಮ.

ಅರುಣನುದಯ ಸಂಖ್ಯೆ ಅಸ್ತಮಾನ ಸಂಖ್ಯೆ
ಜನನ ಮರಣ ಸಂಖ್ಯೆ ಜಾತಿ ಸಂಖ್ಯೆ
ತಿಳಿದು ಯೋಗಿಯಿದನೆ ಧೀರನಾಗಿರುವನು.
ವಿಶ್ವದಾಭಿರಾಮ ಕೇಳು ವೇಮ.

ಸೂರ್ಯನು ಉದಯ ಹೊಂದುತ್ತಾನೆ; ಅಸ್ತನಾಗುತ್ತಾನೆ ಭೂಮಿ ತನ್ನ ಸುತ್ತು ತಿರುಗಲು ಬೇಕಾಗುವ ಕಾಲಾವಧಿ ಇಪ್ಪತ್ತುನಾಲ್ಕು ಘಂಟೆ. ಈ ಅವಧಿಯಲ್ಲಿ ಒಮ್ಮೆ ಸೂರ್ಯೋದಯವಾದಂತೆ, ಮತ್ತು ಒಮ್ಮೆ ಸೂರ್ಯಾಸ್ತವಾದಂತೆ ತೋರುವದು. ಸೂರ್ಯನಾದರೋ, ಉದಯವಾಗುವದೂ ಇಲ್ಲ; ಅಸ್ತನಾಗುವದೂ ಇಲ್ಲ. ಚಲಿಸುವ ದೆಲ್ಲ ಜಗತ್ತು.

ಅದೇ ರೀತಿ ಪ್ರಾಣಿಗಳು ಹುಟ್ಟುವದನ್ನೂ ಸಾಯುವದನ್ನೂ ಎಲ್ಲರೂ ನೋಡಿದ್ದಾರೆ. ಹುಟ್ಟು-ಸಾವು ಎಷ್ಟೊಂದು ಶಂಖ್ಯೆಯಲ್ಲಿ ನಿತ್ಯ ನಡೆದಿವೆ! ಹುಟ್ಟಿದಾಗ ದೇಹ ಧರಿಸಿ ಕೊಂಡು ಬಂದಂತೆ, ಮತ್ತು ಸತ್ತಾಗ ದೇಹ ತೊರೆದು ಹೋದಂತೆ ಏನೋ ಒಂದು ಇದೆ. ಅದು ಇದ್ದಂತೆ ಇದೆ. ಹೋದಂತೆ, ಬಂದಂತೆ ಅನಿಸುವದಷ್ಟೇ ಹೋಗುವದೂ ಬರುವದೂ ದೇಹವಷ್ಟೇ. ಜನನ-ಮರಣ ಸಂಖ್ಯೆ ಎಷ್ಟಾದರೂ, ಅವಿನಾಶಿಯಾದ, ಅಕ್ಷಯವಾದ ಸದ್ವಸ್ತು ಏಕವಾಗಿದೆ.

ಪ್ರಪಂಚದ ವಸ್ತುಗಳಲ್ಲಿ ಎಷ್ಟೊಂದು ವಸ್ತುಗಳಿವೆ ಕಲ್ಲು, ಕಟ್ಟಿಗೆ, ಧಾತು ಇತ್ಯಾದಿ ಜಾತಿ, ಸಸ್ಯ ಜಾತಿ, ಪ್ರಾಣಿ ಜಾತಿ, ಪಕ್ಷಿ ಜಾತಿ, ಮಾನವ ಜಾತಿ ಇತ್ಯಾದಿಗಳ ಸಂಖ್ಯೆ ಎಷ್ಟು? ಚಿತ್ತ ತನ್ನ ಸೂಕ್ಷ್ಮ-ಸ್ಥೂಲ ಅವಸ್ಥೆಯ ಸ್ಥಿತಿಯಮೇಲಿಂದ ಈ ಯಾವದೆ ಒಂದು ಜಾತಿಯಲ್ಲಿ ಸೇರಿಕೊಳ್ಳಬಹುದು. ಆದರೆ ಇವುಗಳೆಲ್ಲದರಲ್ಲಿ ಇರುವುದು ಒಂದೇ. ಯೋಗಿ ಇದನ್ನು ತಿಳಿದುಕೊಳ್ಳುತ್ತಾನೆ. ಅದರಿಂದಾಗಿ ಅವನು 'ನಿಶ್ಚಲನಾದ ಸೂರ್ಯನಂತೆ, ಜನನ-ಮರಣಾತೀತವಾದ ಸದ್ವಸ್ತು ಉಂಟು. ಅದುವೇ ವಿವಿಧ ಚರಾಚರ ಪ್ರಪಂಚದ ರೂಪದಲ್ಲಿ ವ್ಯಕ್ತವಾಗಿದೆ' ಎಂದು ತಿಳಿದ ಮೇಲೆ ಯೋಗಿ, ನಾವು ಕಾಣುವ ಬದಲಾವಣೆಯಿಂದ ಮೋಹಿತನಾಗದೆ ಸ್ಥಿರ ಬುದ್ಧಿ ಪಡೆಯುತ್ತಾನೆ.

೯೪

ಸತುಲ ಜೂಡ ಜೂಡ ಸಂಸಾರಿಕಾಗೋರು, ಸುತುಲು ಪುಟ್ಟ ಬುಟ್ಟ ವೆತುಲಬಡುನು
ಗತುಲು ಜೆಡಗ ಜೆಡಗ ಗರ್ಮಮುಂಚೇಡ್ಬುನು, ವಿಶ್ವದಾಭಿರಾಮ ವಿನುರ ವೇಮ.

ಸತಿಯು ನೋಡಿ ನೋಡಿ ಸಂಸಾರ ಕೋರುವ,
ಸುತರು ಹುಟ್ಟಿ ಹುಟ್ಟಿ ಸಂಕಟೆನುವ,
ಗತಿಯು ಕೆಟ್ಟು ಕಟ್ಟು ಕರ್ಮವೆಂದು ಅಳುವ,
ವಿಶ್ವದಾಭಿರಾಮ ಕೇಳು ವೇಮ.

ಲೋಕದ ಎರಡು ವಸ್ತುಗಳ ನಡುವಿನ ಆಕರ್ಷಣೆಯೇ ಕಾಮವೆನಿಸುವದು. ಕಾಮ ವಿರುವಾಗಿನ ಮಾನಸಿಕ ಸ್ಥಿತಿಗೆ ಆಸಕ್ತಿ ಎನುವರು. ಸತಿಯನ್ನು ಸದಾ ನೋಡಿ ನೋಡಿ ಆಸಕ್ತಿ ಉಂಟಾಗುವದು. ಇದರಿಂದ ಮನುಷ್ಯನು ಸಂಸಾರ ಕೋರುವನು.

ಸಂಸಾರ ಕೋರುವದರಿಂದ ಅನ್ನವು ರಸವಾಗಿ, ಮಾಂಸಖಂಡವಾಗಿ ರೇತಸ್ಸಾಗಿ, ಓಜಸ್ಸಿನ ರೂಪದಲ್ಲಿ ಮೆದುಳಿಗೆ ಹೋಗುವದಕ್ಕೆ ಬದಲು; ಕಲುಷಿತ ಭೋಗಾಸಕ್ತಿಯಿಂದ ಇದು ಅಂತಃ ಬಿಂದುರಸವಾಗುವದು. ಬಿಂದು ರಸದಲ್ಲಿಯೇ ಗರ್ಭ ಮೊದಲಾಗುವದು. ಇದನ್ನು ಸ್ತ್ರೀಯೋನಿಯಲ್ಲಿ ವಿಸರ್ಜಿಸಿದಾಗ, ಮೊದಲನೆಯ ಜನ್ಮವೆನ್ನುತ್ತಾರೆ. ಸ್ತ್ರೀಯ ದೇಹದಲ್ಲಿರುವ 'ಓವ್ಹಾ'ದಿಂದ ಪಿಂಡಾಂಡ ನಿರ್ಮಾಣವಾಗುತ್ತದೆ. ಕೊನೆಗೆ ಸ್ತ್ರೀಯೋನಿ ಯಿಂದ ಪ್ರಸವ ಕಾಲಕ್ಕೆ ಶಿಶು ಹೊರಬರುತ್ತದೆ. ಸ್ತ್ರೀಪುರುಷರ ಓಜಸ್ಸಿನ ಅಂಶವೇ ಶಿಶು ವಿನ ದೇಹವಾಗುವದು. ಮುಕ್ಕಳಾದ ಮೇಲೆ ಅವರ ಪಾಲನೆ-ಪೋಷಣೆಯ ಭಾರ ಹೊರ ಬೇಕಾಗುತ್ತದೆ. ಇದೆಲ್ಲ ಏನೋ ಸಂಕಟದಂತೆ ಭಾಸವಾಗುವದು.

ಇಂಥ ಸಂಕಟದಿಂದ ಪಾರಾಗಲು ವಾಮ ಮಾರ್ಗಗಳನ್ನು ಅನುಸರಿಸುವ ಸಂಭವ ವುಂಟು. ಹೀಗೆ ನಡೆದರೆ ಅಂಥ ನಡೆನಳಿಯು ಅಂದರೆ ಗತಿಯು ಕೆಡುವದು, ಅಸತ್ಯ, ಅನ್ಯಾಯದ ಮಾರ್ಗ ತುಳಿಯುವರು. ಅನಾಚಾರವೇ ದುಷ್ಕರ್ಮ. ಹೀಗೆ ಗತಿಯು ಕೆಡುತ್ತ ಹೋದಂತೆ, ಒಂದು ಕರ್ಮ ಇನ್ನೊಂದು ಕರ್ಮಕ್ಕೆ ಬೀಜವಾಗುತ್ತದೆ. "ಅಯ್ಯೋ ಕರ್ಮವೇ?" ಎಂದು ಗತಿಗೆಟ್ಟವನು ಹಣೆ ಬಡಿದುಕೊಳ್ಳುತ್ತಾನೆ. ಸಕಾಲ ದಲ್ಲಿ ಎಚ್ಚರ ವಹಿಸಬೇಕು

೯೫

ಮಾನಸಮುನ ಮಂಚಿ ಮಲ್ಲೆಪೂಲಚವಿಕೆ, ಬಾವಿದೋಟ ಜೇಸಿ, ಬಾಲಗೂಡಿ,
ಭೋಗಿದಯ್ಯೆದನನ ಜೋಯಜೋಕಾಲಂಬು, ವಿಶ್ವದಾಭಿರಾಮ ವಿನುರ ವೇಮ.

ಮನಸಿನಲ್ಲಿ ಮಿನ್ನ ಮಲ್ಲಿಗೆಯ ಮಂಟಪ
ಭಾವಿ ತೋಟ ಮಾಡಿ ಬಾಲೆ ಕೂಡಿ,
ಭೋಗಿಯೊಗುನೆಂಬ ಬಯಕೆ; ಕಾಲ ಹೋಯ್ತು.
ವಿಶ್ವ ದಾಭಿರಾಮ ಕೇಳು ವೇಮ

'ಮನಸ್ಸಿನಲ್ಲಿ ಮುಂಡಿಗೆ ತಿಂದರೆ ದೋದಿಯ ಲೆಕ್ಕ ಕೊಡುವವರಾರು?' ಎಂಬ ಜಾಣ ನುಡಿ ಇದೆ. ನಮಗೆ ಎಟುಕದ ವಸ್ತುಗಳನ್ನು ಪಡೆಯುವ ಆಸೆ ಹೊಂದಿದರೆ, ಅವುಗಳನ್ನು ಪಡೆಯುವದೆಂತು? ಭೋಗಿಯಾಗುವ ಆಸೆಯುಂಟಾದರೆ, ತರುಣಿಯೊಬ್ಬ ಳನ್ನು ಕೂಡಿಕೊಂಡರಾಯಿತು. ಆದರೆ, ಬಾಲೆಯೊಬ್ಬಳನ್ನು ಕೂಡಿ, ಅವಳು ಬೆಳೆದು ದೊಡ್ಡವಳಾದ ಮೇಲೆ ಅವಳೊಂದಿಗೆ ಭೋಗ ಸುಖ ಹೊಂದುವ ಆಸೆ ಇರಿಸುವದಾಗಲಿ, ಏತನ್ಮಧ್ಯೆ ಚಿಕ್ಕ ಗದ್ದೆ ಕೊಂಡು ಭಾವಿ ತೋಡಿಸಿ, ತೋಟ ಮಾಡಿ, ಮಲ್ಲಿಗೆ ಬಳ್ಳಿ ಹಬ್ಬಿಸಿ, ಮಂಡಪ ಮಾಡಿ, ಬೆಳೆದಮೇಲೆ ಬಾಲೆಯೊಂದಿಗೆ ಕೂಡಿ ಭೋಗಿಯಾಗಬೇಕೆಂದು ಮನಸ್ಸಿನಲ್ಲಿ ಗಾಳಿಗೋಪುರ ಕಟ್ಟುವವನ ಇಚ್ಛೆ ಈಡೇರುವದೆಂತು? ಇಚ್ಛೆಲ್ಲ ಆಗುವದರಲ್ಲಿ ಕಾಲ ಉರುಳುತ್ತದೆ. ಅವನಿಗೆ ಮುಪ್ಪು ಅಡರುತ್ತದೆ. ಅನಂತರ ಭೋಗದ ಕನಸು-ನನಸಾಗದು.

ಅದೇ ರೀತಿ, ಬಹ್ಮಜ್ಞಾನ ಮಾಡಿಕೊಳ್ಳಲು ಈಗ, ಆಗ ಎಂದು ಕಾಲ ತಳ್ಳುತ್ತ, ಸಾಧನೆಮಾಡುವದನ್ನು ಮುಂದೆ ಮುಂದೆ ತಳ್ಳಿದರೆ, ಕಾಲ ಮೀರಿ ಹೋಗುವದು.

೯೬

ಮುರ್ಮಮೆರುಗಲೇಕ ಮತಮುಲು ಕಲ್ಪಿಂಚಿ, ಯುರ್ವಿಜನುಲು ದುಃಖಿ ಮೊಂದುಚುಂದ್ರು
ಗಾಜುಟಿಂಟ ಗುಕ್ಕ ಕಳವಳ ಪಡುರೀತಿ, ವಿಶ್ವದಾಭಿರಾಮ ವಿನುರ ವೇಮ.

ಮರ್ಮ ತಿಳಿಯಲಿಲ್ಲ! ಮತಗಳನು ಕಲ್ಪಿಸಿ,
ಧರೆಯ ಜನರಿಗುಂಟು ದುಃಖವಷ್ಟೆ;
ಗಾಜು ಮನೆಯ ನಾಯಿ ಗಾಸಿಪಡುವರೀತಿ.
ವಿಶ್ವದಾಭಿರಾಮ ಕೇಳು ವೇಮ

'ಏಕಂ ಸತ್ ವಿಪ್ರಾ ಬಹುಧಾ ವದಂತಿ'. ಇರುವುದೊಂದೇ. ಪ್ರಾಜ್ಞರು ಅನೇಕ ವಿಧವಾಗಿ ಕರೆಯುತ್ತಾರೆ. ಕೆಲವರು ಅಗ್ನಿಯೆಂದೂ, ಕೆಲವರು ಯಮ ಎಂದೂ, ಕೆಲವರು ಮಾತರಿಶ್ವ ಎಂದೂ ಕರೆಯುವರು. ಇಂಥ ಉದಾತ್ತ ಭಾವನೆ ಋಗ್ವೇದದ ಕಾಲದಲ್ಲಿಯೂ ಮೂಡಿತ್ತು. "ಹೇಗೆ ಹರಿಯುತ್ತಿರುವ ನದಿಗಳು ನಾಮ-ರೂಪಗ ಳನ್ನು ಬಿಟ್ಟು ಸಮುದ್ರದಲ್ಲಿ ಅದೃಶ್ಯವಾಗುವವೋ, ಹಾಗೆಯೇ ವಿದ್ವಾಂಸನು ನಾಮ ರೂಪ ಗಳಿಂದ ಬಿಡುಗಡೆಯನ್ನು ಹೊಂದಿ ಪರಾತ್ಪರನೂ ದಿವ್ಯನೂ ಆದ ಪುರುಷನನ್ನು ಹೊಂದು ವನು." (ಮುಂಡಕ ಉಪ. ೬—೨—೮) ಯಾರು ಹಿಂದುಗಳ ಬ್ರಹ್ಮನೋ, ಬೌದ್ಧರ ಬುದ್ಧನೋ, ಯಹೂದ್ಯರ ಜಿಹೋವನೋ, ಯಾರು ಜಾರತೂಷ್ಟ್ರ ಸಂಪ್ರದಾಯದ ಅಹುರ ಮಾಸ್ದನೋ, ಕೈಸ್ತರ. ಸ್ವರ್ಗದಲ್ಲಿರುವ ತಂದೆಯೋ, ಮುಸಲ್ಮಾನರ ಅಲ್ಲಾನೋ, ಅವನು ಒಬ್ಬನೇ ಒಬ್ಬ. 'ಏಕಂ ಸಂತಂ ಬಹುಧಾ ಕಲ್ಪಯಂತಿ' ಒಬ್ಬನನ್ನೇ ಸಂತ ಜನರು ಬಹು ವಿಧವಾಗಿ ಕಲ್ಪಿಸುತ್ತಾರೆ. ಶೈವರ ಶಿವ, ವೈಷ್ಣವರ ವಿಷ್ಣು, ಶಾಕ್ತರ ಜಗ ದ್ಯೋನಿಯಾದ ಆದಿಶಕ್ತಿ, ಕೌಮಾರರ ಕಮಾರದೇವ, ಗಾಣಪತ್ಯರ ಗಣಪತಿ. ಸೌರರ ಸೂರ್ಯ ಎಲ್ಲವೂ ಒಂದೇ ಸದ್ವಸ್ತುವಿನ ನಾಮಬೇಧಗಳಷ್ಟೇ.

‘ ಈಶಾವಾಸ್ಯಮಿದಂ ಸರ್ವಂ, ಯತ್ಕಿಂಚ ಜಗತ್ಯಾಂ ಜಗತ್ ” ಈ ಜಗತ್ತಿನಲ್ಲಿ ಚಲನಾತ್ಮಕವಾದದ್ದು ಏನೇನು ಇದೆಯೋ ಅದೆಲ್ಲದರಲ್ಲಿ ಈಶನು ವಾಸವಾಗಿದ್ದಾನೆ. ಇದರ ಮರ್ಮ ತಿಳಿಯದೆ ಜನರುತಮ್ಮ ಮನಸ್ಸಿನ ಕಲ್ಪನೆಯ ದೇವತೆಗಳನ್ನು ಸೃಷ್ಟಿಸಿ ಕೊಂಡು, ಅವು ಗಳ ಸುತ್ತ ಪುರಾಣಾದಿ ಕಥೆಗಳನ್ನು ಹೆಣೆದು, ಮತಗಳನ್ನು ಸೃಷ್ಟಿಸಿದರು. ಇದರಿಂದ ಭೂಮಿಯ ಮೇಲಿನ ಜನರಲ್ಲಿ ಪಂಗಡಗಳಾಗಿ, ಒಂದು ಒಂದು ಮತದವರು ಬೇರೊಂದು ಮತದವರನ್ನು ದ್ವೇಷಿಸುವಂತಾಗಿದೆ. ಮುಸ್ಲಿಂ ಮತಗಳಂಥ ಮತಗಳಿಂ ದಂತೂ ದೇವರ ಹೆಸರಿನಲ್ಲಿ ರಕ್ತವೇ ಹರಿದಿದೆ. ಒಂದು ಮತದವರು ಶ್ರೇಷ್ಠರಲ್ಲ; ಇನ್ನೊಬ್ಬರು ಕೀಳಲ್ಲ. ಇಬ್ಬರೂ ಗಾಜಿನ ಮನೆಯ ನಾಯಿ, ಕನ್ನಡಿಯಲ್ಲಿ ತನ್ನನ್ನೇ ಕಂಡು ಬೊಗಳಿದಂತೆ; ಕಷ್ಟಪಟ್ಟಂತೆ.

೮೯೭

ಮುಂಜಿಗಂಧಮುಗನ ಮನಸುರಂಜಿಲ್ಲುನು, ಎಂತೋ ವಾಸನನುಚು ನೆನ್ನು ಚಂದ್ರು
ತಾಮೆರುಂಗಲೇರು ತಮಪೂರ್ವವಾಸನಲ್ ವಿಶ್ವದಾಭಿರಾಮ ವಿನುರ ವೇಮ.

ಒಳ್ಳೆ ಗಂಧ ಕಂಡು, ಮನಸು ರಂಜಿಸುವುದು;
ಎಷ್ಟು ವಾಸನೆಂದು ಎಣಿಸುತಿಹರು ?
ತಾನೆ ಅರಿಯದಿಹರು ತಮ ಪೂರ್ವವಾಸನೆ!
ವಿಶ್ವದಾಭಿರಾಮ ಕೇಳು ವೇಮ

ಒಳ್ಳೇ ಗಂಧದ ಮರವನ್ನು ಎಲ್ಲಿಯಾದರೂ ಕಂಡಾಗ, ಮನಸ್ಸು ರಂಜಿಸುವದು. ಏತಕ್ಕಾಗಿ ? ಗಂಧದ ಮರ ದೂರದಲ್ಲಿದ್ದರೂ ಅದರ ಸುವಾಸನೆ ಎಲ್ಲಿಡೆಗೆ ಪಸರಿಕೊಂಡಿರುತ್ತದೆ. ಅಬ್ಬಾ! ಎಷ್ಟೊಂದು ವಾಸನೆ! ಎಂದು ಮನದಲ್ಲಿ ಅಚ್ಚರಿ ಪಡುವರು. ಗಂಧದ ವಾಸನೆಯು ಮನಸ್ಸಿಗೆ ಅದರ ಬಣ್ಣ ಕೊಟ್ಟುಬಿಟ್ಟಿದೆ.

ಇಷ್ಟೆಲ್ಲ ವಾಸನೆಯನ್ನು ಗುರುತಿಸಿ, ಆನಂದಿಸುವ ಮನುಷ್ಯ ತನ್ನ ಪೂರ್ವ ವಾಸನೆಗಳನ್ನು ತಿಳಿದುಕೊಳ್ಳನೇಕೆ? ಮನಸ್ಸು ವಸ್ತುಗಳನ್ನು ಗ್ರಹಿಸುವದು ಅವುಗಳ ವರ್ಣಗಳಿಂದ ತಾನೇ ಬೇರೆ ಬೇರೆ ವರ್ಣಗಳ ತರಂಗಗಳು ಬೇರೆ ಬೇರೆ ವಿಧವಾಗಿವೆ. ಇವುಗಳೇ ಮನಸ್ಸಿನಲ್ಲಿ ಚಿತ್ತವೃತ್ತಿಗಳಾಗಿ ಸಂಚಯವಾಗುತ್ತವೆ. ಇಂಥ ಸಂಸ್ಕಾರಗಳೇ ಮನುಷ್ಯನ ಸ್ವಭಾವವಾಗಿ ವ್ಯಕ್ತವಾಗುತ್ತದೆ.

ಮನುಷ್ಯ ಮಾಡುವ ಪಾಪ-ಕರ್ಮದ ಹಿಂದೆ ಅವನು ಅಳವಡಿಸಿಕೊಂಡು ಬಂದ, ಅನುಸರಿಸಿ ಹೋದ, ವಿಷಯ ವಾಸನೆಗಳನ್ನು ಗುರುತಿಸಬಹುದು. ಒಬ್ಬನು ಕಳವು ಮಾಡಿದನೆಂದು ತಿಳಿಯಿರಿ. ಅವನು ದೈಹಿಕವಾಗಿ ಕಳವು ಮಾಡುವ ಮೊದಲು, ಮಾನಸಿಕವಾಗಿ ಆ ವಸ್ತು ತನ್ನದಾಗಲೆಂದು ಆಕೆಪಟ್ಟಿರುತ್ತಾನೆ. ಹೆರವರ ವಸ್ತು ಎತ್ತಿಹಾಕುವದರಿಂದ ತನ್ನ ಸುಖ ಎಂದು ನಿರ್ಧರಿಸಿರುತ್ತಾನೆ. ತನಗೆ ಧರ್ಮದಿಂದ ಆದ ಪ್ರಾಪ್ತಿಯು

ಸಾಲದು, ತನ್ನ ಸುಖವು ಇತರರ ಸುಖದಲ್ಲಿ ಪಾಲುಗೊಳ್ಳುವದರಲ್ಲಿ ರದೆ, ಅವರಿಗೆ ನೋವು ಮಾಡುವದರಲ್ಲಿ ಉಂಟು, ಎಂದು ತಿಳಿದು ದರ್ವಾಸನೆ ಅಂಟಿಸಿಕೊಂಡಿರುತ್ತಾನೆ. ಇಂಥ ಪೂರ್ವವಾಸನೆಗಳನ್ನು ತಿಳಿಯುತ್ತ ಹೋದರೆ ಅವುಗಳ ಪುನರುಕ್ತಿಯಾಗದು.

೮೯೮

ಪೂತಗಡ್ಡಿಕೇಲ ಪುಟ್ಟಂಚೆ ವಾಸನ, ಕನಕಮು ತನಕೇಮಿ ಕಲ್ಲಜೇನೆ ?
ಬ್ರಹ್ಮಚೇತಲೆಲ್ಲ ಬಾಡ್ಮೆನ ಚೇತಲು, ವಿಶ್ವದಾಭಿರಾಮ ವಿನುರ ವೇಮ.

ಗಂಧ ಕಡ್ಡಿಗೆಂತು ಕೂಡಿದುದು ವಾಸನೆ.?
ಕನಕವು ತನಗೇನು ಕೆಡುಕು ಗೆಯ್ತು?
ಬ್ರಹ್ಮ ಚೇಷ್ಟೆಯೆಲ್ಲ ಬರಿಯ ಹಾಳುಕೆಲಸ !
ವಿಶ್ವದಾಭಿರಾಮ ಕೇಳು ವೇಮ.

ಗಂಧದ ಕಡ್ಡಿಗೆ ಎಷ್ಟೊಂದು ಸುವಾಸನೆ ಇದೆಯಲ್ಲಾ ! ಅಂಥ ಸುವಾಸನೆ ಅದರೊಂದಿಗೆ ಹೇಗೆ ಕೂಡಿತು ? ಅದು ವನಸ್ಪತಿಜನ್ಯವೆಂದು ಹಾಗಾಗಿರಬಹುದೇ ?. ಇಲ್ಲ. ಉಳಿದ ಗಿಡ-ಮರಗಳಿಗೆ ಆ ಗುಣವಿಲ್ಲ. ವಾಸನೆ ಘನ ಪದಾರ್ಥದ ತನ್ಮಾತ್ರೆಯೆಂದು ಉಂಟಾಯಿತೋ?. ಅದೂ ಸರಿಯೆಲ್ಲ. ಬಂಗಾರ ಸಹ ಘನಪದಾರ್ಥ ತಾನೇ? ಸರ್ವರೂ ಮೋಹಗೊಂಡು, ತರೆ ತರೆದ ಆಭರಣ-ಅಲಂಕಾರಗಳ ರೂಪದಲ್ಲಿ ತೊಡುವ ಬಂಗಾರಕ್ಕೆ ಅಂಥ ಸುವಾಸನೆಯನ್ನು ಕೊಟ್ಟಿದ್ದರೆ, ಎಷ್ಟೊಂದು ಜೆನ್ನಾಗಿತ್ತು ! ಎಲ್ಲರೂ ಸಂತತವಾಗಿ ಸುವಾಸನೆಯ ಸುಖ ಅನುಭವಿಸಬಹುದಾಗಿತ್ತು.

ಆದರೇನು? ಪ್ರಯೋಜನದ ದೃಷ್ಟಿಯಿಂದ ವಿಚಾರ ಮಾಡಿದಾಗ ಇದೆಲ್ಲ ವಿಚಿತ್ರವೆನಿಸುತ್ತದೆ. ಹಾಳು ಕೆಲಸವೆನಿಸುತ್ತದೆ. ಬ್ರಹ್ಮ ಸೃಷ್ಟಿಯಲ್ಲಿ ಪ್ರಯೋಜನವಿಲ್ಲ. “ನ ಪ್ರಯೋಜನವತ್ತ್ವಾತ್ ! ಲೋಕವತ್ ತು ಲೀಲಾಕೈವಲ್ಯಮ್” (ಬ್ರಹ್ಮ ಸೂತ್ರ ೨-೧-೩೩,೩೩) “ಪ್ರಯೋಜನ ವಿಲ್ಲದಿರುವದರಿಂದ (ಬಹ್ಮ ಜಗತ್ಕಾರಣನಲ್ಲ ಎನ್ನುವರು) ಆದರೆ (ಬ್ರಹ್ಮಸೃಷ್ಟಿಯು) ಲೋಕದಂತೆ ಕೇವಲ ಲೀಲೆಯಾಗಿದೆ.”

ಹುಟ್ಟು-ಮುಪ್ಪು-ಸಾವು, ಅನಂತ ದುಃಖವು ಹಬ್ಬಿರುವ ಪ್ರಪಂಚವು ಪ್ರಯೋಜನ ದೃಷ್ಟಿಯಿಂದ ಹಾಳುಕೆಲಸ- ಆದರೆ ಅದು ಕೇವಲ ವಿಧಿಯ ಲೀಲೆ ಎಂದು ತಿಳಿದಾಗ, ನಿಜದ ಜ್ಞಾನವಾಗುವದು.

೮೯೯

ನಿಂಗಿಕೆಗಯುವಾಡು ನೆರಿಲೋಕಮುನಲೇಡು, ಬಂಗುದ್ರಾಗುವಾಡು ಬಲಿಯ ಬೇಡು,
ಕೊಂಗಯೋಗಮುಲನು ಗೋರ್ಕುಲಡಂಗುನಾ, ವಿಶ್ವದಾಭಿರಾಮ ವಿನುರ ವೇಮ.

ನಿಂತುನೆಗೆಯುವವನು ನಿಜಲೋಕದೊಳಿಲ್ಲ.
ಭಂಗಿ ಕುಡಿಯುವವನು ಬಲಿಷ್ಠ ಲ್ಲ;
ಬಕದಯೋಗದಲ್ಲಿ ಬಯಕೆ ಬಯಲಾಗವು.
ವಿಶ್ವದಾಭಿರಾಮ ಕೇಳು ವೇಮ

ನಿಂತುಕೊಂಡವನು ಎತ್ತರವಾಗಿ ಜಗಿಯೆಬಲ್ಲನೇ ? ಇಲ್ಲ. ಎತ್ತರ ಜಿಗಿತದಲ್ಲಿ ಪಾಲುಗೊಳ್ಳುವ ಸ್ಪರ್ಧಾಳು ದೂರದಿಂದ ವೇಗವಾಗಿ ಓಡಿ ಬರುತ್ತಾನೆ. ಓಡುವಾಗಿನ ಶಕ್ತಿಸಂಚಯವನ್ನೇ ಲಂಬ ರೇಖೆಯಲ್ಲಿ ಪರಿವರ್ತಿಸಲು ಯತ್ನಿಸುತ್ತಾನೆ. ಎಷ್ಟು ವೇಗವಾಗಿ ಓಡಿ ಬಂದಿರುವನೋ, ಅಷ್ಟು ಮೇಲಕ್ಕೆ ನೆಗೆಯಬಲ್ಲನು. ಇದಕ್ಕೆಲ್ಲ ಸಾಧನೆ ಬೇಕು. ಮಾರ್ಗ ದರ್ಶನವೂ ಬೇಕು. ಇದ್ದಕ್ಕಿದ್ದ ಹಾಗೆ ನಿಂತ ಮನುಷ್ಯ ಮೇಲಕ್ಕೆ ನೆಗೆಯುವ ದನ್ನು ಯಾರೂ ಕಂಡಿಲ್ಲ. ಅಂಥವರಾರೂ ನಿಜಲೋಕದಲ್ಲಿ ಇಲ್ಲ.

ದೇಹದಾರ್ಢ್ಯದ ವಿಷಯದಲ್ಲಿಯೂ ಅಷ್ಟೇ. ಶಕ್ತಿವರ್ಧನೆಯಾಗಬೇಕಾದರೆ, ವ್ಯಾಯಾಮ ನಿಯಮ ಪಾಲನೆ ಅವಶ್ಯ. ಆರೋಗ್ಯ ಕಾಪಾಡಿಕೊಳ್ಳುವದೇ ಬಲಸಂವರ್ಧನೆಗೆ ಮೂಲ. ಆದರೆ ಭಂಗಿ ಕುಡಿದವನು ನರಗಳೂ ಕೆಲ ಹೊತ್ತು ಉತ್ತೇಜಿತವಾಗಿ ಅವನೂ ಸಹ ಬಲಿಷ್ಠನಂತೆ ಪ್ರವರ್ತಿಸುತ್ತಾನೆ. ಆದರೆ ಇಂಥ ಆಟಾಟೋಪ ಘಂಟೆಗಳ ವರೆಗೆ ಮಾತ್ರ. ಅವನನ್ನು ಬಲಿಷ್ಠನೆಂದು ಕರೆಯುವದೆಂತು?

ದೈಹಿಕ ಶಕ್ತಿ ಸಂಪಾದನೆಗೆ ಸಾಧನೆ ಎಷ್ಟು ಅವಶ್ಯವೋ, ದೈವಿಕ ಶಕ್ತಿ ಸಂಪಾದನೆಗೂ ಸಾಧನೆಯು ಅಷ್ಟೇ-ಅದಕ್ಕಿಂತ ಹೆಚ್ಚಿಂದರೂ ಸರಿ ಅವಶ್ಯ. ಸಾಧನೆ ಶಾಸ್ತ್ರಬದ್ಧವಾಗಿರಬೇಕು. ಗುರುವಿನ ಮಾರ್ಗದರ್ಶನದಂತೆ ಸಾಗಬೇಕು. ಉಪಾಸನೆ ಮಾಡುವೆವೆಂದು ಯಾವುದೋ ವಿಷಯವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರಿಕರಿಸಿದರೇನು ಬಂತು? ಬಕಪಕ್ಷಿ ನೀರುಜಂತುವಿನ ಮೇಲೆ ತದೇಕಚಿತ್ತದಿಂದ ಧ್ಯಾನ ಮೂಡಿದಂತೆ ಅಷ್ಟೇ. ಚಿತ್ತವನ್ನು ಒಂದೇ ವಸ್ತುವಿನ ಮೇಲೆ ನಿಲ್ಲಿಸುವದು, ಯೋಗ ಸಾಧನೆಯ ಅಂಗ. ಹಾಗಾದರೆ ಬಕವೂ ಯೋಗ ಮಾಡಿದಂತೆ ಆದೀತು! ಆದರೆ ಬಕಯೋಗದಿಂದ ಬಯಕೆ ಬಯಲಾಗವು. ಒಂದು ಜಲಕ್ರಿಮಿ ಸಿಕ್ಕಾಗ ಇನ್ನೊಂದು ಬೇಕೆನ್ನಿಸುತ್ತದೆ. ಬ್ರಹ್ಮೋಪಾಸನೆಯಲ್ಲಿ ಗಮ್ಯ ಸ್ಥಾನಮುಟ್ಟಿದರೆ, ಕೋರಿಕೆಗಳ ಹುಟ್ಟು ಅಡಗುತ್ತದೆ.

೯೦೦

ಕಂಟಮಂಟಜೇತ ಗಾಮಿನಿದಹಿಯಿಂಚಿ, ಕಾಮಮುನನು ಗಡಕು ಗೌರಿಗೂಡಿ,
ನಟ್ಟಶಿವುನಿನ್ಯೆನೆ ನಂಟಿನು ಗರ್ಕಂಬು. ವಿಶ್ವದಾಭಿರಾಮ ವಿನುರ ವೇಮು.

ಕಣ್ಣಿನ ಉರಿಯಿಂದ ಕಾಮನನ್ನು ದಹಿಸಿ,
ಕಾಮದಿಂದ ಮತ್ತೆ ಗೌರಿ ಕೂಡಿ,
ಅಂಥ ಶಿವನಾದರು ಅಂಟತಪ್ಪಿ ಕರ್ಮ
ವಿಶ್ವದಾಭಿರಾಮ ಕೇಳು ವೇಮು

ವಿಷಯೇಂದ್ರಿಯಗಳು ವಿಷಯ ವಸ್ತುಗಳ ಸಂಪರ್ಕ ಹೊಂದಿದಾಗ ಲಭಿಸುವ ಭೋಗ ಸುಖವೇ ' ಕಾಮ ' ವೆನ್ನಿಸುವುದು. ಕಾಮವನ್ನು ಅದುಮಿ ಇಂದ್ರಿಯ ನಿಗ್ರಹ ಸಾಧಿಸಿದವನು ಶಿವ ಸ್ಥಿತಿಗೇರಿದವನು. ಆಸೆ ಇನ್ನೂ ಉಳಿದಿರಬಹುದು. ಆಗ ಯೋಗಿ ಶಿವ ಸ್ಥಿತಿಯಿಂದ ಸಂಸಾರಕ್ಕೆ ಬೀಳುವನು. ಶಿವಯೋಗಿ ಸಂಸಾರ ಯೋಗಿಯ ಸ್ಥಿತಿಗಿಳಿಯುವನು. ಇದೆಲ್ಲವೂ ಕರ್ಮ ಫಲದಿಂದ. ಇದನ್ನೇ ಪುರಾಣ ಕಥೆ ಎಷ್ಟು ಸುಂದರವಾಗಿ ಬಣ್ಣಿಸಿದೆ ನೋಡಿರಿ :

ಶಿವನ ಅರ್ಧಾಂಗಿನಿ; ಪಾರ್ವತಿ. ಪಾರ್ವತಿ ದಕ್ಷಪ್ರಜಾಪತಿಯ ಮಗಳು. ತನ್ನ ತಂದೆ ಯಜ್ಞ ಮಾಡಲುದ್ಯುಕ್ತನಾದುದನ್ನು ನಾರದರಿಂದ ಕೇಳಿ ಪಾರ್ವತಿ ಸೋದರಿಯರನ್ನು ಕಾಣಲು ತವಕಗೊಂಡಳು. ದಕ್ಷ ಪ್ರಜಾಪತಿಗೆ ಬೂದಿ ಬಡಕ ಶಿವನನ್ನು ಕಂಡಾಗದು. ಆಮಂತ್ರಣ ಕೂಡ ಕಳಿಸಲಿಲ್ಲ. ಆದರೆ ಪಾರ್ವತಿಯ ಆಗ್ರಹದಿಂದಾಗಿ ಶಿವನೂ ಯಜ್ಞ ಸಮಾರಂಭಕ್ಕೆ ಬಂದ. ದಕ್ಷ ಪ್ರಜಾಪತಿ ಮಗಳ ಬರವನ್ನು ಕಂಡು ಸಂತೋಷಿಸಿದರೂ ಶಿವನ ಸ್ವಾಗತ ಸತ್ಕಾರ ಮಾಡಲಿಲ್ಲ. ಪಾರ್ವತಿ ಮೆತ್ತಗೆ ವಿಚಾರಿಸಿದಳು. ದಕ್ಷ ಪ್ರಜಾಪತಿ ಶಿವ ನಿಂದೆಗೆ ಮೊದಲು ಮಾಡಿದ. " ಶಿವ ನಿಂದೆ ಕೇಳಲಾರೆ. ಇಗೋ ನೀನು ಕೊಟ್ಟ ದೇಹವನ್ನು ಯೋಗ ಶಕ್ತಿಯಿಂದ ಸುಟ್ಟು ಭಸ್ಮ ಮಾಡಿಕೊಳ್ಳುವೆ ಎಂದು ಪಾರ್ವತಿ, ದಕ್ಷನು ನೀಡಿದ ದೇಹ ತೊರೆದಳು. ಶಿವ ' ಸತಿ ' ಯ ಕಳೇವರ ಹೊತ್ತು ತಿರುಗತೊಡಗಿದ ದೇವತೆಗಳಿಗೆ ದಿಗಿಲು ಆಯ್ತು. ಶಿವನನ್ನು ಪೂರ್ವ ಸ್ಥಿತಿಗೆತರಲು ಕಾಮನನ್ನು ಕಳಿಸಿದರು. ಕಾಮ ಬಂದು ತನ್ನ ಯುಕ್ತಿ ಪ್ರಯೋಗಿಸಿದ. ಶಿವ ಸಿಟ್ಟಿಗೆದ್ದ. ಅಗ್ನಿ ನೇತ್ರ ತೆರೆದ, ಕಾಮ ಸುಟ್ಟು ಹೋದ. ಕಾಮನ ಪ್ರೀಯಸಿ ರತಿ ಮೊರೆಯಿಟ್ಟಳು. ಕಾಮ ತನ್ನ ರೂಪ ಪಡೆಯಲಿ, ಎಂದು ಹರಸಿದ ಶಿವ ಪೂರ್ವ ಸ್ಥಿತಿಗೆ ಬಂದ. ಕಾಮ ಬದುಕಿಕೊಂಡ. ಶಿವ ಮತ್ತೆ ಗೌರಿಯನ್ನು ವರಿಸಿ ನಡೆದ. ವಿರಹ, ಕೋಪ, ಸಂಸಾರ ಇತ್ಯಾದಿ ಕರ್ಮಫಲಗಳು ಎಂಥ ದೊಡ್ಡ ಯೋಗೆಯನ್ನೂ ಬಿಡಲಾರವು.

ಬ್ರಹ್ಮ ಘನವೆಂದೊಡೆ, ಬ್ರಹ್ಮನ ನುಂಗಿತ್ತು ಮಾಯೆ ! ವಿಷ್ಣು ಘನವೆಂದಡೆ, ವಿಷ್ಣುವ ನುಂಗಿತ್ತು ಮಾಯೆ ! ರುದ್ರ ಘನವೆಂದಡೆ, ರುದ್ರನ ನುಂಗಿತ್ತು ಮಾಯೆ ! ತಾ ಘನವೆಂದಡೆ, ತನ್ನ ನುಂಗಿತ್ತು ಮಾಯೆ ! ಸರ್ವವೂ ನಿನ್ನ ಮಾಯೆ ! ಒಬ್ಬರನ್ನೊಳಕೊಂಡಿತ್ತೆ? ಹೇಳಾ ಗುಹೇಶ್ವರಾ ? (-ಅಲ್ಲಮಪ್ರಭು. ವಚನ)

೯೦೦

ಹರಿಕಿದೊರಕನಂದು ರಾಸಿರಿಯಾಪ್ಪುಡೇ ದೊರಕೆಗಂದೆ ? ವಿಷಮು ಹರುನ ಕರಯು
ನೆವನಿಕೆಟ್ಟುಲಗುನೊ ಯೆವ್ವಡೆರುಂಗುನು ? ವಿಶ್ವದಾಭಿರಾಮ ವಿನುರ ವೇಮ.

ಹರಿಗೆ ದೊರಕಿತಲ್ಲ ಸಿರಿಯು ಆಗಲಷ್ಟೆ,
ದೊರಕಿತಲ್ಲ ವಿಷವು ? ಹರಗೆ ಅರಿಯೊ.
ಯಾರಿಗೆಂತೊ ಏನೊ, ಯಾರು ಅರಿಯಬಹುದು ?
ವಿಶ್ವದಾಭಿರಾಮ ಕೇಳು ವೇಮು

ಪುರಾಣ ಕಥೆಗಳಿಂದ ಅನೇಕ ಮಾರ್ಮಿಕ ತತ್ತ್ವಗಳನ್ನು ತಿಳಿಯಬಹುದು. ಅದ್ಭುತ ಕಲ್ಪನೆಯ ಈ ಸುಂದರ ಕಥೆಗಳನ್ನು ತತ್ತ್ವ ವಿವರಿಸುವಾಗ ಉದ್ಧರಿಸುತ್ತಾರೆ.

ಸಮುದ್ರ ಮಂಥನದ ಕಥೆಯನ್ನು ನೋಡಿರಿ. ಸಮುದ್ರದ ಆಳದಲ್ಲಿ ಮುತ್ತು ರತ್ನಗಳಿರುವುದು ಯಾರಿಗೆ ಗೊತ್ತಿಲ್ಲ ? ಮು[illegible] ಶ್ರೀ ಲಕ್ಷ್ಮಿಯ ಸಂಕೇತ ತಾನೇ. ಶ್ರೀ ಲಕ್ಷ್ಮಿಯು ಯ[illegible]ವುದು ? ರಜೋ ಗುಣದ ವಿಷ್ಣು

ರೂಪದ ಸಗುಣ ಬ್ರಹ್ಮನ ವಶದಲ್ಲಿ ತಾನೆ ? ಇನ್ನೂ ಸಮುದ್ರದ ಆಳಕ್ಕೆ ಹೋಗಿ. ಅಲ್ಲಿ ಏನುಂಟು ? ನಿಗಿ–ನಿಗಿಯಾದ ಲಾವಾರಸ. ಸೂರ್ಯನಿಂದ ಸಿಡಿದು ಬಂದ ಗ್ರಹವೇ ಪೃಥಿವಿ. ಪೃಥಿವಿಯೆ ಮೇಲು ಹೊದಿಕೆ ಮಾತ್ರ ಆರಿ ತಣ್ಣಗಾಗಿದೆ. ಒಳಗೆ ನಿಗಿ ನಿಗಿ ಎನ್ನುವ ಲಾವಾರಸ. ಅದರ ಸ್ಪರ್ಶದಿಂದ ಎಲ್ಲವೂ ಕಪ್ಪಾಗುವುದು. ಕುಡಿದರೆ, ಕಂಠವೂ ಕಪ್ಪು. ಅಮೃತ ಬಯಸಿದ ಮಾನವನ ಹೃದಯದಲ್ಲಿ ದೇವ–ರಾಕ್ಷಸರು (ಗುಣಗಳು) ಮಂಥನ ನಡೆಸಿರುತ್ತಾರೆ. ಈ ಮಂಥನದಿಂದ ಬರುವ ನವನೀತವೇ ಅಮೃತ.

ಇಂಥ ತಾತ್ಪರ್ಯದ ಪುರಾಣ ಕಥೆ ಹೀಗೆ: ದೇವತೆಗಳು ಒಂದು ತಂಡವಾಗಿ, ರಾಕ್ಷಸರು ಇನ್ನೊಂದು ತಂಡವಾಗಿ ಗೋವರ್ಧನಗಿರಿಯನ್ನು ಕಡೆಗೋಲು ಮಾಡಿಕೊಂಡು ಆದಿ ಶೇಷನನ್ನು ಹಗ್ಗ ಮಾಡಿಕೊಂಡು ಸಮುದ್ರಮಂಥನ ಮಾಡತೊಡಗಿದರು. ಸಮುದ್ರಮಂಥನ ಕಾಲಕ್ಕೆ ಮಹಾಲಕ್ಷ್ಮಿ ತೊರೆದಳು. ಅವಳ ಹಂಚಿಕೆ ಹೇಗೆ? ಅವಳಿಗೇ 'ಸ್ವಯಂವರ' ಅಧಿಕಾರವಿತ್ತರು. ಅವಳು ಶ್ರೀ ಮಹಾವಿಷ್ಣುವನ್ನು ವರಿಸಿದಳು. ಚಂದ್ರ, ಅಮೃತ, ಕಾಮಧೇನು ಕಲ್ಪವೃಕ್ಷ, ಚಿಂತಾಮಣಿ ಮೊದಲಾದುವೆಲ್ಲ ಉದಯಿಸಿದವು. ಹಾಲಾಹಲವೂ ಉದಯಿಸಿತು. ಹಾಲಾಹಲ ಭೂಲೋಕದ ಮೇಲೆ ಹರಿಬಿದ್ದರೆ ಎಲ್ಲವೂ ಧ್ವಂಸವಾಗುತ್ತಿತ್ತು. ಹಾಲಾಹಲ ಭೀಷಣವಾದುದು. ಆದರೆ, 'ಭೀಷಣಾನಾಮ್ ಭೀಷಣಂ' ಆದ ರುದ್ರರೂಪಿ ಶಿವನು ಹಾಲಾಹಲವನ್ನು ತನ್ನ ಕಂಠದಲ್ಲಿ ಇರಿಸಿಕೊಂಡು ಬಿಟ್ಟನು. ಅದರಿಂದ ಅವನು ನೀಲಕಂಠನಾದನು. ವಿಷ್ಣುವಿಗೆ ಲಕ್ಷ್ಮಿಯೇಕೆ? ಶಿವನಿಗೆ ಹಾಲಾಹಲವೇಕೆ? ವಿಧಿಯ ಪಾಲು ಯಾರಿಗೆ ಎಂತೋ ಏನೋ ತಿಳಿಯದು.

೯೦೨

ಸಾಟವಾರು ನಿನ್ನು ಸಾಧಿಂಪಗಾಲೇರು, ದೈವಮೆಪುಡು ನೀಕು ದಪ್ಪಕುನ್ನ
ಭಾರತಂಬುಲೋನಿ ಪರಮಾರ್ಥಮಿದೇಕದಾ ? ವಿಶ್ವದಾಭಿರಾಮ ವಿನುರ ವೇಮ.

ಸರಿಕರಾರು ನಿನ್ನ ಸ್ವಾಧೀನಗೊಳಿಸರು.
ದೈವವೊಂದು ನಿನಗೆ ತಪ್ಪದನಕ,
'ಭಾರತ' ಕಥೆಯೊಳಗೆ ಪರಮಾರ್ಥವಿದುವೇ.
ವಿಶ್ವದಾಭಿರಾಮ ಕೇಳು ವೇಮ

ಭಾರತ ಕಥೆ ಭರತ ವಂಶದ ಸೋದರರೆ ನಡುವೆ ನಡೆದ ಮಹಾಕಾಳಗದ ಸುಂದರ ವರ್ಣನೆಯಷ್ಟೇ. ಪಾಂಡವರು–ಕೌರವರು ರಾಜ್ಯದಾಹದಿಂದ ಹೋರಾಡಿದ ವೀರರಸಪ್ರಧಾನವಾದ ಕಾವ್ಯ. ಕಾವ್ಯ ಮಹಾಕಾವ್ಯವೆನ್ನಿಸಬೇಕಾದರೆ, ಅದರಲ್ಲಿ ಧರ್ಮಕಲ್ಪನೆ ನೀಡುವ, ಜಗತಿನ ಉತ್ಪತ್ತಿ ಇತ್ಯಾದಿ ವಿಷಯಗಳನ್ನು ತಿಳಿಸುವ. ತತ್ತ್ವಪ್ರದವಾದ ಪದ ಪದ್ಯ, ಗದ್ಯರೂಪದ ಸಾಹಿತ್ಯವನ್ನು ಸಂದರ್ಭದಲ್ಲಿ ಸೇರಿಸುತ್ತಾರೆ. ಇದರಂತೆ ಅನೇಕ ದಂತ ಕಥೆಗಳನ್ನೂ ಕಥೆಗಳನ್ನೂ ಕಲ್ಪನಾವಿಲಾಸ ಚಿತ್ರಗಳನ್ನೂ ಮನರಂಜನೆಗಾಗಿ ಜೋಡಿಸಿರುತ್ತಾರೆ. ಹೀಗೆ ವಿವಿಧ ಪ್ರಯೋಜನವನ್ನು ಸಾಧಿಸುವ ಗುರಿಯಿಂದ ಮಹಾ ಕಾವ್ಯ ರಚಿತವಾಗಿದ್ದರೂ ಆದರೆ ಸಾರಸರ್ವಸ್ವ ಮಾರ್ಮಿಕವಾಗಿರುತ್ತದೆ.

'ಭಾರತ' ಕಥೆಯಲ್ಲಿ ಅಡಕವಾದ ಇಂಥ ಪರಮ ಅರ್ಥವೇನು? ಎಲ್ಲಿಯ ವರೆಗೆ ದೈವಾನುಗ್ರಹವು ನಮಗೆ ತಪ್ಪಲಾರದೋ, ಅಲ್ಲಿಯ ವರೆಗೆ ಸರಿಕರಾದ ಯಾರೂ ನಮ್ಮನ್ನು ಅಂಕಿತಕ್ಕೆ ಒಳಪಡಿಸಿಕೊಳ್ಳಲಾರರು. ನಮ್ಮ ಸ್ವಾತಂತ್ರ್ಯವನ್ನು ಅಪಹರಿಸಲಾರರು. ಶ್ರೀ ಕೃಷ್ಣ ಪರಮಾತ್ಮನೇ ಸಾಕ್ಷಾತ್ ದೈವ. ಧರ್ಮರಾಜ ಜೂಜು ಆಡಿದರೇನು ? ರಣದಲ್ಲಿ ಸುಳ್ಳು ನುಡಿದರೇನು ? ಅರ್ಜುನ ಕರ್ಣನನ್ನು ಶೂದ್ರನೆಂದು ಹೀಯಾಳಿಸಿದರೇನು ಒಟ್ಟಾಗಿ ಪಾಂಡವರು ದೈವಬಲ ಕಳೆದುಕೊಳ್ಳುವ ಮಟ್ಟಕ್ಕೆ ಬರಲಿಲ್ಲ. ಶಕ್ತಿಯಲ್ಲಿ ಶ್ರದ್ಧೆ ಇಟ್ಟು ನಡೆದರು. ತಾವು ಏನೇ ಮಾಡಲಿ; ದೈವವಶವಾಗಿ ಮಾಡಿದರು. ಕೌರವರು ಕಾದಿದರು. ಕರ್ಣ, ದ್ರೋಣ, ಭೀಷ್ಮ, ವಿದುರಾದಿಗಳ ಸಹಾಯ ಪಡೆದ. ಆದರೇನು ? ದೈವ ಶ್ರದ್ಧೆ ಇರಲಿಲ್ಲ. ನಮ್ಮಿಂದ ನಡೆಯುವುದು. ಎಂಬ ಅಹಮಹಮಿಕೆ ಅವರನ್ನು ನಾಶಮಾಡಿತು.

೯೦೩

ವಿತ್ತಮೊಕನಿಕಿಚ್ಚಿ ವಿತರಣ ಗುಣಮುನ, ಜಿತ್ತಮೊಕನಿಕಿಚ್ಚಿ ಚೆರಚಿನಾಡು,
ಬ್ರಹ್ಮಚೇತಲನ್ನಿ ಪಾಡೈನ ಚೇತಲು, ವಿಶ್ವದಾಭಿರಾಮ ವಿನುರ ವೇಮ.

ವಿತ್ತ ಓರ್ವಗಿತ್ತು ವಿತರಣ ಗುಣವಿಹ
ಚಿತ್ತ ಓರ್ವಗಿತ್ತು, ಚೆಂದಗೆಡಿಪ,
ಬಹ್ಮ ಚೇಷ್ಟೆಯೆಲ್ಲ ಬರಿಹಾಳು ಕೆಲಸ
ವಿಶ್ವದಾಭಿರಾಮ ವಿನುರ ವೇಮ.

ಬ್ರಹ್ಮಸೃಷ್ಟಿಯು ಪ್ರಯೋಜನಾತ್ಮಕವಾದುದೇ? ಇಲ್ಲವೆ ಕೇವಲ ಲೀಲೆಯೋ ? ಎಂಬ ಪ್ರಶ್ನೆಯು ಬಹುದಿನದಿಂದ ಒಲ್ಲವರ ಚಿಂತನ–ವಿಷಯವಾಗಿದೆ. ಆನಂದಮಯಿ, ಕರುಣಾಮಯಿ ಎಂಬ ವಿಶೇಷಣಗಳಿಂದ ವಿಶೇಷ್ಯನಾದವನೇ ಬ್ರಹ್ಮ. ಇಂಥ ಬ್ರಹ್ಮ ಹಲವರಲ್ಲಿ ಸುಖಸಾಧನವಾದ ದ್ರವ್ಯಸಂಗ್ರಹವಿರುವಂತೆ. ಮತ್ತೆ ಉಳಿದವರಿಗೆ ಹಣವಿಲ್ಲದಿದ್ದರೂ ದಾನಶೀಲ ಗುಣವಿರುವಂತೆ, ಏಕೆ ವಿಧಿಸುತ್ತಿದ್ದ?

ಹಣವಿರುವವನಿಗೆ ದಾತ ಗುಣವಿದ್ದರೆ, ಸಮತೆ ತಂತಾನೇ ಏರ್ಪಡುತ್ತಿತ್ತು. ಆದರೆ, ವಾಸ್ತವದಲ್ಲಿ ಲೋಭಿಯ ಬಳಿ ಹಣ ಕೂಡಿಬೀಳುತ್ತದೆ. ಹಣ ವಿತರಣ ಮಾಡಬೇಕೆಂಬ ಚಿತ್ತ ಬೇರೊಬ್ಬದಲ್ಲಿ ಉಂಟು; ಆದರೆ ಹಣವಂತನಲ್ಲಿಲ್ಲ. ಇದರಿಂದ ಲೋಕ ವ್ಯವಸ್ಥೆಯು ಚೆಂದಗೆಡುವುದು. ಹೀಗೆ ಆಗುವುದು, ಕೇವಲ ಲೀಲೆಯಿಂದ ಮಾತ್ರ. ಬ್ರಹ್ಮಸೃಷ್ಟಿಯು 'ಲೋಕದ ಹಾಗೆ ಕೇವಲ ಲೀಲೆ' 'ಲೋಕವತ್ ತು ಲೀಲಾಕೈವಲ್ಯಮ್'.

ಇದರಿಂದ ಒಂದು ಸಂಗತಿ ಹೊಳೆಯುವುದು. ಏನೆಂದರೆ, ಹಣವು ಒಬ್ಬನಲ್ಲಿ ಸಂಗ್ರಹಿತವಾದರೆ, ಅವೇನೂ ದೇವರು ಅವನ್ಲೆಯೇ ಇರಲಿ. ಎಂದು ಕೊಟ್ಟುದಲ್ಲ. ಆದರೆ ಏನೋ ನಿಮಿತ್ತ ಮಾತ್ರ ಅವನದಾಗಿದೆ. ಅದು ದೈವದ ಹಣ. ಅವನು ದೈವದತ್ತವಾದುದೆಂದು ಅದನ್ನು ಬಳಸಬೇಕು. ಅವನು ಆ ರೀತಿ ಬಳಸಿದಾಗ ದೈವ ಬೇರೊಂದು ವ್ಯವಸ್ಥೆ ಮಾಡಬಹುದು. ಯಾವನು ಎಷ್ಟಕ್ಕೆ ಪಾತ್ರನೋ, ಅಷ್ಟೇ ಅವನದಾಗುವಂತೆ ಸರ್ವರೂ ಕರ್ಮನಿರತರಾಗಬೇಕು.

ಮ್ಯಾನುತಗಿನ ದೈನ ಮಹಿತಮೌನವಸ್ತುವು, ಗಾನೊನರ್ತು ರೆಟ್ಟು ಗಾಕಯುನ್ನ
ಗಾಲ್ತು ರಟ್ಟು ಗಾದೆ ಕರ್ಮುಲಕುನು ಬಾಟ್ಲು, ವಿಶ್ವದಾಭಿರಾಮು ವಿನುರ ವೇಮು.

ಮರವು ತಕ್ಕದಿರಲು ಮಹಾಹಿತದ ವಸ್ತು,
ಅದುನೆ ಮತ್ತೆ ಸರಿಯು ಅಲ್ಲದಿರಲು,
ದಹಿಸುತಿಹರಲ್ಲವೆ ? ದುಷ್ಕರ್ಮಿಗಳ ಸಾಡು !
ವಿಶ್ವದಾಭಿರಾಮ ಕೇಳು ವೇಮ

ಕರ್ಮಕ್ಕೆ ತಕ್ಕ ಫಲವುಂಟು. ಸತ್ಕರ್ಮ ಫಲವೇ ಪುಣ್ಯ. ದುಷ್ಕರ್ಮದ ಫಲವೇ ಫಲವೇ ಪಾಪ. ನಾವು ಕರ್ಮ ಮಾಡದಿರಲು ಸಾಧ್ಯವೇ ಇಲ್ಲ. ಕಣ್ಣು ನೋಡುತ್ತದೆ. ಕಿವಿ ಕೇಳುತ್ತದೆ. ಮೂಗು ಮೂಸುತ್ತದೆ. ನಾವು ನೋಡುವ, ಕೇಳುವ, ಮೂಸುವ ಮುಟ್ಟುವ, ರುಚಿಸುವ ಕರ್ಮಗಳಿಂದ ಫಲಸಂಚಯವಾಗುತ್ತಿರುತ್ತದೆ. ಕ್ರೂರ ಆಚರಣೆ ನೋಡುತ್ತಿದ್ದರೆ, ಘೋರ ಸಂಗತಿ ಕೇಳುತ್ತಿದ್ದರೆ, ಅಸಹ್ಯ ದುರ್ಗಂಧ ಮೂಸುತ್ತಿದ್ದರೆ, ಮಾಂಸವನ್ನು ರುಚಿಸುತ್ತಿದ್ದರೆ, ಆಯುಧಾದಿಗಳನ್ನೇ ಮುಟ್ಟುತ್ತಿದ್ದರೆ, ನಮ್ಮ ಚಿತ್ತವೃತ್ತಿಗಳು ಅಂಥ ಸಂಸ್ಕಾರವನ್ನೇ ಮನಸ್ಸಿನಲ್ಲಿ ಉಂಟುಮಾಡುತ್ತವೆ. ಅದೇ ನಮ್ಮ ಸ್ವಭಾವವಾಗುತ್ತದೆ. ಬದಲಾವಣೆ ಒಂದೇ ದಿನದಲ್ಲಿ ತೋರಿ ಬರುವುದಿಲ್ಲ. ಪ್ರತಿ ಕ್ಷಣ ಬದಲಾವಣೆ ಮಾತ್ರ ಆಗುತ್ತಿರುತ್ತದೆ. ಅಂತ್ಯದಲ್ಲಿ ಒಟ್ಟು ಪರಿಣಾಮ ಮಾತ್ರ ಗೋಚರಿಸುವುದು. 'ಯಾರದೋ ಕೊಲೆಯಾಯಿತು-' ಎಂದು ಕೇಳಿದಾಗ ಮೇಲಿನ ಎಲ್ಲ ಕ್ರಮದಲ್ಲಿ ಚಿತ್ತಬದಲಾಗಿ, ಕೊಲೆಯ ಕರ್ಮಕ್ಕೆ ಪ್ರೇರಕವಾಗುವುದು ಕೊಲೆಗಯ್ದ ಮೇಲೆ ಸೆರೆಮನೆವಾಸವೇ ಅದಕ್ಕೆ ತಕ್ಕ ಫಲ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲವೂ ಉಂಟು ಸತ್ಕರ್ಮ-ದುಷ್ಕರ್ಮಗಳ ಪ್ರತಿಫಲವನ್ನು, ದೃಷ್ಟಾಂತದಿಂದ ತಿಳಿಯುವಾ: ಸಾಗವಾನಿ ಕಟ್ಟಿಗೆಯಲ್ಲಿ ಬಹುದಿನ ಬಾಳುವ ಗುಣವಿದೆ. ಅದು ಬೇಗ ಹುಳು ಹತ್ತಿ ಕೆಡದು. ಸಾಕಷ್ಟು ಭಾರ ತಾಳುವ ಶಕ್ತಿಯೂ ಅದರಲ್ಲುಂಟು. ಅದನ್ನು ಕಾಯ್ದಿರಿಸುತ್ತಾರೆ. ತೊಲೆ ಕಂಬಗಳಿಗಾಗಿ ಬಳಸುತ್ತಾರೆ. ಹೆಚ್ಚು ಬೆಲೆ ಕೊಡುತ್ತಾರೆ. ಅದೇ ಬೇವಿನ ಮರದ ಕಟ್ಟಿಗೆಗೇನು ಬೆಲೆ. ಅದಕ್ಕೆ ಬೇಗ ಹುಳು ಅಂಟುವುದು. ಅದನ್ನು ಕಡಿದು ಉರುವಲು ಎಂದು ಬಳಸುತ್ತಾರೆ. ಸತ್ಕರ್ಮ ಸಾಗವಾನಿ ಕಟ್ಟಿಗೆಯಂತೆ. ದುಷ್ಕರ್ಮ ಬೇವಿನ ಕಟ್ಟಿಗೆಯಂತೆ.

೯೦೫

ಮರಿಯು ದಧಿನಿ ಘೃತಮು, ಮ್ಯಾನುಲಂ ದನಲಂಬು, ಸೌಮ್ಯಸುಖಮುಮುಲಂದು ಸೌರಭಂಬು
ದಿಲಲ ದೈವಮಟ್ಲು ದೇಜರಿಲ್ಲು ಜಿತಾತ್ಮ, ವಿಶ್ವದಾಭಿರಾಮು ವಿನುರ ವೇಮು.

ಮೊಸರಿನಲ್ಲಿ ತುಪ್ಪ, ಮರದ ಒಳಗೆ ಬೆಂಕಿ,
ಸೌಮ್ಯ ಪುಷ್ಪಗಳಲಿ ಸೌರಭಗಳು
ಎಳ್ಳಿನೆಣ್ಣೆಯಂತಿ ಹೊಳೆಯುವುದು ಚಿದಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಚಿದಾತ್ಮ ದೇಹದಲ್ಲಿ ಹೇಗೆ ಇರುವುದು ? ಎಂಬ ಪ್ರಶ್ನೆ ಬ್ರಹ್ಮಜಿಜ್ಞಾಸುಗಳೆದುರು ನಿಲ್ಲುವುದು. ಇಂಥ ವಿಷಯ-ವಿವೇಚನೆಗೆ ಹೋಲಿಕೆಯೊಂದೇ ತಿಳಿವಳಿಕೆಯ ಸಾಧನವಾಗಿದೆ.

ತುಪ್ಪ ಮೊಸರಿಗಿಂತ ಭಿನ್ನವಾಗಿ ಕಾಣುತ್ತದೆ. ಅದರ ರುಚಿ ಬೇರೆ; ರೂಪ ಬೇರೆ; ಅದರ ಗುಣ-ಧರ್ಮ ಬೇರೆ; ಅದರ ನಾಮವೂ ಬೇರೆ. ಆದರೆ ತುಪ್ಪವು ಮೊಸರಿಗಿಂತ ಬೇರೆಯಲ್ಲ. ಮೊಸರಿನಲ್ಲಿಯೇ ತುಪ್ಪ ಅಡಗಿತ್ತು; ಮತ್ತು ತುಪ್ಪವೇ ಮೊಸರಾಗಿ ಇತ್ತು. ಇದೇ ರೀತಿ, ಮರದಲ್ಲಿ ಬೆಂಕಿ ಉಂಟು. ಮರದ ಕೊಂಬೆಗಳೆರಡು ಒಂದಕ್ಕೊಂದು ತಿಕ್ಕಿದಾಗ ಅಗ್ನಿ ಉಂಟಾಗುತ್ತದೆ. ಆದರೂ ಮರದಲ್ಲಿ ಅಗ್ನಿ ಉಂಟೆಂದು ಊಹಿಸುವದು ಬಲು ಕಷ್ಟ. ದೇಹದಲ್ಲಿ ಆತ್ಮವಿರುವುದು ಆ ರೀತಿ. ಸಾಧನೆಯಿಂದ ಆತ್ಮ ಗೋಚರಿಸಬಹುದು. ತತ್ಪೂರ್ವದಲ್ಲಿ ಆತ್ಮದ ಇರವನ್ನು ಊಹಿಸುವುದು ತುಂಬಾ ಕಷ್ಟ.

ಮಧುರ ಹೂವಿನಲ್ಲಿ ಸುವಾಸನೆಗಳು ಅಡಗಿದಂತೆ, ಆತ್ಮ ದೇಹದಲ್ಲಿ ಉಂಟು; ಎಂದೂ ತಿಳಿಯಬಹುದು. ತತ್ತ್ವಗಳನ್ನು ತಿಳಿಯುವ ಮೂಲಕ ಆತ್ಮ ಗುರುತಿಸಬಹುದು. ಹೇಗೆಂದರೆ, ಸೌರಭವನ್ನು ಸವಿಯುವ ಮೂಲಕ ಹೂವಿನ ಅಸ್ತಿತ್ವ ಗುರುತಿಸುವಂತೆ. ಎಳ್ಳು ಘನ ಪದಾರ್ಥ. ಅದು ಉರಿಯದು. ಅದನ್ನು ಅರೆದುತೆಗೆದ ಎಣ್ಣೆಯು ಬತ್ತಿಯ ಮೂಲಕ ಉರಿಯುವುದು. ಎಳ್ಳು, ಎಣ್ಣೆ ಭಿನ್ನವಲ್ಲ. ಹಾಗೆ ತೋರುತ್ತವಷ್ಟೇ. ಎಣ್ಣೆಯು ಎಳ್ಳಿನಲ್ಲಿಯೇ ಇರುವುದೆಂದು ನಂಬಲು ಸಾಧ್ಯವಾಗುವುದು, ಎಳ್ಳು ಅರೆದು ನೋಡಿದಾಗ ಮಾತ್ರ. ಅದೇ ರೀತಿ, ಆತ್ಮ ದೇಹದಲ್ಲಿ ಉಂಟು,ಎಂದು ಅರಿಯಬೇಕಾದರೆ, ತತ್ತ್ವಾನುಭವದಿಂದ ಸಾಧ್ಯ.

೯೦೬

ದಶರಥುಂಡು ರಾಮುಧರಣೀಶ ಬಟ್ಟಂಬು, ಗಟ್ಟಜೀಯದಲಪ ಗಟ್ಟಿ ಜಡಲು
ತಲಪು ಮನದಿಕಾನಿ ದೈವಿಕಮದಿವೇರೆ, ವಿಶ್ವದಾಭಿರಾಮು ವಿನುರ ವೇಮು.

ದಶರಥನು ರಾಮುಗೆ ಧರಣೀಶ ಪಟ್ಟವ,
ಕಟ್ಟಬಯಸಿ ತಾನೆ ಕಟ್ಟಿದ ಜಡೆ.
ಬಯಕೆ ನಮ್ಮದಷ್ಟೆ. ಬೇರೆ ದೈವಲೀಲೆ.
ವಿಶ್ವದಾಭಿರಾಮ ಕೇಳು ವೇಮ

" ಅಜನು ವಿಧಿಗೆ ಕರ್ತ; ಕರ್ಮಕ್ಕೆ ತಾ ಕರ್ತ. " ಪಾಪ ಮಾಡುವವನು ಪಾಪಫಲಕ್ಕೆ ಅಧಿಕಾರಿಯಾಗುವನು. ಪುಣ್ಯ ಮಾಡುವವನು ಪುಣ್ಯ ಫಲಕ್ಕೆ ಅಧಿಕಾರಿಯಾಗುವನು. " ಆತ್ಮನು ಜನರಿಗೆ ಕರ್ತೃತ್ವವನ್ನಾಗಲಿ, ಕರ್ಮಗಳನ್ನಾಗಲಿ, ಕರ್ಮಫಲ ಸಂಬಂಧವನ್ನಾಗಲಿ. ಸೃಷ್ಟಿಸಿರುವುದಿಲ್ಲ. ಆದರೆ ಸ್ವಭಾವವೇ ಕೆಲಸ ಮಾಡುವುದು. (ಭಗವದ್ಗೀತೆ ೫-೧೪.) " ಈ ಸ್ವಭಾವ ಹುಟ್ಟುವುದು ಸಂಸ್ಕಾರದಿಂದ. ಸಂಸ್ಕಾರವು

ಚಿತ್ತವೃತ್ತಿಗಳ ಸಂಚಯದಿಂದ ಉಂಟಾಗುವುದು. ಚಿತ್ತವೃತ್ತಿಗಳು ವಿಷಯವಸ್ತುಗಳೊಡನೆ ಆಯಾ ಇಂದ್ರಿಯಗಳು ಸಂಪರ್ಕ ಹೊಂದಿದಾಗ, ಅರ್ಥಾತ್ ಕರ್ಮದಿಂದ, ಉಂಟಾಗುತ್ತವೆ.

ಇಂಥ ಮಹಾತತ್ತ್ವಗಳನ್ನು ಬೋಧಿಸುವುದೇ ಮಹಾಕಾವ್ಯಗಳ ಉದ್ದೇಶ. ರಾಮಾಯಣ ಕಾವ್ಯದಲ್ಲಿ ಅಯೋಧ್ಯಾ ಖಂಡದಲ್ಲಿ ಏನಿದೆ? ದಶರಥ ರಾಜ ದಕ್ಷಿಣ ದೇಶದ ರಾಜ ದಕ್ಷಿಣ ದೇಶದ ಒಡೆಯ ಶಂಬರಾಸುರನ ವಿರುದ್ಧ ಹೋರಾಡಲು ಉಪಕ್ರಮಿಸಿ ವೈಜಯಂತ ನಗರಕ್ಕೆ ಹೋಗಿ ಬೀಡಾರ ಹೂಡಿದ್ದ. ಶಂಬರಾಸುರ ರಾತ್ರೋರಾತ್ರಿ ಸೇನೆಯನ್ನು ಧ್ವಂಸ ಮಾಡಿದ. ದಶರಥರಾಯನೊಡನೆ ಘೋರ ಸಂಗ್ರಾಮ ನಡೆದು, ಅಂತ್ಯದಲ್ಲಿ ರಾಯ ಸೋಲುವುದರಲ್ಲಿದ್ದ. ರಥದ ಚಕ್ರದ ಕೀಲು ತಪ್ಪಿ ಉರುಳಲಿತ್ತು. ಸತಿಮಣಿ ಕೈಕೇಯಿ ಜೊತೆಗಿದ್ದಳು. ತನ್ನ ಕೈ ಬೆರಳನ್ನು ಕೀಲವಾಗಿಸಿ ರಾಜನನ್ನು ಪರಾಭವದಿಂದ ಪಾರುಮಾಡಿದಳು. ಸಂತುಷ್ಟನಾದ ರಾಜ, ' ವರ ಕೇಳು ' ಎಂದ. ಕೈಕೇಯಿ, ಇರಲಿ ನೋಡುವಾ, ' ಎಂದಳು. ಕರ್ಮಸಂಬಂಧ ಉಂಟಾಯಿತು. ಫಲಕ್ಕಾಗಿ ಅನುಕೂಲ ಸಮಯ ಬೇಕಾಗಿತ್ತು. ಕೈಕೇಯಿ ಪ್ರಾಣವನ್ನು ಪಣಕ್ಕೆ ಹಚ್ಚಿ ಪತಿಗಾಗಿ ಹೋರಿದ್ದಳು. ಅವಳ ಕರ್ಮಫಲವಾಗಿ ಅವಳ ಆಶೆ ನೆರವೇರಲೇಬೇಕು. ಇದುವೇ ವಿಧಿಯ ಪಾಲು. ಅದನ್ನಾರೂ ತಪ್ಪಿಸರು. ಬಹುಕಾಲ ಸಂದಿತು. ರಾಮ ವಯಸ್ಕನಾದ. ಒಳ್ಳೆಯ ರಾಜಕುಮಾರ. ಪಟ್ಟಕ್ಕೆ ಅರ್ಹನಾದವ. ಪಟ್ಟಾಭಿಷೇಕ ಸಿದ್ಧತೆ ನಡೆಯಿತು. ಆದರೆ ಕೈಕೇಯಿಗೆ ತನ್ನ ನಿಷ್ಕಾನು ಸೇವೆಯನ್ನು ಮುಂದುವರಿಸಲಾಗಲಿಲ್ಲ. ತನ್ನ ಪುಣ್ಯಕರ್ಮದ ಫಲ ಆಶಿಸಿದಳು. ' ವರ ' ವಿತ್ತದನ್ನು ಜ್ಞಾಪಿಸಿ, ಭರತನಿಗೆ ಪಟ್ಟಾಭಿಷೇಕವಾಗಲಿ; ರಾಮ ಹದಿನಾಲ್ಕು ವರ್ಷ ವನವಾಸಕ್ಕೆ ಹೋಗಲಿ ' ಎಂದು ಹಾರೈಸಿದಳು. ಅವಳ ಬಯಕೆ ವಿಧಿಯ ಪಾಲಿನಂತಿತ್ತು; ಈಡೇರಿತು. ದಶರಥನ ಬಯಕೆ ಮಣ್ಣುಗೂಡಿತು. ಅವನು ಜಡೆಗಟ್ಟಿದ. ಮರಣಹೊಂದಿದ.

೯೦೭

ಚಿಲುಕಗರ್ಭಮುದು ಶ್ರೀಶುಕುಡುದಯಿಂಚಿ, ಮುನಿವರೇಣ್ಯುಲಂದು ಮುಖ್ಯುಡಯ್ಯಿ,
ಪ್ರತ್ತಿಕಾಯ ಚಿತ್ರಪಟಮುಲು ಬುಟ್ಟವಾ, ವಿಶ್ವದಾಭಿರಾಮ ವಿನುರ ವೇಮ.

ಗಿಳಿಯ ಗರ್ಭದಲ್ಲಿ ಘನ ಶುಕನು ಉದಯಿಸಿ,
ಮುನಿವರೇಣ್ಯರಲ್ಲಿ ಮುಖ್ಯನಾದ.
ಹತ್ತಿಕಾಯಿಯಿಂದ ಹಲ ಬಟ್ಟೆ ಹುಟ್ಟವೆ?
ವಿಶ್ವದಾಭಿರಾಮ ಕೇಳು ವೇಮ.

ಶುಕಮುನಿಯು ವಶಿಷ್ಠ ಸಂತತಿಯಲ್ಲಿ ಜನಿಸಿದ ಒಬ್ಬ ಮುನಿ. ವಸಿಷ್ಠನ ನೂರು ಮಂದಿ ಮಕ್ಕಳಲ್ಲಿ ಶಕ್ತಿಯೊಬ್ಬನನ್ನುಳಿದು ಉಳಿದವರೆಲ್ಲ ಹತರಾದರು. ಶಕ್ತಿಯಿಂದ

ಪರಾಶರನಿಂದ ವ್ಯಾಸ, ವ್ಯಾಸನಿಂದ ಶುಕ ಉದಿಸಿದರು. ಶುಕನು ಬ್ರಹ್ಮವಿದ್ಯಾಪಾರಂಗತನಾದನು. ಮುನಿವರೇಣ್ಯನೆಂದು ಗೌರವಿಸಲ್ಪಟ್ಟನು. ಇಂಥ ಶುಕನ ಜನ್ಮಕಥೆ ತುಂಬಾ ಸ್ವಾರಸ್ಯಕರ. ಅವನು ಗಿಳಿಯ ಗರ್ಭದಿಂದ ಹುಟ್ಟಿದನು' ಎಂದು ಪುರಾಣಕಥೆಯುಂಟು. ಇಂಥದನ್ನೆಲ್ಲ ನಂಬುತ್ತೇವೆ. ಈ ಪುರಾಣ ಕಥೆಗಳಲ್ಲಿ ನಮ್ಮ ಜನರಿಗೆ ಅಚಲ ಶ್ರದ್ಧೆ. ಸಿಂಹದ ಮುಖ ಹಚ್ಚಿಕೊಂಡು ' ನರಸಿಂಹ " ನಾಗಿ ದೇವರು ಬಂದು, ತನ್ನ ವಿರೋಧಿಗಳನ್ನು ಸೀಳಿ ಒಗೆಯುವನು, ಎಂಬ ಕಥೆಯನ್ನೂ ನಂಬುತ್ತೇವೆ. ಆದರೆ, ಸರ್ವವ್ಯಾಪಿ ದೇವನು ಹೇಗೆ ಉಂಟು? ಅವನು ಕರುಣಾಸಾಗರ. ಕ್ರೂರಿಯಲ್ಲ. ಅವನಲ್ಲಿ ಕ್ರೂರತ್ವ-ವೈಷಮ್ಯಗಳಿಲ್ಲ. ಅವನು ನರಸಿಂಹನಲ್ಲ. ಅವನು ನರನಾಗಿರಬಹುದು; ಇಲ್ಲವೆ ಸಿಂಹವಾಗಿರುವನು; ಅವನು ಶುಕಪಕ್ಷಿ(ಗಿಳಿ)ಯಾಗಿರಬಹುದು; ಗಿಳಿಯ ಮರಿಯಾಗಿರೆಬಹುದು; ಮುನಿಯಾಗಿರಬಹುದು; ಆಕಾಶ, ವಾಯು, ಅಗ್ನಿ, ಜಲ ಪೃಥಿವಿಯಾಗಿರಬಹುದು. ಅದು ಹೇಗೆ ಅನ್ನುತ್ತೀರೆನ್ನುವಿರಲ್ಲವೇ? ಸತ್ಯದ ಬಗ್ಗೆ ನೀವು ನಂಬುತ್ತಿಲ್ಲವೇಕೋ? ನೀವು ಹತ್ತಿ ಕಾಯಿಯನ್ನು ನೋಡಿದಾಗ ಅದರಿಂದ ನಾವು ನೋಡುತ್ತಿರುವ ನೂರಾರು ತರಗತಿಯ, ಹಲವಾರು ಬಣ್ಣದ, ನಯವಾದ, ಉರುಟಾದ ಬಟ್ಟೆಗಳೆಲ್ಲ ಉಂಟಾಗಿವೆಯೆಂದರೆ ನೀವು ಒಮ್ಮೆಲೇ ನಂಬಲಾರಿರಿ. ಆದರೆ ಅದು ನಿಜ. ಆದೇ ರೀತಿ ' ನಾಮ-ರೂಪ ' ಗಳಿಂದ ಭಿನ್ನವಾದ ವಸ್ತು ಪ್ರಪಂಚವೆಲ್ಲ ಬ್ರಹ್ಮವೆಂಬುದೂ ನಿಜ. ಇದೇ ಸತ್ಯ.

೯೦೮

ನೀಚಗುಣಮುಲೆಲ್ಲ ನಿರ್ಮೂಲಮೈಪೋವು ಗೊಡುವಲೇದು ಸುಜನಗೋಷ್ಠಿ ವಲನ,
ಗಂಡಮಲಂದ ಮೇನಿಕಂಪ ಡಂಗಿನಯಟ್ಲು, ವಿಶ್ವದಾಭಿರಾಮ ವಿನುರ ವೇಮ

ನೀಚ ಗುಣಗಳೆಲ್ಲ ನಿರ್ಮೂಲವಾಗುವವು.
ಗೊಡವೆಯಿಲ್ಲ; ಸುಜನ ಗೋಷ್ಠಿಯಿಂದ
ಗಂಧ ತೊಡೆಯೆ ದೇಹ, ಕಂಪು ಅಡಗುವಂತೆ.
ವಿಶ್ವದಾಭಿರಾಮ ಕೇಳು ವೇಮ

ಗೋಷ್ಠಿ ಎಂದರೆ ಸಭೆ; ಸಮೂಹ; ಸಂಗ. ಸುಜನಗೋಷ್ಠಿಯೇ ಸಾಧುಗೋಷ್ಠಿ. ಸಾಧು-ಸಂಗ. ಸಾಧು ಜನರ ಸಂಗದಿಂದ ಅದ್ಭುತ ಪವಾಡ ಜರುಗುವ ಸಾಧ್ಯತೆಯಿದೆ. ಕೀಳು ಗುಣಗಳು ಸಮೂಲ ನಾಶವಾಗಬಹುದು. ಕೀಳು ಗುಣಗಳು ಅಂಟುವುದು ಮನಸ್ಸಿನ ಸಂಸ್ಕಾರದಿಂದ ತಾನೇ. ಸಾಧು ಸಂಗದಿಂದ ಚಿತ್ತ ವೃತ್ತಿಗಳು ಅಳಿವರೆ, ಚಿತ್ತ ಶುದ್ಧಿಯಾದರೆ, ಕೀಳು ಸಂಸ್ಕಾರ ಉಳಿಯದು. ಗಂಧ ಲೇಪಿಸಿದಾಗ, ದೇಹಕ್ಕೆ ವಾಸನೆಯ ಕಂಪು ಉಂಟು. ಎಲ್ಲಿಯ ವರೆಗೆ ದೇಹವು ಲಿಪ್ತವಾಗಿರುವದೋ, ಅಲ್ಲಿಯ ವರೆಗೆ ಕಂಪು ಇರುವದು. ಗಂಧ ತೊಡೆದುಬಿಟ್ಟರೆ, ದೇಹದ ಕಂಪೂ ಇಲ್ಲವಾಗುತ್ತದೆ. ಆದೇ ರೀತಿ, ಸುಜನಗೋಷ್ಠಿಯಿಂದ ಕೀಳು ಗುಣಗಳೂ ನಿರ್ಮೂಲವಾಗುವವು.

(ಹೋಲಿಸಿ ನೋಡಿರಿ :

ಭಾಗವತದಲ್ಲಿ ಶ್ರೀಕೃಷ್ಣ ಉದ್ಧವನನ್ನು ಕುರಿತು ಹೇಳುತ್ತಾನೆ. " ನಾನು ಯೋಗ ಸಾಂಖ್ಯ ಇಲ್ಲವೆ ವಿವೇಕ, ಧರ್ಮ, ವೇದ, ತಪ, ತ್ಯಾಗ, ದಾನ, ಔದಾರ್ಯ, ಅಗ್ನಿ ಹೋತ್ರಾದಿ ವಿಧಿನಿಯಮ, ಉಪವಾಸ, ಪ್ರತಿಜ್ಞೆ, ಯಜ್ಞ, ಗುಪ್ತಮಂತ್ರ, ತೀರ್ಥ ಯಾತ್ರೆ, ಯಮ-ನಿಯಮಗಳಿಂದ ಲಭ್ಯನಲ್ಲ. ಆದರೆ ಯಾವ ಸತ್ಸಂಗದಿಂದ ಸರ್ವ ಆಸಕ್ತಿಗಳ ನಾಶವಾಗುವವೋ, ಅದರಿಂದ ಮಾತ್ರ ನಾನು ಲಭ್ಯನು. "

೯೦೯

ಟಕ್ಕರುಲನುಗೂಡಿ ಯಿಕ್ಕಸಕ್ಕೆಮುಲಾಡ, ನಿಕ್ಕವ್ವೆನಘನುನಿ ನೀತಿಚೆಡುನು.
ಉಲ್ಲಿತೋಟಬೆರುಗು ಮಲ್ಲಿಮೊಕ್ಕರಣಿ, ವಿಶ್ವದಾಭಿರಾಮ ವಿನುರ ವೇಮು.

ಠಕ್ಕರೊಡನೆ ಸೇರಿ ತಬರು ಜೇಷ್ಟೆ ಗೆಯ್ಮೆ,
ನಿಜವಾಗಿಯು ಘನನು, ನೀತಿಗೇಡು
ಉಳ್ಳಿ ತೋಟದಲ್ಲಿ ಮಲ್ಲಿಗೆ ೀತೆಯಂತೆ.
ವಿಶ್ವದಾಭಿರಾಮ ಕೇಳು ವೇಮು

ಘನವಂತನು ತನ್ನ ಘನತೆಯನ್ನು ಕಾಪಾಡಿಕೊಳ್ಳಬೇಕು. ಹೀನರೊಡನೆ ಘನನು. ಇರುವಾಗ ಸಹ ನೀರು ತಟ್ಟದ ಕಮಲ ಪುಷ್ಪದಂತೆ ಇರಬೇಕು. ಹೀನರೊಡಗೂಡಿ ಇರಬೇಕು; ಇಲ್ಲದಂತಿರಬೇಕು. ' ಕಬ್ಬಿನ ತೋಟದಲ್ಲಿ ಕಸದ ಹೊರೆ ಒಟ್ಟಿದರೇನು ? ಕಬ್ಬು ತನ್ನ ಸಿಹಿಗುಣ ಬಿಟ್ಟು ಕೊಡುವದೇ ? ' ಘನವಂತನು ಹೀನರೊಂದಿಗೆ ಇದ್ದರೂ, ತನ್ನ ಸದ್ಗುಣ ಲೋಪವಾಗದಂತೆ ಎಚ್ಚರದಿಂದ ಇರಬೇಕು.

ಹೀಗಿರುವುದನ್ನು ಬಿಟ್ಟು, ಹೀನ ಜನರ ಲಘುಸ್ವಭಾವದಿಂದ ಪ್ರೇರಿತರಾಗಿ ತಾವೂ ಅವರ ಮಟ್ಟಕ್ಕೆ ಇಳಿದರೇನು ಗತಿ ! ಠಕ್ಕರೊಡನೆ ಸೇರಿಕೊಂಡು ತಬರು ಮಾಡುವವನೂ, ಅಪಹಾಸ್ಯ ಗೆಯ್ಯುವವನೆಂಥ ಘನನು ? ಅವನು ನೀತಿಗೇಡಿಯೇ ಸರಿ. ಉಳ್ಳಿಯ ಹೂಲದಲ್ಲಿ ಮಲ್ಲಗೆಯ ಬಳ್ಳಿ ಇದ್ದರೂ, ಉಳ್ಳಿಯ ವಾಸನೆಯೇ ಎಲ್ಲೆಡೆಗೂ ನಾಸಿಕಕ್ಕೆ ' ಅಡರುವುದು ' ಮಲ್ಲಿಗೆಯೂ ತನ್ನ ವಾಸನೆಯನ್ನು ಅಡಗಿಸಿಕೊಳ್ಳುವುದೇನೋ ! ಉಳ್ಳಿಯ ತೋಟದಲ್ಲಿ ಕಾಲಿಟ್ಟವರಿಗಂತೂ ಮಲ್ಲಿಗೆಯ ಸುವಾಸನೆಯ ಸುಳಿವು ಕೂಡ ಹತ್ತದು.

೯೧೦

ರೇಗುಪುಚ್ಚನು ಭುವಿ ರೇಯೆಲ್ಲದ್ರೊಕ್ಕಿನ, ಮುರಗಕಂತ ಕಂತ ಪೆರುಗುಚುಂಡು,
ನೊರುಲು ಭೀಯಟನ್ನ ನೋಗು ಸಿಗ್ಗೆರುಗುನಾ ? ವಿಶ್ವದಾಭಿರಾಮ ವಿನುರ ವೇಮು.

ಹಾದರ ಮುಳ್ಳು ಭುವಿ, ಹೇಗೊ ರಾತ್ರಿ ತುಳಿಯೆ,
ನಶಿಸದಷ್ಟು ಇಷ್ಟು ನೆತ್ತಿ ಚಿಗುರು.
ಮುಂದಿ ಭೀಯೆನಲು ಮೂಢ ನಾಚುತಿಹನೇ ?
ವಿಶ್ವದಾಭಿರಾಮ ಕೇಳು ವೇಮು

' ಹಾದರಗಿತ್ತಿ ಮುಳ್ಳು ' ಎಂದು ಪ್ರಾದೇಶಿಕವಾಗಿ ಕರೆಯುವ ವನಸ್ಪತಿಯುಂಟು. ಇದು ಹಾದಿಯ ಇಕ್ಕೆಲಗಳಲ್ಲಿ, ಹೆಚ್ಚಾಗಿ ಬೆಳೆಯುತ್ತದೆ. ಹೊಲಮನೆಯಗಳಲ್ಲಿ ಬೆಳೆದ, (ಭೇದಿರೋಗಕ್ಕೆ ಇದರ ತೊಪ್ಪಲು ಹಿಂಡಿ ತೆಗೆದ ರಸ ಒಳ್ಳೇದು.)ಇದನ್ನು ನಿರುಪಯುಕ್ತ ಕಸವೆಂದು ಹೊಲದ ಬದುವಿನಾಚೆ ಮನೆಯ ಅಂಗಳದಾಚೆ, ಜೆಲ್ಲುವುದರಿಂದ ಹಾದಿ ಗುಂಟ ಬೆಳೆಯುವುದು. ಇದಕ್ಕೆ ತೊಪ್ಪಲು ಇರುವಷ್ಟೇ ಮುಳ್ಳು ಉಂಟು. ಹಾದಿ ಹೋಕರು ಸ್ವಲ್ಪ ಇಳಿಹೊತ್ತಾದೊಡನೆ ನೆಲದಗುಂಟ ಸೇಗಾಬಳ್ಳಿಯಂತೆ ಬೆಳೆದ ಈ ವನಸ್ಪತಿಯ ಮೇಲೆ ಕಾಲಿಡುತ್ತಾರೆ. ಮುಳ್ಳು ಕಾಲಿಗೆ ಅಂಟಿಬಿಡುತ್ತದೆ. ಎಲ್ಲರೂ ತುಳಿಯುತ್ತಾರೆ. ಆದರೆ ಈ ವನಸ್ಪತಿ ನಶಿಸುವದಿಲ್ಲ. ನಾಲ್ಕು ದಿನ ಬಿಟ್ಟು ನೋಡಿದರೆ, ನೆತ್ತಿಯಲ್ಲಿ ಚಿಗುರು ಒಡೆದುದು ಕಾಣುವುದು. ಇನ್ನು ಕೆಲ ವನಸ್ಪತಿಗಳು ಬಲು ಸೂಕ್ಷ್ಮ. ಸ್ವಲ್ಪ ಕಾಲು ಬಡಿದು ಬೇರು ಸಡಿಲಾದರೆ ಕೀರಿತು; ಒಣಗಿ ಹಾಳಾಗುತ್ತವೆ.

ಜನರಲ್ಲಿಯೂ ಅದೇ ರೀತಿ ಉಂಟು. ಕೆಲವರು ಲೋಕದ ಧರ್ಮದ ವಿರೋಧವಾಗಿ ಏನು ಮಾಡಬೇಕಾದರೂ ನಾಚುಗೆ ಆವರಿಸಿ, ತಲೆ ತಗ್ಗಿಸುತ್ತಾರೆ. ಇನ್ನು ಕೆಲವರು ಮೂಢರು, ಹಾದರಗಿತ್ತಿ ಮುಳ್ಳಿನಂಥವರು. ಇವರು ಲೋಕಧರ್ಮ ಲೆಕ್ಕಿಸರು. ಪರ ಧರ್ಮ ತಿಳಿಯದು. ಯಾರು ಎಷ್ಟೇ ಛೀಯೆಂದರೂ, ತಮ್ಮ ಕಾಯಕ ಮುಂದುವರಿಸುವರು. ಇವರಿಗೆ ನಾಚುಗೆಯೆಂಬುದೇ ಇಲ್ಲ.

೯೧೧

ಓರ್ವುಲೇನಿಭಾರ್ಯ ಯುನ್ನ ಫಲಂ ಬೇಮಿ ? ಬುದ್ಧಿಲೇನಿಬಿಡ್ಡ ಪುಟ್ಟಡೇಮಿ ?
ಸದ್ಗುಣಂಬುಲೇನಿ ಚದುವದಿಯೇಲನು ? ವಿಶ್ವದಾಭಿರಾಮ ವಿನುರ ವೇಮು

ಸಹನೆಯಿರದ ಸತಿಯು ಸೇರಲು ಫಲವೇನು ?
ಬುದ್ಧಿಯಿರದ ಸುತರು ಪುಟ್ಟಲೇನು ?
ಸದ್ಗುಣಗಳು ಇರದೆ, ಸಲೆ ಓದುವುದೇಕೆ ?
ವಿಶ್ವದಾಭಿರಾಮ ಕೇಳು ವೇಮು

ಲಗ್ನವೆಂದರೆ ಬಾಹ್ಯ ಆಡಂಬರ ಸಮಾರಂಭವಲ್ಲ. ಲಗ್ನವೆಂದರೆ ಹೃನ್ಮನಗಳ ಅನ್ಯೋನ್ಯ ಸಂಬಂಧ. ವಿವಾಹ ಮಂತ್ರ ನೋಡಿರಿ : " ಸಮಾನೀ ವ ಆಕೂತಿಃ,ಸಮಾನಾ ಹೃದಯಾನಿ ವಃ | ಸಮಾನ ಮಸ್ತು ವೊ ಮನಃ ಯಥಾವಃ ಸುಸಹಾಸತಿ. || " ' ನಮ್ಮ ಉದ್ದೇಶ ಒಂದಾಗಲಿ; ಹೃದಯ ಒಂದಾಗಲಿ; ನಮ್ಮ ಮನಸ್ಸೂ ಒಂದಾಗಲಿ. ನಮ್ಮ ಸಂಘಟನೆ ಶಕ್ತಿಯುತವಾಗುವಂತೆ ನೋಡಿಕೊಳ್ಳುವಾ. ' ಇಂಥ ಗುರಿ ಮುಟ್ಟಬೇಕಾದರೆ, ದಾಂಪತ್ಯ ಬಂಧುರವಾಗಿರಬೇಕು. ಸತಿಗೆ ಅಪಾರ ಸಹನೆ ಬೇಕು. ಹಾಗಿಲ್ಲದಿದ್ದರೆ ಅಂಥ ಸತಿಯೊಂದಿಗೆ ಲಗ್ನವೆಂತು ? ' ಲಗ್ನ ' ಕ್ಕೆ ಅರ್ಥವೇ ಉಳಿಯದು.

ಮಕ್ಕಳು ಹುಟ್ಟಲಿ. ಜಗತ್ತು ಮುಂದುವರಿಯಬೇಕಾದರೆ, ಸಂತತಿ ಉಳಿಯಬೇಕು. ಜಗತ್ತು ಮುಂದುವರಿಯುವಂತೆ ವಿಧಿಯು ಹಂಚಿಕೆ ಇರುವಾಗ ಸಂತತಿ ಆಗುವುದು. ಆದರೆ ಬುದ್ಧಿವಂತ ಮಕ್ಕಳು ಹುಟ್ಟಲಿ. ಬುದ್ಧಿಗೇಡಿ ಮನುಷ್ಯರು ಹಡೆಯಬೇಕಾಗಿಲ್ಲ. ಇತರ ಪ್ರಾಣಿಗಳಿಗೂ ಮಾನವನಿಗೂ ಇರುವ ಅಂತರವೇ ಬುದ್ಧಿ.

ಸಂಸಾರದಲ್ಲಿ ಸತಿಸುತರ ವಿಷಯ ತಿಳಿಸುಕೊಂಡೆವು. ಇನ್ನು ಸ್ವಾಧ್ಯಾಯದ ವಿಷಯ. ತತ್ತ್ವ-ಗ್ರಂಥಗಳನ್ನು ಓದುವ ಉದ್ದೇಶವಾದರೂ ಏನು ? ಸದ್ಗುಣಗಳು ನಮ್ಮಲ್ಲಿ ಉಳಿಯಲಿ ಎಂಬುವದೇ ಆಗಿದೆ. ಸದ್ಗುಣಗಳೇ ಇಲ್ಲವಾದರೆ ಕೇವಲ ಸ್ವಾರ್ಥಿ ದುರಾಚಾರಿಗಳು ಹೆಚ್ಚು-ಹೆಚ್ಚಾಗಿ ಓದುವುದರಿಂದ ಅವರಿಗೊ ಪ್ರಯೋಜನವಿಲ್ಲ. ಇತರರಿಗಂತೂ ಇಲ್ಲವೇ ಇಲ್ಲ.

ಹೋಲಿಸಿ ನೋಡಿರಿ :

" ವನಿತೆಯರೊಲವಾವ ನೆಪವೆಂದು ಮೋಹ-
ವನು ಮಾಡುವರು ಮುಕ್ತಿ ಪಡೆಯದೆ ನರರು ? "
" ಸುತನ ಸೊಗಸು ಮಿಗಿಲೆನ್ನದೆ ಚಿಂತಿಸದೆ,
ಮತಿವಂತರರಿದು ಮೋಹವನ್ನುಳಿದಿಹುದು. "
" ಬಿಡಬೇಕು ಬಲು ಹಿಂದೆ ಬಂದೆ ತನ್ನಿರವನು
ಕೆಡಿಸುವ ಕಾಮವಿದನು, ಕಂಡ ಯೋಗಿ. "

—ಕೈವಲ್ಯ ಪದ್ಧತಿ ನಿಜಗುಣಯೋಗಿ

೯೧೨

ಖಲುಲು ತಿಟ್ಟರನುಚು ಗಲವರಪಡನೇಲ ? ವಾರಿಟ್ಲನೇಮಿ ನಾಸಿಜೆಡುನು ?
ಸಜ್ಜನುಂಡು ದಿಟ್ಟ ಶಾಪಂಬದೌನಯಾ, ವಿಶ್ವದಾಭಿರಾಮ ವಿನುರ ವೇಮ

ಖಳರು ಬಯ್ದರೆಂದು ಕಳವಳ ಪಡಲೇಕೆ ?
ಒರಟು ಬೈಗಳಿಂದ ಒಳಿತು ಕೆಡದು.
ಸಜ್ಜನರು ಬಯ್ಯಲು, ಶಾಪವುಂಟು ನೋಡು.
ವಿಶ್ವದಾಭಿರಾಮ ಕೇಳು ವೇಮ

ಲೋಕದ ಜನರು ಇಬ್ಬಗೆಯಾಗಿರುವರು. ಖಳರು ಹಲವರ, ಸುಶೀಲರು ಹಲವರು. ದೈವಗುಣದವರು ಕೆಲವರು, ಅಸುರೀ ಗುಣದವರು ಕೆಲವರು. ಅಸುರೀ ಗುಣದ, ಖಳರೇ ಹೆಚ್ಚಾಗಿ ಜಗತ್ತಿನಲ್ಲಿ ತುಂಬಿರುವರು. ಇದರಿಂದ ಲೋಕವ್ಯವಹಾರದಲ್ಲಿ ಸರಿಯೆಂದು ಕಾಣುವದು, ಪರದ ದೃಷ್ಟಿಯಲ್ಲಿ ಸರಿಯಲ್ಲವೆನಿಸುವದು. ಲೋಕ ದೃಷ್ಟಿಯಿಂದ ದೇಹ, ಧನ-ಕನಕಗಳೆಲ್ಲ ನಿತ್ಯವೆನಿಸುತ್ತವೆ. ಪರದ ದೃಷ್ಟಿಯಿಂದ ಇವೆಲ್ಲ ಕೇವಲ ಕ್ಷಣಿಕ, ಮಿಥ್ಯೆಯೆನಿಸುತ್ತವೆ.

ಯೋಗಿಗಳು, ಸತ್ಯಬೋಧಕರು, ಪರಮ ಗುರುಗಳು ಸತ್ಯ ತಿಳಿಸುತ್ತಾರೆ. ತತ್ತ್ವ ಬೋಧಿಸುತ್ತಾರೆ. ಇವು ಹೆಚ್ಚಾಗಿ ಲೋಕವಿಚಾರಧಾರೆಗೆ ವಿರೋಗಿಧಿಯಾಗಿರುವದೇ ಹೆಚ್ಚು. ದೈವ ಗುಣದವರು ಇದನ್ನು ತಿಳಿದು ತತ್ತ್ವ ತಿಳಿಸುವವರನ್ನು ಸತ್ಯ ನುಡಿವವರನ್ನೇ ಮೂದಲಿಸುತ್ತಾರೆ. ಇಂಥವರ ಒರಟು ಬೈಗಳಿಂದ ಒಳಿತಾದುದು. ಅಂದರೆ, ಸಜ್ಜನರು ಬಯ್ಯದಂತೆ ಎಚ್ಚರ ವಹಿಸಬೇಕು. ಏಕೆಂದರೆ ಬಯ್ಯುವದೆಂದರೆ, ನಮ್ಮ ಆಚರಣೆಯಲ್ಲಿ ದೋಷವಿದ್ದಂತೆ. ಅದನ್ನು ಉಪೇಕ್ಷಿಸಿ ನಡೆದರೆ, ಕೇಡು ಖಂಡಿತ. ಅವರ ಬೈಗುಳ ಶಾಪವೆನಿಸುವದು.

(ಹೋಲಿಸಿ ನೋಡಿರಿ :

"ಆರು ಮುನಿದು ನಮ್ಮನೇನ ಮಾಡುವರು ? ಊರು ಮುನಿದು ನಮ್ಮನೆಂತು ಮಾಡುವರು ? ನಮ್ಮ ಕುನ್ನಿಗೆ ಕೂಸು ಕೊಡಬೇಡ. ನಮ್ಮ ಸೊಣಗಂಗೆ ತಳಿಗೆಯನಿಕ್ಕಬೇಡ ! ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲದೆ ? ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ."

-ಬಸವಣ್ಣ.)

೯೧೩

ದಾನಧರ್ಮಮುಲನು ದಗರೇವುರೇಹನಿ, ಕಾಲವ್ಯಯಮು ಜೇಯು ಗಷ್ಟಜನುಡು,
ತಾನುನೇಮಿಯಗುನೊ ಕನಬ್ರತುಕೇನೌನೊ, ವಿಶ್ವದಾಭಿರಾಮ ವಿನುರ ವೇಮ.

ದಾನಧರ್ಮಗೆಯ್ಯೆ, ದಿನವ ನೂಕಿ ನೂಕಿ,
ಕಾಲವ್ಯಯಿಸುವರು ಕೆಡುಕ ಜನರು.
ತಾನು ಏನಾಗುವ ? ತನ್ನ ಬದುಕದೇನೊ ?
ವಿಶ್ವದಾಭಿರಾಮ ಕೇಳು ವೇಮ.

ಏನೂ ಇಲ್ಲದವರಿಗೆ ಅವರು ಬಯಸಿದ ವಸ್ತುಗಳನ್ನು ನೀಡುವದೇ ದಾನ. ದಾನ ನಿಡುವಾಗ, ಪ್ರತಿಫಲದ ಆಶೆಯಿರಲಾರದು, ಇರಬಾಶದು.

ಧರ್ಮವೆಂದರೇನು ? ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಶ್ರೀ ಕೃಷ್ಣ ಧರ್ಮದ ವ್ಯಾಖ್ಯೆ ಮಾಡಿರುವದು, ಹೀಗೆ :"ಧಾರಣಾದ್ಧರ್ಮ ಮಿತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ | ಯತ್ ಸ್ಯಾತ್‌ಧಾರಣ ಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ||" 'ಧರ್ಮದಿಂದಲೇ ಎಲ್ಲ ಪ್ರಜೆಗಳು ಬದ್ಧರಾಗಿದ್ದಾರೆ. ಯಾವುದು ಧಾರಣಕ್ಕೆ ಕಾರಣವಾಗಿದೆಯೋ ಆದೇ ಧರ್ಮವು.' ಧಾರಣಕ್ಕೆ ಕಾರಣವಾಗಿರುವದು ಯಾವದು?

'ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ||
ಮನುಸ್ಮೃತಿ ೬-೯'

"ಸ್ಥೈರ್ಯ, ಕ್ಷಮೆ, ನಿಯಂತ್ರಣ, ಕದಿಯದಿರುವಿಕೆ, ಶೌಚ, ಇಂದ್ರಿಯ ನಿಗ್ರಹ, ಬುದ್ಧಿ, ವಿದ್ಯೆ, ಸತ್ಯ, ಕೋಪ ವಶವಾಗದಿರುವಿಕೆ,ಎಂಬ ಹತ್ತು, ಧರ್ಮ ಲಕ್ಷಣಗಳಾಗಿವೆ"

ದಾನ-ಧರ್ಮಗಳೆಂದರೇನು ? ಎಂಬುದನ್ನು ತಿಳಿದ ಮೇಲೆ, ಇವುಗಳನ್ನು ಆಚರಿಸದಿದ್ದರೆಂತು ? ಪ್ರತಿಕ್ಷಣವೂ ದಾನ-ಧರ್ಮದ ಆಚರಣೆಯಲ್ಲಿ ತೊಡಗಬೇಕು.

ಇಲ್ಲದಿದ್ದರೆ ಈ ಜೀವನದಿಂದೇನು ಫಲ ? ದಾನ-ಧರ್ಮಗಳನ್ನು ನಾಳೆ ಮಾಡುವಾ; ನಾಡಿದ್ದು ನೋಡುವಾ ಎಂದು ಕಾಲ ತಳ್ಳುವವರು, ಸುಜನರಲ್ಲ, ಕುಜನರು. ಯಾರು ಕೆಡುಕರೋ,ಅವರು ಮಾತ್ರ ದಾನ-ಧರ್ಮ ಉಪೇಕ್ಷಿಸಬಹುದು. ಲೋಕವ್ಯವಹಾರದಲ್ಲಿ ಇರುವಷ್ಟು ಕಾಲ ದಾನಧರ್ಮ ಮಾಡಲೇಬೇಕು.

ಹೋಲಿಸಿ ನೋಡಿರಿ :

'ಅಂಗಂ ಗಲಿತಂ ಪಲಿತಂ ಮುಂಡಂ ದಶನವಿಹೀನಂ ಜಾತಂ ತುಂಡಮ್ |
ವೃದ್ಧೋ ಯಾತಿ ಗೃಹೀತ್ವಾ ದಂಡಂ ತದಪಿ ನ ಮುಂಚತ್ಯಾಶಾಪಿಂಡಮ್ ||

'ದೇಹವು ಸಡಿಲಾಗಿದೆ. ದವಡೆ ದಂತಹೀನವಾಗಿದೆ. ತಲೆ ಬೋಳಾಗಿದೆ. ಮುದಿತನ ಅಡರಿದೆ. ಕೈಯಲ್ಲಿ ಕೋಲು ಬಂದಿದೆ. ಆದರೂ ಅವನು ನಿಷ್ಫಲವಾದ ಆಶೆಯ ಬೆಂಬತ್ತಿ ಹೊರಟಿದ್ದಾನೆ !

ಚರ್ಪಟಪಂಜರೀಕಾ–ಆಚಾರ್ಯ ಶಂಕರ)

೯೦೪

ಎಲ್ಲಲೋಕಮುಲನು ನೇವಸ್ತುವುನ್ನಹೋ, ತಲ್ಲಿಪಿಲ್ಲಸಂದು ದಗುಲನದಿಯೆ,
ನಿಸ್ತರಂಗವಾರ್ಧಿ ನಿಯಂತಿನಿ ಜೂಡುಮು, ವಿಶ್ವದಾಭಿರಾಮ ವಿನುರ ವೇಮ.

ಎಲ್ಲ ಲೋಕಗಳಲಿ ಯಾವ ವಸ್ತುವಿದೆಯೊ,
ಸುತ–ಮಾತೆ ನಂಟಿಗೆ ಸಾಟಿಯಹುದು.
ಸ್ಥಿರವಾದ ಸಮುದ್ರ ಸ್ಥಿತಿಯಿರುವುದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಈಶೋಪನಿಷತ್ತಿನ ಪ್ರಥಮ ಮಂತ್ರ ಹೀಗಿದೆ :

" ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ |
ತ್ಯೇನ ತ್ಯಕ್ತೇನ ಭುಂಜೀಥಾ, ಮಾಗೃಧಃ ಕಸ್ಯಸ್ವಿದ್ಧನಮ್ ||"

'ಜಗತ್ತಿನಲ್ಲಿ (ಗಚ್ಛತಿ ಇತಿ ಜಗತ್) ಚಲನಾತ್ಮಕವಾದದ್ದು ಏನೇನು ಇದೆಯೋ ಇದೆಲ್ಲವೂ ಈಶನಿಂದ (ಸರ್ವ ಪ್ರಾಣಗಳ ಆತ್ಮನಾಗಿ ಆಳುವವನಿಂದ) ಆವರಿಸಲ್ಪಡತಕ್ಕದ್ದು. ಅದರ ತ್ಯಾಗದಿಂದ ನಿನ್ನನ್ನು ರಕ್ಷಿಸಿಕೋ. ಯಾರ ಧನವನ್ನೂ ಬಯಸಬೇಡ.'

ಚಂದನಕ್ಕೆ ನೀರಿನ ಸಂಪರ್ಕ ಬಂದಾಗ ದುರ್ಗಂಧ ಉಂಟಾಗುತ್ತದೆ. ಅದೇ ನೀರಿನೊಂದಿಗೆ ಚಂದನ ತೆಯ್ದರೆ ಸುಗಂಧ ಬರುವುದು. ಆತ್ಮ ಮತ್ತು ಜಗತ್ತು ಒಂದಾದರೆ, ಭೇದ ಭಾವವಿರುವಾಗ ಉಂಟಾದ ದುಃಖ ನಾಶವಾಗಿ, ಅಭೇದ ಸ್ಥಿತಿಯಲ್ಲಿ ಕೇವಲ ಆನಂದ ಉಳಿಯುವದು.

ಎಲ್ಲ ಲೋಕಗಳಲ್ಲಿ ಯಾವ ವಸ್ತುವಿದೆಯೋ ಅದೇ ಈಶ; ಸರ್ವಾಂತರ್ಯಾಮಿ; ಸರ್ವಾತ್ಮ. ತಾಯಿ–ಮಕ್ಕಳ ಸಂಬಂಧದಂತೆ ಇದೆಲ್ಲ. ತಾಯಿ ಗರ್ಭದಿಂದ ಮಗ ಜನಿಸುವನು. ಜನನ ಕ್ರಮವಿರುವುದು ಹೀಗೆ: 'ಮೊದಲು ಪುರುಷನಲ್ಲಿ ರೇತೋರೂಪವಾದ ಗರ್ಭವಾಗುತ್ತಾನೆ. ಈ ರೇತಸ್ಸು ಸರ್ವಾಂಗಗಳಿಂದ ತೇಜಸ್ಸಾಗಿ ರೂಪಗೊಂಡಿರುವುದು. ಅದನ್ನು ಸ್ತ್ರೀಯಲ್ಲಿ ಸೇಚನ ಮಾಡುವನು. ಅದು ಸ್ತ್ರೀಯೆ ಆತ್ಮರೂಪವನ್ನು ಆಕೆಯ ಅಂಗವು ಹೇಗೋ ಹಾಗೆ ಹೊಂದುತ್ತದೆ. ಆದುದರಿಂದ ಅವಳನ್ನು ಹಿಂಸಿಸುವದಿಲ್ಲ, ಅಲ್ಲಿ ಬೆಳೆದು ರೂಪಗೊಂಡು ಶಿಸುವಿನ ಪ್ರಸವವಾಗುವದು. ತಾಯಿಗೆ ಮಗನ ಸಂಬಂಧ ಇರುವುದು ಹೀಗೆ.' ದೇವನೂ ಲೋಕದೊಡನೆ ಇಡುವ ಸಂಬಂಧ ತಾಯಿ–ಮಕ್ಕಳ ಸಂಬಂಧದಂತೆ; ನಿಮಿತ್ತಮಾತ್ರನಾಗಿ ಪುರುಷನ ರೇತಸ್ಸು ಆಕಾರಗೊಳ್ಳಲು ಸ್ತ್ರೀ ನಿಮಿತ್ತಳಾದಂತೆ. ಲೋಕ ಮತ್ತು ದೇವರ ರೀತಿಯನ್ನು, ಸಾಗರ ಮತ್ತು ಅದರಲ್ಲಿ ಚಲಿಸಿದಂತೆ ಕಾಣುವ ತೆರೆಗಳಿಗೂ ಹೋಲಿಸುವುದುಂಟು. ಇದು ಒಂದು ತೆರೆ; ಅದು ಇನ್ನೊಂದು. ಇದು ಮುಂದೆ ಹೋಯಿತು. ಮಾಯವಾಯಿತು. ತೆರೆಯು ಸತ್ಯವಲ್ಲ. ಸತ್ಯವಾದುದು ನೀರು. ಗತಿ ಅದರ ಗುಣವಲ್ಲ. ಸ್ಥಿರತೆ ಅದರ ಗುಣ. ಸಾಗರ ದಾಳದಲ್ಲಿ ನೀರು ಸ್ಥಿರವಾಗಿಲ್ಲವೇ ? ಬ್ರಹ್ಮ ಹಾಗುಂಟು.

೯೦೫

ವಲಯನುನ್ನರಾದು ವದ್ದನ್ನ ಬೋದದಿ, ತೊಲಿಸಲಿಪಿನ ಕರ್ಮ ತಲಮುಟಂಚು,
ನಲ್ಲಮುಂದು ವಗವಕಂಡುಟೇಧರ್ಮಂಬು. ವಿಶ್ವದಾಭಿರಾಮ ವಿನುರ ವೇಮ.

ಬೇಕು ಎನಲು ಬರದು; ಬೇಡವೆನುಬಿಡದು,
ಪೂರ್ವ ಕರ್ಮಕಂಟಿ ಫಲವು ಉಂಟು
ಹೃದಯದಲ್ಲಿ ದುಃಖ ಪಡದಿರುವುದೆ ಧರ್ಮ
ವಿಶ್ವದಾಭಿರಾಮ ಕೇಳು ವೇಮ.

ಕರ್ಮ ಎಂಬುದು ಮಾಡಿದ ಕೆಲಸ. ದೈಹಿಕವಾಗಿರಬಹುದು; ವಾಚಿಕವಾಗಿರಬಹುದು; ಮಾನಸಿಕವಾಗಿರಬಹುದು. ಅದು ಹೇಗೆ ? ಕಳವುಮಾಡುವುದು ಕರ್ಮ. ಹೆರವರ ವಸ್ತುವನ್ನು ಅಪಹರಿಸಿಕೊಂಡು ಎತ್ತಿಕೊಂಡೊಯ್ಯುವುದು, ದೈಹಿಕ ಕಳವು. ಅದೇ ವಸ್ತುವನ್ನು 'ಅಪಹರಿಸಬೇಕು' 'ಎತ್ತಿಕೊಂಡೊಯ್ಯಬೇಕು' 'ಅದು ಅವನಿಂದ ತೊಲಗಿ ನನ್ನದಾಗಲಿ' ಎಂದು ನುಡಿದಾಗಲೆಲ್ಲ ವಾಚಿಕ 'ಕಳವು' ಸಂಭವಿಸುವುದು.

ಇನ್ನು ಹೆರವರ ವಸ್ತುಗಳನ್ನು ಕುರಿತು ಆಸೆ ಬಟ್ಟು, ಅದು ತಮ್ಮದಾಗಲೆಂದು ಹಪಾಹಿ ಸುವುದು ಮಾನಸಿಕ ಕಳವು. 'ಕಳವು' ತ್ರಿವಿಧಗಳಲ್ಲಿ ಯಾವದೊಂದು ರೀತಿಯಲ್ಲಾ ದರೂ, ಪಾಪವೇ. ಪಾಪಕ್ಕೆ ಫಲವುಂಟು. ಪಾಪ ಫಲ ಮನಃಕ್ಲೇಶ. ದುಃಖ. ಕಳವು ಮಾಡಿದರೆ, ಕಠಿಣ ಶಿಕ್ಷೆ ವಿಧಿಸುವರಲ್ಲವೇ? ಶಿಕ್ಷೆ ವಿಧಿಸುವ ಲೋಕದ ಕಾಯದೆಗಳಿಲ್ಲ ದಿದ್ದರೂ, ದೈವಿಕ ಕಾಯದೆ ಇದ್ದೇ ಇದೆ. ಅದೇ ವಿಧಿ. ಕರ್ಮ ಫಲಿಸುವದು ವಿಧಿನಿಯ ಮದಂತೆ. ನಮ್ಮ ಪೂರ್ವಕರ್ಮಗಳ ಫಲ ತಪ್ಪದೆ, ಉಂಟು. ಆ ಫಲವು ಪ್ರಸ್ತುತ ಕಾಲ ದಲ್ಲಿ ಇಷ್ಟವಾಗಿರಬಹುದು; ಅನಿಷ್ಟವಾಗಿರಬಹುದು; ಮಿಶ್ರವಾಗಿರಬಹುದು. ಆದರೇನು? ಅದು ಅಪರಿಹಾರ್ಯ. ಅದು ಬೇಕು ಎಂದರೆ ಬರದು; ಬೇಡವೆಂದರೆ ಬಿಡದು. ಸಮು ದ್ರದಲ್ಲಿ ಒಂದು ಕಲ್ಲು ಎಸೆಯಿರಿ. ಕೂಡಲೇ ಪರಿಣಾಮವುಂಟು. ಅಲೆಗಳೇಳುವುದಿಲ್ಲವೇ? ಅದೇ ರೀತಿ. ನಮ್ಮ ಕರ್ಮದಿಂದ ಚಿತ್ತವೃತ್ತಿಗಳೆದ್ದು ಕೊನೆಗೆ ಪರಿಣಾಮ ಒಟ್ಟಾಗಿ ವ್ಯಕ್ತ ವಾಗುವದು.

ಹಾಗಾದರೆ, ದುಃಖಶಮನಕ್ಕೆ ಉಪಾಯವೇನು? ಪರಿಸ್ಥಿತಿ ಎದುರಿಸುವ ಧೈರ್ಯ ಪಡುವದೆಂತು? ನಿಮಗೆ ಒದಗುವ ಸುಖ–ದುಃಖಗಳ ಚಿಂತೆ ಬೇಡ. ನೀವು ದುಃಖ ಬಂದಾಗ ಅಧೀರರಾಗಬೇಡಿ. 'ಧಾರಣಾತ್ ಇತಿ ಧರ್ಮ ಇತ್ಯಾಹುಃ' ನಿಮ್ಮನ್ನು ಎತ್ತಿ ಹಿಡಿಯುವುದೇ ಧರ್ಮ. ಹೃದಯದಲ್ಲಿ, ಯಾವ ಪ್ರಸಂಗದಲ್ಲಿಯೂ ದುಃಖ ಪಡ ದಿರುವುದೇ ಧರ್ಮ. ಧರ್ಮದಂತೆ ನಡೆಯಿರಿ.

(ಹೋಲಿಸಿ ನೋಡಿರಿ :

" ಕರ್ಮವಾಸನೆ ಕೆಡದೆ ತೋರಲದರಿಂ ದೇಹ |
ಧರ್ಮವಿರಲೀನವನೆ ಮುಕ್ತನೈಸೆ ||"–ಸೂತ್ರ
" ಭೋಗಿಸಿದೊಡಲ್ಲದೇ ಪೋಗದಾರಬ್ಧಂ ತ್ರಿ |
ಭಾಗೆಯಿಂದಿಚ್ಛೆ ಮೊದಲಾದರೂಪಂಗ |
ಳಾಗಿ ಸುಖ ದುಃಖಗಳ ನೀಗು "

ನಿಜಗುಣಯೋಗಿ ಅನುಭವಸಾರ ೭–೬)

೯೧೬

ತನಕುಬ್ಕೊದ್ದುಪೋನಿ ತರುಣಂಬ ದೈನಜೋ, ವಿನಕತೀರದಧಿಕ ವಿದ್ಯೆ- ಯೈನ.
ಗಿತವಿನದೆ ಪ್ರಿಯುನಿಕೊರಕು ಗಾಕಪ್ಪನಿ ? ವಿಶ್ವದಾಭಿರಾಮ ವಿನುರ ವೇಮ.

ತನಗೆ ಹೊತ್ತು ಹೋಗ-ದಂಥ ಕಾಲವಿರಲಿ.
ಅಲಿಸದಿರೆ ಹೊಲ್ಲ, ಅಧಿಕ ವಿದ್ಯೆ.
ನಲ್ಲೆ ಕಾಗೆ-ಧ್ವನಿ, ನಲ್ಲ ಅಗಿಯಷ್ಟೆ
ವಿಶ್ವದಾಭಿರಾಮ ಕೇಳು ವೇಮ

ಪರಮ ಸತ್ಯವಾದರೂ ಏನು? 'ಸರ್ವಂ ಖಲ್ವಿದಂ ಬ್ರಹ್ಮ' 'ಈ ಎಲ್ಲವೂ ನಿಜವಾಗಿ ಬ್ರಹ್ಮವೇ ಆಗಿದೆ.' 'ತತ್ ತ್ವಮ್ ಅಸಿ' 'ಅದೇ (ಆ ಬ್ರಹ್ಮವೇ) ನೀನು ಆಗಿರುವಿ.' ಇದನ್ನು ನಂಬಿದರೆ ತೀರಿತು. ಹೆಚ್ಚಿನ ಪಠಣ–ಶ್ರವಣಾದಿಗಳೇಕೆ? ಕೊನೆಗೆ ಇದಿಷ್ಟು ಮಾತ್ರ ತಿಳಿಯಲು ತಾಡು ಕುಟ್ಟುವದೇಕೆ? ಎಂದು ಯಾರಾದರೂ ಸಹಜ ವಾಗಿ ನುಡಿಯಬಹುದು. ಆದರೆ ಇಲ್ಲಿ ಒಂದು ಮಾತು ಹೇಳುವದು ಅವಶ್ಯ. ಅಧಿಕ ವಿದ್ಯೆ ನಾವು ತಿಳಿದಷ್ಟು ಸುಲಭ–ಗ್ರಾಹ್ಯವಲ್ಲ. 'ಅಧಿಕ ವಿದ್ಯೆ' ಎಂದರೆ 'ಪರಾ ವಿದ್ಯೆ' ಇದನ್ನು ಸಾಧಿಸಬೇಕು. ಅಳವಡಿಸಿಕೊಳ್ಳಬೇಕು. ಇದರ ಸಾಧನೆಯ ಕ್ರಮವಾವದು? ತರ್ತ್ವ ಗಳನ್ನು ಹೆಚ್ಚು ಹೆಚ್ಚಾಗಿ ಶ್ರವಣ ಮಾಡಬೇಕು. ಪಠಣ ಮಾಡಬೇಕು. ಮನನ ಮಾಡ ಬೇಕು. ಕೆಲಸಬೊಗಸೆ ಇರುವಾಗ ಶ್ರವಣವು ಸಾಧ್ಯವಾಗದಿರಬಹುದು. ಆದರೆ ವಿರಾಮ ಕಾಲದಲ್ಲಿಯೇ ಆಗಲಿ, ತನಗೆ ಹೊತ್ತು ಕಳೆಯಲು ಬೇರಾವ ಮಾರ್ಗಗಳು ಇಲ್ಲದ ಕಾಲ ದಲ್ಲಿ ಆಗಲಿ, ತತ್ತ್ವ ಶ್ರವಣ ಮಾಡದಿದ್ದರೆ ಒಳ್ಳೆಯದಲ್ಲ.

ತತ್ತ್ವ–ಪ್ರವಚನಾದಿಗಳು ಜರುಗುವದಾದರೂ ಏತಕ್ಕೆ? ಪ್ರವಚನಕಾರರೆ ಮಾತು ಗಾರಿಕೆಯ ಪ್ರದರ್ಶನಕ್ಕಲ್ಲ. ಅವರ ಮೋಕ್ಷಕ್ಕಲ್ಲ. 'ಆಯಮಾತ್ಮಾ ಪ್ರವಚನನೇನ ನ ಲಭ್ಯಃ' 'ಈ ಆತ್ಮವು ಪ್ರವಚನದಿಂದ ಲಭ್ಯವಲ್ಲ' ಅಂದ ಮೇಲೆ ಪ್ರವಚನಗಳ ಪ್ರಯೋ ಜನವು ಶ್ರೋತೃಗಳಲ್ಲಿ ತತ್ತ್ವಗಳ ಅರ್ಥ ಬಿಂಬಿಸುವದು ತಾನೇ? ಮನೆಯಲ್ಲಿ ಹೆಂಡತಿ ಕೆಲವೊಮ್ಮೆ 'ಬಿರುಸು ನುಡಿದಂತೆ' ಅನ್ನಿಸುತ್ತದೆ. ನಿಷ್ಠುರವಾದ ಸತ್ಯ ಬಿರುಸಾಗಿ ಕಾಣುವದು. ಅವಳದು ಕಾಗೆಯ ಧ್ವನಿಯೆನ್ನಿಸಬಹುದು. ಆದರೆ ಅವಳು ನಿನ್ನನ್ನು ನೆಚ್ಚಿ ಬಂದವಳು. ನಲ್ಮೆಗಾಗಿ ಒಲಿದು ಬಂದವಳು; ನಲ್ಲೆ. ನಲ್ಲೆಯ ಕಾಗೆಧ್ವನಿ ನಲ್ಲನ ಕ್ಷೇಮಕ್ಕಾಗಿ. ಶ್ರವಣವೂ ಅದೇ ರೀತಿ. ಕೇಳುಗರ ಕಲ್ಯಾಣವೇ ಹೇಳುವವನ ಬಯಕೆ.

೯೧೭

ಅಗ್ನಿಶಿಖಲಯಂದು ನಮರಂಗ ಮುಮಕಾರ, ಮುಮವುಮೀದ ಧ್ಯಾನ ಮುಮರನುನಿಚಿ,
ಆಹುತಿಯಗುವೆನ್ನ ಹರುನಿ ನರ್ಪಿಂಪುಮು, ವಿಶ್ವದಾಭಿರಾಮ ವಿನುರ ವೇಮ.

ಅಗ್ನಿಶಿಖೆಗಳಲ್ಲಿ ಅಮರವು ಮುಮಕಾರ,
ಅಭವ ಮೇಲೆ ಧಾನ್ಯ ಅಮರಗೊಳಿಸಿ,
ಆಹುತಿಯಾದ ಬಳಿಕ ಆ'ಹರ'ನನರ್ಚಿಸು
ವಿಶ್ವದಾಭಿರಾಮ ಕೇಳು ವೇಮ.

'ನನ್ನದು' ಎನ್ನುವ ಮಮಕಾರವನ್ನು ಆಹುತಿ ಮಾಡಬೇಕು. 'ನನ್ನ ದೇಹ, ನನ್ನ ಆಸ್ತಿ, ನನ್ನ ರಕ್ತಸಂಬಂಧಿಗಳು, ನನ್ನ ಇಷ್ಟಮಿತ್ರರು' ಎನ್ನುವ 'ಮಮತೆ'ಯೆಲ್ಲ ಜ್ಞಾನಾ ಗ್ನಿಯಲ್ಲಿ ಆಹುತಿಯಾಗಬೇಕು. ಮಮಕಾರವೇ ಹವಿಸ್ಸು. ಜ್ಞಾನವೇ ಅಗ್ನಿ. ಮಮ

ಕಾರವನ್ನು ಹೋಮಮಾಡುವುದರಿಂದ ಉಳಿಯುವ ಯಜ್ಞಾವಶೇಷವೇ ಅಮರತ್ವ, ಅಮೃತ, ಆದರೆ ಈ ಜ್ಞಾನ ಹೊಂದುವುದು ಹೇಗೆ? ಜ್ಞಾನಾಗ್ನಿ ಹೊತ್ತಿಸುವದೆಂದರೇನು? ಅಭವ ಅಂದರೆ ಭವ-ಸೃಷ್ಟಿ-ಜನನ ಇಲ್ಲದಂಥವನು, ಅವನೇ ಅಜನು ಬ್ರಹ್ಮ. ನಿತ್ಯ ಬ್ರಹ್ಮೋಪಾಸನೆ ಮಾಡಬೇಕು. ತತ್ತ್ವ ತಿಳಿಯಬೇಕು. ಶಬ್ದ ಕೇಳಬೇಕು. ಅರ್ಥ ಹೊಳೆಯುತ್ತದೆ, ಜ್ಞಾನಾನುಭವವೂ ಆಗುವುದು. ಜ್ಞಾನವಾದಾಗ 'ಇದೆಲ್ಲ ನಿಜವಾಗಿ ಬ್ರಹ್ಮವೇ' ಎನಿಸುವದು. ಮಮಕಾರ ದಗ್ಧವಾಗುವದು.

ಮಮಕಾರ ಆಹುತಿಯಾದ ಬಳಿಕ, ಆ ಭವಹರನನ್ನು ಅರ್ಚಿಸು. ಏಕೆಂದರೆ ಭವದಿಂದ ತೆಗೆದುಕೊಂಡ್ಯೊಲು ಆಗ ಮಾತ್ರ ನೀನು ಪಾತ್ರನಾದಂತೆ.

(ಹೋಲಿಸಿ ನೋಡಿರಿ :

"ಈಗ ನನ್ನ ಪ್ರಾಣವಾಯುವು ಸಾವಿಲ್ಲದ ಅನಿಲವನ್ನು (ಸರ್ವಾತ್ಮನಾದ ಸೂತ್ರಾತ್ಮ ಮಾತರಿಪ್ವ) ಸೇರಲಿ, ಈ ದೇಹವು ಬೂದಿಯೊಗಲಿ. ಓಂ ಕ್ರತುವೆ (ಸಂಕಲ್ಪರೂಪನಾದ ಅಗ್ನಿ,) ಸ್ಮರಿಸು. ಮಾಡಿರುವದನ್ನು ಸ್ಮರಿಸು".

"ಹೇ ಅಗ್ನಿ, ಕರ್ಮಫಲದ ಭೋಗಕ್ಕಾಗಿ ನಮ್ಮನ್ನು ಒಳ್ಳೆಯ ಮಾರ್ಗದಲ್ಲಿ ಕರೆದು ಕೊಂಡು ಹೋಗು, ಹೇ ದೇವ, ನೀನು ಎಲ್ಲ ಕರ್ಮಗಳನ್ನು ತಿಳಿದಿರುವವನು. ನಮ್ಮ ಕುಟಿಲ ಪಾಪವನ್ನು ನಾಶಮಾಡು. ನಿನಗೆ ಪುನಃ ಪುನಃ ನಮಸ್ಕಾರ ವಚನ ಹೇಳುತ್ತೇವೆ)"

[ಈಶೋಪನೀಷತ್. ೧೭–೧೮.]

೯೦೮

ಆಶಲನೆಡಿದಿತ್ರಾಳ್ಳ ನಖಿಲಜಂತುವುಲನು, ಗಟ್ಟಿಬಡನು ಗಾನ ನಿಟ್ಟಲಮುನ,
ಜ್ಞಾನಮನಡಿ ಚುರಿಯ ಬೂನಿಕೋಯಗನೌನು, ವಿಶ್ವದಾಭಿರಾಮ ವಿನುರ ವೇಮ,

ಆಶೆಯೆಂಬ ಪಾಶ ಅಖಿಲ ಜಂತುಗಳನು,
ಕಟ್ಟುತಿಹುದು ಕಾಣು ಕಟು ಸತ್ಯವ;
ಜ್ಞಾನಚೂರಿ ಹಿಡಿದು ಜಡವ ಕಡಿಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ಆಶೆಯು ಹಗ್ಗದಂತೆ. ಕಟ್ಟುವ ಹಗ್ಗದಿಂದ ಪ್ರಾಣಿಗಳನ್ನು ಬಂಧಿತ್ತಾರಷ್ಟೇ. ಆದರಿಂದ ಸಾಕುಪ್ರಾಣಿಗಳೆಲ್ಲ ತಮ್ಮ ಸ್ವಾತಂತ್ರ್ಯ ಕಳೆದುಕೊಳ್ಳುತ್ತವೆ. ಆಶೆಯುಳ್ಳ ಮನುಷ್ಯನು ತನ್ನ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾನೆ, ಯಾವುದೋ ಒಂದು ವಿಷಯ-ವಸ್ತು ಭೋಗಕ್ಕಾಶಿಸಿ, ತನ್ನ ಸ್ವಚ್ಛಂಧ ಸ್ವಭಾವದಿಂದ ದೂರಾಗುತ್ತಾನೆ. ಆ ವಿಷಯ ವಸ್ತು ಪಡೆಯಲು ಉದ್ಯುಕ್ತನಾಗುತ್ತಾನೆ. ಸಕಲ ಪ್ರಾಣಿಗಳನ್ನೂ ಆಶೆ ಕಟ್ಟಿ ಹಾಕುವದು. ನೊಣವು ಜೇನು ಹನಿ[illegible]ಶಿಸುತ್ತದೆ. ತನ್ನನ್ನೇ ಹಿಡಿಯಲು ಕುಳಿತ ಕಪ್ಪೆಯತ್ತ ಅದರ ಲಕ್ಷ್ಯವಿಲ್ಲ. ಕಪ್ಪೆನೊಣ ಹಿಡಿಯಲು ಆಶಿಸುತ್ತದೆ, ಆದರೆ ತನ್ನನ್ನೇನುಂಗಲು

ಕುಳಿತ ಹಾವಿನ ಕಡೆಗೆ ಅದರ ಲಕ್ಷವಿಲ್ಲ. ಹಾವು ಕಪ್ಪೆ ಹಿಡಿಯಲು ಆಶೆ-ಬಡುತ್ತದೆ. ಆದರೆ ತನ್ನನ್ನೇ ಹೊಡೆದು ಕೊಲ್ಲುವ ಮುಂಗಲಿಯತ್ತ ಅದರ ಲಕ್ಷ್ಯವಿಲ್ಲ. ಮುಂಗಲಿಯ ಹಾಡೂ ಅದೇ ರೀತಿ. ಮನುಷ್ಯನದೂ ಬೇರೆಯಲ್ಲ. ಯಾವುದು ಸತ್ಯವೋ, ಅದನ್ನು ತಿಳಿಯಲು ಪ್ರಯತ್ನಿಸಬೇಕು.

ಇದಕ್ಕೆ ಜ್ಞಾನ ಪಡೆಯಬೇಕು. ಜ್ಞಾನದ ಚೂರಿಯಿಂದ ಅಜ್ಞಾನದ ಜಡವನ್ನು ಕಡಿದೊಗೆಯಬೇಕು. ಜಡತೆಯು ತೊಲಗಿದರೆ, ಚೇತನವು ತಾನೇ ತಾನಾಗುವದು ಚೈತನ್ಯವು ಜ್ಞಾನ ಲಕ್ಷಣ-

[ಹೋಲಿಸಿ ನೋಡಿರಿ :

'ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪ ವರ್ಜಿತಾಃ |
ಜ್ಞಾನಾಗ್ನಿದಗ್ಧ ಕರ್ಮಾಣಂ ತಮಾಹುಃ ಪಂಡಿತಾಃ ಬುಧಾಃ||'

(ಭಗವದ್ಗೀತಾ ೪—೧೯)

'ಯಾವನ ಕರ್ಮಗಳೆಲ್ಲಾ ಕಾಮ ಸಂಕಲ್ಪಗಳಿಂದ ವರ್ಜಿತವಾಗಿವೆಯೋ, ಯಾವನ ಕರ್ಮಗಳು ಜ್ಞಾನವೆಂಬ ಅಗ್ನಿಯ ದ್ವಾರಾ ಸುಡಲ್ಪಟಿವೆಯೋ, ಅವನನ್ನು ಜ್ಞಾನಿಗಳು ಪಂಡಿತನೆಂದು ಹೇಳುವರು.']

೯೦೯

ಜಲ್ಲಿಮಾಟಲನುಚು ಜಗಮುನಂದಿರಿಗೆಡು, ಕಲ್ಲಗುರುಡುಕಟ್ಟು ಗರ್ಮಚಯಮು
ಹಲ್ಲುಪುರುಗುಚೇರಿ ಹಲವಿಂಪಜೇಯದಾ ? ವಿಶ್ವದಾಭಿರಾಮ ವಿನುರ ವೇಮ.

ಜೊಳ್ಳು ಮಾತನಾಡಿ ಜಗದಿ ತಿರುಗುವವನು,
ಕಳ್ಳ ಗುರು ಕಟ್ಟುವ ಕರ್ಮಗಳನು.
ಹಲ್ಲೊಳು ಹುಳು ಸೇರಿ, ನೋವುಂಟು ಮಾಡದೆ?
ವಿಶ್ವದಾಭಿರಾಮ ಕೇಳು ವೇಮ

ನಮ್ಮಲ್ಲಿ ಹಲವು ಜನ 'ಸಿದ್ಧಪುರುಷ' ರೆಂದು ಹೇಳಿಕೊಂಡು ಅಲೆಯುವರು. ಮನಸ್ಸಿನ ಏಕಾಗ್ರತೆಯ ಸಾಧನಮಾರ್ಗದಲ್ಲಿ ಅವರಿಗೆ ಹಲವು ಸಿದ್ಧಿಗಳು ಲಭ್ಯವಾಗುತ್ತವೆ. ಜನರ ಮನಸೆಳೆಯುವ ಆಸೆಗೆ ಬಿದ್ದ ಕೆಲ ಸಾಧಕರು ಸಿದ್ಧಿ ಪ್ರದರ್ಶನಕ್ಕೆ ನಿಲ್ಲುತಾರೆ. ಇನ್ನು ಹಲವರು ಮಂತ್ರಾದಿಗಳನ್ನು ಕಂಠ ಪಾಠ ಮಾಡುತ್ತಾರೆ. ಜನರೆದುರು ಮಂತ್ರ ಪಠಣವೇ ದಿವ್ಯಜ್ಞಾನವೆಂದು ತೋರಿಸಿಕೊಳ್ಳುತ್ತಾರೆ. ಇನ್ನೂ ಒಂದು ರೀತಿಯ ಜನರು ದೊಡ್ಡ ದೊಡ್ಡ ಮಠ ಕಟ್ಟಿಕೊಂಡವರ ಉತ್ತರಾಧಿಕಾರಿಗಳಾಗುವರು. ಇವರಲ್ಲಿ ಆಧ್ಯಾತ್ಮಿಕ ಸಾಧನೆಯ ಗಂಧವಿಲ್ಲದೆ ಇರುವವರೆಷ್ಟೋ ಜನ. ಇಂಥವರೆಲ್ಲ ಕಳ್ಳಗುರುಗಳು. ಇವರು ಜನರನ್ನು ತಪ್ಪು ಹಾದಿಗೆಳೆಯುತ್ತಾರೆ. ಇವರ ಬೋಧೆಯ ರೀತಿಯೇ ಬೇರೆ. ಯಾವು

ದೋ ಪುರಾಣದಲ್ಲಿ ಬರೆದ : ವ್ರತ ಮಾಡಿರಿ; ಸಾಕು. ನೀ ವ ಮಾಡಿದ ಪಾಪ ತೊಲಗ ವುದು ' ಎನ್ನುತ್ತಾರೆ. ಈ ವ್ರತವಾದರೋ ಲೌಕಿಕ ವ್ಯವಹಾರವಷ್ಟೇ. ಯಾವನೋ ಒಬ್ಬ ಮಂತ್ರ ಹೇಳುವನು. ಹಣ ಪಡೆದು ಬೇರೊಬ್ಬನಿಗಾಗಿ ಒಂದು ಚಿತ್ರದ ಎದುರು ಹಣ್ಣು–ಹಂಪಲ ಇಟ್ಟು, ಮಂತ್ರ ಹೇಳುವುದು. ಕೊನೆಗೆ ಹಣ–ಹಣ್ಣು ಎಲ್ಲ ಬಳಿದು ಕೊಂಡೊಯ್ಯುವನು. ಇನ್ನು ಯಂತ್ರ ಕಟ್ಟುವವರು, ಹಲವರು. ಕಾಶಿಗೆ ಹೋಗಿ ಸತ್ತರೆ, ತೀರಿತು. ವಿಶ್ವೇಶ್ವರ ಬಂದು ಬಲಗಿವಿಯಲ್ಲಿ ತಾರಕ ಮಂತ್ರ ಊದುವನು. ಅದರಿಂದ ಪಾಪ ಪರಿಹಾರವಾಗಿ ಮುಕ್ತಿಯಾಗುವುದು, ಎಂಬಿತ್ಯಾದಿ ಪೂಜಾವ್ರತ, ಕಾಶೀ ಯಾತ್ರೆ, ಯಂತ್ರ, ಉಪವಾಸ ವ್ರತ, ಇತ್ಯಾದಿ ಕರ್ಮಗಳನ್ನು ಕಟ್ಟುತ್ತಾರೆ. ಇಷ್ಟೇ ಸಾಲದೆಂಬಂತೆ, ಕಾಗೆ ಮನೆ ಹೊಕ್ಕರೆ ಗೃಹಶುದ್ಧಿ, ಯಾರೋ ಸತ್ತರೆ ಶ್ರಾದ್ಧ ಕರ್ಮ, ಸತ್ತವರಿಗಾಗಿ ಪಿಂಡಕರ್ಮ ಎಂದು ನೂರೆಂಟು ಕರ್ಮಗಳನ್ನು ಮುಗ್ಧ ಜನರ ತಲೆಗೆ ಕಟ್ಟುತ್ತಾರೆ. ಇದರಿಂದ ಜನರಿಗೆ ಸತ್ಯಸಾಕ್ಷಾತ್ಕಾರದ ಮಾರ್ಗ ಯಾವುದೋ ಎನೋ ಎಂದು ದಿಗಿಲಾಗುವದು. ಸತ್ಯ ಕಾಣುವಲ್ಲಿ ಧೈರ್ಯ ಸ್ಥೈರ್ಯ ಬೇಕು. ಸತ್ಯದೆದುರು ಎಲ್ಲವೂ ಓಡಿಹೋಗುತ್ತದೆ. ಆದರೆ ಸತ್ಯ ಮಾರ್ಗವೇ ಕಾಣದಿದ್ದರೇನು ಗತಿ ? ಹಲ್ಲಿನ ಮಧ್ಯೆ ಸಿಕ್ಕ ಹುಳು ನಾಶವಾಗುವುದು. ಹಲ್ಲಿನೊಳಗೆ ಸಿಕ್ಕ ಹುಳು ನೋವು ಮಾಡುತ್ತದೆ.

೯೨೦

ಆದಿಮಿ ಮನಮುನ್ನಿ ಯಾನಂದ ಕೇಳಲೋ, ಬ್ರಹ್ಮಮಯುಂಡು ಮುಕ್ತಿ ಬಡಯಗೋರು ಜಿಹ್ವರುಚುಲಚೇತ ಜೀವುಂಡು ಜೇಡುನಯಾ, ವಿಶ್ವದಾಭಿರಾಮ ವಿನುರ ವೇಮ.

ಅದುಮಿ ಮನಸು ನಿಲಿಸಿ, ಆನಂದ ಕೇಳಿಯಲಿ,
ಬ್ರಹ್ಮಮಯದ ಮುಕ್ತಿ ಪಡೆಯ ಕೋರಿ.
ಜಿಹ್ವೆ ರುಚಿಗಳಿಂದ ಜೀವಿ ಕೆಡುವ ನಲ್ಲ!
ವಿಶ್ವದಾಭಿರಾಮ ಕೇಳು ವೇಮ

ಮನುಜನಲ್ಲಿ ' ಅಹಂ ' ಭಾವವಿದೆ. ಅವನಿಗೆ ಪೂರ್ವಕರ್ಮ ಸಂಸ್ಕಾರಗಳೂ ಉಂಟು. ಅದನಲ್ಲಿರುವ ಜೀವಶಕ್ತಿಗೆ ತನ್ನ ಮುಂದಿನ ಹಂತಗಳೇನೆಂದು ಗೊತ್ತಿಲ್ಲ. ಕಾರಣ ಪೂರ್ವಜನ್ಮಸಂಸ್ಕಾರದಿಂದ ಮನುಜ ವಸ್ತು–ವಿಷಯ ಸುಖ ಕೋರುವುದು ಸಹಜ. ಇಂದ್ರಿಯ ಸುಖಕ್ಕಾಗಿ ಆಶಿಸುತ್ತಾನೆ. ಜಡವನ್ನೇ ಮೆಚ್ಚುತ್ತಾನೆ. ಸಾಲದೆ ತನ್ನ ಬಾಯಿ–ತಿಂಡಿ ತೀರಿಸಿಕೊಳ್ಳಲು, ವಾಯು ಇಂದ್ರಾದಿ ಕಲ್ಪಿತ ದೇವರುಗಳನ್ನು ಕಲ್ಪಿಸುತ್ತಾನೆ. ಇಲ್ಲವೆ ಮನಸ್ಸಿನ ವೃತ್ತಿಗನುಗುಣವಾದ ಮೂರ್ತಿ ನಿರ್ಮಿಸಿಕೊಳ್ಳುವನು. ಇಲ್ಲವೆ ಬೇರೊಬ್ಬರು ಕಲ್ಪಿಸಿದ್ದಕ್ಕೆ ಜೋತುಬೀಳುವನು. ಹೀಗೆ ಜಡತೆಗೆ ದಾಸನಾಗಿ ಬಿಡುವನು. ಅವನಿಗೆ ತಾನು ಕಾಣದ ಪರದ ಮಾರ್ಗದಲ್ಲಿ ಹೆಜ್ಜೆ ಇಡುವ ಧೈರ್ಯ ಇಲ್ಲ. ಅಲ್ಲಿ ಏನೋ ಎಂತೋ, ಎಂದು ಅವನಿಗೆ ಭೀತಿ. ಕೇವಲ ಧೀರರು ಮಾತ್ರ ಈ ಗುರಿ ಮುಟ್ಟುವರು. ಸಾಹಸ ಮಾಡುವರು. ' ನ ಅಯಮಾತ್ಮಾ ಬಲಹೀನೇನ ಲಭ್ಯ ' ಈ ಆತ್ಮ ಬಲಹೀನನಿಗೆ ಲಭ್ಯವಲ್ಲ.

ಧೀರನಾದವನು ಇಂದ್ರಿಯ ನಿಗ್ರಹಿಸುತ್ತಾನೆ. ಚಿತ್ತವೃತ್ತಿಗಳನ್ನು ಕಡಿಯುತ್ತಾನೆ. ಮನಸ್ಸನ್ನು ಮುತ್ತಿದ ವಿಷಯ ವಾಸನೆಗಳು ಚದುರಿ ಮನಸ್ಸು ನಿರ್ಮಲವಾಗುವುದು. ಚಿತ್ತ ಸ್ಥಿರವಾಗುವುದು. ಗಾಳಿಯಿಲ್ಲದ ದೀಪದಂತೆ. ಈಗ ಮನಸ್ಸು ಆತ್ಮಬಿಂಬ ಗ್ರಹಿಸಲು ಅರ್ಹವಾಗುವುದು. ಧೂಳಿ ಒರೆಸಿದ ಕನ್ನಡಿಯಲ್ಲಿ ಬಿಂಬ ತೋರುವಂತೆ ಆತ್ಮ, ಶುದ್ಧ ಮನಸ್ಸಿನಲ್ಲಿ ಬಿಂಬಿಸುವನು. ಮನಸ್ಸು ಸೂಕ್ಷ್ಮವಾಗುತ್ತ, ಅಗುತ್ತ ಅನಂತವನ್ನು ಗ್ರಹಿಸುವುದು. ಅಲ್ಲಿ ಬೇಕೆಂಬುದಿಲ್ಲ. ಬೇಡೆಂಬುದಿಲ್ಲ. ಎಲ್ಲವೂ ಆನಂದ ಕೇಳಿ. ಮನಸ್ಸು ಈಗ ಯಾವುದಕ್ಕೂ ಅಂಕಿತವಿಲ್ಲ. ಇದೇ ಮುಕ್ತಿ.

(ಹೋಲಿಸಿ ನೋಡಿರಿ :

' ಚಂಚಲವೂ ಅಸ್ಥಿರವೂ ಆದ ಮನಸ್ಸು ಯಾವ ಯಾವ ವಿಷಯದಿಂದ ಹೊರಕ್ಕೆ ಬರುವುದೋ, ಆಯಾ ವಿಷಯದಿಂದ ಮನಸ್ಸನ್ನು ನಿಗ್ರಹಿಸಿ, ಆತ್ಮನಲ್ಲಿಯೇ ವಶಪಡಿಸಿ ಕೊಳ್ಳಬೇಕು. '

' ಪ್ರಶಾಂತ ಚಿತ್ತನೂ, ರಜೋಗುಣವಿಲ್ಲದವನೂ, ಕಲ್ಮಷರಹಿತನೂ, ಬ್ರಹ್ಮಭಾವವನ್ನು ಹೊಂದಿದವನೂ ಆದ ಈ ಯೋಗಿಗೆ ಉತ್ತಮವಾದ ಸುಖವು ಪ್ರಾಪ್ತವಾಗುತ್ತದೆ.'

ಭಗವದ್ಗೀತೆ ೬–೨೬, ೨೭.

೯೨೧

ಅನುವುಗಾನಿಚೋಟ ಬನಿಗೊನಿ ಜೂದಮು ನಾಡಿ ಕೂಡಿ ಯೊಡಿ ಯೆಡವಿಜೊಚ್ಚು ಘನುನಿಜಾಡಜೂಚಿ ಕಡಪುಮು ಮೂರ್ಖತ. ವಿಶ್ವದಾಭಿರಾಮ ವಿನುರ ವೇಮ.

ಅನನುಕೂಲ ತಾಣ, ಅಲ್ಲದ ಜೂಜಾಟ;
ಆಡಿ ಕೂಡಿ ಸೋತು ಅಡವಿ ಹೊಕ್ಕ.
ಘನನ ಜಾಡು ನೋಡಿ ಬಿಡದೆ ಇರಲು ಮೌಢ್ಯ.
ವಿಶ್ವದಾಭಿರಾಮ ವಿನುರ ವೇಮ.

ಧರ್ಮರಾಜನು ದುರ್ಯೋಧನನೊಡನೆ ಜೂಜಾಟವಾಡಲು ಉದ್ಯುಕ್ತನಾದ ಕಥೆ ಮಹಾ–ಭಾರತದ ಓದುಗರಿಗೆ ಚಿರಪರಿಚಿತವಾದುದಷ್ಟೇ. ಜೂಜಾಡುವುದು ಧರ್ಮ ಕಾರ್ಯವಲ್ಲ. ಅದರಲ್ಲಿಯೂ ರಾಜ್ಯದ ಪಾಲನ್ನು ಪಣಕ್ಕೆ ಹಚ್ಚಿ ಲೆತ್ತದಾಟ ಆಡುವುದಾಗಲಿ, ಹೆಂಡತಿಯನ್ನೇ ಪಣಕ್ಕೆ ಹಚ್ಚಿ ಲೆತ್ತದಾಟವಾಡುವುದಾಗಲೀ ಕೇವಲ ಮಾಡಬಾರದ ಕುಕರ್ಮಗಳಷ್ಟೇ. ಇದು ಪಾಪ ಕಾರ್ಯ. ಧರ್ಮರಾಜ ತಾನು ಮಾಡಿದ ಪಾಪಕರ್ಮದ ಫಲ ತಾನೇ ಅನುಭೋಗಿಸಬೇಕಷ್ಟೇ. ಅದರಿಂದಾಗಿ ಅವನಿಗೆ ಅಡವಿಯ ವಾಸ ಗತಿಯಾಯಿತು. ಧರ್ಮರಾಜನು ಅನೇಕ ವಿಧಗಳಿಂದ ಘನವಂತನೇನೋ ಸರಿ. ಆದರೆ, ಅವನು ಎಲ್ಲಿ, ಅಧರ್ಮಕ್ಕೆಳಿದನೋ ಅಲ್ಲಿ ಪಾಪಫಲಕ್ಕೆ ಹೊಣೆಗಾರನಾದನು.

ಇಂಥ ಘನವಂತನಾದ ಧರ್ಮರಾಜನ ಬವಣೆಯ ಸ್ಥಿತಿಯೆನ್ನು ಕಂಡುಕೊಂಡವರೂ ಸಹ; ಜೂಜಾಟವು ಪಾಪವೆಂದು ತಿಳಿಯದೆ ಸಾಗಿರುವುದು, ಅದರ ಮೂರ್ಖತನದ ಕುರುಹಾಗಿದೆ. ದೊಡ್ಡವರ ಜೀವನದ ಕಥೆಗಳಿಂದ ನಾವು ಪಾಠ ಕಲಿತಿದ್ದರೆ. ಅದು ನಮ್ಮ ಮೂರ್ಖತನವಲ್ಲದೆ ಇನ್ನೇನು ?

೯೨೨

ಇಹಮುನಂದುಬುಟ್ಟ ಯಿಂಗಿತಮೆರುಗನಿ. ಜನುಲನೆಂಚಿ ಚೂಡ ಸ್ಥಾವರಮುಲು,
ಜಂಗಮಾದುಲನುಟ ಜಗತಿನಿ ಬಾಪಂಬು, ವಿಶ್ವದಾಭಿರಾಮ ವಿನುರ ವೇಮ

ಇಹದೊಳಗೆ ಹುಟ್ಟಿ, ಇಂಗಿತವನರಿಯದೆ,
ಜನರನರಿತು ನೋಡಿ, ಸ್ಥಾವರವ,
ಜಂಗಮವೆನ್ನುವುದು, ಜಗದಿ ಪಾಪ ನೋಡು.
ವಿಶ್ವದಾಭಿರಾಮ ಕೇಳು ವೇಮ

ಈ ಲೋಕದಲ್ಲಿಯೇ ಜನಿಸಿ, ಯಾವುದು ಸ್ಥಾವರ ಮತ್ತು ಯಾವದು ಜಂಗಮ ಎನ್ನುವ ಮರ್ಮವನ್ನು ಬೇಧಿಸಿ ತಿಳಿಯದೆ, ಇರುವದೆಂದರೇನು? ಸ್ಥಾವರವು ಯಾವುದು? ಯಾವುದು ಬದಲಾಗದೆ ನಿರ್ವಿಕಾರವಾಗಿ, ಚಲಿಸದೆ ನಿಶ್ಚಲವಾಗಿ ಇರುವದೋ ಅಂಥ ಆತ್ಮ ಮಾತ್ರ ಸ್ಥಾವರವೆನಿಸಬಹುದಲ್ಲವೇ ? ಯಾವದು ಇದ್ದು ಇಲ್ಲದಂತಾಗುವದೋ, ವಿಕಾರವಾಗುವದೋ, ಅಂಥ ದೇಹವೇ ಆಗಲಿ, ಅದು ಯಾವದರಿಂದ ಉಂಟಾಗಿದೆಯೋ ಅಂಥ ಪಂಚಭೂತಗಳಾಗಲಿ, ಪಂಚೇಂದ್ರಿಯಗಳಾಗಲಿ, ಜಂಗಮವೆನಿಸಬಹುದಷ್ಟೇ- ಜನರ ಹುಟ್ಟು-ಸಾವುಗಳನ್ನೂ, ಆತ್ಮದ ಅಮೃತತ್ವವನ್ನು ತಿಳಿದ ಮೇಲೆ ಸ್ಥಾವರ ಜಂಗಮ ಗಳ ಇಂಗಿತ ತಿಳಿಯದಿದ್ದರೆ ಹೇಗೆ.?

ಇನ್ನು " ಸ್ಥಾವರ ಜಂಗಮ ರೊಪವಾದ ಯಾವದೊಂದು ವಸ್ತು ಉತ್ಪನ್ನವಾಗುವದೋ ಅದು ಕ್ಷೇತ್ರ-ಕ್ಷೇತ್ರಜ್ಞರ ಸಂಯೋಗದಿಂದ ಉತ್ಪನ್ನವಾಗಿದೆ" ಎಂದು ಗೀತೆಯಲ್ಲಿ ಚರಾಚರ ವಸ್ತುಗಳನ್ನು ಕುರಿತು ಹೇಳಲಾಗಿದೆ,

ಕಾರಣ, ಯಾವದು ಸ್ಥಾವರವೋ (ಆತ್ಮ) ಅದನ್ನು ' ಗಚ್ಛತಿ ಇತಿ ಜಗತ್ ' ಹೋಗುವ-ಬರುವ ಈ ಜಗತ್ತಿನಲ್ಲಿ ಜಂಗಮವೆಂದು ತಿಳಿಯುವದು ಪಾಪವಲ್ಲವೇ ?

೯೨೩

ಉತ್ತತಿತ್ತಿ ದೀನಿ ಯುಪಯೋಗ ಮುಲಲೇವು, ತಿತ್ತಿಕೊರಕು ಜೆಡುನು ದೇಪುಲಾಡಿ-
ಕತ್ತಿಮೀದ ಸಾಮು ಕಡತೇರಲೇಡಯಾ, ವಿಶ್ವದಾಭಿರಾಮ ವಿನುರ ವೇಮ.

ಬರಿ ತಿದಿಯೀ ದೇಹ; ಉಪಯೋಗವೇ ಇಲ್ಲ,
ತಿದಿಗಾಗಿ ಕೆಡುವನು, ತೊಂದರೆಯದು;
ಕತ್ತಿ ಮೇಲೆ ಸಾಮು ಗುರಿ ಮುಟ್ಟಿಸದಷ್ಟೇ.
ವಿಶ್ವದಾಭಿರಾಮ ಕೇಳು ವೇಮ.

ತಿದಿಯೆಂದರೇನು? ಅದೊಂದು ತೊಗಲಿನಚೀಲ. ಕಮ್ಮಾರನು ಧಾತು ಕರಿಗಿಸಲು ಬೆಂಕಿ ಹೊತ್ತಿಸಬೇಕಾದಾಗ ಗಾಳಿ ಹಾಕಲು ಉಪಯೋಗಿಸಬೇಕಾದ ಉಪಕರಣ, ನಮ್ಮ ದೇಹವೂ ಸಹ ತಿದಿಗಿಂತ ಬೇರೆ ಏನಲ್ಲ. ನಾವು ಸೇವಿಸುವ ಅನ್ನ ದೇಹದ ಕುಲುಮೆಯಲ್ಲಿ ಉರುವುಲು ಇದ್ದಲಂತೆ; ಪ್ರಾಣಾಗ್ನಿಯೇ ಪುಟಕ್ಕಿಟ್ಟ ಬೆಂಕಿ. ನಾವು ತೆಗೆದುಕೊಳ್ಳುವ ಅಪಾನವಾಯು, ಬಿಡುವ ಉದಾನವಾಯು ಮತ್ತು ಸಮಾನವಾಯು ವ್ಯಾನ ವಾಯುಗಳೆ ತಿದಿಯು ಎಳೆದು ಬಿಡುವ ಗಾಳಿಯಂತೆ- ಅಲ್ಲಿ ಬೆಂಕಿಯಿಂದ ಉರಿ ಹೊತ್ತಿ ಧಾತು ಹದಕ್ಕೆ ಬರುವಂತೆ, ಇಲ್ಲಿ, ದೇಹದಲ್ಲಿ, ಅನ್ನ, ಜಠರಾಗ್ನಿಯಲ್ಲಿ ಹೋಮವಾಗಿ, ರಕ್ತ-ಮಾಂಸ ಮಜ್ಜ-ಓಜಸ್ಸುಗಳ ರೂಪ ಹೊಂದುವದು. ತಿದಿ ಮತ್ತು ದೇಹ ಈ ರೀತಿ ನೋಡಿದಾಗ ಬೇರೆಯಾಗಿ ಕಾಣುವುದಿಲ್ಲ. ಅಂದ ಮೇಲೆ ದೇಹವನ್ನು ನಂಬಿ ನಾವು ಮಾಡುವ ಕರ್ಮಗಳೆಲ್ಲ ವ್ಯರ್ಥವಾದವುಗಳು.

ಹೇಗೆಂದರೆ ಕತ್ತಿಯ ಅಲುಗಿನ ಮೇಲೆ ನಿಂತು ಕಸರತ್ತು ಮಾಡುವದು ಕಷ್ಟದ ಕೆಲಸವಾದರೂ ಅದು ದೈಹಿಕ ಶ್ರಮವಷ್ಟೇ. ಆತ್ಮ ಅರಿಯುವ ನಮ್ಮ ಗುರಿ ತಲುಪಿಸಲು ದೇಹದ ಹಲ ತೆರನಾದ ಆಸನಾದಿಯಿಂದ ಯಾವ ಪ್ರಯೋಜನವೂ ಆಗದು.

೯೨೪

ಒಕನಿ ಜೆರುತು ನನಯಚು ನುಲ್ಲಮುಂದೆಂತರು, ತಮುಕುಗಲ್ಲುಚೇಟು ದಾಮೆರುಗಕ,
ತಮ್ಮು ದೆರುಚುವಾಡು ದೈವೆಂಬುಲೇಡೂಕೋ ! ವಿಶ್ವದಾಭಿರಾಮ ವಿನುರ ವೇಮ,

ಮುಂದಿ ಕೆಡಿಸಲೆಂದು, ಮನದಿ ಎಣಿಸುವವರು,
ತನುಗೆ ಬರುವ ಕೇಡು ತಾವರಿಯದೆ,
ತಮ್ಮನೆ ಕೆಡಿಸುವುದು ದೈವವೊಂದಲ್ಲವೇ?
ವಿಶ್ವದಾಭಿರಾಮ ಕೇಳು ವೇಮ.

ಹಲವರು ಬುದ್ಧಿವಂತ ಜನರಿರುತ್ತಾರೆ. ಅವರು ಜನರನ್ನು ನಂಬಿಸುವದರಲ್ಲಿ ತುಂಬ ಚತುರರು. ಜನರು ಯಾವುದನ್ನು ಸತ್ಪುರುಷರ ಬಾಹ್ಯ ಸಂಕೇತವೆಂದು ತಿಳಿಯುವರೋ ಅದನ್ನೇ ಈ ಬುದ್ಧಿವಂತರು ಧರಿಸುತ್ತಾರೆ. ತಪಸ್ಸಿನಲ್ಲಿ ಶ್ರದ್ಧೆ ಇಲ್ಲದಿದ್ದರೂ; ತಪಸ್ವಿಗಳಂತೆ ವೇಷ ಧರಿಸುತ್ತಾರೆ. ಪ್ರಪಂಚದ ವಸ್ತುಗಳಲ್ಲಿ ಮೋಹ ಕಳೆದುಕೊಳ್ಳದಿದ್ದರೂ "ನಾನು ನನ್ನದು ಎಂಬ ಅಭಿಮಾನ ತೊರೆದಿದ್ದೇನೆ" ಎಂದು ಹೇಳಿ, ಅಂತೆಯೇ ನಟಿಸಿ, ಆ ವೇಷದ ಮರೆಯಲ್ಲಿ ಅಲ್ಲದ ನಡವಳಿಕೆ ಆಚರಿಸುತ್ತಾರೆ. ಇಂಥ ವಂಚಕರನ್ನು ಸಾಧು

ಗಳೆಂದು ನಂಬಿ ಸತ್ಫಲ ಪಡೆಯುವ ಉದ್ದೇಶದಿಂದ ಜನ ಇವರನ್ನು ಸೇವಿಸುತ್ತಾರೆ. ಕಪಟಿಗಳನ್ನು ಸೇವಿಸುವವರು ಅವರ ಕಪಟತನದಲ್ಲಿ ಸಹಕರಿಸಿದಂತಾಗಿ,ಅಧೋಗತಿಗಿಳಿಯುತ್ತಾರೆ. ಇನ್ನು ಈ ವಂಚಕರೂ ಸಹ ತಮ್ಮ ಕಳ್ಳ ನಡತೆಯ ಪರಿಣಾಮವಾಗಿ ಅನೇಕ ಬಗೆಯ ದುಃಖಕ್ಕೆ ಈಡಾಗುತ್ತಾರೆ.

ನಾವು ಮಾಡುವದನ್ನೆಲ್ಲ ಅರಿಯುವ ಸಾಕ್ಷಿಪುರುಷನೊಬ್ಬ ಉಂಟು. ಅವನೇ ದೈವ, ಅವನು ಯಾರ ಕರ್ಮ ಹೇಗೋ ಅದರ ಫಲವನ್ನು ಅವರಿಗೆ ಉಂಟುಮಾಡುತ್ತಾನೆ ಕೆಡಿಸುವ ಯೋಜನೆಯನ್ನು ಮಾಡುವವನು ತಾನೇ ಕೆಟ್ಟು ಹೋಗುತ್ತಾನೆ. ಅವನ ಮನಸ್ಸಿನಲ್ಲಿ ಕೆಟ್ಟ ಸಂಸ್ಕಾರಗಳು ಉಂಟಾಗುತ್ತವೆ. ಅಂದ ಮೇಲೆ ತಮ್ಮನ್ನು ಮಾತ್ರ ತಾವು ಕೆಡಿಸಿಕೊಳ್ಳುವದು ಸಾಧ್ಯ. ಬೇರೆಯವರನ್ನು ಕೆಡಿಸುವದೆಂದರೇನು?

೯೨೫

ಕಫವುಮೀರಿ ಮರಿಯುಗನುಲು ಮೂತಲು ಪಡಿ, ಬುದ್ದಿ ತಪ್ಪಿ ಚಾಲ ಬುಡವಿಮುರಚು.
ವೇಳಲಂದ ನಿನ್ನು ಪೆದಕುಟ ಸಾಧ್ಯಮಾ? ವಿಶ್ವದಾಭಿರಾಮ ವಿನುರ ವೇಮ.

ಕಫವು ಮೀರಿ ವ ತ್ತೆ ಕಣ್ಣು ಕಾಣದಾಗಿ,
ಬುದ್ಧಿ ತಪ್ಪಿ ಪೂರ್ಣ ಭುವಿಯ ಮರೆತು,
ಅಂಥ ಕಾಲ ನಿನ್ನ, ಅರಸಲೆಂತು ಸಾಧ್ಯ?
ವಿಶ್ವದಾಭಿರಾಮ ಕೇಳು ವೇಮ.

ಜಗತ್ತಿನ ಜಂಜಡದಿಂದ ದೂರವಾದವನು ಪರಮಾತ್ಮನನ್ನು ಬಳಿಸಾರುತ್ತಾನೆ. ಕಾಮ-ಆಸಕ್ತಿಗಳು ಕಡಿಮೆಯಾದಂತೆಲ್ಲ ಪ್ರೇಮ ಭಕ್ತಿ ಹೆಚ್ಚಾಗುವವು. ಈ ಪ್ರಗತಿಕ್ರಮದಲ್ಲಿ ಕಾಮ-ಆಸಕ್ತಿಗಳು ಇಲ್ಲದ ಒಂದು ಸ್ಥಿತಿ ಬರುವದು. ಆಗ ಚಿತ್ತವೃತ್ತಿಗಳೇ ಇರುವದಿಲ್ಲ ಮನಸ್ಸು ನಿಂತಿರುತ್ತದೆ. ಮನಸ್ಸಿಗೆ ಗತಿ ಇಲ್ಲವಾದಾಗ ಜಗತ್ ಇಲ್ಲ. ಇಂಥ ನಿಶ್ಚಲವಾದ ಮನಸ್ಸು "ಗಾಳಿ ಬೀಸದಿರುವ ಜಾಗದಲ್ಲಿ ಅಲುಗದಿರುವ ದೀಪದಂತೆ ಇರುತ್ತದೆ. ಆತ್ಮವು ಇಂಥ ಶುದ್ಧ ಮನಸ್ಸಿಗೆ ಪ್ರತಿಬಿಂಬದಂತೆ ತೋರುವದು. ಪಾತ್ರೆಯ ನೀರಿನಲ್ಲಿ ಗಗನದ ಪ್ರತಿಬಿಂಬ ಕಾಣುವಂತೆ.

ಯೋಗಿಯು ಸಾಧನೆಯಿಂದ ನಿಲ್ಲಿಸಿದ ಮನಸ್ಸು ಸುಪ್ತಚೈತನ್ಯವುಳ್ಳದ್ದು; ಆದರೆ ನಿಶ್ಚಲವಾದದ್ದು. ಇದೇ ಸ್ಥಿತಿಯನ್ನು ಅಂಶತಃ ಹೋಲುವ ಇನ್ನೊಂದು ಮನಸ್ಸಿನ ಅವಸ್ಥೆಯಿದೆ. ಇದುವೇ "ಸನ್ನಿಪಾತಕ" ರೋಗಿಯ ಮನಸ್ಸು. ಆಗ ಕಫವು ಹೆಚ್ಚಾಗಿ, ಕಣ್ಣು ಕಾಣದಂತಾಗುತ್ತದೆ. ಬುದ್ಧಿ ತಪ್ಪಿ ಹೋಗುತ್ತದೆ. ಸ್ಮೃತಿ ಉಳಿಯುವದಿಲ್ಲ. ಆಗ ಜಗತ್ತಿನ ಪ್ರಜ್ಞೆಯೇ ಅವನಿಗಿರುವದಿಲ್ಲ ಕಾಮಾಸಕ್ತಿಗೆ ಅವಕಾಶವೇ ಇಲ್ಲ. ಅಂದ ಮೇಲೆ ಆಗ ಪರಮಾತ್ಮನನ್ನು ಹುಡುಕಲು ಸಾಧ್ಯವಾಗದು.

೯೨೬

ಟೆರಕು ತೀಪಿಲೇಮಿ ಜೆತ್ತ ನಾಬಡನಟ್ಲು, ಪರಗ ಗುಣಮುಲೇನಿ ಪಂಡಿತುಂಡು,
ದೂರು ಬಡುನುಗಾದೆ? ದೋಷಮಂಟುಂಡಗ, ವಿಶ್ವದಾಭಿರಾಮ ವಿನುರ ವೇಮ.

ಕಬ್ಬು ಸಿಹಿಯಿರದಿರೆ, ಕಸವೆಂದು ಒಗೆವರು.
ಪರಮ ಗುಣವಿಲ್ಲದ ಪಂಡಿತನನ,
ದೂಷಿತನಾಗನೇ? ದೋಷನಂತೆ ಇರಲು,
ವಿಶ್ವದಾಭಿರಾಮ ಕೇಳು ವೇಮ.

ವಿದ್ಯಾವಂತನಿಗೆ ವಿನಯಗುಣವು ಶೋಭಿಸುತ್ತದೆ. ವಿನಯಗುಣವೇ ಇಲ್ಲದ ವಿದ್ಯಾವಂತನು ಜಗತ್ತಿನಲ್ಲಿ ಶೋಭಿಸಲಾರನು. ಒಬ್ಬನು ವೇದ-ಶಾಸ್ತ್ರಗಳನ್ನು ಓದಿಕೊಳ್ಳಬಹುದು. ಆರೂ ದರ್ಶನಗಳನ್ನು ಕಂಠಪಾಠ ಮಾಡಿಕೊಂಡಿರಬಹುದು. ಆದರೆ ಶ್ರೇಷ್ಠ ಗುಣಗಳಾವವೂ ಅವನಲ್ಲಿ ಇಲ್ಲದಿದ್ದರೆ, ಅವನ ಪಾಂಡಿತ್ಯ ಪ್ರಯೋಜನಕ್ಕೆ ಬರಲಾರದು

"ಗುರುವಿನ ಶೀಲವನ್ನು ಏಕೆ ನೋಡಬೇಕು? ಅವನು ಹೇಳುವದನ್ನು ಪರೀಕ್ಷೆ ಮಾಡಿ ತೆಗೆದುಕೊಂಡರೆ ಸಾಕು" ಎಂದು ಹಲವರು ಹೇಳುತ್ತಾರೆ. ಈ ವಿಷಯ ಭೌತಿಕ ಶಾಸ್ತ್ರದ ಅಭ್ಯಾಸದಲ್ಲಿ ಸರಿಹೋಗಬಹುದು. ಏಕೆಂದರೆ ಅಲ್ಲಿ ಎಲ್ಲವೂ ಬುದ್ಧಿಯ ಮೇಲೆಯೇ ನಿಂತಿದೆ.ಆದರೆ ಆಧ್ಯಾತ್ಮಿಕತೆ ಬುದ್ಧಿಯಾಚೆಗಿನದು. ಆದ್ಯಾಂತಗಳಲ್ಲಿ ಯಾರ ಹೃದಯ ಪರಿಶುದ್ಧವಿಲ್ಲವೋ ಅವರಲ್ಲಿ ಆಧ್ಯಾತ್ಮಿಕ ಜ್ಯೋತಿ ಇರಲಾರದು. ಅವನು ಏನನ್ನು ಬೋಧಿಸಬಲ್ಲ.? "ಪರಿಶುದ್ಧಾತ್ಮರೇ ಅದೃಷ್ಟಶಾಲಿಗಳು, ಅವರೇ ದೇವರನ್ನು ಕಾಣುವರು."

ವರಮಗುಣಗಳಿಲ್ಲದ ಪಂಡಿತನು ಆಧ್ಯಾತ್ಮಿಕ ಬೋಧನೆಗೆ ತಕ್ಕವನಲ್ಲ. ಅವನು ಪದಗಳ ಜಾಲ ಹೆಣೆಯಬಹುದು. ಶಬ್ದಗಳ ಜೋಡಣೆಯಲ್ಲಿ ಚತುರನಿರಬಹುದು ಆದರೆ ಮಾತಿನಲ್ಲಿ ನಡತೆಯಲ್ಲಿ ಸಾಮ್ಯವಿಲ್ಲದಾಗ, ಅವನು ಏನನ್ನೂ ಬೋಧಿಸಲು ಅರ್ಹನಾಗಲಾರ. ದೋಷವು ಅವನಲ್ಲಿ ಇರುವುದಾದರೆ, ಅವನು ದೂಷಿತನಾಗಲಾರನೇಕೆ? ಸಿಹಿ ಕಬ್ಬು ಮಾತ್ರ ತಿನ್ನಲು ಯೋಗ್ಯ. ಸಿಹಿ ಗುಣವಿಲ್ಲದ ಕಬ್ಬನ್ನು ಕಸವೆಂದು ಚೆಲ್ಲುವರು. ಶ್ರೇಷ್ಠ ಗುಣವಿಲ್ಲದ ಪಂಡಿತನನ್ನು ನಿರುಪಯೋಗಿ ಎಂದು ತ್ಯಜಿಸಬೇಕು.

೯೨೭

ಶ್ರವಣ ಪುಟಮುಲುನ್ನ ಸಾರ್ಥಕ್ಕ ಮೆಯ್ಯಾ, ವಿನಗವಲಯ ಬೆದ್ದಲ ನೆಡಿವನ್ನಿ,
ವಿನಗ ವಿನಗ ನೀಕೆ ವಿಶದಂಬು ನೌಜಮ್ಮು, ವಿಶ್ವದಾಭಿರಾಮ ವಿನುರ ವೇಮ.

ಶ್ರವಣೇಂದ್ರಿಯ ವಿರಲು ಸಾರ್ಥಕವುಂಟೇನು?
ಆಲಿಸು ಹಿರಿಯ ಜನ, ಅಡುವದನು.
ಕೇಳಿ ಕೇಳಿ ನಿನಗೆ ಖಚಿತವೆನಿಪುದಲ್ಲ?
ವಿಶ್ವದಾಭಿರಾಮ ಕೇಳು ವೇಮ.

ಶ್ರವಣೇಂದ್ರಿಯವು ಶರೀರದ ಪುಣ್ಯ ಜ್ಞಾನೇಂದ್ರಿಯಗಳಲ್ಲೊಂದು. ಎಲ್ಲಿ ಎಲ್ಲಿ ಒಳ್ಳೆಯ ಹಿತವಚನಗಳು ಕೇಳಿಬರುವವೋ ಅವುಗಳನ್ನೆಲ್ಲ ಕೇಳಬೇಕು. ಶ್ರವಣವು ಜ್ಞಾನಪಡೆಯಲು ಸುಲಭವಾದ ಸಾಧನ.

ಹಿರಿಯರಾದ ಋಷಿ-ಮುನಿಗಳು, ಸಾಧು—ಸಂತರು; ಯೋಗಿ—ಪುಂಗವರು, ತತ್ತ್ವ ವಿಶಾರದರು ಏನು ಹೇಳುವರೋ, ಅದೆಲ್ಲ ಜ್ಞಾನಪಡೆಯಲು ಸಹಾಯಕವಾಗಿದೆ. ಹಿರಿಯ ಜನ ಆಡುವ ದನ್ನು ಆಲಿಸದಿದ್ದರೆ,ಶ್ರವಣೇಂದ್ರಿಯವು ಇದ್ದು ಫಲವೇನ ? ಕೇಳಿ ತಿಳಿದುಕೊಳ್ಳದಿದ್ದರೆ, "ಶ್ರವಣೇಂದ್ರಿಯ" ಎನ್ನುವದು ಸಾರ್ಥಕವೆನ್ನಿಸದು.

ಶ್ರವಣ ಮಾಡಬೇಕು. ಮನನ ಮಾಡಬೇಕು. ಶ್ರವಣ ಕಾರ್ಯದಲ್ಲಿ ಸುಖ-- ಹೊಂದಿದರೆ, ಅದರಲ್ಲಿ ನಿಷ್ಠೆ ಉಂಟಾಗುವದು. ನಿಷ್ಠೆಯುಂಟಾದರೆ ಶ್ರದ್ಧೆಯು ಉದಿಸುವದು. ಶ್ರದ್ಧೆ ಇಲ್ಲದೆ ಮನನವೆಂತು ಸಾಧ್ಯ? ಮನನ ಮಾಡಿದರೆ, ತಿಳಿದುಕೊಳ್ಳುವನು. ಹೀಗೆ ಕೇಳಿ ಕೇಳಿ ಸತ್ಯವು ಖಚಿತವೆನಿಸುದು.

೬೨೮

ರಾತಿಬೊಮ್ಮ ಕೀಲ ರಂಗೈನವಲುವಲು, ಗುಳ್ಳು ಗೋಪುರಮುಲು ಗುಂಭ ಮುಲುನು,
ಕೂಡುಗುಡ್ಡ ತಾನು ಗೋರುನಾ ದೇವುಂಡು? ವಿಶ್ವದಾಭಿರಾಮ ವಿನುರ ವೇಮ.

ಕಲ್ಲು ಬೋವ್ಮಗೇಕೆ? ಕೆಲ ಬಣ್ಣದ ವಸ್ತ್ರ?
ಗುಡಿಗೋಪುರವೆಲ್ಲ ಕುಂಭ ಮುತ್ತೆ,
ಬಟ್ಟೆ ಅನ್ನ ತಾನು, ಬಯಸುತಿಹನೆ ದೇವ ?
ವಿಶ್ವದಾಭಿರಾಮ ಕೇಳು ವೇಮ.

ಕಲ್ಲು, ಮಣ್ಣು, ಮುತ್ತು ಧಾತುಗಳಿಂದ ಮೂರ್ತಿಗಳನ್ನು ನಿರ್ಮಿಸಿ, "ಇವನೇ ದೇವರು, ಎಂಬ ಭಾವನೆಯಿಂದ ಬಹುಪಾಲು ಜನರು ಪೂಜೆ ಪುನಸ್ಕಾರ ಮಾಡುತ್ತಾರೆ; ಇದೆಲ್ಲವೂ ಮಕ್ಕಳ ಆಟದಂತೆ. ನಮ್ಮ ಮನಸ್ಸಿನ ಕಲ್ಪನೆಯು ನಮಗೆ ಪೂಜ್ಯವಾಗುದೇದರೆ ವಿಚಿತ್ರ ; ಸ್ಕೂಲವನ್ನು ಪೂಜಿಸಿದರೆ, ಮನಸ್ಸೂ ಸ್ಕೂಲವಾಗುವುದು. ಇದರಿಂದ ನಮ್ಮಲ್ಲಿ ಪಶುವೃತ್ತಿ ಬೆಳೆಯುತ್ತದೆ, "ರೂಪ—ನಾಮಾದಿ ಕಲ್ಪನೆಯಲ್ಲ ಬಾಲಕರ ಕ್ರೀಡೆಯಂತೆ, ಕೇವಲ ಬ್ರಹ್ಮನಿಷ್ಠೆಯೊಂದೇ ಯೋಗ್ಯವಾದದು. ಇದರಲ್ಲಿ ಸಂಶಯ ಕ್ಕೆಡೆಯೇ ಇಲ್ಲ" ಎಂದು ತಂತ್ರ ಸಾರುತ್ತಿದೆ.

ಆದೇ ಮೂರ್ತಿ ಪೂಜೆಯ ವಿಧಾನ ನೋಡಿರಿ. ಕಲ್ಲಿನ ಮೂರ್ತಿ ಕಟೆಯುತ್ತಾರೆ. ಅದಕ್ಕೆ ಹಲವಾರು ಬಣ್ಣದ ವಸ್ತ್ರ ತೊಡಿಸುತ್ತಾರೆ, ಗುಡಿ ಗೋಪುರ ಮತ್ತು ಕುಂಭಾದಿಗಳೂ ನಿರ್ಮಾಣವಾಗುವವು, ಏಕೆ? ದೇವರೇನು ಬಟ್ಟೆ ಬೇಡುವನೇ? ದೇವರಿಗೆ ಅಡುಗೆಯ ನೈವೇದ್ಯ ತೋರಿಸುತ್ತಾರೆ ಏಕೆ? ದೇವರೇನು ಅನ್ನ ಬೇಡುವನೆ? ತನ್ನ ಮನ

ಸ್ಸಿನ ಚಪಲ ಬಾಯಿ ಚಪಲ ತೀರಿಸಿಕೊಳ್ಳುವದಕ್ಕಾಗಿ, ಮೂರ್ತಿ ಪೂಜೆಯ ವಿಧಾನವು ಬಹುಜನರಿಂದ ಅನುಸರಿಸಲ್ಪಟ್ಟಿದೆ ಬ್ರಹ್ಮ ಸದ್ಭಾವವನ್ನು ಹೊಂದುವದರಲ್ಲಿ ತನ್ಮಯರಾದವರು ಎಲ್ಲಿಯೋ ಹಲವರು ಮಾತ್ರ.

೬೨೯

ತರುವದರುವ ಬುಟ್ಟು ದರುವು ನಂದನಲಂಬು. ತರುವದರುವ ಬುಟ್ಟು ದಧಿಘ್ನ ತುಂಬು
ತರುವದರುವ ಬುಟ್ಟು ದನುವುನದತ್ತ್ವಂಬು. ವಿಶ್ವದಾಭಿರಾಮ ವಿನುರವೇಮ.

ಸವೆಸವೆದು ಜನಿಸಿತು ತುರುವಿನಲ್ಲಿ ಅನಲ
ಸವೆಸವೆದು ಜನಿಸಿತು, ಮೊಸರು ತುಪ್ಪ
ಸವೆಸವೆದು ಜನಿಸಿತು; ತನುವಿನಲ್ಲಿ ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಒಂದು ಕೊರಡು ಇನ್ನೊಂದು ಕೊರಡಿಗೆ ತಿಕ್ಕಿದಾಗ ಘರ್ಷಣೆ ಉಂಟಾಗುತ್ತದೆ. ಕೊರಡು ಸವೆಯುತ್ತ ಹೋಗುತ್ತದೆ. ಆದರೆ ಘರ್ಷಣೆಯು ಜೋರಾದಾಗ ಬೆಂಕಿ ಹುಟ್ಟುತ್ತದೆ. ಅಡವಿಯಲ್ಲಿ ಗಿಡಗಳೆರಡು ಒಂದಕ್ಕೊಂದು ತಿಕ್ಕಿ ಸವೆದು ಹೋದಾಗ ಬೆಂಕಿಯು ಹುಟ್ಟುತ್ತದೆ.

ಮೊಸರು ಕಡೆದಾಗ ಮೊಸರು ಕಡಿಮೆಯಾಗುತ್ತ ಹೋಗುತ್ತದೆ. ಅಂದರೆ ಮೊಸರು ವಜ್ಜಿಗೆಯ ದ್ರವರೂಪದಲ್ಲಿ ಬಹಳಷ್ಟು ಪಾಲು ರೂಪಾಂತರಗೊಳ್ಳುವದು. ಮೊಸರಿನಲ್ಲಿ ಅಲ್ಪಾಂಶ ಮಾತ್ರ ಘನರೂಪದಲ್ಲಿ ಬೆಣ್ಣೆಯಾಗಿ ಕಾಯಿಸಿದ ಮೇಲೆ ತುಪ್ಪವಾಗಿ ರೂಪಾಂತರವಾಗುತ್ತದೆ. ಹೀಗೆ ಮೊಸರು ಸವೆಸವೆದು ಅದರಿಂದ ತುಪ್ಪ ಉಂಟಾಯಿತು.

ತತ್ತ್ವ ಎಂದರೆ ಬ್ರಹ್ಮತ್ತ್ವ, ಈ ದೇಹಭಾವನೆಯು ನಶಿಸಿದಂತೆಲ್ಲ ಬ್ರಹ್ಮತ್ವ ಸಮೀಪಿಸುತ್ತದೆ. "ಅವನಿಗೆ ಎಲ್ಲಿಯವರೆಗೆ ಶರೀರ ಸಂಬಂಧವು ಹೋಗುವದಿಲ್ಲವೋ ಅಲ್ಲಿಯವರೆಗೇ ತಡ, ಅನಂತರ ಪರಬ್ರಹ್ಮನನ್ನು ಹೊಂದುತ್ತಾನೆ. (ಛಾಂದೋಗ್ಯ ಉಪ. ೬-೧೪-೨) ಹೀಗೆ ತನುವು ಸವೆಸವೆದು ತತ್ತ್ವ ಹುಟ್ಟುವದು, ಎಂದು ಅರ್ಥ.

೬೩೦

ಮುಕ್ತಿ ಗಾನಲೇನಿ ಮೂರ್ಖ ಜನುಲಕೆಲ್ಲ, ಬಟ್ಟ ಬಯಲುಜೇಸಿ, ಪರಮಪದಮು
ದಾರಿ ಜೂಪು ಬುಧುಡು ದೈವಂಬು ಕಾಡೂಕೋ ವಿಶ್ವದಾಭಿರಾಮ ವಿನುರವೇಮ.

ಮುಕ್ತಿಗಾಣದಂಥ ಮೂರ್ಖ ಜನರಿಗೆಲ್ಲ,
ಬಟ್ಟಬಯಲು ನಾಡಿ, ಪರಮ ತಾಣ,
ದಾರಿ ತೋರ್ಪ ಬುಧರು ದೈವ ತಾನೆನಿಸರೆ?
ವಿಶ್ವದಾಭಿರಾಮ ಕೇಳು ವೇಮ.

"ಎಲ್ಲಕ್ಕೂ ದೇವರೇ ಕರ್ತಾರನು" ಎಂದು ಪ್ರತಿಯೊಬ್ಬರೂ ನುಡಿಯುತ್ತಾರೆ. ಆದರೆ ಆ ದೇವರ ಸಾಕ್ಷಾತ್ಕಾರ ಪಡೆಯಲು ಪ್ರಯತ್ನಿಸುವದಿಲ್ಲ. ಜನರು ಕ್ಷೇತ್ರಗಳಲ್ಲಿ ತಾವು ನೋಡಿದ ದೇವನಂತೆಯೇ ಕಲ್ಲು ಕಂಚಿನ ಪ್ರತಿಮೆ ಸಿದ್ಧಗೊಳಿಸಿ ಅದನ್ನೇ ದೇವರೆಂದು ಪೂಜಿಸುವರು. ಆದರೆ ದೇವರು ಶರೀರಸ್ಥನಾಗಿರುವನು. ಹೃದಯ ಪುಂಡರೀಕದಲ್ಲಿ ಇರುವನು. ಇವನೇ ಅಂತರಾತ್ಮ. ಅಂತರಾತ್ಮನೇ ದೇವರು. ಇದೇ ದೇವರನ್ನು ಕಾಣುವ ನೇರ ಮಾರ್ಗ. "ಯಾವನೊಬ್ಬನು ಯಾತ್ರೆಯನ್ನು ಮುಕ್ತಾಯಗೊಳಿಸಿಕೊಂಡು ಬಂದ ನಂತರ ಅವನು "ಎಲ್ಲಿಯೂ ನಾನು ನಿಜವಾದ ದೇವನನ್ನು ಕಾಣಲಿಲ್ಲವಲ್ಲ! ಎಲ್ಲ ತೀರ್ಥಕ್ಷೇತ್ರಗಳಲ್ಲಿ ಕಲ್ಲಿನ ಮೂರ್ತಿ ನೀರಿನ ಕುಂಡಗಳ ಹೊರತು ಇನ್ನೇನನ್ನೂ ಕಾಣಲಿಲ್ಲ. ವ್ಯರ್ಥವಾಗಿ ಒಣ ಒಣ ತಿರುಗಾಡಿ ಬರುವದರಲ್ಲಿ ಲಾಭವಿಲ್ಲ. ಇತ್ಯಾದಿ ವಿಚಾರ ಮಾಡಿ ಸತ್ಸಂಗ ಹಿಡಿಯುವನು. ಸತ್ಸಂಗದಿಂದ ಬಹು ಜನರಿಗೆ ದೇವರು ದೊರೆತಿರುವನೆಂಬ ವಿವೇಕ ಅವನಲ್ಲಿ ಉಂಟಾಗುವದು. ಮೂಢರಾದವರು ಇದನ್ನರಿಯದೆ ಕೇವಲ ಭ್ರಮೆಗೊಳಗಾಗುವರು. ಮೋಕ್ಷ ಗೊಳಿಸಲು ಯೋಗ್ಯನಾದ ಜೀವನಿಗೆ ಕೂಡಲೆ ಮೋಕ್ಷ ದೊರಕುವದು. ಶಿಷ್ಯನು ಪ್ರಾಜ್ಞನಾಗಿದ್ದರೆ ಮತ್ತು ಅನನ್ಯ ಭಕ್ತನಾಗಿದ್ದರೆ ಕೇವಲ ದೃಷ್ಟಿ ಮಾತ್ರದಿಂದಲೇ ಅವನಿಗೆ ಸದ್ಗತಿಯುಂಟಾಗುವದೆಂದು ಸಿದ್ಧಪುರುಷರೆಲ್ಲ ಹೇಳುತ್ತಾರೆ.

ಮನುಷ್ಯರನ್ನು ಅವರವರ ಗುಣಗಳ ಮೇಲಿಂದ ರಾಕ್ಷಸ, ಮಾನವ ಮತ್ತು ದೇವ ಎಂದು ವಿಶ್ಲೇಷಿಸುತ್ತಾರೆ. ಮುಕ್ತಿಯನ್ನು ಕಾಣಲಾರದಂಥ ಮೂರ್ಖ ಜನರಿಗೆಲ್ಲ ಪರಮ ಪದವಿಯನ್ನು ಹೊಂದುವ ಮಾರ್ಗವನ್ನು ವಿವರಿಸಿ ತಿಳಿಸಿ ಹೇಳಿ ಹಾದಿ ತೋರುವ ಜ್ಞಾನಿಗಳು ದೈವವೆನಿಸರೇ? ಇಂಥ ಜ್ಞಾನಿಗಳು ಇರುವ ಸ್ಥಾನಲೇ ಕ್ಷೇತ್ರವು; ಅದುವೇ ತೀರ್ಥ. ಸತ್ಸಂಗವೇ ಮೋಕ್ಷಕ್ಕೆ ಸುಲಭ ಸಾಧನ.

೯೩೦

ಕಲಿಯುಗಂಬುನಂದು ಘನತಕುನೈಚ್ಚಂಬು, ಘನತ ನೈಚ್ಚಮುನಕು ಗಲ್ಲುಚುಂಗು,
ಶ್ರದ್ಧ ಭಕ್ತಿ ಲುಡುಗಿ ಜನುಲುಂಡ್ರುಕಾವುನ, ವಿಶ್ವದಾಭಿರಾಮ ವಿನುರವೇಮ-

ಕಲಿಯುಗ ಕಾಲದೊಳು ಘನತೆಗೆ ನೀಚತನ;
"ಘನತೆ" ನೀಚತನಕೆ ಕೊಟ್ಟ ಹೆಸರು,
ಶ್ರದ್ಧೆ ಭಕ್ತಿಯುಳಿದು, ಜನತೆ ಇಹುದಲ್ಲವೇ?
ವಿಶ್ವದಾಭಿರಾಮ ಕೇಳು ವೇಮ.

ಮೊದಲು ಕೇವಲ ಸತ್ಯವೇ ಆಗಿತ್ತು. ಅದು ಬಹು ಕಾಲ ತಾನೇ ತಾನಾಗಿತ್ತು ಅದುವೇ ಸತ್ಯಯುಗ ಇಲ್ಲವೆ ಕೃತಯುಗ. ಅದಾದನಂತರ ತ್ರಿಗುಣಾತ್ಮಕ ಪ್ರಕೃತಿಯು ವ್ಯಕ್ತವಾಯಿತು- ಅದು ಕಲಿಯುಗದಿಂದ ಹಿಂದಕ್ಕೆ ಮೂರನೆಯ ಯುಗವಾಗಿದೆ.

ತ್ರಿಗುಣಾತ್ಮಕ ಪ್ರಕೃತಿ ವ್ಯಕ್ತವಾದುದರಿಂದ ಮತ್ತು ಮೂರನೆಯದಾದುದರಿಂದ ಅದಕ್ಕೆ ತ್ರೇತಾಯುಗವೆನ್ನುವರು. ಈನ್ನು ಕಲಿಯುಗದಿಂದ ಹಿಂದೆ ಎರಡನೆಯ ಸ್ಥಾನದಲ್ಲಿರುವುದರಿಂದ ಮತ್ತು ಕಲಿಯುಗಕ್ಕಿಂತ ಶ್ರೇಷ್ಠವಾಗಿರುವುದರಿಂದ ಮುಂದಿನ ಯುಗಕ್ಕೆ ದ್ವಾಪರ ಯುಗವೆನ್ನುತ್ತಾರೆ. ಹೀಗೆ ಆಧ್ಯಾತ್ಮಿಕ ಸಾಧನೆಯ ಹಂತಗಳಿಗೆ ಕೊಟ್ಟ ವಿವಿಧ ಹೆಸರುಗಳೇ ಈ ಯುಗಗಳಾಗಿವೆ. ಅಜ್ಞಾನದ ಕಪ್ಪು ಕಲೆಯು ಮುಸುಕಿರುವ ಪ್ರಸ್ತುತ ಯುಗಕ್ಕೆ ಕಲಿಯುಗವೆಂದು ಹೆಸರು. ಕಲಿಯುಗದ ಎರಡುಪಟ್ಟು ದ್ವಾಪರಯುಗವು ದೀರ್ಘವಾದದ್ದು. ಕಲಿಯುಗದ ಮೂರುಪಟ್ಟು ತ್ರೇತಾಯುಗವು ದೀರ್ಘವಾಗಿದೆ. ಸತ್ಯಯುಗವು ಕಲಿಯುಗದ ನಾಲ್ಕು ಪಟ್ಟು ದೀರ್ಘವಾಗಿದೆ. ಕಲಿಯುಗವು ಕಾಲಮಾನದಂತೆ ನಾಲ್ಕು ಲಕ್ಷ ಮೂವತ್ತೆರಡು ಸಾವಿರ ವರುಷಗಳೆಂದು ಲೆಕ್ಕಾಚಾರ. ಇದೇ ಕಾಲಮಾನದಿಂದ ಕಲಿಯುಗ "ಅಪರ" ಎಂದಾದರೆ ಅದರ ಎರಡರಷ್ಟು "ದ್ವಾಪರ" ಮೂರರಷ್ಟು "ತ್ರೇತ" ಇತ್ಯಾದಿ ಶಬ್ದಗಳು ಉತ್ಪತ್ತಿಯಾಗುವವು.

ಆಧ್ಯಾತ್ಮಿಕ ಸಾಧನೆಯ ದೃಷ್ಟಿಯಿಂದ ಕಲಿಯುಗವು "ಅಪರ" ಎಂದರೆ "ಕೀಳು" ಎಂದು ಗಣಿಸಲ್ಪಡುತ್ತದೆ. ಅಪರವಾದುದನ್ನೇ "ಪರ" ಎಂದು ಮೋಹಗೊಂಡಿರುವುದೆ ಕಲಿಯುಗದ ವೈಶಿಷ್ಟ್ಯ. ಘನತೆಗೆ "ನೀಚತನ" ಎನ್ನುತ್ತಾರೆ. ಕಲಿಯುಗದ ಜನರು! ನೀಚತನಕ್ಕೆ ಘನತೆಯೆಂದು ಕರೆಯುತ್ತಾರೆ! ಸತ್ಯದಲ್ಲಿ ನಿಷ್ಠೆಯಿಲ್ಲ ಭಕ್ತಿಯಿಲ್ಲ. ಜನರೆಲ್ಲ ಶ್ರದ್ಧಾವಿಹೀನರಾಗಿ ಭಕ್ತಿಹೀನರಾಗಿ ಉಂಟು.

೯೩೧

ಪರುಲದಿಟ್ಟಿನಂತ ಪಾಪಕರ್ಮಂಬುಬ್ಬು, ವಿಡುವ ದೆನ್ನಟಿಕಿನಿ ವಿಶ್ವಮುಂದು,
ಪರುಡು ಪರುಡುಗಾಡು ಪರಮಾತ್ಮಯೌನಯಾ, ವಿಶ್ವದಾಭಿರಾಮ ವಿನುರ ವೇಮ.

ಪರರ ಬೈದೊಡಷ್ಟು ಪಾಪ ಕರ್ಮವುಂಟು
ಬಿಡದು ಎಂದಾದರು, ಭೂಮಿಯಲ್ಲಿ,
ಪರನು ಪರನು ಅಲ್ಲ; ಪರಮಾತ್ಮನಾಗುವ.
ವಿಶ್ವದಾಭಿರಾಮ ಕೇಳು ವೇಮ,

ಪರನಿಂದೆ ತುಂಬಾ ಕೀಳಾದ ಕೆಲಸ. ಯಾರನ್ನಾದರೂ ಬಯ್ಯುವುದೆಂದರೆ, ಅವರ ಮನಸ್ಸು ಕಲಕಿ ಅವರಿಗೆ ದುಃಖ ಉಂಟು ಮಾಡಿದಂತೆ, ಪರರ ಪೀಡೆಯು ಪಾಪದ ಕಾರ್ಯ ನಾವು ಬೇರೆಯವರಿಂದ ಏನನ್ನು ಒಯಸುವೆವೋ ಅದನ್ನೇ ಅವರಿಗೆ ನೀಡಬೇಕು, ನಾವು ಪ್ರೀತಿ ತೋರಿದರೆ, ನಮ್ಮನ್ನು ಅವರೆಲ್ಲ ಪ್ರೀತಿಸುತ್ತಾರೆ. ನಾವು ದ್ವೇಷಿಸಿದರೆ; ನಮಗೆ ದ್ವೇಷವೇ ಎದುರಾಗುವದು. ಕರ್ಮವು ಫಲ ನೀಡದೆ ಹೋಗದು. ಪರರನ್ನು ಬಯ್ದು ಪಾಪಕರ್ಮವು ಭೂಮಿಯಲ್ಲಿ ಇರುವ ಕಾಲ, ಫಲ ಭೋಗಿಸಿದರಲ್ಲದೆ, ಬಿಡದು ಇದು ಹೀಗೇಕೆ? ಪರನು ಎಂದರೆ ಎರಡನೇಯವನು ಅಲ್ಲ. ಪರನು ಪರಮಾತ್ಮನೆ

ಆಗಿದ್ದಾನೆ, ಪರಮಾತ್ಮನೇ ಸರ್ವಾತ್ಮನು. ಅವನು ನಿಮಿತ್ತ ಮಾತ್ರದಾಗಿ ಸರ್ವವನ್ನು ನಡೆಸುತ್ತಾನೆ. ಇದರಿಂದಾಗಿ, ನಮ್ಮ ಕರ್ಮಫಲಕ್ಕೆ ನಾವೇ ಭಾಗೀದಾರರಾಗುತ್ತೇವೆ.

ಹೇಲಿಸಿ ನೋಡಿರಿ:

"ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ !
ನ ಹಿ ನಸ್ತಾ ತ್ಮನಾತ್ಮಾನಂ ತತೊ! ಯಾತಿ ಪರಾಂ ಗತಿಮ್ ॥

"ಎಲ್ಲಾ ಕಡೆಗಳಲ್ಲಿಯೂ ಭಗವಂತವನ್ನೇ ನೋಡುತ್ತಿರುವ ಜ್ಞಾನಿ ಆತ್ಮನನ್ನು ಆತ್ಮನಿಂದ ಹಿಂಸಿಸುವುದಿಲ್ಲ. ಅವನು ಪರಮ ಪದವಿಯನ್ನು ಸೇರುವನು."

೯೩

ಅತಿಹಿತಮಗನಟ್ಟು ಲಾಡಿನಮಾಡಿಕು, ಸಂತ ಸಿಂತುರೆಲ್ಲ ಸತ್ಪುರುಷುಲು,
ಅಧಿಕ ಭಾಷಣಂಬು ಲಾಯಾಸದಂಬುಲು, ವಿಶ್ವದಾಭಿರಾಮ ವಿನುರ ವೇಮ.

ಅತಿಹಿತವಾದಂಥ ಆಡುತಿಪ್ಪ ನುಡಿಗೆ,
ಸಂತೋಷಿಪರೆಲ್ಲ ಸತ್ಪುರುಷರು.
ಅಧಿಕ ಭಾಷಣವಿರೆ, ಆಯಾಸವದೆಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಮಾತು ಬಲ್ಲರ ಮಾಣಿಕ ತಂದ, ಮಾತು ಬಾರದವ ಜಗಳ ತಂದ. ಎಂಬ ಜಾಣ ನುಡಿಯೊಂದಿದೆ. ನಾವು ಮಾತನಾಡಿದಾಗ ಒಳ್ಳೆಯ ಜನರೆಲ್ಲರೂ ಸಂತೋಷ ಪಡಬೇಕು. ಹಲವರನ್ನು ಎಲ್ಲ ಕಾಲ ಸಂತೋಷಗೊಳಿಸಬಹುದು. ಎಲ್ಲರನ್ನು ಹಲವು ಕಾಲ ಸಂತೋಷಗೊಳಿಸಬಹುದು. ಆದರೆ ಎಲ್ಲರನ್ನು ಎಲ್ಲ ಕಾಲ ಸಂತೋಷಗೊಳಿಸುವದು ಆಗದ ಕಾರ್ಯ ಆದರೆ ಎಲ್ಲರೂ ಸತ್ಪುರುಷರಲ್ಲ, ಸತ್ಪುರುಷರು ಯಾರೋ | ಅವರು ಅತಿಹಿತಕರವಾಗಿ ನುಡಿಯುವ ಮಾತಿನಿಂದ ಸಂತೋಷಗೊಳ್ಳುವರು. ಎಷ್ಟು ಮಾತು ಅವಶ್ಯವೋ ಅಷ್ಟಾದರೆ ತೀರಿತು. ಮಿತಿಮೀರಿದ ಮಾತಿನಿಂದ ಹೇಳುವವನಿಗೂ ಆಯಾಸ; ಕೇಳುವವನಿಗೂ ಆಯಾಸ.

೯೪

ಕೂರ ಯುಡುಕುವೆನುಕ ಕೂಡುನಾಕಸಜೇರ, ನೆರುಕಗಲ್ಗಿ ಮುನುಪೆ ಯೇರವಲಯು
ಸ್ಥಲಮುದಪ್ಪವೆನ್ಕ ಧರ್ಮಂಬು ಪುಟ್ಟುನಾ? ವಿಶ್ವದಾಭಿರಾಮ ವಿನುರವೇಮ.

ಸೊಪ್ಪು ಆಡುವ ಮುನ್ನ, ಸೇರಿದ ಕಸವೆಲ್ಲ
ಅರಿತುಕೊಂಡು ಮುಂಚೆ ಆರಿಸುತಿರು
ತಾಣತಪ್ಪಿದ ಬಳಿಕ ಧರ್ಮವು ಹುಟ್ಟುವುದೆ?
ವಿಶ್ವದಾಭಿರಾಮ ಕೇಳು ವೇಮ.

ಯಾವ ಕಾಲದಲ್ಲಿಯೇ ಆಗಲಿ, ಒಳ್ಳೆಯ ಕಾರ್ಯವನ್ನು ಮಾಡುವ ಸದವಕಾಶವನ್ನು ಕಳೆದುಕೊಳ್ಳಬಾರದು. ನಾವು ಮಾಡಿದ ಒಳ್ಳೆಯ ಕರ್ಮವೆಲ್ಲ ನಮ್ಮ ಮನಸ್ಸಿನ ಶುದ್ಧಿಯನ್ನು ಹೆಚ್ಚಿಸಲು ಕಾರಣವಾಗುವುದು. ಚಿಕ್ಕಮಕ್ಕಳಾಗಿರುವಾಗ ಸತ್ಯ ನುಡಿಯುವುದು, ಕಳವು ಮಾಡುವುದು, ಪ್ರಾಣಿ ಹಿಂಸೆಯಿಂದ ದೂರಾಗುವುದು ಇತ್ಯಾದಿ ನಿಯಮಗಳನ್ನು ಪಾಲಿಸಿದರೆ, ತರುಣನಾದಾಗ ಆ ಸಂಸ್ಕಾರಗಳ ಫಲವು ಅವನ ಶೀಲವನ್ನು ರೂಪಿಸುವಲ್ಲಿ ಪ್ರಭಾವ ಬೀರುವದು. ಐದಾರು ವರುಷ ವಯಸ್ಸಿಗೆ ಶಾಲೆ ಓದಿ ಅಕ್ಷರ ಗೀಚಾದಿಗಳೊಂದಿಗೆ ತತ್ವಗಳ ಅಲ್ಪ ಪರಿಚಯವನ್ನು ಮಾಡಿಕೊಂಡರೆ ಮನಸ್ಸಿನ ಮಾರ್ಗಗಳನ್ನು ಹರಿಯದಂತೆ ನಿಗ್ರಹಿಸುವದು, ಸಾಧ್ಯವಾಗುತ್ತದೆ. ಇದನ್ನು ಮರೆತ ಚಿಕ್ಕ ವಯಸ್ಸಿನಲ್ಲಿ ಮನ ಬಂದಂತೆ ಆಟಂನೋಟ, ನೋಜು ಮಜಲುಗಳಲ್ಲಿಯೂ, ತಾರುಣ್ಯದಲ್ಲಿ ತರುಣಿಯಲ್ಲಿ ಅನುರಕ್ತನಾಗಿಯೂ ಕಾಲ ವ್ಯಯಿಸಿದರೆ, ಆ ಕರ್ಮ ಸಂಸ್ಕಾರದಿಂದ ವೃದ್ಧಾಪ್ಯದಲ್ಲಿ ಮನಸ್ಸು ವಿಕ್ಷೇಪಕ್ಕೆ ಈಡಾಗುವದೇ ಹೊರತು ಅಂತರ್ಮುಖವಾಗುವದಿಲ್ಲ.

ತೋಟ-ಗದ್ದೆಗಳಲ್ಲಿ ಬೆಳೆದ ಹಸಿ ಸೊಪ್ಪನ್ನು ಬೇಯಿಸಿ ಪಲ್ಯ ಮಾಡುವರಷ್ಟೇ ಬೇಯಿಸುವ ಮೊದಲು ಅದರಲ್ಲಿರುವ ಕಸ-ಕಡ್ಡಿಗಳನ್ನು ತೆಗೆದುಹಾಕಬೇಕು ಹೀಗೆ ಮಾಡದೆ, ಬೇಯಿಸಿದ ನಂತರ ಕಸ-ಕಡ್ಡಿಗಳನ್ನು ಒಂದುಗೂಡಿಸುವ ಧರ್ಮಪ್ರವೃತ್ತಿ ಉಂಟಾಗಬೇಕಾದರೆ, ಜೀವನದಲ್ಲಿ ಆಯಾ ಕಾಲಕ್ಕೆ ಸರಿಯಾಗಿ ವರ್ತಿಸಬೇಕು. ತಾಣ ತಪ್ಪಿದ ಬಳಿಕ ಧರ್ಮ ಹುಟ್ಟಲಾರದು. ಏಕೆಂದರೆ ಪೂರ್ವ ಸಂಸ್ಕಾರಗಳು ಪ್ರಬಲವಾಗಿ ಬಹುದಾಗಿದೆ. ಪೂರ್ವ ಸಂಸ್ಕಾರಗಳೇ ಉಂಟಾಗದಂತೆ ಮೊದಲಿನಿಂದ ಧರ್ಮಪರರಾಗಿ ನಡೆಯಬೇಕು.

೯೫

ಗುಣವುತಿರುಲೇಕ ಕುಲವೆಲ್ಲ ಜೆಡಿಪೋವ, ಸ್ತ್ರೀಲನಹತವಲನ ಸಿಗ್ಗು ಬೋವ,
ಚಿವಿಟನೆಲವಲನ ಜಲವೆಲ್ಲ ಜೆಡಿಪೋವ, ವಿಶ್ವದಾಭಿರಾಮ ವಿನುರ ವೇಮ.

ಗುಣವು ತೀರಿತಲ್ಲ; ಕುಲವು ನಾಶವಾಯ್ತು.
ಲಲನೆ ನಡತೆಯಿಂದ ಲಜ್ಜೆ ಹೋಯ್ತು.
ಜವುಗು ಭೂಮಿಯಿಂದ ಜಲವು ಕೆಟ್ಟು ಹೋಯ್ತು.
ವಿಶ್ವದಾಭಿರಾಮ ಕೇಳು ವೇಮ.

ಗುಣವೇ ಕುಲ; ಗುಣವಿಲ್ಲದವನ ಕುಲವನೆಣಿಸಲೇಕೆ? ಗುಣವು ಯಾವುದು? ಸತ್ವಗುಣ, ರಜೋಗುಣ ಮತ್ತು ತಮೋಗುಣವೆಂಬ ತ್ರಿಗುಣಗಳಿವೆ. ಮೊದಮೊದಲು ಎಲ್ಲರೂ ಕಾಡು ಜನರೇ ಆಗಿದ್ದರು. ಎಲ್ಲರೂ ದೈಹಿಕ ಶ್ರಮದಿಂದ ಉಪಜೀವಿಸುತ್ತಿದ್ದರು.

ಅವರೆ ಶೂದ್ರರು. ಆನಂತರ ಒಬ್ಬರು ಇನ್ನೊಬ್ಬರಿಗಿಂತ ಮೇಲು ಎಂಬ ಭಾವ ಮೂಡ ಹತ್ತಿತು. ಜನರು ಗುಂಪುಗಳಾಗಿರತೊಡಗಿದರು. ಕುಟುಂಬ ವ್ಯವಸ್ಥೆಯೂ ಪ್ರಾರಂಭ ವಾಯಿತು. ಮೇಲು-ಕೀಳಿನ ಸ್ಪರ್ದೆಗೆ ಗುಂಪು ಕಟ್ಟುವದು ಅನಿವಾರ್ಯವಾಯಿತು ಯುದ್ಧ-ಕಾಳಗೆಗಳು ಪ್ರಾರಂಭವಾದವು ಇದುವೇ ಕ್ಷತ್ರಿಯ ಕುಲಕ್ಕೆ ಕಾರಣವಾಯಿತು ಯುದ್ಧ-ಕಾಳಗಗಳಲ್ಲಿ ಬಲದ ಜೊತೆಗೆ ಬುದ್ಧಿಯೂ ನಿರ್ಣಾಯಕಪಾತ್ರವಾಗತೊಡಗಿತ ಕ್ಷಾತ್ರ ಜನಾಂಗವು ಎಷ್ಟೇ ಒಳಪ್ಪವಾದರೂ ಆಯುಧಾಧಿಗಳಿಗಾಗಿ ಬುದ್ಧಿವಂತರಾದ ಋಷಿಗಳ ಪದತಲದಲ್ಲಿ ಕುಳ್ಳಿರಬೇಕಾಯಿತು ಮೊದಲು ಆಯುಧವಿದ್ಯೆಗಳಿಗಾಗಿಯಷ್ಟೇ ಋಷಿಗಳ ಬಳಿಗೆ ರಾಜರು ಹೋದರು. ನಂತರ ವಿಪ್ರರು ಸಕಲ ರಂಗಗಳ್ಲಿಯೂ ಪ್ರಭಾವಿತರಾದರು. ಆಗ ವಿಪ್ರಯುಗ ಪ್ರಾರಂಭವಾಯಿತು. ಕಡಿಮೆ ಸಂಖ್ಯೆಯಲ್ಲಿದ್ದ ವಿಪ್ರರು ತಮ್ಮ ವೈಶಿಷ್ಟ್ಯಗಳನ್ನುಳಿಸಿಕೊಳ್ಳಲು ಮೂಢನಂಬುಗೆ ಬೆಳೆಸಿದರು. ಜ್ಞಾನವನ್ನು ಹಲ ವರಿಂದ ಬಚ್ಚಿಟ್ಟರು. ಕೆಲವು ವರ್ಗಗಳು ಉಳಿದವರ ಶೋಷಣೆ ನಡೆಸಿದ್ದರಿಂದ ಸಂಪತ್ತು ಸಂಗ್ರಹ ವಿತರಣೆ ಕಾರ್ಯಗಳು ಪ್ರಮುಖವಾದವು ಇದನ್ನು ನಡೆಸಲು ವೈಶ್ಯವರ್ಣ ವೊಂದು ನಿರ್ಮಾಣವಾಯಿತು. ಹೀಗೆ ಒಂದೊಂದು ಗುಣದ ಮೇಲೆ ಒಂದೊಂದು ವರ್ಣ ಗಳು ನಿರ್ಮಾಣವಾಗಿ ಪ್ರಭಾವಶಾಲಿಯಾಗುತ್ತವೆ. ಮುಂದೆ ಸ್ವಾರ್ಥಲೋಲುಪರಾಗಿ ಆ ಗುಣ ಕಳೆದುಕೊಳ್ಳುತ್ತಾರೆ. ಆಗ ಅವರ ಕುಲವು ನಾಶವಾಗಿ ಇನ್ನೊಂದು ಕುಲ ಪ್ರಭಾ ವಯುತವಾಗುತ್ತದೆ. ಹೇಗೆಂದರೆ, ಸ್ತ್ರೀಯ ನಡತೆ ಕೆಟ್ಟರೆ ಅವಳ ಲಜ್ಜೆಯೇ ಹೋದಂತೆ; ಕುಲಕ್ಕೆ ಗುಣವಿಲ್ಲದಿದ್ದರೆ ಕುಲನಾಶವಾದಂತೆ. ಕ್ಷಾರಯುಕ್ತವಾದ ಭೂಮಿಯಲ್ಲಿ ಭೂತ ಳದ ನೀರಿನ ಪಾತಳಿ ಮೇಲೆ ಬಂದರೆ ಜವುಳು ಭೂಮಿಯೆನ್ನುತ್ತಾರೆ. ಆಲ್ಲಿಯ ನೀರು ಕ್ಷಾರಯುಕ್ತವಾಗಿದ್ದು ಬೆಳೆಗೂ ಉಪಯೋಗವಿಲ್ಲ. ಕುಡಿಯಲೂ ಬಾರದು.

೯೩೬

ಜಕ್ಕಿ ನೆಕ್ಕಿ ವೀಧಿ ಜಕ್ಕಗಾವಲುವಡ, ಗುಕ್ಕ ಲೆನ್ನೊ ವೆಂಟಿ ಗೂಯೆದೊದಗು
ಘನುನಿ ಕೋರ್ವಲೀನಿ ಕಾಪುರುಷಂಲಯಟು, ವಿಶ್ವದಾಭಿರಮ ವಿನುರ ವೇಮ.

ಕುದುರೆಯೇರಿ ಬೀದಿಗುಂಟ ಹೊರಹೊರಡಲು,
ಬೆನ್ನು ಹಿಂದೆ ನಾಯಿ ಬೊಗಳುತಿಹುದು;
ಘನನ ಸಹಿಸದಿಪ್ಪ ಕಾಪುರುಷರ ರೀತಿ,
ವಿಶ್ವದಾಭಿರಾಮ ಕೇಳು ವೇಮ.

"ಆನೆ ಹತ್ತಿ ಹೋಹನ ಕಂಡು ಶ್ವಾನ ಬೊಗಳಿದರೇನು?" ಎನ್ನುವ ಮಾತು ರೂಢಿಯಲ್ಲಿದೆ. ಕುದುರೆ ಹತ್ತಿದ ಸವಾರರು ಬೀದಿಗುಂಟ ಹೋಗುವಾಗ ಅವರ ಬೆನ್ನಿನ ಹಿಂದೆ ನಾಯಿ ಬೊಗಳುವದನ್ನು ಯಾರು ಕೇಳಿಲ್ಲ ? ನಾಯಿಯು ಹೋಗುವವನು ಯಾರು ? ಎಂತು ? ಎಂಬುದನ್ನು ತಿಳಿಯದೆ, ತನಗೆ ರೂಢಿಗತವಾದ ದೃಶ್ಯವೊಂದನ್ನು ಬಿಟ್ಟು ಬೇರೊಂದು ದೃಶ್ಯನನ್ನು ಕಂಡೊಡನೆ ಬೊಗಳಲು ಪ್ರಾರಂಭಿಸುತ್ತದೆ. ಅಸಹನೆಯ ಈ ಪ್ರವೃತ್ತಿ, ಶ್ವಾನಪ್ರವೃತ್ತಿಯೆನಿಸುವದು.

ಕೆಲವು ಜನರು ತಾವು ತಿಳಿದುಕೊಂಡದ್ದಕ್ಕಿಂತ ಬೇರಾಗಿ ನುಡಿದುದನ್ನು ಸಹಿಸಲಾರದ ಸಂಕುಚಿತ ಬುದ್ಧಿ ಹೊಂದಿರುವರು. ಘನವಂತರಾದ ಸಾಧು-ಸತ್ಪುರುಷರು ಅಲೌಕಿಕ ಭಾವ ತಾಳಿ, ವ್ಯವಹರಿಸುವದನ್ನು ಕಂಡು, ಈ ಸಾಮಾನ್ಯ ಜನರು ಸಹಿಸದೆ ಅವರ ನಿಂದೆಗೆ ತೊಡಗುವರು. ಸಮುದ್ರವನ್ನೇ ಕಾಣದ ಭಾವಿಯ ಕಪ್ಪೆಗೆ ಸಮುದ್ರದ ಕಲ್ಪನೆ ಪ್ರತ್ಯಕ್ಷ ಕಂಡುಕೊಳ್ಳುವವರೆಗೂ ಬರಲಾರದು. ಅದೇ ರೀತಿ; ಕಾಪುರುಷರು ಘನರನ್ನು ಅರಿಯಿ ಬೇಕಾದರೆ ಶುದ್ಧ ಮನಸ್ಸಿನಿಂದ ಅವರಿಗೆ ಶರಣಾದರೆ ಮಾತ್ರ ಅವರನ್ನು ಅರಿಯುವುದರಲ್ಲಿ ಎಷ್ಟಾದರೂ ಯಶ ಪಡೆಯುವರು. ಸುಮ್ಮನೆ ಘನವಂತರನ್ನು ನಿಂದಿಸಿದರೆ, 'ಗುಡ್ಡಕ್ಕೆ ನಾಯಿ ಬೊಗಳಿದಂತೆ.'

೯೩೭

ಳಕ್ಕಿ ದೆಲಸಿ ಫಲುಕ ನೊಕ್ಕ ವಾಕ್ಕ ಮೆಚಾಲು, ಪೆಕ್ಕು ಲೇಲ ವೆಟ್ಟಿ ಪ್ರೇಲುಲರಯ,
ದಿಕ್ಕುಗಲ್ಲು ಮ್ರೊಕ್ಕು ನೊಕ್ಕಿಟಿ ಚಾಲದಾ, ವಿಶ್ವದಾಭಿರಾಮ ವಿನುರ ವೀಮ.

ವಾದವರಿತು ನುಡಿವ ವಾಕ್ಯವೊಂದೆ ಸಾಕು.
ಬಹಳಿವೇಕೆ? ಬರಿಯ ಬಡಾಯಿಯರಿ.
ಒಪ್ಪಲೇಕೆ ಬಹಳ ಒಂದಕಷ್ಟೆ ಮಣಿವೆ.
ವಿಶ್ವದಾಭಿರಾಮ ಕೇಳು ವೇಮ.

ಧರ್ಮವೆನುವದು ಸತ್ಯ ಸಂಗತಿ. ಅದು ಕೇವಲ ಬಾಯಿ ಬಡಾಯಲ್ಲ. ನಮ್ಮ ಆತ್ಮವನ್ನು ಪರೀಕ್ಷಿಸಿ ಅಲ್ಲೇನಿದೆ ಎಂಬುದನ್ನು ತಿಳಿದುಕೊಳ್ಳಬೇಕು. ತಿಳಿದುಕೊಂಡದ್ದನ್ನು ಅನುಷ್ಠಾನಕ್ಕೆ ತರಬೇಕು. ಅದೇ ಧರ್ಮ. ನಾವೆಷ್ಟು ಮಾತನಾಡಿದರೂ ಅದು ಧರ್ಮ ವಾಗುವದಿಲ್ಲ.

ದೇವರು ಇರುವನೇ? ಇಲ್ಲವೇ? ಎಂಬುದನ್ನೂ ನಾವು ವಾದ ಮಾಡಿ ನಿರ್ಣಯಿಸ ಲಾರೆವು. ಆದರೆ ದೇವರು ಇರುವದಕ್ಕೆ ಆಧಾರಗಳೇನು? ಎಂದು ವಾದ ಮಾಡಿದಾಗ, ಆ ವಾದದ ಇಂಗಿತಾರ್ಥ ತಿಳಿದು, 'ಹರ್ಷಗರಿಯದಂತೆ, ಮುರದೆಲೆಯೂ ಅಲುಗದು' ಎಂದು ಹೇಳಿದರೆ, ಅಂಥ ವಾಕ್ಯವೊಂದೇ ಇಚ್ಛಿತ ಪರಿಣಾಮ ಉಂಟುಮಾಡುವದು ಬಹಳ ಮಾತನಾಡಿದರೇನು? ಅದು ಬಾಯಿ ಬಡಾಯಿ ಎನ್ನಿಸುವದು.

ಆ ದೇವರು; ಈ ದೇವರು ಎಂಬ ಹಲವಾರು ದೇವತೆಗಳಿಲ್ಲ. ಇರುವವನೊಬ್ಬ ೀ, ಹಲವಾರು ಧರ್ಮಗಳಿಲ್ಲ, ಇರುವ ಧರ್ಮವೊಂದೇ. ಆ ಏಕ ದೇವನಿಗೆ ಮಾತ್ರ ಮಣಿ ಯುವೆ.

೯೩೮

ಅಲ್ಲುವ ಡ್ಯನನೇಮಿ ಯಧಿಕಡ್ಯನನುನೇಮಿ, ಚಿಪ್ಪ ವಲೆರಯು ರೀತಿ ಚೆಪ್ಪಿ ನಾಡ್ಡ,
ಹಕು ನಿಯೆರಕುಲೇಕ ಯಾಕುನಲ್ಲಾ ಡುನಾ? ವಿಶ್ವದಾಭಿರಾಮ ವಿನುರ ವೇಮ.

ಅಲ್ಪದಾದರೇನು? ಅಧಿಕನಾದರೇನು ?
ಹೇಳುವಂಥ ರೀತಿ ಹೇಳುತಿಹನು.
ಹರನಿಗರಿಯದಂತೆ ಮರದೆಲೆಯು ಅಲುಗದು
ವಿಶ್ವದಾಭಿರಾಮ ಕೇಳು ನೇಮ.

ಚಿಕ್ಕ ಮನುಷ್ಯನೇ ಇರಲಿ; ದೊಡ್ಡ ಮನುಷ್ಯನಿರಲಿ ಇರುವ ಸತ್ಯವನ್ನು ಇರುವ ರೀತಿ ಹೇಳಬೇಕಾಗುವದು. ಒಬ್ಬನು ಬಹು ವಿಧದ ಶಾಸ್ತ್ರಾಭ್ಯಾಸ ಮಾಡಿರಬಹುದು. ಇನ್ನೊಬ್ಬನು ಬಹಳಷ್ಟು ಭಾಷೆಗಳನ್ನು ಕಲಿತಿರಬಹುದು. ಮಗುದೊಬ್ಬನು ಬಹಳ ದೇಶಗಳನ್ನು ಸುತ್ತಾಡಿರಬಹುದು. ಈ ಎಲ್ಲ ಜನರು ಸತ್ಯದ ಬಗ್ಗೆ ಹೇಳಬೇಕಾದರೆ, ಒಂದೇ ಬಗೆಯಾಗಿ ಹೇಳಬೇಕಾಗುವದು. 'ದೇವರು ಇರುವನು; ಅವನು ಒಬ್ಬನೇ ಇರುವನು, ಅವನು ಸರ್ವೇಶನು. ಎಲ್ಲವೂ ನಡೆಯುವದು ಅವನ ಅರಿವಿನ ಆಳದಲ್ಲಿಯೇ, ಅವನು ಅರಿಯದಂತೆ ಮರದೆಲೆಯೂ ಅಲುಗದು' ಎನ್ನುವದೇ ಪುರುಷ ಸರ್ವಭೂತಾತ್ಮನಾಗಿ ಸಾಕ್ಷಿಯಾಗಿ, ಅಂತರ್ಯಾಮಿಯಾಗಿ ನಿಂತಿರುವನು.

೯೩೯

ಕಂಕುಭಟ್ಟನಂಗೆ ಗಾಪಾಯಮುಲಗಟ್ಟಿ, ಕೊಲಚಿಧರ್ಮರಾಜು ಕೋರಿ ವಿರಟು,
ಗಾಲಕರ್ಮಗತುಲ ಗನಿಪೆಟ್ಟಲೇರಯಾ, ವಿಶ್ವದಾಭಿರಾಮ ವಿನುರ ವೇಮ.

ಕಂಕ ಭಟ್ಟನಂತೆ ಕಾಷಾಯವ ಧರಿಸಿ,
ದುಡಿದ ಧರ್ಮರಾಯ, ದೊರೆ ವಿರಾಟ!
ಕಾಲಕರ್ಮಗತಿಯ ಕಂಡು ಹಿಡಿವವರಾರು ?
ವಿಶ್ವದಾಭಿರಾಮ ಕೇಳು ವೇಮ.

ಧರ್ಮರಾಜ ಪಂಚಪಾಂಡವರಲ್ಲಿ ಹಿರಿಯ ಬಂಧು. ಕೌರವರಾಯ ಧರ್ಯೋಧನನೊಡನೆ ಜೂಜಾಡಿ, ಎಲ್ಲವನ್ನೂ ಸೋತು, ಕೊನೆಗೆಹದಿದಾಲ್ಕು ವರುಷ ವನವಾಸ ಮತ್ತು ಒಂದು ವರುಷದ ಅಜ್ಞಾತವಾಸದ ಶರ್ಯತ್ತಿಗೊಳಗಾಗಿದ್ದನು. ಅಜ್ಞಾತವಾಸದ ಕಾಲದಲ್ಲಿ ಗೊತ್ತುಹಿಡಿಯಲ್ಪಟ್ಟರೆ, ವನವಾಸ ಅವಧಿ ದ್ವಿಗುಣವಾಗುವದೆಂಬ ಕರಾರು ಬೇರೆ.

ಹದಿನಾಲ್ಕು ವರುಷ ವನವಾಸವನ್ನು ಉಪಭೋಗಿಸಿ ಉಳಿದೊಂದು ವರುಷದ ಅಜ್ಞಾತವಾಸಕ್ಕಾಗಿ ಪಾಂಡವರು ವಿರಾಟರಾಯನ ಆಶ್ರಯಕೋರಿ ಬಂದರು. ಅರ್ಜುನ ಬೃಹನ್ನಳೆಯ ಪಾತ್ರ ವಹಿಸಿದ, ಭೀಮ ಅಡುಗೆಯವನಾದ. ದ್ರೌಪದಿ ದಾಸಿಯಾದಳ. ನಕುಲ ಸಹದೇವರು ಗೋಪಾಲಕರಾದರು. ಧರ್ಮರಾಜನಾದರೋ ಕಾಷಾಯ ವಸ್ತ್ರ ಧರಿಸಿ ಕಂಕಭಟ್ಟನಾಗಿ ವಿರಾಟರಾಯನಲ್ಲಿ ಆಶ್ರಯ ಕೋರಿದನು. ಪಾಂಡವರು ಜೂಜಾಟದ ತಮ್ಮ ಕರ್ಮಫಲ ಅನುಭವಿಸಲೇಬೇಕಾಗಿತ್ತು. ಅವರಿಗೆ ಅಜ್ಞಾತರಾಗಿರಬೇಕಾದ

ಕಾಲವದು! ಯಾರಿಗೆ, ಯಾವಾಗ ಎಂಥ ಕಾಲ-ಕರ್ಮಗಳು ಕಾದಿವೆಯೋ ಯಾರಿಗೆ ಗೊತ್ತು? ಅವರವರ ಕರ್ಮಫಲಗಳು ಆಯಾಕಾಲಕ್ಕೆ ಅವರೇ ಭೋಗಿಸುವಂತೆ ವಿಧಿಯು ನಿಯಮಿಸುವದು ಮಾತ್ರ ಸತ್ಯವಾಗಿದೆ.

೯೪೦

ಕಟ್ಟೆಯಂದುನಿಪ್ಪ ಗಾನನಿಚಂದಮೀ, ತನುವುನಂದನಾತ್ಮ ತಗಿಲಿಯುಂಡು,
ಮರುಗುದೆಲಿಸಿ ಪಿದಪ ಮಾರ್ಕೊನವಲೆನಯಾ, ವಿಶ್ವದಾಭಿರಾಮ ವಿನುರ ವೇಮ.

ಕಟ್ಟಗೆಯಲ್ಲಿ ಬೆಂಕಿ ಕಾಣುವಂಥ ರೀತಿ
ತನುವಿನಲ್ಲಿ ಆತ್ಮ ತಗಲಿ ಉಂಟು.
ಗುಟ್ಟು ತಿಳಿದು ಬಳಿಕ ಕಂಡುಕೊಳ್ಳಬಹುದು.
ವಿಶ್ವದಾಭಿರಾಮ ಕೇಳು ನೇಮ.

ಕಟ್ಟಗೆಯಲ್ಲಿ ಬೆಂಕಿ ಅಡಗಿದೆಯೆಂದರೆ, ಎಲ್ಲರೂ ನಂಬುವದಿಲ್ಲ. ಆದರೆ ಅದು ಕಟು ಸತ್ಯ. ಆ ಬೆಂಕಿ ಕಟ್ಟಗೆಯಲ್ಲಿ ಹೇಗೆ ಮತ್ತು ಎಲ್ಲಿ ಉಂಟು? ಎಂದು ಕೇಳಿದರೆ, ಅದು ಕಟ್ಟಗೆಯಲ್ಲಿಯೇ ಉಂಟು, ಇಡೀ ಕಟ್ಟಗೆಯನ್ನು ವ್ಯಾಪಿಸಿ ಉಂಟು ಎಂದು ಹೇಳಬೇಕಾಗುತ್ತದೆ.

ಕಟ್ಟಗೆ-ಬೆಂಕಿಯ ಸಂಬಂಧವನ್ನು ದೇಹ-ಆತ್ಮ ಸಂಬಂಧಕ್ಕೆ ಹೋಲಿಕೆಯಾಗಿ ಹೇಳುತ್ತಾರೆ. ತನುವಿನಲ್ಲಿ ಆತ್ಮ ತಗಲಿಕೊಂಡು ಉಂಟು. ಆತ್ಮದ ಸ್ಥಾನವನ್ನು ಅಲಂಕಾರಿಕವಾಗಿ ಬಣ್ಣಿಸುತ್ತಾರೆ. ಧ್ಯಾನಕ್ಕೆ ಸಹಾಯಕವಾಗಲೆಂದು ಆತ್ಮನಿಗೆ ಪರಿಣಾಮವನ್ನೂ ಉಪನಿಷತ್ತುಗಳಲ್ಲಿ ಹೇಳಲಾಗಿದೆ. ಅಂಗುಷ್ಠ (ಹೆಬ್ಬೆರಳು) ಮಾತ್ರನಾದ ಆತ್ಮನು ಹೃದಯ-ಕಮಲದಲ್ಲಿ ವಾಸಿಸುತ್ತಾನೆ.

ತನುವಿನಲ್ಲಿರುವ ಆತ್ಮ, ಘಟದಲ್ಲಿರುವ ಆಕಾಶದಂತೆ, ಹೊರಗಿನ ಆಕಾಶ, ಘಟದೊಳಗಿನ ಆಕಾಶವೆಲ್ಲ ಒಂದೇ. ಘಟವು 'ಉಪಾದಿ' ಯಾಗಿ 'ಒಳಗಿನ' ಮತ್ತು 'ಹೊರಗಿನ' ಆಕಾಶವೆಂಬ ನಾವು ಬೇಧ ಉಂಟಾಗುವದು. ಮಠದಲ್ಲಿ ಗುರುಗಳು ಜೋಪಿಸುವಾಗ, ಘಟದೊಳಗಿನ ಆಕಾಶವು ಘಟಾಕಾಶ, ಮಠದೊಳಗಿನ ಆಕಾಶವು ಮಠಾಕಾಶ, ಎಲ್ಲೆಡೆಗೂವ್ಯಾಪಿಸಿದಂತೆ ಕಾಣುವಆಕಾಶ ಮಹಾದಾಕಾಶ,ಮನಸ್ಸಿನಲ್ಲಿಕಲ್ಪಿಸಬಹುದಾದ ಆಕಾಶ ಚಿದಾಕಾಶವೆಂದು ಆಕಾಶದ ವ್ಯಾಪ್ತಿಯನ್ನು ಕುರಿತು ಹೇಳುತ್ತಾರೆ. ಹೌದು. ಆಕಾಶ ಪಂಚಭೂತಗಳಲ್ಲಿ ಅತಿ ಸೂಕ್ಷ್ಮ ಭೂತ, ಆಕಾಶ ಸರ್ವತ್ರ ಇರುವದು. ನಮ್ಮ ಮನಸ್ಸಿಗೆ ಆತ್ಮದ ಸೂಕ್ಷ್ಮತೆಯನ್ನೂ, ಸರ್ವವ್ಯಾಪ್ತತೆಯನ್ನೂ ಹೋಲಿಕೆಯ ಮೂಲಕ ತಿಳಿಸಿಕೊಡಬೇಕಾದರೆ, ಅತಿ ಸವೀಪದ ಹೋಲಿಕೆಗಾಗಿ ಆಕಾಶವನ್ನು ಅರಿಸಿಕೊಳ್ಳಬಹುದು. ಆನಂತರ, ಜ್ಯೋತಿಯ ಆತ್ಮಕ್ಕೆ ಸರಿಯಾದ ಹೋಲಿಕೆಯೆನಿಸಿದೆ. ಹೀಗೆ ಮರ್ಮವರಿತು ಆತ್ಮನನ್ನು ಕಂಡುಕೊಳ್ಳಬೇಕು.

ಧರಗ್ರಹಮುಲು ರಾಶಿ ಜರಿಯಿಂಚು ಚುಂಡಿಯು,ಮಂಚಿಚೆಡುಗು ಗಾನುಪಿಂಚಾಚುಂಡ
ಬುರುಷಯತ್ನ ಮನುಚು ಬೊಂಗುದರೇಲಯಾ? ವಿಶ್ವದಾಭಿರಾಮ ವಿನುರ ವೇಮ.

ಗ್ರಹ-ಧರೆಗಳ ರಾಶಿ ಗಮನಗತಿಯೊಳಿರಲು,
ಕಾಣುತಿದ್ದು ಸುತ್ತೆ ಕೆಡಕು ಒಳಿತು,
ಪುರುಷಯತ್ನವೆಂದು, ಪಡುವ ಗರ್ವವೆಂತು?
ವಿಶ್ವದಾಭಿರಾಮ ಕೇಳು ವೇಮ.

ಭೂಮಿ ಸೂರ್ಯನ ಸುತ್ತು ತಿರುಗುತ್ತದೆ. ಭೂಮಿಯಿದ ಸಿಡಿದುಹೋದ ಚಂದ್ರ ಗ್ರಹ ಭೂಮಿಯ ಸುತ್ತು ತಿರುಗುತ್ತದೆ. ಭೂಮಿಯು ಸೂರ್ಯನ ಸುತ್ತಲೂ ಒಂದ ಸುತ್ತು ತಿರುಗಬೇಕಾದರೆ, ಒಂದು ಸಂವತ್ಸರ ಅಂದರೆ ವರ್ಷ ಕಾಲಾವಧಿ ಬೇಕು. ಚಂದ್ರನು ಪೃಥ್ವಿಯ ಸುತ್ತಲೂ ತಿರುಗಬೇಕಾದರೆ ಒಂದು ದಿನ ಬೇಕು. ಈ ತಿರುಗಾಟವು ಒಂದುನಿರ್ದಿಷ್ಟ ನಿಯತಿಗೊಳಪಟ್ಟು ನಡೆಯುತ್ತದೆ. ವರ್ಷದಲ್ಲಿ ಆರು ತಿಂಗಳುಕಾಲ ದಕ್ಷಿಣಾಭಿಮುಖವಾಗಿ ಕಾಣುವದರಿಂದ "ದಕ್ಷಿಣಾಯನ" ಎನ್ನುತ್ತಾರೆ. ಇನ್ನಾರು ತಿಂಗಳು "ಉತ್ತರಾಯಣ" ಎನ್ನುತ್ತಾರೆ. ಇವುಗಳ ಸಂಧಿಯೇ "ಸಂಕ್ರಾಂತಿ". ದಿನದಲ್ಲಿಯೂ ಅರ್ಧ ಕಾಲ ರಾತ್ರಿ, ಅರ್ಧಕಾಲ ಹಗಲು. ಇನ್ನು ಹದಿನೈದು ದಿನ ಚಂದ್ರ ಕಡಿಮೆಯಾಗುತ್ತ ಹೋದಂತೆ ಕಾಣುವದು. ಇದು ಕೃಷ್ಣಪಕ್ಷ. ಇನ್ನು ಹದಿನೈದು ದಿನ ವೃದ್ಧಿಗೊಳ್ಳುವನು. ಇದು ಶುಕ್ಲಪಕ್ಷ. ಇದು ಪೃಥ್ವಿ ಚಂದ್ರರ ಗಮನ ಕುರಿತು ಮಾತ್ರ. ಇದೇ ರೀತಿ ಮಂಗಳ, ಬುಧ ಇತ್ಯಾದಿ ಧರೆಗಳ ಮತ್ತು ಅವುಗಳ ಗ್ರಹಗಳ ಗತಿಯೂ ನಿಯಮಬದ್ಧವಾಗಿ ನಡೆಯುತ್ತಿದೆ. ಇದೆಲ್ಲ ಪರಸ್ಪರ ಆಕರ್ಷಣದಿಂದ ನಡೆದಿದೆಯೆನ್ನುತ್ತಾರೆ. ಆ ಆಕರ್ಷಣೆ ಉಂಟಾದುದೆಂತು? ಇದನ್ನು ನಿಯಂತ್ರಿಸುವ ಒಂದು ಶಕ್ತಿ ಇದೆ. ಅದೇ ಎಲ್ಲದರಲ್ಲಿಯೂ ಇದ್ದು ಅಂತರ್ಯಾಮಿಯಾಗಿದೆ.

ಮಾಡಿದ ಕೆಡಕು ಆಗಲಿ, ಒಳಿತು ಆಗಲಿ, ಪ್ರಜಾಪೋಷಣೆಯಾಗಲಿ, ಯುದ್ಧದಲ್ಲಿ ಸೈನ್ಯ-ಸಮೂಹದ ನಾಶವಾಗಲಿ,ಈ ರಾಜನಿಂದ ಆಯಿತು,ಆ ಸೇನಾಪತಿಯಿಂದ ಆಯಿತು ಎನ್ನುವದೆಲ್ಲ ತಪ್ಪು. ಸಾಕ್ಷಿಯಾಗಿರುವ ಆತ್ಮನೇ, ಕೆಡುಕು-ಒಳಿತುಗಳನ್ನು ನಮ್ಮ ಕರ್ಮ ಫಲಕ್ಕನುಸರಿಸಿ ಪಾಲು ಮಾಡಿ ಕೊಡುತ್ತಾನೆ. ಕರ್ಮವನ್ನು ಮಾಡುವದಕ್ಕೆ ಮಾತ್ರ ನಾವು ಸ್ವತಂತ್ರರು. ಫಲವು ವಿಧಿಯ ನಿಯಮದಂತೆ ಬರುವದಷ್ಟೇ.

೬೪

ಧರ್ಮಬುದ್ಧಿ ಜೇತ ದೈವಂಬು ದೆಲಿಸಿನ, ಗಾಲುಡೇಮಿಜೇಯಗಲಡು ಪ್ರಜಲ
ಧರ್ಮವಂಟಿ ವೆಂಟ ದೈವಂಬುಗಾನುಂಡು, ವಿಶ್ವದಾಭಿರಾಮ ವಿನು[illegible]ನು,

ಧರ್ಮ ಬುದ್ಧಿಯಿಂದ ದೈವವನು ತಿಳಿದರೆ,
ಯಮು ಪ್ರಜೆಗೆ ಕೊಡನು ಯಾತನೆಯನು
ಧರ್ಮಗೆಯ್ಮೆ ಹಿಂದೆ ದೈವ ಕಾಣರಲ್ಲ!
ವಿಶ್ವದಾಭಿರಾಮ ಕೇಳು ವೇಮ.

"ಧಾರಣಾತ್ ಧರ್ಮ ಇತ್ಯಾಹುಃ ಧರ್ಮೋಧಾರಯತಿ ಪ್ರಜಾನಾಮ್" ಒಂದು ಗೂಡಿಸಿ ಹಿಡಿಯುವುದಾದ್ದರಿಂದ ಧರ್ಮವೆನಿಸುತ್ತದೆ. ಜನತೆಯನ್ನು ಉದ್ಧರಿಸುವುದೇ ಧರ್ಮವಾಗಿದೆ. ಜನತೆಯನ್ನು ಒಗ್ಗೂಡಿಸುವ ಬುದ್ಧಿಯಿಂದ ದೈವವನ್ನು ತಿಳಿಯಬೇಕು. ಆಗ ಮೇಲು ಕೀಳು ಎಂಬ ಭಾವನೆ ಇರದು. ಭಿನ್ನ ಭಾವವೂ ಇರದು. ಎಲ್ಲರೂ ಒಂದು. ಹಾಗೆಂದರೇನು? ನಾವೆಲ್ಲ ಬೇರೆ ಬೇರೆಯಾಗಿ ಕಾಣುವದಿಲ್ಲವೇ? ಇಲ್ಲ, ಬೇರೆ ಬೇರೆಯಾಗಿ ಕಾಣುವದು ದೈವವಲ್ಲ. ಎಲ್ಲರಲ್ಲಿ ತಾನೇ ತಾನಾಗಿ ಇರುವ ಆತ್ಮವಿದೆ. ಎಲ್ಲರೂ ಒಂದೇ ಎನ್ನುವ ಭಾವನೆ ಬರುವದು, ಅದನ್ನು ತಿಳಿಯಲು ಪ್ರಯತ್ನಿಸಿದಾಗ, ಆಗ ಯೌವನ-ಮುಪ್ಪು ಎನ್ನುವ ಚಿಂತೆ ಇಲ್ಲ. ಜನನ ಮರಣ ಎಂಬುದೂ ಇಲ್ಲ. ಯಾರು ಯಾರನ್ನೂ ಕೊಲ್ಲಲದಿಲ್ಲ. ಹಿಂಸಿಸುವದಿಲ್ಲ. ಯಮನು ಪ್ರಜೆಗೆ ಯಾತನೆ ಕೊಡಲಾರನು.

ಧರ್ಮ ಕಾರ್ಯವೇ ದೇವರ ಕಾರ್ಯ. ಜನರನ್ನು ಹಿಡಿದು ಒಂದಾಗಿ ನಿಲ್ಲಿಸುವ ಕಾರ್ಯವೇ ದೈವದ ಕಾರ್ಯವೆಂದು ಜನರು ತಿಳಿದರೆ ತೀರಿತು. ಏಷಮತೆ, ದ್ವೇಷ-ಮತ್ಸರಗಳು ಅಳಿಯುವವು. "ಧರ್ಮೋ ರಕ್ಷತಿ ರಕ್ಷಿತಃ" ಧರ್ಮವನ್ನು ಯಾರು ರಕ್ಷಿಸುವರೋ ಅವರನ್ನು ಧರ್ಮವೂ ರಕ್ಷಿಸುತ್ತದೆ.

೬೫

ವೆಂಡಿಕೊಂಡ ಪಸಿಡಿಕೊಂಡ ಯುದನಕೊಂಡ, ದೇವುದೆಲಪೋಯಿ ತಿರಿಗೆಮೆತ್ತ,
ದೈವಬಲಮುಕಾನಿ ತನಬಲ್ಮಿಕಾದಯಾ, ವಿಶ್ವದಾಭಿರಾಮ ವಿನುರ ವೇಮ.

ಬೆಳ್ಳಿ ಬೆಟ್ಟ ಹೊನ್ನಬೆಟ್ಟ ಹೊಂದಿ ಇರಲು,
ದೇವನೇಕೆ ಹೋದ, ತಿರಿದುಕೊಳಲು?
ದೈವ ಬಲವದಷ್ಟೆ; ತನ್ನ ಬಲವದಲ್ಲ,
ವಿಶ್ವದಾಭಿರಾಮ ಕೇಳು ವೇಮ

ಪುರಾಣಗಳಲ್ಲಿ ಶಿವನು ಕನಕ ಪರ್ವತದಲ್ಲಿ ವಾಸವಾಗಿದ್ದನೆಂದೂ, ರಜತಾದ್ರಿಯನ್ನು ಹೊಂದಿದ್ದನೆಂದೂ ಬಣ್ಣಿಸಿದ್ದುಂಟು. ಅವೇ ಪುರಾಣಗಳು ಶಿವನನ್ನು ಭಿಕ್ಷೆ ಬೇಡಿ ತಿರಿದುಣ್ಣುವಂತೆ ಚಿತ್ರಿಸುತ್ತವೆ. ಇದೆಲ್ಲ ಹೀಗೇಕೆ? ಚಿನ್ನ ಹೊನ್ನುಗಳ ಬೆಟ್ಟಗಳನ್ನೇ ಹೊಂದಿರುವವರಿಗೆ ತಿರಿದುಣ್ಣುವ ಗತಿಯೇಕೆ? ಪುರಾಣದ ಕಥೆಗಳಿಂದ ಕೆಲವು ಮರ್ಮಗಳನ್ನು ತಿಳಿದುಕೊಳ್ಳಬಹುದು.ಯಾವನೊಬ್ಬನು ಎಂಥ ಸಂಪತ್ತಿನ ಒಡೆಯನಾಗಿದ್ದರೂ ಅದನ್ನು

ಉಪಭೋಗಿಸುವ ಭಾಗ್ಯ ಅವನದೇ ಆಗಿರುವದೆಂಬ ಭರವಸೆಯಿಲ್ಲ. ನೂರಾರು ಎಕರೆ ಭತ್ತದ ಗದ್ದೆಯುಳ್ಳವನಿಗೆ ಮಧುಮೇಹ ಇಲ್ಲವೆ ಸಿಹಿ ಮೂತ್ರ ರೋಗ ಅಂಟಿರಬಹುದು. ಬಣ್ಣ ಬಣ್ಣದ ಒಡವೆ-ವಸ್ತುಗಳಿಗೆ ಒಡತಿಯಾದವಳು ಕುರುಡಿಯಾಗಿರಬಹುದು.

ನಮ್ಮ ಕರ್ಮಫಲ ನಮಗುಂಟು. ನಾವೇನೋ ಮಾಡಿಬಿಡುತ್ತೇವೆ. ಮಾಡಿದ ಕರ್ಮಫಲ ನಮಗೆ ಬರುವಂತೆ ವಿಧಿ ಪಾಲುಮಾಡುವದು. ಕನಕ ಪರ್ವತವಿದ್ದವನಿಗೆ ಭಿಕ್ಷೆ ಬೇಡುವ ಪ್ರಸಂಗ ಬರುವದು, ವಿಧಿ ನಿಯಮದಂತೆ. ಬಲ ಎಂದರೆ ಹೊರಗಿನ ಶಕ್ತಿ. ಹೊರಗಿನ ಯಾವದಾದರೊಂದು ಶಕ್ತಿ ನಮ್ಮ ಮೇಲೆ ಪ್ರಭಾವ ಬೀರುವದಿದ್ದರೆ, ಅದುವೇ ದೈವಬಲ. ತನ್ನ "ಬಲ" ವೆಂಬುವದಿಲ್ಲ.

೯೪೪

ಹಂಸಮಾನನೋದ ಮಂಟಕ ತಿರಿಗಿನ, ಯಟು ಕರ್ಮ ಚಯಮು ನಂಟಕುಂಡ,
ಯೋಗಿ ತಿರುಗು ಸಕಲ ಭೋಗಂಬು ತೋಡನು,ವಿಶ್ವದಾಭಿರಾಮ ವಿನುರ ವೇಮ.

ಹಂಸ ಮಾನಸ ಜಲ ಹತ್ತದಂತೆಚಲನೆ,
ಅಂತೆ ಕರ್ಮವೆಲ್ಲ ಅಂಟಿದಂತೆ,
ಯೋಗಿ ನಡೆವ, ಸಕಲ ಭೋಗವೆದುರಿಗಿರಲು.
ವಿಶ್ವದಾಭಿರಾಮ ಕೇಳು ವೇನು.

"ಗುಬ್ಬ ಬಂದು ಕಾಳು ಹೆಕ್ಕಿಕೊಂಡು ಹೋದಂತೆ, ಸಂಸಾರದಲ್ಲಿ ಇರಬೇಕೆಂದು ಹೇಳುತ್ತಾರೆ. ಸಂಸಾರದ ಜಂಜಾಟ ಅಂಟದಂತೆ ಜೀವಿಸಬೇಕು ಎಂದು ಯೋಗಿಗಳು ಹೇಳುತ್ತಾರೆ. ಹಾಗೆಂದರೇನು? ತಮ್ಮ ಹೇಳಿಕೆಯ ಭಾವವನ್ನು ಉಪಮೆಯೊಂದರ ಮೂಲಕ ಅವರು ತಿಳಿಸುತ್ತಾರೆ. ಅದು ಹೀಗೆ; ಹಂಸವೆಂಬ ಪಕ್ಷಿ, (ಈಗ ಇದರ ತಳಿ ಅಷ್ಟೊಂದು ಕಾಣಸಿಗದಿದ್ದರೂ ಮೊದಲು ಇದೊಂದು ಸಾಮಾನ್ಯವಾಗಿ ಕಾಣಬರುವ ಪಕ್ಷಿ) ನೀರಿನಲ್ಲಿ ನಡೆದು ಹೋಗುತ್ತದೆ ಆಗ ಅದು ತನ್ನ ಮೆಯ್ಗೆ ನೀರು ಹತ್ತದಂತೆ ಎಚ್ಚರ ವಹಿಸುತ್ತದೆ. ಅದು ತನ್ನ ಕಾಲಿನ ಚಲನೆಯಿಂದ, ಹವೆ ಹೀರಿಕೊಳ್ಳುವದರಿಂದ ತನ್ನನ್ನು ಬೇಕಾದಷ್ಟು ಮಾತ್ರ ಹಗುರು ಮಾಡಿಕೊಂಡು ಈ ರೀತಿ ನಡೆಯಲು ಶಕ್ತವಾಗಬಹುದು.ಇದನ್ನೇ ಇನ್ನೂ ಹೆಚ್ಚು ಅಲಂಕಾರಿಕ ಭಾಷೆಯಲ್ಲಿ ತಿಳಿಯುವದಾದರೆ,ಮನಸ್ಸು ಜಲದಂತೆ ಎಂದು ತಿಳಿಯಿರಿ. ಜೀವಾತ್ಮನು ಅದರಲ್ಲಿ ಚಲಿಸುವ ಹಂಸದಂತೆ. ಜೀವಾತ್ಮನು ಮನಸ್ಸಿನಲ್ಲಿ ಇರುಂತೆ ಕಂಡರೂ, ಅವನು ಮನಸ್ಸಿಗೆ ಅಂಟದಂತೆ ಇರುವನು. ಇದೇ ರೀತಿ, ಯೋಗಿಯ ಗತಿ. ಅವನು ನಿತ್ಯವೂ ಕರ್ಮ ಮಾಡುತ್ತಿದ್ದರೂ ಕರ್ಮ-ಸಂಬಂಧವು ತನಗೆ ಹತ್ತದಂತೆ ಎಚ್ಚರವಹಿಸುತ್ತಾನೆ. ಯೋಗಿಯ ಎದುರು ಸಕಲ ಭೋಗ ಭಾಗ್ಯಗಳುಂಟು. ಅಣಿಮಾದಿ ಸಿದ್ಧಿಯನ್ನು ಹೊಂದಿದ ಯೋಗಿ ಎಲ್ಲವನ್ನೂ ಪಡೆದು ಭೋಗಿಸಬಲ್ಲ. ಆದರೆ ಅವನು ಈ ಅವಸ್ಥೆಯಲ್ಲಿ ಸುಖಸಂಗ ಹೊಂದ-ಬಯಸುವದಿಲ್ಲ. ಹಂಸ ನೀರಿಗೆ ಹತ್ತದೆ ಚಲಿಸುವಂತೆ ಮುಂದೆ ಸಾಗುತ್ತಾನೆ. ಯಾವ ಕರ್ಮ ಮಾಡಿದ ಫಲದಾಸೆ ಹೊಂದುವದಿಲ್ಲ. ನಿಷ್ಕಾಮಕರ್ಮಿಯಾಗಿ ಸಾಗುತ್ತಾನೆ.

ತನುವನದಗು ನಿಂಟ ದಗಶತ್ರುಮಿತ್ರುಲ, ದೆಲಿಯಲೇನಿವಾನಿ ತೆಲಿವದೇಲ ?
ಕೆಲಿಸಿ ಚಕ್ಕ ಬರುಪ ದಿವ್ಯಾಮೃತಂಬದೇ, ವಿಶ್ವದಾಭಿರಾಮ ವಿನುರ ವೇಮ.

ತನುವು ತನ್ನ ಮನೆಯು, ತತ್ಪಶತ್ರು ಮಿತ್ರ
ತಿಳಿಯಲಾರದವನ ತಿಳಿವದೇಕೆ ?
ತಿಳಿದು ಸರಿಗೊಳಿಪುದೆ, ದಿವ್ಯಾಮೃತ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಯಾವನಿಗೆ ದೇಹವೇ ಒಂದು ಆಲಯದಂತೆ, ಇರುವುದೋ ಅವನಾರು? ಅವನೇ ಆತ್ಮ, ಅಂಥ ಆತ್ಮನಿಗೆ ಮನೆಯಂತಿರುವ ತನುವಿನಲ್ಲಿ ಶತ್ರು ಯಾರು? ಮಿತ್ರನಾರು.? ಎಂಬುದನ್ನು ತಿಳಿಯಬೇಕು. ತಮಗೆ ಕೇಡು ಬಗೆಯುವ ಶತ್ರು ಯಾವದೋ ಮತ್ತು ಒಳಿತು ಬಗೆಯುವ ಮಿತ್ರ ಯಾವದೋ ತಿಳಿಯಲಾರದವರ ತಿಳಿವಿನಿಂದ ಯಾವ ಪ್ರಯೋಜನವಿದ್ದೀತು ?

ತನುವಿನಲ್ಲಿ ಶತ್ರು-ಮಿತ್ರರಾರು? "ಮನಸ್ಸಿನಿಂದಲೇ ತನ್ನನ್ನು ಉದ್ಧಾರ ಮಾಡಿಕೊಳ್ಳಬೇಕು, ತನ್ನನ್ನು ಕುಗ್ಗಿಸಿಕೊಳ್ಳಬಾರದು; ಏಕೆಂದರೆ ಮನಸ್ಸೇ ನಮ್ಮ ಬಂಧು, ಮನಸ್ಸೇ ನಮ್ಮ ಶತ್ರು."

"ಯಾವ ಆತ್ಮನಿಂದ ತನ್ನ ಮನಸ್ಸೇ ಜಯಿಸಲ್ಪಟ್ಟಿದೆಯೋ, ಅಂತಹ ಆತ್ಮನಿಗೆ ಮನಸ್ಸು ಬಂಧುವಾಗಿರುತ್ತದೆ; ಆದರೆ ಅಜಿತೇಂದ್ರಿಯನಿಗೆ ತನ್ನ ಮನಸ್ಸೇ ಶತ್ರುವಿನಂತೆ, ದ್ವೇಷಭಾವದಲ್ಲಿಯೇ ಇರುತ್ತದೆ." (—ಭಗವದ್ಗೀತಾ ೬—೫,೬.)

ಮನಸ್ಸು ಚಂಚಲವಾದದ್ದು; ಕ್ಷೋಭೆಯುಂಟುಮಾಡುವಂಥದು. ಅದರ ನಿಗ್ರಹವು ವಾಯುವಿನ ನಿಗ್ರಹದಂತೆ ಅತ್ಯಂತ ಕಷ್ಟಕರವಾದುದು. ಯಾವನು ಮನಸ್ಸನ್ನು ಸರಿಗೊಳಿಸಲಾರನೋ, ಯಾವನು ಪರಿಶುದ್ಧ ಮನಸ್ಸು ಹೊಂದಲಾರನೋ ಅವನು ಯೋಗಿಯಾಗಲಾರ. ಯೋಗ ಹೊಂದದೆ,ಜೀವಾತ್ಮ-ಪರಮಾತ್ಮ ಒಂದಾಗದಷ್ಟೇ. ಎಲ್ಲಿಯವರೆಗೆ ಯೋಗವಿಲ್ಲವೋ, ಅಲ್ಲಿಯವರೆಗೆ ಜನನ-ಮರಣ ಉಂಟು. ಯೋಗಿಯಾದ ಮೇಲೆ ಅಮೃತತ್ವ ಲಭ್ಯವಾಗುವುದು. ದಿವ್ಯ ಅಮೃತತ್ವ ಪಡೆಯಬೇಕಾದರೆ, ಮನಸ್ಸು ಸರಿಗೊಳ್ಳಲೇಬೇಕು

೯೪೬

ಅವುದನ್ನು ಬಿತಿಕಿ ಯಾಪಾಲಗಾಚಿನ, ಬೇರಿಪೆರುಗು ಚಲ್ಲ ಪೇಗ್ಲು ಗಲುಗು,
ಧವಿಲಿಲೋನಗಲ್ಲು ನವನೀತ ಮಟ್ಟುಲಾ, ವಿಶ್ವದಾಭಿರಾಮ ವಿನುರ ವೇಮ.

ಹಸು ಕೆಚ್ಚಲು ಹಿಂಡಿ ಹಾಲು ಕಾಯಿಸಿಟ್ಟು,
ಹೆಪ್ಪುಗಟ್ಟ ಮೊಸರು, ಹೆಸರು ಬಂತು.
ನವನೀತವಿಪ್ಪಂತೆ, ನಮ್ಮೊಳುಂಟು ಪರವು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮವು ಜಗತ್ಕಾರಣವಾದುದೋ ಇಲ್ಲವೋ ? ಜಗತ್ಕಾರಣವೆಂದಾದರೆ ಅದೆಂತು ? ಈ ಬಗ್ಗೆ ಹಾಲಿನ ಪರಿಣಾಮವನ್ನು ಉದಹರಿಸುವುದು ವಾಡಿಕೆ. ಇದಲ್ಲದೆ, ಆತ್ಮನು ದೇಹದಲ್ಲಿರುವುದನ್ನು, ಹಾಲಿನಲ್ಲಿ ಬೆಣ್ಣೆ ಇರುವಂತೆ ಎಂದು ಹೋಲಿಸಿ ಹೇಳುವರು. ಹಸು ನೀರು ಸೇವಿಸುತ್ತದೆ. ಹುಲ್ಲು ವೇವು ಸೇವಿಸುತ್ತದೆ. ಅದರ ಪ್ರಾಣಕ್ರಿಯೆಯಿಂದಾಗಲಿ ಹುಲ್ಲು–ನೀರು, ಹಾಲಾಗಿ ಅದರ ಕೆಚ್ಚಲಿನಲ್ಲಿ ಸಂಗ್ರಹವಾಗುವುದು. ಕೆಚ್ಚಲು ತಟ್ಟಿ, ಮೊಲೆ ಹಿಂಡಿದರೆ, ಹಸು ಹಾಲು ಕರೆಯುವುದ, ಹಾಲನ್ನು ಸ್ವಲ್ಪಕಾಲ ಕಾಯಿಸಿಟು ಹೆಪ್ಪುಗಟ್ಟಲು ಬಿಟ್ಟರೆ ತೀರಿತು ! ಹಾಲುತಾನೇ ಮೊಸರಾಗಿ ಬಿಡುವುದು. ಈ ಮೊಸರನ್ನು ಕಡೆದರೆ ಬೆಣ್ಣೆ-ಮಜ್ಜಿಗೆ ಉಂಟಾಗುತ್ತವೆ. ಬೆಣ್ಣೆ ಹಾಲಿನಿಂದ ತೆಗೆದ ಸತ್ತ್ವಯುತ ಅಂಶ, ಹಾಲಿನಲ್ಲಿ ಬೆಣ್ಣೆಯುಂಟು ಎಂದರೆ ನಂಬಲಾರೆವು. ಆದರೆ ಬೆಣ್ಣೆ ಇರುವುದೇ ಹಾಲಿನಲ್ಲಿ. ಅದೇ ರೀತಿ, ಶರೀರದಲ್ಲಿ ಆತ್ಮವುಂಟು, ಎಂದರೆ ನಂಬುವುದಿಲ್ಲ. ಆತ್ಮನನ್ನು ಶೋಧಿಸಬೇಕಾದ ತಾಣನೇ ನಮ್ಮ ಹೃದಯಾಂತರಾಳದಲ್ಲಿ, ಎಂದು ಯೋಗಿ ಹೇಳುತ್ತಾನೆ. ಪರವು ನಮ್ಮೊಳಗೆ ಉಂಟು. ಹಾಲಿನಲ್ಲಿಯ ಬೆಣ್ಣೆಯನ್ನು ಕಾಣಬೇಕಾದರೆ, ವಿವಿಧ ಹಂತಗಳಿಂದ ಬೆಣ್ಣೆಯನ್ನು ಬೆರ್ಪಡಿಸಬೇಕಾಯಿತು. ಅದೇ ರೀತಿ, ದೇಹದಲ್ಲಿ ಆತ್ಮವನ್ನು ಗುರುತಿಸಬೇಕಾದರೆ, ಸಾಧನದಿಂದ, ನಶ್ವರವಾದುದನ್ನೂ, ನಿತ್ಯವಾದುದನ್ನೂ ಬೇರ್ಪಡಿಸಿ ಕಂಡುಕೊಳ್ಳಬೇಕು.

೯೪೭

ಪ್ರಣವ ಮೆರುಗನತಡು ಭಕ್ತುಂಡು ಕಾಡಯಾ, ಜ್ಯೋತಿ ಜೂಡನತಡು ಜೋಗಿಕಾಡು,
ನಿತ್ಯಮೆರುಗನತಡು ನಿರ್ವಾಣಿಕಾಡಯಾ, ವಿಶ್ವದಾಭಿರಾಮ ವಿನುರ ವೇಮ

ಪ್ರಣವನರಿಯದನಕ ಭಕ್ತನಾಗಲಾರ.
ಜ್ಯೋತಿ ಕಾಣದನಕ ಜೋಗಿಯಲ್ಲ-
ನಿತ್ಯವರಿಯದನಕ ನಿರ್ವಾಣಿಯು ಅಲ್ಲ.
ವಿಶ್ವದಾಭಿರಾಮ ಕೇಳು ವೇಮ.

'ಓಂ' ಇದು ಹೃದಯ ಗುಹೆಯಲ್ಲಿಯೇ ಇರುವದು. ಯಾವುದು ಚಲಿಸುವುದೊ, ಪ್ರಾಣ-ಯುಕ್ತವಾಗಿದೆಯೋ ಮತ್ತು ಸುಪ್ತವಾಗಿದೆಯೋ ಅದೆಲ್ಲ ಓಂಕಾರದಲ್ಲಿದೆ. ಇದು ಅಕ್ಷರ. ಕ್ಷರ ಎಂದರೆ ನಾಶ ವಿಕಾರವುಳ್ಳದ್ದು. ಈ ಜಗತ್ತು ಕ್ಷರವಾದುದು.

ಕ್ಷರವಾದುದಕ್ಕೆ ಸಾಕ್ಷಿಯಾಗಿರುವವನೇ ಅಕ್ಷರ. ಪ್ರಾಣವು ಅಕ್ಷರವಾಗಿದೆ. ಅದರಿಂದ 'ಓಂ' ಪ್ರಣವವೆನಿಸಿದೆ.

ಭಕ್ತಿಯುಳ್ಳವನೇ ಭಕ್ತ. ಭಕ್ತಿ ಎಂದರೇನು ? ಇಂದ್ರಿಯಗಳಿಗೆ ಯಾವುದು ವಿಷಯವೋ ಅದರ ಆಕರ್ಷಣೆ ಕಾಮ. ಕಾಮವಿರುವಾಗಿನ ಮನಸ್ಸಿನ ಸ್ಥಿತಿ ಆಸಕ್ತಿ. ಇಂದ್ರಿಯಗಳಿಗೆ ವಿಷಯವಲ್ಲದುದರ ಆಕರ್ಷಣೆ ಪ್ರೇಮ. ಪ್ರೇಮವಿರುವಾಗಿನ ಮನಸ್ಸಿನ ಸ್ಥಿತಿ ಭಕ್ತಿ. ಇಂದ್ರಿಯಗಳಿಗೆ ಅ-ವಿಷಯವದಾವುದು, ಅಕ್ಷರವೆ ಆಗಿದೆ. ಅದೇ ಓಂ; ಪ್ರಣವ; ಬ್ರಹ್ಮ. ಪ್ರಣವವನ್ನರಿಯದವನು ಭಕ್ತನಾಗಲಾರ.

ಜ್ಯೋತಿ ಎಂದರೆ ಯಾವುದು ? " ಹಿರಣ್ಮಯವೂ ಶ್ರೇಷ್ಠವೂ ಆದ ಕೋಶದಲ್ಲಿ ಕಲ್ಮಶವಿಲ್ಲದ, ಕಲೆಯಿಲ್ಲದ ಬ್ರಹ್ಮವು ಇರುವದು. ಅದು ಶುದ್ಧವು, ಜ್ಯೋತಿಗಳಿಗೆಲ್ಲ ಜ್ಯೋತಿಯು; ಆ ಬ್ರಹ್ಮವನ್ನು ಆತ್ಮವಿದರು ತಿಳಿದಿರುತ್ತಾರೆ." " ಅಲ್ಲಿ ಸೂರ್ಯನಾಗಲಿ, ಚಂದ್ರನಾಗಲಿ ನಕ್ಷತ್ರಗಳಾಗಲಿ ಪ್ರಕಾಶಿಸುವುದಿಲ್ಲ. ಈ ಮಿಂಚುಗಳೂ ಪ್ರಕಾಶಿಸುವುದಿಲ್ಲ. (ಅಂದ ಮೇಲೆ) ಈ ಅಗ್ನಿಯು ಪ್ರಕಾಶಿಸುವದೆಲ್ಲಿ ? ಪ್ರಕಾಶಿಸುತ್ತಿರುವ ಅವನನ್ನೇ ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತಿರುವವು. ಅವನ ಪ್ರಕಾಶದಿಂದಲೇ ಇದೆಲ್ಲವೂ ಪ್ರಕಾಶಿಸುತ್ತಿರುವದು. " (–ಮುಂಡಕ ಉಪ. ೨-೨-೧೦,೧೧) ಇಂಥ ಜ್ಯೋತಿಯನ್ನು ಕಂಡವನೇ ಯೋಗಿ–ಜೋಗಿ; ಕಾಣದವನಲ್ಲ.

ಯಾವದು ನಿತ್ಯವಾದುದು ? 'ಸತ್' ತಾನೇ. ಅದೇ ಆತ್ಮ. ಆತ್ಮವರಿಯದವನು ನಿರ್ವಾಣ ಹೊಂದಲಾರನು. ನಿಶ್ಚಿಂತನಾಗನು. ನಿರ್ವಾಣಿಯಾಗಲಾರನು.

೯೪೮

ಗುರುವು ಶಿಷ್ಯುಡನುಗ ಗೊನಲೆಟ್ಟು ಮೊದಲೆಟ್ಟು, ಗುರುವು ಶಿಷ್ಯುಡನೆಡಿ, ಗುರುತುಲೆಟ್ಲು,
ಗುರುನ ಕುಂಡದಗಿನ ಪರುವು ಲೇಕುಂಡಿನ, ವಿಶ್ವದಾಭಿರಾಮ ವಿನುರ ವೇಮ.

ಗುರುವು-ಶಿಷ್ಯರೆನಲು, ಕೊನೆಯು ಮೊದಲು ಎಂತು ?
ಗುರುವು–ಶಿಷ್ಯರೆಂಬ ಗುರುತು ಎಂತು ?
ಗುರುವಿಗಿಪ್ಪ ತಕ್ಕ ಗೌರವವಿರದಿರಲು
ವಿಶ್ವದಾಭಿರಾಮ ಕೇಳು ವೇಮ.

ಬೀಜವು ಮೊದಲೋ, ? ವೃಕ್ಷವು ಮೊದಲೋ ? ಎಂಬ ಪ್ರಶ್ನೆಯು ಒಡೆಯಲಾರದ ಒಗಟು. ಅದೇ ರೀತಿ ಮೊದಲು ಹುಟ್ಟಿದವರು ಗುರುವರ್ಗವೋ ? ಇಲ್ಲವೆ ಹುಟ್ಟಿದ ಶಿಷ್ಯವರ್ಗದಿಂದ ಗುರುವರ್ಗ ನಿರ್ಮಾಣವಾಯಿತೋ ? ಈ ಹುಚ್ಚು ಪ್ರಶ್ನೆ ಏಳುವದು, ಗುರುವರ್ಗದ ತಪ್ಪು ಕಲ್ಪನೆಯಿಂದ ಮಾತ್ರ. ಕೆಲವರು ಹೇಳುತ್ತಾರೆ.

ನಮ್ಮ ಅಜ್ಜ ನಿಮ್ಮ ಅಜ್ಜನ ಗುರುವಾಗಿದ್ದ' ನನ್ನ ತಂದೆ, ನಿನ್ನ ತಂದೆಯ ಗುರುವಾಗಿದ್ದ. ಅದರಿಂದ ನಾನು ನಿನಗೆ ಗುರುವಾಗಿದ್ದೇನೆ. ಗುರುತ್ವವನ್ನು ತ್ರೈರಾಶಿಕದಿಂದ ಲೆಕ್ಕ ಹಾಕುವ ವರ್ಗವಿದು.

ಆದರೆ ಗುರು-ಶಿಷ್ಯರು ಬೀಜ-ವೃಕ್ಷದಂತೆ. ಒಬ್ಬ ಗುರು ಇನ್ನೊಬ್ಬ ಶಿಷ್ಯನಿಗೆ ಮಾರ್ಗದರ್ಶನ ಮಾಡುತ್ತಾನೆ. ಅಗಸಗಿತ್ತಿಯ ಮಗ ನಾರದ ಸನತ್ಕುಮಾರನ ಬಳಿ ಶಿಷ್ಯತ್ವ ವಹಿಸಿ, ತಾನೇ ದೇವರ್ಷಿಯಾಗಿ ಮೆರೆದ. ಭ್ರಮರ ಕೀಟಕ್ಕೆ ತನ್ನ ರೂಪು ಕೊಡುವಂತೆ ಗುರು ಶಿಷ್ಯನನ್ನು ಗುರುವಾಗಿ ಮಾರ್ಪಡಿಸುತ್ತಾನೆ. ಈ ಕ್ರಮ ಹಾಗೇ ಮುಂದುವರಿಯುತ್ತದೆ.

ಗುರುವಿನ ಮಗ ಗುರುವಾಗುವನೆಂದೂ ಶಿಷ್ಯನ ಮಗ ಶಿಷ್ಯನಾಗುವನೆಂದೂ ಹೇಳುವದು ಮೂರ್ಖರ ವಾದ. ಕೆಲವೊಂದು ಜಾತಿಯವರು ತಾವೇ ಅಜ್ಞಾನದಲ್ಲಿದ್ದರೂ, ತಾವು ಸರ್ವಜ್ಞರೆಂದು ಭಾವಿಸುವರು. ಇಷ್ಟಕ್ಕೆ ತೃಪ್ತರಾಗದೆ ಉಳಿದವರನ್ನೂ ತಮ್ಮ ಹೆಗಲಮೇಲೆ ಒಯ್ಯಲು ಪ್ರಯತ್ನಿಸುವರು. ಕುರುಡರು ಕುರುಡರಿಗೆ ಮಾರ್ಗದರ್ಶಕರಾಗಿ ಹಳ್ಳಕ್ಕೆ ಬೀಳುವರು. ಭಿಕ್ಷುಕನೊಬ್ಬ ಕೋಟಿ ರೂಪಾಯಿ ದಾನ ಮಾಡಬಯಸಿದಂತೆ ಈ ಜನ ತಾವು ಗುರುವೆಂದು ಬೋಧೆಗಿಳಿಯುವುದು! ಗುರುವಿಗೆ ಶಾಸ್ತ್ರ ರಹಸ್ಯ ಗೊತ್ತಿರಬೇಕು. ಅವನು ಪಾಪದೂರನಾಗಿರಬೇಕು. ಹೆಸರು-ಕೀರ್ತಿಯ ಆಸೆ ಅವನಿಗಿರಬಾರದು. ನಮ್ಮ ಧಾರ್ಮಿಕ ಕಣ್ಣು ತೆರೆಯುವಂತೆ ಮಾಡುವವನೇ ಗುರು. ಅಂಥ ಗೌರವಕ್ಕೆ ಅರ್ಹನಾದವನಿಂದ ಮಾತ್ರ ಮಾರ್ಗದರ್ಶನ ಪಡೆಯಬೇಕು. ಶಿಷ್ಯನಲ್ಲಿಯೂ ಕೆಲ ಲಕ್ಷಣಗಳಿರಬೇಕು. ಶುದ್ಧ ಮನಸ್ಸು, ನಿಜವಾದ ಜ್ಞಾನಾಕಾಂಕ್ಷೆ ಮತ್ತು ಸತತ ಪ್ರಯತ್ನ, ಇವು ಮುಖ್ಯ.

೯೪೯

ತ್ರಾಡುಮೆಡನುವೇಸಿ ತನಕು ಶೂದ್ರತ್ವಂಬು, ಪೋಯೆನನೆಡಿದೆಲ್ಲ ಬುದ್ಧಿ ಲೇಮಿ,
ಮದಿನಿಲುಪಕತ್ರಾಡು ವರಿವನ್ನೆದೆಚ್ಚುನಾ ? ವಿಶ್ವದಾಭಿರಾಮ ವಿನುರ ವೇಮು.

ದಾರಿ ಕೊರಳ ಸುತ್ತಿ ತನ್ನ ಶೂದ್ರತ್ವವು
ಬಿಟ್ಟಿತೆಂಬುದೆಲ್ಲ ಬುದ್ಧಿಗೇಡು.
ಮನವ ವಿಲಿಸದಿರಲು, ನೆರುಗು ತರುವುದೆಂತು ?
ವಿಶ್ವದಾಭಿರಾಮ ಕೇಳು ವೇಮ

ವೇದಗಳ ಪ್ರಾರಂಭಕಾಲದಲ್ಲಿ ವರ್ಣಗಳೇ ಇರಲಿಲ್ಲ ಅನಂತರ ಗುಣ-ಕರ್ಮಗಳ ಮೇಲಿಂದ ನಾಲ್ಕು ವರ್ಣಗಳು ನಿರ್ಮಾಣವಾದವು. ಮಾದಿಗ ವಶಿಷ್ಠ ಬ್ರಾಹ್ಮಣನಾದ. ಕ್ಷತ್ರಿಯ ವಿಶ್ವಾಮಿತ್ರ ಬ್ರಹ್ಮರ್ಷಿಯಾದ. ಹೀಗೆ ಕ್ಷೌರಿಕರೂ, ಕರ್ಮಾರರೂ, ಬಡಿಗರೂ,

ವೇಶ್ಯಾಪುತ್ರರೂ ತಮ್ಮ ಸಜ್ಜನಿಕೆಯಿಂದ ಯೋಗ್ಯ ಗುರುವನ್ನಾಶ್ರಯಿಸಿ ಮಾರ್ಗದರ್ಶನ ಪಡೆದು ಬ್ರಾಹ್ಮಣರಾದರು. ವೈದಿಕ ಧರ್ಮದ ಆದರ್ಶ ಪುರುಷನೇ ಬ್ರಾಹ್ಮಣ.

ಬರಬರುತ್ತ ಸ್ವಾರ್ಥಪರತೆ ಬೆಳೆಯಿತು. ಗುಣದಿಂದ ವರ್ಣ ನಿಶ್ಚಯಿಸುವ ಬದಲು ಜನ್ಮದಿಂದ ವರ್ಣ ಗಣಿಸಲ್ಪಡಹತ್ತಿತು. ಯಾವನೋ ಒಬ್ಬ ಧಾರ್ಮಿಕ ಗುರುವಿನ ವಂಶ ಜನು 'ಹರಾಮಖೋರ' ನಾಗಿದ್ದರೂ ತಾನೇ ಗುರು ಎಂದುಕೊಳ್ಳತೊಡಗಿದ. 'ಬ್ರಾಹ್ಮಣ' ಎಂದು ಘೋಷಿಸಿಕೊಂಡ. ಬ್ರಾಹ್ಮಣ ಎನ್ನುವದು ಜಾತಿ ಸೂಚಕವಾಯಿತು. ಇದನ್ನು 'ಕಾಯಂ'ಗೊಳಿಸಲು ಬಾಹ್ಯ ಸಂಸ್ಕಾರದ ಕ್ರಮ ಹುಡುಕಲಾಯಿತು.

ಉಪನಯನವೆಂಬ ಸಂಸ್ಕಾರ ಎಲ್ಲರಿಗೂ ಗೊತ್ತು. ವೈದಿಕ ಸಂಪ್ರದಾಯದ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರೆಂಬ ಮೂರು ವರ್ಣಗಳ ಜನರು ಹುಟ್ಟಿನಿಂದ ಎಲ್ಲರೂ ಶೂದ್ರರೇ ಎಂದೂ, ನಂತರ ಗಾಯತ್ರಿ ಮೂಲಕ ವೇದಾಭ್ಯಾಸಕ್ಕೆ ಪ್ರಾರಂಭಿಸಿದಾಗ ಹೊಸ ಜನ್ಮ ಪಡೆದಂತೆ ಎಂದೂ ಭಾವಿಸಿ, ಉಪನಯನ ಸಂಸ್ಕಾರ ಮಾಡಿಸಿಕೊಳ್ಳುತ್ತಾರೆ. ಮೊದ ಮೊದಲು ಈ ಸಂಸ್ಕಾರ ತೀರ ಸರಳವಿತ್ತು. ಶಿಷ್ಯನಾದವನು ಸಮಿತ್ತನ್ನು ಅಂದರೆ ಹುಲ್ಲು ಕಡ್ಡಿಯ ಸಿವುಡನ್ನು ಹಿಡಿದುಕೊಂಡು ಗುರುವಿನಲ್ಲಿಗೆ ಬಂದು, ತಾನು ಬ್ರಹ್ಮಚಾರಿ (ಬ್ರಹ್ಮ ಜ್ಞಾನ ಪಡೆಯುವ ವಿದ್ಯಾರ್ಥಿ) ಯಾಗುವೆನೆಂದು ಹೇಳುತ್ತಿದ್ದ. ಬರುಬರುತ್ತ ಈ ಸಂಸ್ಕಾರ ವಿಧಿ ತುಂಬಾ ಜಟಿಲವಾಯಿತಾದರೂ, ಅಶ್ವಲಾಯನ ಗೃಹ್ಯಸೂತ್ರಾದಿಗಳಲ್ಲಿ ಸಹ ಕೊರಳಿಗೆ ದಾರ ಕಟ್ಟುವಿಕೆಯ ಪ್ರಸ್ತಾಪವೇ ಇಲ್ಲ. ಅನಂತರ ವೈಶಿಷ್ಟ್ಯವನ್ನು ತೋರಿಸುವ 'ಜನಿವಾರ'ದ ಬಾಹ್ಯ ಚಿಹ್ನೆಯನ್ನು ಪ್ರಾರಂಭಿಸಿರಬಹುದು. ಕಾರಣ, ಕೊರಳಿಗೆ ದಾರ ಸುತ್ತಿಕೊಂಡು ತನ್ನ ಶೂದ್ರತ್ವವು ಹೋಯಿತೆಂದೂ ತಾನು ದ್ವಿಜನಾದೆನೆಂದೂ ಹೇಳಿಕೊಳ್ಳುವದು ಕೇವಲ ಬುದ್ಧಿಗೇಡಿಗಳ ಕೆಲಸ. ಸಾಧನೆಯಿಂದ ಮನಸ್ಸು ನಿಲ್ಲಿಸದವನು ಬ್ರಹ್ಮಚಾರಿಯಲ್ಲ, ಬ್ರಾಹ್ಮಣನಲ್ಲ. ಇಹವನ್ನು ತೊರೆದು ಪರದಲ್ಲಿ ತನ್ಮಯರಾಗುವದೇ ಎರಡನೆಯ ಜನ್ಮ. ಅಂಥವರು ದ್ವಿಜರು. ಸಾಧನೆಯಿಲ್ಲದೆ ಹೇಳಿಕೊಂಡರೆ ಆ ಮಾತು ಶೋಭಿಸದು.

೯೫೦

ಬಾಲಚನುಲು ಪೂಲಬಂತುಲ ಬೋಲ್ತುರು, ಪ್ರಾಲುಮಾಲಿನಟ್ಟಿ ಭ್ರಾಂತುಲವನಿ.
ಮಾಂಸಖಂಡಮಂದು ಮರಿಯೇಮಿಯುನ್ನದಿ ? ವಿಶ್ವದಾಭಿರಾಮ ವಿನುರ ವೇಮ.

ಹುಡುಗಿ ನೊಲೆಗಳೆಲ್ಲ ಹೂವು ದಂಡೆಯೆಂದು,
ಹೊಗಳುತಿಹರು ಜಗದಿ ಹುಚ್ಚರಾಗಿ;
ಮಾಂಸಖಂಡದೊಳಗೆ ಮತ್ತೆ ಇರುವುದೇನು ?
ವಿಶ್ವದಾಭಿರಾಮ ಕೇಳು ವೇಮ.

ಶೃಂಗಾರ-ರಸ ಮೆಚ್ಚುವ ಕವಿಗಳು ಶೃಂಗಾರ ರಸಪ್ರಧಾನ ಸಾಹಿತ್ಯ ನಿರ್ಮಿಸುತ್ತಾರೆ. ಇಂಥ ಶೃಂಗಾರ ಕವಿಗಳು ಜನರ ಸಹಜ ನ್ಯೂನತೆಗಳ ದುರ್ಲಾಭ ಪಡೆದು ಅವರ ಮೆಚ್ಚುಗೆ ಗಳಿಸುವ ಪ್ರಯತ್ನ ಮಾಡುತ್ತಾನೆ. ಸ್ತ್ರೀಯರ ಬಗ್ಗೆ ಪುರುಷನಿಗೆ ಸಹಜ ಮೋಹವುಂಟು. ಅದಕ್ಕಾಗಿಯೇ ಶೃಂಗಾರ ಕವಿ ಸ್ತ್ರೀಯ ಅಂಗ-ವಿನ್ಯಾಸವನ್ನು ಈ ರೀತಿ ಬಣ್ಣಿಸುತ್ತಾನೆ : 'ಅವಳ ಕಣ್ಣುಗಳು ಕಮಲದಂತೆ. ಅವಳ ನಡೆ ರಾಜಹಂಸದಂತೆ; ಅವಳ ಶಿರವು ಶಂಖದಂತೆ; ಅವಳ ಎದೆಯ ಮೇಲಿನ ಸ್ಫುಟಗೊಂಡ ಸ್ತನಗಳು ಹೂವು ದಂಡೆಯಂತೆ; ಅವಳ ಶಬ್ದ ಜೇನಿನಂತೆ; ಅವಳ ಅಧರದಿಂದ ಅಮೃತ ಸುರಿಯುವದು. ಅವಳೇ ನಿನ್ನ ಆರಾಧ್ಯ ದೇವತೆ.' ಹೀಗೆ ಹೊಗಳುವವನೊಬ್ಬ. ಹೊಗಳಿಕೆಯನ್ನು ಕೇಳಿ ಮೋಹದಲ್ಲಿ ಬೀಳುವವನೊಬ್ಬ. ಒಬ್ಬ ಕುರುಡ ಇನ್ನೊಬ್ಬ ಕುರುಡನನ್ನು ಕರೆದುಕೊಂಡು ಕೊಳಚೆಯಲ್ಲಿ ಕುಪ್ಪರಿಸಿ ಬೀಳುವರು.

ಯೋಗಿಗೆ ಸ್ತ್ರೀಯ ಸ್ತನಾದಿಗಳು ಕೇವಲ ಮಾಂಸದ ಮುದ್ದೆಗಳಾಗಿ ತೋರುತ್ತವೆ. ಅವನು ಹೇಳುವದು ಹೀಗೆ ಕಣ್ಣು, ಕಿವಿ, ಮೂಗು, ಉರ, ಕೈಕಾಲು ಇತ್ಯಾದಿಗಳೆಲ್ಲ ಅವಯವಗಳು. ಮಾಂಸವಸಾದಿಗಳ ವಿಕಾರವೇ ಆಗಿದೆ. ಅವುಗಳಲ್ಲಿ ಸ್ವಲ್ಪು ರಕ್ತ ತುಂಬಿದ್ದು, ಮಜ್ಜ, ಮಾಂಸ, ಅಸ್ಥಿ, ಶ್ಲೇಷ್ಮಾದಿಕ ಅಸಹ್ಯವಾದ, ಆಯಾಸಕರ ವಸ್ತುಗಳೇ ಆಗಿವೆ. ಅದರಿಂದ ಸ್ತ್ರೀಲೋಲುಪನಾಗಬೇಡ, ಎಂದು ತಿಳಿಸಿ ಹೇಳುತ್ತಾನೆ.

೯೫೧

ಬಾಲ್ಯಮಂದು ನೀವು ಬಹುವಿಧಂಬುಲಬಟ್ಟ, ಜಪ್ಪರಿಂಚಿನಟ್ಟ ಸ್ತನಮುಲಕುನು,
ಮೋಹಮಿಂತಯೇಲ ? ಮೂಢಾತ್ಮ ! ತೆಲಿಯುರಾ, ವಿಶ್ವದಾಭಿರಾಮು ವಿನುರ ವೇಮು.

ಬಾಲ್ಯದಲ್ಲಿ ನೀನು ಬಹಳ ವಿಧವ ಹಿಡಿದು,
ಸವಿದು ಚಪ್ಪರಿಸಿದ ಸ್ತನಕಾಗಿ,
ಮೋಹವಿನಿತು ಏಕೆ ? ಮೂಢಾತ್ಮ ತಿಳಿದುಕೊ.
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀಯ ಸ್ತನಗಳು ರತಿಕ್ರೀಡೆಯ ಸಾಧನಗಳಲ್ಲ. ಇದು ಎಲ್ಲರಿಗೂ ಗೊತ್ತಿದೆ. ಏಕೆಂದರೆ ಸರ್ವರೂ ತಮ್ಮ ಬಾಲ್ಯ ಕಾಲದಲ್ಲಿ ಸ್ತ್ರೀಯ ಸ್ತನಗಳನ್ನು ಚಪ್ಪರಿಸಿ ಹಾಲು ಉಂಡಿರುತ್ತಾರೆ. ಅವುಗಳೊಡನೆ ಪ್ರೇಮದಿಂದ ಬಾಲಕರು ಚಿನ್ನಾಟವಾಡಿರುತ್ತಾರೆ. ಪರ-ಪರಿಯಾಗಿ ಹಿಡಿದು ಆಡಿರುವುದುಂಟು. ಚಪ್ಪರಿಸಿ ಸವಿದುದೂ ಉಂಟು. ಅಲ್ಲಿ ಶುದ್ಧ ಪ್ರೇಮವಲ್ಲದೆ ಬೇರಾವುದೂ ಕಾಣಿಸಿಕೊಂಡಿರಲಿಲ್ಲ.

ಆದರೆ ಬೆಳೆದಂತೆಲ್ಲ ಮನುಷ್ಯನ ಬುದ್ಧಿ, ಸಂಸ್ಕಾರದಿಂದ ಮಂಕಾಗುವದು. ಪ್ರೇಮ ವಿರಬೇಕಾದಲ್ಲಿ ಕಾಮ ಮೂಡುತ್ತದೆ. ಕಾಮುಕ ಮೋಹಗೊಳ್ಳುವನು. ಮೋಹದಿಂದ ಬುದ್ಧಿ ಮಂದವಾಗಿ ಮೂಢನಾಗುವನು. ತಿಳಿಯದೆ ವ್ಯರ್ಥ ಶರೀರ ಹಾಳು ಮಾಡಿಕೊಳ್ಳುವನು.

(ಹೋಲಿಸಿ ನೋಡಿರಿ :

("ನಾರೀ ಸ್ತನ ಭರನಾಭೀದೇಶಂ ದೃಷ್ಟ್ವಾ ಮಾಯಾಮೋಹಾವೇಶಮ್|
ಏತನ್ಮಾಂಸವಸಾದಿ ವಿಕಾರಂ ಮನಸಿ ವಿಚಿಂತಯ ವಾರಂ ವಾರಮ್ ||"
—ಆಚಾರ್ಯ ಶಂಕರ.

"ಸ್ಫುಟಗೊಂಡ ಸ್ತನಗಳನ್ನು, ತುಂಬಿದೆದೆಯ ನಾಭಿ ದೇಶವನ್ನು ಕಂಡು ಮಾಯೆಯಿಂದ ಮೋಹಾವೇಶಕ್ಕೆ ತುತ್ತಾಗುವರು. ಪರಿಪರಿಯಾಗಿ ವಿಚಾರಿಸಿ ನೋಡಿದರೆ ಇವೆಲ್ಲ ಕೇವಲ ಮಾಂಸವಸಾದಿಗಳ ವಿಕಾರ ರೂಪ ಮಾತ್ರವೆನಿಸದಿರದು.

೯೫೨

ವಿಟುನಿ ಜೇರಗೋರಿ ವೀಧಿನಿಮುದಿ ನುಂಚು, ಪಡತಿ ರೀತಿ ಬರಮು ಬ್ಯಾಕನಗುನು,
ಗುಣಮುಲನ್ನಿ ಮರಚಿ ಗುರ್ತಿಂಚಿ ಚೂಡುಮು, ವಿಶ್ವದಾಭಿರಾಮು ವಿನುರ ವೇಮು.

ವಿಟಗೂಡಲಾಶಿಸಿ ಬೀದಿಯೊಳಿರಿಸೆ ಮನ,
ಗಣಿಕೆ ರೀತಿ; ಪರದ ಗಮನ ಬಯಸೆ;
ಗುಣಗಳೆಲ್ಲ ಮರೆತು, ಗುರುತು ಕಂಡುನೋಡು.
ವಿಶ್ವದಾಭಿರಾಮ ಕೇಳು ವೇಮ

ವಿಕ್ಷೇಪ ಅಂದರೆ ಬಹಿರ್ಮುಖವಾಗಿ ಹೋಗುವ ಮನಸ್ಸಿನ ಪ್ರವೃತ್ತಿ ಸ್ವಾಭಾವಿಕವಾದುದು. ಮನಸ್ಸಿನ ಈ ವಿಕ್ಷೇಪವೃತ್ತಿ ಮತ್ತು ಚಂಚಲತೆಗಳನ್ನು ಗಣಿಕೆಯ ಹಾವ-ಭಾವಗಳಿಗೆ ಹೋಲಿಸುವದುಂಟು. ಗಣಿಕೆ ಮನೆಯೊಳಗೆ ಕುಳಿತಿದ್ದರೂ, ಅವಳ ಮನಸ್ಸೆಲ್ಲ ಬೀದಿಯಲ್ಲಿಯೇ ಇರುವುದು. ತನ್ನ ವಿಟ ಪುರುಷನು ಯಾವಾಗ ಸುಳಿಯುವನೋ, ಎಂಬ ತವಕ ಅವಳಿಗೆ. ಮನಸ್ಸನ್ನು ಇಂದ್ರಿಯವಿಷಯವಸ್ತುಗಳತ್ತ ಹರಿಬಿಡುವದೂ ಅದೇ ರೀತಿ. ಇದು ಅಪರವಾದುದು.

ಇನ್ನು ಪರದ ಗಮನ ಯಾವುದು? "ಸಂಕಲ್ಪದಿಂದ ಉತ್ಪನ್ನವಾದ ಎಲ್ಲಾ ಕಡೆಯಿಂದಲೂ ನಿಗ್ರಹಿಸಿ, ಧೈರ್ಯದಿಂದ ಕೂಡಿದ ಬುದ್ಧಿಯಿಂದ ಮೆಲ್ಲಮೆಲ್ಲನೆ ಹಿಂತಿರುಗಬೇಕು. ಮನಸ್ಸನ್ನು ಆತ್ಮನಲ್ಲಿ ನಿಲ್ಲಿಸಿ, ಏನನ್ನೂ ಚಿಂತಿಸಬಾರದು."

"ಚಂಚಲವೂ ಅಸ್ಥಿರವೂ ಆದ ಮನಸ್ಸು ಯಾವ ಯಾವ ವಿಷಯದಿಂದ ಹೊರಕ್ಕೆ ಬರುವದೋ, ಆಯಾ ವಿಷಯದಿಂದ ಮನಸ್ಸನ್ನು ನಿಗ್ರಹಿಸಿ, ಆತ್ಮನಲ್ಲಿಯೇ ವಶಪಡಿಸಿಕೊಳ್ಳಬೇಕು." (ಭಗವದ್ಗೀತಾ ೬-೨೬-೨೫-೨೬)

ಇದು ಸಾಧ್ಯವಾಗಬೇಕಾದರೆ, ಗುಣಗಳನ್ನು ಮರೆಯಬೇಕು. ಜ್ಞಾನವುಂಟು ಮಾಡುವ ಸತ್ವ, ಲೋಭ ಉಂಟು ಮಾಡುವ ರಜೋಗುಣ ಮತ್ತು ಪ್ರಮಾದ. ಮೋಹ,

ಅಜ್ಞಾನವುಂಟು ಮಾಡುವ ತಮೋಗುಣಗಳ ಬಗ್ಗೆ ಯೋಚಿಸದಿರಬೇಕು. ಆಗ 'ಗುರುತು' ಕಂಡುಕೊಳ್ಳಬೇಕು. "ದೇಹಿಯು ದೇಹೋತ್ಪತ್ತಿಗೆ ಕಾರಣವಾಗಿರುವ ಈ ಮೂರು ಗುಣಗಳನ್ನು ದಾಟಿ, ಜನ್ಮ ಮೃತ್ಯು, ಮುಪ್ಪು ಇವುಗಳ ದುಃಖಗಳಿಂದ ಬಿಡಲ್ಪಟ್ಟವನಾಗಿ ಅಮೃತತ್ವವನ್ನ ಹೊಂದುತ್ತಾನೆ". (ಭಗವದ್ಗೀತಾ ೧೪-೨೦)

೯೫೩

ಜಿಹ್ವರುಚುಲಗೋರು ಜೀವಿಂಚಿನಂತಕು, ಸತಿಯು ಪತಿಯು ಗೋರು ಸುತಧನಂಬು
ಹವ್ಯವಹುಡುಜೂಡ ನಂದರಗೋರುನು, ವಿಶ್ವದಾಭಿರಾಮ ವಿನುರ ವೇಮ.

ಜಿಹ್ವೆ ರುಚಿಯಕೋರಿ ಜೀವಿಸಿರುವ ತನಕ,
ಸತಿಯ, ಪತಿಯ ಕೋರಿ, ಸುತರ ಧನವ,
ಅಗ್ನಿಹೋತ್ರಿ ನೋಡು; ಅವನೆಲ್ಲ ಕೋರುವ.
ವಿಶ್ವದಾಭಿರಾಮ ಕೇಳು ವೇಮ

ಜೀವಿಯು ಎಲ್ಲಿಯ ವರೆಗೆ ಜಿಹ್ವೆಯ ರುಚಿಯೆನ್ನು ಕೋರಿ ಜೀವಿಸುವನೋ,ಅಲ್ಲಿಯ ವರೆಗೆ ಕಾಮೇಚ್ಛೆಗಳಿಗೆ ಬಲಿಯಾಗುತ್ತಾನೆ. ಇಂದ್ರಿಯಗಳ ದಾಸನಾಗುತ್ತಾನೆ. ತನಗೆ ತಿನ್ನಲು ಬೇಕಾದ ತಿನಿಸುಗಳಿಗಾಗಿ ತನ್ನ ಅವಯವಗಳನ್ನು ದೇವತೆಗಳೆಂದು ಭಾವಿಸಿ, ತನ ಇಷ್ಟಾನ್ನವನ್ನ ಭಕ್ಷಿಸುತ್ತಾನೆ. ವಿಧಿಪೂರ್ವಕ ಯಜ್ಞಕರ್ಮ ಪೂರೈಸಿದವನು ಯಜ್ಞದ ಆಹುತಿಯನ್ನು, ಮಂತ್ರಗಳನ್ನು ಪಠಿಸುತ್ತ ತಿನ್ನುತ್ತಾನೆ. ಅನಂತರ " ಅಗ್ನಿಯ ಹಿಂದೆ ಚರ್ಮವೆ ಮೇಲಾಗಲಿ ನೆಲದ ಮೇಲಾಗಲಿ, ವಾಜ್ಞಾನಸ್ಸಗಳನ್ನು ಸಂಯಮಿಸಿ ಮಲಗುತ್ತಾನೆ. ಅವನು ಸ್ವಪ್ನದಲ್ಲಿ ಸ್ತ್ರೀಯನ್ನು ನೋಡಿದರೆ ಕರ್ಮವು ಸಮೃದ್ಧವಾಯಿತು, ಎಂದು ಅರಿತುಕೊಳ್ಳಬೇಕು. " (ಛಾಂದೋಗ್ಯ ೫-೨-೮)

ಅಗ್ನಿಹೋತ್ರ ಕರ್ಮಾದಿ ಮಾಡುವವನು ಅಗ್ನಿಹೋತ್ರಿಯು. " ಚೆನ್ನಾಗಿ ಜ್ವಲಿಸುತ್ತಿರುವ ಅಗ್ನಿಯಲ್ಲಿ ಉರಿಯು ಯಾವಾಗ ಏಳುವುದೋ ಆಗ, ಆಜ್ಯ ಭಾಗಗಳ ಮಧ್ಯದಲ್ಲಿ ಆಹುತಿಗಳನ್ನು ಕೊಡಬೇಕು. " (ಮುಂಡಕ ಉಪ. ೨ ೧-೨) ಇದುವೇ ಅಗ್ನಿಹೋತ್ರ ಕರ್ಮ.

" ಸ್ತ್ರೀಯೇ ಅಗ್ನಿಯು. ಅವಳ ಉಪಸ್ಥವೇ ಸಮಿತ್ತು (ಹುಲ್ಲು.) ಲೋಮ್ಯಗಳೇ ಹೊಗೆ. ಯೋನಿಯೇ ಜ್ವಾಲೆ. ಅಭಿನಂದವೇ ಕೆಂಡವು. ಆ ಈ ಅಗ್ನಿಯಲ್ಲಿ ದೇವತೆಗಳು ರೇತಸ್ಸನ್ನು ಹೋಮ ಮಾಡುತ್ತಾರೆ. ಆ ಆಹುತಿಯಿಂದ ಪುರುಷನು ಹುಟ್ಟುತ್ತಾನೆ. " (ಬೃಹದಾರಣ್ಯಕ ಉಪ. ೬-೨-೨೩.)

" ನನಗೆ ಪಂಡಿತನೂ,ವಿಖ್ಯಾತನೂ ವಿದ್ವತ್ಸಭೆಗಳಿಗೆ ಹೋಗುವವನೂ, ರಮಣೀಯವಾದ ಮಾತನಾಡುವವನೂ, ಎಲ್ಲ ವೇದಗಳನ್ನು ಅರಿತಿರುವವನೂ ಆದ ಪುತ್ರನು ಹುಟ್ಟಬೇಕು, ಪೂರ್ಣಾಯುಸ್ಸನ್ನು ಪಡೆಯಬೇಕು " ಎಂದು ಯಾವನು ಬಯಸುವನೋ ಅವನು ಮಾಂಸಾನ್ನವನ್ನು –ಹೋರಿಯ ಮಾಂಸದ ಅಥವಾ ಎತ್ತಿನ ಮಾಂಸದ ಅನ್ನವನ್ನು ಮಾಡಿಸಿ, ಅದನ್ನು ತುಪ್ಪದೊಂದಿಗೆ ತನ್ನ ಪತ್ನಿಯ ಸಹಿತ ತಿನ್ನಬೇಕು. ಆಗ ಅವರಿಬ್ಬರೂ ಅಂತಹ ಪುತ್ರನನ್ನು ಪಡೆಯಲು ಸಮರ್ಥರಾಗುವರು." (ಬೃಹದಾರಣ್ಯಕ ಉಪ.) ಹೀಗೆ ಜಿಹ್ವೆ ರುಚಿ ಕೋರುವ ಅಗ್ನಿಹೋತ್ರಿಯು ತನಗೆ ಏನು ಬೇಕೋ, ಎಲ್ಲವನ್ನು ಕೋರುತ್ತಾನೆ. ಕಾರಣ ಯಜ್ಞಕರ್ಮದ ದಾರಿಯು ಕುರುಡರು ಹೋಗುವ ಹಾದಿಯಾಗಿದೆ.

೯೫೪

ದೋಪುನಿಚ್ಚುವಾಡು ತುಲಲೇನಿನೆರದಾತ, ದೋಚುಕೊನ್ನವಾಡು ದ್ರೋಹಿಯಗುನು,
ಪ್ರಾಪುಜೂಪುವಾಡೆ ಪರಮಪೂಜ್ಯುಂಡಗು, ವಿಶ್ವದಾಭಿರಾಮ ವಿನುರ ವೇಮ.

ಸಿರಿಯ ನೀಡುವವನು ಸಮನೆನಿಸದ ದಾನಿ;
ದೋಚುವವ ಮುತ್ತೆ ದ್ರೋಹಿಯೆನಿಪ.
ಪ್ರಾಪ್ತಿ ತೋರುತಿಹನೆ ಪರಮಪೂಜ್ಯನಪ್ಪ.
ವಿಶ್ವದಾಭಿರಾಮ ಕೇಳು ವೇಮ

ದಾನ ಮಾಡುವವನು ದಾನಿ. ಸಿರಿಯನ್ನು ನೀಡುವ ದಾನಿಗೆ ಬೇರಾರೂ ಸಮನಿಲ್ಲ. ಯಜ್ಞಕರ್ಮಿಗಳು ತಮ್ಮ ಇಷ್ಟದೇವತೆಯನ್ನು ಕುರಿತು ಸಿರಿ-ಸಂಪದ ನೀಡಲು ಪ್ರಾರ್ಥಿಸುತ್ತಾರೆ.

" ಯಾವಾಗ ತಾನೇ ನೀನು ಬಂಜೆಯಾದ ಹಸುವಾಗಿದ್ದೀ ? ನೀನು ಭಕ್ತರಲ್ಲಿಗೆ ನೀನು ಬರಿಗೈಯಿಂದ ಹೋಗುವುದಿಲ್ಲ. ಈ ಕ್ಷಣದಲ್ಲಿಯೂ ಭಗವಂತನಾದ ನಿನ್ನ ದಾನವು ಉದಾರವಾಗಿಯೂ ಅತ್ಯಧಿಕವಾಗಿಯೂ ನೀಡಲ್ಪಡುತ್ತದೆ." [ಋಗ್ವೇದ ೮-೫೧-೭) ಎಂದು ಇಂದ್ರನನ್ನು ಕುರಿತು ಸ್ತುತಿಸಲಾಗಿದೆ.

" ಬಲಿಷ್ಠನಾದ ಇಂದ್ರದೇವನೇ, ಎಲ್ಲಕ್ಕೂ ಮಿಗಿಲಾಗಿ ನಿನ್ನನ್ನೇ ಅಪಾರ ಧನಯುತನೆಂದೂ, ಪರಮದಾನಿಯೆಂದೂ ದೇದೀಪ್ಯಮಾನನೆಂದೂ ಹೇಳುವರಷ್ಟೇ "
(ಋಗ್ವೇದ ೪-೩೧-೭]

ಯಾರು ನಮ್ಮಿಂದ ಏನನ್ನಾದರೂ ದೋಚುವರೋ ಅವರನ್ನು ದ್ರೋಹಿ ಎನ್ನುತ್ತೇವೆ. ನಮಗೆ ಲಭ್ಯವಾಗಬೇಕಾದುದನು ಉಳ್ಳ ಯಾರಾದರೂ ನೀಡದಿದ್ದರೂ ಅವರು ದ್ರೋಹಿಗಳೇ. " ಎಲೈ ಇಂದ್ರನೇ ನೀನು ಮೇಘಗಳನ್ನು ಛೇದಿಸಿರುವಿ. ಆ ಮೇಘಗಳು ವೃತ್ತಾದಿ ದಾನವರ ಸಂಪತ್ತೆಲ್ಲವನ್ನೂ ಪರ್ವತಗಳಲ್ಲಿ ಅಡಗಿಸಿಟ್ಟಿವೆ. ಆ ಕ್ರೂರಿಯಾದ ಪುತ್ರನನ್ನು ನೀನು ಸಂಹರಿಸಿದೆ. ನಂತರ ಸೂರ್ಯನನ್ನೇರಿ ಗಗನದಲ್ಲಿ ಜನರೆಲ್ಲ ನೋಡುವಂತೆ ಹೊರಟಿರುವೆ. " (ಋಗ್ವೇದ ೧-೫-೪.)

ಹೀಗೆ ಜನರು ನೀಡುವ ದಾನಿಯನ್ನು ಮನದಲ್ಲಿ ಕಲ್ಪಿಸಿಕೊಂಡು ಸ್ತುತಿಸುವರಲ್ಲದೆ, ತಮಗೆ ಬರುವುದನ್ನು ಯಾರೋ ತಡೆಹಿಡಿದಿರುವರೆಂದೂ, ಅವರು ದಾನವರೆಂದೂ, ದ್ರೋಹಿಗಳೆಂದೂ ತಮ್ಮ ಮನದಲ್ಲಿ ಕಲ್ಪಿಸಿಕೊಂಡು ಅವರನ್ನು ದೂಷಿಸುತ್ತಾರೆ. ಆದರೆ ಪ್ರಾಪ್ತಿ (ಅಂದರೆ ನಮಗೆ ಏನು ಬರಬೇಕಾಗಿದೆಯೋ ಅದು) ಯನ್ನು ಯಾರು ತೋರಿಸುವರೋ, ಅವರು ಪರಮಪೂಜ್ಯರೆನಿಸುವರು. ಅಲ್ಲಿ ಸ್ತುತಿ-ನಿಂದೆಗಳ ಗಣನೆ ಇರುವುದಿಲ್ಲ.

೯೫೫

ಭವಮು ಪೂರ್ವ ಕರ್ಮ ಫಲಮು ನನುಭವಿಂಪ ಗಲಿಗೆನನುಚು ಮದಿನಿ ಗಟ್ಟುಹರಟ
ಕಷ್ಟಸುಖಮುಲೇವಿ ಕಲಿಗಿನದಲಗಕು, ವಿಶ್ವದಾಭಿರಾಮು ವಿನುರ ವೇಮು

ಭವವು ಪೂರ್ವಕರ್ಮ ಫಲವು; ಅನುಭವಿಸಲು,
ಬಂದಿತೆಂದು, ಮನವ ಭದ್ರಗೊಳಿಸು.
ಕಷ್ಟ ಸುಖಗೆಳೆಹ್ಟೊ, ಕಂಡು ತೊಲಗಬೇಡ.
ವಿಶ್ವದಾಭಿರಾಮು ಕೇಳು ವೇಮು.

ಭವ ಎಂದರೆ ' ಆಗು ', ಎಂದರ್ಥ, ಯಾವುದು ಏಕವಸ್ತುವಾದ ಬ್ರಹ್ಮನೇ ವಿವರ್ತ ಹೊಂದಿ ಆಗಿದೆಯೋ ಅದು ಭವ. ಬ್ರಹ್ಮನೇ ಸರ್ವರಲ್ಲಿರುವ ಅರಿವು; ಆತ್ಮ; ಪುರ ವೆಂಬ ದೇಹದಲ್ಲಿ ಇರುವುದರಿಂದ ಪುರುಷ. ಪುರುಷನ ಗುಣಗಳೇ ಪ್ರಕೃತಿಯಾಗಿದೆ. ಪ್ರಕೃತಿ ಗುಣಗಳ ವೈಷಮ್ಯದಿಂದಾಗಿ ವ್ಯಕ್ತವಾಗುವುದು. ಆಗ ಪ್ರಕೃತಿ ಭವಾನಿ ಎನ್ನಿಸುವಳು. ಅಂದರೆ ಸೃಷ್ಟಿಶಕ್ತಿಯುಳ್ಳವಳು. ಆಗಿನ ಪುರುಷಭಾವವೇ ' ಭವ ' ವೆನಿಸುವುದು. ಏಕೆಂದರೆ ಬ್ರಹ್ಮನಿಂದ ಆದದ್ದು ' ಭವ ' ತಾನೇ.

ಜಗತ್ತು, ಸಂಸಾರ ಎನ್ನುವುದೆಲ್ಲ ಭವವೇ. ಜೀವ ಭವಕ್ಕೆ ಬಂದುದೆಂತು ! ಎಂದು ವಿಚಾರಿಸಿದಾಗ, ಕಾರಣ ಗೋಚರಿಸುವದು. ಪೂರ್ವ ಕರ್ಮ ಫಲವೇ ಭವವು. ಕರ್ಮವು ಫಲನೀಡದೆ ಬಿಡದು. ಪಾಪ ಕರ್ಮ ಫಲವೇ ಪಾಪ. ಪುಣ್ಯ ಕರ್ಮ ಫಲವೇ ಪುಣ್ಯ. ಅದು ನಮ್ಮ ಕರ್ಮ ಫಲಕ್ಕನುಸರಿಸಿ ವಿಧಿಯು ಮಾಡಿಟ್ಟ ಪಾಲು. ಅದರಲ್ಲಿ ಅನುಭವಿಸಲು ಬಂದ ಪಾಲು ಪ್ರಾರಬ್ಧ ಕರ್ಮ ಇದನ್ನು ತಪ್ಪಿಸಿಕೊಳ್ಳುವಂತಿಲ್ಲ. ಇದು ಎದುರಾದುದಕ್ಕಾಗಿ ಚಿಂತಿಸಬೇಕಾಗಿಲ್ಲ. ಅನಿವಾರ್ಯಕ್ಕಾಗಿ ಚಿಂತಿಸಿ ಫಲವಿಲ್ಲ. ಇದು ಎಷ್ಟೋ ಕಷ್ಟ ಸುಖಗಳನ್ನೊಳಗೊಂಡಿರಬಹುದು. ಅವುಗಳಿಂದ ವಿಚಲಿತನಾಗದೆ. ಮನಸು ಭದ್ರಗೊಳಿಸಿ, ಅವುಗಳಿಗೆ ಹೆದರಿ ದೂರಾಗದೆ, ಧೈರ್ಯದಿಂದ ಎದುರಿಸಿ ಅನುಭವಿಸಬೇಕು. ಅಂದರೆ ಭವಹರನು ಭವದಿಂದ ಪಾರುಗಾಣಿಸುತ್ತಾನೆ.

೯೫೬

ಸಂದ್ರಮುನಕುಜೂಡ ಸರಿಯೇದಿಯುನು ಲೇದು, ಅಷ್ಟಿಜಲಧಿನೀರ ಮನುವುಗಾದು,
ಅನುವುಗಾನಿನೀರ ಮದಿಯೇಮಿಜೇಯುನು, ವಿಶ್ವದಾಭಿರಾಮು ವಿನುರ ವೇಮು

ಸಮುದ್ರವ ನೋಡಲು ಸರಿಯಾವುದು ಇಲ್ಲ.
ಇಂಥ ಜಲಧಿ ನೀರು ಇಷ್ಟವಲ್ಲ.
ಇಷ್ಟವಿರದ ನೀರು ಏನು ಮಾಡಬೇಕು. ?
ವಿಶ್ವದಾಭಿರಾಮು ಕೇಳು ವೇಮು.

ನಮಗೆ ಸುಲಭವಾಗಿ ಸಿಕ್ಕುವುದಾಗಲಿ ವಿಪುಲವಾಗಿ ದೊರೆಯುವದಾಗಲಿ ಇಷ್ಟವಾದುದೇ ಆಗಿರುವದಿಲ್ಲ. ಉಚಿತವೂ ಆಗಿರುವದಿಲ್ಲ.

ಸಮುದ್ರದಲ್ಲಿ ಅಪಾರವಾದ ಜಲರಾಶಿಯುಂಟು. ಅಷ್ಟೊಂದು ಜಲರಾಶಿ ಬೇರೆ ಎಲ್ಲಿಯೂ ಇಲ್ಲ. ಆದರೆ ಈ ಸಮುದ್ರದ ನೀರಿನಲ್ಲಿ ಉಪ್ಪಿನ ಅಂಶವುಂಟು. ಅದರಿಂದಾಗಿ ಸಮುದ್ರದ ನೀರು ಬಳಕೆಗಾಗಿ ಅನುಚಿತವಾಗಿದೆ.

ಉಚಿತವಲ್ಲದ ನೀರು ಇಷ್ಟವಲ್ಲ. ಇಷ್ಟವಲ್ಲದ ನೀರು ತೆಗೆದುಕೊಂಡು ಏನು ಮಾಡಬೇಕು. ?

ಅದೇ ರೀತಿ, ಸುತ್ತಲೂ ಇರುವ ವಿಷಯ-ವಸ್ತುಗಳು ಯೋಗಿಗೆ ಇಷ್ಟವಲ್ಲ ಯಾವದು ಇಂದ್ರಿಯಗಳಿಗೆ ವಿಷಯವೋ, ಅದನ್ನು ಯೋಗಿ ತ್ಯಜಿಸುತ್ತ ಹೋಗುತ್ತಾನೆ, ಇಂದ್ರಿಯಗಳಿಗೆ ಅ-ವಿಷಯವಾದ, ಜ್ಞಾನಕ್ಕೆ ಅ-ವಿದಿತವಾದ ಆತ್ಮವನ್ನು ಹೊಂದಿ ಯೋಗಿ ಸ್ಥಿತಪ್ರಜ್ಞನಾಗಿರುತ್ತಾನೆ. ಅವನಿಗೆ ಎಲ್ಲೆಡೆ ಇರುವ ಭೋಗ ವಸ್ತುಗಳು ಅನಿಷ್ಟಗಳಷ್ಟೇ

೯೫೭

ಸಾಧನಂಬು ಲೇಕ ಸಮಕೂರದೇದಿಯು, ಬೋಧಲೇನಿ ವಿದ್ಯ ಪೊಂದದೆಪುಡು,
ಪಾದುಗೊಲ್ಪಿವುದಿನಿ ಭಾವಿಂಚಿ ಚೂಡುಮು, ವಿಶ್ವದಾಭಿರಾಮು ವಿನುರ ವೇಮು,

ಸಾಧನೆಗಳು ಇರದೆ ಸಿದ್ಧಿ ಸದಾವುದೂ,
ಬೋದೆಯಿರದೆ ವಿದ್ಯೆ ಬಾರದೆಂದು
ದೃಢವಾಗಿ ಮನದೊಳು ತಾಳಿಭಾವ, ನೋಡು
ವಿಶ್ವದಾಭಿರಾಮು ಕೇಳು ವೇಮು

ಜೀವವು ಪರಮಾತ್ಮನಲ್ಲಿ ಒಂದಾಗಬೇಕು. ಇದುವೇ ಯೋಗ. ಸಕ್ಕರೆ ನೀರಿನಲ್ಲಿ ಬೆರೆತು ಒಂದಾದ ರೀತಿಯೇ ಸಾಧಕನ ಯೋಗ. ಈ ಒಂದಾಗುವಿಕೆಯನ್ನು ಸಾಧಿಸಲು ಅಹಂಕಾರದ ಛತ್ರವನ್ನು ತೆಗೆದೊಗೆಯಬೇಕು. ಸಾಧನೆಯಲ್ಲಿ ಜೀವನು ಭಯಸಹಿತ ಪ್ರೇಮದಿಂದ ಪರಮಾತ್ಮನನ್ನು ಸಮೀಪಿಸುತ್ತಾನೆ. ನಿರ್ಭಯ ಪ್ರೇಮ ಹೊಂದಿ, ಅವನೊಂದಿಗೆ ಒಂದಾಗುವನು. ಭಯಸಹಿತ ಪ್ರೇಮವನ್ನು ನಿರ್ಭಯ ಪ್ರೇಮವಾಗಿ ಮಾರ್ಪಡಿಸುವುದೇ ಸಾಧನೆಯಾಗಿದೆ. ಸಾಧನೆಯಿಂದ ಸಿದ್ಧಿಯಾಗುವದು.

ಈ ಸಾಧನೆ ಅಪೂರ್ಣದಿಂದ ಪೂರ್ಣತ್ವದೆಡೆಗೆ ಸಾಗಿದಂತೆ. ಮೃತ್ಯುವಿನಿಂದ ಅಮೃತದೆಡೆಗೆ ಸಾಗುವದೇ ಆಗಿದೆ. ಇದಕ್ಕೆ ಮಾರ್ಗದರ್ಶನ ಬೇಕು. ಬಾಹ್ಯ ಪ್ರೇರಣೆಯು ನಮ್ಮಲ್ಲಿ ಹುದುಗಿರುವ ಶಕ್ತಿಯನ್ನು ಪ್ರಚೋದಿಸುವದು. ಈ ಬಾಹ್ಯ ಪ್ರೇರಣೆ ಪುಸ್ತಕದಿಂದ ಬರುವುದಿಲ್ಲ. ಅದು ಬರುವುದೇ ಇನ್ನೊಬ್ಬ ಸಿದ್ಧಪುರುಷನಿಂದ ಇವನೇ ಗುರು. ಇವನ ಬೋಧೆಯಿಂದ ಬ್ರಹ್ಮವಿದ್ಯೆ ತಿಳಿಯುವದು. "ಇದನ್ನು ಹೇಳುವವನು ಅದ್ಭುತ ವ್ಯಕ್ತಿಯಾಗಿರಬೇಕು."

ಮನಸ್ಸಿನಲ್ಲಿ ದೃಢವಾಗಿ ಬ್ರಹ್ಮಭಾವವನ್ನೇ ಹೊಂದಿ ನೋಡಬೇಕು. "ಪ್ರಣವವು ಧನಸ್ಸು, ಜೀವಾತ್ಮನು ಬಾಣ, ಆಬ್ರಹ್ಮನು ಲಕ್ಷ್ಯ (ಗುರಿ). ಹೀಗೆಂದು ಹೇಳಲ್ಪಟ್ಟಿದೆ. ವಿಷಯಾಂತರ ವಿಮುಖವಾಗಿ ಜಾಗರೂಕತೆಯಿಂದ ಲಕ್ಷ್ಯವನ್ನು ಹೊಡೆಯಬೇಕು. ಬಾಣದಂತೆ ತನ್ಮಯನಾಗಬೇಕು." (ಮುಂಡಕ ಉಪ. ೨-೨-೪)

೯೫೮

ಸಾಧುಜನುಲು ಬಟಿ ಸಂತಾಪಮೊಂದಿಂಪ, ಕುಶವಿನಾಶವೊಂದು ಗೂರಜನುಡು'
ಸಾಧುಜನುಲು ಪೂಜ ಸಾಯುಜ್ಯ ಮಿಚ್ಚನು ವಿಶ್ವದಾಭಿರಾಮ ವಿನುರ ವೇಮ.

ಸಾಧುಜನರನಂತೆ ಸಂತಾಪಗೊಳಿಸಲು,
ಕುಲವಿನಾಶ ಬಿಡದು ಕ್ರೂರ ಜನಕೆ:
ಸಾಧು ಜನರ ಪೂಜೆ ಸಾಯುಜ್ಯ ಕೊಡುವುದು.
ವಿಶ್ವದಾಭಿರಾಮ ಕೇಳು ವೇಮ.

ಇಂದ್ರಿಯಗಳನ್ನು ಸಾಧಿಸಿರುವರಾದ್ದರಿಂದ (ನಿಯಂತ್ರಿಸಿರುವರಾದ್ದರಿಂದ) ಸಾಧುಗಳು. ಲೋಕದ ವಸ್ತುಗಳೆಲ್ಲ ಇಂದ್ರಿಯ ವಿಷಯಗಳು. ಲೋಕದ ದೃಷ್ಟಿ ನಿರ್ಮಾಣಗೊಂಡಿರುವುದು ಇಂದ್ರಿಗಳ ಮೂಲಕ ವಿಷಯ-ಭೋಗವನ್ನು ಆಧರಿಸಿ. ಸಾಧುಗಳ ದೃಷ್ಟಿಯಾದರೋ ಅ-ವಿಷಯವಾದ ಆತ್ಮವನ್ನಾಧರಿಸಿ. ಇದರಿಂದ ಲೋಕದ ಜನರು ಸಾಧು ಜನರನ್ನು ಸರಿಯಾಗಿ ಕಾಣದಿರುವ ಸಂಭವವುಂಟು.

ಬಹಳ ಜನರಿಗೆ ಸಾಧುಗಳ ಬಗ್ಗೆ ವಿಶ್ವಾಸವೇ ಇಲ್ಲ. ಅವರು ತಮ್ಮ ಸುಖ-ಭೋಗಕ್ಕೆ ಅನುಕೂಲವಾಗಿರುವುದನ್ನೇ ಹೇಳುವ ಡಾಂಭಿಕನೊಬ್ಬನನ್ನು ಗುರುವೆಂದು ತಬ್ಬಿಕೊಳ್ಳುತ್ತಾರೆ. ಅದರಿಂದ ನಿಜವಾದ ಸಾಧುವನ್ನು ಸಂಧಿಸಿದಾಗ ಅವನ ಬಾಹ್ಯ ಸ್ಥಿತಿ ಕಂಡು, ಅವನಿಗೆ ಅಲ್ಲ ಸಲ್ಲದ ಮಾತನಾಡುತ್ತಾರೆ. ಅವನೊಡನೆ ಲಘುವಾದ ಹರಟೆಗೆ ನಿಲ್ಲುತ್ತಾರೆ. "ನಿನ್ನ ಪೂರ್ವದ ಹೆಸರೇನು? ಜಾತಿಗೋತ್ರಗಳಾವವು? ನಿನ್ನ ವಿದ್ಯಾರ್ಹತೆ ಯೆಷ್ಟು? ವಯಸ್ಸೆಷ್ಟು? ಬಂಧು-ಬಳಗವೆಲ್ಲಿ?" ಎಂಬಿತ್ಯಾದಿ ಪ್ರಾಪಂಚಿಕ ವಿಷಯಗಳನ್ನು ಕುರಿತು ಅವನು ಸಂಧಿಸಿದಾಗೆ ಕಾಲವ್ಯಯ ಮಾಡುತ್ತಾರೆ. ಕೆಲವರಂತೂ

ಸಾಧು ಜನರು ತಮ್ಮ ಅಭಿಪ್ರಾಯಕ್ಕೆ ವಿರೋಧವಾಗಿ ಬೋಧಿಸುವರೆಂದು ಸಾಧು ಜನರನ್ನೇ ಸಂತಾಪಗೊಳಿಸುತ್ತಾರೆ. ಸಾಧುಗಳನ್ನು ಸಂತಾಪಗೊಳಿಸುವದೆಂದರೆ ಸತ್ಯವನ್ನೇ ಎದುರು ಹಾಕಿಕೊಂಡಂತೆ. ಏಕೆಂದರೆ ಸಾಧುಗಳು ಸತ್ಯಪರರು. ಸತ್ಯವೇ ಜಯಿಸುತ್ತದೆ. ಅನೃತವಲ್ಲ. "ಸತ್ಯಮೇವ ಜಯತೇ ನಾನೃತಂ." ಸಾಧುಗಳನ್ನು ಎದುರು ಹಾಕಿಕೊಂಡವರ ಕುಲ, ಅಂದರೆ ಸಮೂಹ, ನಾಶವಾಗುತ್ತದೆ. ಏಕೆಂದರೆ ಅವರು ಅನೃತವನ್ನು ಬೆಂಬತ್ತಿದವರು. ಸಾಧು ಜನಲ್ಲಿ ಭಕ್ತಿ ಹೊಂದಬೇಕು. ಅವರನ್ನು ಪೂಜಿಸಬೇಕು. ಅದರಿಂದ ಜೀವ ಪರಮನ ಸ್ಪರ್ಶ ಹೊಂದಿದರೆ, ಆಗುವ ಸಾಯುಜ್ಯ ಸಮಾಧಿಯ ಅನುಭವವು ಸಾಧು ಪೂಜೆಯಿಂದ ಪಡೆಯಬಹುದಾಗಿದೆ.

೯೫೯

ಸುರಲು ಮೌನಲೆಪುಡು ಸರಿ ವರ್ತಿಂತುರು, ಧರ್ಮಮಾರ್ಗಮೊಕಟ ತಾರಕಮುಗ
ಅಟ್ಲು ಕಾನಿವಾರ ಲಸುರುಲ್ಕೆ ಚೆಡಿರಯ್ಯಾ, ವಿಶ್ವದಾಭಿರಾಮ ವಿನುರ ವೇಮ.

ಸುರರು ಮೌನವಿಹರು ಸರಿಯಾಗಿ ನಡೆವರು,
ಧರ್ಮಮಾರ್ಗವೊಂದೆ ತಾರಕವದು;
ಅಂತೆ ಅಲ್ಲದವರು, ಅಸುರರಾಗಿ ಕೆಡುಗು
ವಿಶ್ವದಾಭಿರಾಮ ಕೇಳು ವೇಮ.

ಮಾನವರಲ್ಲಿ ಕೆಲವರು ಸುರರು; ಕೆಲವರು ಅಸುರರು. ಸುರರು ಮೌನಿಗಳು. ಅವರು ಸದಾ ಅ-ವಿಷಯನನ್ನು ಮನನ ಮಾಡುತ್ತಾರೆ. ಅವರು ಸತ್ಯಪಥದಲ್ಲಿಯೇ ನಡೆಯುವರು. ಆದರಿಂದಾಗಿ ಅವರ ನಡೆಯು ದೋಷ-ದೂರವಾಗಿರುವುದು. ಸರಿಯಾದ ನಡೆಯೆಂದರೇನು? ಅಂತಃಶುದ್ಧಿ, ಅಹಿಂಸೆ, ಸತ್ಯ, ತ್ಯಾಗ, ಶಾಂತಿ, ಭೂತದಯೆ, ಕ್ಷಮೆ, ಧೈರ್ಯ, ಶೌಚ, ಅಕ್ರೋಧ, ಅದ್ರೋಹ ಅನಭಿಮಾನ ಇತ್ಯಾದಿ ಗುಣಗಳನ್ನು ಹೊಂದುವುದೇ ಆಗಿದೆ.

ಈ ಗುಣಗಳು ಇರುವುದೆಲ್ಲಿ? ಇವುಗಳನ್ನು ಹೊಂದಿ ಬಾಳುವುದರಲ್ಲಿಯೇ. ಇಂಥ ಬಾಳುವೆಯೇ ಧರ್ಮ ಮಾರ್ಗ. 'ಧಾರಯತಿ ಧರ್ಮ ಇತ್ಯಾಹುಃ' ಜನರನ್ನು ಒಂದಾಗಿಸಿ ಹಿಡಿಯುವುದರಿಂದ ಧರ್ಮವೆನಿಸುತ್ತದೆ. ಸತ್ಯ, ಅಹಿಂಸೆ, ಕ್ಷಮೆ, ಭೂತದಯೆಗಳಿಂದ ಮಾತ್ರ ಜನರನ್ನು ಒಂದಾಗಿಸಬಹುದು. ಇದೇ ಧರ್ಮಮಾರ್ಗ. ಧರ್ಮಮಾರ್ಗವೇ ಭವದಿಂದ ಪಾರುಗಾಣಿಸುವ ತಾರಕವಾಗಿದೆ. ಎಲ್ಲವೂ ತಾನೇ ತಾನಾಗಿ ತಿಳಿಯಬೇಕಾದವನು ಧರ್ಮಗುಣಗಳನ್ನು ಹೊಂದದಿದ್ದರೆ ಹೀಗೆ?

ಆದರೆ ಇನ್ನು ಕೆಲವರುಂಟು. "ಅವರು ಪ್ರವೃತ್ತಿ-ನಿವೃತ್ತಿಗಳ ಭೇದ ತಿಳಿಯರು. ಅವರಲ್ಲಿ ಅಂತರ್ಬಾಹ್ಯ ಶುದ್ಧಿಯಿಲ್ಲ. ಆಚಾರವಿಲ್ಲ. ಶೌಚವೂ ಇಲ್ಲ; ಸತ್ಯವೂ

ಇಲ್ಲ." ಕಾಮದಿಂದಲೇ ಜಗತ್ತಿನ ಸೃಷ್ಟಿ ಎನ್ನುವವರು ಅವರು. ದಂಭ–ಮಾನ–ಮದ ಗಳಿಂದ ಕೂಡಿದವರಾಗಿ ಅಜ್ಞಾನದಿಂದ ಮೋಹಿತರಾಗಿ, ಕಾಮಭೋಗಗಳಲ್ಲಿ ಆಸಕ್ತರಾಗಿ ಕೆಡುವವರೇ ಅಸುರರು. ಇವರು ಧರ್ಮಮಾರ್ಗದಿಂದ ದೂರಾದವರು.

೯೬೦

ತಲ್ಲಿದಂಡ್ರುಲಾತ್ಮತನಯು ಲನ್ನಲುದಮ್ಮು, ತಿಲಮಿ ಬಂಧು ಭೃತ್ಯು ಲೆಲ್ಲ ಜನುಲ.
ಗಲಿಗಿವರ್ಥಿ ಲಂಗ ಘನತ ತೋನುಂಡುಮು, ವಿಶ್ವದಾಭಿರಾಮ ವಿನುರ ವೇಮ.

ತಾಯಿ ತಂದೆ ಸತಿಯು ತನಯ ಅಣ್ಣ ತಮ್ಮ;
ಸುಖದಿ ಬಂದು ಭೃತ್ಯ ಸಕಲ ಜನರು,
ಕಲೆತು ವರ್ಧಿಸಲ್ಕೆ ಘನತೆ ಇರುವುದಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ತಾಯಿ–ತಂದೆ, ಸತಿ–ಸುತರು, ಅಣ್ಣ–ತಮ್ಮಂದಿರು, ಬಂಧು ಭೃತ್ಯರು, ಸರ್ವ ಜನರು ಒಂದಾಗಿ ಅಭಿವೃದ್ಧಿಗೊಳ್ಳಬೇಕು. ಕೂಡಿ ಬಾಳುವುದರಲ್ಲಿ ಘನತೆಯಿದೆ. ಬಾಳಿ ಬೆಳೆಯುವುದರಲ್ಲಿ ಘನತೆಯಿದೆ.

ತಾಯಿ, ತಂದೆ, ಸತಿ, ಸುತ ಇತ್ಯಾದಿ ಸಂಬಂಧಗಳು ಲೋಕ-ಸಂಬಂಧಗಳಷ್ಟೇ. ಇರುವ ಸಂಬಂಧ ಒಂದೇ. ಅದೇ ಆತ್ಮ ಸಂಬಂಧ. ಆತ್ಮ ಎಲ್ಲರಲ್ಲೂ ಉಂಟು, ಅದುವೇ ಎಲ್ಲೆಲ್ಲಿಯೂ ತಾನೇ ತಾನಾಗಿ ಉಂಟು. ತಾಯಿ, ತಂದೆ, ಸತಿ, ಸುತ ಇತ್ಯಾದಿ ಘಟ-ಶರೀರಗಳಷ್ಟೇ. ಎಲ್ಲೆಡೆಯೂ ಇರುವ ಆಕಾಶವನ್ನು ಈ ಉಪಾಧಿಗಳಿಂದ ನಿಯಮಿತಗೊಳಿಸಿ ಹೆಸರಿಸುತ್ತೇವೆ. ಭಿನ್ನತೆ ಇರುವುದು ನಾಮದಲ್ಲಿ. ಸತಿ, ಸುತ, ಬಂಧು, ಭೃತ್ಯ ಎಂಬ ನಾಮ-ಭೇದ ಮಾಡದಷ್ಟು ಮನಸ್ಸು ವಿಶಾಲವಾದರೆ, ಎಲ್ಲವೂ ಒಂದೇ ಆಗುತ್ತದೆ. ಹೀಗೆ ಬೃಹತ್ತಾದುದನ್ನು ಅಂದರೆ ಬ್ರಹ್ಮವನ್ನು ಗ್ರಹಿಸುವುದರಲ್ಲಿಯೇ ಘನತೆ ಅಡಗಿದೆ.

ಹೋಲಿಸಿ ನೋಡಿರಿ :

" ತ್ವಮೇವ ಮಾತಾ ಚ ಪಿತಾ ತ್ವಮೇವ ।
ತ್ವಮೇವ ಬಂಧುಶ್ಚ ಗುರುಸ್ತ್ವಮೇವ ॥
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ ॥
ತ್ವಮೇವ ಸರ್ವಂ ಮಮ ದೇವ ದೇವ ॥

" ನೀನೆ ತಾಯಿ; ನೀನೆ ತಂದೆ; ನೀನೆ ಬಂಧು; ನೀನೆ ಗುರುವು; ನೀನೆ ನಿಧಿ; ನೀನೆ ದ್ರವ್ಯ; ನೀನೆ ಎಲ್ಲ; ಮಹಾದೇವ."

೯೬೧

ಮರತುನೇನೊಯನುಡು ಮದಿಸು ಜನುಂಡೆಪ್ಪು, ನೆವರೊನರ್ಪುಮೇಲುದೆಂತಡ್ಡಿನ,
ಮೂರು ಮೇಲುಜೂಚಿ ಮರ್ಯಾದಗಾಂಚುನು, ವಿಶ್ವದಾಭಿರಾಮ ವಿನುರ ವೇಮ.

ಮರೆವೆನೆಂದು ತಿಳಿದು, ಮನದಿ ಸುಜನರೆಲ್ಲ
ಯಾರೊ ಗೈದ ಮೇಲ್ಮೆ ಎಂಥದಿರಲಿ;
ಮರಳಿ ಮೇಲ್ಮೆ ಬಗೆದು, ಮರ್ಯಾದೆ ಕಾಣುವರು.
ವಿಶ್ವದಾಭಿರಾಮ ಕೇಳು ವೇಮ

ಮರೆವು ಮಾನವನಿಗೆ ಎಷ್ಟೊಂದು ಸಹಜವಾಗಿದೆಯೆಂದರೆ, ' ಮರೆವು ಉಳ್ಳವನೇ ಮಾನವನು ' ಎನ್ನುವಷ್ಟರ ಮಟ್ಟಿಗೆ ಆಗಿದೆ. ಸುಜನರು ಇದನ್ನರಿತು ತಮ್ಮ ಸ್ಮರಣ ಶಕ್ತಿಯ ಮರ್ಯಾದೆಯನ್ನು ತಿಳಿದಿರುವರು. ಅದರ ಮಿತಿಯನ್ನು ಅವರು ತಿಳಿದಿರುವುದರಿಂದ ಅವರು ತಮಗೆ ಯಾರೇ ಆಗಲಿ ಏನಾದರೊಂದು ಒಳ್ಳೆಯ ಉಪಕಾರ ಕಾರ್ಯ ಮಾಡಿದರೆ, ಅವರಿಗೆ ಮರಳಿ ಇನ್ನಷ್ಟು ಒಳ್ಳೆಯದಾಗುವಂತೆ ನಡೆದುಕೊಳ್ಳುತ್ತಾರೆ. ತಡವಾದರೆ ಎಲ್ಲಿ ತಮಗೆ ಸಂದ ಮೇಲ್ಮೆಯು ಮರೆತುಹೋಗುವದೋ ಎಂಬ ವಿಚಾರ ಇವರಿಗುಂಟಾಗುವುದು. ಇದುವೇ ಅವರು ತಮ್ಮ ಸ್ಮರಣಾದಿ ಶಕ್ತಿಗಳಿಗೆ ಹಾಕಿಕೊಂಡಿರುವ ಮರ್ಯಾದೆ. ಪ್ರತಿಯೊಬ್ಬರಿಗೂ ತಮ್ಮ ಮರ್ಯಾದೆಯ ಅರಿವು ತಮಗಿರಬೇಕು. ಮರ್ಯಾದೆಯ ಅರಿವು ಇರುವವನೇ ಸುಜನನೆನಿಸುತ್ತಾನೆ.

೯೬೨

ಜೇಯದಗಿನ ವೇಳ ಜೇಸೆಡಿ ಕಾರ್ಯಂಬು, ವೇಗಪಡಿಯೊನರ್ಪ ವಿಷಮುದಾನು,
ಬುಡಮು ಕಾಯ ಚೇದು ಮುದಿಸಿನ ದೀಪಯಾ, ವಿಶ್ವದಾಭಿರಾಮ ವಿನುರ ವೇಮ.

ಮಾಡುವಂಥ ವೇಳೆ ಮಾಡುವ ಕಾರ್ಯಗಳ,
ವೇಗದಿಂದ ಗೆಯ್ಯೆ, ವಿಷಮ ನೋಡು.
ಬುಡಮೆ ಕಾಯಿ ಕಹಿಯು ಹಣ್ಣಾಗಲು ಸಿಹಿಯು,
ವಿಶ್ವದಾಭಿರಾಮ ವಿನುರ ವೇಮ.

"ಅವಸರದ ಕೆಲಸ ಅಹಿತಕಾರಿ" ಎನ್ನುತ್ತಾರೆ. ನಾವು ಯಾವುದೊಂದು ಕಾರ್ಯ ಕೈಕೊಳ್ಳುವಾಗ ಅದಕ್ಕೆ ತಕ್ಕ ಕಾಲ, ಪರಿಸ್ಥಿತಿ ಉಂಟಾಗಿದೆಯೋ ಇಲ್ಲವೋ ನೋಡಿ ತಿಳಿಯಬೇಕು. ಬೀಜ ಬಿತ್ತಬೇಕು. ಆದರೆ ಇನ್ನೂ ಸಜೀವನಾಗಿರುವಾಗಲೇ ಅದನ್ನು ಬಿತ್ತಬೇಕು. ಕ್ಷೇತ್ರವೂ ಅದಕ್ಕೆ ಆಗ ಹದವಾಗಿದೆಯೋ ಇಲ್ಲವೋ ಕಂಡುಕೊಳ್ಳಬೇಕು. ಕ್ಷೇತ್ರ ಹದವಾಗದೆ ಬೀಜ ಬಿತ್ತಿದರೆ, ಪೈರು ಬರಲಾರದು. ಇದೇ ರೀತಿ, ಅಧ್ಯಾತ್ಮಿಕ ಆಕಾಂಕ್ಷೆ ಉಂಟಾದಾಗ ಬೋಧಿಸಬೇಕು; ಮಾರ್ಗದರ್ಶನ ಬೇಕು.

ಮಾರ್ಗದರ್ಶನ ಸ್ವೀಕರಿಸುವವನು ಯಾವುದೋ ಸಂದುಕಟ್ಟಿನಲ್ಲಿ ಸಿಲುಕಿದಾಗ, ಯಾರೋ ಒಬ್ಬರು ಸಮೀಪದ ಹಿತಸಂಬಂಧಿಗಳು ತೀರಿಹೋದಾಗ, ಏನೋ ಒಂದು ತೆರನಾದ ತಾತ್ಕಾಲಿಕ ಭಾವನೆ ಹುಟ್ಟುತ್ತದೆ, ಅದೇ ಧರ್ಮದ ಹಂಬಲ ಎಂದು ತಿಳಿದು ವೈರಾಗ್ಯದ ಪಾಡಿಗಿಳಿದರೆ, ಆ ಸ್ಥಿತಿಯಲ್ಲಿ ಕಾಯಂ ಉಳಿಯುವುದಾಗದೆ, ಭ್ರಷ್ಟರಾಗುವ ಸಂಭವವೇ ಹೆಚ್ಚು.

ವೈರಾಗ್ಯವು ದೀರ್ಘ ಸಾಧನೆ; ನಮ್ಮ ಗುರಿಯನ್ನು ಸೇರುವವರೆಗೆ ನಮ್ಮ ಸ್ವಭಾವದೊಂದಿಗೆ ನಡೆಸಿದ ಅನವರತ ಹೋರಾಟ. ಇದನ್ನು ಸಾಧಿಸಲು ಜನ್ಮಾಂತರ ಹೋರಾಟದ ಅವಶ್ಯಕತೆಯೂ ಆಗಬಹುದು. ವಿರಾಗಿಯಾಗದೆ, ವಿರಾಗಿಯಾದಂತೆ ನಡೆಯ ಹೋದರೆ, ಅನಿಷ್ಟವು ಸಂಭವಿಸುತ್ತದೆ. ಮಾಡುವ ಕೆಲಸವನ್ನು ಸಮಾಧಾನದಿಂದ ಮಾಡಬೇಕು. ವೇಗದಿಂದ, ಗಡಿಬಿಡಿಯಿಂದ ಮಾಡಿದರೆ ವಿಷಮವಾಗುತ್ತದೆ. ಹೇಗೆಂದರೆ, ಬುಡಮೆ ಕಾಯಿ ಹಣ್ಣಾದ ಮೇಲೆ ಸಿಹಿ ಇರುವುದೇನೋ ನಿಜ. ಆದರೆ ಅದನ್ನು ಕಸುಗಾಯಿ ಇದ್ದಾಗ ತಿಂದರೆ ವಿಷವಾಗಿರುವದಷ್ಟೇ.

೯೬೩

ಅರಯವಾಸ್ತಿಯನಕ ಯಡ್ಡು ಮಾಟಾಡಕ, ತಿಟ್ಟುವಡಕಮುದಿನಿ ಗೊಟ್ಟುಕೊನಕ
ತನದುಕಾದನುಕೊನಿ ತಾಬೆಟ್ಟುನದಿ ಪೆಟ್ಟು, ವಿಶ್ವದಾಭಿರಾಮು ವಿನುರ ವೇಮ.

ಅರಿತನ್ನಾಸ್ತಿಯೆನದೆ ಅಡ್ಡಮಾತಾಡದೆ,
ಬಯ್ಯದೆ ಮನದೊಳಗೆ ಪರಿತಪಿಸದೆ,
ತನ್ನದಲ್ಲವೆಂದು. ತಾ ಕೊಡುವುದನು ಕೊಡು.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲದವರಿಗೆ ಕೊಡುವುದೇ ದಾನ. ದಾನಿಯು ನೀಡುವಾಗ ಯಾವ ಭಾವದಿಂದ ನೀಡಿದರೆ ಅದು ದಾನವೆನ್ನಿಸುವುದು ? ಇದನ್ನು ತಿಳಿಯಬೇಕು.

ದಾನಿ ಏನನ್ನು ನೀಡುವನೋ, ಅದು ತನ್ನ ಆಸ್ತಿಯೆಂದು ಭಾವಿಸಿ ಕೊಟ್ಟರೆ, ಬೇರೆಯವರಿಗೆ ಉಪಕಾರ ಮಾಡಿದಂತೆ ಅನ್ನಿಸಿ, ಅವರು ತನಗೆ ಋಣಿಗಳಾದಾರು ಎನ್ನಿಸುವುದು.

ನೀಡುವಾಗ ಅಡ್ಡಮಾತನಾಡಬಾರದು. ಸ್ವೀಕರಿಸುವವರ ಮನಸ್ಸು ನೋಯುವ ಯಾವ ಮಾತನ್ನೂ ದಾನಿಯು ಆಡಕೂಡದು. ಬೇಡದೆ ನೀಡಬೇಕು ಎನ್ನುತ್ತಾರೆ. ಏಕೆಂದರೆ. ಯಾರಾದರೂ ತಮ್ಮ ಹತ್ತಿರ ಬಂದು ಬೇಡಬೇಕಾದರೆ, ಎಷ್ಟೊಂದು ಕಷ್ಟ ಪಟ್ಟುಕೊಳ್ಳುವರೆಂಬ ಅನುಕಂಪ ಸುಜನರಿಗುಂಟು.

ಬಯ್ಯಬಾರದು. ದಾನ ನೀಡಿವಾಗ ಸ್ವೀಕರಿಸಿದವರು ಅದರಿಂದ ಪಡೆವ ಸಂತೋಷ ಕಂಡು ತಾನೂ ಸಂತೋಷಪಡುವವನೇ ದಾನಿಯು. ಇಂಥವನು ಯಾರಿಗೆ ತಾನೇ ನಿಂದ್ಯ ವ್ಯಂಜಕ ಮಾತುಗಳನ್ನಾಡಬಲ್ಲ?

ಮನದಲ್ಲಿ ಪರಿತಪಿಸಬಾರದು. ನೀಡಿದ ಬಳಿಕ ಇಷ್ಟೊಂದು ಹೋಯಿತಲ್ಲ ಎನ್ನ ಕೂಡದು. "ಕೊಟ್ಟದ್ದು ಕೆಟ್ಟತೆನಬೇಡ; ಅದು ಮುಂದೆ ಕಟ್ಟಿದ ಬುತ್ತಿ".

ತನ್ನದಲ್ಲವೆಂದು ತಾನು ಕೊಡುವುದನ್ನು ಕೊಡಬೇಕು. ಇದುವೇ ತಾನ. "ತವ ದ್ರವ್ಯಂ ತುಭ್ಯಮೇವ ಸಮರ್ಪಯೇ" ನಿನ್ನ ದ್ರವ್ಯವನ್ನು ನಿನಗೇ ಸಮರ್ಪಿಸುವೆ" ಎಂದು ಸ್ವೀಕರಿಸುವವನಿಗೆ ಕೊಡುವಷ್ಟನ್ನು ಕೊಟ್ಟುಬಿಡಬೇಕು.

೯೬೪

ಕಾಮುಚಿಂತಕ್ಕಿ ಕನುಗಾನ ನೇರಪು, ನಿಯಮುನಿಷ್ಠ ವಿಡಿಚಿ, ನಿಯತಿ ಮೀರಿ,
ತಾಮಸಂಬುನಡಚಿ ತನ್ಮಯುಪೊಂದುರಾ, ವಿಶ್ವದಾಭಿರಾಮ ವಿನುರ ವೇಮ.

ಕಾಮು ಚಿಂತೆ ಹತ್ತಿ ಕಾಣದಿಹುದು ತಿಳಿವು;
ನಿಯನುನಿಷ್ಠೆ ಬಿಟ್ಟು, ನೀತಿ ಮೀರಿ;
ತಾಮಸನಡಗಿಸಿ ತನ್ಮಯವನೆ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಈ ಜಗತ್ತಿನಲ್ಲಿ ಯಾವ ವಸ್ತುವೇ ಆಗಲಿ, ಇತರ ವಸ್ತುಗಳಿಂದ ಬೇರೆಯಾಗಿ ಉಳಿಯದು, ಒಂದು ವಸ್ತು ಉಳಿದವುಗಳನ್ನು ಆಕರ್ಷಿಸುವುದು. ಈ ಆಕರ್ಷಣವು ಅಪೂರ್ಣ ಇಲ್ಲವೆ ಕ್ಷುಲ್ಲಕ ವಸ್ತುವಿನ ಬಗೆಗಿದ್ದರೆ, ಅದಕ್ಕೆ ಕಾಮುವೆನ್ನುತ್ತಾರೆ. ಆದರೆ, ಈ ಆಕರ್ಷಣೆಯು ಆ ಪೂರ್ಣ ಸದ್ವಸ್ತುವಿನ (ಪೂರ್ಣ ಸದ್ವಸ್ತು ಅದೊಂದೇ. ತತ್ ಮತ್ತು ಅದೆ ಪರಮ ಪುರುಷ; ಪರಮ ಅರಿವು.) ಬಗೆಗಿದ್ದರೆ, ಅದೇ ಪ್ರೇಮ.

'ಪರಮಪುರುಷ'ನನ್ನು ಕಾಣಬಯಸುವ ಸಾಧಕನು ಅವನೊಬ್ಬನನ್ನೇ ಪರಿಪೂರ್ಣನೆಂದೂ, ಉಳಿದವುಗಳೆಲ್ಲ ಅಪೂರ್ಣವೆಂದೂ ಭಾವಿಸುತ್ತಾನೆ. ಅಪೂರ್ಣವಾದುದನು ಕಾಣದ ಸ್ಥಿತಿಗೆ ಏರಿದಾಗ ಪೂರ್ಣವಾದುದನ್ನು ನೋಡಬಹುದು. ಕಾಮುಚಿಂತೆ ಹತ್ತಿಕೊಂಡಿರುವವರೆಗೆ ತಿಳಿವು ಅಂದರೆ ಪರಮ ಪುರುಷ ಕಾಣದಿರುವನು.

ಯಾವ ಸಾಧಕನು ಕಾಮುಚಿಂತೆಯನ್ನು ನಿಗ್ರಹಿಸಿರುವನೋ ಅವನು ಪರವ ಪುರುಷನನ್ನು ಕಾಣುತ್ತಾನೆ. ಈ ಅನುಭವವು ಆಗೀಗ ಆಗುತ್ತಿರುತ್ತದೆ. ಅವನು ಆ ಸ್ಥಿತಿಯಲ್ಲಿಯೇ ಮುಂದುವರೆಯುತ್ತಾನೆ. 'ಸಾಯುಜ್ಯ' ಸ್ಥಿತಿಯಿಂದ ಕೈವಲ್ಯ ಸ್ಥಿತಿ ತಲುಪುವನೆಂದು ಯೋಗಿ ಹೇಳುತ್ತಾನೆ. ಏತನ್ಮಧ್ಯೆ, ಅವನಿಗೆ ನಿಯಮ ನಿಷ್ಠೆಯನ್ನು

ಗಳಿಂದ ಬರುವದಿಲ್ಲ. ಅದು ಆತ್ಮದಿಂದಲೇ ಬರುವದು. ಈ ಪ್ರೇರೇಪರಣೆ ಯಾರಿಂದ ಬರುವುದೋ ಅವನೇ ಗುರು.

ಈಆತ್ಮ ಪ್ರೇರೇಪರಣೆ ಬರಬೇಕಾದರೆ ಅದನ್ನು ಸ್ವೀಕರಿಸುವವನುಸಿದ್ಧನಾಗಿರಬೇಕು. ಕ್ಷೇತ್ರ ಹದವಾಗಿದ್ದರೆ ಮಾತ್ರ ಬೀಜ ಊರಬಹುದು. ಸ್ವೀಕರಿಸುವವನು ಸಿದ್ಧನಾಗಿರುವ ದೆಂದರೇನು? ಅವನು ಮಾರ್ಗದರ್ಶಕ ಗುರು ಲಭಿಸುವವರೆಗೆ ಸುಮ್ಮನೆ ಹಾತೊರೆದು ಕಾಯುತ್ತ ಕುಳ್ಳಿರಬೇಕೆಂದಲ್ಲ. ಶಿಷ್ಯನಾಗಬೇಕಾದವನು ತನ್ನ, ಅಹಿಂಸೆ, ಅಸ್ತೇಯಾದಿ ಗಳನ್ನೂ ಶೌಚ, ಸುತೋಷ, ತಪಾದಿಗಳನ್ನೂ ಆಚರಿಸುತ್ತಿರಬೇಕು. ಅವನಲ್ಲಿ ಶುದ್ಧ ಮನಸ್ಸು, ನಿಜವಾದ ಜ್ಞಾನಾಕಾಂಕ್ಷೆ ಮತ್ತು ಸತತ ಪ್ರಯತ್ನಗಳಿರಬೇಕು. ಆತ್ಮಜ್ಞಾನದ ಬಗೆಗೆ ಹೀಗೆ ಹೇಳುತ್ತಾರೆ; "ಇದನ್ನು ಹೇಳುವವನು ಅದ್ಭುತ ವ್ಯಕ್ತಿಯಾಗಿರಬೇಕು. ಅದರಂತೆಯೇ ಕೇಳುವವನೂ ಅದ್ಭುತ ವ್ಯಕ್ತಿಯಾಗಿರಬೇಕು." ಗುರುವು ದೊರೆಯು ಲೆಂದು ವ್ಯರ್ಥ ಕಾಲಹರಣ ಮಾಡುವವನು ಅದ್ಭುತ ವ್ಯಕ್ತಿಯಾಗಲಾರನು. ಹೀಗೆ ಕಾಲ ಕಳೆದವನು ಗುರುವು ದೊರೆಯುವ ಕಾಲಕ್ಕೆ ಸಾವಿಗೆ ಈಡಾಗಿ ಹೋಗಬಹುದು."ಹುಡು ಕುವ ಶಿಷ್ಯನನ್ನು ಗುರುವು ಹುಡಕುತ್ತಿರುತ್ತಾನೆ. ಯಾರೂ ಗುರುವು ಸಿಗಲೆಂದು ಸುಮ್ಮನೆ ಇರದೆ ಸಾಧನ ಮಾರ್ಗವನ್ನು ಮುಂದರಿಸಬೇಕು.

೯೬೮

ಕಾಶಿ ಮಧುರ ಕಂಚಿ ಗಯಪ್ರಯಾಗಲುಸೇತು, ವಾಸತೋಡವೀನಿ ನಾತ್ಮ ಜೂಚಿ,
ವಾಸನಲನೆರುಗವಿ ವಟ್ಟಿ ವೆಟ್ಟಿ ವಿಧಂಬೆ, ವಿಶ್ವದಾಭರಾಮ ವಿನುರ ವೇಮ.

ಕಾಶಿ ಮಧುರೆ ಕಂಚಿ ಗಯೆ ಪ್ರಯಾಗ ಸೇತು
ಅಲೆದು ಅಲೆದು ತನ್ನ ಆತ್ಮ ಕಂಡು
ವಾಸನೆಗಳರಿಯದಿರೆ ವ್ಯರ್ಥ ವಿಧಗಳಷ್ಟೇ
ವಿಶ್ವದಾಭಿರಾಮ ಕೇಳು ವೇಮ,

ತೀರ್ಥ-ಕ್ಷೇತ್ರಗಳ ಯಾತ್ರೆಯು ಆಧ್ಯಾತ್ಮಿಕ ಜಾಗ್ರತಿಗೆ ತುಂಬಾ ಸಹಾಯಕವೆಂದು ಭಾವಿಸಲಾಗುತ್ತಿತ್ತು. ಮಹಾತ್ಮರು ಇರುವ ಸ್ಥಾನವೇ ತೀರ್ಥವೆನ್ನುವ ಭಾವವಿತ್ತು. ಆದೀಗ ವರೆಯಾಗಿ ಸ್ಥಳ ದರ್ಶನವೇ ಮೆಲಾಗಿದೆ.

"ಅಯೋಧ್ಯಾ ಮಧುರಾ ಮಾಯಾ ಕಾಶೀ ಕಾಂಚೀ ಹ್ಯನಂತಿಕಾ ।
ಪುರೀ ದ್ವಾರವತಿ ಚೈವ ಸಪ್ತೈತೇ ಮೋಕ್ಷದಾಯಕಾ ॥"

ಅಯೋಧ್ಯ, ಮಧುರೆ, ಮಾಯಾಪುರ, ಕಾಶಿ, ಕಂಚಿ, ಪುರಿ ಮತ್ತು ದ್ವಾರಪತಿ ಗಳೆಂಬ ಏಳು ಮೋಕ್ಷದಾಯಕವಾಗಿವೆಯೆಂದು ಈ ಪವಿತ್ರ ಕ್ಷೇತ್ರಗಳನ್ನು ನೆನೆಯುವವ ರುಂಟು.

ತೀರ್ಥದಲ್ಲಿ ನೂರು ಸಲ ಮುಳುಗಿ ಎದ್ದರೇನು? ಅಶುದ್ಧ ಮನಸ್ಸು ಶುದ್ಧವಾಗದು ಒಳಗೆ ತೆರೆ ತುಂಬಿದ ಬಾಟಲಿಯನ್ನು ಹೊರಗೆ ತೊಳೆದಂತೆ. ಮುಳುಗಿದರೆ ಶುದ್ಧಿಯಾಗು ವಂತಿದ್ದರೆ ಗಂಗೆಯಲ್ಲಿ ಈಜುವ ಏಡಿಮೀನುಗಳಿಗೆ ಮೋಕ್ಷವಾಗುತ್ತಿತ್ತು. ವಿಶ್ವೇಶ್ವರನ ಮಂದಿರದಲ್ಲಿ ಪಾಸಿಸುವ ಪಕ್ಷಿಗಳಿಗೆ ಮೋಕ್ಷವಾಗುತ್ತಿತ್ತು.

"ನ ದೇವಃ ಪರ್ವತಾಗ್ರೇಷು ನ ದೇವಃ ಶಿವ ಸದ್ಮನಿ।
ದೇವಶ್ಚಿದಾನಂದೆಯೋ ಹೃದಿ ಭಾವೇನ ದೃಶ್ಯತೇ ॥"

"ದೇವರು ಬೆಟ್ಟದ ತುದಿಯಲ್ಲಿಲ್ಲ. ಶಿವನ ಗುಡಿಯಲ್ಲಿಯೂ ಇಲ್ಲ. ಅವನು ಸಚ್ಚಿದಾ ನಂದಮಯನು. ಯಾವಾಗ ಯೋಗ್ಯ ಭಾವವಿರುವುದೋ, ಆಗ ಅವನು ಅವರವರ ಹೃದಯದಲ್ಲಿಯೇ ಗೋಚರಿಸುತ್ತಾನೆ."

ಕಾಶಿ, ಮಧುರೆ, ಕಂಚಿ, ಗಯೆ, ಪ್ರಯಾಗ ಮತ್ತು ಸೇತೂ ಇತ್ಯಾದಿ ತೀರ್ಥಕ್ಷೇತ್ರ ಯಾತ್ರೆ ಮಾಡುವವನು, ದೀರ್ಘ ಪರ್ಯಟನದ ನಂತರ ಆತ್ಮ ತನ್ನ ಹೃದಯದಲ್ಲಿಯೇ ಇದೆ. ಪೂರ್ವವಾಸನೆಗಳ ಮೂಲಕ ನಾನು ಅದನ್ನು ತಿಳಿಯದೇ, ಕಾಲನೋವು ಮಾಡಿ ಕೊಂಡು ತಿರುಗಿದೆನಷ್ಟೇ.ಎಂದು ಅರಿಯದಿದ್ದರೆ,ಯಾತ್ರಾ-ಕರ್ಮಗಳೆಲ್ಲ ವ್ಯರ್ಥಗಳಷ್ಟೇ

೯೬೯

ಭೋಗವಾಂಛ ಚೇತ ಬೊಲುಪೇದೊ ಯೆರುಗಕ, ದ್ರೋಹಬುದ್ಧಿ ನೋರುಲ ದೂರುಟಕುನ
ಸಾಹಸಿಂಚುಮಡು ಸರ್ವದಾ ಚಿಡುನಯಾ, ವಿಶ್ವದಾಭಿರಾಮ ವಿನುರ ವೇಮ.

ಭೋಗದಾಶೆಯಿಂದ ಪರಿಜ್ಞಾನ ವಿರದೆ,
ದ್ರೋಹಬುದ್ಧಿ ತಳೆದು ದೂರುತಿದ್ದು,
ಸಾಹಸ ಪಡುವವನು, ಸರ್ವದಾ ಕೆಡುವನು.
ವಿಶ್ವದಾಭಿರಾಮ ಕೇಳು ವೇ ೨

ಯಾವನು ಭೋಗದಾಶೆ ಹೊಂದಿರುವನೋ, ಅವನು ಮೋಹಿತನಾಗುವನು ಮೋಹ ಗೊಂಡ ಅವನಿಗೆ ಒಳಿತು ಯಾವುದು? ಕೆಡಕು ಯಾವುದು? ಎಂದು ತಿಳಿಯುವ ವಿವೇಕ ಬುದ್ಧಿ ಇರುವುದಿಲ್ಲ. ಕಲ್ಯಾಣಕರವಾದುದು ಯಾವುದು? ಎಂಬ ಪರಿಜ್ಞಾನವೇ ಅವನಿಗಿರುವುದಿಲ್ಲ.

ತನ್ನ ಭೋಗಕ್ಕೆ ಅತಂಕವಾಗುವುದನ್ನು ಅವನು ದೂರತೊಡಗುತ್ತಾನೆ. ಅದರಲ್ಲಿ ದ್ರೋಹ ಬಗೆಯುತ್ತಾನೆ. ಸಾಲದೆ ಭೋಗ ತೃಪ್ತಿಗಾಗಿ ದುಡುಕಿ ಸಾಹಸಕ್ಕಿಳಿಯುವನು. ಇಂಥ ಕಾಮೋಪಭೋಗ ಪರಾಯಣನು ಯಾವಾಗಲೂ ಕೆಡುವನು. ಏಕೆಂದರೆ ಬುದ್ಧಿ-ಗುರುಡನಾದ ಅವನು ಕೇಡಿನ ಮಾರ್ಗವನ್ನೆ ಹಿಡಿದು ಮುಂದುವರಿಯುತ್ತಾನೆ. ಕೇಡು ಬಿತ್ತಿ ಕೇಡನ್ನೇ ಬೆಳೆಯುವನು.

"ಅಸುರೀ ಸ್ವಭಾವದ ಜನರು ಪ್ರವೃತ್ತಿಯನ್ನೂ ನಿವೃತ್ತಿಯನ್ನೂ ಅರಿಯರು, ಅವರಲ್ಲಿ ಶೌಚವಿಲ್ಲ, ಆಚಾರವಿಲ್ಲ, ಸತ್ಯವೂ ಇಲ್ಲ."

"ಆಶೆಯೆಂಬ ನೂರಾರು ಹಗ್ಗಗಳಿಂದ ಕಟ್ಟಲ್ಪಟ್ಟವರಾಗಿ, ಕಾಮ ಕ್ರೋಧ ಪರಾಯಣರಾಗಿ, ಕಾಮದ ಭೋಗಕ್ಕಾಗಿ ಅನ್ಯಾಯದಿಂದ ಧನಸಂಚಯಗಳನ್ನು ಮಾಡಲು ಪ್ರಯತ್ನಿಸುತ್ತಾರೆ."

"ಅನೇಕ ಚಿಂತೆಗಳಿಂದ ಭ್ರಾಂತರಾಗಿ, ಮೋಹಜಾಲದಿಂದ ಆವರಿಸಲ್ಪಟ್ಟವರಾಗಿ, ಕಾಮ-ಭೋಗಗಳಲ್ಲಿ ಆಸಕ್ತರಾಗಿ, ಅಶುಚಿಯಾದ ನರಕದಲ್ಲಿ ಬೀಳುತ್ತಾರೆ."

೯೭೦

ಠೀವಿಲೇದಟಂಚು ಡೆಂದಂಬು, ಲೋನೆಂಚಿ ಜ್ಞಾನಿನೆರುಗಲೇನಿ ಮಾನವುಂಡು,
ಡಾಂಬಿಕುನಕು ಲೊಂಗಿ ಡಯ್ಯಾನು ಗಡವಟ, ವಿಶ್ವದಾಭಿರಾಮ ವಿನುರ ವೇಮ.

ಠೀವಿ ಇಲ್ಲವೆಂದು ತಾವು ಮನದಿ ತಿಳಿದು;
ಜ್ಞಾನಿಯರಿಯದಂಥ ಮನುಜರೆಲ್ಲ;
ಡಾಂಬಿಕನಿಗೆ ಮಣಿದು, ಡೊಗ್ಗು ತಿಹರು ಗಡನೆ.
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಿಯನ್ನು ತಿಳಿಯುವದು ಅಷ್ಟೊಂದು ಸುಲಭವಲ್ಲ. ಇತ್ತೀಚಿನ ಯೋಗಿಯೊಬ್ಬ ತನ್ನ ಬಗೆಗೆ ಹೀಗೆ ಹೇಳಿದ; ನನ್ನ ಜೀವನ ತಿಳಿಯುವದು ದುಸ್ತರ. ಏಕೆಂದರೆ ಅದು ಸಾಗರದ ಮೇಲು ಭಾಗದಲ್ಲಿ ಇಲ್ಲ.

ಶಾಸ್ತ್ರಗಳನ್ನು ಓದಿ, ಪದಗಳ ಜಾಲದಲ್ಲಿ ಜನರನ್ನು ಮೋಹಗೊಳಿಸುವವನು ಜ್ಞಾನಿಯಲ್ಲ, ಚಿಲ್ಲರೆ ಸಿದ್ಧಿಗಳನ್ನು ಪ್ರದರ್ಶಿಸುವವನೂ ಜ್ಞಾನಿಯಲ್ಲ. ಮನಸ್ಸನ್ನು ಏಕಾಗ್ರಗೊಳಿಸುವ ಮಾರ್ಗದಲ್ಲಿ ಸಿದ್ಧಿಗಳುಂಟಾಗುತ್ತವೆ. ಸಿದ್ಧಿಗಳನ್ನು ವ್ಯಕ್ತಗೊಳಿಸದೆ ಮುಂದುವರೆದಾಗ ಸಾಕ್ಷಾತ್ಕಾರ ಸಾಧಿಸಬಹುದು; ಜ್ಞಾನಿಯಾಗಬಹುದು.

ಜ್ಞಾನಿ ಸಿದ್ಧಿ ಪ್ರದರ್ಶನದ ತನಕವಿಲ್ಲದವನು. ಪದಜಾಲದಲ್ಲಿ ಜನರನ್ನು ಮೋಹಗೊಳಿಸುವ ಮತಾಭಿಮಾನದಿಂದ ದೂರಾದವನು. ರಾಗ-ದ್ವೇಷ ಅಹಂಕಾರ, ಆಶೆ, ಕ್ರೋಧಗಳಿಲ್ಲ ಜ್ಞಾನಿಯಲ್ಲಿ ನಾಶವಾಗಿರುತ್ತವೆ. ವಿನಯ-ಕರುಣೆಗಳೇ ಮಾರ್ತಿವೆತ್ತಂತೆ ಅವರಿರುವರು. ಅವರು ನಗ್ನರಾಗಿರಬಹುದು; ಹೊದ್ದುಕೊಂಡಿರಬಹುದು; ಜಡೆಗಟ್ಟಿರಬಹುದು. ಇಲ್ಲದಿರಬಹುದು.

ಸರಳ ಜೀವನದ ಜ್ಞಾನಿಯನ್ನು, ಠೀವಿ ಇಲ್ಲದವನೆಂದು, ಮನುಜರು ತಿಳಿಯುವ ಸಂಭವವುಂಟು. ಆದರೆ ಯಾವನೋ ಒಬ್ಬ ಡಾಂಬಿಕನು, ಕಾವಿ ಕಪನಿ ತೊಟ್ಟು, ದಂಡ ಕಮಂಡಲು ಹಿಡಿದುಕೊಂಡು, "ಶಿವೋಹಂ" ಎಂದೋ ರಾಮ-ರಾಮ ಎಂದೋ, ಉಚ್ಚರಿಸುತ್ತ ಹಲವು ದಿನ ಊಟಮಾಡದೆ, ಕಣ್ಣು ಕುಕ್ಕಿತು ತಾನು ಯೋಗಿ ಎಂದು ಸಾರುವ ಡಾಂಭಿಕನಿಗೆ ಮಣಿಯುತ್ತಾರೆ. ಇದು ಲೋಕದ ವೈಚಿತ್ರ.

ತನವಿಪತ್ತು ದೆಲಿಯ ತಪ್ಪಿಂಚುಕೋನಜೂಚು, ನೆಟ್ಟಿ ಮನುಜುಡೈನ ನೆಟ್ಟಲೈನ
ನರಕಭಾಧವಿನಂಚು ನರಯಡಾಧರ್ಮಂಬು, ವಿಶ್ವದಾಭಿರಾಮ ವಿನುರ ವೇಮ.

ತನ್ನ ಕಷ್ಟ ತಿಳಿದು, ತಪ್ಪಿಸಲೆಳಸುತಿಹ;
ಎಂಥ ಮನುಜನಿರಲಿ; ಎಂತೋ ಇರಲಿ;
ನರಕ ಬಾಧೆ ಕೇಳಿ, ನೆರೆಗಾಣ ಧರ್ಮವ
ವಿಶ್ವದಾಭಿರಾಮ ಕೇಳು ವೇಮ

ಯಾವ ಮನುಷ್ಯನೇ ಆಗಲಿ; ಬಡವನಿರಲಿ, ಬಲ್ಲಿದನಿರಲಿ, ಜಾಣ ಮೂಢನಿರಲಿ, ಕಡು ಜಾಣನಿರಲಿ, ತನಗೆ ಕಷ್ಟ ಉಂಟಾಗುವದೆಂದು ತಿಳಿದೊಡನೆ ಕೆಲಸ ಮಾಡುವ ವಿಧಾನವನ್ನೆ ಬದಲಿಸುತ್ತಾನೆ. ಇಲ್ಲವೇ ಎಂಥ ಕೆಲಸ ಮಾಡ ಹೋಗುವದಿಲ್ಲ ಕಂಡು ಕಂಡು ಯಾರೂ ಮುಳ್ಳು ಕಂಟಿಯನ್ನು ಹುಳಿಯುವುದಿಲ್ಲ. ಮಾನವನ ಸಹಜ ಸ್ವಭಾವ ಕಷ್ಟದಿಂದ ದೂರಾಗುವದೇ ಆಗಿದ್ದರೂ, ತಾನು ಮಾಡುವ ಕೆಡುಕಾರ್ಯದಿಂದ ತನ್ನ ಮನಸ್ಸು ನೀಚವಾಗುತ್ತದೆ. ನರಕ ಸದೃಶ ಅನುಭವ ಉಂಟಾಗುತ್ತದೆ, ಎಂಬುದನ್ನು ತಿಳಿದರೂ, ಮನುಷ್ಯನೇಕೆ, ಅಧರ್ಮ ಕಾರ್ಯದಲ್ಲಿ ಅನುರಕ್ತನಾಗುವನೋ, ತಿಳಿಯದು. ನರಕ ಬಾಧೆ ಎಂತಹದು ಎಂದು ಕೇಳಿ ತಿಳಿದು, ಅಂಥ ಭಾವೀ ಕಷ್ಟ ತಪ್ಪಿಸಿಕೊಳ್ಳಲು ಧರ್ಮ ಪ್ರವೃತ್ತನಾಗಬೇಕಷ್ಟೇ ಆದರೆ ಮಾನವನೇಕೆ ಹೀಗೆ ಮಾಡುವದಿಲ್ಲ?

೯೭೨

ಪಚ್ಚೆದನ ಮುಜೂಚಿ ಯಿಚ್ಚನು ಗಾಮುಕುಲ್, ಚಿಚ್ಚು ಲೋ ಬಡುದುರು ಕ್ಷಿತಿತಲಮು
ಚ್ಚಗಲುಗಚೇಯು ನೆಚ್ಚು ಗಾ ಪೋಹುಬು, ವಿಶ್ವದಾಭಿರಾಮ ವಿನುರ ವೇಮ.

ಹರೆಯದವಳ ಕಂಡು ಹಲುಬುವ ಕಾಮುಕನು
ಬೀಳುವ ಬೆಂಕಿಯಲಿ ಭೂಮೇಲೆ.
ಮೂಡಿ ನಿತ್ಯ ಪ್ರೀತಿ ನೋಹ ಹೆಚ್ಚು ತಿಹುದು
ವಿಶ್ವದಾಭಿರಾನು ಕೇಳು ವೇನು

ಒಂದು ಕರ್ಮ ಇನ್ನೊಂದು ಕರ್ಮಕ್ಕೆ ಬೀಜವಾಗುವದು. ಇದು ಕ್ರಮದಿಂದ ಘಟಿಸುವದು. ಕರ್ಮಬೀಜ ಕರ್ಮಫಲವಾಗಬೇಕಾದರೆ, ಅನುಕೂಲ ವಾತಾವರಣ ಬೇಕು. ಆ ಫಲ ಒಳ್ಳೆಯದಿರಬಹುದು; ಕೆಡಿನದಿರಬಹುದು. ಸತ್ಕರ್ಮದಿಂದ ಸತ್ಫಲ; ದುಷ್ಕರ್ಮದಿಂದ ದುಷ್ಫಲ. ಈಗ ನೋಡರಿ:

ಒಬ್ಬ ತರುಣ ಕಾಮುಕನಾಗುತ್ತಾನೆ. ಕಾಮವೇಷ್ಟೆಗಿಳಿದು ಹರೆಯದವಳನ್ನು ಬೆನ್ನು ಹತ್ತುತ್ತಾನೆ, ಅವಳು ವೇಶ್ಯೆ ಇರಬಹುದು; ದಾಸಿಯಾಗಿರಬಹುದು. ಜಾರೆಯಾಗಿರ

ಬಹುದು. ಯಾರೇ ಆದರೂ ಕಾಮಾಗ್ನಿ ಪ್ರಜ್ವಲಿಸುವುದು ದಿನ ದಿನವೂ ಸಂಧಿಸಿ ಪ್ರೀತಿ ಗೆಯ್ದಂತೆ, ಮನಸ್ಸಿನ ನಿರ್ಣಯಬುದ್ಧಿ ಮಸಕಾಗುತ್ತದೆ, ಮೋಹ ಆವರಿಸುತ್ತದೆ ಮೋಹ ಆವರಿಸಿದಾಗ, ಧರ್ಮ ಅಧರ್ಮ ಗೊತ್ತಾಗುವುದಿಲ್ಲ.

ಶೋಕಾಚಾರಕ್ಕೆ ವಿರೋಧವಾಗಿ ವೇಶ್ಯೆಯರೂಡನೆರಮಿಸಿ ಲಜ್ಜೆಗೇಡಿಯಾಗುತ್ತಾನೆ ಆತ್ಮವಂಚಕನಾಗಿ ದಾಸಿಯೊಂದಿಗೆ ಕೂಡಿ ದೋಷಪೂರ್ಣನಾಗುತ್ತಾನೆ. ಇನ್ನು ಜಾರೆ ಯೊಂದಿಗೆ ಕೂಡಿದಾಗ ಅವಳ ಪತಿಗೆ ವಿಷಯ ತಿಳಿದೊಡನೆ ತೀರಿತು. ಕೊಲೆ—ಖೂನಿಗೆ ದಾರಿಯಾಗುತ್ತದೆ. ದ್ವೇಷಾಗ್ನಿ ಪ್ರಜ್ವಲಿಸುವದು ಹೀಗೆ ಪತಂಗ ಬೆಂಕಿಯನ್ನು ಪ್ರೀತಿಸಿ ಅದರಲ್ಲಿಯೇ ಬಿದ್ದು ಸುಟ್ಟು ಹೋಗುವಂತೆ ಕಾಮುಕನ ಗತಿಯೂ ಆಗುತ್ತದೆ,

೯೭೩

ಔರ! ಯಾಡುವಾನಿ ನಾಬ್ರಹ್ಮಸ್ಷಷ್ಟಿಂಚೆ, ಬುರುಷ ಪಾಲಿಟ ಪೆನುಭೂತವೆಟ್ಲು,
ದಾನಿವಲನು ಬಡನಿ ಪಾನಿನಿಗಾತುಮೇ ? ವಿಶ್ವದಾಭಿರಾಮ ವಿನುರ ವೇಮ;

ಆಹಾ! ಅಂಗನೆಯರ, ಆ ಬ್ರಹ್ಮ ಸೃಜಿಸಿದನು,
ಪುರುಷ ಪಾಲಿಗೆ ಹಿರಿ ಭೂತದಂತೆ,
ಅವಳ ಬಲೆಗೆ ಸಿಗದ ಅವನ ನೋಡಬಹುದೆ?
ವಿಶ್ವದಾಭಿರಾಮ ಕೇಳು ವೇಮ

ಹೆಣ್ಣಿನ ಅಂಗಸೌಷ್ಠವವನ್ನು ಕಂಡು ಅನೇಕ ಪುರುಷರು ಹುಚ್ಚರಂತೆ ವರ್ತಿಸುತ್ತಾರೆ. ಚಿತ್ರ ತಾರೆಯರಿಗೆ ತಮ್ಮ ತನ ಮಾರಿಕೊಂಡ ವಿದ್ಯಾವಂತರಿಗೇನೂ ಕೊರತೆಯಿಲ್ಲ. ಹಿಂದೆ ರಾಜರು ಹೆಣ್ಣಿನ ಆಸೆಯಿಂದ ತಮ್ಮ ಘನತೆ-ಗೌರವಗಳನ್ನೆಲ್ಲ ಕಳೆದುಕೊಳ್ಳಲು ಸಹ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಅದಕ್ಕಾಗಿಯೇ ದಾರ್ಶನಿಕ ಕವಿಗಳು ಹೆಣ್ಣಿನ ಬಗ್ಗೆ ಎಚ್ಚರಿಕೆ ನೀಡುವರು.

ಸೃಷ್ಟಿಕರ್ತನು ಹೆಣ್ಣನ್ನು ಪುರುಷನ ಬಲೆಯಂತೆ ನಿರ್ಮಿಸಿದನು ಅವಳು ಅವನ ಪಾಲಿಗೆ ಅಂಟಿದ ಮಹಾಭೂತದಂತೆ ಅವಳ ಬಲೆಗೆ ಸಿಗದವನನ್ನು ನೋಡಬಹುದೇ ? ಇಲ್ಲ,

(ಹೋಲಿಸಿ ನೋಡಿರಿ:

ಮನುಜ ನೀನೆಡವಿಡದನುದಿನಬಿಳಸುವ,
ವನಿತೆಯೊಳಿಣೆರಲೊಂದಿನಿಸು ಲೇಸಿಹುದೆ? !!

—ನಿಜಗುಣಯೋಗಿ.

ಸೋಲದಾತನೆ ವಿರತನ ! ವನದೊಳಗೆ
ಬಾಲೆಯರ ಸಿಂಗರವನೆ ! ಕಂಡು

--ನಿಜಗುಣಯೋಗಿ

ಕೌಟಿಲ್ಯ ದಂಭಸಂಯುಕ್ತಾಃ ಸತ್ಯಶೌಚ ವಿವರ್ಜಿತಾಃ |
ಕೇನಾಸಿ ನಿರ್ಮಿತಾ ನಾರೀ ಬಂಧನಂ ಸರ್ವ ದೇಹಿನಾಮ್ ||

ಅನುವಾದ:- ಸ್ತ್ರೀ ಕುಟಿಲತೆ ದಂಭಗಳಿಂದ ಕೂಡಿರುವಳು. ಸತ್ಯಪರತೆಯನ್ನೂ ಶೌಚವನ್ನೂ ಬಿಟ್ಟವಳು. ಇಂಥ ಸ್ತ್ರೀಯನ್ನು ಎಲ್ಲ ದೇಹಿಗಳ ಬಂಧನಕ್ಕಾಗಿ ಯಾರೋ ಸೃಷ್ಟಿಸಿರುವರು. — ದತ್ತಾತ್ರೇಯ ಅವಧೂತ ಗೀತೆ)

೯೭೪

ನರುನಿಬಿಂದುವುನನು ನಾತಿಗರ್ಭಮುದಾಲ್ಪು, ರಾತಿಯುಪ್ಪುಚೇತ ರಸಮುಗಟ್ಟು,
ಬುದ್ಧಿದೆಲಿಪಯುನ್ನ ಭುವನಮುಲ್ ದಾಲ್ಪುದಾ, ವಿಶ್ವದಾಭಿರಾಮ ವಿನುರ ವೇಮ.

ನರನ ಬಿಂದು ಇಹುದು, ನಾರಿ ಗರ್ಭದೊಳಗೆ,
ಕಲ್ಲು ಉಪ್ಪಿನಿಂದ ರಸಗಟ್ಟಿತು
ಬುದ್ಧಿ ವಿವೇಕವಿರೆ, ಭುವನವ ಗ್ರಹಿಸನೆ ?
ವಿಶ್ವದಾಭಿರಾಮ ಕೇಳು ವೇಮ.

ಪುರುಷನು ಉಂಡ ಅನ್ನದಿಂದ ಸಪ್ತಧಾತುಗಳಲ್ಲಿ ಒಂದಾದ ರೇತಸ್ಸು ಉಂಟಾಗುತ್ತದೆ. ಈ ರೇತಸ್ಸು ಉಂಟಾದುದೇ, ಪ್ರಥಮ ಜನ್ಮ ಎನಿಸುವುದು. ಹೀಗೆ ಗರ್ಭವು ಪ್ರಪ್ರಥಮವಾಗಿ ಪುರುಷನಲ್ಲಿಯೇ ಉಂಟಾಯಿತು. ಮುಂದೆ ಸ್ತ್ರೀಸಂಭೋಗ ಕಾಲಕ್ಕೆ ಪುರುಷನು ವಿಸರ್ಜಿಸಿದ ರೇತಸ್ಸು ಸ್ತ್ರೀಯೋನಿಯನ್ನು ಸೇರಿ, ಅವಳ ಅಂಗಾಂಗಗಳಿಂದ ವಿವಿಧ ರಸಗಳು ಬಂದು ಸೇರಿ ದೇಹ-ರಚನೆಯಾಗುತ್ತದೆ. ಅವಳು ಸೇವಿಸಿದ ಅನ್ನಾಹಾರಗಳು ಮಣ್ಣು-ನೀರಿನಿಂದಾದವುಗಳಷ್ಟೇ ? ಕಲ್ಲು ಭೂಮಿಯ ಪ್ರತೀಕ; ಉಪ್ಪು ಸಮುದ್ರದ ನೀರಿನ ಪ್ರತೀಕ. ಹೀಗೆ ಉಪ್ಪು ಕಲ್ಲಿನಿಂದ, ನಾರಿಯ ಗರ್ಭದಲ್ಲಿ ಪುರುಷನ ಬಿಂದು, ಕೂಡಿಕೊಂಡು ಗಟ್ಟಿ ರಸವಾಗುತ್ತದೆ. ಇದೆಲ್ಲ ಹೇಗೆ ಆದೀತು? ಎಂದೀರಿ. ಯೋಚಿಸಿರಿ. ವಿಂಗಡಿಸಿ ತಿಳಿಯಿರಿ. ಎಲ್ಲವೂ ಕಲ್ಲು-ಉಪ್ಪಿನಿಂದ ಆಗಿಲ್ಲವೇ? ಹೌದು ಹಾಗಾದರೆ ನೀವು ಈ ಭುವನವೆಲ್ಲ ಹೇಗೆ ಆಗಿರಬಹುದು ಎಂಬುದನ್ನು ಈಗಲಾದರೂ ತಿಳಿಯಬಲ್ಲಿರಲ್ಲವೇ ? ಬುದ್ಧಿ ವಿವೇಕವಿದ್ದವರೆಲ್ಲರೂ ಸಹಜವಾಗಿ ಅರಿಯಬಲ್ಲರು

೯೭೫

ಚದುವು ಜದುವ ಕುನ್ನ ಸೌಖ್ಯಂಬುಲುನು ಲೇವು, ಚದುವು ಜದುವುನೇಸಿ ಸರನುಡಗುನು
ಚೆದುವು ಮುರ್ಮೆರಿಗಿ ಚದುವಂಗ ಜೂಡುನು, ವಿಶ್ವದಾಭಿರಾಮ ವಿನುರ ವೇಮ.

ಓದನೋದದಿರಲು ಸೌಖ್ಯವೆಂಬುದಿಲ್ಲ
ಓದನೋದಿ ತಾನು ಒಪ್ಪವಿರಲು,
ಓದಿನರ್ಥವರಿತು ಓದಿ ನಾಚೆ ನೋಡು,
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನಲ್ಲಿ ಭಕ್ತಿ ನೆಲೆಸುವುದೆಂದರೆ ಏನು? ಬಹು ಜನರು ಭಕ್ತಿಯ ಬಗ್ಗೆ ಲಘುವಾಗಿ ವಿಚಾರ ಮಾಡುತ್ತಾರೆ. ಭಕ್ತಿಯೇ ಸಾಧನವಲ್ಲ. ಜ್ಞಾನ ಮತ್ತು ಕರ್ಮ ಗಳಿಂದ ನಾವು ಭಕ್ತಿಯ ಸ್ಥಿತಿ ತಲುಪಬೇಕು. ಭಕ್ತಿಭಾವ ಮೂಡಿಸಿಕೊಳ್ಳಬೇಕು. ಭಕ್ತಿಯು ನಿರತಿಶಯವಾದಾಗ, ಸಮಾಧಿ ಸ್ಥಿತಿ ತಲುಪಬಹುದು.

ಅಂದ ಮೇಲೆ, ಭಕ್ತಿಯ ನೈಜಾರ್ಥ ತಿಳಿಯುವುದಕ್ಕಾಗಲಿ. ಭಕ್ತಿ ಭಾವ ಹೊಂದು ವುದಕ್ಕಾಗಲಿ, ಓದಿ, ಕೇಳಿ ಜ್ಞಾನ ಪಡೆಯಬೇಕು. ಪಠಣ, ಶ್ರವಣಗಳು ಒಳ್ಳೇದು. ಅಷ್ಟೇ ಅಲ್ಲ; ಅವಶ್ಯ ಕೂಡ. ಓದದೆ ಇದ್ದರೆ, ಸುಖ-ಸೌಖ್ಯಗಳ ಸರಿಯಾದ ಕಲ್ಪನೆ ಹೊಳೆಯದು. ಓದಬೇಕು. ಪರಮ ಬ್ರಹ್ಮವನ್ನು ಸರ್ವಜ್ಞ, ಪರಮಾತ್ಮ, ಸತ್ಯ, ಸರ್ವಭೂ ತಾಂತರಾತ್ಮ, ನಿರಾಲಂಬ, ವಿಲಕ್ಷಣ, ನಾದ ಬಿಂದು ಕಳಾತೀತ, ನಿರ್ಗುಣ, ಅವರ್ಣ ಎಂದು ಒಣ್ಣಿಸುವುದರ ತಾತ್ಪರ್ಯವೇನು? ಸತ್ಯವಾವುದು? ಎಂಬುದನ್ನು ತಿಳಿದು ಕೊಳ್ಳಬೇಕು.

ಓದಿನರ್ಥ ಅರಿತು, ಓದಿನಾಚೆ ಓದಬೇಕು. ಉದಾ: ಪರಮಾತ್ಮ ವಿಲಕ್ಷಣ ಹೇಗೆ? ನೋಡುವಾ. ಇಲ್ಲಿ, ಕೆಲವು ಭೋಕ್ತ ಆಗಬಹುದು; ಕೆಲವು ಭೋಜ್ಯ ಆಗಬಹುದು. ಆದರೆ, ಯಾವುದು ಭೋಕ್ತವೂ, ಭೋಜ್ಯವೂ ಅಲ್ಲವೋ, ಅದು ವಿಪರೀತ ಗುಣ. ಅರ್ಥಾತ್ ವಿಲಕ್ಷಣ. ಆ ರೀತಿ, ಭೋಕ್ತ ಭೋಗ್ಯ ಭಾವ ಮೀರಿ, ಇರುವುದೇ ಪರ ಮಾತ್ಮ ಸಾಕ್ಷಾತ್ಕಾರದ ಒಂದಂಶ; ಎಂದು ಓದಿನಾಚೆ ಓದಿ ಬಾಳಬೇಕು.

೯೭೬

ತಾವು ದೆಲಿಸಿನತಡು ತಾವೀಲುವೆಂಬಡಿ, ನೇವಿಧಮುನನ್ಯೆನ ನಿರವು ಜೇರು,
ಭಾವಮೆರುಗಕುನ್ನ ಬರಮೆರುಂಗುಟ ಯೆಟ್ಲು? ವಿಶ್ವದಾಭಿರಾಮ ವಿನುರ ವೇಮ.

ತಾಣ ತಿಳಿಯುವವನು ತಾಣ ಮುಟ್ಟತಿಹನು.
ಯಾವುದೆ ವಿಧವಿರಲಿ; ಎಲ್ಲೆ ಪಡೆವ.
ಭಾವ ತಿಳಿಯದಿರಲು ಪರವ ತಿಳಿಯಬಹುದೆ?
ವಿಶ್ವದಾಭಿರಾಮ ಕೇಳು ವೇಮ.

ಸಾಧಕನು ತನ್ನೆದುರು ಗುರಿಯಿರಿಸಿಕೊಳ್ಳಬೇಕು.ಹೀಗೆ ಲಕ್ಷ್ಯವು 'ಸತ್' ಆಗಿದ್ದರೆ, ಸಾಧನೆಯು ಲಕ್ಷ್ಯದತ್ತ ಕರೆದೊಯ್ಯುವುದು.

ಜ್ಞಾನ ಪಡೆದು ಪರಮಾತ್ಮನ ವಿಭೂತಿ ಮಹಿಮೆಯನ್ನೂ, ಸರ್ವವ್ಯಾಪ್ತಿಯನ್ನೂ ಅರಿಯುವುದರಿಂದ ಪರಮಾತ್ಮನಲ್ಲಿ ಮನಸ್ಸು ಸೇರಿಸಲು ಮಾಡುವ ಸಾಧನೆ ಜ್ಞಾನ ಸಾಧ ನೆಯೆನಿಸುವುದು. ಮಾಡುವ ನಿತ್ಯ ಕರ್ತವ್ಯಕರ್ಮಗಳಲ್ಲಿ ಫಲಾಪೇಕ್ಷೆ ತೊರೆದು ನಿರಾಸಕ್ತಿ ಯಿಂದ ಕರ್ಮಗೆಯ್ದು ಮನಸ್ಸನ್ನು ಲೀಲಾಜಾಲವಾಗಿ ಎಲ್ಲವನ್ನೂ ಗೆಯ್ಯುವ ವಿಶ್ವಕರ್ಮ

ನಲ್ಲಿ ಸೇರಿಸುವುದು, ಕರ್ಮ ಸಾಧನೆಯೆನಿಸುವುದು. ಯಾವುದೇ ವಿಧವಿರಲಿ; ತಾಣ ಇಲ್ಲವೆಲಕ್ಷ್ಯ ತಿಳಿದು ಸಾಗಿದವನು,ಲಕ್ಷ್ಯ ಸಾಧಿಸುವನು.ಪರದ ಲಕ್ಷ್ಯ ವಿಲ್ಲಿದೆ,ಪರದ ಭಾಷೆ ಮೂಡಿದೆ ಓದಿದರೇನು? ವ್ರತ ಗೆಯ್ದರೇನು? ಪರವನ್ನು ತಿಳಿಯವುದು ಸಾಧ್ಯವಾಗದು.

ಹೋಲಿಸಿ ನೋಡಿರಿ:—

"(ಪರಮೇಶ್ವರನು) ಈ ಭುವನದ ಮಧ್ಯದಲ್ಲಿ ವಿಕಹಂಸನಾಗಿರುತ್ತಾನೆ. ಅವನೇ ನೀರಿನತರು ಅಗ್ನಿ ಅವನನ್ನೇ ಆರಿತುಕೊಂಡಿರುವನು ಮೃತ್ಯುವನ್ನು ದಾಟುತ್ತಾನೆ. ಮೋಕ್ಷಕ್ಕೆ (ಇದರ ಹೊರತು) ಬೇರೆದಾರಿಯಿಲ್ಲ.

ಶ್ವೇತಾಶ್ವತರೋಪನಿಷತ್ ೬-೧೬-೧೫

"ಈ ಆತ್ಮ ಪ್ರವಚನದಿಂದ ಇಲ್ಲವೆ ಪಾಂಡಿತ್ಯದಿಂದ ಇಲ್ಲವೆ ಬಹಳಷ್ಟು ವೇದ ಶಾಸ್ತ್ರ ಕೇಳುವುದರಿಂದ ತಿಳಿಯಲಾರದು. ಆತ್ಮನನ್ನು ಹುಡುಕುವ ಆತ್ಮದಿಂದ ಮಾತ್ರ ಆತ್ಮವು ದೊರೆಯುವುದು. ಸಾಧಕನ ಆತ್ಮವೇ ತನ್ನ ಪಾರಮಾರ್ಥಿಕ ಸ್ವರೂಪವನ್ನು ಪ್ರಕಾಶಿಸುವುದು"

(ಮುಂಡಕೋಪನಿಷತ್.)

೯೭೭

ಮತ್ತ ಚಿಕ್ಕುಲು ತಮುಮರ್ಮಂಬುದೆಲಿಯಕ. ಚಿತ್ತ ಚಲನವಂದಿ ಚೆಡಿರಿ ಭುವಿನಿ,
ಬತ್ತಲೇನಿದಾಡು ಪರಮಾತ್ಮ ಕೆರುಗುನಾ ? ವಿಶ್ವದಾಭಿರಾಮ ವಿನುರ ವೇಮ.

ಮತ್ತ ಚಿತ್ತದವನು ಮರ್ಮವರಿಯದನಕ,
ಚಿತ್ತ ಚಪಲ ಹೊಂದಿ ಜಗದೀಕೆಡುವ.
ಭಕ್ತಿಯಿಲ್ಲದವನು ಪರಮಾತ್ಮನನರಿಯ.
ವಿಶ್ವದಾಭಿರಾಮ ಕೇಳು ವೇಮ

ಬೆಟ್ಟದ ಮೇಲೆ ಬಿದ್ದ ಮಳೆಯ ನೀರು ತನ್ನ ಉಚ್ಚತನದ ಬಗೆಗೆ ಗರ್ವಪಟ್ಟು ಕೊಳ್ಳದು. ಅದು ತನ್ನ ಲಕ್ಷ್ಯವಾದ ಸಮುದ್ರ ಸೇರಬೇಕಾದರೆ, ನೀಚ [ಕೀಳಿನ] ಗುಂಟೆ ಹರಿದು ಹೊಳೆಗೂಡಿ, ಮುಂದೆ ಸಾಗರ ಸೇರುತ್ತದೆ. ಆದೇ ರೀತಿ, ಅತಿ ವಿದ್ಯೆ ಪಡೆದವನಿಗೆ ವಿನಯವು ಹೆಚ್ಚು ಶೋಭಿಸುತ್ತದೆ. ಅರ್ಥಾತ್ ಅತಿವಿದ್ಯೆ ಪಡೆದವನು ವಿದ್ಯಾಪ್ರಸಾರ ಮಾಡಬೇಕಾದರೆ, ಅವನಲ್ಲಿ ವಿನಯ ಮೂಡಿರಬೇಕು. ಇದನ್ನೇ ರೂಪಕಾಲಂಕಾರ ಪ್ರಯೋಗಿಸಿ ಹೇಳುವುದಾದರೆ, ಜ್ಞಾನದ ಹಾದಿಯೇ ವಿನಯದ ಕೊಳ್ಳವಾಗಿದೆ; ಎನ್ನಬಹುದು.

ವಿನಯವಿಲ್ಲದೆ ಜ್ಞಾನದೆ ಮರ್ಮ ಅರಿಯಲಾರನು.ಮತ್ತ ಚಿತ್ತದವನು ಮರ್ಮವರಿಯುವುದೆಂತು? ಅನ್ನಮದ, ಕುಲಮದ, ಯೌವನಮದ ಇತ್ಯಾದಿ ಅಷ್ಟಮದಗಳಿಂದ ಮತ್ತವಾದ ಚಿತ್ತದವನು ಅಸುರೀ ಸ್ವಭಾವ ಹೊಂದುತ್ತಾನೆ. ಆದರಿಂದ ಅವನ ಮನಸ್ಸು ಭೋಗ ವಿಷಯಗಳತ್ತ ಇಂದ್ರಿಯ ಮೂಲಕ ಹರಿಯುತ್ತದೆ. ಅವನ ಚಿತ್ತ ವಿಷಯಾ

ಸಕ್ತವಾಗಿ ಚಂಚಲವಾಗುತ್ತದೆ. ಸ್ಥಿರಗೊಳ್ಳುವುದಿಲ್ಲ. ಸ್ಥಿರ-ಪ್ರಜ್ಞೆ ಅವನಿಗೆ ಸಾಧಿಸದೆ ಹೋಗುತ್ತದೆ. ಇದರಿಂದ ಅವನು ಜಗತ್ತಿನಲ್ಲಿ ಕೆಟ್ಟು ಹೋಗುವನು.

ಯಾರಿಗೆ ನಿರಾಸಕ್ತಿ ಇಲ್ಲವೋ ಅವರು ಭಕ್ತರಲ್ಲ. ಲೌಕಿಕ ವಿಷಯಾಕರ್ಷಣೆ ಕಾಮ. ಕಾಮವಿರುವಾಗಿನ ಮಾನಸಿಕ ಸ್ಥಿತಿ ಆಸಕ್ತಿ. ಆಸಕ್ತಿ ಇಲ್ಲವಾಗ ಮನಸ್ಸು ಪರಮಾತ್ಮನತ್ತ ಆಕರ್ಷಿತವಾಗುವುದು. ಅರ್ಥಾತ್ ಪ್ರೇಮವು ಯದಾಗುವುದು; ಪ್ರೇಮವಿರುವಾಗಿನ ಮಾನಸಿಕ ಸ್ಥಿತಿಯೇ ಭಕ್ತಿ. ಭಕ್ತಿಯೇ ಇಲ್ಲದವನು ಪರಮಾತ್ಮನನ್ನರಿಯುವುದೆಂತು?

೯೭೮

ಸಕುಲಗವಯುಟಕುನು ಸುತುಲಬಡಯುಟಕು, ವೆತಲಒಡುಟ ಯೆಂತೊ ವೆರ್ರಿತನವು.
ನೆಲುನುನ್ನರಾಯಿ ನೆತ್ತಿಕೆತ್ತಿನಯಟ್ಲಿ, ವಿಶ್ವದಾಭಿರಾಮ ವಿನುರ ವೇಮ.

ಸತಿಯ ಗೆಲ್ಲಲೆಂದು ಸುತರ ಪಡೆಯಲೆಂದು,
ಹೆಚ್ಚು ಕಷ್ಟಪಡಲು. ಹುಚ್ಚುತನವು.
ನೆಲದೊಳಿರುವ ಕಲ್ಲು ನೆತ್ತಿಗೆತ್ತಿದಂತೆ:
ವಿಶ್ವದಾಭಿರಾಮ ಕೇಳು ವೇಮ.

'ಅಪುತ್ರಸ್ಯ ಗತಿರ್ನಾಸ್ತಿ' ಅರ್ಥಾತ್ ಮಕ್ಕಳಿಲ್ಲದವರಿಗೆ ಯಾವ ಗತಿಯೂ ಇಲ್ಲ ಎಂದು ಪ್ರಜಾಸಂಖ್ಯೆ ಹೆಚ್ಚಿಸಲು ಉದ್ದೇಶಿಸಿದ 'ಮನು' ವಿನ ಕಾಯದೆಯು ಅಜ್ಞಾರಲ್ಲಿ ದೈವೀ ನುಡಿಯೆನಿಸಿತ್ತು. ಮಕ್ಕಳು ಸ್ವರ್ಗದಲ್ಲಿರುವ ಸತ್ತ ಪಿತೃಗಳಿಗೆ ಪಿಂಡಹಾಕಿ ಅವರ ಅಸ್ತಿತ್ವ ಕಾಯುವರೆಂದೂ ಶ್ರಾದ್ಧ ಕಲ್ಪಾದಿಗಳು ಸಾರುತ್ತಿದ್ದವು. ಇದರಿಂದಾಗಿ ಮಕ್ಕಳಿಲ್ಲದ ಹೆಣ್ಣುಮಕ್ಕಳು ಮಕ್ಕಳನ್ನು ಪಡೆಯಲು ಪರಪುರುಷ ಗಮನ ಮಾಡುವುದೂ ಹಿಂದೆ ಬ್ರಾಹ್ಮಣರ ಶಾಸ್ತ್ರದಲ್ಲಿ ಒಪ್ಪಿತವಾಗಿತ್ತು, ಪುರುಷರು ಪುತ್ರಪ್ರಾಪ್ತಿಗಾಗಿ ಬಹುಕಷ್ಟಪಡುತಿದ್ದರು. ಆದರೆ ಇಂದು ಸಂತಾನ ನಿರೋಧವು ಅರ್ಥಾತ್ ಜನನೇಂದ್ರಿಯೆಗಳನ್ನು ಕೃತ್ರಿವ ಉಪಕರಣಗಳಿಂದ ವಿಕಾರಗೊಳಿಸಿ, ಸಂತತಿಯಾಗದಂತೆ ತಡೆಗಟ್ಟುವ ಉಪಕ್ರಮಗಳೆಲ್ಲ ಸರಿಯೆಂದು ತಜ್ಞರು ಸಾರುತ್ತಿದ್ದಾರೆ. ಕಾಯದೆ ಆಗುತ್ತಿದೆ.

ಈ ದೃಷ್ಟಿಯನ್ನು ಒಪ್ಪಬಹುದು, ಬಿಡಬಹುದು.
ಹೋಲಿಸಿ ನೋಡಿರಿ:—

ನೂತನ ಸೊಗಸು ಮಿಗಿಲೆನ್ನದೆ, ಚಿಂತೆಗಳ|
ಮತಿವಂತಕರಿದು ಮೋಹವನುಳಿದಿಹದು.||
ಮೊದಲು ಪುತ್ರನ ವಾಂಛೆಯೊಳು ಚಿಂತೆಗರ್ಭವಾಗ|
ಲದು ಕೆಡದಿರಲೆಂಬ ಕಡುಚಿಂತೆ ಹಡೆವಾ|
ಹದನುರುತರ ಚಿಂತೆ ಗ್ರಹರೋಗದುಪಹತಿ|
ಯೊದಗುವ ಚಿಂತೆ ಸೊರೆಯುವ ಚಿಂತೆ ಸಿರಿದು.|

[ಕೈವಲ್ಯ ಪದ್ಧತಿ:— ನಿಜಗುಣಯೋಗಿ.]

ಆದರೆ ಯೋಗಿವಾಣಿಗೆ ಸಮ್ಮತಿಸದವರಾರು?

ಭೋಗಾತುರನಾಗಿ ಸತಿಯನ್ನು ಗೆಲ್ಲಲು, ಮತ್ತು ಮಕ್ಕಳನ್ನು ಪಡೆಯಲು ಅತಿಯಾಗಿ ಕಷ್ಟಪಡುವವನು ಹುಚ್ಚನಷ್ಟೇ. ಸತಿ ನಿರಾಸಕ್ತಳಾದರೆ, ಪುತ್ರರಾಗದಿದ್ದರೆ ಇನ್ನೂ ಚೆನ್ನು. ಸತಿಯ ಮೋಹ, ಪುತ್ರರ ಪ್ರಾಪ್ತಿಯೆಂದರೆ, ನೆಲದ ಕಲ್ಲನ್ನೆತ್ತಿ ತಲೆಯ ಮೇಲೆ ಹೊತ್ತಂತೆ.

೯೭೯

ಹಾನಿಕಲುಗಬೋದು ಹರುಮದಿನೆಂಚೆಡು, ವಾನಿಕಬ್ಬು ಹರಮು ವಸುಧಯಂದು,
ಬೂನಿ ನಿಷ್ಠ ಮೀರಿ ಪೊದಲಕಯುಂಡುಮು, ವಿಶ್ವದಾಭಿರಾಮ ವಿನುರ ವೇಮ.

ಹಾನಿಯುಂಟಾಗದು ಹರನ ಮನದಿ ನೆನೆಯೆ.
ಅವನ ಕಾವ್ಯ ಪರಮ ಅವನಿಯಲ್ಲಿ,
ಹಿಡಿದ ನಿಷ್ಠೆ ಬಿಡದೆ ಹೊಂದುವುದು ಶ್ರೇಯ.
ವಿಶ್ವದಾಭಿರಾಮ ಕೇಳು ವೇಮ

'ಸರ್ವ ಪಾಪಾಭ್ಯಾಂ ಹರತಿ ಇತಿ ಹರಃ'. ಎಲ್ಲ ಪಾಪಗಳಿಂದ ಯಾವನು ಕೊಂಡೊಯ್ಯುವನೋ ಅವನು ಹರನು. ಮನಸ್ಸನ್ನು ಪಾಪ-ಪುಣ್ಯಗಳಿಂದ ತೆಗೆದು ಒಯ್ಯುವವನಾರು? ವೇದದಲ್ಲಿ ಹೇಳಿರುವುದನ್ನು ನೋಡಿರಿ:

"ಕ್ಷರಮ್, ಪ್ರಧಾನಮ್, ಅಮೃತಾಕ್ಷರಮ್ ಹರಃ
ಕ್ಷರಾತ್ಮನಾ ವೀಶತೇ ದೇವೋ ಏಕಃ
ತಸ್ಯಾಭಿಧ್ಯಾನಾತ್ ಯೋಜನಾತ್, ತತ್ತ್ವಭಾವಾತ್
ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ

"ನಾಶನಾಗಿರತಕ್ಕದ್ದು ಅಂದರೆ ಕ್ಷರವೇ ಪ್ರಧಾನವಾಗಿರತಕ್ಕದ್ದು, ಪ್ರಕೃತಿ. ನಾಶವಿಲ್ಲದ ಅ-ಕ್ಷರವೇ ಪುರುಷ. ಕ್ಷರ ಮತ್ತು ಹರ ಎಂಬ ಪ್ರಕೃತಿ ಪುರುಷರು ಏಕ ದೇವನಲ್ಲಿ ಉಂಟು. ಅವನನ್ನು ಕುರಿತು ಧ್ಯಾನಿಸಿ, ಅವನೊಂದಿಗೆ ಸೇರಿ, ಅವನ ಭಾವ ಹೊಂದಿ, ವಿಶ್ವಮಾಯೆಯಿಂದ ನಿವೃತ್ತನಾಗು."

ಮೊದಲು "ಹರ ವ್ಯೋಮ. ಹರ ವ್ಯೋಮ, ವ್ಯೋಮ ವ್ಯೋಮ ಹರ" ಎಂದು ಮನನ ಮಾಡುತ್ತಿದ್ದರು. ವ್ಯೋಮ ವೆಂದರೆ ಆಕಾಶ. ಪಂಚಭೂತಗಳಲ್ಲಿಯೇ ಸೂಕ್ಷ್ಮವಾದದ್ದು. ಮಾನವನ ಇಂದ್ರಿಯ ಮೂಲಕ ಗ್ರಹಿಸಬಹುದಾದ ಸೂಕ್ಷ್ಮತಮ ವಸ್ತುವೇ, ವ್ಯೋಮ. ಅದಕ್ಕಾಗಿ ಅದನ್ನು ಮನನ ಮಾಡುತ್ತಿದ್ದರು. ಅಧ್ಯಾತ್ಮಿಕ ಲೋಕದಲ್ಲಿ ಹರಃ ಸೂಕ್ಷ್ಮ ಸದ್ವಸ್ತು ಎನ್ನಿಸುತ್ತಿತ್ತು. ಅದರಿಂದಾಗಿ 'ಹರ-ವ್ಯೋಮ'. ಅರ್ಥಾತ್ ಶಿವ-ಜೀವದ ಐಕ್ಯ. ಪ್ರಕೃತಿ ಸಂಗದಲ್ಲಿರುವ ಸಾಕ್ಷೀ ಪುರುಷನಾದ ಹರನ ಕಾವ್ಯವು

ಲೌಕಿಕದಲ್ಲಿ ಪರಮವಾದದ್ದು. ಅವನ್ನು ಓದಿ ಅರಿಯಬೇಕು. ಅವನನ್ನು ಮನದಲ್ಲಿ ನೆನೆಯಬೇಕು. ಮನನದಿಂದ ಶ್ರದ್ಧೆ–ನಿಷ್ಠೆ ಉಂಟಾಗುವುದು. ನಿಷ್ಠೆ ಬಿಡದೆ ಮುಂದು ವರಿದರೆ ಶ್ರೇಯಸ್ಸುಂಟು.

೯೮೦

ಪರುಲಮೇಲುಜೂಚಿ ಪಲುಗಾಕಿವಲೆನೆಪ್ಪ, ಪಟ್ಟಮಾಟಲಾಡುವಾಡಥವುಂಡು,
ಅಟ್ಟವಾನಿಬ್ರತುಕು ನದಿಯೇಲಮಟ್ಟಕಾ ? ವಿಶ್ವದಾಭಿರಾಮ ವಿನುರ ವೇಮ.

ಪರರ ಮೇಲು ಕಂಡು, ಹಲವು ಕಾಗೆಯಂತೆ,
ವ್ಯರ್ಥ ಮಾತನಾಡುವವನು ಅಧಮ.
ಅಂತಿರುವನ ಬದುಕು ಅದು ಮಣ್ಣಿಗೆ ಸಮವು,
ವಿಶ್ವದಾಭಿರಾಮ ವಿನುರ ವೇಮ.

ಕೆಲವರು ಭಾಗ್ಯವಂತರಾಗಿರುತ್ತಾರೆ. ಅವರಿಗೆ ಸೌಖ್ಯ–ಸಮೃದ್ಧಿ ಇರುತ್ತದೆ. ಅವರು ಧರ್ಮಿಷ್ಠರೂ ಆಗಿರಬಹುದು. ಇತ್ತ ಒಬ್ಬ ಅದೃಷ್ಟಹೀನ ಉಂಟು. ಅವನು ತನ್ನ ಪೂರ್ವಕರ್ಮದಿಂದ ಎಲ್ಲ ಕಳೆದುಕೊಂಡಿದ್ದಾನೆ. ಅವನಿಗೆ ಭೌತಿಕ ಸಂಪತ್ತೂ ಸೊನ್ನೆ. ಅಧ್ಯಾತ್ಮಿಕ ಸಂಪತ್ತೂ ಸೊನ್ನೆ. ಇಂಥವನು 'ಚಿಲ್ಲರೆ' ಮನಸ್ಸು ಹೊಂದಿರುತ್ತಾನೆ. ಅರ್ಥಾತ್ ಅಲ್ಪ ಲಕ್ಷ್ಯವಿರಿಸಿಕೊಂಡ ಅವನ ಸಂಸ್ಕಾರಗಳು ಅವನನ್ನು ಭೂಮುದತ್ತ ಹೋಗಗೊಡುವುದಿಲ್ಲ. ತನಗೇ ಆಗಲಿ, ಸಮಾಜಕ್ಕೇ ಆಗಲಿ ಅನ್ಯಾಯವಾಗದಂತೆ ನಡೆಯುವ ಭಾಗ್ಯವಂತನನ್ನು ಕಂಡು, ಇವನು ಕರುಬುತ್ತಾನೆ. ಅಲ್ಲಸಲ್ಲದ ಮಾತಿಗಿಳಿಯುತ್ತಾನೆ. ಮಾತ್ಸರ್ಯ ಭಾವ ಹೊಂದಿ, ಏನೇನೋ ಗಳಪುತ್ತಾನೆ. ಮನಸ್ಸು ಸೂಕ್ಷ್ಮವಾಗದೆ, ಭೂಮವಾಗದೆ, ಸ್ಥೂಲವಾಗಿ, ಸಂಕುಚಿತವಾಗಿ, ಅಲ್ಪವಾಗಿರುವುದನ್ನು ಚೇತನವೇ ಇಲ್ಲದ ಜಡಕ್ಕೆ ಹೋಲಿಸುತ್ತಾರೆ. ಜಡ ಪದಾರ್ಥಗಳಲ್ಲಿ ಮಣ್ಣು ಸಾಮಾನ್ಯವಾದುದು. ಯಾವನು ಮನಸ್ಸಿನಲ್ಲಿ ಪರರ ಮೇಲು ಕಂಡು ಕಾಗೆಯಂತೆ ಯಾವ ಪ್ರಯೋಜನವಿಲ್ಲದೆ ಗಳಪುವನೋ ಅವನು ನೀಚಮಟ್ಟದವನು, ಮಣ್ಣಿಗೆ ಸಮನಾದ ಜಡ–ಪ್ರವೃತ್ತಿಯ ಬಾಳಿನವನು ಆತ.

ಹೋಲಿಸಿ ನೋಡಿರಿ :

" ಈಶಾ ವಾಸ್ಯವಿದಂ ಸರ್ವಂ
ಯತ್ಕಿಂಚ ಜಗತ್ಯಾಂ ಜಗತ್,
ತ್ಯೇನ ತ್ಯಕ್ತೇನ ಬುಂಜೀಥಾ
ಮಾಗೃಧಃ ಕಸ್ಯ ಸ್ವಿದ್ಧನಮ್ ||

ಈ ಜಗತ್ತಿನಲ್ಲಿ ಚಲನಾತ್ಮಕವಾದದ್ದು ಏನೇನಿದೆಯೋ ಇದೆಲ್ಲವೂ ಈಶನಿಂದ ಆಚ್ಛಾದಿತವಾಗಿರತಕ್ಕದ್ದು. ಆದರೆ ತ್ಯಾಗದಿಂದ ಕಾಪಾಡಿಕೋ. ಯಾರ ಧನವನ್ನೂ ಬಯಸಬೇಡ.

– ಈಶಾವಾಸ್ಯೋಪನಿಷತ್ ೧–೧

೯೮೧

ಚಿನ್ನನಾಟನುಂಡಿ ಚೇಸಿನಕರ್ಮಂಬು, ಪಿನ್ನಪೆದ್ದಲಕುನು ಬೆರಿಗಿವಚ್ಚು,
ಮುಂಟ ವುಂಟ ನಡುಮ ಮತಿನಿಲ್ಪಿಚೂಡುಮು. ವಿಶ್ವದಾಭಿರಾಮ ವಿನುರ ವೇಮ.

ಮಗುವಾಗಿರುವಾಗ ಮಾಡಿದ ಕರ್ಮಗಳು,
ಬಾಲ ಮುದಿಯರನ್ನು ಬಾಧಿಸುವವು.
ಮಹಿಯಾಗಸ ನಡುನೆ ಮತಿಯ ನಿಲಿಸಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಎಳೆಯ ವಯಸ್ಸಿನಲ್ಲಿ ಮಾಡಿದ ಕರ್ಮಗಳು ಸಂಸ್ಕಾರವಾಗಿ ಬೀಜರೂಪದಲ್ಲಿ ಉಳಿಯುತ್ತವೆ. ಸಂಸ್ಕಾರ ಎಂದರೇನು? ನೀವು ಚಿಕ್ಕವರಿರುವಾಗ ಬೀಡಿ ಸೇದುವ ಚಟ ಪ್ರಾರಂಭಿಸಿದಿರಿ, ಎಂದು ತಿಳಿಯಿರಿ. ಬೀಡಿ ಸೇದುವುದರಿಂದೇಳುವ ಮಾನಸಿಕ ತರಂಗಗಳು ಮನಸಿನಲ್ಲಿ ಪ್ರಚ್ಛನ್ನ ಶಕ್ತಿಯಾಗಿ ಉಳಿಯುತ್ತವೆ. ಆಲದ ಮರವನ್ನು ಉಂಟುಮಾಡುವ ಪ್ರಚ್ಛನ್ನ ಶಕ್ತಿ ಆಲದ ಬೀಜದಲ್ಲಿ ಇರುವಂತೆ, ಮನುಷ್ಯಾಕೃತಿ ಉಂಟು ಮಾಡುವ ಶಕ್ತಿ ಪುರುಷನ ಬಿಂದುವಿನಲ್ಲಿ ಇರುವಂತೆ, ಈ ಪ್ರಚ್ಛನ್ನ ಶಕ್ತಿಯೇ ವಾಸನಾ ಬೀಜ, ಇಲ್ಲವೆ ಸಂಸ್ಕಾರವೆನಿಸುವುದು. ಅನುಕೂಲ ಸಮಯದಲ್ಲಿ ವ್ಯಕ್ತವಾಗುವುದು. ಭೂಮಿ ಮತ್ತು ಆಕಾಶಗಳ ನಡುವೆ ಏನೇನು ಇರುವುದೋ ಅದು ಸಂಸ್ಕಾರ ಉಂಟು ಮಾಡುವಂಥದೇ ಆಗಿದೆ. ಭೌತಿಕವಾದುದೆಲ್ಲ ಭೋಗಪರವಾಗಿದೆ. ಯಾವುದು ಭೋಗಪರವಾಗಿದೆಯೋ ಅದನ್ನು ಕುರಿತಾದ ಕರ್ಮ ಫಲ ನೀಡದೆ ಬಿಡದು. ಬಾಲರಾಗಿ ಮಾಡಿದ ಕರ್ಮ ಬಾಲ್ಯದಲ್ಲಿಯೂ ಬಾಧಿಸುತ್ತದೆ. ಮುದಿತನದಲ್ಲಿಯೂ ಬಾಧಿಸುತ್ತದೆ. ಪಂಚ ಭೂತ ಸಂಬಂಧೀ ಕರ್ಮವೆಲ್ಲ ಇದೇ ಬಗೆಯದು. ಮಹಿಯಾಗ ಮಧ್ಯೆ ಮತಿ ನಿಲ್ಲಿಸಿ ಇದನ್ನು ತಿಳಿದು ಖಚಿತಪಡಿಸಿಕೊಂಡರೆ, ನಿರಾಸಕ್ತಿ, ಭಕ್ತಿ ಉಂಟಾಗುವುದು.

೯೮೨

ಪುನುಗುಪಿಲ್ಲಿಕೇಲ ಪುಟ್ಟಂಚೆ ವಾಸನಲ್, ? ದಾನಿಮಹಿಮಲೇಮಿ ಧರಣಿಲೋನ,
ಬ್ರಹ್ಮಚೇತಲನ್ನಿ ಪಾಡ್ಮೆನ ಚೇತಲು, ವಿಶ್ವದಾಭಿರಾಮ ವಿನುರ ವೇಮ.

ಪುನುಗು ಬೆಕ್ಕಿಗೇಕೆ ಹುಟ್ಟಿಸಿದ ವಾಸನೆ ?
ಅವನ ಮಹಿಮೆಯೆಷ್ಟು; ಅವನಿಯಲ್ಲಿ ?
ಬ್ರಹ್ಮ ಚೇಷ್ಟೆಯೆಲ್ಲ ಹಾಳು ಕಾರ್ಯವಷ್ಟೆ,
ವಿಶ್ವದಾಭಿರಾಮ ಕೇಳು ವೇಮ.

ಅಡವಿಯಲ್ಲಿರುವ ಬೆಕ್ಕಿನ ಜಾತಿಗಳಲ್ಲಿ 'ಪುನುಗು ಬೆಕ್ಕಿನ' ಜಾತಿಯೂ ಒಂದು. ಈ ಜಾತಿಯ ಬೆಕ್ಕುಗಳ ಮೈಯಿಂದ ಬರುವ ಬೆವರಿನಿಂದ ಸುಗಂಧ ಸೂಸುತ್ತಿರುತ್ತದೆ.

ಈ ಬೆಕ್ಕಿಗೇಕೆ ವಾಸನೆ ಹುಟ್ಟಿಸಿದ ಬ್ರಹ್ಮ ? ಸಾಕು ಪ್ರಾಣಿಯಾದ ಮನೆಬೆಕ್ಕು ಮಾಡಿದ ತಪ್ಪೇನು ? ಪುನುಗು ಬೆಕ್ಕಿಗೆ ಉಂಟಾದ ವಾಸನೆಯು ಬ್ರಹ್ಮನ ಅಸಂಖ್ಯ ಮಹಿಮೆಗಳಲ್ಲೊಂದು. ಅವನಿಯಲ್ಲಿ ಅವನ ಮಹಿಮೆಗಳೆಷ್ಟೋ ಇವೆ. ಇದೆಲ್ಲ ಪ್ರಯೋಜನ ದೃಷ್ಟಿಯಿಂದ ಆಗಿದೆಯೇ ? ಹಾಗಿದ್ದರೆ, ಮನೆ ಬೆಕ್ಕಿಗೆ ಸುಗಂಧ ಅಂಟಿಸಬಹುದಿತ್ತು.

ನಾವು ಎಷ್ಟೋ ಮಾತುಗಳನ್ನು ಚೇಷ್ಟೆಗೆಂದು ಆಡುತ್ತೇವೆ. ಯಾವ ಪ್ರಯೋಜನವೂ ಅವುಗಳ ಉದ್ದೇಶವಲ್ಲ. ಆ ಕಾರ್ಯವೆಲ್ಲ ಹಾಳು ಕೆಲಸವಷ್ಟೇ. ಬ್ರಹ್ಮ ಚೇಷ್ಟೆಯಾಗಿ, ಹಾಳು ಕೆಲಸವಾಗಿ, ಬ್ರಹ್ಮನ ಮಹಿಮೆ ಅವನಿಯಲ್ಲಿ ಉಂಟಾಗುವುದು.

ಬ್ರಹ್ಮಸೂತ್ರದಲ್ಲಿ ' ಲೋಕವತ್ ತು ಲೀಲಾ ಕೈವಲ್ಯಮ್ " [ಆದರೆ, (ಬ್ರಹ್ಮ ಸೃಷ್ಟಿಯು) ಲೋಕದ ಹಾಗೆ ಲೀಲೆಯು ಮಾತ್ರ] ಎಂದು ಸೂತ್ರಕಾರ ಬಾದರಾಯಣ ಹೇಳುತ್ತಾರೆ.

ಲೀಲೆಯನ್ನು ಲೌಕಿಕ ದೃಷ್ಟಿಯಿಂದ, ನೋಡಿದಾಗ ಅದೆಲ್ಲ ಹಾಳು ಕೆಲಸವೆನಿಸುವುದು.

೯೬೩

ನೇನನು ಪಚನಂಬು ನೀವನಗಾವಚ್ಚು, ನೀವು ನೇನನಬಡು ನಿಷ್ಠೆಲಿಯೆ,
ನೇನು ನೀವೆ ನೀವೆ ನೇನನವಚ್ಚುರಾ, ವಿಶ್ವದಾಭಿರಾಮ ವಿನುರ ವೇಮ.

ನಾನು ಎನ್ನುತಿಹುದು; ನೀನು ಎನ್ನಬಹುದು;
ನೀನು ನಾನು ಎನುವ ನಿಷ್ಠೆಯರಿತು,
ನಾನು ನೀನೆ ನೀನೆ ನಾನು ಎನ್ನಬಹುದು.
ವಿಶ್ವದಾಭಿರಾಮ-ಕೇಳು ವೇಮ.

ಶ್ವಾಸ ಉಚ್ಛ್ವಾಸದ ಕ್ರಮವು ಸರಿಯಾಗಿ ಸಾಗಿದಾಗ ' ಸೋಽಹಂ ' ಎಂಬ ನಾದವು ನಾಭಿ (ಮಣಿಪುರ ಚಕ್ರ) ಹೃದಯ (ಅನಾಹತ ಚಕ್ರ) ಗಳ ಮಧ್ಯಭಾಗದಿಂದ ಹೊರಟಂತೆ ಭಾಸವಾಗುವುದೆಂದು ಯೋಗಸಾಧಕರ ಅನುಭವವಾಣಿ. ಸೋಽಹಂ ಎಂದರೇನು ? ' ಸಃ ' ಯಾವನೋ ಅವನೇ ' ಅಹಂ. " ' ತತ್ ' ಎಂಬ ಪದವನ್ನು ' ಸ " ಎಂಬುದಕ್ಕೆ ಪರ್ಯಾಯವಾಗಿ ಬಳಸುತ್ತಾರೆ. ' ಅಹಂ ' ಎಂಬುದಕ್ಕೆ ಪರ್ಯಾಯವಾಗಿ ತ್ವಮ್ ಬಳಸುತ್ತಾರೆ. ಸೋಽಹಂ, ತತ್ತ್ವಮಸಿ ಎಂಬೀ ಪ್ರಮಾಣವಾಕ್ಯಗಳಲ್ಲಿ ' ನಾನು ' ಎನ್ನುವ ' ಅಹಂ " ತತ್ತ್ವವೇ ' ನೀನು ' ಅರ್ಥಾತ್ ಪುರುಷೋತ್ತಮನೆಂದು ತಿಳಿದುಕೊಳ್ಳಬಹುದು. ನೀನು-ನಾನು ಎಂಬ ನಿಷ್ಠೆಯರಿತುಕೊಂಡ ಮೇಲೆ, ' ನಾನು-ನೀನೇ ' ' ನೀನು-ನಾನೇ " ಎನ್ನಬಹುದು. ' ನಿಷ್ಠೆ " ಎಂದರೇನು ?

ಎಲ್ಲವೂ ಆತ್ಮಮಯ ಎಂದು ಭೂಮವನ್ನು ಅರಿಯಬೇಕು. ಭೂಮದಲ್ಲಿ ಸುಖವಿರುವುದೇ ಹೊರತು, ಅಲ್ಪದಲ್ಲಿ ಇಲ್ಲ. ಸುಖ ಹೊಂದುವವನು ಮಾತ್ರ ಸಾಧನ ಮಾಡುತ್ತಾನೆ. ಯಾವಾಗ ಸಾಧನೆ ಮಾಡುವನೋ ಆವಾಗ ನಿಷ್ಠೆ ಹೊಂದುತ್ತಾನೆ. ನಿಷ್ಠೆ ಹೊಂದಿದಾಗ ಶ್ರದ್ಧೆ ತಾಳುತ್ತಾನೆ. ಶ್ರದ್ಧೆಯುಳ್ಳವನು ಮಾತ್ರ ಮನನ ಮಾಡುತ್ತಾನೆ. ಮನನ ಮಾಡದೆ ತಿಳಿಯಲಾರನು, ತಿಳಿದವನು ಮಾತ್ರ ಸತ್ಯ ಹೇಳಬಲ್ಲನು. ' ನಾನೇ ನೀನು "; ' ನೀನೇ ನಾನು " ಎಂದು ತಿಳಿದ ಮನೀಷಿ ಹೇಳಬಲ್ಲನು.

(ಹೋಲಿಸಿ ನೋಡಿರಿ :-

ಎನ್ನಲ್ಲಿ ನಾನು ನಿಜವಾಗಿ ನಿಮ್ಮನರಿದೆನೆಂದರೆ, ಅದು ನಿಮ್ಮ ಮತಕ್ಕೆ ಒಪ್ಪದೇ ?
ಎನ್ನ ನಾನು ಮರೆದು, ನಿಮ್ಮನರಿದಡೆ, ಅದು ನಿಮ್ಮ ರೂಪೆಂಬೆ.
ಎನ್ನ ನಿನ್ನೊಳು ಮರೆದಲ್ಲಿ ಕನ್ನಡಿಯೊಳಗಣ ಪ್ರತಿಬಿಂಬದಂತೆ.
ಭಿನ್ನವಿಲ್ಲದಿರ್ದೆನು ಕಾಣಾ ಗುಹೇಶ್ವರಾ || —ಅಲ್ಲಮ ಪ್ರಭು.)

೯೬೪

ಚಿತ್ರದೀಪ ಮುವಲೆ ಜಿಂತನು ದಿಗದ್ರೊಕ್ಕಿ, ಮಿತ್ರಮುಗನು ಮನಸು ಮೆಲಕು ವೆರಿಗಿ.
ಶತ್ರುಗುಣಮುಲೆಲ್ಲ ಸಾಧಿಂಚುಟಯೆ ಮುಕ್ತಿ, ವಿಶ್ವದಾಭಿರಾಮ ವಿನುರ ವೇಮ.

ಚಿತ್ರ ದೀಪದಂತೆ ಚಿಂತೆಯಡಿಗೆ ಮೆಟ್ಟಿ,
ಮಿತ್ರನಾಗು ಮನದ ಮಲವಡಗಿಸಿ,
ಶತ್ರುಗುಣಗಳೆಲ್ಲ ಸಾಧಿಸಿದೊಡೆ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಅಂದವಾಗಿ ರೇಖಿಸಿದ ತೈಲವರ್ಣದ ದೀಪದ ಚಿತ್ರವನ್ನು ಕಂಡಾಗ, ನಿಜವಾಗಿ ಅಲ್ಲಿ ದೀಪವಿರಬಹುದೇನೋ ಎನ್ನಿಸುತ್ತದೆ. ಎಷ್ಟೋ ಜನ ಆ ಚಿತ್ರದ ಹಿಂದೆ ದೀಪವಿಟ್ಟಿರುವರೇನೋ ಎಂದು ಇಣಿಕಿ ನೋಡುತ್ತಾರೆ ಆದರೆ ದೀಪವೆಲ್ಲಿ ಬಂತು ? ಚಿತ್ರದೀಪವು, ದೀಪದ ಭಾವ ಮೂಡಿಸಬಹುದಾದರೂ, ದೀಪದ ಅನುಭವ ನೀಡದು. ಅದೇ ರೀತಿ, ಸುಖದ ಚಿಂತೆಯಿಂದ ಭಾವ ಉಂಟಾದಂತೆ ಎನಿಸಬಹುದಲ್ಲದೆ, ನಿಜ ಸುಖದ ಅನುಭವವಾಗದು. ಇಂದ್ರಿಯ-ವಿಷಯಗಳನ್ನು ಪಡೆಯುವುದರಿಂದ ಸುಖ ಲಭ್ಯವೆಂದು ಪೂರೈಸಲಾರದ ಚಿಂತೆಯ ಬೆನ್ನು ಹತ್ತುವೆವೋ, ಅದುವೇ ದುಃಖದ ಬೀಜವಾಗುತ್ತದೆ.

' ಸ್ತ್ರೀಯರನ್ನಪಾನಾದಿ ವಿಚಿತ್ರ ಭೋಗೈಃ " ಅಂದರೆ, ಹೆಣ್ಣು, ಅನ್ನಾಹಾರ, ಪಾನೀಯ ಸೇವನೆಯಿಂದ ಸುಖ ದೊರೆಯುವುದೆಂದು ಸಾಗುತ್ತಾನೆ. ಈ ಸಾಧನಗಳು ದೊರೆತಾಗ ಕ್ಷಣ ಕಾಲ ಸುಖ ದೊರೆತಂತೆ ಭಾಸವಾಗುವುದು. ಆದರೆ ಮುಂದೆ ಕೊನೆಗೊಮ್ಮೆ ಅವು ದೊರೆಯದಾಗ, ಪೂರ್ವದ ಸುಖವು ನಾಶವಾಗುವುದಷ್ಟೇ ಅಲ್ಲದೆ ಹೆಚ್ಚು ಹೆಚ್ಚಾಗಿ ದುಃಖ ಆವರಿಸುತ್ತದೆ.

ಮನಸ್ಸಿನ ಚಿತ್ತ-ವೃತ್ತಿಗಳೇ ಮನಸ್ಸಿನ ಮಲವಿದ್ದಂತೆ. ಕನ್ನಡಿಗೆ ತಗುಲಿದ ಧೂಳಿಯಂತೆ. ಚಿಂತೆಯನ್ನು ದಾಟಿ, ಮನದ ಮಲವನ್ನು ತೊಡೆಯಬೇಕು. ನಿಮಗೆ

ಯಾರಾದರೂ ಕೇಡು ಬಗೆದರೆ, ನಿಂದಿಸಿದರೆ, ಆ ನಿಂದೆಗೆ ನಿನ್ನಲ್ಲಿರುವ ದೋಷವೇ ಕಾರಣ ವೆಂದು ಬಗೆ. ಹಾಗೆ ಮಾಡಿ ನಿಂದಕರು ನಿನ್ನ ದೋಷ ತೋರಿಸುವ ನೀತಿ ನಿರ್ದೇಶಕ ರೆಂದೂ, ಮಿತ್ರರೆಂದೂ ತಿಳಿ. ಶತ್ರು ಗುಣ ಕಡಿದುಹಾಕು; ನಿಗ್ರಹಿಸು. ಆಗ ಮಾತ್ರ ಮನಸ್ಸು ಬಿಡುಗಡೆ ಹೊಂದುವದು. ಮುಕ್ತಿಯ ಸ್ಥಿತಿ ತಲುಪುವದು.

೯೮೫

ಅಚಲತತ್ತ್ವಮನಗ ನನುಭವಗಮ್ಯಂಬು, ಚೂಚಿ ಚೆಪ್ಪರಾದು ಸೂಕ್ಷ್ಮಮುದಿಯೆ,
ಮದಿಕಿ ದೋಚುಗಾನಿ ಮರ್ಮಮೆನ್ನಗರಾದು, ವಿಶ್ವದಾಭಿರಾಮ ವಿನುರ ವೇಮ.

ಅಚಲ ತತ್ತ್ವವೆಲ್ಲ ಅನುಭವ ವೇದ್ಯವದು.
ಸಮೀಕ್ಷಿಸಿ ಹೇಳರು; ಸೂಕ್ಷ್ಮಮತಿಯ.
ಮನಕ್ಕೆ ತೋಚುವುದದು, ಮರ್ಮ ತಿಳಿಸಲೆಂತು ?
ವಿಶ್ವದಾಭಿರಾಮ ಕೇಳು ವೇಮ.

ತತ್ ಎಂದರೆ ಬ್ರಹ್ಮ; ತ್ವ ಪ್ರತ್ಯಯ ಸೇರಿಸಿದರೆ ತತ್ತ್ವ ಅರ್ಥಾತ್ ಬ್ರಹ್ಮತ್ತ ಎಂಬ ಪದವಾಗುವದು. ಈ ತತ್ ಅ-ಚಲವಾಗಿದೆ. ಅಲ್ಲಿ ಚಲನೆಯಿಲ್ಲ.

ಪಂಚ ಭೂತಗಳಿಂದಾದ 'ಜಗತ್' ಬೇರೊಂದು ರೀತಿ. 'ಗಚ್ಛತಿ ಇತಿ ಜಗತ್.' ಪಂಚಭೂತಗಳು ಪರಮ ಇಂದ್ರಿಯಗಳು ಸಂಚರಿಸುತಿರಲು ಜಗತ್ ಉಂಟು. ಸಂಚರಿಸದಿರಲು ಜಗವೆಂತಾಗುವದು ?

ನೀವು ಕಣ್ಣು ಮುಚ್ಚಿರಿ. ಮೂಗಿನ ತುದಿಯನ್ನೇ ನೋಡಿರಿ. ಭೂಮಿಯ ಮೇಲೆ ಕುಳಿತು ಅದಕ್ಕಿಂತ ಸ್ವಲ್ಪ ಮೇಲಿರುವೆನೆಂದು ಗ್ರಹಿಸಿ ಭೂತ ಶುದ್ಧಿ ಹೊಂದಿರಿ. ಈಗ ಒಂದೊಂದೇ ಇಂದ್ರಿಯವನ್ನು ಬಹಿರ್ಮುಖತೆಯಿಂದ ಅಂತರ್ಮುಖಗೊಳಿಸುವ ಪ್ರಯತ್ನ ಮಾಡಿರಿ. ವರ್ಷಕಾಲ ಕಳೆಯಲಿ; ನಿಮ್ಮ ಮನಸ್ಸು ಸೂಕ್ಷ್ಮವಾಗುತ್ತದೆ. ಆಕಾಶಕ್ಕಿಂತ ಸೂಕ್ಷ್ಮವಾದುದನ್ನು ಗ್ರಹಿಸಲು ಅದು ಕರಣವಾಗಬಲ್ಲದು. ಆದರೆ ಈಗ ಮಾನವ ಮನಸ್ಸು ರೂಢಿಯಂತೆ ಇಂದ್ರಿಯ ಮೂಲಕ ಕಾರ್ಯನಿರ್ವಹಿಸುವದನ್ನು ನಿಲ್ಲಿಸುತ್ತದೆ. ಆಗ ಜಗತ್ ಇಲ್ಲ. 'ಕಾರಣ ಮನಸ್ಸು' ತಾನೇ ತಾನಾಗಿ ಈ 'ಕಾರ್ಯ ಮನಸ್ಸಿ'ನ ಮೇಲೆ ಪ್ರತಿಬಿಂಬ ರೂಪವಾಗಿ ಗೋಚರಿಸುವದು. ಆಗ ಮನಸ್ಸಿಗೆ ಏನು ತೋಚುವದೋ ಅದು 'ಅಚಲ" ವಾಗಿರುತ್ತದೆ. ಅಲ್ಲಿ ಶಬ್ದಾದಿ ತನ್ಮಾತ್ರೆಗಳಿರುವದಿಲ್ಲ. ಅದು ತಾನೇ ತಾನಾಗಿ ಎಲ್ಲೆಡೆಗೆ ಇರುವಂತೆ, ಸರ್ವಜ್ಞವಾಗಿ, ಸರ್ವ ಭೂತಾಂತರಾತ್ಮವಾಗಿ, ಅವರ್ಣವಾಗಿ, ರೂಪನೇನೂ ಇರದ ರೀತಿಯಲ್ಲಿ ಅನುಭವವೇದ್ಯವಾಗುವದು. ಆದರೆ ಅದನ್ನು ಸಂಕುಚಿತ ಶಬ್ದಗಳಲ್ಲಿ ಬಣ್ಣಿಸುವದೆಂತು ? ಅದನ್ನು ತಿಳಿಸುವ ಶಬ್ದಗಳು ಭಾಷೆಯ ಅಳವಿನಲ್ಲಿಲ್ಲ.

೯೮೬

ಪ್ರಾಣುಲಂದು ಶಿವುನಿ ಭಾವಿಂಪನೇರಕ, ಯೋಗಮಂದುರೇಲ ? ಜೋಗುಲಾರ !
ಯೋಗಮಂದುಗಲದೆ ? ಭೋಗಮಂದುನ್ನಟ್ಲು, ವಿಶ್ವದಾಭಿರಾಮ ವಿನುರ ವೇಮ.

ಪ್ರಾಣದಲ್ಲಿ ಶಿವನ ಭಾವಿಸಲು ಅರಿಯದೆ,
ಯೋಗವೆನುವುದೇಕೆ ? ಜೋಗಿಗಳೇ !
ಯೋಗದಲ್ಲಿ ಉಂಟೆ ? ಭೋಗದೊಳಿಹ ರೀತಿ,
ವಿಶ್ವದಾಭಿರಾಮ ಕೇಳು ವೇಮ

ಯಾವುದನ್ನು ಬ್ರಹ್ಮವೆಂದು ಉಪಾಸಿಸಬೇಕು ಎಂಬ ನಾರದನ ಪ್ರಶ್ನೆ ಮಾಲೆಗೆ ಛಾಂದೋಗ್ಯ ಉಪನಿಷತ್ತಿನಲ್ಲಿ ಸನತ್ಕುಮಾರನು ನೀಡುವ ಉತ್ತರದ ಒಂದಂಶ ಹೀಗೆ:

" ಪ್ರಾಣವೇ ಆಶೆಗಿಂತ ಅಧಿಕವಾದುದು. ಹೇಗೆ ಆರೆ ಕಾಲುಗಳು ಚಕ್ರನಾಭಿ ಯಲ್ಲಿ ಸೇರಿಕೊಂಡಿರುವುವೋ ಹಾಗೆಯೇ ಈ ಪ್ರಾಣದಲ್ಲಿ ಎಲ್ಲವೂ ಸೇರಿಕೊಂಡಿರುತ್ತದೆ. ಪ್ರಾಣವು ಪ್ರಾಣದಿಂದಲೇ ಹೋಗುತ್ತದೆ. ಪ್ರಾಣವು ಪ್ರಾಣವನ್ನು ಕೂಡುತ್ತದೆ. ಪ್ರಾಣಕ್ಕೆ ಕೊಡುತ್ತದೆ. ಪ್ರಾಣವೇ ತಂದೆ. ಪ್ರಾಣವೇ ತಾಯಿ. ಪ್ರಾಣವೇ ಆಚಾರ್ಯ. ಪ್ರಾಣವೇ ಬ್ರಾಹ್ಮಣ :

ಛಾಂದೋಗ್ಯ ೭–೧೫–೧

" ಯಾವನು ಹೀಗೆ ನೋಡುತ್ತಾನೆಯೋ, ಮನನ ಮಾಡುತ್ತಾನೆಯೋ, ಅರಿಯುತ್ತಾನೆಯೋ, ಅವನಿಗೆ ಆತ್ಮನಿಂದಲೇ ಪ್ರಾಣವು ಉಂಟಾಗುತ್ತದೆ. ಆತ್ಮನಿಂದಲೇ ಆಶೆಯುಂಟಾಗುತ್ತದೆ, ಆತ್ಮನಿಂದಲೇ ಸ್ಮೃತಿಯುಂಟಾಗುತ್ತದೆ. ಹೀಗೆ ಆಕಾಶ, ತೇಜಸ್ಸು, ನೀರು, ಆವಿರ್ಭಾವ ತಿರೋಭಾವಗಳು, ಅನ್ನ, ಬಲ, ವಿಜ್ಞಾನ, ಧ್ಯಾನ, ಚಿತ್ತ, ಸಂಕಲ್ಪ, ಮನಸ್ಸು, ವಾಕ್ಕು, ನಾಮ, ಮಂತ್ರಗಳು, ಕರ್ಮಗಳು ಇವೆಲ್ಲವೂ ಆತ್ಮನಿಂದಲೇ ಉಂಟಾಗುತ್ತವೆ. "

ಛಾಂದೋಗ್ಯ ೭–೨೫–೧

ಜೀವನವಾದ ವ್ಯಕ್ತರೂಪವೇ ಪ್ರಾಣ. ಎಲ್ಲಿ ಎಲ್ಲಿ ಪ್ರಾಣ ಉಂಟೋ ಅಲ್ಲಿ ಅಲ್ಲಿ ಬ್ರಹ್ಮ ಉಂಟು. ಪ್ರಾಣವು ಅಣುರೇಣು ತಿಲಕಾಷ್ಟದಲ್ಲಿಯೂ ಉಂಟು. ಭೌತ ವಿಜ್ಞಾನ ಅಣು–ವಿಚ್ಛೇದನದಿಂದ ಅನಂತ ಶಕ್ತಿ ವ್ಯಕ್ತಿಗೊಳ್ಳುವುದನ್ನು ಸಿದ್ಧಗೊಳಿಸಿದೆ. ಇಂಥ ಸರ್ವವ್ಯಾಪಿ ಪ್ರಾಣದಲ್ಲಿ ಮೊದಲು ಶಿವನ ಭಾವ ತಾಳಲಾರದವರು ಯೋಗಿಗಳೆಂತು ? ಅವರು ಜೋಗಪ್ಪನಂತೆ ವೇಷಧಾರಿಗಳಾಗಬಹುದು. ಭೋಗದಲ್ಲಿ ಅಲ್ಪ–ವಸ್ತುವಿನ ಸಂಪರ್ಕ ಉಂಟು. ಆದರೆ ಯೋಗದಲ್ಲಿ ಭೂಮವಾದ ಪ್ರಾಣಭಾವ ಹೊಂದಬೇಕು.

೯೮೭

ನಾಸಿಕಾಗ್ರಮಂದು ನಯಮುಗಾ ಗುರಿನಿಲ್ಪಿ, ವಾಸಿಗಾನು ಜೂಡ ವಶ್ಯಮುಗುನು,
ಕಾಶಿಕಂಚು ಲಗನ ಗಡಗಂಡ್ಲು ಪಡನೇಲ, ವಿಶ್ವದಾಭಿರಾಮ ವಿನುರ ವೇಮ.

ನಾಸಿಕಾಗ್ರದಲ್ಲಿ ನಯದೊಳು ಗುರಿನಿಲಿಸಿ,
ಸರಿಗಂಡು ನೋಡಲು ಸೇರುತಿಹುದು.
ಕಾಶಿ ಕಂಚಿ ನೋಡೆ, ಕಣ್ಣು ದಣಿಸಲೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಯೋಗ ಸಾಧಕನಿಗೆ ಭೂತ ಶುದ್ಧಿ, ಆಸನಶುದ್ಧಿಗಳನ್ನು ಕಲಿಸಿ, ಮೂಗಿನ ತುದಿಯ ಮೇಲೆ ಕಾಲಿನ ಹೆಬ್ಬೆರಳಿನಿಂದ ಹೊರಟ ಕಲ್ಪಿತ ಜ್ಯೋತಿಯು, ಮೂಲಾಧಾರ, ಸ್ವಾದಿಷ್ಠ ಮಣಿಪುರ, ಅನಾಹತ, ವಿಶುದ್ಧಿ ಚಕ್ರಗಳೆಂದು ಬಣ್ಣಿತವಾದ ನರ-ಗ್ರಂಥಿಗಳಲ್ಲಿ ಹಾಯ್ದು, ಹುಬ್ಬುಗಳೆರಡರ ಮಧ್ಯೆ, ಶರೀರದ ಮಧ್ಯೆ, ಆಜ್ಞಾ ಚಕ್ರವೆಂದು ಯೋಗಭಾಷೆಯಲ್ಲಿ ಕರೆ, ಯಲಾಗುವ ನರಗಳ ಗ್ರಂಥಿಯಲ್ಲಿ ನೆಲೆಸುತ್ತದೆ. ಇದಕ್ಕೆ ತ್ರಿಕೂಟವೆಂದೂ ಕರೆಯುತ್ತಾರೆ. ಇಲ್ಲಿಂದ ಜ್ಯೋತಿ ಬಿಂಬವು ಮೂಗಿನ ತುದಿಗೆ ಹಾರಿತು ಎಂದು ಭಾವಿಸಿ, ಇತರ ದಿಕ್ಕು-ದೇಶಗಳಿಂದ ಚಿತ್ತವೃತ್ತಿಗಳು ಮನಸ್ಸನ್ನು ಪ್ರವೇಶಿಸದಂತೆ ಚಿತ್ತನಿಗ್ರಹಿಸಬೇಕು. ಅನಂತರ ಉಸಿರಾಟ ಪ್ರಾರಂಭಿಸಬೇಕು. 'ಸೋಹಂ' ಮಂತ್ರವನ್ನೋ ಬೇರಾವುದೇ ದ್ವಿ-ಅಕ್ಷರ, ಪಂಚಾಕ್ಷರ ಷಡಕ್ಷರ ಇಲ್ಲವೆ ದ್ವಾದಶ ಅಕ್ಷರಗಳನ್ನುಳ್ಳ ಮಂತ್ರವನ್ನೂ, ಉಸಿರಾಟದೊಂದಿಗೆ ಮೇಳವಿಸಬೇಕು. ಹೀಗೆ ಉಸಿರಾಟದಿಂದ ಪ್ರಾಣ ನಿಯಂತ್ರಿಸಿ, ಮನಸ್ಸನ್ನು ಪ್ರಾಣದಲ್ಲಿ ನಿಲ್ಲಿಸಿದನೆ, ಬ್ರಹ್ಮ ಚಿತ್ತವೇ ಮನಸ್ಸಿನ ಮೇಲೆ ಪ್ರತಿಬಿಂಬಿಸುವುದು. ಈಗ ಮನಸ್ಸಿಗೆ ಗೋಚರಿಸುವ ಭೂಮವಾದ ಆತ್ಮ ಕಂಡು ಆನಂದಿಸಬೇಕು; ದಿವ್ಯ ಚಕ್ಷುವಿನಿಂದ. ಇದನ್ನು ತೊರೆದು, ಕಾಶಿ ಕಂಚಿ ನೋಡಲು ಕಣ್ಣು ದಣಿಸುವ ಚಪಲವೇಕೆ?

ಹೋಲಿಸಿ ನೋಡಿರಿ:-

" ವಿದ್ವಾಂಸನು ಯೋಗವರ್ಗದಲ್ಲಿ ಯುಕ್ತಾಹಾರವಿಹಾರನಾಗಿ, ಪ್ರಾಣಗಳನ್ನು ನಿಷೇಧಿಸಿ, ಪ್ರಾಣಶಕ್ತಿಯು ಕ್ಷೀಣವಾದಾಗ ಪ್ರಾಣವಾಯುವನ್ನು ಮೂಗಿನಿಂದ ಹೊರಗೆಹಾಕಬೇಕು. ಕಟ್ಟು ಕುದುರೆಗಳನ್ನು ಕಟ್ಟಿದ ರಥವನ್ನು ಸಾರಥಿಯು ಹೇಗೆ ನಿಗ್ರಹಿಸುವನೋ, ಹಾಗೆ ಜಾಗರೂಕನಾಗಿ ಮನಸ್ಸನ್ನು ನಿಗ್ರಹಿಸಬೇಕು. "

ಶ್ವೇತಾಶ್ವತರೋಪನಿಷತ್

೯೮೮

ದೊಮ್ಮರಾಟವಾನಿ ದೊಂಬ್ಬಲಮೆಲ್ಲನು, ಬೊಟ್ಟ ಕೂಟಕೊರಕೆ ಪಟ್ಟನದುಗು,
ಅದಿಯೆ ಯೋಗಿ ಕಮರ ನಾನಂದ ಮಂದಡಾ ? ವಿಶ್ವದಾಭಿರಾಮ ವಿನುರ ವೇಮ.

ದೊಂಬರಾಟದವನ ತೋಳುಬಲವದೆಲ್ಲ
ಹೊಟ್ಟೆ ಕೂಳಿಗಾಗಿ, ಪಡುವ ಕಷ್ಟ;
ಅದುವೆ ಯೋಗಮರ ಆನಂದವೀವುದು.
ವಿಶ್ವದಾಭಿರಾಮ ಕೇಳು ವೇಮ.

ದೇಹದಲ್ಲಿಯ ನಾಡಿಗಳ ಮೇಲೆ ನಿಯಂತ್ರಣ ಸಾಧಿಸಿ, ಹಲವಾರು ಶಕ್ತಿ-ಯೋಗಿ ನಾಮಧೇಯರು, ಶಕ್ತಿಪ್ರದರ್ಶನಕ್ಕೆಳೆಯುತ್ತಾರೆ. ಅವರು ಟನ್ನುಗಟ್ಟಲೆ ಭಾರ ಎತ್ತಬಲ್ಲರು. ಕೂದಲಿಗೆ ಮಣಗಟ್ಟಲೆ ಭಾರವಿರುವ ಶಿಲೆಗಳನ್ನೂ ಕಟ್ಟಿ ಎತ್ತಬಲ್ಲರು. ಎದೆಯ ಮೇಲೆ ಎಂಥಭಾರವಾ ವಸ್ತುವನ್ನು ಇರಿಸಿಕೊಳ್ಳಬಲ್ಲರು. ಕೈಯಿಂದ ಕಬ್ಬಿಣದ ಹಾರಿಯನ್ನೇ ಮಣಿಸಬಲ್ಲರು. ಮುರಿಯಬಲ್ಲರು. ಇದಕ್ಕಾಗಿ ಅವನು ನಾಡಿಗಳ ನಿಗ್ರಹ ಸಾಧಿಸುತ್ತಾನೆ. ಕೊರೆಯುವ ಛಳಿಯಲ್ಲಿ ನೀರಿನಲ್ಲಿ ನಿಲ್ಲಬಲ್ಲ. ಉರಿಯುವ ಅಗ್ನಿಯಲ್ಲಿ ಕಾಲಿಟ್ಟು ನಡೆಯಬಲ್ಲ. ಡೊಂಬರಾಟದವನ ದೈಹಿಕ ಶಕ್ತಿಯಂತೆ ಈ ಶಕ್ತಿ ಪ್ರದರ್ಶನ ಪ್ರಿಯಶಕ್ತಿಯೋಗಿಗಳ ಆಸನ ಕಸರತ್ತಿಲ್ಲ, ಹೊಟ್ಟೆ ಕೂಳಿಗಾಗಿ. ಅವನು ಬಹು ವಿಧದ ಕಷ್ಟ ಸೋಸುತ್ತಾನೆ.

ಯಾರು ನಿಜವಾದ ಯೋಗಿಗಳೋ, ಅವರು ಅದೇ ನಾಡಿ ಶುದ್ಧಿಯಿಂದ ದೇಹ ಸ್ವಾಸ್ಥ್ಯ ಕಾಪಾಡಿಕೊಂಡು, ಮೂಲಾಧಾರದಿಂದ ಏಳುವ ಕುಂಡಲಿನೀ ಶಕ್ತಿಯನ್ನು ಯೋಗ ಭಾಷೆಯ ಸುಷುಮ್ನಾ ನಾಳೆಯ ಮೂಲಕ ಮೇಲಕ್ಕೊಯ್ದು ಸಹಸ್ರಾರ ಚಕ್ರಕ್ಕೆ ತಲುಪಿಸುತ್ತಾರೆ. ಇಂಥ ಸಾಧನೆಗೆ ಅವಶ್ಯವಿರುವ ಮನೋನಿಗ್ರಹ ಸಾಧಿಸಲು, ಅನುಕೂಲ ಆಸನ ಅವಶ್ಯ. ಪ್ರಾಣ ನಿಗ್ರಹಿಸಲು ನಾಡಿಶುದ್ಧಿ ಅವಶ್ಯ ಯಾವುದು? ಡೊಂಬರಾಟದವನು ಹಣಕ್ಕಾಗಿ ನಡೆಸುವ ಆಟ-ನೋಟವೋ. ಅದುವೇ ಯೋಗಿಗೆ ಮಹಾ ಆನಂದ ನೀಡುವ ಸಾಧನವಾಗಿರುತ್ತದೆ.

೯೮೯

ತೀವಿ ಮಿಗುಲಗಲ್ಲಿ ಟಿಕ್ಕೆಮ್ಮು ಲೆತ್ತಿಂಚಿ, ಯೂಳ್ಳ ನೇಲ ಮುಕ್ತಿ ಯುತ್ತದಿಯಗು
ನಂಚಿತ್ತೋವಕೊರಕು ಮಹಿನಿ ಯತ್ನಿಂಪುಮು, ವಿಶ್ವದಾಭಿರಾಮ ವಿನುರ ವೇಮ.

ತೀವಿ ಹೆಚ್ಚು ಹೊಂದಿ ತಬರು ಶಕ್ತನೆಂದು,
ಇಂಥದೇಕೆ? ಮುಕ್ತಿ ಇಷ್ಟವಿರಲು,
ಉಚಿತ ಮಾರ್ಗ ಹಿಡಿದು, ಉರ್ವಿಯಲಿ ಯತ್ನಿಸು,
ವಿಶ್ವ ದಾಭಿರಾಮ ಕೇಳು ವೇಮ.

ಪ್ರಾಜ್ಞರು, ಜ್ಞಾನವು ವಿನಯದ ಕೊಳ್ಳದಲ್ಲಿ ಕೆಳಗಿರುವುದೆಂದು ರೂಪಕದಿಂದ ತಿಳಿಸುತ್ತಾರೆ. ಎಲ್ಲಿ ನಿಜದ ಜ್ಞಾನವಿರುವುದೋ ಅಲ್ಲಿ ಒಣ ದಂಭ, ಮದ, ಅಹಮಹಮಿಕೆ ಇರುವುದಿಲ್ಲ. ಆದರೆ ಬಾಹ್ಯಾಚಾರನಿರತರಾದವರು, ' ನಾನು ಹಣವಂತನು

ಮತ್ತು ಕುಲೀನನು. ನನಗೆ ಸಮಾನರಾದವರು ಬೇರೆ ಯಾರಿದ್ದಾರೆ? ನಾನು ಯಾಗ ಮಾಡುವೆನು, ದಾನಮಾಡುವೆನು. ಮೋದ ಪಡುವೆನು ಎಂದು ಅಜ್ಞಾನದಿಂದ ಮೋಹಿತರಾಗಿ, ಅನೇಕ ಚಿಂತೆಗಳಿಂದ ಭ್ರಾಂತರಾಗಿ, ಮೋಹಜಾಲದಿಂದ ಆವರಿಸಲ್ಪಟ್ಟವರಾಗಿ, ಕಾಮ ಭೋಗಗಳಲ್ಲಿ ಆಸಕ್ತರಾಗಿ ಅಶುಚಿಯಾದ ನರಕದಲ್ಲಿ ಬೀಳುತ್ತಾರೆ."

ಭಗವದ್ಗೀತೆ ೧೩-೧೫,೧೬.

"ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ ಇವುಗಳನ್ನು ಆಶ್ರಯಿಸಿದವರಾಗಿ, ತಮ್ಮ ಮತ್ತು ಇತರರ ದೇಹಗಳಲ್ಲಿರುವ ನನ್ನನ್ನು ದ್ವೇಷಿಸುತ್ತ, ಅಸೂಯೆಯುಳ್ಳವರಾಗಿ, ಪ್ರತಿಜನ್ಮದಲ್ಲಿಯೂ ಆಸುರೀ ಯೋನಿಯನ್ನು ಹೊಂದಿದ ಮೂಢರು ನನ್ನನ್ನು ಪಡೆಯದೆಯೇ, ಅದಕ್ಕಿಂತಲೂ ಅಧಮವಾದ ಗತಿಯನ್ನು ಹೊಂದುವರು."

—ಭಗವದ್ಗೀತೆ ೧೩-೧೯,೨೦

ಶ್ರೀ ಕೃಷ್ಣನು ಗೀತೆಯಲ್ಲಿ ಪುರುಷೋತ್ತಮ ಭಾವ ಹೊಂದಿ ಹೇಳಿದ ವಾಕ್ಯಗಳವು!

ವೇಮನಯೋಗಿ ನೀಡುವ ಉಪದೇಶ ಸೌಮ್ಯವಾಗಿದೆ: 'ಬಹಳ ಬಲಾಢ್ಯನೆಂದು ಜಬರು ತೋರುವುದೇಕೆ. ಜೀವಿಯನ್ನು ವ್ಯಕ್ತ ಪಡಿಸುವುದೇಕೆ? ಮುಕ್ತಿ ಪಡೆಯುವ ಆಕಾಂಕ್ಷೆ ಇದ್ದರೆ, ಗುಣಾತೀತನಾಗು ಒಳ್ಳೆಯ ಮಾರ್ಗ ಹಿಡಿದು ಉರ್ವಿಯಲ್ಲಿ ಮುಕ್ತಿ ಪಡೆಯಲು ಯತ್ನಿಸು.? ಎಂದು ಹೇಳುತ್ತಾನೆ.

೯೯೦

ಟಕ್ಕುಮಾಟಲಾಡಿ ಚಿಕ್ಕುಲಬೆಟ್ಟನ, ನಿಕ್ಕ ಮೆರುಗಬಡದು ನಿರ್ವಹಿಂಪ,
ಚಕ್ಕನೈನ ಜ್ಞಾನಸಾರಂಬು ದೆಲೆಯುಮೀ, ವಿಶ್ವದಾಭಿರಾಮ ವಿನುರ ವೇಮ.

ಠಕ್ಕು ಮಾತನಾಡಿ ಸಿಕ್ಕು ಕಷ್ಟದಲ್ಲಿ,
ನಿಜವನರಿತು ಕೊಳದೆ ನಿರ್ವಹಿಸಲು;
ಸಮನಾದ ಜ್ಞಾನದ ಸಾರ ತಿಳಿಯಲಾರ.
ವಿಶ್ವದಾಭಿರಾಮ ಕೇಳು ವೇಮ.

ಕೆಲವರು 'ಅಹಂ ಬ್ರಹ್ಮಾಸ್ಮಿ' ಎಂದು ಹೇಳುತ್ತ ತಿರಗುವುದೇ ಅದ್ವೈತವೆಂದು ತಿಳಿದಿದ್ದಾರೆ. ಇನ್ನು ಕೆಲವರು ಶಾಸ್ತ್ರ ಪುರಾಣ, ವೇದೋಪನಿಷದಾದಿ ಓದಿ ಕೇಳಿ, ತಾವು ಅದ್ವೈತ ಭಾವ ಹೊಂದಿದ್ದೇವೆ; ಕಲ್ಲು ಮಣ್ಣು, ಬಂಗಾರು, ಹೆಣ್ಣು, ಗಂಡು ಎಲ್ಲದರಲ್ಲಿಯೂ ಆತ್ಮ ತಾನೇ ತಾನಾಗಿ ಉಂಟು; ಈ ದೇಹ ತೊಟ್ಟು ಕಳೆಯುವ ಆತ್ಮನ ಅಂಗಿ; ಎಂದು ಹೇಳುತ್ತಿರುವುದೇ 'ಅಹಂ ಬ್ರಹ್ಮಾಸ್ಮಿ' ಎಂಬ ಅದ್ವೈತವೂ ಶಿವವೂ ಅದ ತುರಿಯಾವಸ್ಥೆ ಎನ್ನುತ್ತಾರೆ. ಆದರೆ ಇಂಥ ಓದುಗಳಿಗಳು ಜ್ಞಾನದ ಸಾರ ಅರಿಯಲಾರರು.

ಇವರು ತಕ್ಕತನದಿಂದ ಲೋಕ ಮನ್ನಣೆ ಪಡೆಯಲು ಹವಣಿಸುವವರಿಷ್ಟು? ಇವರಿಗೆ ಕಷ್ಟವೇ ಅಂತಿಮ ಗತಿಯಾಗುವುದು. ಏಕಂದರೆ' ಯಾರೊಬ್ಬರು ಒರೆಗೆ ಹಚ್ಚಿದರೆ ಇಂಥ ತಕ್ಕರ ಹೂರಣ ಹೊರಬೀಳುವುದು.

ಸತ್ಯವರಿಯದೆ ಜ್ಞಾನವಾಗದು. ಜ್ಞಾನವಾಗದೆ ಸತ್ಯದ ಅನುಭವವಾಗದು. ಸತ್ಯ ಜ್ಞಾನಗಳ ಸಮನಾದ ಅರಿವು ಅನುಭವಿಸಬೇಕಾದ ಸಾರ ಸರ್ವಸ್ವವಾಗಿದೆ.

ಹೇಳಿಸಿ ನೋಡಿರಿ:—

ಅದ್ವೈತವನು ನುಡಿದು ಅಹಂಕಾರಿಯಾದೆನಯ್ಯ;
ಬ್ರಹ್ಮವ ನುಡಿದು ನಾನು ಭ್ರಮಿತನಾದೆನಯ್ಯ;
ಶೂನ್ಯವ ನುಡಿದು ನಾನು ಸುಖಕ್ಕೆ ಗುರಿಯಾದೆನಯ್ಯಾ;
ಗುಹೇಶ್ವರಾ, ನಿಮ್ಮ ಶರಣ ಸಂಗನ ಬಸವಣ್ಣನ ಸಾನ್ನಿಧ್ಯದಿಂದಾನು
ಸದ್ಭಕ್ತನಾದನಯ್ಯ;

–ಅಲ್ಲಮ ಪ್ರಭು.

೯೯೧

ಜಲಮು ಬಟ್ಟಮಂದಿನಿ ಜನಿಯಿಂಚು ಗುಣಮುಲ, ತಿನಿ ದ್ರುಂಚಿ ವೇಗ ದಮುಕ ಮುಂಡಿಗಿ,
ಸತಮುಗಾನು ಬುದ್ಧಿಸರಿಂಪ ನದ ಮುಕ್ತಿ, ವಿಶ್ವದಾಭಿರಾಮ ವಿನುರ ವೇಮ.

ಕಲಕಿದಂಥ ಮನದಿ ಕುದುರಿದ ಗುಣಗಳನು,
ತೊಡೆದು ಕಡಿದು ಬೇಗ ತವಕ ಹಿಂಗಿ,
ಸತತವಾಗಿ ಬುದ್ಧಿ ಶುದ್ಧ ವಿಡಲು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

'ಕದಲದಂಥ ಮನದಿ' ಎಂದರೆ ಏನು? ಮನಸ್ಸು ಅಂದರೆ ಏನು? ಸೂಕ್ಷ್ಮತಮವಾದ ಬ್ರಹ್ಮ-ಚಿತ್ತವು ಶುದ್ಧ ಚೇತನ ಸ್ಥಿತಿಯಿಂದ ಬ್ರಹ್ಮ--ವಿವರ್ತನದಿಂದಾಗಿ ಸ್ಥೂಲವಾಗುತ್ತ ಮಹತ್ ತತ್ತ್ವ, ಅಹಂ ತತ್ತ್ವ, ಚಿತ್ ತತ್ತ್ವ ಎನ್ನಿಸುತ್ತದೆ. ಇಲ್ಲಿಂದ ಮುಂದೆ ಸ್ಥೂಲೀಕರಣವು ಇನ್ನೂ ಮುಂದುವರೆದು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಯಾವುದರ ಮಾತ್ರೆಗಳೋ, ಅಂಥ ಪಂಚಭೂತಗಳಾಗುತ್ತವೆ. ಈ ಪಂಚಭೂತಗಳ ತನ್ಮಾತ್ರೆಗಳಿಂದ ಇಂದ್ರಿಯಗಳ ಮೂಲಕ ಉಂಟುಮಾಡುವ ತರಂಗಗಳಿಂದ ವೇದನೆ ಉಂಟಾಗುವುದು. ಈ ವೇದನೆಯಿಂದ ಎಷ್ಟು ಸಾಧ್ಯವೋ ಅಷ್ಟೇ ನಮ್ಮ ಜ್ಞಾನವು. ಈ ವೇದನೆಗೆ ಮಿತಿ ಉಂಟು. ಆದ್ದರಿಂದ ಈ ಜ್ಞಾನ ಪರಿಮಿತವಾದುದು. ಅರ್ಥಾತ್ ಬಂಧನಕ್ಕೀಡಾದದ್ದು. ಇದನ್ನೇ 'ಗುಣ' ಎನ್ನುತ್ತಾರೆ. ಗುಣ ಎಂದರೆ 'ಪಾಶ' ಎಂದೂ ತಿಳಿಯಬಹುದು. ಅಂದ ಮೇಲೆ ಮನವು ಕಲಕಿದಾಗ ಬಂಧನ ಇಲ್ಲವೆ ಗುಣ

ಕುದುರುವುದು. ಈ ಗುಣವನ್ನು ತೊಡೆಯಬೇಕು. ಗುಣಾತೀತರಾಗಬೇಕು. ಪಂಚ ಭೂತಾತ್ಮಕ ಜಗತ್ತಿನ ಭೋಗದ ತವಕ ಹಿಂಗಿದ ಸಾಧಕನು ಸಾಧನೆಯ ಕಾಲಕ್ಕೆ ಗುಣಾತೀತನಾಗಲು ಯತ್ನಿಸಬೇಕು ಆಗ ಬುದ್ಧಿಯು ವೃತ್ತಿಗಳಿಂದ ಮುಸಕಾಗುವುದಿಲ್ಲ. ಶುದ್ಧವಾದ ಕನ್ನಡಿಯಂತೆ ಆಗುವುದು. ಈಗ ಕಾರಣ ಮನಸ್ಸು ತಾನೇ ತಾನಾಗುವುದು. ಏಕೆಂದರೆ ಸ್ಥೂಲ ಸೂಕ್ಷ್ಮ ಮನಸ್ಸು ಪಂಚಭೂತಗಳೊಂದಿಗೆ ಪರಿಸವಾಪ್ತಿಗೊಳ್ಳುತ್ತದೆ ಮನಸ್ಸು ಹೀಗೆ ಗುಣದ ಬಂಧನದಿಂದ ಬಿಡುಗಡೆಯಾಗುವುದೇ ಮುಕ್ತಿ.

೯೯೨

ಜೆವುಲಲೋನ ಬುಟ್ಟು ರವಮೆ ಯಾಕಾಶಂಬು, ಕನ್ನುಲಗನೆ ನದಿಯೆ ಕಳಲ ಜ್ವಾಲ,
ಮುಕ್ಕುಲೋಕಿಗಾಲಿ ಮುಕ್ತಿ ಕಂದ್ರೋವಯಾ, ವಿಶ್ವದಾಭಿರಾಮ ವಿನುರ ವೇಮ.

ಕವಿಯೊಳಗೆ ಜನಿಸುವ ರವವೆ ಆಕಾಶವು;
ಕಣ್ಣಿಗೆ ಕಾಣುವುದೆ ಕಳೆಯ ಜ್ವಾಲೆ.
ಮೂಗಿನೊಳಿಹ ಗಾಳಿ ಮುಕ್ತಿ ಪಥದ ದಾರಿ.
ವಿಶ್ವದಾಭಿರಾಮ ಕೇಳು ವೇಮ

ಯೋಗ ಸಾಧಕನು ತನ್ನ ಸಾಧನದಲ್ಲಿ ನಿರತನಾದಾಗ ಅವನು ಅನುಭವಿಸುವ ಯೋಗ ಗುಣಗಳು ಗಂಧ, ಸ್ಪರ್ಶ, ರೂಪ, ರಸ ಮತ್ತು ಶಬ್ದಗಳಾಗಿವೆ. ಶ್ವೇತಾಶ್ವತರೋಪನಿಷತ್ತಿನಲ್ಲಿ ಸಾಧಕನ ಅನುಭಾವವನ್ನು ಈ ರೀತಿ ಬಣ್ಣಿಸಲಾಗಿದೆ.

"ಪೃಥ್ವಿ, ನೀರು, ತೇಜಸ್ಸು, ವಾಯು, ಆಕಾಶ ಇವು ಅಭಿವ್ಯಕ್ತವಾದಾಗ. ಎಂದರೆ ಪಂಚಭೂತಮಯವಾದ ಯೋಗಗುಣಗಳು ಪ್ರಕಟಿತವಾದಾಗ, ಯೋಗಾಗ್ನಿಮಯವಾದ ಶರೀರವನ್ನು ಹೊಂದಿರುವ ಯೋಗಿಗೆ ರೋಗವಾಗಲಿ, ಮುಪ್ಪಾಗಲಿ,ಮೃತ್ಯುವಾಗಲಿ,ಇರುವುದಿಲ್ಲ."

ವೇಮನಯೋಗಿ ಬಾಹ್ಯದಲ್ಲಿರುವ ಪಂಚ ಭೂತಗಳನ್ನು ಆಂತರ್ಯಗೊಳಿಸಿ ಅಂತರ್ಮುಖಿಯಾಗಿ ಧ್ಯಾನಿಸುವ ಸಾಧನ–ಮಾರ್ಗ ತಿಳಿಸುತ್ತಾನೆ.

ಕವಿಯಲ್ಲಿ ಜನಿಸುವ ಶಬ್ದದಿಂದ ಶಬ್ದ ತನ್ಮಾತ್ರೆ ಉಂಟು ಮಾಡುವ ಆಕಾಶವೆಲ್ಲವನ್ನು ಅನುಭವಿಸಬಹುದು. ಅದೆಲ್ಲ ಬ್ರಹ್ಮವೇ, ಕಣ್ಣಿನಲ್ಲಿ ಯಾವ ಜ್ವಾಲೆ ಸಾಧಕನಿಗೆ ಕಾಣಬಹುದು? ಕಣ್ಣು ಮುಚ್ಚಿ ಬಿಗಿ ದೃಷ್ಟಿಯನ್ನು ನಾಸಿಕಾಗ್ರದಲ್ಲಿ ನಿಯವಾಗಿ ಸರಿಗೊಳಿಸಿದ, ಸಾಧಕನಿಗೆ ಕಾಣುವ ದಿವ್ಯ ಜ್ಯೋತಿ ಸ್ವಯಂ ಪ್ರಭೆಯ ಆತ್ಮವೇ. ಆಗಿರಬಲ್ಲದು. ಇದನ್ನು ಅನುಭವಿಸಲು ಸಾಧಕನು ಅಪಾನ- ಉದಾನಗಳ ಮೂಲಕ ಪ್ರಾಣಾಯಾಮ ಸಾಧಿಸುತ್ತಾನೆ. ಇದರಿಂದ ಮನಸ್ಸನ್ನು ನಿಗ್ರಹಿಸಿ; ನಿಲ್ಲಿಸುತ್ತಾನೆ. ಮನಸ್ಸು ಮುಕ್ತವಾಗುತ್ತದೆ.

ಹೋಲಿಸಿ ನೋಡಿರಿ:–

" ಹೊರಿಗಿನ ವಿಷಯಗಳನ್ನು ದೂರಗೊಳಿಸಿ, ದೃಷ್ಟಿಯು ಹುಬ್ಬುಗಳ ನಡುವೆ ಇಟ್ಟು ಮೂಗಿನೊಳಗೆ ಸಂಚರಿಸುವ ಪ್ರಾಣಾಪಾನಗಳನ್ನು ಸಮನಾಗಿ ಮಾಡಿ, ಇಂದ್ರಿಯ ಮನೋ ಬುದ್ಧಿಗಳನ್ನು ನೇಮಿಸಿರು ಮೋಕ್ಷಪರಾಣನಾದ ಇಚ್ಛಾ ಭಯಕ್ರೋಧ ರಹಿತನಾದ ಯಾವ ಮುನಿಯಿರುವನೋ ಅವನು ಯಾವಾಗಲೂ ಮುಕ್ತನೇ."

(ಭಗವದ್ಗೀತಾ ೫-೨೭-೨೮)

೯೯೩

ಆದಿ ಸೋಮಭೌಮ ವಾದಿಗಾ ಬುಧಗೂಡಿ, ಗುರುವು ಶುಕ್ರುಡು ಶನಿಗುರುತುಲ್ಲೊ,
ಎನ್ನಿದಿನಮುಲ್ಕಿನ ನಿಲನೊಕ್ಕ ರೂಪಮೆ ವಿಶ್ವದಾಭಿರಾಮ ವಿನುರ ವೇಮ.

ಆದಿ ಸೋಮ ಭೌಮ ಆದಿಗೇ ಬುಧಗೂಡಿ,
ಗುರುವು ಶುಕ್ರ ಶನಿಯು ಗುರುತು ಎಷ್ಟೊ.
ಎಷ್ಟೊ ದಿನಗಳಿರಲಿ ಒಟ್ಟು ರೂಪವೊಂದೆ.
ವಿಶ್ವದಾಭಿರಾಮ ಕೇಳು ವೇಮ.

ಪೃಥ್ವಿ ಸೂರ್ಯಮಾಲೆಯಲ್ಲಿ ಒಂದು ಗ್ರಹ. ಸೂರ್ಯನ ಸುತ್ತು ನಿರ್ದಿಷ್ಟ ಕಕ್ಷೆಯಲ್ಲಿ ತಿರುಗುತ್ತಿದೆ. ಚಂದ್ರ ಪೃಥ್ವಿಯ ಉಪಗ್ರಹ. ಪೃಥ್ವಿಯಿಂದ ಜಡ–ಸ್ಪೋಟ ಗೊಂಡು ಸಿಡಿದು ಹೋದ ಭಾಗ. ಅದರ ಕೇಂದ್ರ ಪೃಥ್ವಿಯ ಕೇಂದ್ರವಾದುದರಿಂದ ಅದು ಪೃಥ್ವಿಯ ಸುತ್ತು ತಿರುಗುತ್ತಿದೆ. ಚಂದ್ರನು ಪೃಥ್ವಿಯ ಸುತ್ತು ತಿರುಗಿದಾಗ ಒಂದು ದಿನವಾಗುತ್ತವೆ. ಇಲ್ಲವೆ ಪೃಥ್ವಿಯು ತನ್ನ ಸುತ್ತು ತಾನೇ ಒಮ್ಮೆ ತಿರುಗಿದಾಗ, ಒಂದು ದಿನ ಎಂದು ಕಾಲದ ಎಣಿಕೆ ಮಾಡುತ್ತೇವೆ. ಕಾಲದ ಈ ಅಂಶಗಳನ್ನೇ ದಿನ ಎನ್ನುತ್ತೇವೆ. ಈ ಕಾಲದ ಅಂಶವನ್ನು ನೆನಪಿಡಲು, ಗ್ರಹಗಳಿಗೆ ಇತ್ತ ಹೆಸರುಗಳನ್ನೇ ಈ ಕಾಲದ ಅಂಶಗಳಿಗೂ ನೀಡಲಾಗಿದೆ. ಹೀಗೆ ಆದಿ. ಇಲ್ಲವೆ ಆದಿತ್ಯ. ಸೋಮ ಇಲ್ಲವೆ ಚಂದ್ರ ಭೌಮ ಇಲ್ಲವೆ ಮಂಗಳ, ಬುಧ, ಬೃಹಸ್ಪತಿ ಇಲ್ಲವೆ ಗುರು, ಶುಕ್ರ ಮತ್ತು ಶನಿ ಎಂದು ಏಳು ಗುರುತು ನೀಡಲಾಗಿದೆಯಷ್ಟೇ. ಯಾವ ದಿನವಾದರೇನು? ಎಲ್ಲ ರೂಪವೂ ಒಂದೇ.

(ಹೋಲಿಸಿ ನೋಡಿರಿ :—

ಸೋಮವಾರ ಮಂಗಳವಾರವೆಂದು ಮಾಡುವ ಭಕ್ತನ ಲಿಂಗಭಕ್ತಂಗೆಂತು ಸಾಯೆಂಬೆನಯ್ಯ? ಲಿಂಗಶ್ರೇಷ್ಠವೋ? ದಿನ ಶ್ರೇಷ್ಠವೆಂದು ಮಾಡುವ ದುರಾಚಾರಿಯ ಮುಖವ ನೋಡಲಾಗದು. ಆ ದಿನವೆ ಘನವೆಂದು. ಆ ದಿನವೆ ದೈವವೆಂದು, ಮಾಡುವವನಾಗಿ ಆತ ದಿನದ ಭಕ್ತನು. ಲಿಂಗ ಭಕ್ತನು ಲಿಂಗವೆ ಘನವೆಂದು, ಲಿಂಗವೆ ದೈವವೆಂದು ಮಾಡುವವನಾಗಿ, ಆತ ಲಿಂಗ ಭಕ್ತನು. ಅಂತಾ ದಿನದ ಭಕ್ತಂಗೆಯೂ ಲಿಂಗ ಭಕ್ತಂಗೆಯೂ ಸನುವೆಂದೊಡೆ ಪಂಚಮಹಾಪಾತಕ ತಪ್ಪದು. ಅದೆಂತೆಂದೊಡೆ:

ಸೌಮೇ ಭೌಮೇ ವ್ಯತೀಪಾತೇ ಸಂಕ್ರಾಂತಿ ಶಿವರಾತ್ರಯೋಃ|
ಏಕಭುಕ್ತೋಪವಾಸೇನ ನರಕೇ ಕಾಲಮುಕ್ಷಯಮ್‌||
ಎಂದುದಾಗಿ. ಇದು ಕಾರಣ, ದಿನವಾರಂಗಳಂ ಶ್ರೇಷ್ಠ ಏಕಭುಕ್ತೋಪವಾಸಂಗಳ
ಭಕ್ತಂಗೆ ಕುಂಭೀಪಾಕ ನಾಯಕ ನರಕ ತಪ್ಪುದು ಕೂಡಲ ಸಂಗಮದೇವಾ.

—ಶ್ರೀ ಬಸವಣ್ಣ.

೯೯

ಗುರ್ರಮುನಕುದಗಿನ ಗುರುತ್ಯೆನಕಾತುನ್ನ, ಗುರ್ರವಿಲನು ನಡುಚು ಗುಣಮುಗಲ್ಲಿ,
ಗುರ್ರಮುತನಯೆಂಟಗುಣಮೇಲ ತೆಲಿಯದೋ, ವಿಶ್ವದಾಭಿರಾಮುವಿನುರ ವೇಮ.

ಕುದುರೆ ಹತ್ತಿ ಒಳ್ಳೆ ಗುರುತು ತೋರ್ಪನಿರಲು.
ಕುದುರೆ ಜಗದಿ ಇಹುದು ಗುಣವ ಹೊಂದಿ,
ಕುದುರೆ ತನ್ನೊಳಿರುವ ಗುಣವನರಿಯದೇಕೊ ?
ವಿಶ್ವದಾಭಿರಾಮ ಕೇಳು ವೇಮ

ಕುದುರೆಯನ್ನು ಜೀವನಿಗೆ ರೂಪಕವಾಗಿ ಬಳಸಲಾಗಿದೆ. ಸವಾರನು ಆತ್ಮನಿಗೆ ರೂಪಕವಾಗುವುದು.

ಜೀವನು ತಾನೇ ನಿತ್ಯ, ಪರಿಶುದ್ಧ, ಭೋಗ್ಯ-ಭೋಕ್ತನಲ್ಲದ ವಿಲಕ್ಷಣ, ಆತ್ಮವೆಂದು ತಂತಾನೇ ತಿಳಿಯಲಾರದು.ಜೀವನಿಗೆ ನಿಜಸ್ವರೂಪ ತಿಳಿಸಲು ಆತ್ಮವಿದರುಬೇಕು. ಕುದುರೆಯು ಒಳ್ಳೆಯ ಗುಣವುಳ್ಳ ಪ್ರಾಣಿ.ಅದು ಸವಾರನ ಹಿತಾಹಿತಗಳ ಪ್ರಯೋಜನ-ಅಪ್ರಯೋಜನಗಳ ಮರ್ಯಾದೆ ಅರ್ಥಾತ್ ಮಿತಿಯನ್ನು ಅರಿತಪ್ರಾಣಿ ಆದರೂ ಕುದುರೆಗೆ ತನ್ನ ಗುಣದ ಅರಿವಿಲ್ಲ.ಆದರೆ ಅದರ ಗುಣ ವ್ಯಕ್ತವಾಗಬೇಕಾದರೆ ಅದಕ್ಕೆ ಗುರುತು ತೋರಿಸುವ ಒಳ್ಳೆಯಸವಾರನು ಬೇಕು. ಸವಾರನ ಸಾಮರ್ಥ್ಯ ಮಾರ್ಗದರ್ಶನದಿಂದ ಕುದುರೆಯಲ್ಲಿ ಪ್ರಚ್ಛನ್ನವಾಗಿದ್ದ ಗುಣಗಳು ವ್ಯಕ್ತವಾಗುವವು.

ಉಪನಿಷತ್ಕಾರರು ಇಂದ್ರಿಯಗಳನ್ನು ಕುದುರೆಗೆ ಹೋಲಿಸುತ್ತಾರೆ. ಏಕೆಂದರೆ, ಇಂದ್ರಿಯ ಮೂಲಕ ವಿಷಯ ಗ್ರಹಿಸುವಾಗ ಜೀವಭಾವವಿರುತ್ತದೆ.

" ಆತ್ಮನನ್ನು ರಥಿಯೆಂದೂ, ಶರೀರವನ್ನು ರಥವೆಂದೂ, ಬುದ್ಧಿಯನ್ನು ಸಾರಥಿಯೆಂದೂ, ಮನಸ್ಸನ್ನು ಕಡಿವಾಣವೆಂದೂ ತಿಳಿ. ಇಂದ್ರಿಯಗಳನ್ನು ಕುದುರೆಗಳೆಂದೂ, ಶರೀರೇಂದ್ರಿಯ ಮನಸ್ಸುಗಳಿಂದ ಕೂಡಿದ ಆತ್ಮನನ್ನು ಭೋಕ್ತೃವೆಂದೂ ವಿವೇಕಿಗಳು ಹೇಳುತ್ತಾರೆ. " ಕಠೋಪನಿಷತ್ ೩-೩, ೪

ಮ್ಯಾನಿಲೋನನಗ್ನಿ ಮರಿಯುಂಡಿಗಾವಿಚ್ಚಿ, ನಿಗ್ನಿಲೋನಿ
ಮ್ಯಾನಿಲೋನಿಯುಗ್ನಿ ಮರ್ಮಾದ ಸಂಸಾರಿ, ವಿಶ್ವದಾಭಿರಾಮ ವಿನುರ ವೇಮ.

ಮರದಲ್ಲಿ ಅಗ್ನಿಯು ಮತ್ತಡಗಿರಬಹುದು,
ಅಗ್ನಿಯಲ್ಲಿ ಮರವು ಅಡಗಬಹುದೆ ?
ಮರದಿ ಬೆಂಕಿಯಂತೆ ಮಾನ ಸಂಸಾರಿಗೆ.
ವಿಶ್ವದಾಭಿರಾಮ ಕೇಳು ವೇಮ.

ಸಂ-ಸರತಿ ಇತಿ ಸಂಸಾರ: ಸಂ ಎಂದರೆ ಪರಿ,ಸುತ್ತು ಎಂದು ಅರ್ಥ. ಸರತಿ ಎಂದರೆ ಚಲನೆ, ಅಲೆದಾಟ ಎಂದು ಅರ್ಥ. ಯಾರು ಮೋಕ್ಷ ಪಡೆಯುವುದಿಲ್ಲವೋ ಅವರಿಗೆ ಜನನ ಮರಣ ಉಂಟು. ಸಂಸಾರಿಗೆ ಒಂದು ಮಿತಿ, ಮರ್ಯಾದೆ ಇದೆ. ಅದನ್ನು ದಾಟಿ ಸಂಸಾರಿ ಹೋಗನು. ಅವನು ಮರದೊಳಗಿನ ಬೆಂಕಿಯಂತೆ ಬ್ರಹ್ಮಭಾವದಲ್ಲಿ ಕೂಡಿಕೊಳ್ಳಬಹುದು. ಆದರೆ ಇದಕ್ಕಿಂತ ಉತ್ತಮ ಸ್ಥಿತಿಯೊಂದಿದೆ. ಅದೇ ಬ್ರಹ್ಮವಾಗುವುದು. ಯೋಗಿಯ ಸ್ಥಿತಿ ಅಲ್ಲಿ ಹುಟ್ಟು-ಸಾವು ಇಲ್ಲ ಜನನ—ಮರಣವಿಲ್ಲವೆಂದರೆ ಸಂ—ಸಾರ- ವಿಲ್ಲತಾನೆ. ಯೋಗಿ ಸಂಸಾರ ಮರ್ಯಾದೆ ಮೀರಿದವನು. ಯೋಗಿ ಮರವೇ ಆದಂತೆ ಎಂದು ರೂಪಕ ನೀಡುವ ದಾದರೆ ಸಂಸಾರಿಗೆ ಮರದೊಳಗಿನ ಅಗ್ನಿ ಎನ್ನಬಹುದು.

ಯೋಗಿಯಾದವನು ಚಿತ್ತ ಮುತ್ತಾದ ನೀರಿನಂತೆ. ಮುತ್ತು ಮತ್ತೆ ನೀರಾಗದು. ಯೋಗಿ ಮರವಿದ್ದಂತೆ. ಅವನಲ್ಲಿ ಸಂಸಾರವಿರಬಹುದು. ಆದರೆ ಸಂಸಾರದಲ್ಲಿ ಅವನಿಲ್ಲ. ಅಗ್ನಿಯಲ್ಲಿ ಮರವಿಲ್ಲ. ಸಂಗದಲ್ಲಿ ನಿಸ್ಸಂಗಿಯಾಗಿ ಬಾಳುವವನೇ ಯೋಗಿ.

ಹೋಲಿಸಿ ನೋಡಿರಿ:—

(ಪರಮೇಶ್ವರನು) ಈ ಭುವನದ ಮಧ್ಯದಲ್ಲಿ ಏಕಹಂಸನಾಗಿರುತ್ತಾನೆ. (ಹಂತಿ ಅ
ದ್ಯಾದಿ ಬಂಧ ಕಾರಣಮ್ ಇತಿ ಹಂಸ:) ಅವನೇ ನೀರಿನಲ್ಲಿರುವ ಅಗ್ನಿ. ಅವನನ್ನೇ ಅರಿ
ಕೊಂಡವನು ಮೃತ್ಯುವನ್ನು ದಾಟುತ್ತಾನೆ. ಮೋಕ್ಷಕ್ಕೆ ಬೇರೆ ದಾರಿಯಿಲ್ಲ.

- ಶ್ವೇತಾಶ್ವತರ ಉ. ೬-೧೫

" ಮರದೊಳಿಹುದಗ್ನಿಯಾ ಮರನಿಲ್ಲವದರೊಳಂ|
ತಿರೆ ಯೋಗಿ ಸಂಸರಣದೊಳಿರುತಿಹನು, ಸಂ|
ಸರಣವಾ ಯೊಳಗಿಯೋಗಿಲ್ಲ " ||

ನಿಜಗುಣಯೋಗಿ -ಅನುಭವಸಾರ

" ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, |
ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ,
ಗುಹೇಶ್ವರಾ ನಿಮ್ಮ ಶರಣ ಸಂಬಂಧ. ||

— ಅಲ್ಲಮ-ಪ್ರಭು

೯೯೬

ಮೇಘಮಡ್ಡಮ್ಮೆನ ವಿಹೀರುನಿ ಜೆರುಚುನು ಜಿತ್ತಮಡ್ಡಮ್ಮೆನ ಸ್ಥಿರಮುಜೆರಚು,
ಮರಪುಲಡ್ಡಮ್ಮೆನ ಮಹಿಮುಂಬು ಜೆರುಚುರಾ ವಿಶ್ವದಾಭಿರಾಮ ವಿನುರ ವೇಮ

ಮೋಡವಡ್ಡ ಬರಲು ಮಂದ ಸೂರ್ಯಕಾಂತಿ.
ಚಿತ್ತವಡ್ಡ ಬರಲು ಸ್ಥಿರತೆ ಹಾಳು.
ಮರೆವು ಅಡ್ಡ ಬರಲು ಮಹಿಮೆಯೇ ಕೆಡುವುದು.
ವಿಶ್ವದಾಭಿರಾಮ ಕೇಳು ವೇಮ.

ಯೋಗ-ಸಾಧನೆಯಲ್ಲಿ ಆಗುವಂಥ ಅನುಭವಗಳನ್ನು ರೂಪಕದ ಮೂಲಕ ಹೇಳುವದೇ ಜೆನ್ನ. ಸೂರ್ಯಕಾಂತಿಯಂತೆ ಆತ್ಮವೆಂದು ಗ್ರಹಿಸಿರಿ. ಆಗ ಸೂರ್ಯಕಾಂತಿ ತಾನೇ ತಾನಾಗಿ ಸ್ಥಿರವಾಗಿ ಇರುವುದು. ಆನಂತರ ಮೋಡವೊಂದು ಗಗನದಲ್ಲಿ ಸುಳಿಯುತೆಂದು ತಿಳಿಯಿರಿ. ನೋಡುವವನಿಗೂ ಸೂರ್ಯನಿಗೂ ಮಧ್ಯೆ ಮೋಡ ಬಂದಾಗ ಸೂರ್ಯಕಾಂತಿ ಮಂದವಾಗುತ್ತದೆ.

ನಮ್ಮ ಚಿತ್ತವೆಂದರೆ ಮೋಡದಂತೆ. ಇಂದ್ರಿಯ ವಿಷಯವಸ್ತುಗಳಿಂದ ವೃತ್ತಿಗಳು ತರಂಗ ತರಂಗವಾಗಿ ನರಗಳ ಮೂಲಕ ಒಳಸೇರುತ್ತವೆ. ಈ ವಿವಿಧ ತರಂಗಗಳ ಸಂಘರ್ಷವೇ ನಮ್ಮ ಮನಸ್ಸು ಮನಸ್ಸು ಈ ಪ್ರಕಾರ ಇರುವುದೆಂದು ತಿಳಿದಾಗ ಅದಕ್ಕೆ ಮೋಡದ ಹೋಲಿಕೆ ಎಷ್ಟೊಂದು ಸರಿಯಾಗಿದೆ, ಅಲ್ಲವೇ? ಮನಸ್ಸು ಹೀಗೆ ಅಡ್ಡವಾಗ ಆತ್ಮ ಪ್ರಕಾಶ ಮಸಕಾಗುವುದು. ಮನಸ್ಸಿನ ಸ್ಥಿರತೆ ಹಾಳಾಗುವುದು. ಮನಸ್ಸು ನಿಂತರೆ ಆತ್ಮ ಪ್ರಕಾಶಿಸುವುದು

ಇನ್ನು ಮರೆವು ಅರ್ಥಾತ್ ಪ್ರಮಾದ ಇಲ್ಲವೆ ಅಜ್ಞಾನವು ಅಡ್ಡ ಬಂದರೆ ತೀರಿತು. ಯೋಗ ಸಾಧನದ ಮಹಿಮೆಯೇ ಕೆಟ್ಟುಹೋಗಿ ಯೋಗಭ್ರಷ್ಟತೆ ಉಂಟಾಗಬಹುದು.

೯೯೭

ಬಿಗಿಯು ದೃಷ್ಟಿ ನೆಪುಡು ಬಿಂಬಮುಂದುಂಚಿನ, ಮನನಮುಂದು ನೆರುಕ ಮುಗ್ನಮುಗುನು,
ಲಗ್ನಚಿತ್ತಮುಮುರ ರಕ್ಷಿಂಚು ಚುಂಡುರಾ, ವಿಶ್ವದಾಭಿರಾಮ ವಿನುರ ವೇಮ.

ಬಿಗಿದ ದೃಷ್ಟಿ ಸದಾ ಬಿಂಬದೊಳಗಿರಿಸಲು,
ಮನನ ಮಾಡಿ ತಿಳಿಯೆ, ಮುಗ್ನವಹುದು
ಲಗ್ನಚಿತ್ತವಮುರ; ರಕ್ಷಿಸುವುದಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಯೋಗೆ ಸಾಧಕನಿಗೆ ಮಾರ್ಗದರ್ಶನ ನೀಡುವ ಯೋಗಿಯು ಈ ಪದ್ಯನ ಅರ್ಥ ತಿಳಿಯಲು ಸಂದರ್ಭ, ಸ್ವಾನುಭವ ಅವಶ್ಯ. ಇವುಗಳ ಪರಿಚಯವಿಲ್ಲದವರು ಗೀತೆಯ ಶ್ಲೋಕಗಳನ್ನು ಓದಿರಿ:

"ನಿರ್ಜನ ಪ್ರದೇಶದಲ್ಲಿದ್ದುಕೊಂಡು. ಏಕಾಕಿಯೂಯತ ಚಿತ್ತಾತ್ಮನೂ, ನಿರಾಶಿಯೂ, ಅಪರಿಗ್ರಹನೂ ಆಗಿ, ಯೋಗಿಯು ಯಾವಾಗಲೂ ಮನಸ್ಸನ್ನು ಯೋಗದಲ್ಲಿಡಬೇಕು"

" ಶುಚಿಯಾದ ಪ್ರದೇಶದಲ್ಲಿ ಬಟ್ಟೆ, ಚರ್ಮ, ಕುಶ, ಇವುಗಳನ್ನು ಒಂದರ ಮೇಲೊಂದು ಹಾಕಿರುವ, ಸ್ಥಿರವಾದ, ಅತಿ ಎತ್ತರವೂ ಅತಿ ತಗ್ಗೂ ಇಲ್ಲದ ಆಸನವನ್ನು ತನಗೋಸ್ಕರ ಸ್ಥಾಪಿಸಿಕೊಂಡು."

"ಆ ಆಸನದ ಮೇಲೆ ಕುಳಿತುಕೊಂಡು, ಮನಸ್ಸನ್ನು ಏಕಾಗ್ರಮಾಡಿ, ಚಿತ್ತೇಂದ್ರಿಯಗಳನು ನಿಗ್ರಹಿಸಿದವನು ಅಂತ:ಕರಣಶುದ್ಧಿಗಾಗಿ ಯೋಗವನ್ನು ಮಾಡಬೇಕು.

"ಶರೀರ ಶಿರಸ್ಸು ಕೊರಳು-ಇವುಗಳನ್ನು ಸಮವಾಗಿಯೂ, ಅಚಲವಾಗಿಯೂ ಇರಿಸಿಕೊಂಡು, ಸ್ಥಿರವಾಗಿ, ತನ್ನ ಮೂಗಿನ ತುದಿಯನ್ನು ನೋಡುತ್ತಾ, ದಿಕ್ಕುಗಳನ್ನು ನೋಡದವನಾಗಿ, ಪ್ರಶಾಂತಾತ್ಮನೂ, ನಿರ್ಭಯನೂ ಆಗಿ, ಬ್ರಹ್ಮಚಾರಿವ್ರತದಲ್ಲಿ ಇರುವವನಾಗಿ ಮನಸ್ಸನ್ನು ಸಂಯಮ ಮಾಡಿಕೊಂಡು ನನ್ನಲ್ಲಿಯೇ ಚಿತ್ತವುಳ್ಳವನಾಗಿ, ನಾನೇ ಪರವೆಂದು ಭಾವಿಸಿ, ಯುಕ್ತನಾಗಿರಬೇಕು.

" ಮನಸ್ಸನ್ನು ನಿಗ್ರಹಿಸಿದ ಯೋಗಿಯು ತನ್ನನ್ನು ಹೀಗೆಯಾವಾಗಲೂ ಯೋಗದಲ್ಲಿಟ್ಟುಕೊಳ್ಳುತ್ತಾ ನಿರ್ವಾಣಪರಮವಾದ ನನ್ನಲ್ಲಿರುವ ಶಾಂತಿಯನ್ನು ಹೊಂದುತ್ತಾನೆ"

" ಭಗವದ್ಗೀತೆ : ೬–೧೦ರಿಂದ ೧೫.

ಬಾಹ್ಯದಲ್ಲಿ ವಿಹರಿಸುವ ಚಿತ್ತವನ್ನು ಬಿಗಿಹಿಡಿದು, ಆತ್ಮಬಿಂಬವೆಂದು ಗ್ರಹಿಸಿದ ತಕ್ಷಣದಲ್ಲಿಯೇ ದೃಷ್ಟಿನೆಲೆಸುವಂತೆ ಮಾಡಿ, ಮನನ ಮಾಡಿದ ಮನಸ್ಸು ಆತ್ಮದಲ್ಲಿ ಮಗ್ನವಾಗುವುದು. ಆತ್ಮದಲ್ಲಿ ಸೇರಿದ ಚಿತ್ತವು ಅಮರ. ಅಲ್ಲಿ ಮೃತ್ಯುಜರಾ ಎಂಬುದಿಲ್ಲ. ಅದು ಸಾಧುಕನನ್ನು ರಕ್ಷಿಸುವುದಿಲ್ಲವೇ ?

೯೯೮

ವೇಯಿವಿಧಮುಲರಯ ವೇಮನ ಪದ್ಯಮು, ಲರ್ಥಮಿಚ್ಚು ವಾನಿನರಸಿಚೂಡ,
ಚೂಡಜೂಡಗಲ್ಗು ಜೋದ್ಯಾವಜ್ಞಾನಂಬು, ವಿಶ್ವದಾಭಿರಾಮ ವಿನುರ ವೇಮ

ಸಾವಿರವಿಧಗಳರಿ; ವೇಮನ ಪದ್ಯಗಳು,
ಅರ್ಥವೀವವವನೆ ಅರಸಿ ನೋಡೆ,
ನೋಡು ನೋಡಲುಂಟು ಅದ್ಭುತ ಜ್ಞಾನವು,
ವಿಶ್ವದಾಭಿರಾಮ ಕೇಳು ವೇಮ.

ವೇಮನ ಯೋಗಿ ವಿರಚಿತ ಅನುಭವ–ಸಾರದಂತಿರುವ ಪದ್ಯಗಳು ವಿವಿಧ ವಿಷಯಗಳನ್ನು ಒಳಗೊಳ್ಳುತ್ತವೆ .ಅನೇಕ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡುತ್ತವೆ. ಬಾಲಕರಿಗೆ ಉತ್ತಮ ಸಂಸ್ಕಾರ ಬೆಳೆಸಿಕೊಳ್ಳಲು ಸಹಾಯಕವಾಗುತ್ತವೆ. ಹರೆಯದವರಿಗೆ, ಅಧಿಕಾರ

ಸಂಪನ್ನರಿಗೆ ರಜೋಗುಣ, ತಮೋಗುಣಿಗಳಿಗೆ [illegible]
ಸರಿಸಬೇಕೆಂಬ ಬಗ್ಗೆ ಸರಿಯಾದ ಭೋಧೆ ನೀಡುತ್ತಿವೆ ಮುಪ್ಪಿನಲ್ಲಿ ನಿರಾಶೆ ಹೊಂದದಂತೆ,
ಮುಕ್ತಿ-ಪರ ಗ್ರಂಥಗಳ ಶ್ರವಣ. ಪಠಣಗಳಿಂದ ಭಕ್ತಿ ಪುರಸ್ಸರವಾಗಿ ಬಾಳಿನ ಶೇಷ ಜೀವ
ನವನ್ನು ಕಳೆಯಬಹುದೆಂಬ ಬಗ್ಗೆ ಸರಿಯಾಗಿ ವಿಶದೀಕರಿಸುತ್ತದೆ. ಹೀಗೆ ವೇಮನ ಪದ-
ಪದ್ಯಗಳು, ಸಾವಿರ ವಿಧಗಳಲ್ಲಿ ಅರ್ಥಪೂರ್ಣವಾಗಿದೆ. ಅವುಗಳನ್ನು ಹೆಚ್ಚು ಹೆಚ್ಚಾಗಿ ಓದಿ
ದಂತೆ ಹೆಚ್ಚು ಹೆಚ್ಚಾದ ಆಳವಾದ ಜ್ಞಾನನಿಧಿ ಲಭ್ಯವಾಗುವುದು.

೯೯

ಮುಕ್ತಿಮಾರ್ಗಮುನಕು ಮೂಲಮೈತಗುನಟಿ, ಗ್ರಂಥಮುಂತ ಜನುಲು ಗಡಿಗಿಚದುವ
ವಿನ್ನವಾರಿಕೆಲ್ಲ ವಿಭವಮುల్ కల్లುನು, ವಿಶ್ವದಾಭಿರಾಮ ವಿನುರ ವೇಮ.

ಮುಕ್ತಿ ಮಾರ್ಗಗಳಿಗೆ ಮೂಲಾಧಾರವಹ,
ಗ್ರಂಥವೆಲ್ಲ ಜನರು ಕೊನೆಗು ಓದೆ,
ಮುಡದಿ ಕೇಳುವರಿಗೆ ಮತ್ತೆ ಉಂಟು ವಿಭವ,
ವಿಶ್ವದಾಭಿರಾಮ ಕೇಳು ವೇಮ.

'ಭವ' ಎಂದರೆ ಉಂಟಾದದ್ದು. ಅವ್ಯಕ್ತದಿಂದ ವ್ಯಕ್ತಗೊಂಡದ್ದು ಭವ. ಯಾವುದು ಸೃಷ್ಟಿಯಾಗುವುದೋ. ಅದು ಲಯವಾಗುತ್ತದೆ ಸೃಷ್ಟಿ-ಲಯ ಅರ್ಥಾತ್ ಜನನ-ಮರಣ ಗಳ ಸಂಸಾಚಕ್ರದಲ್ಲಿ ಸಿಲುಕಿರುವುದೇ ಭವ. ಭವವು ಈ ಅರ್ಥದಲ್ಲಿ, ಅಪಾರವೂ, ಅಗಾಧವೂ ಎನಿಸುವುದರಿಂದ ಭವಸಾಗರವೆನಿಸುತ್ತದೆ. 'ವಿಗತಃ ಭವಃ ಯೆಸ್ಯ ಸಃ ವಿಭವಃ. ಯಾರು ಭವಕ್ಕೆ ಸಿಲುಕದೆ ಉಳಿಯಬಲ್ಲರೋ ಅವರು ವಿಭವ. ಜನನ-ಮರಣಾತೀತರು. ಸಂಸಾರ ಒದ್ದು ನಿಂತವರು. ವಿಭವ ಸೇರಿದವರು.

ವಿಭವ ಪದ ಯಾರಿಗೆ ಉಂಟಾಗಬಹುದು ? ಯಾವುದರ ಪಠಣದಿಂದ ಸುಖ-ಸಂಗ, ಕರ್ಮ-ಸಂಗ, ಪ್ರಮಾದಸಂಗಗಳಿಂದ ಬಂಧನಕ್ಕೀಡಾಗದಂತೆ ಮನಸ್ಸಿನ ಬಿಡುಗಡೆ ಸಾಧಿಸುವರೋ, ಅಂಥ ಮುಕ್ತಿ ಪಡೆಯುವ ಮಾರ್ಗ ತೋರ ವಿವೇಚನಾತ್ಮಕ ಗ್ರಂಥಗಳನ್ನು ಓದಿ ಜ್ಞಾನಪಡೆಯಬೇಕು. ಓದನೋಡದವರಲು ಸೌಖ್ಯವೆಂಬುದಿಲ್ಲ.

ಕಾರಣ, ಮುಕ್ತಿ ಮಾರ್ಗಗಳಿಗೆ ಮೂಲವಾಗಿರುವಂಥ ಗ್ರಂಥಗಳನ್ನು ಪೂರ್ಣವಾಗಿ ಓದಿ-ಮುಗಿಸಿದವರಿಗೆ ಇಲ್ಲವೇ ಕೇಳಿ ತಿಳಿದವರಿಗೆ, ಭಕ್ತಿ ಭಾವ ಉಂಟಾಗಬಹುದು. ಆಗ ಸಾಧನೆಯ ಕರ್ಮ ಮಾಡಬೇಕು. ಭವದಿಂದ ವಿಭವದತ್ತ ನಡೆಯುವ ಮುಕ್ತಿಮಾರ್ಗ ಇದು. ಭಕ್ತಿ ಭಾವದಿಂದ ಸಾಧನೆ ಮುಂದುವರಿದರೆ, ವಿಭವ ಪದವಿ ಲಭ್ಯವಾಗುವುದು. ತತ್ ತ್ವಮ್ ಅಸಿ ಎಂದು ಸಾಗಿದ ಭಕ್ತ, 'ಅಹಂ ಬ್ರಹ್ಮಾಸ್ಮಿ

ಎಂಬ ಏಕೋ ಭಾವ ತಾಳುವನು. ಇಲ್ಲಿ ದ್ವಂದ್ವ ಇಲ್ಲ. ದ್ವೈತವಿಲ್ಲ. ಭವವಿಲ್ಲ, ವಿಭವ ಮಾತ್ರ ಉಂಟು.

೧೦೦

ಇಹಪರಂಬುಲಕುನು ನಿದಿ ಸಾಧನಂಬನಿ, ವ್ಯಾಸಿಚದುವ ವಿನ್ನ ವಾರಿಕೆಲ್ಲ,
ಮುಂಗಳಂಬು ಲೊನರು ಮಹಿಲೋನ ನಿಜಮಿದಿ, ವಿಶ್ವದಾಭಿರಾಮ ವಿನುರ ವೇಮ.

ಇಹಕೆ ಮತ್ತೆ ಪರಕೆ ಇದು ಸಾಧನವೆಂದು,
ಓದಿ, ಕೇಳಿ, ಬರೆಯುವವರಿಗೆಲ್ಲ,
ಮಂಗಳವಾಗುವುದು ಮಹಿಯೊಳಗಿದು ಸತ್ಯ
ವಿಶ್ವದಾಭಿರಾಮ ಕೇಳು ವೇಮ.

ಇಹದಲ್ಲಿ ಸಾಧನವಾದದ್ದು, ನೀತಿ-ನಿಯಮ ದಾನ-ಧರ್ಮ, ಸಹನೆ-ಸಾಮ ದಮ. ಪ್ರಸ್ತುತ ಗ್ರಂಥದಲ್ಲಿ ಪೂರ್ವಾರ್ಧವೆಲ್ಲ ಇಹದ ಶ್ರೇಯಸ್ಸಿಗಾಗಿ ಸಾಧನವಾಗಿದೆ. ಉತ್ತರಾರ್ಧವು ಪರಕ್ಕೆ ಅಂದರೆ ಶ್ರೇಯಸ್ಸಿಗೆ ಸಾಧನವಾಗಿರುವುದು. ಇಂಥ ಗ್ರಂಥರಾಶಿಯನ್ನು ಓದುವವರಿಗೆ, ಕೇಳುವವರಿಗೆ, ಬರೆಯುವವರಿಗೆ ಮಂಗಳವಾಗುವುದು. ಪಠಣ, ಶ್ರವಣ ಮತ್ತು ಲೇಖನಗಳು ವಿದ್ಯಾರ್ಜನೆಗೆ ಸಾಧನೆಗಳಾಗಿವೆ. ಈ ಮಾತು ಭೂಮಿಯಲ್ಲೆಲ್ಲ ಸತ್ಯವಾಗಿದೆ.

ಓಂ ಶಾಂತಿಃ ಶಾಂತಿಃ ಶಾಂತಿಃ ॥